# || ಶ್ರೀ ಹಯವದನ ರಂಗವಿಟ್ಠಲ ಗೋಪೀನಾಥೋ ವಿಜಯತೇ ||

*Blessed by Lord and with His divine grace, we are pleased to publish this Magnanimous Work of Sri Acharya Madhwa. It is a humble effort to make available this Great work to Sadhakas who are interested in the noble path of propagating Acharya Madhwa's Philosophy.*

*With great humility, we solicit the readers to bring to our notice any inadvertant typographical mistakes that could have crept in, despite great care. We would be pleased to incorporate such corrections in the next versions. Users can contact us, for editable version, to facilitate any value additions.*

*Contact: H K SRINIVASA RAO, N0 26, 2ND FLOOR, 15TH CROSS, NEAR VIDHYAPEETA CIRCLE, ASHOKANAGAR, BANGALORE 560050. PH NO. 26615951, 9901971176, 8095551774, Email :* srkarc@gmail.com

## ಕೃತಜ್ಞತೆಗಳು



ಜನ್ಮಾಂತರದ ಸುಕೃತದ ಫಲವಾಗಿ ಮಧ್ವಮತದಲ್ಲಿ ಜನಿಸಲು, ಪ್ರೇಮಮೂರ್ತಿಗಳಾಗಿ ನನ್ನ ಅಸ್ತಿತ್ವಕ್ಕೆ ಕಾರಣರಾದ, ಈ ಸಾಧನೆಗೆ ಅವಕಾಶಮಾಡಿದ, ನನ್ನ ಪೂಜ್ಯ ಮಾತಾ ಪಿತೃಗಳಾದ, ದಿವಂಗತರಾದ ಲಲಿತಮ್ಮ ಮತ್ತು ಕೃಷ್ಣರಾವ್ ಹೆಚ್ ಆರ್ ಅವರ ಸವಿ ನೆನಪಿನಲ್ಲಿ ಈ "ಸರ್ವಮೂಲ-ಜ್ಞಾನ ಯಜ್ಞ"

**''ಮಾತೃದೇವೋ ಭವ – ಪಿತೃದೇವೋ ಭವ- ಆಚಾರ್ಯದೇವೋ ಭವ''**

ಶ್ರೀಮದ್ಭಗವದ್ಗೀತಾ ಭಾವದೀಪ ..... 4

ಕೃತಜ್ಞತೆ ..... 4

ಶ್ರೀಮದ್ಭಗವದ್ಗೀತಾ ..... 5

ಪ್ರಾಮಾಣ್ಯ ..... 7

ಪ್ರಮಾಣವಿಷಯ ವಿವೇಕ ..... 10

ಯುಕ್ತಿ ಪರಿಸ್ಥಿತಿ ..... 10

ಶ್ರೀಮದ್ಭಗವದ್ಗೀತಾ ..... 26

ಗೀತೆಯ ರಚನೆ ..... 26

ಆರಂಭದ ಸಂಗತಿ ..... 26

ಪ್ರಥಮೋऽಧ್ಯಾಯಃ॥ 1-[47] ॥ ..... 28

ದ್ವಿತೀಯೋऽಧ್ಯಾಯಃ॥ 2-[72] ॥ ..... 37

ತೃತೀಯೋऽಧ್ಯಾಯಃ॥ 3-[43] ॥ ..... 88

ಚತುರ್ಥೋऽಧ್ಯಾಯಃ॥ 4-[42] ॥ ..... 116

ಪಂಚಮೋऽಧ್ಯಾಯ ॥ 5-[29] ॥ ..... 136

ಷಷ್ಠೋऽಧ್ಯಾಯಃ॥ 6-[47] ॥ ..... 149

ಸಪ್ತಮೋऽಧ್ಯಾಯಃ॥ 7-7-[30] ॥ ..... 166

ಅಷ್ಟಮೋऽಧ್ಯಾಯಃ॥ 8-[28] ॥ ..... 180

ನವಮೋऽಧ್ಯಾಯಃ॥ 9-[34] ॥ ..... 191

ದಶಮೋऽಅಧ್ಯಾಯ ॥ 10-[42] ॥ ..... 207

ಏಕಾದಶೋಧ್ಯಾಯಃ॥ 11-[55] ॥ ..... 223

ದ್ವಾದಶೋऽಧ್ಯಾಯಃ॥ 12-[20] ॥ ..... 241

ತ್ರಯೋದಶೋऽಧ್ಯಾಯಃ॥ 13-[35] ॥ ..... 249

ಚತುರ್ದ ಶೋಧ್ಯಾಯಃ॥ 14-[27] ॥ ..... 264

ಪಂಚದಶೋಧ್ಯಾಯಃ॥ 15-[20] ॥ ..... 274

ಷೋಡಶೋಽಧ್ಯಾಯಃ ॥ 16-[24] ॥ .......... 283

ಸಪ್ತದಶೋಽಧ್ಯಾಯಃ ॥ 17-[28 ॥ .......... 290

ಅಷ್ಟಾದಶೋಧ್ಯಾಯಃ ॥ 18-[78] ॥ .......... 300

# ಶ್ರೀಮದ್ಭಗವದ್ಗೀತಾ ಭಾವದೀಪ

ಮಹಾ ವಿದ್ವಾನ್, ಪಂಡಿತರತ್ನಂ ಇತ್ಯಾದಿ

ಡಿ. ವಾಸುದೇವಾಚಾರ್ಯ ದ್ವೈತ ವೇದಾಂತ ಪ್ರಧಾನೋಪಾಧ್ಯಾಯ

ಮಹಾರಾಜ ಸಂಸ್ಕೃತ ಮಹಾಪಾಠಶಾಲಾ, ಮೈಸೂರು.

## ಕೃತಜ್ಞತೆ

ಈ ಪ್ರಕಟನೆಗೆ ಉದಾರವಾಗಿ ಸಹಾಯ ಮಾಡಿ ಅನುಗ್ರಹಿಸಿರುವ ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮುಖ್ಯ ಸಂಸ್ಥಾನಾಧೀಶ್ವರರು, ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯತ್ವಾದ್ಯಮಂದಬಿರುದಬೃಂದಭೂಷಿತರೂ ಆದ ಶ್ರೀ ಶ್ರೀ ವ್ಯಾಸರಾಜ ಮಠದ ಶ್ರೀಮದ್-ವಿದ್ಯಾಪ್ರಸನ್ನತೀರ್ಥ ಶ್ರೀಪಾದಂಗಳವರ ಮತ್ತು ಶ್ರೀ ಶ್ರೀ ರಾಘವೇಂದ್ರ ಮಠದ ಶ್ರೀಮತ್-ಸುಯಮೀಂದ್ರತೀರ್ಥ ಶ್ರೀಪಾದಂಗಳವರ ಚರಣಾರವಿಂದಗಳಿಗೆ ಕೃತಜ್ಞತಾ ಪೂರ್ವಕವಾದ ಸಾಷ್ಟಾಂಗ ನಮಸ್ಕಾರಗಳು.

ಶ್ರೀ ಬಾಳಗಾರ ಆರ್ಯ-ಅಕ್ಷೋಭ್ಯತೀರ್ಥಮಠಾಧೀಶರಾದ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯತ್ವಾದಿ ಗುಣಾಲಂಕೃತರಾದ ಶ್ರೀರಘುಮಾನ್ಯತೀರ್ಥ ಶ್ರೀಪಾದಂಗಳವರು ಉದಾರವಾಗಿ ಸಹಾಯ ಮಾಡಿರುವ ಉಪಕಾರಸ್ಮರಣಪೂರ್ವಕವಾಗಿ ಅವರ ಸನ್ನಿಧಾನಂಗಳಲ್ಲಿ ಅನಂತ ಪ್ರಣಾಮಗಳು.

ಬೆಂಗಳೂರು ಮಲ್ಲೇಶ್ವರದಲ್ಲಿರುವ ಬೆಂಗಾಲ್ ಎಲೆಕ್ಟ್ರಿಕಲ್ಸ್ ಕಂಪನಿಯ ಯಜಮಾನರಾದ ಶ್ರೀ ಜಿ. ಎ. ಆಚಾರ್ಯರು ಉದಾರವಾಗಿ ಮಾಡಿರುವ ಧನ ಸಹಾಯವೇ ಈ ಗ್ರಂಥವು ಹೊರ ಬೀಳಲು ಮೂಲಕಾರಣ,

ಬೆಂಗಳೂರು ನರಸಿಂಹರಾಜಕಾಲೋನಿಯಲ್ಲಿರುವ ಅಮೃತ್ ಲ್ಯಾಬರೇಟರಿಯ ಡೈರೆಕ್ಟರಾದ ಶ್ರೀ. ಎಸ್. ಎ. ಕಲ್ಯಾಣಿಯವರು ಉದಾರವಾಗಿ ಧನಸಹಾಯ ಮಾಡಿರುತ್ತಾರೆ.

ಬೆಂಗಳೂರು ಮಲ್ಲೇಶ್ವರದಲ್ಲಿರುವ ಭೂಗರ್ಭಶಾಸ್ತ್ರ ಪ್ರವೀಣರಾದ ಶ್ರೀ. ಸಿ. ಎಸ್. ನಾರಾಯಣರವರು ಉದಾರ ಸಹಾಯಮಾಡುವ ಭರವಸೆ ನೀಡಿದ್ದಾರೆ.

ಬೆಂಗಳೂರು ಶೇಷಾದ್ರಿಪುರದಲ್ಲಿರುವ ಎಂಜಿನಿಯರಿಂಗ್ ಕಂಟ್ರಾಕ್ಟರ್, ಶ್ರೀ. ಕೆ. ವಿ. ರಾಮಚಂದ್ರರಾಯರು ಉದಾರವಾಗಿ ದ್ರವ್ಯಸಹಾಯ ಮಾಡಿರುತ್ತಾರೆ.

| |
|---|
| ಹರಿಕಥಾವಿದ್ವಾನ್, ಶ್ರೀ ವೇಣುಗೋಪಾಲದಾಸರು ಈ ಗ್ರಂಥದ ಕರಡು ಪ್ರತಿಯನ್ನು ಅಚ್ಚಿಗೆ ಅನುಕೂಲಿಸುವಂತೆ ಬರೆದುಕೊಟ್ಟು ಪ್ರಕಟನೆಗೆ ನೆರವಾಗಿದ್ದಾರೆ. |
| ಮೈಸೂರು ರೈಲ್ವೆಯ ನಿವೃತ್ತ ಜನರಲ್ ಮ್ಯಾನೇಜರ್ ರಾಜಸೇವಾಪ್ರಸಕ್ತ, ಶ್ರೀ. ವೈ. ಕೆ. ರಾಮಚಂದ್ರರಾಯರು ಅಚ್ಚಾದ ಪ್ರತಿಯನ್ನು ಆಮೂಲಾಗ್ರವಾಗಿ ನೋಡಿ ಶುದ್ಧಾಶುದ್ಧ ಪತ್ರಿಕೆಯನ್ನು ಸಿದ್ಧಪಡಿಸಿ ಈ ಕಾರ್ಯಸಮಾಪ್ತಿಗೆ ನೆರವಾಗಿರುತ್ತಾರೆ. |
| ಪರಿಮಳ ಪ್ರೆಸ್ಸಿನ ಮಾಲೀಕರಾದ ಶ್ರೀ ಹೆಚ್. ಕೆ, ವೇದವ್ಯಾಸಾಚಾರ್ಯರು ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟು ನೆರವು ನೀಡಿದ್ದಾರೆ. |
| ಹೀಗೆ ಈ ಸತ್ಕಾರ್ಯಕ್ಕೆ ನಾನಾವಿಧವಾಗಿ ನೆರವಾಗಿರುವ ಮೇಲ್ಕಂಡ ಮಹನೀಯರಿಗೆಲ್ಲಾ ಶ್ರೀಕೃಷ್ಣ ಪರಮಾತ್ಮನು ಇತೋಪ್ಯಧಿಕ ಶ್ರೇಯಸ್ಸನ್ನು ಕೊಟ್ಟು, ಕಾಪಾಡಲೆಂದು ಪ್ರಾರ್ಥಿಸುತ್ತೇನೆ. |

## ಶ್ರೀಮದ್ಭಗವದ್ಗೀತಾ

ಹುಟ್ಟು ಸಾವುಗಳ ಮಧ್ಯೆ ಅನೇಕ ಲೌಕಿಕ ವ್ಯಾಪಾರಗಳಲ್ಲಿ ಮಿಂಚಿ ಕಡೆಗೊಮ್ಮೆ ಕಣ್ಮರೆಯಾಗುವ ಮಾನವನ ಬಾಳುವೆ ಎಷ್ಟು ಪ್ರಶ್ನೆಗಳನ್ನು ತಾನೆ ಮುಂದೂಡುವುದಿಲ್ಲ. ಹುಟ್ಟು ಸಾವುಗಳು ಎಷ್ಟು ನಿಶ್ಚಿತವೋ ಅವುಗಳ ಸ್ವರೂಪವೂ ಅಷ್ಟೇ ಜಟಿಲ ಎಂತಲೇ ಪ್ರಾಚೀನ ಅರ್ವಾಚೀನ ಎನ್ನುವ ಭೇದವಿಲ್ಲದೆ ದೇಶ ಕಾಲದ ಪರಿಮಿತಿಯನ್ನು ಮೀರಿ ಎಲ್ಲ ಜಿಜ್ಞಾಸುಗಳ ವಿಚಾರಕ್ಕೂ ಈ ಪ್ರಶ್ನೆಯೇ ಪ್ರಧಾನವಾಗಿದೆ. ಮಾನವನ ಬಾಳುವೆಯ ಪೂರ್ವೋತ್ತರಗಳೇನು? ಸೃಷ್ಟಿ ನಿಯಮದ ಆವರಣವೇನು? ಲೌಕಿಕವ್ಯಾಪಾರಗಳೂ ಅಲೌಕಿಕ ಅನುಷ್ಠಾನವೂ ಬಾಳುವೆಯಲ್ಲಿ ಮೇಳವಿಸುವುದೆಂತು? ಈ ದಿವ್ಯ ಸಮ್ಮೇಳನದಿಂದಾಗಿ ಜೀವ ತನ್ನ ಸಾರ್ಥಕ್ಯ ಪಡೆದುಕೊಂಡು ಬ್ರಹ್ಮಾಂಡದಲ್ಲಿ ಮುನ್ನಡೆಯುವ ಜೀವನದ ಬೃಹದ್ದರ್ಶನವನ್ನು ಸಾಧಿಸಲು ಶಕ್ಯವೆ? ಅನಾದ್ಯನಂತವಾದ ಬ್ರಹ್ಮಾಂಡದಷ್ಟೇ ವಿಶಾಲವೂ, ಮನುಷ್ಯಮಾತ್ರರಿಗೆ ಅಗಮ್ಯವೂ ಆದ ಮಹತ್ವಪೂರ್ಣವಾದ ಪ್ರಶ್ನೆಗಳ ಪರಿಹಾರಕ್ಕೆ ಭಗವದ್ಗೀತೆಗಿಂತ ಬೇರೊಂದು ಉಪದೇಶವನ್ನು ಬೇರೆಲ್ಲಿ ತಾನೆ ಕಾಣಲು ಸಾಧ್ಯ! ಶ್ರೀಮನ್ನಾರಾಯಣನೇ ಸ್ವತಃ ಗೀತಾಚಾರ್ಯನಾಗಿ ಲೋಕಕಲ್ಯಾಣಕ್ಕಾಗಿ ದೇವಭಾಷೆಯಾದ ಸಂಸ್ಕೃತದಲ್ಲಿ ಕರುಣಿಸಿದ ಬೃಹದ್ದರ್ಶನವು ವಿಶ್ವದ ನೂರಾರು ಭಾಷೆಗಳಲ್ಲಿ ಪರಿವರ್ತಿಸಲ್ಪಟ್ಟು, ಎಲ್ಲಾ ಜನಾಂಗಗಳ ಇಹಪರ ಶ್ರೇಯೋಮಾರ್ಗವನ್ನು ತೋರಿಸಿಕೊಡುವಂತಹ ವಿಶ್ವಮಾನ್ಯ ಉಪದೇಶವಾಗಿದೆ.

| |
|---|
| ಲೋಕದಲ್ಲಿ ನಾನು ಎಂಬ ಭಾವನೆ ಜನಜನಿತವಾಗಿದೆ. ಅದರ ತತ್ವವಾದರೋ ಬಹು ಗಹನವಾದದ್ದು. ನಾನು ಎಂಬ ವಸ್ತುವಾವುದು? ನಾನು ಎಲ್ಲಿಂದ ಹೇಗೆ ಬಂದಿರುವನು? ಎಲ್ಲಿ ಸೇರುವೆನು? ನನ್ನ ಈ ಬಾಳುವೆಯು ಶಾಶ್ವತವೇ? ಅಥವಾ ನನಗೆ ಬೇರೊಂದು ಶಾಶ್ವತವಾದ ನೆಲೆಯಿದೆಯೇ? ಜೀವನದಲ್ಲಿ ನನ್ನ ಮುಖ್ಯ ಗುರಿ ಯಾವುದು? ಅದನ್ನು ಸಾಧಿಸುವ ಬಗೆ ಹೇಗೆ? ಅದನ್ನು ಸಾಧಿಸಲು ನಾನೇ ಸಮರ್ಥನೇ ಅಥವಾ ಇತರರ ಸಹಾಯ ಬೇಕೇ? ಅಂತಹ ಸಹಾಯ ನೀಡುವವನಾರು? ಅವನು ಎಂತಹವನು? ಅವನ ಪ್ರಸಾದವನ್ನು ಪಡೆಯುವ ಬಗೆ ಎಂತು? ಅದಕ್ಕಾಗಿ ಈಗ ನನ್ನ ಕರ್ತವ್ಯವೇನು? ಇವೇ ಮುಂತಾದ ಹಲವಾರು ಕಠಿನ ಸಮಸ್ಯೆಗಳು ಮನುಷ್ಯನ ಬೆನ್ನುಹತ್ತಿವೆ. ಪಶು-ಪಕ್ಷಿ ಮುಂತಾದುವುಗಳಾಗಿ ಹುಟ್ಟಿದಾಗ ಇವನ್ನು ಬಗೆಹರಿಸಿಕೊಳ್ಳುವಂತಹ ವಿವೇಚನಶಕ್ತಿಯಿರುವುದಿಲ್ಲ. ಈ ಶಕ್ತಿಯು ಮಾನವನಿಗೇ ಮೀಸಲಾಗಿದೆ. ಇದೇ ಪಶು-ಮನುಷ್ಯರಲ್ಲಿ ಭಗವಂತನು ಇಟ್ಟಿರುವ ವ್ಯತ್ಯಾಸವು. |
| ಮನುಷ್ಯ ಜನ್ಮವು ಸುಲಭವಾಗಿ ಲಭಿಸತಕ್ಕುದಲ್ಲ. ಎಷ್ಟೋ ಪಶ್ವಾದಿ ಜನ್ಮಗಳು ಕಳೆದ ನಂತರ ಪೂರ್ವಪುಣ್ಯ ಪರಿಪಾಕದ ಫಲವಾಗಿ ಭಗವಂತನು ಮನುಷ್ಯ ಜನ್ಮ ಕೊಡುವನು. ಭಗವಂತನು ಇಂತಹ ಸುಸಂದರ್ಭವನ್ನು ಒದಗಿಸಿಕೊಟ್ಟಿರುವಾಗ ಮೇಲ್ಕಂಡ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಕರ್ತವ್ಯಪರನಾಗಿ ಮುಖ್ಯಗುರಿಯನ್ನು ಸಾಧಿಸಿ ಜನ್ಮವನ್ನು ಸಾರ್ಥಕಗೊಳಿಸಬೇಕು. |
| ಆದರೆ ನಮ್ಮನ್ನು ಎಡಬಿಡದೆ ಬೆಂಬಾಲಿಸುವ ನೆರಳಿನಂತಿರುವ ಮೇಲ್ಕಂಡ ಸಮಸ್ಯೆಗಳ ರಹಸ್ಯವನ್ನರಿತಹೊರತು ಶಾಂತಿಯ ಸುಪಥವು ದೊರೆಯಲಾರದು. ಅನುಭವ, ಯುಕ್ತಿ, ಅರ್ಥಶಾಸ್ತ್ರ, ನೀತಿಶಾಸ್ತ್ರ, ವಿಜ್ಞಾನಶಾಸ್ತ್ರ ಮುಂತಾದ ಯಾವ ಸಾಧನೆಯಿಂದಲೂ ಆ ರಹಸ್ಯವನ್ನು ಭೇದಿಸಲಾಗುವುದಿಲ್ಲ. ಅದರ ಅರಿವಿಗೆ ಅಧ್ಯಾತ್ಮಶಾಸ್ತ್ರವೊಂದೇ ದಾರಿಯು, ಅದಾದರೂ ಉಪನಿಷದಾದಿಗಳಲ್ಲಿ ಗುಂಭಿತವಾಗಿ ಅತ್ಯಂತ ಗಹನವಾಗಿದೆ. ಎಲ್ಲರಿಗೂ ಸುಗಮವಾಗಿಲ್ಲ. ಹೀಗೆ ಜೀವನದ ಗುರಿ ಮುಟ್ಟಲು ದಾರಿಗಾಣದೆ ನರಳುತ್ತಿರುವವರಲ್ಲಿ ದಯೆಮಾಡಿ ಶ್ರೀಕೃಷ್ಣ ಪರಮಾತ್ಮನು ಸಮೀಪದಲ್ಲಿದ್ದ ಅರ್ಜುನನಿಗೇ ಅಂತಹ ಪ್ರಸಂಗವನ್ನೊದಗಿಸಿ, ಅವನ ನೆಪದಿಂದ ಲೋಕಕ್ಕೇ ಈ ಗೀತೆಯನ್ನುಪದೇಶ ಮಾಡಿರುವನು. ಇದು ಅಧ್ಯಾತ್ಮತತ್ವಗಳಿಗೆ ಗಣಿಯಂತಿದೆ. ಇದರಲ್ಲಿ ಆತ್ಮತತ್ವ, ಕರ್ತವ್ಯವಿವೇಚನೆ, ಇಹಪರಗಳಲ್ಲಿ ಮನುಷ್ಯನು ಶ್ರೇಯಸ್ಸನ್ನು ಪಡೆಯುವ ಬಗೆ ಮುಂತಾದ ಜ್ಞೇಯ ವಿಷಯಗಳೆಲ್ಲವೂ ಅಡಗಿವೆ. ಇದರ ಅಧ್ಯಯನದಿಂದ ಮನುಷ್ಯನು ಕಣ್ತೆರೆದು ಮನಬಿಚ್ಚಿ ತಮತಮ್ಮ ಯೋಗ್ಯತಾನುಸಾರವಾಗಿ ತತ್ವವನ್ನರಿತು ಕರ್ತವ್ಯಪರನಾಗಿ |

ಸುಖಮಯ ಜೀವನವನ್ನು ಕಾಣಬಹುದು. ಹೀಗೆ ವಿಶ್ವವೇ ಹಂಬಲಿಸಿ ಬಯಸುತ್ತಿರುವ ಅಧ್ಯಾತ್ಮ ರಹಸ್ಯವನ್ನು ಬೋಧಿಸಿ ಸುಪಥವನ್ನು ತೋರಿಸಿರುವ ಈ ಭಗವದ್ಗೀತೆಯು ವಿಶ್ವಮಾನ್ಯವೆಂಬಲ್ಲಿ ಆಶ್ಚರ್ಯವೇನು !

## ಪ್ರಾಮಾಣ್ಯ

ಮತಸ್ಥಾಪಕಾಚಾರ್ಯರೆಲ್ಲರೂ ಭಾರತ-ರಾಮಾಯಣಾದಿ ಪ್ರಸಿದ್ಧೇತಿಹಾಸ, ಭಾಗವತಾದಿಪುರಾಣ ಇವಾವುದಕ್ಕೂ ಭಾಷ್ಯವನ್ನು ಮಾಡಿಲ್ಲವಾದರೂ ಈ ಭಗವದ್ಗೀತೆಗೆ ಮಾತ್ರ ಭಾಷ್ಯವನ್ನು ಮಾಡದೇ ಬಿಟ್ಟಿಲ್ಲ. ತತ್ವಶಾಸ್ತ್ರದಲ್ಲಿ: ಉಪನಿಷತ್ತು-ಬ್ರಹ್ಮಸೂತ್ರಗಳಂತೆ ಶ್ರೀಮದ್ಭಗವದ್ಗೀತೆಯೂ ಸಹ ಪ್ರಮುಖ ಸ್ಥಾನವನ್ನು ಪಡೆದಿದೆ. ಉಪನಿಷತ್ಪ್ರಸ್ಥಾನ, ಸೂತ್ರಪ್ರಸ್ಥಾನ, ಗೀತಾಪ್ರಸ್ಥಾನ ಎಂಬ ಪ್ರಸ್ಥಾನತ್ರಯವೇ ತತ್ವಶಾಸ್ತ್ರಕ್ಕೆ ಮೂಲವು. ಇತ್ತೀಚಿನವರಾದ ಶ್ರೀ ಬಾಲಗಂಗಾಧರತಿಲಕರು, ಬಾಬು ಅರವಿಂದಘೋಷರು, ಮಹಾತ್ಮಾ ಗಾಂಧಿಜೀಯವರೇ ಮುಂತಾದ ಅನೇಕ ಮಹಾಶಯರೂ ಸಹ ತಮ್ಮ ತಮ್ಮ ವಾದಗಳಿಗೆ ಗೀತೆಯೇ ಮೂಲವೆಂದು ಭಾವಿಸಿರುವರು. ಮ್ಯಾಕ್ಸ್ಮುಲರ್, ಕ್ಯಾಂಟ್, ಡ್ಯುಸನ್, ಆನಿಬೆಸೆಂಟ್, ಬ್ರೂಕ್ಸ್ ಮುಂತಾದ ಪಾಶ್ಚಾತ್ಯ ಪಂಡಿತರೂ ಸಹ ಈ ಗೀತೆಯು ಮಾನ್ಯ ತತ್ವಗ್ರಂಥವೆಂದು ಹೊಗಳಿರುತ್ತಾರೆ. ಹೀಗೆ ಸರ್ವ ಜನರ ಮನ್ನಣೆಗೆ ಪಾತ್ರವಾದ ಈ ಗ್ರಂಥವು ಪ್ರಮಾಣವೇ? ಅಲ್ಲವೇ? ಎಂಬ ಸಂಶಯವೇ ಬರಲಾರದು. ನವನಾಗರಿಕ ಪದ್ಧತಿಯಂತೆ ಗೀತೆಯು ಪ್ರಮಾಣವೆಂಬಲ್ಲಿ ಮೇಲ್ಕಂಡ ಬಹುಮತವೇ (Majority) ಸಾಧಕವಾಗಿದೆ. ಹಿಂದೆಯೂ ಬಹುಮತದಿಂದ ವಿಷಯವನ್ನು ನಿರ್ಣಯಿಸುವ ಪದ್ಧತಿಯಿತ್ತು. ಈಗ್ಗೆ ಸುಮಾರು 1200 ವರ್ಷಗಳ ಹಿಂದೆ ನ್ಯಾಯದರ್ಶನ ಸ್ಥಾಪಕರಾದ ಉದಯನಾಚಾರ್ಯರು ಬೌದ್ಧಮತವನ್ನು ಖಂಡಿಸಿ ವೇದ! ಪ್ರಾಮಾಣ್ಯವನ್ನು ಸಮರ್ಥನೆ ಮಾಡುವಾಗ ಮಹಾಜನಪರಿಗ್ರಹೀತತ್ವ ಎಂದರೆ ಬಹುಮತವನ್ನು ಪ್ರಾಮಾಣ್ಯ ಸಾಧಕವಾಗಿ ಆತ್ಮತತ್ವವಿವೇಕವೆಂಬ ಗ್ರಂಥದಲ್ಲಿ ಹೇಳಿರುತ್ತಾರೆ. ಹೀಗೆ ಪ್ರಾಚೀನ ನವೀನೋಭಯ ಸಂಪ್ರದಾಯಗಳಲ್ಲಿಯೂ ಸಾಧಕವೆಂದು ಪರಿಗಣಿಸಿರುವ ಬಹುಮತವು ಗೀತೆಗಿರುವುದರಿಂದ ಅದು ಪರಮಪ್ರಮಾಣವೆಂದು ನಿರ್ಣಯಿಸಬಹುದು.

ಪೌರುಷೇಯಗ್ರಂಥಗಳಲ್ಲಿ ಆಪ್ತ ಪ್ರಣೀತ ಗ್ರಂಥವೇ ಪ್ರಮಾಣವೆನಿಸುವುದು. ಗ್ರಂಥೋಕ್ತ ವಿಷಯಗಳ ಯಥಾರ್ಥಜ್ಞಾನ, ವಿಷಯನಿರೂಪಣೆ ಮಾಡಬೇಕೆಂಬ ಉತ್ಸಾಹ, ವಿಷಯವನ್ನು ಬೋಧಕವಾಗಿ ನಿರೂಪಿಸುವ ಶಕ್ತಿ, ವಂಚನೆ ಮಾಡಬಾರದೆಂಬ ದೀಕ್ಷೆ ಇವುಗಳುಳ್ಳವನೇ ಆಪ್ತನೆನಿಸುವನು. ಇವೆಲ್ಲವೂ ಭಗವದವತಾರರಾದ ಶ್ರೀವೇದವ್ಯಾಸರಲ್ಲಿ ಪುಷ್ಕಲವಾಗಿವೆಯೆಂದು

ಹೇಳಬೇಕಾಗಿಯೇ ಇಲ್ಲ. ಅಂತಹ ಪರಮಾಪ್ತ ಪ್ರಣೀತವಾಗಿ ವೇದಾರ್ಥ ಪ್ರತಿಪಾದಕವಾಗಿರುವ ಕಾರಣ ಈ ಗೀತೆಯು ಪರಮಪ್ರಮಾಣವೆಂಬ ನಿರ್ಣಯವು ಇನ್ನೂ ದೃಢವಾಗುವುದು.

## ಅಪ್ರಾಮಾಣ್ಯ ಶಂಕಾಪರಿಹಾರ

ಗೀತೆಯು ವಾಕ್ಯರೂಪವಾಗಿದೆ. ವಾಕ್ಯವು ಸ್ವತಃ ಅಪ್ರಮಾಣವಾಗಲಾರದು. ಅದನ್ನು ರಚಿಸಿದವರ ದೋಷದಿಂದ ಅದು ಅಪ್ರಮಾಣವಾಗಬಹುದು. ಪ್ರಮಾದ, ಅಜ್ಞಾನ, ಸಂಶಯ, ಭ್ರಾಂತಿ, ವಂಚನೆ ಇವು ವಕ್ತೃವಿಗೆ ಸಂಭಾವಿತ ದೋಷಗಳು. ಇವುಗಳಲ್ಲಿ ಯಾವುದಿದ್ದರೂ ಅಂತಹವನಿಂದ ರಚಿತ ಗ್ರಂಥವು ಅಪ್ರಮಾಣವೇ ಸರಿ. ಪ್ರಕೃತ ಗೀತೆಯನ್ನು ರಚಿಸಿದವರು ಶ್ರೀಕೃಷ್ಣ ದ್ವೈಪಾಯನವ್ಯಾಸರು, ಇವರು ನಾರಾಯಣಾವತಾರರೆಂದು

ಕೃಷ್ಣ ದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋऽನ್ಯೋ ಹಿ ಭುವಿ ಮೈತ್ರೇಯ ಮಹಾಭಾರತ ಕೃದ್ಭವೇತ್ - ವಿಷ್ಣು ಪುರಾಣ

ಎಂಬ ವಚನದಿಂದ ತಿಳಿದುಬರುತ್ತದೆ. ಆದುದರಿಂದ ವ್ಯಾಸರು ಸರ್ವಜ್ಞರು ಮತ್ತು ಸರ್ವಶಕ್ತರು ಎಂದು ಸಿದ್ಧಿಸಿತು.

ಗೀತಾರಚನೆಯ ಸಂದರ್ಭ ಪರಿಶೀಲನೆಯಿಂದ ವಕ್ತನಲ್ಲಿ ವಂಚನೆಯುಂಟು ಅಥವಾ ಇಲ್ಲವೆಂಬುದನ್ನು ನಿರ್ಧರಿಸಬೇಕು. ಸಂದರ್ಭವಾದರೂ ಹೀಗಿದೆ: – ದ್ವಾಪರಯುಗದ ಅಂತ್ಯಭಾಗದಲ್ಲಿ ಜನರು ವೇದಾರ್ಥಗಳನ್ನು ತಿಳಿಯದೆ ಪರಾಪರ ತತ್ವಜ್ಞಾನರಹಿತರಾಗಿ ಸಂಸಾರದಲ್ಲಿ ಸಿಲುಕಿ ನರಳುತ್ತಿರುವುದನ್ನು ಕಂಡು ದಯಾಳುಗಳಾದ ಬ್ರಹ್ಮಾದಿದೇವತೆಗಳು ಅಜ್ಞರಾಗಿ ಸಂಸಾರ ಕ್ಲೇಶವನ್ನನುಭವಿಸುತ್ತಿರುವ ಸಜ್ಜನರನ್ನು ತತ್ತ್ವೋಪದೇಶಮಾಡಿ ಉದ್ಧರಿಸಬೇಕೆಂದು ಶ್ರೀನಾರಾಯಣನನ್ನು ಪ್ರಾರ್ಥಿಸಿದರು. ಅದನ್ನು ಲಾಲಿಸಿ ಭಗವಂತನು ತಾನೇ ಈ ಲೋಕದಲ್ಲಿ ಅವತರಿಸಿ ವೇದವಿಭಾಗಾದಿ ಅನೇಕ ಜ್ಞಾನಕಾರ್ಯಗಳನ್ನು ಮಾಡಿ ವೇದವ್ಯಾಸ ಎಂಬ ಅಭಿಧಾನದಿಂದ ಪ್ರಸಿದ್ಧನಾದನು. ಬಳಿಕ ವೇದವ್ಯಾಸರು ವೇದದಿಂದಲೇ ಎಲ್ಲರಿಗೂ ತತ್ವಜ್ಞಾನವಾಗಲಾರದು. ಸ್ತ್ರೀ ಶೂದ್ರಾದಿ ಸಕಲ ಜನರೂ ಸುಲಭವಾಗಿ ತತ್ವಜಾನ ಹೊಂದಲೆಂಬ ಉದಾರ ಭಾವದಿಂದ ಸಕಲ ವೇದಾರ್ಥಗರ್ಭಿತವಾದ ಭಾರತ ಮತ್ತು ಭಾಗವತಾದಿ ಹದಿನೆಂಟು ಪುರಾಣಗಳನ್ನೂ ರಚಿಸಿದರು. ಹೀಗೆ ರಚಿತವಾದ ಮಹಾಭಾರತದಲ್ಲಿ ಹದಿನೆಂಟು ಪರ್ವಗಳಿವೆ. ಆರನೆಯದಾದ ಭೀಷ್ಮಪರ್ವದಲ್ಲಿ ಶ್ರೀಕೃಷ್ಣೋಪದಿಷ್ಟವಾದ ಈ ಗೀತೆಯನ್ನು ಸೇರಿಸಿರುತ್ತಾರೆ. ವೇದಾದಿಶಾಸ್ತ್ರಗಳ ಸಾರವೇ ಭಾರತವು. ಅದರಲ್ಲಿಯೂ ಸಾರತಮಭಾಗವು ಈ ಗೀತೆಯೆಂದು ನಾರದೀಯಸ್ಮೃತಿ, ಮಹಾಕೂರ್ಮಪುರಾಣ ಮುಂತಾದುವುಗಳಿಂದ ತಿಳಿದುಬರುತ್ತದೆ. ಒಟ್ಟಿನಲ್ಲಿ

ಅತ್ಯಂತ ಪ್ರೀತ್ಯಾಸ್ಪದರಾದ ಬ್ರಹ್ಮಾದಿಗಳ ಪ್ರಾರ್ಥನೆಯಿಂದ ದಯಾರ್ದ್ರಹೃದಯರಾಗಿ ಸ್ವತಃ ಪೂರ್ಣಕಾಮರಾದ ಶ್ರೀ ವೇದವ್ಯಾಸರು ಅಜ್ಞಜನೋದ್ಧಾರಕೋಸ್ಕರವೇ ರಚಿಸಿರುವ ಈ ಗೀತೆಯಲ್ಲಿ ಸುಳ್ಳು ಹೇಳಿ ವಂಚನೆ ಮಾಡುತ್ತಾರೆಂಬ ಶಂಕೆಯೂ ಸಹ ಹುಟ್ಟಲಾರದು. ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಮಾಡಿದ ಸಂದರ್ಭವನ್ನು ಪರ್ಯಾಲೋಚಿಸಿದರೂ ಸಹ ಕರ್ತವ್ಯ ಮೂಢನಾದ ಅರ್ಜುನನ್ನುದ್ಧರಿಸುವ ಪ್ರಸಂಗವಾದ ಕಾರಣ ವಂಚನಾದಿಗಳು ಸಂದರ್ಭೋಚಿತವಲ್ಲವೆಂಬುದು ಸ್ಪಷ್ಟ ಪಡುವುದು. ಅಂತೂ ಗೀತೆಯನ್ನುಪದೇಶಿಸಿದ ಶ್ರೀಕೃಷ್ಣನು, ಅದನ್ನು ಮಹಾಭಾರತದಲ್ಲಿ ಸೇರಿಸಿದ ಶ್ರೀವೇದವ್ಯಾಸರೂ ಸಹ ಸಾಕ್ಷಾನ್ನಾರಾಯಣನೇ ಆಗಿರುವುದರಿಂದ ಸರ್ವಜ್ಞರಾದ ಅವರಲ್ಲಿ ಪ್ರಮಾದ-ಅಜ್ಞಾನ-ಭ್ರಾಂತಿಗಳಿಗೆ ಎಡೆಯಿಲ್ಲ. ಸಜ್ಜನೋದ್ಧಾ ರ ಸಂದರ್ಭವಾದ ಕಾರಣ ವಂಚನೆಗವಕಾಶವಿಲ್ಲವಾಗಿ ವಾಕ್ಯಾಪ್ರಾಮಾಣ್ಯ ಕಾರಣಗಳಾವುದಕ್ಕೂ ಅವಕಾಶವಿಲ್ಲದುದರಿಂದ ಗೀತೆಯು ಅಪ್ರಮಾಣವೆಂಬ ಶಂಕಯೇ ಏಳುವುದಿಲ್ಲ.

## ಗೀತೆಯು ಶಾಸ್ತ್ರವು

ಗೀತೆಯು ೭೦೦ ಶ್ಲೋಕಗಳ ಚಿಕ್ಕ ಗ್ರಂಥವಾಗಿ ಕಾಣುತ್ತದೆ. ಮೂರ್ತಿ ಚಿಕ್ಕದಾದರೂ ಕೀರ್ತಿಯು ದೊಡ್ಡದೇ ಸರಿ. ಅದು ಸಾಮಾನ್ಯ ಕಾವ್ಯವಲ್ಲ. ಮೇಲೆ ಸುಲಭವಾಗಿ ತೋರಿದರೂ ಒಳಹೊಕ್ಕು ವಿಚಾರ ಮಾಡತೊಡಗಿದರೆ ಪ್ರತಿಯೊಂದು ಶ್ಲೋಕದಲ್ಲಿ, ಪದದಲ್ಲಿ, ಅಕ್ಷರದಲ್ಲಿಯೂ ಸಹ ಅಪೂರ್ವ ತತ್ತ್ವಾರ್ಥಗಳೇ ಗರ್ಭಿತವಾಗಿವೆ. ಆದುದರಿಂದ ಅದು ಉತ್ತಮಶಾಸ್ತ್ರವೆಂಬಲ್ಲಿ ಸಂದೇಹವಿಲ್ಲ. ಅದರ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿಯೂ "ಯೋಗಶಾಸ್ತ್ರೇ" ಎಂಬುದಾಗಿ ಸ್ಪಷ್ಟ ಹೇಳಿಕೆಯಿದೆ. ಶಾಸ್ತ್ರವೆಂದರೆ :-

ವಕ್ತೃಶ್ರೋತ್ರೋರಭಿಮತಮನನ್ಯಸಾಧ್ಯಂ ಫಲಮಧಿಕೃತ್ಯ
ತದ್ಧೇತುಭೂತಂ ಪ್ರಮಾಣಾಂತರಾಪ್ರಾಪ್ತಮರ್ಥಂ ಪ್ರತಿಪಾದಯತಾಂ
ವಾಕ್ಯಾನಾಂ ಸಮೂಹೋ ಹಿ ಶಾಸ್ತ್ರಂ – ವಿಷ್ಣು ತತ್ವವಿನಿರ್ಣಯಟೀಕಾ

ವಕ್ತೃಶ್ರೋತೃಗಳಿಗಿಷ್ಟವು, ಬೇರೆ ದಾರಿಯಿಂದ ಸಾಧಿಸಲಶಕ್ಯವೂ ಆದ ಪ್ರಯೋಜನವನ್ನುಂಟುಮಾಡುವಂತಹ, ಇತರ ಪ್ರಮಾಣಗಳಿಂದ ನಿರ್ಣೀತವಾಗದಿರುವ ಅರ್ಥವಿಶೇಷವನ್ನು ಬೋಧಿಸುವ ವಾಕ್ಯಗಳ ಸಮೂಹವೇ ಶಾಸ್ತ್ರವು, ಗೀತೆಯಲ್ಲಿ ಹೇಳಿರುವ ಆತ್ಮತತ್ವ, ಭಕ್ತಿಮಾರ್ಗ ಮುಂತಾದುವನ್ನರಿತು ಅದರಂತೆ ಆಚರಿಸುವುದರಿಂದ ಸರ್ವಾಪೇಕ್ಷಿತವಾದ ಮೋಕ್ಷವು ಲಭಿಸುತ್ತದೆ. ಅದಕ್ಕೆ ಗೀತೋಕ್ತವಾದುದೇ ಮಾರ್ಗವು :– ಬೇರೆ

ದಾರಿಯಿಲ್ಲ. ಹೀಗೆ ಎಲ್ಲರಿಗೂ ಸನ್ಮಾರ್ಗ ಪ್ರದರ್ಶಕವಾದ ಗೀತೆಯು ಶಾಸ್ತ್ರವೆಂದಷ್ಟೇ ಅಲ್ಲ : ಉತ್ತಮೋತ್ತಮ ಶಾಸ್ತ್ರವೆಂದೇ ಸರ್ವಸಂಪ್ರತಿಪನ್ನವಾಗಿದೆ.

ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ
ಭಾರತವ್ಯಪದೇಶೇನ ಆಮ್ನಾಯಾರ್ಥ: ಪ್ರದರ್ಶಿತಃ
ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟಾಂತೋ ಹಿ ಭಾರತೇ ಇತ್ಯಾದಿ - ಮಹಾಕೂರ್ಮಪುರಾಣ,

ಹೀಗೆ ಬಹುಪ್ರಮಾಣಗಳು ಗೀತೆಯು ಸರ್ವೋತ್ತಮ ಶಾಸ್ತ್ರವೆಂದು ಸಾರುತ್ತಿವೆ.

## ಪ್ರಮಾಣವಿಷಯ ವಿವೇಕ

ಪ್ರಮಾಣವು ಪ್ರತ್ಯಕ್ಷ, ಅನುಮಾನ(ಯುಕ್ತಿ), ಆಗಮ(ಶಬ್ದ) ಎಂದು ಮೂರು ಬಗೆಯಾಗಿದೆ. ವಿಷಯವು ಇಂದ್ರಿಯಗೋಚರ ಮತ್ತು ಅಗೋಚರ(ಅತೀಂದ್ರಿಯ) ಎಂದು ಎರಡು ತೆರನಾಗಿದೆ. ಅದರಲ್ಲಿ ಮೊದಲನೆಯದನ್ನು ಪ್ರತ್ಯಕ್ಷಪ್ರಮಾಣದಿಂದ ನಿರ್ಧರಿಸಬಹುದು. ಅತೀಂದ್ರಿಯ ವಿಷಯವನ್ನು ಪ್ರತ್ಯಕ್ಷವು ಗ್ರಹಿಸಲಾರದು. ಅದನ್ನು ಗ್ರಹಿಸುವುದಕ್ಕೆ ಅನುಮಾನಾಗಮಗಳೇ ಗತಿ.

## ಯುಕ್ತಿ ಪರಿಸ್ಥಿತಿ

ಅದರಲ್ಲಿಯೂ ಇತರ ಪ್ರಮಾಣಗಳನ್ನು ಲೆಕ್ಕಿಸದೆ ಯುಕ್ತಿಯೊಂದೇ ಸ್ವತಂತ್ರ ಯುಕ್ತಿವಾಗಿ ಯಾವ ಅಪೂರ್ವ ತತ್ವವನ್ನೂ ನಿರ್ಧರಿಸಲಾರದು. ಯುಕ್ತಿಯು ಪುರುಷಬುದ್ಧಿ ಕಲ್ಪಿತವು. ಪುರುಷನು ಸರ್ವಜ್ಞನಲ್ಲ. ಪ್ರತಿಯೊಬ್ಬ ಮನುಷ್ಯನ ಬುದ್ಧಿಗೂ ತಾರತಮ್ಯವಿದೆ. ಒಬ್ಬನು ಸಾಧುವೆಂದು ಗ್ರಹಿಸಿದ ವಿಷಯವು ಇನ್ನೊಬನ ಊಹೆಗೆ ಅಸಾಧುವಾಗಿ ತೋರುವುದು ಸಹಜ. ಆದಕಾರಣ ಅನುಮಾನದಿಂದ ತತ್ವವನ್ನು ನಿರ್ಧರಿಸಲು ಇತರ ಪ್ರಮಾಣಗಳ ಸಹಕಾರ ಬೇಕು. ಅನೇಕ ಸಂದರ್ಭಗಳಲ್ಲಿ ವಿರುದ್ಧವಾದ ಎರಡು ಪಕ್ಷಗಳಿಗೂ ಯುಕ್ತಿಯು ತೋರುವುದು. ಹೇಗೆಂದರೆ:- ಬಹುಪುತ್ರರನ್ನಪೇಕ್ಷಿಸಬಹುದೇ? ಅಥವಾ ಅಪೇಕ್ಷಿಸಬಾರದೇ? ಎಂಬ ವಿಷಯವನ್ನು ವಿಮರ್ಶಿಸತೊಡಗಿದರೆ ಎರಡೂ ಪಕ್ಷಗಳಿಗೂ ಯುಕ್ತಿಯು ತೋರುವುದು:-- ಬಹುಪುತ್ರರನ್ನಪೇಕ್ಷಿಸುವುದೇ ಸರಿ. ಅನೇಕ ಮಕ್ಕಳಾದರೆ ಅವರಲ್ಲಿ ಒಬ್ಬನಾದರೂ ಯೋಗ್ಯನಾಗಿ ಗಯಾಶ್ರಾದ್ಧಾದಿಗಳಿಂದ ಪಿತೃಗಳನ್ನುದ್ಧರಿಸಿಯಾನು. ಒಬ್ಬನೇ ಮಗನಾಗಿ ಅವನು ಅಯೋಗ್ಯನಾದರೆ ಪಿತೃಗಳಿಗೆ ಸದ್ಗತಿಯೇ ಇಲ್ಲದಂತಾಗುವುದು ಎಂಬುದಾಗಿ ಬಹುಪುತ್ರ ಪಕ್ಷದಲ್ಲಿ ಯುಕ್ತಿಯನ್ನು ಹೇಳಬಹುದು. ಬಹುಪುತ್ರರನ್ನಪೇಕ್ಷಿಸಬಾರದೆಂಬ ವಿರುದ್ಧ ಪಕ್ಷದಲ್ಲಿಯೂ ಸಹ ಯುಕ್ತಿಯು ದೊರೆಯು ಇದೆ. ಬಹುಮಕ್ಕಳಾದರೆ ಅವರಲ್ಲಿ ಒಬ್ಬನಾದರೂ ಸುರಾಪಾನಾದಿ ಮಹಾಪಾತಕ ಮಾಡುವ ಸಂಭವವಿರುವುದರಿಂದ ಹಾಗೆ ನಡೆದು ಪಿತೃಗಳಿಗೆ

ಅಧೋಗತಿಯಾದೀತು! ಆದಕಾರಣ ಬಹುಪುತ್ರರನ್ನಾಶಿಸದಿರುವುದೇ ಮೇಲು. ಹೀಗೆ ವಿರುದ್ಧೋಭಯ ಪಕ್ಷಗಳಿಗೂ ಸಾಧಕಯುಕ್ತಿಗಳು ತೋರುತ್ತಿರುವಾಗ ನಿರ್ಣಯಮಾಡುವ ಬಗೆಯೆಂತು? ಪ್ರತ್ಯಕ್ಷಶಬ್ದಗಳ ವಿರೋಧಾವಿರೋಧಗಳನ್ನು ಲೆಕ್ಕಿಸದೆ ಅದರಂತೆಯೇ ಯುಕ್ತಿಯೂ ಸಹ ಸ್ವತಂತ್ರ ತತ್ವನಿರ್ಧಾರಕವೆಂದು ಹೇಳಿದರೆ ಪ್ರತ್ಯಕ್ಷವಿರುದ್ಧ ವಾದುದನ್ನೂ ಸಹ. ಯುಕ್ತಿಯಿಂದ ಸಾಧಿಸಬಹುದು. ಹೇಗೆಂದರೆ: - ಕೊಂಬಿರುವ ಪಶು, ಕೊಂಬಿಲ್ಲದ ಪಶು ಎಂದು ಪಶುಜಾತಿಯಲ್ಲಿ ಎರಡು ಪಂಗಡವು ಪ್ರತ್ಯಕ್ಷಸಿದ್ಧವಾಗಿದೆ. ಪಶುತ್ವ ಎಂಬ ಧರ್ಮವು ದ್ವಿವಿಧ ಪಶುಗಳಲ್ಲಿಯೂ ಕಂಡಿದೆ. ಪಶುವಾಗಿರುವ ಎಲ್ಲಾ ಪ್ರಾಣಿಗಳಲ್ಲಿಯೂ ಬಾಲ ಮುಂತಾದುವುಗಳಂತೆ ಸಮಾನವಾದ ಅವಯವ ಸನ್ನಿವೇಶಗಳಿರಬೇಕು. ಆದಕಾರಣ ಕೊಂಬಿರುವ ಪಶುಗಳ ದೃಷ್ಟಾಂತದಿಂದ ಪಶುತ್ವವೆಂಬ ಸಮಾನ ಧರ್ಮವನ್ನೇ ನಿಮಿತ್ತ ಮಾಡಿ ಕೊಂಬಿಲ್ಲದ ಪಶುಗಳಲ್ಲಿಯೂ ಕೊಂಬು ಉಂಟೆಂದು ಸಾಧಿಸಿದರೆ ಆ ಯುಕ್ತಿಗೆ ಯಾವ ದೋಷವೂ ಬರುವುದಿಲ್ಲ. ಪ್ರತ್ಯಕ್ಷ ವಿರೋಧವನ್ನು ಹೇಳಬಹುದು. ಪ್ರತ್ಯಕ್ಷದಂತೆ ಯುಕ್ತಿಯೂ ಸ್ವತಂತ್ರ ಸಾಧಕವಾಗಿರುವುದರಿಂದ ಅದರ ವಿರೋಧವು ಅಪ್ರಯೋಜಕವು; ದೋಷವೇ ಅಲ್ಲ. ಹೀಗೆ ಅನುಮಾನ ಮಾತ್ರದಿಂದ ಬಹುವಿರುದ್ಧಾರ್ಥಗಳು ಒಪ್ಪಬೇಕಾಗಿ ಬರುತ್ತವೆ. ಆದಕಾರಣ ಇಂತಹ ಸಂದರ್ಭದಲ್ಲಿ ವಿಷಯಸ್ವಭಾವಾನುಸಾರವಾಗಿ ಪ್ರತ್ಯಕ್ಷ ಅಥವಾ ಶಬ್ದ ಪ್ರಮಾಣಗಳ ಸಹಾಯದಿಂದ ಅದಕ್ಕನುಸಾರವಾಗಿರುವ ಯುಕ್ತಿಯೇ ಪ್ರಮಾಣ, ಅದಕ್ಕೆ ವಿರುದ್ಧವಾದುದೆಲ್ಲವೂ ಪ್ರಮಾಣವಲ್ಲವೆಂದು ಭಾವಿಸಿ ತತ್ವವನ್ನು ನಿರ್ಧರಿಸಬೇಕು.

ಹಾಗಾದರೆ ಮನುಷ್ಯನಿಗೆ ಸ್ವತಂತ್ರವಾಗಿ ಒಂದಭಿಪ್ರಾಯವನ್ನು ರೂಪಿಸುವ ಶಕ್ತಿ ಅಥವಾ ಹಕ್ಕು ಇಲ್ಲವೇ? ಎಂಬ ಪ್ರಶ್ನೆ ಏಳಬಹುದು. ಸ್ವತಂತ್ರ ವಿಚಾರವನ್ನೇ ನಾವು ಅಲ್ಲಗಳೆಯುವುದಿಲ್ಲ; ಆದರೆ ಅವರು ತಮ್ಮ ವಿಚಾರದಿಂದ ನಿರ್ಧರಿಸಿದ ತತ್ವವು ಪ್ರಮಾಣಸಮ್ಮತವೇ? ಅಲ್ಲವೇ? ಎಂಬುದನ್ನು ವಿವೇಚನೆಮಾಡಿ ಪ್ರಮಾಣ ಸಮ್ಮತವಾದ ನಿರ್ಧಾರವನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇವೆ.

## ಸಂಪ್ರದಾಯ

ಕೆಲವು ಆಧುನಿಕರು ಯುಕ್ತಿಯಿಂದಲೇ ಸಕಲ ತತ್ವವನ್ನೂ ನಿರ್ಧರಿಸುತ್ತೇವೆಂದು ಪ್ರತಿಜ್ಞೆ ಮಾಡುವರು. ಅದು ಸಾಧ್ಯವಲ್ಲ. ಪ್ರತಿಯೊಂದು ದರ್ಶನದಲ್ಲಿಯೂ **(Philosophy)** ನಡೆನುಡಿಗಳಲ್ಲಿಯೂ ಸಹ ಮೂಲಭೂತವಾದ ಕೆಲವಂಶಗಳನ್ನು ಸಾಂಪ್ರದಾಯಿಕವಾಗಿ ಒಪ್ಪಿಯೇ ತೀರಬೇಕು, ಭಾಷಾಶಾಸ್ತ್ರವನ್ನು ನೋಡಿದರೆ ಇಂಗ್ಲಿಷ್ ಭಾಷೆಯಲ್ಲಿ **Hour**-ಅವರ್ ಮುಂತಾದ

ಅನೇಕ ಶಬ್ದಗಳಲ್ಲಿ H ಮುಂತಾದ ಅಕ್ಷರಗಳಿಗೆ ಉಚ್ಚಾರಣೆಯೇ ಇಲ್ಲ. ನಿಷ್ಫಲವಾದ ಆ ವರ್ಣಗಳನ್ನೇಕೆ ಸೇರಿಸಬೇಕು? ಎಂಬ ಆಕ್ಷೇಪಕ್ಕೆ ಸಂಪ್ರದಾಯವೇ ಶರಣವು. ಇಂಗ್ಲೀಷರ ಮಾಸವ್ಯವಸ್ಥೆಯಲ್ಲಿ ಒಂದೊಂದು ತಿಂಗಳಿಗೂ ದಿನಪರಿಮಿತಿಯಲ್ಲಿ ವ್ಯತ್ಯಾಸವಿದೆ. ಎಲ್ಲಾ ತಿಂಗಳಿಗೂ ಒಂದೇ ವಿಧವಾಗಿ 30 ದಿನಗಳನ್ನೇಕೆ ಅಳವಡಿಸಲಿಲ್ಲ? ಅದರಲ್ಲಿಯೂ ನವಂಬರಿಗೆ 30, ಡಿಸೆಂಬರ್ ತಿಂಗಳಿಗೆ 31 ಎಂಬ ನಿಯಮವೇಕೆ? ವಿಪರೀತವಾಗಿ ಏಕೆ ಹೇಳಬಾರದು ? ಜುಲೈ-ಆಗಸ್ಟ್ ಈ ಎರಡು ತಿಂಗಳಿಗೂ 31 ದಿನಗಳೇಕೆ? ಫೆಬ್ರವರಿಗೆ 28 ಅಥವಾ 29 ಎಂಬ ವಿಕಲ್ಪವೇಕೆ? ಇತ್ಯಾದಿ ಆಕ್ಷೇಪಗಳಿಗೆಲ್ಲಾ ಸಂಪ್ರದಾಯವೆನ್ನುವುದೊಂದೇ ಉತ್ತರ. ಬೇರಾವ ಕಾರಣದಿಂದಲೂ ಈ ವ್ಯವಸ್ಥೆಯನ್ನು ಸಮರ್ಥಿಸಲಾಗುವುದಿಲ್ಲ. ಹೀಗೆ ಸಾಧಾರಣ ನಡೆನುಡಿಗಳಲ್ಲಿಯೇ ಸಂಪ್ರದಾಯವನ್ನು ಬಿಡಲಾಗದಿದ್ದ ಮೇಲೆ ಅತೀಂದ್ರಿಯಾರ್ಥ ವ್ಯವಸ್ಥಾಪಕವಾದ ತತ್ವಶಾಸ್ತ್ರದಲ್ಲಿ ಸಂಪ್ರದಾಯದಿಂದ ಕೆಲವು ತತ್ವನಿರ್ಧಾರವನ್ನು ಕೈಕೊಳ್ಳದಿರಲು ಸಾಧ್ಯವೇ? ಎಂಬುದನ್ನು ಗಮನಿಸಬೇಕು. ನಾವು ಎಷ್ಟೇ ಬುದ್ಧಿವಂತರೆಂದು ತಿಳಿದಿದ್ದರೂ ಸಂಪ್ರದಾಯವನ್ನು ಕಲ್ಪಿಸಿದ ಪೂರ್ವಾಚಾರ್ಯರ ಬುದ್ಧಿ ಶಕ್ತಿಯು ಹೆಚ್ಚಿನದೆಂಬುದನ್ನು ಮರೆಯಬಾರದು. ಅವರ ಬುದ್ಧಿಗೂ ನಿಲುಕದ ಅಲೌಕಿಕ ಪ್ರಭೆಯಿಂದ ಸ್ಫುರಿಸಿದ ತತ್ವಗಳೇ ಸಾಂಪ್ರದಾಯಿಕಗಳು. ಅವು ನಮ್ಮಂತಹ ಅಲ್ಪಜ್ಞರ ಊಹೆಗೂ ನಿಲುಕಲಾರವು. ಆದುದರಿಂದ ಸಂಪ್ರದಾಯವನ್ನು ಬಿಟ್ಟು, ಯುಕ್ತಿ ಮಾತ್ರದಿಂದಲೇ ತತ್ವನಿರ್ಧಾರಣೆ ಮಾಡುತ್ತೇವೆಂಬುದು ಮೌಢ್ಯವೇ ಸರಿ.

## ವಿಚಾರ ಮಾರ್ಗ

ಅಂತಹ ಅಲೌಕಿಕತತ್ವ ವಿಷಯದಲ್ಲಿ ವೇದ, ಉಪನಿಷತ್ತು ಮುಂತಾದ ಅಪೌರುಷೇಯಗ್ರಂಥಗಳು ಮತ್ತು ಸರ್ವಜ್ಞ ರಚಿತವಾದ ಗೀತಾದಿಗ್ರಂಥಗಳು ಮಾತ್ರವೇ ಪ್ರಮಾಣವು. ಪ್ರಮಾಣವಿಲ್ಲದೆ ಯಾವ ತತ್ವನಿರ್ಧಾರವನ್ನೂ ಕೈಗೊಳ್ಳಬಾರದು, ಈ ಪಂಥವನ್ನನುಸರಿಸಿರುವುದೇ ತತ್ವವಿಚಾರಮಾರ್ಗವು.

ಕೇವಲ ಯುಕ್ತಿವಾದ ಅಥವಾ ಪ್ರಮಾಣರಹಿತ ತತ್ವಕಥನೆ ಇವು ತತ್ವವಿಚಾರಮಾರ್ಗವಲ್ಲವೆಂಬುದನ್ನು ಮನದಲ್ಲಿಟ್ಟು ಪ್ರಮಾಣಗಳ ಆಧಾರದ ಮೇಲೆ ಸಂಸ್ಕೃತ ಬುದ್ಧಿಯಿಂದ ವಿಮರ್ಶೆ ಮಾಡಿ ತತ್ವವನ್ನು ನಿರ್ಧರಿಸುವಂತಹ ರೀತಿಯೇ ಸ್ವತಂತ್ರ ವಿಚಾರಮಾರ್ಗವು, ಅಂತಹುದನ್ನು ನಾವು ಸ್ವಾಗತಿಸುವೆವು. ಅಂತಹ ಸುವ್ಯವಸ್ಥಿತ ರೀತಿಯನ್ನೇ ಅವಲಂಬಿಸಿ ಪೂರ್ವಾಚಾರ್ಯರು ತತ್ವನಿರ್ಧಾರಣೆ ಮಾಡಿರುವರು. ಹಾಗಲ್ಲದೆ ಕುಯುಕ್ತಿ ಮಾತ್ರಶರಣರಾಗಿ ಯಾವುದೊಂದು ಮೂಲತತ್ವ ನಿರ್ಧಾರವೂ ಇಲ್ಲದೆ ಪೂರ್ವ

ಪದ್ಧತಿಯನ್ನಲ್ಲಗಳೆಯುತ್ತಾ ಸಮಯ ಬಂದ ಹಾಗೆಲ್ಲಾ ತಮ್ಮ ರೀತಿ ನೀತಿಗಳನ್ನು ಬದಲಾಯಿಸಿಕೊಂಡು ಅಸಂಸ್ಕೃತವಾದ ತಮ್ಮ ಮನ ಬಂದಂತೆ ಹೇಳುವವರ ವಾದದಲ್ಲಿ ತಿರುಳಿಲ್ಲ. ಅದು ಎಂದಿಗೂ ತತ್ವ ವ್ಯವಸ್ಥಾಪಕವಾಗಲಾರದು, ಅಂತಹ ಸ್ವತಂತ್ರ ಮಾರ್ಗವೇ ಉಪಾದೇಯವಲ್ಲವೆಂದು ವಿಮರ್ಶಕರ ಅಭಿಪ್ರಾಯ,

## ಅರ್ಥಕ್ರಮ

ಗೀತೆಯು ಸರ್ವಾಧಿಕಾರಿಕವಾದ ತತ್ವಶಾಸ್ತ್ರವು. ಅದು ಬಹು ಗೂಢಾರ್ಥವುಳ್ಳದಾಗಿ ಗಂಭೀರವಾಗಿದೆ. ಅದರ ಆಳವನ್ನು ಕಾಣುವುದು ಸುಲಭವಲ್ಲ. ಅದಕ್ಕೆ ಭಾಷ್ಯ ಟೀಕೆಗಳು ಮತ್ತು ಭಾಷಾಂತರಗಳು ಹೇರಳವಾಗಿವೆ. ಆದರೆ ಅದರ ನೈಜವಾದ ಅರ್ಥವು ಎಷ್ಟರಮಟ್ಟಿಗೆ ಹೊರಬಿದ್ದಿದೆಯೆಂಬುದೇ ಸಮಸ್ಯೆಯು. ಶಾಸ್ತ್ರದ ನೈಜವಾದ ಆಶಯವನ್ನು ಕಂಡುಹಿಡಿಯಬೇಕಾದರೆ ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತೆ, ಫಲ ಮತ್ತು ಅರ್ಥವಾದ ಎಂಬ ಆರು ಯುಕ್ತಿಗಳ ಬಲಾಬಲವಿವೇಚನೆ ಮಾಡಿ ಅರ್ಥವನ್ನು ನಿರ್ಣಯಿಸಬೇಕು. ಉಪಕ್ರಮವೆಂದರೆ "ಪ್ರಕೃತವಾಕ್ಯವಿರುವ ಪ್ರಕರಣದ ಆದಿಭಾಗವು, ಕೊನೆಯ ಭಾಗವೇ ಉಪಸಂಹಾರವು. ಒಂದೇ ವಿಧವಾಗಿ ಅನೇಕ ಸ್ಥಳಗಳಲ್ಲಿ ಹೇಳಿರುವುದಕ್ಕೆ ಅಭ್ಯಾಸವೆಂದು ಹೆಸರು. ಬೇರೇ ಪ್ರಮಾಣಗಳಿಂದ ಸಿದ್ಧಿಸದಿರುವುದು ಅಪೂರ್ವತೆಯು, ಅರ್ಥಜ್ಞಾನದಿಂದಾಗುವ ಪ್ರಯೋಜನವೇ ಫಲವು. ಸ್ತುತಿನಿಂದೆಗಳು ಅರ್ಥವಾದವು. ವಾಕ್ಯದಿಂದ ವಿರುದ್ಧವಾದ ಎರಡು ಅರ್ಥಗಳು ತೋರಿಬಂದಾಗ ಈ ಆರು ಸಾಧನೆಗಳಿಗೂ ಅನುಕೂಲವಾಗಿರುವುದೇ ಆ ವಾಕ್ಯದ ನಿಜಾರ್ಥವೆಂದು ನಿರ್ಧರಿಸಬೇಕು. ವಿಚಾರ ಶಾಸ್ತ್ರದಲ್ಲೆಲ್ಲಾ ಪ್ರಾಚೀನಾಚಾರ್ಯರು, ಲೌಕಿಕ ವ್ಯವಹಾರದಲ್ಲಿ ಪ್ರಾಜ್ಞರೂ ಸಹ ಇದೇ ಕ್ರಮವನ್ನು ಅನುಸರಿಸಿರುತ್ತಾರೆ.

## ಭಾಷಾಂತರ

ಗೀತೆಗೆ ಭಾಷ್ಯ ಟೀಕೆಗಳು ಮತ್ತು ಭಾಷಾಂತರಗಳೂ ಸಹ ಹೇರಳವಾಗಿವೆ. ಆದರೆ ಮೇಲೆ ಹೇಳಿದ ತಾತ್ಪರ್ಯನಿರ್ಣಾಯಕ ಸಾಧನಗಳ ಕಡೆಗೆ ಗಮನ ಕೊಡದೆ ತಮ್ಮದೇ ಆದ ಸಿದ್ಧಾಂತಾರ್ಥವನ್ನು ಗೀತೆಯ ಮೇಲೆ ಹೊರಿಸಿರುವವರು ಕೆಲವರು. ಇನ್ನು ಕೆಲವರು ತಮ್ಮ ಅಭಿಮತಾರ್ಥವನ್ನೇ ಉಪಕ್ರಮಾದಿಗಳಿಗನುಗುಣವೆಂದು ಆಪಾತಯುಕ್ತಿಗಳಿಂದ ನಿರೂಪಿಸಿ ಅದನ್ನೆ ಗೀತಾರ್ಥವೆಂದು ಸಾರಿರುವರು. ಭಾಷಾಂತರಗಳಂತೂ ಪ್ರಾಯಶಃ ಕಟ್ಟುಹರಿದ ಪಂಜಿನಂತೆ ಬೆಳಗುತ್ತಿವೆ. ಭಾಷಾಂತರಕರ್ತರಲ್ಲೆಲ್ಲಾ ಹಿರಿಯರು ಲೋಕಮಾನ್ಯ ಬಾಲಗಂಗಾಧರ ತಿಲಕರು. ಅವರು ಲೌಕಿಕ

ವ್ಯವಹಾರದಲ್ಲಿ ನಿಪುಣರು; ಅಲ್ಲದೆ ಶಾಸ್ತ್ರ ವ್ಯಾಸಂಗವನ್ನೂ ಮಾಡಿದವರು. ಅವರು ತಮ್ಮ ಸಂಸ್ಕೃತ ಬುದ್ಧಿಯಿಂದಲೂ, ಕೆಲವು ಶಾಸ್ತ್ರಾಧಾರಗಳಿಂದಲೂ ಪರಿಶೀಲನೆ ಮಾಡಿ ಗೀತಾರಹಸ್ಯವೆಂಬ ಹೆಸರಿನಿಂದ ಮರಾಠಿ ಭಾಷೆಯಲ್ಲಿ ಗೀತೆಗೆ ಭಾಷಾಂತರವನ್ನು ಬರೆದಿರುವರು ಅಂತಹವರೂ ಸಹ ಮತಸ್ಥಾಪಕರಾದ – ಪೂರ್ವಾಚಾರ್ಯರು ಸ್ವತಂತ್ರ ಪರಿಶೀಲನೆಯಿಲ್ಲದೆ ಸಾಂಪ್ರದಾಯಿಕ ಆಗ್ರಹಕ್ಕೆ ಕಟ್ಟು ಬಿದ್ದು ಅದಕ್ಕನುಗುಣವಾಗಿ ಗೀತೆಗೆ ವ್ಯಾಖ್ಯಾನಮಾಡಿರುವರೆಂಬ ಆಕ್ಷೇಪವನ್ನೆತ್ತಿ ವಿಮರ್ಶಾತ್ಮಕವಾದ ಸ್ವತಂತ್ರದೃಷ್ಟಿಯಿಂದ ತಾವು ಗೀತೆಗೆ ನಿಜವಾದ ಅರ್ಥವನ್ನು ಹೇಳುತ್ತೇವೆಂದು ಉದ್ಘೋಷಿಸಿ ಗೀತೆಯು ಪ್ರವೃತ್ತಿಧರ್ಮಪರವೆಂದು ಹೇಳಿ ಎಡವಿರುತ್ತಾರೆ. ಅಷ್ಟೇ ಅಲ್ಲದೆ 'ಸ್ವಕೀಯರೊಡನೆ ಯುದ್ಧ ಮಾಡುವುದು ಕುಕರ್ಮವೆಂಬ ಕಾರಣದಿಂದ ಖಿನ್ನ ಮನಸ್ಕನಾದ ಅರ್ಜುನನನ್ನು ಯುದ್ಧ ಪ್ರವರ್ತನೆ ಮಾಡಿಸುವುದಕ್ಕಾಗಿ ಹೇಳಲ್ಪಟ್ಟ ಗೀತೆಯಂಥ ಪುಸ್ತಕದಲ್ಲಿ ಬ್ರಹ್ಮಜ್ಞಾನದಿಂದ ಅಥವಾ ಭಕ್ತಿಯಿಂದ ಮೋಕ್ಷವನ್ನು ಹೇಗೆ ಪಡೆಯಬೇಕೆಂಬುದನ್ನು ಅಂದರೆ ಮೋಕ್ಷಮಾರ್ಗವನ್ನು ವಿವೇಚಿಸುವುದಕ್ಕೆ ಕಾರಣವೇನು?' ಎಂಬ ಸಂದೇಹವು ಹುಟ್ಟಿತೆಂತಲೂ ಅದಕ್ಕೆ ಯಾವ ಪೂರ್ವಾಚಾರ್ಯರ ಟೀಕೆಯಿಂದಲೂ (ಸಮಾಧಾನವಾಗಲಿಲ್ಲವೆಂತಲೂ ಆಕ್ಷೇಪವೆತ್ತಿರುವರು. ಅವರು ಶ್ರೀ ಮಧ್ವಾಚಾರ್ಯರ ಭಾಷ್ಯಾದಿಗಳನ್ನು ನೋಡಿದ್ದರೆ ಈ ಆಕ್ಷೇಪವೇ ತಲೆದೋರುತ್ತಿರಲಿಲ್ಲ. ಹೇಗೆಂದರೆ:- ಅರ್ಜುನ! ಯುದ್ಧವು ಅಧರ್ಮವೆಂಬ ಶಂಕೆಯನ್ನು ಬಿಡು. ಅದು ಕ್ಷತ್ರಿಯನಾದ ನಿನಗೆ ಪರಮಾತ್ಮನಿಂದ ವಿಧಿಸಲ್ಪಟ್ಟ ಕರ್ತವ್ಯಧರ್ಮವು, ನೀನು ಅದನ್ನು ಮಾಡದಿದ್ದರೆ ಕರ್ತವ್ಯಭ್ರಷ್ಟನಾಗುವೆ. ಯುದ್ಧ ಮಾಡುವುದರಲ್ಲಿಯೂ ವಿಹಿತರೀತಿಯನ್ನನುಸರಿಸಬೇಕು. ಭಗವಂತನ ಮಾಹಾತ್ಮ್ಯಯನ್ನರಿತು ಅವನಲ್ಲಿ ಭಕ್ತಿಯನ್ನಿಟ್ಟು ನಾನು ಮಾಡುವ ಯುದ್ಧವು ನಿನಗೇ ಅರ್ಪಿತವಾಗಲಿ, ಎಂಬ ಅನುಸಂಧಾನದಿಂದ ಫಲಾಕಾಂಕ್ಷೆಯನ್ನು ಬಿಟ್ಟು ಕರ್ತವ್ಯಧರ್ಮವನ್ನಾಚರಿಸುವುದೇ ವಿಹಿತರೀತಿಯು. ಈ ರೀತಿಯಿಂದ ಮಾಡಿದ ವಿಹಿತಾಚರಣೆಯು ಇಹದಲ್ಲಿ ಮಾತ್ರವೇ ಶ್ರೇಯಸ್ಕರವೆಂದಲ್ಲ; ಇಹದಲ್ಲಿ ಶ್ರೇಯಸ್ಸನ್ನುಂಟುಮಾಡಿ ಜ್ಞಾನದ್ವಾರಾ ಮೋಕ್ಷಕ್ಕೂ ದಾರಿಯಾಗುವುದು. ಆದುದರಿಂದ ಕರ್ತವ್ಯ ಯುದ್ಧವನ್ನು ನಿರಾತಂಕವಾಗಿ ಮಾಡು; ಮಾಡದಿರುವುದು ಅಧರ್ಮವು. ಅದಕ್ಕೆಡೆಗೊಡಬೇಡ ಎಂಬುದೇ ಗೀತೋಪದೇಶದ ಸಾರವೆಂದು ಶ್ರೀಮಧ್ವಾಚಾರ್ಯರು ನಿರೂಪಿಸಿರುವರು, ಈ ಸಾರಾಂಶವನ್ನು ತಿಳಿದ ಬಳಿಕ ತಿಲಕರ ಆಕ್ಷೇಪಕ್ಕೆ ಅವಕಾಶವಿದೆಯೇ? ಯುದ್ಧವು ಅಧರ್ಮವು ಅದರಿಂದ ಇಹದಲ್ಲಿ ಸುಖಹಾನಿ ದುಃಖಗಳೂ, ಪರಲೋಕದಲ್ಲಿ ನರಕಾದ್ಯನರ್ಥವೂ ಆಗುತ್ತದೆಂದು ಶಂಕಿಸಿದ ಅರ್ಜುನನಿಗೆ ಅದೇ ಪರಮಧರ್ಮವೆಂಬುದನ್ನು ತೋರಿಸಿ, ಅದು ಯಾವ ರೀತಿಯಲ್ಲಿ

| |
|---|
| ಮಾಡಿದರೆ ಇಹದಲ್ಲಿ ಸುಖಪ್ರದವಾಗಿ ಮೋಕ್ಷಮಾರ್ಗವಾಗುವುದೋ ಅಂತಹ ರೀತಿಯನ್ನು ಬೋಧಿಸಿ ಗೀತೆಯು ನಿವೃತ್ತಧರ್ಮಪರ ಎಂಬುದನ್ನು ತೋರಿಸಿಕೊಟ್ಟಿರುವರು. ಮಹಾತ್ಮಾ ಗಾಂಧಿಜೀಯವರೂ ಸಹ ಈ ಮಾರ್ಗವನ್ನೇ ಅವಲಂಬಿಸಿರುವರು. ಇಲ್ಲಿ ನಿರೂಪಿಸಿರುವ ನಿವೃತಧರ್ಮವೇ ಅವರು ಹೇಳಿರುವ ಅನಾಸಕ್ತಿಯೋಗವು, ಫಲದಲ್ಲಾಸಕ್ತನಾಗದೇ ಭಗವತ್ಪ್ರೀತ್ಯರ್ಥವಾಗಿ ಮಾಡುವ ಕರ್ಮವೇ ಅನಾಸಕ್ತಿ ಯೋಗವೆಂದು ಅವರೇ ವಿವರಿಸಿ ಅದೇ ಗೀತೋಕ್ತ ಕರ್ಮಯೋಗವೆಂದು ಸಾರಿರುವರು. ಈ ಅಂಶವು ಒಪ್ಪತಕ್ಕುದೇ ಸರಿ. |
| ಪರಮ ಪವಿತ್ರವಾದ ಗೀತೆಯಲ್ಲಿ ಇಂತಹ ಉತ್ಕೃಷ್ಟವಾದ ಉಪದೇಶವು ಯುಕ್ತವೋ? ಅಲ್ಪ ಪ್ರಯೋಜನಕಾರಿಯಾಗಿರುವುದರಿಂದ ಸರ್ವರಿಗೂ ಉಪಾದೇಯವಾಗದಿರುವಂತಹ ಪ್ರವೃತ್ತಿಧರ್ಮಪರವಾಗಿ ಗೀತೆಯನ್ನು ಯೋಜನೆಮಾಡುವುದುಚಿತವೋ? ವಾಚಕರೇ ನಿರ್ಧರಿಸಬಹುದು. ಹೀಗೆ ತಿಲಕರಂತಹ ದೊಡ್ಡವರ ಬುದ್ಧಿಗೇ ತತ್ವವು ಯಥಾವತ್ತಾಗಿ ಗೋಚರಿಸದಿರುವಾಗ ಇತರ ಸಾಮಾನ್ಯ ಜನರ ಪಾಡೇನು? |
| ಕೆಲವು ಭಾಷಾಂತರಗಳಂತೂ ನಿರಂಕುಶವಾಗಿ ಸಾಗುತ್ತಿವೆ. ಮೂಲದಲ್ಲಿ ಏನೇ ಇರಲಿ: ಆದಕ್ಕೆ ತಮ್ಮ ಮನಬಂದ ಅರ್ಥವನ್ನೇ ಪ್ರತಿಪಾದಿಸುತ್ತಾರೆ. ಶಬ್ದಸ್ವಾರಸ್ಯ, ಸಂದರ್ಭಾದಿಗಳನ್ನು ಲೆಕ್ಕಿಸುವುದಿಲ್ಲ. ಲೌಕಿಕವ್ಯವಹಾರದಲ್ಲಿ ಉಪಯೋಗಿಸುವ ರಾಷ್ಟ್ರೀಯತೆ ಮುಂತಾದ ಹಲವು ಆಧುನಿಕ ಸಂಕೇತಗಳನ್ನು ಗೀತೋಕ್ತ, ವೇದೋಕ್ತ ಇತ್ಯಾದಿ ರೀತಿಯಾಗಿ ಮನಬಂದಂತೆ ಪ್ರತಿಪಾದಿಸಿರುವರು. ಶ್ರೀ ಆಲೂರು ವೆಂಕಟರಾಯರು ಬರೆದಿರುವ ಗೀತಾಭಾವಪ್ರದೀಪ ಎಂಬ ಪುಸ್ತಕದಲ್ಲಿ ಗೀತೆಯೂ-ರಾಷ್ಟ್ರೀಯತ್ವವೂ ಎಂದು ಪ್ರಾರಂಭಿಸಿ, ವೇದದಲ್ಲಿಯೂ ರಾಷ್ಟ್ರೀಯತ್ವದ ಕಲ್ಪನೆಯಿದೆಯೆಂದು ಹೇಳಿ ಅದಕ್ಕೆ 'ಅಹಂ ರಾಷ್ಟ್ರ ಸಂಗಮನೀ" ಇತ್ಯಾದಿ ಋಗ್ವೇದದಲ್ಲಿನ ಅಂಭೃಣೀ ಸೂಕ್ತವಾಕ್ಯವನ್ನುದಾಹರಿಸಿ ಅಲ್ಲಿನ 'ರಾಷ್ಟ್ರೀ' ಶಬ್ದವು ರಾಷ್ಟ್ರೀಯತ್ವ ಕಲ್ಪಕವೆಂದು ಹೇಳಿದ್ದಾರೆ. ರಾಷ್ಟ್ರೀಯತ್ವ ಎಂದರೆ ಹಿಂದುಸ್ತಾನವು ಒಂದು ಎಂಬ ಕಲ್ಪನೆಯೆಂದು ಅವರೇ ವಿವರಿಸಿದ್ದಾರೆ. ಈ ಕಲ್ಪನೆಗೂ ವೇದದಲ್ಲಿನ 'ರಾಷ್ಟ್ರೀ' ಶಬ್ದಕ್ಕೂ ಗಂಟುಹಾಕಿರುವುದು ಹಾಸ್ಯಾಸ್ಪದವಲ್ಲವೇ? ವಾಚಕರೇ ನಿರ್ಣಯಿಸಲಿ ಅದೇ ಪುಸ್ತಕದಲ್ಲಿ ಮುಂದುವರೆದು 'ನನ್ನದು' ಎಂಬ ಕಲ್ಪನೆಯೇ ಅಹಂಕಾರವೆಂದು ಹೇಳಿರುವರು. 'ನಾನು' ಎಂಬುದು ಅಹಂಕಾರ, 'ನನ್ನದು' ಎಂಬುದು ಮಮಕಾರ ಎಂಬುದು ಸ್ಫುಟವಾಗಿದೆ. ಹೀಗೆ ವಿವೇಚನೆಯಿಲ್ಲದ ಅಸಂಗತ ಲೇಖನಗಳು ಹೇರಳವಾಗಿದ್ದರೂ ಪ್ರಾಜ್ಞರಾದ ಹಳೆಯ ಪಂಡಿತರನ್ನು, ಸಂಪ್ರದಾಯವನ್ನೂ ಸಹ ತೆಗಳುವುದು ಅವರಿಗೆ ಪಲ್ಲವಿಯಾಗಿದೆ. |

ಗೀತೆಯ ತತ್ವಾರ್ಥವನ್ನು ತೋರಿಸುವುದೇ ನಮ್ಮ ಉದ್ದೇಶವು. ಆಧುನಿಕ ಗ್ರಂಥಗಳ ಪರಿಸ್ಥಿತಿಯನ್ನು ಕಲಕುವ ಉದ್ದೇಶವಿಲ್ಲ. ಆದರೆ ಜನರು ಅಂತಹ ಪುಸ್ತಕಗಳನ್ನು ನೋಡಿ ತತ್ವ ವಿಷಯದಲ್ಲಿ ವಿಪರೀತಜ್ಞಾನಿಗಳಾಗದಿರಲೆಂಬ ಭಾವನೆಯಿಂದ ಒಂದೆರಡಂಶವನ್ನು ಮಾತ್ರ ಇಲ್ಲಿ ವಿವರಿಸಬೇಕಾಯಿತು.

## ಗೀತೆಯೂ ತತ್ವಶಾಸ್ತ್ರವೂ

'ಮಾನಾಧೀನಾ ಮೇಯಸಿದ್ಧಿಃ' ಎಂಬ ಸೂಕ್ತಿಯಂತೆ ಪ್ರಮಾಣಗಳಿಂದ ತತ್ವವನ್ನು ನಿರ್ಣಯಿಸುವ ಶಾಸ್ತ್ರವೇ ತತ್ವಶಾಸ್ತ್ರವು. ಅದು ಆಸ್ತಿಕ ದರ್ಶನ ಮತ್ತು ನಾಸ್ತಿಕ ದರ್ಶನ ಎಂದು ಎರಡು ಬಗೆಯಾಗಿದೆ. ಆಯಾಯ ದರ್ಶನ ಪ್ರವರ್ತಕರು ತಮ್ಮ ತತ್ವ ನಿರೂಪಣೆಗೆ ಪೂರ್ವಭಾವಿಯಾಗಿ ಮೂಲಾಧಾರವಾದ ಪ್ರಮಾಣ ತತ್ವವನ್ನು ವಿವೇಚನೆಮಾಡಿ ತಮಗಭಿಮತ ಪ್ರಮಾಣಗಳನ್ನು ನಿರ್ಧರಿಸಿ ಅದರಿಂದ ತತ್ವ ನಿರ್ಧಾರಣೆ ಮಾಡಿರುವರು.

ನಾಸ್ತಿಕರಲ್ಲಿ ಚಾರ್ವಾಕರು ಪ್ರತ್ಯಕ್ಷವೊಂದೇ ಪ್ರಮಾಣವು, ಅದಕ್ಕೆ ಗೋಚರಿಸುವ ಭೌತಿಕ ವಸ್ತುಗಳೇ ತತ್ವವು, ಇಂದ್ರಿಯಗೋಚರವಲ್ಲದ ಧರ್ಮ, ಅಧರ್ಮ, ಸ್ವರ್ಗ, ನರಕ, ಜಗದಾದಿ ಕರ್ತನಾದ ಪರಮಾತ್ಮ ಮುಂತಾದ ಅಲೌಕಿಕ ವಸ್ತುವೇ ಇಲ್ಲವೆಂದೂ ಅಭಿಪ್ರಾಯಪಡುತ್ತಾರೆ. ಬೌದ್ಧರು ಪ್ರತ್ಯಕ್ಷ, ಅನುಮಾನವೆಂಬ ಎರಡು ಪ್ರಮಾಣಗಳನ್ನಂಗೀಕರಿಸಿ ಅವುಗಳಿಂದ ಸಿದ್ಧವಾಗುವ ಧರ್ಮಾಧರ್ಮಾದಿ ಕೆಲವು ಅತೀಂದ್ರಿಯ ವಸ್ತುಗಳನ್ನೂ ಒಪ್ಪಿರುವರು. ಅವರು ವೇದಾದಿಗಳನ್ನು ಪ್ರಮಾಣವೆನ್ನುವುದಿಲ್ಲ. ಜಗತ್ತೆಲ್ಲವೂ ಕ್ಷಣಿಕವೆನ್ನುವರು. ಅವರಲ್ಲಿಯೂ ಕೆಲವರು ಈ ಜಗತ್ತು ಶೂನ್ಯವೆಂದೂ, ಹಲವರು ವಿಜ್ಞಾನರೂಪವೆಂತಲೂ ಒಪ್ಪಿರುವರು. ಹಾಗಾದರೆ ಬಾಹ್ಯ ಜಗತ್ತು ಸತ್ತಾಗಿ ತೋರಲು ಕಾರಣವೇನೆಂದರೆ : – ಸಂವೃತಿ ಎಂಬ ಮಾಯಾಶಕ್ತಿಯು ಶೂನ್ಯವನ್ನು ಸತ್ತಾಗಿ ತೋರಿಸುತ್ತದೆ. ಅದನ್ನು ಸಾಂವೃತ ಸತ್ಯವೆನ್ನುವರು. ಅದು ಪರಮಾರ್ಥ ಸತ್ತಲ್ಲ. ಅದರಿಂದಲೇ ಪ್ರಪಂಚವ್ಯವಹಾರವೆಲ್ಲವೂ ನಡೆಯುತ್ತದೆ. ಶೂನ್ಯವೇ ಪರಮಾರ್ಥವು ಇತ್ಯಾದಿಯಾಗಿ ಅವೈದಿಕ ಸಿದ್ದಾಂತವನ್ನು ಪ್ರಚಾರಮಾಡಿರುತ್ತಾರೆ.

ಗೀತೆಯ ಅರ್ಥವನ್ನು ನಿರೂಪಿಸುವಾಗ ಗೀತೆಯನ್ನೇ ಪ್ರಮಾಣವೆಂದು ಒಪ್ಪದಿರುವ ದರ್ಶನಗಳ ವಿಚಾರವು ಅಪ್ರಕೃತ. ಸಾಂಖ್ಯದರ್ಶನವೂ ಅದೇ ಶ್ರೇಣಿಗೆ ಸೇರಿದೆ. ಉಳಿದ ನ್ಯಾಯವೈಶೇಷಿಕ, ಪೂರ್ವಮೀಮಾಂಸಾ, ಉತ್ತರಮೀಮಾಂಸಾ (ವೇದಾಂತ) ದರ್ಶನಗಳನ್ನು ಪರಿಶೀಲಿಸಿದರೆ

| |
|---|
| ಗೀತೆಯು ತಮ್ಮ ತಮ್ಮ ಸಿದ್ಧಾಂತಕ್ಕೆ ಅನುಕೂಲವಾಗಿದೆಯೆಂದು ಆಯಾಯಾ ದಾರ್ಶನಿಕರ ಅಭಿಪ್ರಾಯವಿದೆ. |
| ಗೀತೆಯು ಅಧ್ಯಾತ್ಮಶಾಸ್ತ್ರವು. ಮುಖ್ಯವಾಗಿ ಅತ್ಮತತ್ತ್ವವನ್ನು ವಿವೇಚನೆ ಮಾಡಿ ಜೀವಾತ್ಮರ ಶ್ರೇಯೋಮಾರ್ಗವನ್ನು ನಿರ್ಧರಿಸಿ ಹೇಳಲು ಪ್ರವೃತ್ತವಾದುದು. ಚಾರ್ವಾಕದರ್ಶನದಲ್ಲಿ ಶರೀರಕ್ಕಿಂತ ಬೇರೆಯಾದ ಆತ್ಮನೇ ಇಲ್ಲದಿರುವುದರಿಂದ ಅಧ್ಯಾತ್ಮವಿಚಾರಸಂದರ್ಭದಲ್ಲಿ ಅದನ್ನು ಗಣನೆಗೆ ತರುವುದುಚಿತವಲ್ಲ. ಉಳಿದ ಸಾಂಖ್ಯ, ನ್ಯಾಯವೈಶೇಷಿಕ, ಪೂರ್ವಮೀಮಾಂಸಾ, ವೇದಾಂತ ಇವುಗಳಲ್ಲಿನ ಆತ್ಮ ತತ್ತ್ವವಿಚಾರಮಾಡುವುದು ಸಂದರ್ಭಾನುಗುಣವು. ವೇದಾಂತದಲ್ಲಿಯೂ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಎಂದು ಮೂರು ಸಿದ್ಧಾಂತಗಳು ಪ್ರಚಾರದಲ್ಲಿವೆ. ಸಾಂಖ್ಯ ನ್ಯಾಯವೈಶೇಷಿಕ, ಪೂರ್ವಮೀಮಾಂಸಾ, ಮೂರು ವೇದಾಂತಗಳು ಎಂಬೀ ಆರು ದರ್ಶನಗಳ ಪೈಕಿ ಆದ್ವೈತವೊಂದನ್ನುಳಿದು ಐದು ದರ್ಶನಗಳೂ ಒಂದೇ ವಿಧವಾದ ಸತ್ಯತ್ವವುಳ್ಳ ಅನೇಕ ತತ್ತ್ವಗಳನ್ನೊಪ್ಪಿ ಅನೇಕಾತ್ಮವಾದವನ್ನೇ ಎತ್ತಿ ಹಿಡಿದಿವೆ. |
| ಅದ್ವೈತ ದರ್ಶನದಲ್ಲಿ 'ತತ್ತ್ವಮಸಿ' ಇತ್ಯಾದಿ ಕೆಲವು ಮಹಾವಾಕ್ಯಗಳು ಮಾತ್ರ ಪರಮ ಪ್ರಮಾಣವು. ಅವುಗಳಿಂದ ಸಿದ್ಧವಾದುದೇ ಪರಮಾರ್ಥ ತತ್ತ್ವವು. ಇತರ ವೇದ ಭಾಗ, ಪ್ರತ್ಯಕ್ಷಾದಿಗಳೂ ಸಹ ಅತತ್ತ್ವಾವೇದಕವು. ಬ್ರಹ್ಮವೊಂದೇ ಸತ್ಯ, ಪ್ರಪಂಚವೆಲ್ಲವೂ ಅಸತ್ಯ, ಜೀವೇಶ್ವರರಿಗೆ ಭೇದವಿಲ್ಲ. ಮಾಯಾ, ಅವಿದ್ಯಾ, ಅಜ್ಞಾನ ಮುಂತಾದ ಶಬ್ದಗಳಿಂದ ವ್ಯವಹರಿಸಲ್ಪಡುವ ವಿಚಿತ್ರ ಶಕ್ತಿಯೊಂದಿದೆ. ಅದೇ ಭೇದಭಾವವನ್ನು ತೋರ್ಪಡಿಸುತ್ತದೆ. ವಾಸ್ತವಿಕವಾಗಿ ಸತ್ಯವಲ್ಲದಿದ್ದರೂ ಮಾಯೆಯಿಂದಲೇ ಜಗತ್ತು ಸತ್ಯವಾಗಿಯೂ, ಬ್ರಹ್ಮಭಿನ್ನನಲ್ಲದ ಜೀವಾತ್ಮನು ಬ್ರಹ್ಮಭಿನ್ನನಂತೆಯೂ ತೋರುತ್ತದೆ. ಇದಕ್ಕೆ ವ್ಯಾವಹಾರಿಕ ಸತ್ಯವೆಂದು ಹೆಸರು. ಭ್ರಾಂತಿಯಲ್ಲಿ ತೋರುವುದೂ ಸಹ ಒಂದು ವಿಧ ಸತ್ಯವೇ. ಅದಕ್ಕೆ ಪ್ರಾತಿಭಾಸಿಕ ಸತ್ಯವೆಂದು ಸಂಕೇತ. ಹೀಗೆ ಸತ್ಯತ್ವವು ಮೂರು ವಿಧ ಇತ್ಯಾದಿ ಸಿದ್ಧಾಂತ ಮಾಡಿರುತ್ತಾರೆ. |
| ಈ ಸಿದ್ದಾಂತವೊಂದೇ ಅಭೇದ ದರ್ಶನವು, ಉಳಿದ ಐದು ದರ್ಶನಗಳೂ ಭೇದ ಸಿದ್ಧಾಂತವು. ಆದಕಾರಣ ಒಟ್ಟಿನಲ್ಲಿ ಆಸ್ತಿಕದರ್ಶನವನ್ನು ಭೇದವಾದ=ದ್ವೈತವಾದ ಮತ್ತು ಅಭೇದವಾದ= ಅದ್ವೈತವಾದ ಎಂದು ಎರಡು ಪಂಗಡವಾಗಿ ವಿಂಗಡಿಸಬಹುದು |

## ಗೀತೆಯ ಗುಟ್ಟು

ಭಿನ್ನ ಭಿನ್ನ ತತ್ವಶಾಸ್ತ್ರಗಳ ವಿಚಾರವಂತಿರಲಿ, ಪ್ರಕೃತ ಗೀತಾಶಾಸ್ತ್ರದ ರಹಸ್ಯವಾವುದೆಂಬುದನ್ನು ಪರಿಶೀಲಿಸೋಣ:- ಯಾವ ಪ್ರಾಣಿಯೂ - ಕ್ಷಣಮಾತ್ರವೂ ಕರ್ಮಮಾಡದೆ ಸುಮ್ಮನಿರಲಾರನು. ಕರ್ಮವೇ ಬಂಧಕವು, ಅದೇ ಜ್ಞಾನಸಾಧನವಾಗಿ ಮೋಕ್ಷದಾಯಕವೂ ಆಗುವುದು. ಹೇಗೆಂದರೆ:- ಎಲ್ಲವೂ ಸರ್ವೋತ್ತಮನಾದ ಭಗವಂತನ ಅಧೀನವು. 'ಜೀವಾತ್ಮರು ಪರಸ್ಪರವಾಗಿಯೂ, ಈಶ್ವರನಿಂದಲೂ ಭಿನ್ನರು, ತಾರತಮ್ಯವುಳ್ಳವರೂ ಆಗಿ ಭಗವಂತನಿಂದ ನಿಯಮ್ಯರಾಗಿರುವರು. ಅವನ ಪ್ರೇರಣೆಯಿಲ್ಲದೇ ಯಾರೂ ಏನನ್ನೂ ಮಾಡಲಾರರು; ಬಿಡಲೂ-ಆರರು. ವರ್ಣಾಶ್ರಮಧರ್ಮವು ಭಗವಂತನಿಂದಲೇ ವಿಧಿಸಲ್ಪಟ್ಟಿದೆ. ಪ್ರತಿಯೊಬ್ಬನೂ ಅವನಲ್ಲಿ ಭಕ್ತಿಯಿಂದ ತನಗೆ ವಿಹಿತವಾದ ಧರ್ಮವನ್ನಾಚರಿಸಿ ಅದರಿಂದ ಭಗವಂತನು ಸಂತುಷ್ಟನಾಗಲೆಂದು ಭಾವಿಸಬೇಕು. ಯಾವ ಫಲವನೂ ಆಶಿಸಬಾರದು. ಎಂಬೀ ಅನುಸಂಧಾನದಿಂದ ಆಚರಿಸಲ್ಪಡುವ ಕರ್ಮವೇ ನಿವೃತ್ತ ಧರ್ಮವು. ಅದು ಜ್ಞಾನದ್ವಾರಾ ಮೋಕ್ಷಸಾಧನವು, ಅದೇ ಭಗವಂತನಿಗಭಿಮತವಾದ ಕರ್ಮಯೋಗವು. ಅದನ್ನು ಮೇಲ್ಕಂಡ ಅನುಸಂಧಾನಪೂರ್ವಕವಾಗಿ ಆಚರಿಸಿದವನಿಗೆ ಇಹದಲ್ಲಿ ಸಕಲ ಶ್ರೇಯಸ್ಸೂ ಲಭಿಸಿ ಕೊನೆಗೆ ಮುಕ್ತಿಯಾಗುವುದು. ಆದಕಾರಣ ಈ ರೀತಿಯಾಗಿ ಆಚರಿಸಿದ ಕರ್ಮವು ಮೋಚಕವಾಗುವುದು. ಆವುದಾದರೊಂದು ಫಲವನ್ನುದ್ದೇಶಿಸಿ ಅದನ್ನು ಪಡೆಯಬೇಕೆಂಬ ಆಸೆಯಿಂದ ನಾನೇ ಸ್ವತಂತ್ರವಾಗಿ ಕರ್ಮಮಾಡುತ್ತೇನೆಂಬ ಅಹಂಕಾರ ಪೂರ್ವಕವಾಗಿ ಮಾಡುವ ಕರ್ಮವು ಪ್ರವೃತ್ತಿಧರ್ಮವು. ಅದನ್ನಾಚರಿಸಿದವನಿಗೆ ಅವನು ಆಶಿಸಿದ ಫಲ ಮಾತ್ರವೇ ಲಭಿಸಿ, ಕೊನೆಗೆ ಬೇರೆ ಜನ್ಮವು ಬಂದು ಪುನಃ ಹೀಗೆಯೇ ಕರ್ಮಮಾಡುತ್ತಾ ಸಂಸಾರಬಂಧವು ಮುಂದುವರೆಯುವುದು. ಹೀಗೆ ಆಚರಿಸಿದ ಕರ್ಮವು ಬಂಧಕವಾಗುವುದು. ಇದು ತ್ಯಾಜ್ಯವು. ನಿವೃತ್ತಧರ್ಮವೇ ಗ್ರಾಹ್ಯ ಕರ್ಮಯೋಗವು. ಅದನ್ನು ಜ್ಞಾನಿಗಳೂ ಸಹ ಆಚರಿಸಲೇಬೇಕು. ಪ್ರಕೃತ ಯುದ್ಧವಾದರೋ ಪರಮಾತ್ಮದ್ವೇಷಿಗಳು ಮತ್ತು ಅವರ ಸಂಬಂಧಿಕರೂ ಆಗಿರುವ ದುಷ್ಟರನ್ನು ನಿಗ್ರಹಿಸುವ ಕಾರ್ಯವು. ಇದು ಕ್ಷತ್ರಿಯರಿಗೆ ವಿಹಿತಧರ್ಮವು, ಅರ್ಜುನ! ಅಧರ್ಮವೆಂಬ ಶಂಕೆಯನ್ನು ಬಿಡು. ಇದೇ ಭಗವಂತನ ಪೂಜೆಯೆಂದು ಭಾವಿಸಿ ಯಾವ ಫಲವನ್ನೂ ಆಶಿಸದೆ ಇದರಿಂದ ಭಗವಂತನು ಸಂತುಷ್ಟನಾಗಲೆಂಬ ಅನುಸಂಧಾನದಿಂದ ನಿನಗೆ ಒದಗಿರುವ ವಿಹಿತ ಯುದ್ಧವನ್ನು ಮಾಡಿ ಶ್ರೇಯೋಭಾಗಿಯಾಗು ಎಂಬುದೇ ಗೀತೆಯ ಗುಟ್ಟು.

ಇದರಲ್ಲಿ ಅಡಗಿರುವ :-

| |
|---|
| 1.ಜೀವಸ್ವರೂಪವು ಅನಾದಿನಿತ್ಯ, ಜೀವರು ಭಿನ್ನರು, ತಾರತಮ್ಯವುಳ್ಳವರು, ಭಗವದಧೀನರು, ಕ್ಷಣಮಾತ್ರವೂ ಸುಮ್ಮನಿರದೆ ಸಹಜವಾಗಿ ಸತತ ಕರ್ಮಮಾಡುತ್ತಿರುವರು ಇತ್ಯಾದಿ ಜೀವತತ್ತ್ವ. |
| 2.ಪ್ರವೃತ್ತಿ ಧರ್ಮವು ತ್ಯಾಜ್ಯವು, ನಿವೃತ್ತಧರ್ಮವೇ ಗ್ರಾಹ್ಯಕರ್ಮಯೋಗ, ಜ್ಞಾನಾನಂತರವೂ ಅದು ಆಚರಣೀಯ, ಅದರಲ್ಲಿಯೂ ಸ್ವಧರ್ಮಾಚರಣೆಯಿಂದಲೇ ಭಗವದಾರಾಧನೆಯ ಕರ್ತವ್ಯತೆ, ಅನ್ಯಧರ್ಮಾನುಪಾದೇಯತೆ. |
| 3. ವರ್ಣಾಶ್ರಮಧರ್ಮ, ಯುದ್ಧವು ಕ್ಷತ್ರಿಯನಿಗೆ ವಿಹಿತ ಧರ್ಮ. |
| 4. ಶ್ರೀಕೃಷ್ಣನೇ ಭಗವಂತನು, ಅವನು ಸಕಲ ಗುಣಪರಿಪೂರ್ಣನ್ನು, ಸತ್ಯ, ಸಕಲ ಪ್ರಪಂಚ ಸೃಷ್ಟ್ಯಾದಿಕರ್ತನು, ಜೀವಾದಿ ಪ್ರಪಂಚ ಭಿನ್ನನು, ಸ್ವತಂತ್ರನು, ಪುರುಷೋತ್ತಮನು, ಮೋಕ್ಷಾದಿ ಪುರುಷಾರ್ಥವೆಲ್ಲವೂ ಅವನ ಪ್ರಸಾದದಿಂದಲೇ ಪಡೆಯತಕ್ಕುದು, ಇತ್ಯಾದಿ ಭಗನ್ಮಹಿಮೆ. |
| 5. ಭಗವದ್ಭಕ್ತಿಯೇ ಸರ್ವೋತ್ತಮ ಸಾಧನೆಯು. |
| ಎಂಬೀ ಮುಂತಾದ ವಿಷಯಗಳು ಗೀತೆಯಲ್ಲಿ ಸಪರಿಕರವಾಗಿ ನಿರೂಪಿಸಲ್ಪಟ್ಟಿವೆ. ಇವುಗಳಲ್ಲಿ ಯಾವ ವಿಷಯವು ಗೀತೆಯ ಯಾವ ಭಾಗದಿಂದ ನಿರೂಪಿತವಾಗಿದೆ? ಎನ್ನುವುದರ ಬಗ್ಗೆ ವಿವರಣೆಯನ್ನು ಶ್ರೀಮಧ್ವಾಚಾರ್ಯರಿಂದ ರಚಿತವಾಗಿರುವ ಗೀತಾತಾತ್ಪರ್ಯನಿರ್ಣಯದಲ್ಲಿ ಉಪೋದ್ಘಾತಭಾಗದಿಂದ ತಿಳಿಯಬಹುದು. ಇದೇ ಸಕಲ ತತ್ತ್ವಶಾಸ್ತ್ರಗಳ ಸಾರಾಂಶವೂ ಆಗಿದೆಯೆಂಬುದನ್ನೂ ಸಹ ಅಲ್ಲಿಯೇ ವಿಚಾರಪೂರ್ವಕವಾಗಿ ನಿರ್ಣಯಿಸಿದೆ. ಇದೇ ಗೀತೆಯ ನೈಜವಾದ ಅರ್ಥವು. ಇದಕ್ಕೆ ವಿಪರೀತವಾದ ಯಾವ ತತ್ತ್ವವೂ ಗೀತಾರ್ಥವಾಗಲಾರದು. ಹಿಂದೆ ಹೇಳಿರುವ ಉಪಕ್ರಮಾದಿ ತಾತ್ಪರ್ಯನಿರ್ಣಾಯಕ ಯುಕ್ತಿಗಳೆಲ್ಲವೂ ಇದೇ ಅರ್ಥವನ್ನೇ ಪುಷ್ಟೀಕರಿಸುತ್ತವೆ. |
| ವ್ಯಾಖ್ಯಾನಾಂತರ |
| ಪ್ರಾಚೀನಾಚಾರ್ಯರಲ್ಲಿಯೂ ಸಹ ಬಹು ಮಂದಿ ಪಕ್ಷಪಾತವಿಲ್ಲದೆ ತತ್ತ್ವದ ಕಡೆ ಗಮನ ಕೊಟ್ಟಂತೆ ಕಾಣಲಿಲ್ಲ. ಅವರೂ ಸಹ ತಮ್ಮದೇ ಆದ ಒಂದು ಸಿದ್ಧಾಂತವನ್ನು ನಿರ್ಧರಿಸಿ ಅದೇ ಗೀತೋಕ್ತವೆಂದು ತಮ್ಮ ಬುದ್ಧಿ ಕೌಶಲ್ಯದಿಂದ ನಿರೂಪಿಸಿರುವರು. ಈ ಅಭಿಪ್ರಾಯವು :- |
| ಯಥಾ ಚಾಯಮರ್ಥಃ ತಥಾ ಪ್ರಕರಣಶೋ ವಿಭಜ್ಯ ತತ್ರ ತತ್ರ ದರ್ಶಯಿಷ್ಯಾಮಃ - ಶಾಂಕರ ಗೀತಾಭಾಷ್ಯ |
| ಇತ್ಯಾದಿ ವಚನಗಳಿಂದಲೇ ಸ್ಪಷ್ಟ ಪಡುತ್ತದೆ, |

| |
|---|
| ಗೀತೆಯಲ್ಲಿ:- |
| ‘ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ<br>ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ |
| ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ<br>ಜ್ಞಾತುಂ ದ್ರಷ್ಟುಂ ಚ ತತ್ವೇನ ಪ್ರವೇಷ್ಟುಂ ಚ ಪರಂತಪ |

ಇತ್ಯಾದಿ ಶ್ಲೋಕಗಳಿಂದ ವಿಷ್ಣುಭಕ್ತಿಯೇ ಸರ್ವೋತ್ತಮ ಸಾಧನವೆಂದು ಇತರ ನಿಷೇಧಪೂರ್ವಕವಾಗಿ ಉಕ್ತವಾಗಿದೆ. ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹವೇ ಭಕ್ತಿಯು. ಇಂತಹ ಭಕ್ತಿಗೆ ಜೀವೇಶ್ವರೈಕ್ಯವಾದದಲ್ಲಿ ಎಡೆಯೇ ಇಲ್ಲ. ಹೇಗೆಂದರೆ :- ಜೀವನೇ ಪರಮಾತ್ಮನು, ಬೇರೆ ಸತ್ಯವಸ್ತುವಿಲ್ಲ; ಬ್ರಹ್ಮವೊಂದೇ ಸತ್ತು ಎಂಬ ಸಿದ್ಧಾಂತದಲ್ಲಿ ಎರಡು ಸತ್ಯವಸ್ತುಗಳೇ ಇಲ್ಲದಿರುವಾಗ ಭಕ್ತಿ ಮಾಡುವವನಾರು? ಯಾರಲ್ಲಿ ಭಕ್ತಿ ಮಾಡಬೇಕು? ಪರಮಾತ್ಮನು ನಿರ್ಗುಣ, ನಿರಾಕಾರ, ಸನ್ಮಾತ್ರ ಎಂಬ ವಾದದಲ್ಲಿ ಶೂನ್ಯಸದೃಶನಾದ ಪರಮಾತ್ಮನಲ್ಲಿ ಮಾಹಾತ್ಮ್ಯಯನ್ನು ಬಗೆಯುವುದೆಂತು? ಮಾಹಾತ್ಮ್ಯ ಸಂಪಾದಕವಾದ ಸೃಷ್ಟಿ ಕರ್ತೃತ್ವಾದಿಗಳೆಲ್ಲವೂ ಮಿಥ್ಯೆ=ಸುಳ್ಳು ಎಂಬುದೇ ಅದ್ವೈತವಾದವು. ಅಂತಹ ಮಾಯಿಕ ಸೃಷ್ಟಿಕರ್ತೃತ್ವಾದಿಗಳು ಮಾಹಾತ್ಮ್ಯಯನ್ನು ಬಣ್ಣಿಸಲಾರವು. ಮಂತ್ರೌಷಧಾದಿಗಳ ಸಹಾಯದಿಂದ ಮಾಯಿಕ ಸೃಷ್ಟಿಯನ್ನು ಸಾಧಾರಣ ಜನರೂ ಸಹ ಮಾಡುತ್ತಿರುವುದು ಲೋಕವಿದಿತವಾಗಿದೆ. ಹೀಗೆ ನಿರ್ಗುಣವಾದದಲ್ಲಿ ಪರಮಾತ್ಮನಿಗೆ ಮಾಹಾತ್ಮ್ಯಯೇ ಸಲ್ಲದು. ಅಂದ ಬಳಿಕ ಮಾಹಾತ್ಮ್ಯಜ್ಞಾನಪೂರ್ವಕ ಸ್ನೇಹವೆಂಬ ಭಕ್ತಿಗೆ ಸ್ಥಾನವೆಲ್ಲಿದೆ? ಹೀಗೆಯೇ ಗೀತೋಕ್ತವಾದ ಸಕಲ ಮೇಲ್ಕಂಡ ತತ್ವಗಳೂ ಐಕ್ಯವಾದಕ್ಕೆ ವಿರುದ್ಧವಾಗಿಯೇ ಇವೆ. ಆದರೆ ಕೆಲ ಶ್ಲೋಕಗಳು ಆಪಾತತಃ (ಮೇಲೆ) ಐಕ್ಯವನ್ನು ಬೋಧಿಸುವಂತೆ ತೋರುತ್ತವೆ. ಒಳಹೊಕ್ಕು ಉಕ್ತರೀತಿಯಿಂದ ವಿಮರ್ಶಿಸಿದರೆ ಅದರ ನೈಜವಾದ ಅರ್ಥವು ವಿಮರ್ಶಕರಿಗೆ ತೋರದಿರದು. ನಮ್ಮ ಈ ಭಾಷಾಂತರದಲ್ಲಿ ಅಂತಹ ಶ್ಲೋಕಗಳ ಕೆಳಗೆ ಶ್ಲೋಕಾರ್ಥದ ಯುಕ್ತಾಯುಕ್ತತೆಯನ್ನು ವಿಮರ್ಶೆ ಮಾಡಿ ಸಿದ್ಧಾಂತವನ್ನು ಟಿಪ್ಪಣಿಯಲ್ಲಿ ತೋರಿಸಿರುತ್ತೇವೆ. ಆದಕಾರಣ ಅದೇ ವಿಷಯವನ್ನು ಪುನಃ ಇಲ್ಲಿ ಪ್ರಸ್ತಾಪಿಸುವುದಿಲ್ಲ. ಜಿಜ್ಞಾಸುಗಳು ಈ ಗ್ರಂಥವನ್ನೋದಿ ತಿಳಿಯಬಹುದು.

ಗೀತಾರ್ಥವಾದ ಉಕ್ತ ಸಿದ್ಧಾಂತವನ್ನು ಎತ್ತಿಹಿಡಿದಿರುವವರು ಶ್ರೀಮಧ್ವಾಚಾರ್ಯರೊಬ್ಬರೇ ಸರಿ. ಅವರು ಗೀತೆಗೆ ಭಾಷ್ಯ ಮತ್ತು ತಾತ್ಪರ್ಯನಿರ್ಣಯ ಎಂಬುದಾಗಿ ಎರಡು ವ್ಯಾಖ್ಯಾನಗಳನ್ನು ಬರೆದಿರುವರು. ಅವೆರಡಕ್ಕೂ ಟೀಕಾಟಿಪ್ಪಣಿಗಳನ್ನು, ಪೂರ್ವಾಚಾರ್ಯರು ರಚಿಸಿರುತ್ತಾರೆ.

ಗಹನವಾದ ಈ ಗ್ರಂಥಗಳ ಸಾರವನ್ನು ಸಂಗ್ರಹಿಸಿ, ಅದರಿಂದ ನಿಷ್ಪನ್ನವಾಗುವ ಗೀತಾರ್ಥವನ್ನು ಸುಬೋಧವಾದ ಗಂಭೀರ ಶೈಲಿಯಿಂದ ನಿರ್ಣಯಾತ್ಮಕವಾಗಿ ತಿಳಿಸುವಂತಹ 'ವಿವೃತಿ' ಎಂಬ ವ್ಯಾಖ್ಯಾನವನ್ನು ಶ್ರೀಮದ್ರಾಘವೇಂದ್ರತೀರ್ಥಗುರುಸಾರ್ವಭೌಮರು ರಚಿಸಿರುತ್ತಾರೆ. ಈ ಗ್ರಂಥಗಳನ್ನನುಸರಿಸಿ ನಮ್ಮ ಭಾಷಾಂತರವು ಸಾಗಿದೆ.

## ಅನೇಕಾರ್ಥ

ಮಹಾಭಾರತಾಂತರ್ಗತವಾದ ಗೀತೆಗೆ ಇದೊಂದೇ ಅರ್ಥವು ಬೇರಾವುದೂ ನಿಜಾರ್ಥವಲ್ಲವೆನ್ನುವುದು ಹೇಗೆ? ಇಡೀ ಮಹಾಭಾರತಕ್ಕೆ ಅನೇಕ ಅರ್ಥಗಳಿವೆಯೆಂದು ಅನೇಕ ಪ್ರಮಾಣಗಳು ಸಾರುತ್ತಿರುವಾಗ, ಅದರಲ್ಲಿಯೂ ಸಾರತಮಭಾಗವಾದ ಗೀತೆಗೂ ಅನೇಕ ತತ್ತ್ವಾರ್ಥಗಳಿರಬೇಕಾದುದುಚಿತವಲ್ಲವೇ ಎಂದರೆ, ನಿಜ; ಅನೇಕಾರ್ಥಗಳನ್ನು ಪ್ರಾಚೀನರೂ ಒಪ್ಪಿರುವರು, ಅವೆಲ್ಲವೂ ಭಿನ್ನ ಭಿನ್ನ ಅಧಿಕಾರಿಗಳು ತಿಳಿಯಲರ್ಹವು ಮತ್ತು ಮೇಲ್ಕಂಡ ಅರ್ಥಕ್ಕೆ ಅವಿರುದ್ಧವೂ ಆಗಿವೆ. ಅಂತಹುದು ಪ್ರಾಮಾಣಿಕವೇ ಅಹುದು. ಮೇಲೆ ಹೇಳಿರುವ ಅರ್ಥಕ್ಕೆ ವಿರುದ್ಧ ವಾದ ಯಾವ ಅರ್ಥವೂ ಗೀತೆಗೆ ಹೊಂದುವುದಿಲ್ಲವೆಂದೇ ನಾವು ಇಲ್ಲಿ ಪ್ರತಿಪಾದಿಸಿರುವೆವು.

ಭಾರತಕ್ಕೆ ಅವಿರುದ್ಧವಾದ ಅನೇಕಾರ್ಥಗಳಿವೆಯೆಂಬುದು ಹೀಗೆ ನಿರೂಪಿತವಾಗಿದೆ :-

ಬ್ರಹ್ಮಾದ್ಯೈಃ ಪ್ರಾರ್ಥಿತೋ ವಿಷ್ಣುಃ ಭಾರತಂ ಸ ಚಕಾರ ಹ
ಯಸ್ಮಿನ್ ದಶಾರ್ಥಾಃ ಸರ್ವತ್ರ ನ ಜ್ಞೇಯಾಃ ಸರ್ವಜಂತುಭಿಃ - ನಾರದೀಯ ಪುರಾಣ.
ದಶಾವರಾರ್ಥಂ ಸರ್ವತ್ರ ಕೇವಲಂ ವಿಷ್ಣು ಬೋಧಕಂ
ಪರೋಕ್ಷಾರ್ಥಂ ತು ಸರ್ವತ್ರ ವೇದಾದಪ್ಯುತ್ತಮಂ ತು ಯತ್ – ಸ್ಕಾಂದಪುರಾಣ,

ಮನ್ವಾದಿ ಕೇಚಿದ್ಬ್ರುವತೇ ಹ್ಯಾಸ್ತಿಕಾದಿ ತಥಾಪರೇ
ತಥೋಪರಿಚರಾದ್ಯನ್ಯೆ ಭಾರತಂ ಪರಿಚಕ್ಷತೇ - ಮಹಾಭಾರತ

ಭಾರತಕ್ಕೆ ಬಹು ಅರ್ಥಗಳಿವೆ. ಅವೆಲ್ಲವೂ ಎಲ್ಲರಿಗೂ ವೇದ್ಯವಲ್ಲ. ಭಾರತವು ಮನು, ಆಸ್ತಿಕ, ಉಪರಿಚರ ಎಂಬ ಮೂರು ಅರ್ಥಗಳನ್ನೊಳಗೊಂಡಿದೆ. ಮನು ಎಂದರೆ: - ಧರ್ಮ, ಭಕ್ತಿ-ಜ್ಞಾನ-ವೈರಾಗ್ಯ- ಪ್ರಜ್ಞಾ-ಮೇಧಾ-ಧೃತಿ-ಸ್ಥಿತಿ-ಯೋಗ-ಪ್ರಾಣ-ಬಲ ಎಂಬ ಹತ್ತು ಗುಣಗಳು, ಶ್ರವಣ, ಮನನ, ಶೀಲ, ವಿನಯ, ವೇದ ಎಂಬ ಆರು ಅರ್ಥಗಳು. ಇವುಗಳಲ್ಲಿ ಧರ್ಮಕ್ಕೆ ಧರ್ಮರಾಜ, ಭಕ್ತ್ಯಾದಿ ಹತ್ತು ಗುಣಗಳಿಗೆ ಭೀಮಸೇನ, ಶ್ರವಣ-ಮನನಗಳಿಗೆ ಅರ್ಜುನ, ಶೀಲಕ್ಕೆ ನಕುಲ, ವಿನಯಕ್ಕೆ ಸಹದೇವ, ವೇದಕ್ಕೆ ದೌಪದೀದೇವಿಯೂ ಅಭಿಮಾನಿಗಳು. ಅಭಿಮಾನಿ ಬೋಧಕ

ಶಬ್ದದಿಂದ ಅವನ ಅಭಿಮಾನ ಪಾತ್ರವಸ್ತುವನ್ನೂ, ಅಭಿಮನ್ಯಮಾನ ವಾಚಕ ಪದದಿಂದ ಅಭಿಮಾನಿಯನ್ನೂ ವ್ಯವಹರಿಸುವ ವಾಡಿಕೆಯಿದೆ. ಪ್ರಕೃತ ಭಾರತದಲ್ಲಿನ ಧರ್ಮ-ಭೀಮಾದಿ ಪದಗಳಿಗೆ ಅವರವರ ಅಭಿಮಾನ ವಿಷಯವಾದ ಉಕ್ತಧರ್ಮ- ಭಕ್ತ್ಯಾದಿಗಳೇ ಅರ್ಥವೆಂದು ಭಾವಿಸಿ, ಅವುಗಳ ಪ್ರಶಂಸೆಯ ಮೂಲಕವಾಗಿ ಪಂಚ-ಪಾಂಡವರು ಮತ್ತು ದ್ರೌಪದೀದೇವಿಯವರ ಮಾಹಾತ್ಮ್ಯೆಯು ಪ್ರತಿಪಾದಿತವಾಗಿದೆಯೆಂಬುದೇ ಮನ್ವರ್ಥಕವೆಂಬುದರ ಭಾವ.

ಆಸ್ತಿಕ ಎಂದರೆ : – ಧರ್ಮಾದಿ-ಪಂಚಪಾಂಡವರು ಮತ್ತು ದ್ರೌಪದೀದೇವಿಯು. ಅವರನ್ನೇ ವಾಚಕ ಶಬ್ದದಿಂದ ಬಹಿರಂಗವಾಗಿ ನಿರ್ದೇಶಿಸಿ, ಅವರ ಉತ್ಪತ್ತಿ, ಜೀವನವೃತ್ತಾಂತ, ಯುದ್ಧ ಮುಂತಾದುವನ್ನು ಪ್ರತಿಪಾದಿಸುವುದಕ್ಕೆ ಆಸ್ತಿಕಾರ್ಥವೆಂದು ಹೆಸರು.

ಉಪರಿಚರ ಎಂದರೆ ಸರ್ವೋತ್ತಮನಾದ ವಿಷ್ಣುವು. ಸ್ವರ-ವರ್ಣ-ಪದಾತ್ಮಕವಾದ ಸಕಲ ಭಾಗಗಳಿಂದಲೂ ಪರಮಮುಖ್ಯವೃತ್ತಿಯಿಂದ ಸರ್ವೋತ್ತಮ ವಿಷ್ಣುಮಹಿಮಾವರ್ಣನೆಯೇ ಭಾರತದ ಆಶಯ ಎಂಬುದು ಉಪರಿಚರಾರ್ಥವು. ಈ ಅರ್ಥವು ಸರ್ವರಿಗೂ ವೇದ್ಯವಾಗಲಾರದು; ಉತ್ತಮಜ್ಞಾನಿಗಳಿಗೆ ಮಾತ್ರ ಗಮ್ಯವು. ಹೀಗೆ ಭಾರತಕ್ಕೆ ಅವಿರುದ್ಧಾನೇಕಾರ್ಥಗಳಿವೆಯೆಂದು ಶಾಸ್ತ್ರೋಕ್ತರೀತಿಯಿಂದ ತಿಳಿಯಬೇಕು.

## ಪ್ರಯೋಜನ

ಪೂರ್ವದಲ್ಲಿ ಒಂದೊಂದು ಕೆಲಸವನ್ನು ಒಂದೊಂದು ಗುಂಪಿನವರೇ ಮಾಡುತಿದ್ದರು. ವ್ಯವಸಾಯ, ಬಟ್ಟೆನೇಯುವುದು-ಪಾತ್ರೆ ಮಾಡುವುದು ಶಿಲ್ಪ-ಯಂತ್ರ ನಿರ್ಮಾಣ ಇತ್ಯಾದಿ, ಕೈಗಾರಿಕೆ, ವ್ಯಾಪಾರ, ರಾಜ್ಯಶಾಸನ, ಶ್ರೌತ ಸ್ಮಾರ್ತ ಕರ್ಮ, ಲೌಕಿಕವೈದಿಕವಿದ್ಯೆ ಮುಂತಾದ ಜೀವನೋಪಯುಕ್ತ ಕಾರ್ಯಗಳಲ್ಲಿ ಅನಾದಿಕಾಲದಿಂದಲೂ ಆಯಾಯ ಗುಂಪಿನವರೇ ದುಡಿಯುತ್ತಿದ್ದರು. ಅದರ ಅನುಭವ ವಾಸನೆಯು ಅವರವರ ರಕ್ತಗತವಾಗಿ ವಂಶ ಪರಂಪರೆಯಲ್ಲಿ ಪ್ರವಹಿಸುತ್ತಿದ್ದಿತು. ಅದರ ಫಲವಾಗಿ ಆಯಾಯ ಕಾರ್ಯಗಳು ಹುರುಪಿನಿಂದ ಸಾಗಿ ಸಂಪೂರ್ಣ ಫಲಕಾರಿಯಾಗುತ್ತಿದ್ದುವು. ಒಬ್ಬರ ಕೆಲಸದಲ್ಲಿ ಇನ್ನೊಬ್ಬರು ಕೈ ಹಾಕುತ್ತಿರಲಿಲ್ಲ. ಪ್ರತಿಯೊಬ್ಬನಿಗೂ ಎಲ್ಲವೂ ಬೇಕಾದುದೇ ಆದರೂ ಎಲ್ಲರೂ ಪರಸ್ಪರ ಸಹಕಾರದಿಂದಲೇ ತಮಗೆ ಬೇಕಾದುದೆಲ್ಲವನ್ನೂ ಪಡೆಯುತ್ತಿದ್ದರು. ತಮ್ಮ ತಮ್ಮ ಶಕ್ತಿಯ ಪರಿಮಿತಿಯನ್ನು ಎಲ್ಲರೂ ಅರಿತು, ತಮ್ಮ ಎಲ್ಲೆಯಲ್ಲಿ ತಾವಿರುವುದೇ ಧರ್ಮ, ಎಲ್ಲೆಯನ್ನತಿಕ್ರಮಿಸಿ ಪರಧರ್ಮದಲ್ಲಿ ಕೈ ಹಾಕುವುದು ಅಧರ್ಮ ಎಂಬ ನಂಬಿಕೆಯಿಂದ ವರ್ತಿಸುತ್ತಿದ್ದರು. ಆಸ್ತಿಕಮನೋಭಾವವು ಚೆನ್ನಾಗಿದ್ದಿತು. ಸಾಮಾನ್ಯವಾಗಿ ಇತರರಿಗೆ ಹಿಂಸೆಯಾಗುವ ಕೆಲಸವನ್ನು ಯಾರೂ ಮಾಡುತ್ತಿರಲಿಲ್ಲ. ಸತ್ಯವನ್ನೇ ನುಡಿಯುತ್ತಿದ್ದರು.

ಸುಳ್ಳಾಡಿದವರಿಗೆ ತಕ್ಷಣದಲ್ಲಿಯೇ ರಾಜದಂಡವು ವಿಧಿಸಲ್ಪಡುತ್ತಿದ್ಧಿತು. ಅನ್ಯಾಯವರ್ತನೆ, ಅತ್ಯಾಶೆ, ಸ್ವಾರ್ಥ, ಪರಹಿಂಸೆ ಇವುಗಳ ಕಡೆ ಜನರು ಹೆಚ್ಚಾಗಿ ಗಮನಿಸುತ್ತಿರಲಿಲ್ಲ. ಅಂತಹ ಉಚ್ಚ ಸಂಸ್ಕೃತಿಯಿಂದ ಜನಾಂಗದಲ್ಲಿ ಶಾಂತಿಯು ನೆಲೆಸಿ ಸುಖಮಯ ಜೀವನವು ಸಾಗುತ್ತಿದ್ಧಿತು.

ಇಂದೂ ಜನತೆಯು ಆಶಿಸುವುದು ಶಾಂತಿಸುಖಗಳೇ ಆಹುದು. ಆದರೆ ಇದು ವಿಜ್ಞಾನಯುಗ ಕೈಗಾರಿಕೆಯ ಪ್ರಪಂಚ, ಹೊಸಹೊಸ ತಯಾರಿಕೆಗಳು, ಸ್ವಾತಂತ್ರದ ಆಶೆ, ಒಬ್ಬರನ್ನೊಬ್ಬರು ಮೀರಿಸಬೇಕೆಂಬ ಸ್ಪರ್ಧೆ, ಒಬ್ಬರು ಆಟಂ ಬಾಂಬನ್ನು ತಯಾರಿಸಿದರೆಂದರೆ ಇನ್ನೊಬ್ಬರಿಗೆ ಅದಕ್ಕೂ ಮೀರಿದ ಹೈಡ್ರೋಜನ್ ಬಾಂಬ್ ತಯಾರಿಕೆಯ ಗಮನ, ಇತರರಿಗೆ ಇವೆರಡನ್ನೂ ಮುಳುಗಿಸುವ ಯೋಚನೆ. ಹೀಗೆ ಮೇಲಿಂದ ಮೇಲೆ ಹಾರಾಡಿ ನೆಲೆಗಾಣದೆ ಬಿದ್ದು, ಬೆಂದು ಬಳಲುತ್ತಿರುವುದೇ ದಿನಚರಿಯಾಗಿದೆ. ವಿಜ್ಞಾನಕ್ಕೆ ಕೊನೆಯಿಲ್ಲ. ಇಂದು ಸಾಧುವಾಗಿ ಕಂಡುದು ನಾಳೆ ಪುನಃ ಪರಿಶೋಧನೆಯಿಂದ ಅಸಾಧುವೆಂದು ಸಾರುತ್ತಿರುವುದು ಕಂಡಿದೆ. ಯಾವ ಮನುಷ್ಯನೂ ಸರ್ವಜ್ಞನಲ್ಲ; ಆದರೂ ಸರ್ವಜ್ಞರಂತೆ ನಟಿಸುವರು. ಅದರಿಂದ ಜನತೆಗೆ ಹಿಂಸೆಯಾದರೂ ಲೆಕ್ಕಿಸುವುದಿಲ್ಲ. ಸ್ವಾರ್ಥ ಸಾಧನೆಯಾದರೆ ಸರಿ. ವೇದಿಕೆಯ ಮೇಲೆ ನಿಂತಾಗ ಲೋಕಕಲ್ಯಾಣದ ಮಾತುಗಳು, ನಿಸ್ವಾರ್ಥತೆಯ ಪ್ರಚಾರ, ಸೇವಾಮನೋಭಾವಾವಿಷ್ಕರಣ, ಕೆಲಸ ಮಾಡುವಾಗ ಅವುಗಳ ಸುಳಿವೇ ಇರುವುದಿಲ್ಲ; ವಿಪರೀತವಾಗಿಯೇ ನಡೆಯುತ್ತಿರುವುದು. ಹೀಗಾಗಿ ದೇಶದಲ್ಲೆಲ್ಲಾ ಅಶಾಂತಿಯು ತಾಂಡವವಾಡುತ್ತಿದೆ. ಧರ್ಮಕ್ಕೆ ತೌರೂರಾಗಿದ್ದ ನಾಡು ಇಂದು ಧರ್ಮಬಾಹಿರವಾಗಿ ಕ್ಲೇಶಮಯ ಜೀವನದಲ್ಲಿ ಸಿಲುಕಿ ನರಳುತ್ತಿದೆ. ಇಂತಹ ದುರವಸ್ಥೆಗೆ ಸರ್ವಜ್ಞರಾದ ಪೂರ್ವಾಚಾರ್ಯರ ಉಪದೇಶವನ್ನು ಮೂಲೆಗೊತ್ತಿ, ಉನ್ನತಮಟ್ಟದ ಪೂರ್ವಸಂಸ್ಕೃತಿಯನ್ನು ದೂರಮಾಡಿ, ನವನಾಗರಿಕತೆಯ ಹೆಸರಿನಲ್ಲಿ ಅಧರ್ಮಮಾರ್ಗದಲ್ಲಿಯೇ ಸಾಗುತ್ತಾ, ನಾವು ಎಲ್ಲಿಂದ ಹೊರಟೆವು? ಈಗ ಎಲ್ಲಿದ್ದೇವೆ? ಎಲ್ಲಿ ನಿಲ್ಲುವೆವು? ಶಾಶ್ವತನೆಲೆ ಯಾವುದು? ಈಗ ಮಾಡಬೇಕಾದುದೇನು? ಇತ್ಯಾದಿ ಪೂರ್ವೋತ್ತರ-ಕರ್ತವ್ಯಗಳನ್ನರಿಯದೆ ಮನಬಂದಂತೆ ಸ್ವತಂತ್ರವಾಗಿ ಸಾಗುತ್ತಿರುವುದೇ ಮೂಲವು. ಈ ಮೂಲವನ್ನು ಬೇರುಸಹಿತ ಕಿತ್ತೊಗೆಯಲು ಶಾಸ್ತ್ರವು ಏಕಮಾತ್ರ ಸಾಧನೆಯು. ಅದೇ ಉಚ್ಚ ಸಂಸ್ಕೃತಿಗೆ ಮೂಲಾಧಾರವು. ಅದರಲ್ಲಿಯೂ ಸಾರತಮವಾದುದು ಗೀತಾಶಾಸ್ತ್ರವು. 'ಸಕಲವೂ ಭಗವದಧೀನವಾಗಿರುವುದರಿಂದ ಸರ್ವಸ್ವಾಮಿಯಾದ ಭಗವಂತನಲ್ಲಿ ಭಕ್ತಿಪೂರ್ವಕವಾಗಿ ಫಲಾಸಕ್ತಿಯಿಲ್ಲದೆ ವಿಹಿತ ಧರ್ಮವನ್ನಾಚರಿಸುವುದೇ ಭಗವದಾರಾಧನೆಯು, ಅದೇ ಪರಮ ಧರ್ಮವು, ಶ್ರೇಯಸ್ಕರವು ಅದಕ್ಕೆ ವಿರುದ್ಧವಾದುದಲ್ಲವೂ ಅಧರ್ಮವು' ಎಂಬುದೇ ಗೀತೆಯ ಸಾರಾಂಶ. ಇದರ ವಿವರಣೆಯನ್ನು ಹಿಂದೆ

ಕೊಟ್ಟಿದೆ. ಇದೇ ಆದಿಯಲ್ಲಿ ಹೇಳಿದ, ಮನುಷ್ಯನ ಬೆನ್ನುಹತ್ತಿರುವ ಸಮಸ್ಯೆಗಳ ಪರಿಹಾರಮಾರ್ಗವು. ಅದನ್ನರಿತು ಆಚರಿಸುವುದರಿಂದ ಈಗ ತಲೆದೋರಿರುವ ಕಷಾಯ ಭಾವಗಳೆಲ್ಲವೂ ತೊಲಗುವುದು, ಶಾಂತಿಯು ನೆಲೆಸುವುದು. ಉಚ್ಚ ಸಂಸ್ಕೃತಿಯಿಂದ ಪರಿಶುದ್ಧರಾಗಿ ಸುಖಮಯ ಜೀವನವನ್ನು ಕಾಣುವೆವು. ಎಂದೂ ಅಚ್ಚಳಿಯದ ನಿಜಸುಖವನ್ನೂ ಭಗವಂತನು ಅನುಗ್ರಹಿಸುವನು.

ಇಂದು ನಾಡಿನಲ್ಲಿ ಹಬ್ಬಿರುವ ಅಶಾಂತಿ ವಾತಾವರಣಕ್ಕೆ ಗೀತೋಪದೇಶವೇ ಪರಮಮೌಷಧವು. ಅದರಿಂದಲೇ ಜನತೆಯ ಉದ್ಧಾರವಾಗಬೇಕು; ನಾಡು ಶಾಂತಿಯ ಬೀಡಾಗಿ ಬೆಳಗಬೇಕು; ಉಚ್ಚ ಸಂಸ್ಕೃತಿಯಿಂದ ಮೆರೆಯಬೇಕು. - ಪ್ರಾಯಿಕವಾಗಿ ಲೌಕಿಕವಿದ್ಯಾಭ್ಯಾಸಂಗಿಗಳಾಗಿ, ಸ್ವಲ್ಪ ಮಟ್ಟಿಗೆ ಸಂಸ್ಕೃತ ಭಾಷೆಯನ್ನರಿತು ಭಾಷಾಂತರ ಸಹಾಯದಿಂದ ಗೀತೆಯನ್ನೋದಿದ ಜನರು ಮತ್ತು ಸಾಮಾನ್ಯ ಪಂಡಿತರೂ ಸಹ ಹೇರಳವಾಗಿ ಗೀತೆಯನ್ನು ಕನ್ನಡಿಸಿರುವುದು ಕಂಡಿದೆ.

ಈ ಪರಿಸ್ಥಿತಿಯನ್ನರಿತು ನಮ್ಮ ಮಿತ್ರರನೇಕರು ಗೀತೆಯ ತತ್ತ್ವಾರ್ಥವನ್ನು ಯಥಾವತ್ತಾಗಿ ತಿಳಿಸುವಂತಹ ತಿಳಿಗನ್ನಡ ಗ್ರಂಥವೊಂದನ್ನು ರಚಿಸಬೇಕೆಂದು ಒತ್ತಾಯಮಾಡಿದ ಕಾರಣ ಈ ಗ್ರಂಥವನ್ನು ರಚಿಸಿ ಪ್ರಚುರಪಡಿಸಿರುವೆವು.

ಈ ಪುಸ್ತಕದಲ್ಲಿ ಮೇಲ್ಭಾಗದಲ್ಲಿ ಗೀತೆಯ ಶ್ಲೋಕಗಳನ್ನೂ, ಅದರ ಕೆಳಗೆ ಕನ್ನಡಭಾಷೆಯಲ್ಲಿ ಆಯಾಯಾ ಶ್ಲೋಕಗಳ ತಾತ್ಪರ್ಯವನ್ನೂ, ಅದರ ಕೆಳಗಣ ಟಿಪ್ಪಣಿಯಲ್ಲಿ ಉಕ್ತಶ್ಲೋಕಾರ್ಥಗಳ ಔಚಿತ್ಯವನ್ನು ಪ್ರಮಾಣೋದಾಹರಣ ಪೂರ್ವಕವಾಗಿ ವಿವರಿಸಿ, ತುಲನಾತ್ಮಕ ದೃಷ್ಟಿಯಿಂದ ವಿಷಯ ವಿಮರ್ಶೆಯನ್ನೂ ಯೋಜಿಸಲಾಗಿದೆ. ಪಂಡಿತರು ಮೂಲಶ್ಲೋಕಗಳಿಗಾಗಿಯೂ, ಸಂಸ್ಕೃತವನ್ನರಿಯದ ಗೀತಾರ್ಥ ಜಿಜ್ಞಾಸುಜನರು ಮಧ್ಯಭಾಗದಲ್ಲಿರುವ ಕನ್ನಡಾನುವಾದಕ್ಕಾಗಿಯೂ, ವಿಮರ್ಶಕರು ಕೆಳಗಣ ಟಿಪ್ಪಣಿ ಭಾಗವನ್ನು ಗ್ರಹಿಸಿ ತಮ್ಮ ವಿಮರ್ಶೆಯನ್ನು ಮುಂದುವರೆಸುವುದಕ್ಕೂ ಸಹ ಅನುಕೂಲವಾಗಿರುವುದರಿಂದ ಈ ಗ್ರಂಥವು ಸಕಲ ಸಜ್ಜನರಿಗೂ ಉಪಾದೇಯವಾಗುವುದೆಂದು ಭಾವಿಸಿದೆ.

ಇದರಲ್ಲಿ ಶ್ಲೋಕ ಸಂಖ್ಯೆಯನ್ನು ಗುರ್ತಿಸಿ ಸಂದರ್ಭಾದಿಗಳನ್ನು ತಿಳಿಸುವ ಅವತಾರಿಕೆಯನ್ನು, ಬರೆದು ಅದರ ಮುಂದೆ:- ಈ ಗುರ್ತುಮಾಡಿ ಆಯಾಯಾ ಶ್ಲೋಕಗಳ ಅರ್ಥಾನುವಾದವು ಪ್ರಾರಂಭವಾಗಿದೆ. ಮತಾಂತರಗಳಲ್ಲಿ ಭಿನ್ನಾರ್ಥವಿರುವ ಹಲವು ಶ್ಲೋಕಗಳಿಗೆ ಆಯಾಯಾ ಭಾಷ್ಯಕಾರರು ಹೇಳಿರುವ ಭಿನ್ನಾರ್ಥಗಳನ್ನೂ ಸಂಗ್ರಹಿಸಿ ಅಲ್ಲಲ್ಲಿ ಉಲ್ಲೇಖಿಸಿದೆ. ಅದರ ಸಾಮರಸ್ಯವು ಕೆಳಗಣ ಟಿಪ್ಪಣಿಯಲ್ಲಿ ಲಿಖಿತವಾಗಿದೆ.

ಇಂತು ಇಹಪರ ಶ್ರೇಯಸ್ಸಾಧನವಾದ ಗೀತೆಯ ನಿಜಾರ್ಥವು ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ತಿಳಿಗನ್ನಡದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಕನ್ನಡ ಜನತೆಯು ಈ ಪುಸ್ತಕವನ್ನೋದಿ ತತ್ತ್ವಾರ್ಥವನ್ನರಿತು ವಿಹಿತಮಾರ್ಗಾವಲಂಬನೆಯಿಂದ ಶಾಂತಿ ಪಥದಲ್ಲಿ ಸಾಗಿ ಶ್ರೇಯೋಭಾಗಿಗಳಾಗುವುದರ ಮೂಲಕ ಈ ಉದ್ಯಮವನ್ನು ಸಾರ್ಥಕಗೊಳಿಸಿ ಶ್ರೀಕೃಷ್ಣ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಬೇಕೆಂಬುದೇ ನಮ್ಮ ಹೆಬ್ಬಯಕೆ.

ಅಕ್ಷಯಂ ಕರ್ಮ  ಯಸ್ಮಿನ್ಪರೇ ಸ್ವರ್ಪಿತಂ
ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ
ಅಕ್ಷರೋ ಯೋಽಜರಃ ಸರ್ವದೈವಾಮೃತಃ
ಕುಕ್ಷಿಗಂ ಯಸ್ಯ ವಿಶ್ವಂ ಸದಾಽಜಾದಿಕಂ
ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾಖಂಡಮಂಡನೇಂ - ಸರ್ವಜ್ಞ ಸೂಕ್ತಿ.

ಶ್ರೀಕೃಷ್ಣಾರ್ಪಣಮಸ್ತು.
ನಂದನ ಸಂ. ಮಾರ್ಗಶೀರ್ಷ,
ಕೃಷ್ಣ ದಶಮೀ ಗುರುವಾರ, ಮೈಸೂರು,
ಡಿ. ವಾಸುದೇವಾಚಾರ್ಯ.

# ಶ್ರೀಮದ್ಭಗವದ್ಗೀತಾ

ಶ್ರೀ ಗುರುಭ್ಯೋ ನಮಃ ಹರಿಃ ಓಂ

## ಗೀತೆಯ ರಚನೆ

ಶ್ರೀಕೃಷ್ಣ ಪರಮಾತ್ಮನು ದುಷ್ಟಶಿಕ್ಷಣಾದಿ ಬಲಕಾರ್ಯವನ್ನು ಮಾಡುವ ಉದ್ದೇಶದಿಂದ ಅವತರಿಸಿ ಅದನ್ನು ನೆರವೇರಿಸಿದ ಬಳಿಕ ಲೋಕದ ಪರಿಸ್ಥಿತಿಯನ್ನು ನೋಡಿ ತತ್ವಜ್ಞಾನವಿಲ್ಲದೆ ನರಳುತ್ತಿರುವ ಸಾಧುಜನರಲ್ಲಿ ದಯೆಮಾಡಿ ತತ್ತ್ವೋಪದೇಶದಿಂದ ಅವರನ್ನುದ್ಧರಿಸಬೇಕೆಂದು ಸಂಕಲ್ಪಿಸಿದನು. ಆದರೆ ಪ್ರಸಂಗವಿಲ್ಲದೆ ತತ್ತ್ವೋಪದೇಶವನ್ನಾರಂಭಿಸುವುದು ಸರಿಯಲ್ಲ; ಫಲಕಾರಿಯೂ ಆಗುವುದಿಲ್ಲವಾದ ಕಾರಣ ಒಂದು ಪ್ರಸಂಗವನ್ನು ಹೂಡಿದನು. ಕುರುಕ್ಷೇತ್ರದಲ್ಲಿ ಕೌರವ ಪಾಂಡವಸೈನ್ಯಗಳು ಯುದ್ಧಕ್ಕೆ ಸನ್ನದ್ಧವಾಗಿ ಇದಿರುಬದಿರು ನಿಂತಿರುವ ಸಂದರ್ಭದಲ್ಲಿ ಸರ್ವಂದ್ರಿಯ ಪ್ರೇರಕನಾಗಿ ಹೃಷೀಕೇಶನೆನಿಸಿದ ಶ್ರೀಕೃಷ್ಣನು ಅರ್ಜುನನಿಗೆ ವಿಷಾದ ಮತ್ತು ಯುದ್ಧದಲ್ಲಿ ಜಿಹಾಸಗಳನ್ನು ಹುಟ್ಟಿಸಿದನು. ವಿಷಾದ ಹೊಂದಿದ ಅರ್ಜುನನು ದಿಕ್ಕು ತೋಚದೆ ಸಾರಥಿಯಾಗಿದ್ದ ಶ್ರೀಕೃಷ್ಣನನ್ನು ಮರೆಹೊಕ್ಕು ತನ್ನ ವಿಷಾದ ಜಿಹಾಸೆಗಳನ್ನು ಹೇಳಿಕೊಂಡು ಕರ್ತವ್ಯ ಧರ್ಮವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಿದನು. ಆಗ ಶ್ರೀಕೃಷ್ಣನು ಅರ್ಜುನನ್ನೇ ನಿಮಿತ್ತ ಮಾಡಿ ಧರ್ಮತತ್ತ್ವೋಪದೇಶವನ್ನಾರಂಭಿಸಿದನು. ಆ ಉಪದೇಶವೇ ಭಗವದ್ಗೀತೆಯೆಂಬ ಅಧ್ಯಾತ್ಮಶಾಸ್ತ್ರವು. ಅದು 'ಅಶೋಚ್ಯಾನನ್ವ ಶೋಚಸ್ತ್ವಂ' 2-11 ಇತ್ಯಾದಿ ಶ್ಲೋಕದಿಂದ ಆರಂಭವಾಗಿದೆ. ಅದರ ಹಿಂದಿನ ಭಾಗವಾದ ಪ್ರಥಮಾಧ್ಯಾಯ ಮತ್ತು ದ್ವಿತೀಯಾಧ್ಯಾಯದಲ್ಲಿ ಹತ್ತು ಶ್ಲೋಕಗಳು ಅರ್ಜುನನ ವಿಷಾದ-ಜಿಹಾಸ ಕಥನೆಯು. ಇದೇ ಗೀತಾರಚನೆಗೆ ಮೂಲವಾದ ಪ್ರಸಂಗವು. ಇದನ್ನೇ ಉಪದೇಶ ಪೀಠಿಕೆಯಾಗಿ ಗೀತೆಯಲ್ಲಿ ಸೇರಿಸಿದೆ.

## ಆರಂಭದ ಸಂಗತಿ

ಕುರುಕ್ಷೇತ್ರದಲ್ಲಿ ಕೌರವ ಪಾಂಡವರ ಸೈನ್ಯಗಳು ಯುದ್ಧಕ್ಕೆ ಸನ್ನದ್ಧವಾದಾಗ ಹುಟ್ಟು ಕುರುಡನಾದ ಧೃತರಾಷ್ಟ್ರನು ಪುತ್ರವ್ಯಾಮೋಹದಿಂದ ವಿವೇಕಶೂನ್ಯನಾಗಿ ತನ್ನ ಮಕ್ಕಳಿಗೆ ಈ ಯುದ್ಧದಿಂದ ಕೆಡಕಾದೀತೆಂಬ ಶಂಕೆಯಿಂದ ವಿಷಾದಪಡುತ್ತಿದ್ದನು. ಆಗ ಶ್ರೀವೇದವ್ಯಾಸ ಸ್ವಾಮಿಯು ವಾತ್ಸಲ್ಯದಿಂದ ಧೃತರಾಷ್ಟ್ರನ ಬಳಿಗೆ ಬಂದು 'ರಾಜಾ! ಮುಂದಿನ ಯುದ್ಧದಲ್ಲಿ ನಿನ್ನ ಮಕ್ಕಳು ಹಾಳಾಗುವರು. ಆ ಯುದ್ಧವನ್ನು ನೀನು ನೋಡಬೇಕೆಂದಿದ್ದರೆ ಕಣ್ಣು ಕೊಡುವೆನು' ಎಂದು ಹೇಳಿದನು. ಧೃತರಾಷ್ಟ್ರನಾದರೋ 'ನಾನು ಯುದ್ಧವನ್ನು ನೋಡಬಯಸುವುದಿಲ್ಲ; ಆದರೆ ನನಗೆ

ಯುದ್ಧದಲ್ಲಿ ನಡೆಯುವ ಸಕಲ ವೃತ್ತಾಂತಗಳನ್ನೂ ಕೇಳಬೇಕೆಂಬ ಅಭಿಲಾಷೆಯಿದೆ. ಅದನ್ನೆಲ್ಲಾ ಶ್ರವಣಮಾಡಿಸಬೇಕು' ಎಂದು ಪ್ರಾರ್ಥಿಸಿದನು. ಆಗ ಶ್ರೀವ್ಯಾಸಮುನಿಯು ತನ್ನ ಶಿಷ್ಯನು, ಗವಲ್ಗಣ ಪುತ್ರನೂ ಆದ ಸಂಜಯನನ್ನು ಕರೆದು 'ಸಂಜಯಾ! ಈ ಯುದ್ಧದಲ್ಲಿ ಅಂತರಂಗ ಬಹಿರಂಗಗಳಲ್ಲಿ ನಡೆಯುವ ಸಕಲ ವ್ಯಾಪಾರಗಳನ್ನೂ ಸಾಕ್ಷಾತ್ತಾಗಿ ನೋಡಿ ತಿಳಿಯುವಂತೆ ನಿನಗೆ ಅನುಗ್ರಹಿಸಿರುವೆನು. ನೀನು ಅವೆಲ್ಲವನ್ನೂ ಧೃತರಾಷ್ಟ್ರನಿಗೆ ತಿಳಿಸು' ಎಂದು ಅಪ್ಪಣೆಮಾಡಿ ಹೊರಟುಹೋದನು. ಕೂಡಲೇ ಸಂಜಯನು ರಣರಂಗಕ್ಕೆ ಹೋಗಿ ಪಾರ್ಥನಿಗೆ ಶ್ರೀಕೃಷ್ಣನು ಹೇಳುತ್ತಿದ್ದ ಗೀತೆಯನ್ನು ಸಾಕ್ಷಾತ್ತಾಗಿ ಶ್ರವಣಮಾಡಿ ಶ್ರೀವೇದವ್ಯಾಸಾನುಗ್ರಹದಿಂದ ಸಕಲವನ್ನೂ ತಿಳಿದು, ಯುದ್ಧವನ್ನೇ ಚಿಂತಿಸುತ್ತಿದ್ದ ಧೃತರಾಷ್ಟ್ರನಿಗೆ ದುರ್ಯೋಧನಾದಿಗಳು ಪರಿವಾರ ಸಹಿತರಾಗಿ ಕುರುಕ್ಷೇತ್ರಕ್ಕೆ ಯುದ್ಧ ಮಾಡಲು ಬಂದಿದ್ದಾರೆಂದು ಹೇಳಿದನು. ಅದನ್ನು ಕೇಳಿದ ಕೂಡಲೇ ಧೃತರಾಷ್ಟ್ರನು ಪುತ್ರವಾತ್ಸಲ್ಯದಿಂದ ಮುಂದಿನ ವಿಷಯವನ್ನು ತಿಳಿಯಲು ಕಾತುರನಾಗಿ ಸಂಜಯನನ್ನು ಕುರಿತು ಪ್ರಶ್ನಿಸುತ್ತಾನೆ :-

## ಪ್ರಥಮೋऽಧ್ಯಾಯಃ॥1-[47]॥

ಧೃತರಾಷ್ಟ್ರ ಉವಾಚ

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ॥1-1॥

1. ಸಂಜಯಾ! ಧರ್ಮಬುದ್ಧಿಪ್ರದವು, ಧರ್ಮನಾಮಕ ಭಗವಂತನ ಆವಾಸಸ್ಥಾನವೂ ಆದ ಕುರುಕ್ಷೇತ್ರದಲ್ಲಿ ಯುದ್ಧ ಮಾಡಬೇಕೆಂದು ಸೇರಿರುವ ನಮ್ಮವರು ಮತ್ತು ಪಾಂಡವರೂ ಸಹ ಏನು ಮಾಡಿದರು? ಎಂದು ಧೃತರಾಷ್ಟ್ರ ರಾಜನು ಕೇಳಿದನು. ಇದಕ್ಕೆ ಸಂಜಯನು ಮುಂದಿನ ಗ್ರಂಥದಿಂದ ಉತ್ತರ ಹೇಳುತ್ತಾನೆ ಎಂದು ವೈಶಂಪಾಯನ ಮುನಿಯು ಜನಮೇಜಯರಾಜನಿಗೆ ಹೇಳಿದನು.

ಸಂಜಯ ಉವಾಚ

ದೃಷ್ಟ್ವಾ ತು ಪಾಂಡವಾನೀಕಂ ವ್ಯೂಢಂ ದುರ್ಯೋಧನಸ್ತದಾ
ಆಚಾರ್ಯಮುಪಸಂಗಮ್ಯ ರಾಜಾ ವಚನಮಬ್ರವೀತ್॥1-2॥

ಪಶ್ಯೈತಾಂ ಪಾಂಡುಪುತ್ರಾಣಾಮಾಚಾರ್ಯ ಮಹತೀಂ ಚಮೂಂ
ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ॥1-3॥

ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನಸಮಾ ಯುಧಿ
ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ ॥1-4॥

ಧೃಷ್ಟಕೇತುಶ್ಚೇಕಿತಾನಃ ಕಾಶೀರಾಜಶ್ಚ ವೀರ್ಯವಾನ್
ಪುರುಜಿತ್ಕುಂತಿಭೋಜಶ್ಚ ಶೈಬ್ಯಶ್ಚ ನರಪುಂಗವಃ ॥1-5॥

ಯುಧಾಮನ್ಯುಶ್ಚ ವಿಕ್ರಾಂತ ಉತ್ತಮೌಜಾಶ್ಚ ವೀರ್ಯವಾನ್
ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ॥1-6॥

2-6. ಸಂಜಯನು ಹೇಳುತ್ತಾನೆ:-

ಧೃತರಾಷ್ಟ್ರ ಮಹಾರಾಜಾ! ವ್ಯೂಹವಾಗಿ ಸಂಗ್ರಹಿಸಲ್ಪಟ್ಟ ಪಾಂಡವರ ಸೈನ್ಯವನ್ನು ನಿನ್ನ ಮಗನಾದ ದುರ್ಯೋಧನನು ನೋಡಿ, ಕೂಡಲೇ ದ್ರೋಣಾಚಾರ್ಯರಿದ್ದೆಡೆಗೆ ಹೋಗಿ ಅವರಿಗೆ ಹೀಗೆ ಹೇಳಿದನು:- ಆಚಾರ್ಯರೇ! ನಿಮ್ಮ ಶಿಷ್ಯನು, ಬುದ್ಧಿಶಾಲಿಯು, ದ್ರುಪದರಾಜಕುಮಾರನೂ ಆದ ದೃಷ್ಟದ್ಯುಮ್ನನೆಂಬ ಪಾಂಡವ ಸೇನಾಪತಿಯಿಂದ ವ್ಯೂಹವಾಗಿ ರಚಿಸಲ್ಪಟ್ಟಿರುವ ಮಹತ್ತರವಾದ ಈ

ಪಾಂಡವ ಸೈನ್ಯವನ್ನು ನೋಡಿ, ಈ ಪಾಂಡವ ಸೈನ್ಯದಲ್ಲಿ ಮಹಾಧನುರ್ಧಾರಿಗಳು, ಯುದ್ಧ ಮಾಡುವುದರಲ್ಲಿ ಭೀಮಾರ್ಜುನರಿಗೆ ಸಮಾನರೂ ಆದ ಹದಿನೇಳು ಜನ ಶೂರರಿರುವರು. ಅವರಾರೆಂದರೆ ಸಾತ್ಯಕಿ, ವಿರಾಟ, ದ್ರುಪದರೆಂಬ 1ಮಹಾರಥಿಕರು, ಧೃಷ್ಟಕೇತು, ಚೇಕಿತಾನ, ಕಾಶಿರಾಜರೆಂಬ ಪರಾಕ್ರಮಿಗಳು, ಪುರುಜಿತ್, ಕುಂತಿಭೋಜ, ಶೈಬ್ಯ ಎಂಬ ನರಶ್ರೇಷ್ಠರು, ಪರಾಕ್ರಮಿಯಾದ ಯುಧಾಮನ್ಯು, ವೀರನಾದ ಉತ್ತಮೌಜಸ್ಸು, ಸುಭದ್ರಾ ತನಯನಾದ ಅಭಿಮನ್ಯು, ಪ್ರತಿವಿಂಧ್ಯ-ಸುತಸೋಮ-ಶ್ರುತಕರ್ಮ-ಶತಾನೀಕ-ಶ್ರುತಸೇನ ಎಂಬ ಐದು ಜನ ದ್ರೌಪದೀ ಪುತ್ರರು ಎಂಬೀ ಹದಿನೇಳು ಜನ ಮಹಾವೀರರು.

1. ಏಕೋ ದಶಸಹಸ್ರಾಣಿ ಯೋಧಯೇತ್ಯಸ್ತು ಧನ್ವಿನಾಂ
ಶಸ್ತ್ರಶಾಸ್ತ್ರಪ್ರವೀಣಶ್ಚ ಮಹಾರಥ ಇತಿ ಸ್ಮೃತಃ
ಅಮಿತಾನ್ಯೋಧಯೇದ್ಯಸ್ತು ಸಂಪ್ರೋಕ್ತೋಽತಿರಥಸ್ತು ಸಃ
ರಥಸ್ತ್ವೇಕೇನ ಯೋದ್ಧಾ ಸ್ಯಾತ್ತನ್ಯೋಽರ್ಧರಥಃ ಸ್ಮೃತಃ ।

ಯಾವನು ಶಸ್ತ್ರಶಾಸ್ತ್ರ ಪ್ರವೀಣನಾಗಿದ್ದು ಏಕಾಕಿಯಾಗಿಯೇ ಹತ್ತು ಸಾವಿರ ಧನುರ್ಧಾರಿಗಳನ್ನು ಇದಿರಿಸಿ ಯುದ್ಧ ಮಾಡಲು ಸಮರ್ಥನೋ ಅವನು ಮಹಾರಥನೆಂದೂ, ಅಸಂಖ್ಯಾತ ಯೋಧರೊಡನೆ ಯುದ್ಧ ಮಾಡಲು ಸಮರ್ಥನಾದವನು ಅತಿರಥನೆಂದೂ, ಒಬ್ಬ ಧನುರ್ಧಾರಿಯೊಡನೆ ಯುದ್ಧ ಮಾಡಿ ಜಯಿಸಬಲ್ಲವನು ರಥಿಕನೆಂದೂ, ಅದಕ್ಕಿಂತ ಕಮ್ಮಿ ಬಲವುಳ್ಳವನು ಅರ್ಧರಥನೆಂದೂ ಉಕ್ತವಾಗಿದೆ.

**ಅಸ್ಮಾಕಂ ತು ವಿಶಿಷ್ಟಾ ಯೇ ತಾನ್ನಿ ಬೋಧ ದ್ವಿಜೋತ್ತಮ**
**ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ ಬ್ರವೀಮಿ ತೇ ॥1-7॥**

**ಭವಾನ್ ಭೀಷ್ಮಶ್ಚ ಕರ್ಣಶ್ಚ ಕೃಪಶ್ಚ ಸಮಿತಿಂಜಯಃ**
**ಅಶ್ವತ್ಥಾಮಾ ವಿಕರ್ಣಶ್ಚ ಸೌಮದತ್ತಿಸ್ತಥೈವ ಚ॥1-8॥**

**ಅನ್ಯೇ ಚ ಬಹವಃ ಶೂರಾ ಮದರ್ಥೇ ತ್ಯಕ್ತಜೀವಿತಾಃ**
**ನಾನಾಶಸ್ತ್ರಪ್ರಹರಣಾಸ್ಸರ್ವೇ ಯುದ್ಧ ವಿಶಾರದಾಃ॥1-9।**

7-9. ದ್ವಿಜೋತ್ತಮಾ! ಆಚಾರ್ಯ! ನಮ್ಮ ಸೈನ್ಯದಲ್ಲಿರುವ ಬಲಿಷ್ಠರಾದ ಸೇನಾನಾಯಕರನ್ನೂ ಸಹ ನಿನ್ನ ಜ್ಞಾಪಕಕ್ಕೋಸ್ಕರ ಹೇಳುವನು. ಯುದ್ಧದಲ್ಲಿ ಜಯಶೀಲರಾದ ನೀನು, ಭೀಷ್ಮ, ಕರ್ಣ, ಕೃಪ, ಅಶ್ವತ್ಥಾಮ, ವಿಕರ್ಣ, ಸೋಮದತ್ತ ಪುತ್ರನಾದ ಭೂರಿಶ್ರವರಾಜ ಮತ್ತು ನನಗಾಗಿ ಪ್ರಾಣ ಬಿಡಲು ಸಿದ್ಧರಾಗಿರುವ, ಯುದ್ಧ ಕುಶಲರು, ವಿವಿಧ ಶಸ್ತ್ರಾಸ್ತ್ರಧಾರಿಗಳೂ ಆದ ಬಹು ಸಂಖ್ಯಾತ ಶೂರರೂ ಕೂಡ ನಮ್ಮ ಸೈನ್ಯದಲ್ಲಿರುವರು.

**ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್**
**ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಮ್ ॥1-10॥**

| |
|---|
| **ಅಯನೇಷು ಚ ಸರ್ವೇಷು ಯಥಾಭಾಗಮವಸ್ಥಿತಾಃ**<br>**ಭೀಷ್ಮಮೇವಾಭಿರಕ್ಷಂತು ಭವಂತಃ ಸರ್ವ ಏವ ಹಿ ॥1-11॥** |
| **ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ ।**<br>**ಸಿಂಹನಾದಂ ವಿನದ್ಯೋಚ್ಚೈಃಶಂಖಂ ದಧ್ಮೌ ಪ್ರತಾಪವಾನ್ ॥1-12॥** |
| **ತತಶ್ಶಂಖಾಶ್ಚ ಭೇರ್ಯಶ್ಚ ಪಣವಾನಕ ಗೋಮುಖಾಃ**<br>**ಸಹಸ್ರೈವಾಭ್ಯಹನ್ಯಂತ ಸ ಶಬ್ದಸ್ತುಮುಲೋಽಭವತ್॥1-13॥** |
| **10-13.** ಹೀಗಿರುವ ಉಭಯ ಪಕ್ಷಗಳ ಸ್ಥಿತಿಯನ್ನು ನೋಡುವುದರಲ್ಲಿ ಭೀಷ್ಮಾಚಾರ್ಯನಿಂದ ರಕ್ಷಿತವಾದ ನಮ್ಮ ಸೈನ್ಯವು ಶತ್ರು ಪಕ್ಷವನ್ನು ಜಯಿಸಲು ಅಸಮರ್ಥವಾಗಿದೆ. ಭೀಮಸೇನನಿಂದ ರಕ್ಷಿತವಾದ ಪಾಂಡವಸೈನ್ಯದಲ್ಲಿ ನಮ್ಮನ್ನು ಜಯಿಸುವುದಕ್ಕೆ ಬೇಕಾದ ಬಲವು ಸಂಪೂರ್ಣವಾಗಿರುವುದೆಂದು ತೋರುತ್ತದೆ. ಪಾಂಡವರಿಗಿಂತಲೂ ನಮಗೆ ನಾಲ್ಕು ಅಕ್ಷೌಹಿಣಿ ಸೈನ್ಯವು ಹೆಚ್ಚಾಗಿದ್ದರೂ, ಉಭಯ ಪಕ್ಷಗಳಲ್ಲಿರುವ ಬಲಿಷ್ಟರನ್ನು ಪರಿಗಣನೆ ಮಾಡಿ ನೋಡಿದರೆ ನಮಗೆ ಜಯವಾಗಲಾರದೆಂದು ತೋರುವುದು. ಆದುದರಿಂದ ಉಪಸೇನಾಪತಿಗಳಾದ ನೀವೆಲ್ಲರೂ ಬಹಳ ಜಾಗರೂಕರಾಗಿ ನಮ್ಮ ಮುಖ್ಯ ಸೇನಾಪತಿಯಾದ ಭೀಷ್ಮನಿಗೆ ಬೆಂಗಾವಲಾಗಿದ್ದು ನಿಮ್ಮ ನಿಮ್ಮ ವ್ಯೂಹದ್ವಾರಗಳಲ್ಲಿ ದೃಢವಾಗಿ ನಿಂತು, ಯುದ್ಧದಲ್ಲಿ ತೊಡಗಿದ ಭೀಷ್ಮನಿಗೆ ಯಾವ ಕಡೆಯಿಂದಲೂ ಶತ್ರುಬಾಧೆಯಾಗದಂತೆ ನೋಡಿಕೊಂಡು ಅವನನ್ನು ಕಾಪಾಡಿಕೊಳ್ಳಬೇಕಾದುದು ಮುಖ್ಯವೆಂದು ದುರ್ಯೋಧನನು ಹೇಳಿದನು. ಈ ರೀತಿ ವಿಷಾದಿಸುತ್ತಿರುವ ದುರ್ಯೋಧನನಿಗೆ ಸಂತೋಷವನ್ನುಂಟುಮಾಡಲು ಕುರುವೃದ್ಧನು, ಪ್ರತಾಪಶಾಲಿಯೂ ಆದ ಭೀಷ್ಮನು ಗಟ್ಟಿಯಾಗಿ ಸಿಂಹನಾದ ಮಾಡಿ ಶಂಖವನ್ನೂದಿದನು. ತರುವಾಯ ಪಣವ, ಆನಕ, ಗೋಮುಖ, ಶಂಖ, ಭೇರಿ ಮುಂತಾದ ವಾದ್ಯಗಳು ಒಟ್ಟಿಗೆ ಬಾರಿಸಲ್ಪಟ್ಟುವು. ಈ ಶಬ್ದವು ಎಲ್ಲಾ ಕಡೆಗೂ ವ್ಯಾಪಿಸಿತು. |
| **ತತಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ**<br>**ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದದ್ಮತುಃ॥1-14॥** |
| **ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ**<br>**ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ॥1-15॥** |

| |
|---|
| **ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ**<br>**ನಕುಲಸ್ಸಹದೇವಶ್ಚ ಸುಘೋಷಮಣಿಪುಷ್ಪಕೌ ॥1-16॥** |
| **ಕಾಶ್ಯಶ್ಚ ಪರಮೇಷ್ವಾಸ ಶಿಖಂಡೀ ಚ ಮಹಾರಥಃ**<br>**ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚಾಪರಾಜಿತಃ ॥1-17॥** |
| **ದ್ರುಪದೋ ದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ**<br>**ಸೌಭದ್ರಶ್ಚ ಮಹಾಬಾಹುಶ್ಶಂಖಾನ್ ದಧ್ಮುಃ ಪೃಥಕ್ ಪೃಥಕ್ ॥1-18॥** |
| **14-18.** ಅನಂತರ ಕೃಷ್ಣಾರ್ಜುನರು ಶ್ವೇತಾಶ್ವಗಳನ್ನು ಹೂಡಿದ ದಿವ್ಯ ರಥದಲ್ಲಿ ಕುಳಿತುಕೊಂಡೇ ದಿವ್ಯವಾದ ಪಾಂಚಜನ್ಯವೆಂಬ ಶಂಖವನ್ನು ಶ್ರೀಕೃಷ್ಣನೂ, ದೇವದತ್ತವೆಂಬ ಶಂಖವನ್ನು ಧನಂಜಯನೂ ಊದಿ ಧ್ವನಿಮಾಡಿದರು. ಭಯಂಕರ ಕೃತ್ಯಗಳನ್ನು ಮಾಡಲು ಸಮರ್ಥನಾದ ವೃಕೋದರನು1=ಭೀಮಸೇನನು ಪೌಂಡ್ರವೆಂಬ ಮಹಾಶಂಖವನ್ನು ಊದಿದನು. ಕುಂತೀಕುಮಾರನಾದ ಯುಧಿಷ್ಠಿರನು ಅನಂತವಿಜಯವೆಂಬ ಶಂಖವನ್ನೂ, ನಕುಲನು ಸುಘೋಷವೆಂಬ ಶಂಖವನ್ನೂ, ಸಹದೇವನು ಮಣಿಪುಷ್ಪಕವೆಂಬ ಶಂಖವನ್ನೂ ಊದಿದರು. ಮಹಾರಥಿಕರಾದ ಕಾಶ್ಯ, ಶಿಖಂಡೀ, ಧೃಷ್ಟದ್ಯುಮ್ನ, ವಿರಾಟ, ಅಪರಾಜಿತನಾದ ಸಾತ್ಯಕಿ, ದ್ರುಪದ, ದ್ರೌಪದೀಪುತ್ರ - ಅಭಿಮನ್ಯು ಮುಂತಾದ ಶೂರರು ಪ್ರತ್ಯೇಕ ಪ್ರತ್ಯೇಕವಾಗಿ ತಮ್ಮತಮ್ಮ ಶಂಖಗಳನ್ನು ಧ್ವನಿಮಾಡಿದರು. |
| 1 ತೀಕ್ಷ್ಣಶ್ಚೈವ ಪ್ರಚಂಡಷ್ಟ ವೃಕೋ ನಾಮಾನನೋ ಮತಃ<br>ಸ ಪಾಂಡವಸ್ಯ ಜಠರೇ ತೇನ ಭೀಮೋ ವೃಕೋದರಃ |
| ಅಪರಿಮಿತಾಹಾರವನ್ನು ಜೀರ್ಣಮಾಡಿಸುವಂತಹ ಪ್ರಚಂಡವಾದ 'ವೃಕ' ಎಂಬ ಅಗ್ನಿಯು ಭೀಮನ ಉದರದಲ್ಲಿರುವುದರಿಂದ ಅವನಿಗೆ ವೃಕೋದರ ಎಂಮ ಹೆಸರು. |
| **ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್**<br>**ನಭಶ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್ ॥1-19॥** |
| **19.**ಪಾಂಡವಪಕ್ಷದ ವೀರಾಗ್ರಣಿಗಳ ಆ ಶಂಖನಾದವು ಭೂಮ್ಯಂತರಿಕ್ಷಗಳಲ್ಲಿ ವ್ಯಾಪಿಸಿ ಪ್ರತಿಧ್ವನಿಯನ್ನು ಹುಟ್ಟಿಸಿ ಧೃತರಾಷ್ಟ್ರ ಪುತ್ರರ ಹೃದಯವನ್ನು ಭೇದಿಸುವಂತಿದ್ಧಿತು. ಅದನ್ನು ಕೇಳಿದ ಕೂಡಲೆ ನಿನ್ನ ಪುತ್ರರು ತಮಗೆ ವಿನಾಶಕಾಲವು ಸನ್ನಿಹಿತವಾಯಿತೆಂದು ತಿಳಿದರು. |
| **ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ**<br>**ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಂಡವಃ॥1-20॥** |

ಹೃಷೀಕೇಶಂ ತದಾ ವಾಕ್ಯಮಿದಮಾಹ ಮಹೀಪತೇ

ಅರ್ಜುನ ಉವಾಚ

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ॥1-21॥

ಯಾವದೇತಾನ್ನಿರೀಕ್ಷೇಹಂ ಯೋದ್ಧುಕಾಮಾನವಸ್ಥಿತಾನ್

ಕೈರ್ಮಯಾ ಸಹ ಯೋದ್ಧವ್ಯಮಸ್ಮಿನ್ ರಣಸಮುದ್ಯಮೇ ॥1-22॥

ಯೋತ್ಸ್ಯಮಾನಾನವೇಕ್ಷೇಹಂ ಯ ಏತೇಽತ್ರ ಸಮಾಗತಾಃ

ಧಾರ್ತರಾಷ್ಟ್ರಸ್ಯ ದುರ್ಬುದ್ಧೇರ್ಯುದ್ಧೇ ಪ್ರಿಯಚಿಕೀರ್ಷವಃ॥1-23॥

**20-23.** ಧೃತರಾಷ್ಟ್ರಮಹಾರಾಜಾ! ಅನಂತರ ಯುದ್ಧ ಮಾಡಲು ಸಿದ್ಧರಾದ ನಿನ್ನ ಮಕ್ಕಳನ್ನು ನೋಡಿ ಬಾಣಗಳನ್ನು ಬಿಡುವ ಕಾಲವು ಸಮೀಪಿಸುತ್ತಿರಲಾಗಿ ಅರ್ಜುನನು ಇಂದ್ರಿಯಪ್ರೇರಕನಾದ ಶ್ರೀಕೃಷ್ಣನನ್ನು ಕುರಿತು ' ಅಚ್ಯುತಾ ! ಈ ಯುದ್ಧ ಸಮಾರಂಭದಲ್ಲಿ ನಾನು ಯಾರೊಡನೆ ಯುದ್ಧ ಮಾಡಬೇಕು? ದುರ್ಬುದ್ಧಿಯಾದ ದುರ್ಯೋಧನನಿಗೆ ಯುದ್ಧದಲ್ಲಿ ಅನುಕೂಲಮಾಡಬೇಕೆಂದು ಬಂದಿರುವವರು ಯಾರು? ಯುದ್ಧಾರ್ಥಿಗಳಾಗಿ ನಿಂತಿರುವ ಆ ಯೋಧರನ್ನೆಲ್ಲಾ ನಾನು ನೋಡುತೇನೆ. ಅದುವರೆಗೂ ನನ್ನ ರಥವನ್ನು ಉಭಯ ಸೈನ್ಯಗಳ ಮಧ್ಯದಲ್ಲಿ ನಿಲ್ಲಿಸು' ಎಂದು ಕೇಳಿಕೊಂಡನು.

ಸಂಜಯ ಉವಾಚ

ಏವಮುಕ್ತೋ ಹೃಷಿಕೇಶೋ ಗುಡಾಕೇಶೇನ ಭಾರತ

ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಮ್॥1-24॥

ಭೀಷ್ಮದ್ರೋಣಪ್ರಮುಖತಸ್ಸರ್ವೇಷಾಂ ಚ ಮಹೀಕ್ಷಿತಾಮ್

ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ॥1-25॥

**24-25.** ಸಂಜಯನು ಹೇಳುತ್ತಾನೆ:- ರಾಜನೇ! ಜಿತನಿದ್ರನಾದ ಅರ್ಜುನನಿಂದ ಈ ರೀತಿ ಪ್ರಾರ್ಥಿತನಾಗಿ, ಸರ್ವಂದ್ರಿಯಪ್ರೇರಕನಾದ ಶ್ರೀಕೃಷ್ಣನು ಸಕಲ ರಾಜರ ಸಮಕ್ಷಮದಲ್ಲಿ ಭೀಷ್ಮದ್ರೋಣಾದಿಗಳಿದಿರಿಗೆ ಪಾರ್ಥನ ರಥವನ್ನು ನಿಲ್ಲಿಸಿ, ಪಾರ್ಥಾ! ಯುದ್ಧಕ್ಕಾಗಿ ನೆರೆದಿರುವ ಈ ಕೌರವರನ್ನು ನೋಡೆಂದು ಹೇಳಿದನು.

| |
|---|
| ತತ್ರಾಪಶ್ಯತ್ಸ್ಥಿತಾನ್ ಪಾರ್ಥಃ ಪಿತೄನಥ ಪಿತಾಮಹಾನ್<br>ಆಚಾರ್ಯಾನ್ಮಾತುಲಾನ್ಭ್ರಾತೄನ್ಪುತ್ರಾನ್ಪೌತ್ರಾನ್ಸಖೀಂಸ್ತಥಾ ॥1-26॥ |
| ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ<br>ತಾನ್ ಸಮೀಕ್ಷ್ಯ ಸ ಕೌಂತೇಯಸ್ಸರ್ವಾನ್ ಬಂಧೂನವಸ್ಥಿತಾನ್॥1-27॥ |
| ಕೃಪಯಾ ಪರಯಾಽವಿಷ್ಟೋ ವಿಷೀದನ್ನಿದಮಬ್ರವೀತ್<br>ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಂ॥1-28॥ |
| ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ<br>ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ॥1-29॥ |
| ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ ಪರಿದಹ್ಯತೇ<br>ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ॥1-30॥ |

**26-30.** ಪಾರ್ಥನು ಆ ಎರಡು ಪಕ್ಷಗಳ ಸೈನ್ಯದಲ್ಲಿರುವ ಭೂರಿಶ್ರವಸ್ಸು ಮುಂತಾದ ಪಿತೃಗಳು, ಭೀಷ್ಮಾದಿಪಿತಾಮಹರು, ದ್ರೋಣರೇ ಮೊದಲಾದ ಆಚಾರ್ಯರು, ಶಲ್ಯಾದಿ ಮಾತುಲರು, ದುರ್ಯೋಧನಾದಿ ಭ್ರಾತೃಗಳು - ಅವರ ಪುತ್ರರು, ಪೌತ್ರರು, ಸ್ನೇಹಿತರು, ಮಾವಂದಿರು, ಸುಹೃತ್ತುಗಳು (ಪ್ರತ್ಯುಪಕಾರದ ಆಶೆಯಿಲ್ಲದೆ ಉಪಕಾರ ಮಾಡುವ ಸ್ನೇಹಿತರು) ಇತ್ಯಾದ್ಯನೇಕ ಬಂಧುಗಳನ್ನು ನೋಡಿದನು. ಯುದ್ಧಕ್ಕಾಗಿ ನಿಂತಿರುವ ಆ ಬಂಧುಗಳನ್ನು ನೋಡಿದ ಕೂಡಲೇ ಕೌಂತೇಯನಿಗೆ ಮನಸ್ಸು ಬದಲಾಯಿಸಿತು. ಬಂಧುಗಳಲ್ಲಿ ದಯೆಯುಂಟಾಗಿ ವಿಷಾದ(ಮೋಹಮೂಲಕವಾದ ಶೋಕದಿಂದಾಗುವ ಮನೋದೌರ್ಬಲ್ಯವು ವಿಷಾದವೆನಿಸುವುದು. ಇದು ಯಾವ ಕೆಲಸ ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲ)ಪಡುತ್ತ ಹೀಗೆ ಹೇಳಿದನು;1 'ಕೃಷ್ಣಾ! ಯುದ್ಧ ಮಾಡಬೇಕೆಂದು ಬಂದಿರುವ ಈ ಬಂಧುಜನರನ್ನು ನೋಡಿ ಹಸ್ತಾದ್ಯವಯವಗಳು ಕುಗ್ಗತಿವೆ. ಮುಖವು ಬಾಡುತ್ತಿದೆ. ಶರೀರದಲ್ಲಿ ನಡುಕವು, ರೋಮಾಂಚವೂ ಸಹ ಉಂಟಾಗಿದೆ. ಕೈಯಲ್ಲಿರುವ ಗಾಂಡೀವ ಧನುಸ್ಸು ಕೆಳಗೆ ಬೀಳುತ್ತಿದೆ. ಚರ್ಮವಾದರೋ ಸುಡುತ್ತಿದೆ. ನಿಲ್ಲುವುದಕ್ಕೂ ಸಾಮರ್ಥ್ಯವಿಲ್ಲ; ಮನಸ್ಸು ಪಲ್ಲಟವಾದಂತಿದೆ.

1.ಯತಃ ಕರ್ಷಸಿ ದೇವೇಶ ನಿಯಮ್ಯ ಸಕಲಂ ಜಗತ್
ಅತೋ ವದಂತಿ ಮುನಯಃ ಕೃಷ್ಣಂ ತ್ವಾಂ ಬ್ರಹ್ಮವಾದಿನಃ – ಮಹಾಕೂರ್ಮಪುರಾಣ

ಅವರವರಿಗೆ ಯೋಗ್ಯ ಕಾರ್ಯಗಳಲ್ಲಿ ಪ್ರೇರಿಸುತ್ತ ಸಕಲ ಲೋಕಕರ್ಷಕ(ನಿಯಾಮಕ)ನಾದುದರಿಂದ ಕೃಷ್ಣನಾಮಕನು. 'ಕೃಷಿರ್ಭೂವಾಚಕಶ್ಶಬ್ದಃ ಣೋ ಹಿ ನಿರ್ವೃತಿವಾಚಕಃ' ಎಂಬ ಪ್ರಮಾಣಾಂತರಾನುಸಾರವಾಗಿ ಸದಾ ಆನಂದರೂಪನಾದುದರಿಂದ ಕೃಷ್ಣನಾಮವು ಅನ್ವರ್ಥವೆಂದು ತಿಳಿಯಬೇಕು.

ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ

ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ॥**1-31**॥

ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ |

ಕಿಂ ನೋ ರಾಜ್ಯೇನ ಗೋವಿಂದ ಕಿಂ ಭೋಗೈರ್ಜೀವಿತೇನ ವಾ॥**1-32**॥

ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಸ್ಸುಖಾನಿ ಚ |

ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ॥**1-33**॥

**31-33.** 2ಕೇಶವಾ! ಎಲ್ಲೆಲ್ಲೂ ಅಪಶಕುನಗಳೇ ಕಂಡುಬರುತ್ತಿವೆ. ಯುದ್ಧ ಮಾಡಿ ಬಂಧುಜನರನ್ನು ಸಂಹರಿಸುವುದರಿಂದ ಶ್ರೇಯಸ್ಸನ್ನು ಕಾಣಲಾರೆನು. ಕೃಷ್ಣಾ! ಜಯ, ರಾಜ್ಯ ಸುಖ ಇವುಗಳಾವುದನ್ನೂ ನಾನು ಅಪೇಕ್ಷಿಸುವುದಿಲ್ಲ. ಯಾವ ಬಂಧುವರ್ಗಕ್ಕೋಸ್ಕರ ರಾಜ್ಯ, ಭೋಗ, ಸುಖಗಳು ನಮಗೆ ಅಪೇಕ್ಷಿತವಾಗಿವೆಯೋ, ಆ ಬಂಧುಗಳೆಲ್ಲರೂ ಪ್ರಾಣ, ಧನಾಡ್ಯಾಶಗಳನ್ನು ತೊರೆದು ಯುದ್ಧಕ್ಕೆ ಸನ್ನದ್ಧರಾಗಿ ನಿಂತಿರುವರು. ಅವರನ್ನೆಲ್ಲಾ ಸಂಹರಿಸಿದ ಬಳಿಕ ಶೂನ್ಯವಾದ ಈ ರಾಜ್ಯದಿಂದೇನು ಫಲ? ಸ್ವಜನರೆಲ್ಲಾ ಹೋದಮೇಲೆ ಭೋಗವೆಂತಹುದು? ಎಲ್ಲರನ್ನೂ ಕಳೆದುಕೊಂಡು ಬದುಕಿ ಫಲವೇನು?

2.ಹಿರಣ್ಯಗರ್ಭಃ ಕಃ ಪ್ರೋಕ್ತಃ ಈಶಶ್ಯಂಕರ ಏವ ಚ

ಸೃಷ್ಟ್ಯಾದಿನಾವರ್ತಯತಿ ತಾವತಃ ಕೇಶವೋ ಭಗವಾನ್ – ಹರಿವಂಶ

ಆಚಾರ್ಯಾಃ ಪಿತರಃ ಪುತ್ರಾಸ್ತಥೈವ ಚ ಪಿತಾಮಹಾಃ

ಮಾತುಲಾಶ್ಶ್ವಶುರಾಃ ಪೌತ್ರಾಶ್ಶ್ಯಾಲಾಸ್ಸಂಬಂಧಿನಸ್ತಥಾ॥**1-34**॥

ಏತಾನ್ ನ ಹಂತುಮಿಚ್ಛಾಮಿ ಘ್ನತೋಽಽಪಿ ಮಧುಸೂದನ

ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ॥**1-35**॥

ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ

ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ॥**1-36**॥

ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ಸ ಬಾಂಧವಾನ್

ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ॥**1-37**॥

**34-37.** ಈ ಯುದ್ಧದಲ್ಲಿ ಗುರುಗಳು, ಪಿತೃಗಳು, ಪುತ್ರರು, ಭೀಷ್ಮಾದಿಗಳು, ಸೋದರಮಾವಂದಿರು, ದ್ರುಪದಾದಿ ಮಾವಂದಿರು, ಪೌತ್ರರು, ಶಾಲಕರು ಇತರ ಬಂಧುಗಳೂ ಕೂಡ ಸೇರಿರುವರು. ಮಧುಸೂದನಾ! ಈ ಶತ್ರುಗಳು ನನ್ನನ್ನು ಸಂಹರಿಸಿದರೂ ಚಿಂತೆಯಿಲ್ಲ; ನಾನು ಮಾತ್ರ ಇವರನ್ನು ಕೊಲ್ಲಲಾರೆನು! ಮೂರು ಲೋಕಗಳ ಸಾಮ್ರಾಜ್ಯಾಧಿಪತ್ಯವು ಲಭಿಸುವುದಾದರೂ ಇಂತಹ ಸ್ವಜನ ಹತ್ಯಾತ್ಮಕವಾದ ಯುದ್ಧವನ್ನು ಮಾಡಲಾರೆನು! ಹೀಗಿರುವಾಗ ಕೇವಲ ಅಲ್ಪವಾದ ಭೂಲೋಕಾಧಿಪತ್ಯಕ್ಕಾಗಿ ಈ ಯುದ್ಧವನ್ನು ಮಾಡುವೆನೇ? ಎಂದಿಗೂ ಇಲ್ಲ. ಜನಾರ್ದನಾ! ಧೃತರಾಷ್ಟ್ರ ಕುಮಾರರನ್ನು ಸಂಹರಿಸುವುದರಿಂದ ನಮಗೇನು ಫಲ? ಈ ಲೋಕದಲ್ಲಿಯಾಗಲೀ- ಪರಲೋಕದಲ್ಲಿಯಾಗಲೀ ಸುಖವು ಲಭಿಸಲಾರದು. [1]ಆತತಾಯಿಗಳನ್ನು ಸಂಹರಿಸಿದರೆ ಪಾಪವಿಲ್ಲವೆಂದು ಶಾಸ್ತ್ರದಲ್ಲಿ ಹೇಳಿದೆ. ಈ ಧೃತರಾಷ್ಟ್ರನಂದನರು ಆತತಾಯಿಗಳೇ ಆಗಿರುವರು. ಆದರೆ ಇವರ ಸಹಾಯಕ್ಕಾಗಿ ಬಂದಿರುವ ಭೀಷ್ಮಾದಿಗಳು ಆತತಾಯಿಗಳಲ್ಲ. ಅಂತಹವರನ್ನು ಯುದ್ಧದಲ್ಲಿ ಕೊಲ್ಲಬೇಕಾಗುವುದರಿಂದ ನಮಗೆ ಪಾಪವು ಬಂದೇ ಬರುತ್ತದೆ. ಆದುದರಿಂದ ಬಂಧುಗಳಾದ ದುರ್ಯೋಧನಾದಿಗಳನ್ನು ಕೊಲ್ಲಬಾರದು, ಲಕ್ಷ್ಮೀಪತಿಯೇ! ಸ್ವಜನರನ್ನೆಲ್ಲಾ ಕೊಂದು ನಾವು ಸುಖಪಡುವುದಾದರೂ ಹೇಗೆ?

1.ಅಗ್ನಿದೋ ಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ ಕ್ಷೇತ್ರದಾರಾಪಹಾರೀ ಚ ಷಡೈತೇ ಹಾತಾಯಿನಃ

ಮನೆ ಮುಂತಾದುವುಗಳಿಗೆ ಬೆಂಕಿಯಿಡುವವನು, ವಿಷಕೊಡುವವನು, ಆಯುಧಪಾಣಿಯಾಗಿ ಕೊಲ್ಲಲು ಬರುವವನು, ಕ್ಷೇತ್ರ ಮತ್ತು ಸ್ತ್ರೀ ಇವರನ್ನು ಅಪಹರಿಸುವವನು ಈ ಆರು ಮಂದಿಯೂ ಆತತಾಯಿಗಳೆನಿಸುವರು.

ಯದ್ಯಪ್ಯೇತೇ ನ ಪಶ್ಯಂತಿ ಲೋಭೋಽಪಹತಚೇತಸಃ
ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಮ್॥**1-38**॥

ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಂ
ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ ॥**1-39**॥

**38-39.**ಈ ಕೌರವರಾದರೋ ರಾಜ್ಯಾಬಿಲೋಭದಿಂದ ಬುದ್ಧಿಹೀನರಾಗಿ, ವಿವೇಚನಾ ಶಕ್ತಿಯಿಲ್ಲದೆ, ಕುಲನಾಶಮಾಡುವುದರಿಂದಾಗುವ ಅನರ್ಥವನ್ನೂ, ಮಿತ್ರದ್ರೋಹದಿಂದ ಬರುವ ಪಾಪವನ್ನೂ

ಲಕ್ಷಿಸುವವರಲ್ಲ. ಜನಾರ್ದನಾ! ಕುಲಕ್ಷಯದಿಂದಾಗುವ ಅನರ್ಥವನ್ನು ತಿಳಿದಿರುವ ನಾವು ಇಂತಹ ಪಾಪಕೃತ್ಯವನ್ನು ತಡೆಗಟ್ಟದಿರುವುದು ಹೇಗೆ? ಆದಕಾರಣ ಖಂಡಿತವಾಗಿಯೂ ಈ ಯುದ್ಧವು ಮಾಡತಕ್ಕುದಲ್ಲ.

**ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ**
**ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ॥1-40॥**

**ಅಧರ್ಮಾಭಿಭವಾತ್ ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ**
**ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ॥1-41॥**

**ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ**
**ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ॥1-42॥**

**ದೋಷೈರೇತೈಃ ಕುಲಾಘ್ನಾನಾಂ ವರ್ಣಸಂಕರಕಾರಕೈಃ**
**ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥1-43॥**

**ಉತ್ಸನ್ನ ಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ**
**ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ॥1-44॥**

**40-44.**ಕುಲನಾಶವಾಗಲಿ; ಅದರಿಂದೇನು? ಎಂದರೆ:- ಕುಲನಾಶವಾದರೆ ವಂಶ ಪರಂಪರಾಪ್ರಾಪ್ತವಾದ ಕುಲಧರ್ಮಗಳು ನಷ್ಟವಾಗುತ್ತವೆ. ಧರ್ಮವು ಹೋದರೆ ಕುಲವೆಲ್ಲವೂ ಅಧರ್ಮಮಯವಾಗುವುದು. ಅದರಿಂದ ಕುಲಸ್ತ್ರೀಯರು ದುಷ್ಟರಾಗುತ್ತಾರೆ. ಸ್ತ್ರೀಯರು ದುಷ್ಟರಾದರೆ ಜಾತಿಸಾಂಕರ್ಯವುಂಟಾಗುತ್ತದೆ. ಈ ವರ್ಣಸಾಂಕರ್ಯವು ಅದರಿಂದಾಗುವ ಪುತ್ರಪೌತ್ರಾದಿ ಕುಲಕ್ಕೂ, ಕುಲನಾಶಕರಿಗೂ ನರಕವನ್ನುಂಟು ಮಾಡುವುದು. ಇವರ ಪಿತೃಗಳಿಗೆ ಶ್ರಾದ್ಧಾದಿಗಳನ್ನು ಮಾಡುವವರಿಲ್ಲದಂತಾಗಿ ಅವರು ನರಕದಲ್ಲಿ ಬೀಳುತ್ತಾರೆ. ಹೀಗೆ ಕುಲನಾಶಕರಿಂದಾಚರಿಸಲ್ಪಟ್ಟ ಜಾತಿಸಾಂಕರ್ಯ ಕಾರಣವಾದ ಈ ದುಷ್ಕೃತ್ಯಗಳಿಂದ ಕ್ಷತ್ರಿಯ ಜಾತಿಗೆ ನಿಯತವಾದ ಧರ್ಮಗಳೂ, ವಂಶಪರಂಪರಾಗತವಾದ ಕುಲಧರ್ಮಗಳೂ ಹಾಳಾಗುತ್ತವೆ. ಜನಾರ್ದನಾ! ಹೀಗೆ ಜಾತಿ ಕುಲಧರ್ಮಗಳನ್ನು ನಾಶಪಡಿಸಿಕೊಂಡ ಮನುಷ್ಯರಿಗೆ ನಿರಂತರ ನರಕವಾಸವಾಗುವುದೆಂದು ನಾವು ಜ್ಞಾನಿಗಳಿಂದ ಕೇಳಿರುವೆವು.

| |
|---|
| ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಂ<br>ಯದ್ರಾಜ್ಯ ಸುಖಲೋಭೇನ ಹಂತುಂ ಸ್ವಜನಮುದ್ಯತಾಃ ॥1-45॥ |
| ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ<br>ಧಾರ್ತರಾಷ್ಟ್ರಾರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್॥1-46॥ |
| **45-46.** ನಾವು ರಾಜ್ಯಸುಖದಾಶೆಯಿಂದ ಸ್ವಜನರನ್ನು ಸಂಹರಿಸಲುದ್ಯುಕ್ತರಾಗಿ ಮಹಾ ಪಾಪಕೃತ್ಯವನ್ನು ಮಾಡಲು ಸನ್ನದ್ಧರಾಗಿರುವೆವು. ಅಯ್ಯೋ! ಕಷ್ಟ! ಕಷ್ಟ! ಒಂದು ವೇಳೆ ಶತ್ರುಗಳು ನನ್ನನ್ನು ಸಂಹರಿಸಲು ಬಂದರೂ ನಾನು ಮಾತ್ರ ಅದಕ್ಕೆ ಪ್ರತಿಕ್ರಿಯೆಯನ್ನು ಮಾಡುವುದಿಲ್ಲ; ಹೆಚ್ಚೇನು! ಆಯುಧವನ್ನೇ ಹಿಡಿಯುವುದಿಲ್ಲ. ಹಾಗೆ ಸುಮ್ಮನಿರುವ ನನ್ನನ್ನು ಶಸ್ತ್ರಪ್ರಾಣಿಗಳಾದ ಧೃತರಾಷ್ಟ್ರ ಪುತ್ರರು ಯುದ್ಧದಲ್ಲಿ ಕೊಂದರೆ ಕೊಲ್ಲಲಿ! ಅದೂ ನನಗೆ ಶ್ರೇಯಸ್ಕರವೇ ಸರಿ. |

ಸಂಜಯ ಉವಾಚ

| |
|---|
| ಏವಮುಕ್ತ್ವಾರ್ಜುನಃ ಸಂಖ್ಯೇ ರಥೋಪಸ್ಥ ಉಪಾವಿಶತ್<br>ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನ ಮಾನಸಃ॥1-47॥ |
| **47.** ಈ ರೀತಿ ಅರ್ಜುನನು ತನಗೆ ತೋರಿದುದನ್ನು ಹೇಳಿ ಶೋಕದಿಂದ ಚಿತ್ತಚಾಂಚಲ್ಯವನ್ನು ಹೊಂದಿ ಬಾಣಬಿಲ್ಲುಗಳನ್ನು ಕೆಳಗಿಟ್ಟು ಯುದ್ಧರಂಗದಲ್ಲಿದ್ದ ರಥಮಧ್ಯದಲ್ಲಿ ಕುಳಿತನು ಎಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದನು. |

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ
ಶ್ರೀಕೃಷ್ಣಾರ್ಜುನಸಂವಾದೇ ಅರ್ಜುನವಿಷಾದಯೋಗೋ ನಾಮ
ಪ್ರಥಮೋऽಧ್ಯಾಯಃ॥1-47]॥

## ದ್ವಿತೀಯೋऽಧ್ಯಾಯಃ॥2-[72]॥

ಸಂಜಯ ಉವಾಚ -

| |
|---|
| ತಂ ತಥಾ ಕೃಪಯಾವಿಷ್ಟಮಶ್ರುಪೂರ್ಣಾಕುಲೇಕ್ಷಣಂ<br>ವಿಷೀದಂತಮಿದಂ ವಾಕ್ಯಮುವಾಚ ಮಧುಸೂದನಃ ॥2-1॥ |

ಶ್ರೀ ಭಗವಾನುವಾಚ –

| |
|---|
| ಕುತಸ್ತ್ವಾ ಕಷ್ಮಲಮಿದಂ ವಿಷಮೇ ಸಮುಪಸ್ಥಿತಂ<br>ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ॥2-2॥ |
| ಕ್ಲೈಭ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ<br>ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥2-3॥ |
| **1-3.** ಸಂಜಯನು ಹೇಳುತ್ತಾನೆ:- ಈ ರೀತಿ ದಯಾಯುಕ್ತನಾಗಿ ಶೋಕಿಸಿದುದರಿಂದ ಕಣ್ಣೀರು ತುಂಬಿ ನೋಡುವುದಕ್ಕೂ ಆಗದಂತೆ ವ್ಯಾಕುಲಿತವಾದ ಕಣ್ಣುಳ್ಳವನಾಗಿ ವಿಷಾದಪಡುತ್ತಿರುವ ಅರ್ಜುನನನ್ನು ಕುರಿತು ಶ್ರೀಕೃಷ್ಣನು ಹೀಗೆ ಹೇಳಿದನು:- ಅರ್ಜುನಾ! ಸಂಕಟಕಾಲವಾದ ಈ ವಿಷಮಸಂದರ್ಭದಲ್ಲಿ ಈ ಮೋಹವು ನಿನಗೇಕೆ ಬಂದಿತು? ಇಂತಹ ಮೋಹವು ನಿಮ್ಮ ಹಿರಿಯರಾರಿಗೂ ಬಂದಿಲ್ಲ. ಇದು ಸ್ವರ್ಗಕ್ಕೆ ವಿರೋಧಿಯು, ಕ್ಷತ್ರಿಯರಿಗೆ ಅಪಕೀರ್ತಿಕರವು. ಆದಕಾರಣ ಅಧೈರ್ಯವನ್ನು ಹೊಂದಬೇಡ! ಪಾರ್ಥಾ! ಈ ಕಾರ್ಯವು ನಿನಗೆ ಯೋಗ್ಯವಲ್ಲ. ಶತ್ರು ಸಂಹಾರಕನಾದ ಅರ್ಜುನಾ! ಹೇಸುವಂತಹ ಈ ಮನೋದೌರ್ಬಲ್ಯವನ್ನು ಬಿಟ್ಟೇಳು! ಯುದ್ಧಕ್ಕೆ ಸನ್ನದ್ಧನಾಗು – ಎಂದು ಶ್ರೀಕೃಷ್ಣನು ಹೇಳಿದನು. |

ಅರ್ಜುನ ಉವಾಚ

| |
|---|
| ಕಥಂ ಭೀಷ್ಮಮಹಂ ಸಂಖ್ಯೇ ದ್ರೋಣಂ ಚ ಮಧುಸೂದನ<br>ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹವರಿಸೂದನ॥2-4॥ |
| ಗುರೂನಹತ್ವಾ ಹಿ ಮಹಾನುಭಾವಾನ್<br>ಶ್ರೇಯೋ ಭೋಕ್ತುಂ ಭೈಕ್ಷ ಮಪೀಹ ಲೋಕೇ<br>ಹತ್ವಾರ್ಥಕಾಮಾಂಸ್ತು ಗುರೂನಿಹೈವ<br>ಭುಂಜೀಯ ಭೋಗಾನ್ರುಧಿರಪ್ರದಿಗ್ಧಾನ್ ॥2-5॥ |
| **4-5.** ಅರ್ಜುನನು ಹೇಳುತ್ತಾನೆ:- ಶತ್ರುನಾಶಕನಾದ ಮಧುಸೂದನಾ! ದ್ರೋಣಭೀಷ್ಮಾಚಾರ್ಯರು ನಮಗೆ ಪೂಜ್ಯರಲ್ಲವೆ? ಅಂತಹ ಪೂಜ್ಯರಿಗೆ ಪ್ರತಿಯಾಗಿ ಯುದ್ಧ ಹೂಡಿ ಬಾಣಗಳಿಂದ ಅವರನ್ನು ಹೊಡೆಯುವುದು ಹೇಗೆ? ಭಗವದ್ಭಕ್ತ್ಯಾದಿ ಗುಣಸಂಪನ್ನರಾದ ಪೂಜ್ಯ ದ್ರೋಣಾದಿ ಗುರುಗಳನ್ನು ಸಂಹರಿಸುವ ಗೋಜಿಗೆ ಹೋಗದೆ ಈ ಲೋಕದಲ್ಲಿ ಭಿಕ್ಷಾಟನೆಯಿಂದಾದರೂ ಹೊಟ್ಟೆ ಹೊರೆಯುವುದು ಲೇಸು. ಹಾಗೆ ಮಾಡಿದರೆ ಪರಲೋಕದಲ್ಲಿಯಾದರೂ ದುಃಖಕ್ಕೀಡಾಗದೆ ಸುಖಿಸಬಹುದು. ಅಷ್ಟೇ ಅಲ್ಲ; ಈ ಗುರುಹನನವು ಈ ಲೋಕದಲ್ಲಿಯೂ ದುಃಖಕರವೇ ಸರಿ. ಹೇಗೆಂದರೆ - ಸುಖಸಾಧನ ವಿಷಯಾಕಾಂಕ್ಷಿಗಳಾದ ಗುರುಗಳನ್ನು ಸಂಹರಿಸಿ ಅವರು |

ಭೋಗಿಸುತ್ತಿದ್ದ ಆಸನಾದಿ ಭೋಗಸಾಧನ ವಸ್ತುಗಳಲ್ಲಿ ಅವರ ರಕ್ತವನ್ನು ಸುರಿಸಿ ಅಂತಹ ಜುಗುಪ್ಸಾವಹವಾದ ಕಷ್ಮಲದಿಂದ ಕೂಡಿದ ಆಸನಾದಿಗಳಲ್ಲಿಯೇ ಕುಳಿತು ಭೋಗಪಡುವುದು ಹೇಗೆ? ಇದು ಪರಲೋಕದ ದಃಖಕ್ಕಿಂತಲೂ ಹೆಚ್ಚಿನ ದುಃಖಕರವೇ ಸರಿ !

**ನ ಚೈತದ್ವಿದ್ಮಃ ಕತರನ್ನೊ ಗರೀಯೋ**
**ಯದ್ವಾ ಜಯೇಮ ಯದಿ ವಾ ನೋ ಜಯೇಯುಃ**
**ಯಾನೇವ ಹತ್ವಾ ನ ಜಿಜೀವಿಷಾಮ**
**ಸ್ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ॥2-6॥**

**ಕಾರ್ಪಣ್ಯದೋಷೋಪಹತ ಸ್ವಭಾವಃ**
**ಪೃಚ್ಛಾಮಿ ತ್ವಾಂ ಧರ್ಮ ಸಮೂಢಚೇತಾಃ**
**ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ**
**ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್॥2-7॥**

**ನ ಹಿ ಪ್ರಪಶ್ಯಾಮಿ ಮಮಾಪನುದ್ಯಾ-**
**ದ್ಯಚ್ಛೋಕಮುಚ್ಛೋಷಣಮಿಂದ್ರಿಯಾಣಾಂ**
**ಅವಾಪ್ಯಭೂಮಾವಸಪತ್ನಮೃದ್ಧಂ**
**ರಾಜ್ಯಂ ಸುರಾಣಾಮಪಿ ಚಾಧಿಪತ್ಯಮ್॥2-8॥**

**6-8.** ಈ ಎರಡು ಪಕ್ಷಗಳಲ್ಲಿ ನಾವೇ ಬಲಾಧಿಕರೋ ಅಥವಾ ಕೌರವರೇ ಬಲಾಧಿಕರೋ? ಅದನ್ನು ತಿಳಿಯಲಾರೆವು. ನಾವೇ ಜಯಿಸುತ್ತೇವೆಯೋ ಅಥವಾ ಅವರೇ ಜಯಿಸುತ್ತಾರೆಯೋ? ಅದೂ ನಿಶ್ಚಯವಿಲ್ಲ. ಒಂದು ವೇಳೆ ನಮಗೇ ಜಯವಾದರೂ ಲಾಭವೇನು? ಯಾವ ಭೀಷ್ಮದ್ರೋಣಾದಿಗಳನ್ನು ಸಂಹರಿಸಿದರೆ ನಮ್ಮ ಬದುಕೇ ಜುಗುಪ್ಸಾವಹಾಗುವುದೋ ಅಂತಹ ಭೀಷ್ಮದ್ರೋಣಾದಿಗಳೆಲ್ಲರೂ ಇದಿರಿಗೆ ಯುದ್ಧಕ್ಕೆ ನಿಂತಿರುವರು. ಅವರನ್ನೆ: ಸಂಹಾರಮಾಡಬೇಕಾಗಿರುವ ಈ ಯುದ್ಧವನ್ನು ಹೇಗೆ ಮಾಡಲಿ? ಕಾರ್ಪಣ್ಯ (ದೈನ್ಯ ಅಥವಾ ದಾರಿದ್ರ) ಎಂಬ ದೋಷದಿಂದ ನನಗೆ ಸ್ವಾಭಾವಿಕವಾಗಿರುವ ಪಾಂಡಿತ್ಯ, ಶೌರ್ಯ ಔದರ್ಯಾದಿಗಳೆಲ್ಲವೂ ಮರೆಯಾಗಿವೆ. ಧರ್ಮವಿಷಯದಲ್ಲಿ ಮನಸ್ಸು ಮೋಹಗೊಂಡಿದೆ. ಸಂಶಯಾತ್ಮಕನಾಗಿರುವನು. ಭಿಕ್ಷಾಟನೆ-ಯುದ್ಧ ಇವೆರಡರಲ್ಲಿ ಯಾವುದನ್ನು ಮಾಡುವುದು

ಶ್ರೇಯಸ್ಕರವೋ ಅದನ್ನು ನಿರ್ಣಯಿಸಿ ಹೇಳು. ನಾನು ನಿನ್ನ ಶಿಷ್ಯನು, ನಿನಗೆ ಶರಣಾಗತನಾಗಿರುವೆನು, ಶ್ರೇಯಸ್ಕರವಾದ ಧರ್ಮಮಾರ್ಗವನ್ನು ತೋರಿಸಿ ಉದ್ಧರಿಸು. ನನ್ನ ಸಂಕಟವು ಇಂದ್ರಿಯಗಳ ಸಾರಾಸಾರ ವಿವೇಚನಾಶಕ್ತಿಯನ್ನೇ ಹಾಳುಮಾಡಿದೆ; ಅದನ್ನು ಪರಿಹರಿಸಿಕೊಳ್ಳುವ ದಾರಿಯನ್ನೇ ಕಾಣೆನು. ಯುದ್ಧ ಮಾಡಿ ರಾಜ್ಯವನ್ನು ಸಂಪಾದಿಸುವುದರಿಂದ ಶೋಕ ಪರಿಹಾರವಾಗಬಹುದಲ್ಲವೆ? ಎಂದು ನೀವು ಕೇಳಬಹುದು. ಅದೂ ಯುಕ್ತವಾಗಿ ಕಾಣುವುದಿಲ್ಲ; ದೇವಲೋಕಾಧಿಪತ್ಯವು ದೊರೆತರೂ ಈ ಬಂಧುಗುರ್ವಾದಿನಾಶಕೃತವಾದ ಶೋಕವು ಹೋಗುವುದಿಲ್ಲ. ಹೀಗಿರುವಾಗ ಈ ಯುದ್ಧದಲ್ಲಿ ಜಯ ಹೊಂದಿ ನಿಷ್ಕಂಟಕವಾದ ಭೂಮಂಡಲಾಧಿಪತ್ಯವನ್ನು ಸಂಪಾದಿಸುವ ಮಾತ್ರದಿಂದ ಬಂಧು ನಾಶಕೃತವಾದ ಈ ದುಃಖವು ಹೇಗೆ ಹೋದೀತು? ಹೋಗುವುದೇ ಇಲ್ಲ. ಆದಕಾರಣ ನಾನು ಯಾವ ಸಾರ್ವಭೌಮ ಪದವಿಯನ್ನೂ ಬಯಸುವುದಿಲ್ಲ; ಮೋಹಿತಚಿತ್ತನಾಗಿ ಸಂಕಟಕ್ಕೆ ಈಡಾಗಿರುವನು. ಇದನ್ನು ಪರಿಹರಿಸುವ ಸಮೀಚೀನೋಪಾಯವೆಂದರೆ ಅಧ್ಯಾತ್ಮ ತತ್ವಜ್ಞಾನ ಹೊರತು ಬೇರೆ ಕಾಣೆನು. ಆದುದರಿಂದ ಸ್ವಾಮಿ! ಪ್ರಕೃತದಲ್ಲಿ ಯುದ್ಧ ಕರಣ - ಭಿಕ್ಷಾಟನೆಗಳಲ್ಲಿ ಯಾವುದು ಶ್ರೇಯಸ್ಕರವೋ, ಆಧ್ಯಾತ್ಮ ತತ್ವಜ್ಞಾನಕ್ಕೆ ಯಾವುದು ದಾರಿಯೋ ಅದನ್ನು ನಿರ್ಧರಿಸಿ ಹೇಳಿ ಮಾರ್ಗವನ್ನು ತೋರಿಸಬೇಕೆಂದು ಪಾರ್ಥನು ಶ್ರೀಕೃಷ್ಣನಲ್ಲಿ ಬಿನ್ನವಿಸಿಕೊಂಡನು.

ಸಂಜಯ ಉವಾಚ

**ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂತಪಃ**
**ನ ಯೋತ್ಸ್ಯ ಇತಿ ಗೋವಿಂದಮುಕ್ತ್ವಾ ತೂಷ್ಣೀಂ ಬಭೂವ ಹ॥2-9॥**

**9.** ಜಿತನಿದ್ರನು, ಶತ್ರುಸಂಹಾರಕನೂ ಆದ ಅರ್ಜುನನು ವೇದ ಪ್ರತಿಪಾದ್ಯನು, ಸರ್ವಂದ್ರಿಯ ಪ್ರೇರಕನೂ ಆದ ಶ್ರೀಕೃಷ್ಣನಲ್ಲಿ ತನ್ನ ಸಂಕಟವನ್ನು ನಿವೇದಿಸಿಕೊಂಡು ಸ್ವಾಮೀ! ನಾನು ಯುದ್ಧ ಮಾಡುವುದಿಲ್ಲವೆಂದು ಹೇಳಿ ಸುಮ್ಮ ನಾದನು. ಆಹಾ! ಮಹಾಪರಾಕ್ರಮಿಯೂ, ಧೀರನೂ ಆದ ಅರ್ಜುನನಿಗೆ ಈ ರೀತಿ ಬುದ್ಧಿ ಯುಂಟಾದುದು ಆಶ್ಚರ್ಯ!

**ತಮುವಾಚ ಹೃಷಿಕೇಶಃ ಪ್ರಹಸನ್ನಿವ ಭಾರತ**
**ಸೇನಯೋರುಭಯೋರ್ಮಧ್ಯೇ ವಿಷೀದಂತಮಿದಂ ವಚಃ ॥2-10॥**

**10.** ಉಭಯ ಸೈನ್ಯಗಳ ಮಧ್ಯದಲ್ಲಿ ನಿಂತು ಈ ರೀತಿ ವಿಷಾದಪಡುತ್ತಿರುವ ಅರ್ಜುನನನ್ನು ನೋಡಿ ಹೃಷೀಕೇಶನು ಭಾರತಾ! ಎಂದು ಸಂಬೋಧಿಸಿ, ಆಹಾ! ಇವನು ತತ್ವೋಪದೇಶವನ್ನು

ಅಪೇಕ್ಷಿಸುತ್ತಾನೆಂಬ ಸಂತೋಷದಿಂದ ಮಂದಹಾಸಾನ್ವಿತನಾಗಿ ಉಪದೇಶಮಾಡಲಾರಂಭಿಸಿದನು ಎಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದನು. ಕರುಣಾಮಯನು, ಸಾಕ್ಷಾದ್ಭಗವದವತಾರನೂ ಆದ ಶ್ರೀಕೃಷ್ಣನು ಇದೇ ಸರಿಯಾದ ಸಂದರ್ಭವೆಂದು ಅರ್ಜುನನ್ನು ನಿಮಿತ್ತಮಾಡಿ ಸಾಧುಜನರಿಗೆ ತತ್ವಜ್ಞಾನವನ್ನುಂಟು ಮಾಡಬೇಕೆಂದು ಉಪದೇಶವನ್ನಾರಂಭಿಸಿದನು:- ಭಗವಂತನ ಮಹಿಮೆಯನ್ನರಿತು ಅವನಲ್ಲಿ ಭಕ್ತಿ ಮಾಡುತ್ತ, ಸಕಲ ಜನರೂ ಅವರವರಿಗೆ ವಿಹಿತವಾದ ಧರ್ಮಗಳನ್ನು ಮಾಡಿ, ಅವನ್ನು ಭಗವತ್ಪೂಜೆಯೆಂಬ ಭಾವನೆಯಿಂದ ಅವನಿಗೆ ಸಮರ್ಪಿಸುವುದು ಶ್ರೇಯಸ್ಕರವು, ದುಷ್ಟ ನಿಗ್ರಹ-ಶಿಷ್ಟ ಪರಿಪಾಲನೆಗಳು ಕ್ಷತ್ರಿಯನಿಗೆ ವಿಹಿತ ಕಾರ್ಯಗಳು. ಜಗಜ್ಜನಕನಾದ ಶ್ರೀನಾರಾಯಣನ ವೈರಿಗಳು ಮತ್ತು ಅವರ ಬಂಧುಜನರೂ ಕೂಡ ದುಷ್ಟರೆನಿಸುವರು. ಅಂತಹವರನ್ನು ನಿಗ್ರಹಿಸುವುದೇ ಕ್ಷತ್ರಿಯರಿಗೆ ಮುಖ್ಯ ಧರ್ಮವು. ಅರ್ಜುನಾ! ಅಂತಹ ನಿಗ್ರಹರೂಪವಾದ ಯುದ್ಧವು ನಿನಗೆ ದೈವಕೃಪೆಯಿಂದ ಒದಗಿದೆ; ಅದನ್ನು ಭಗವದಾರಾಧನೆಯೆಂದು ತಿಳಿದು, ಅಧರ್ಮ ಶಂಕೆಯನ್ನು ದೂರಮಾಡಿ ಯುದ್ಧ ತತ್ಪರನಾಗು ಎಂಬುದಾಗಿ ಗೀತಾಶಾಸ್ತ್ರದಿಂದ ಬೋಧಿಸುವವನಾಗಿ ಆದಿಯಲ್ಲಿ ನೀನು ಶಂಕಿಸುತಿರುವ ಶೋಕವು ಅವಿವೇಕಮೂಲಕವೆಂದು ಭಗವಂತನು ಹೇಳುತ್ತಾನೆ :-

ಶ್ರೀ ಭಗವಾನುವಾಚ -

**ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ**
**ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ॥2-11॥**

೧೧. ಅರ್ಜುನಾ! ನೀನು ದುರ್ಯೋಧನ ಭೀಷ್ಮದ್ರೋಣಾದಿಗಳ ವಿಷಯದಲ್ಲಿ ಶೋಕಿಸುತ್ತಿರುವೆ. ಆದರೆ ಅವರು ಶೋಕಾರ್ಹರಲ್ಲ; ದುರ್ಯೋಧನಾದಿಗಳ ಸಂಹಾರದಿಂದ ಪಾಪ ಬರುತ್ತದೆ ಮುಂತಾಗಿ ನೀನಾಡಿದ ಮಾತುಗಳೆಲ್ಲವೂ ನಿನ್ನ ಕಲ್ಪನೆಯು, ಶಾಸ್ತ್ರಸಮ್ಮತವಲ್ಲ; ಪ್ರಾಜ್ಞಮತವಿರುದ್ಧವಾಗಿದೆ. ಏಕೆಂದರೆ:- ಜನರು ಬದುಕಿರುವ ಬಂಧುಗಳ ವಿಷಯದಲ್ಲಿ ಹೇಗೆ ದುಃಖಪಡುವುದಿಲ್ಲವೋ, ಹಾಗೆಯೇ ಜ್ಞಾನಿಗಳು ಸಾಯುವುದಕ್ಕೆ ಸಿದ್ಧರಾಗಿರುವ ಬಂಧುಗಳ ವಿಷಯದಲ್ಲಿಯೂ ದುಃಖಿಸುವುದಿಲ್ಲ. (ದುರ್ಯೋಧನಾದಿಗಳು ಭಗವದ್ವೇಷಿಗಳಾದ ತಾಮಸಜನರಾದ ಕಾರಣ ಅವರ ಸಂಹಾರದಿಂದ ದುಃಖವೂ, ಪಾಪವೂ ಬರುವುದೆಂಬುದು ಅವಿವೇಕ ಮೂಲಕವು, ಪಂಡಿತರಾಡುವ ಮಾತುಗಳಲ್ಲ. ಅಂತಹ ದುಷ್ಟನಿಗ್ರಹವೇ ಕ್ಷತ್ರಿಯನಾದ

ನಿನಗೆ ವಿಹಿತ ಧರ್ಮವು; ಅಧರ್ಮವಲ್ಲ. ಆದುದರಿಂದ ನೀನು ಶೋಕಿಸುತ್ತಿರುವುದು ಅನ್ಯಾಯವೆಂದು ತಾತ್ಪರ್ಯ.)

ನ ತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ

ನ ಚೈವ ನ ಭವಿಷ್ಯಾಮಃ ಸರ್ವೆ ವಯಮತಃ ಪರಮ್॥2-12॥

೧೨. ಕೃಷ್ಣಾ! ಯುದ್ಧದಲ್ಲಿ ಗುರುಹಿರಿಯರು ಸಾಯುವುದರಿಂದ ನಾನು ಅವರ ವಿಷಯದಲ್ಲಿ ದುಃಖಿಸುವುದು ನ್ಯಾಯವಲ್ಲವೇ? ನನ್ನ ದುಃಖಕ್ಕೆ 'ದೃಷ್ಟ್ವೇಮಂ ಸ್ವಜನಂ ಕೃಷ್ಣ' ೧-೨೮ ಇತ್ಯಾದಿ ಶ್ಲೋಕಗಳಿಂದ ಕಾರಣಗಳನ್ನು ಹಿಂದೆಯೇ ಹೇಳಿರುವೆನು. ಜ್ಞಾನಿಗಳು ಸಾಯುವುದಕ್ಕೆ ಸಿದ್ಧರಾಗಿರುವವರ ವಿಷಯದಲ್ಲಿ ಏಕೆ ದುಃಖಪಡುವುದಿಲ್ಲ? ನನ್ನ ಮಾತುಗಳೆಲ್ಲವೂ ಪ್ರಾಜ್ಞ ಮತವಿರುದ್ಧ ಎಂಬುದಾದರೂ ಹೇಗೆ? ಎಂದರೆ:- ಅರ್ಜುನಾ! 1. ಯುದ್ಧ ಮಾಡುವುದರಿಂದ ಭೀಷ್ಮಾದಿಗಳ ಆತ್ಮಸ್ವರೂಪನಾಶವಾಗುವುದೆಂದು ದುಃಖಿಸುವೆಯಾ? ಇಲ್ಲವೇ 2. ಆತ್ಮಸ್ವರೂಪವು ನಿತ್ಯವು; ಆದರೂ ಈ ದೇಹಗಳು ಹೋಗುತ್ತವೆಂದು ಶೋಕವೆ? ಅಥವಾ 3. ಆತ್ಮ-ಶರೀರಗಳು ಬೇರೆಯಲ್ಲ; ಶರೀರವೇ ಆತ್ಮವು, ಅದು ನಷ್ಟವಾದರೆ ಸರ್ವವೂ ಹೋದಂತೆಯೇ ಎಂದು ಶೋಕವೆ? 4. ಈ ದೇಹವು ಹೋಗುವುದರಿಂದ ಅದರ ದರ್ಶನ, ಸ್ಪರ್ಶನ, ಸಂಭಾಷಣಾದಿಗಳಿಗೆ ಅವಕಾಶವು ತಪ್ಪಿ ನನಗೇ ಸುಖಹಾನಿಯಾಗುವುದೆಂದು ಶೋಕವೇ? ಮುಂತಾಗಿ ವಿಕಲ್ಪಿಸಿ, ಆತ್ಮಸ್ವರೂಪವು ಹೋಗುತ್ತದೆಂಬ ಮೊದಲನೆಯ ಶಂಕೆಗೆ ಉತ್ತರವನ್ನು ಹೇಳುತ್ತಾನೆ:– ಪಾರ್ಥ! ನೀನು, ಈ ರಾಜರು, ನಾನು ಮುಂತಾದ ಸಕಲ ಚೇತನರೂ ಹಿಂದೆ ಇರಲಿಲ್ಲ ಎಂದಲ್ಲ; ಹಿಂದೆಯೂ ಇದ್ದೇ ಇದ್ದೆವು. ಆದುದರಿಂದ ಈಗ ಇವರು ಹೊಸದಾಗಿ ಹುಟ್ಟಿದರೆಂದು ತಿಳಿಯಬೇಡ. ನಾವೆಲ್ಲರೂ ಮುಂದೆ ಇರುವುದಿಲ್ಲವೆಂತಲೂ ಇಲ್ಲ. ಮುಂದೆಯೂ ಇರುತ್ತೇವೆ. ನಾಶಹೊಂದುವುದೇ ಇಲ್ಲ. (ಈಗಿರುವುದಂತೂ ಕಾಣುತಲೇ ಇದೆ.) ಹೀಗೆ ಚೇತನರೆಲ್ಲರೂ ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿ ಇರುತ್ತಾರೆಂದು ಹೇಳಿರುವುದರಿಂದ ಆತ್ಮನು 1 ಅನಾದಿ=ಉತ್ಪತ್ತಿಯಿಲ್ಲದವನು, ನಿತ್ಯ = ನಾಶರಹಿತನು ಎಂದು ಸಿದ್ಧಿಸಿತು. ಆದಕಾರಣ ಈ ಭೀಷ್ಮಾದಿ ಆತ್ಮರು ನಾಶಹೊಂದುವರೆಂದು ನೀನು ಶೋಕಿಸುವುದು ನ್ಯಾಯವಲ್ಲವೆಂದು ಭಾವ.

ಅರ್ಜುನನ ನೆಪದಿಂದ ಲೋಕಕ್ಕೆ ತತ್ತ್ವೋಪದೇಶಕ್ಕಾಗಿ ಪ್ರವೃತ್ತವಾದ ಈ ಗೀತಾಶಾಸ್ತ್ರಕ್ಕೆ ಅಜ್ಞಾನಿಗಳು, ಜ್ಞಾನಿಗಳು ಎಲ್ಲರೂ ಅಧಿಕಾರಿಗಳು, ಕೆಲವರಿಗೆ ಈಶ್ವರನು ಅನಾದಿ-ನಿತ್ಯನೆಂಬ ವಿಷಯದಲ್ಲಿ ಸಂಶಯವಿಲ್ಲ. ಜೀವನ ವಿಷಯದಲ್ಲಿ ಮಾತ್ರವೇ ಸಂಶಯವಿರುವುದು. ಕೃಷ್ಣನೇ

ಈಶ್ವರನೆಂದು ಕೆಲವರು ತಿಳಿದಿರುವರು. ಇನ್ನು ಕೆಲವರು ಅದರಲ್ಲಿಯೂ ಸಂಶಯ ಪಡುವರು. ಕೃಷ್ಣನು ಈಶ್ವರನು ಮತ್ತು ಅನಾದಿನಿತ್ಯನು ಎಂಬ ವಿಷಯದಲ್ಲಿ ಸಂಶಯ ಪಡುವ ಅಜ್ಞಾನಿಗಳಿಗೆ ಮೇಲೆ ಹೇಳಿದಂತೆ ಕೃಷ್ಣಾದಿ ಎಲ್ಲಾ ಚೇತನರಿಗೂ ಅನಾದಿನಿತ್ಯತ್ವವನ್ನು ಹೇಳುವುದೇ ಈ ಶ್ಲೋಕದ ಅಭಿಪ್ರಾಯ. ಕೃಷ್ಣನ ವಿಷಯದಲ್ಲಿ ಸಂಶಯವಿಲ್ಲದೆ ಜೀವವಿಷಯದಲ್ಲಿ ಮಾತ್ರ ಸಂಶಯ ಪಡುತ್ತಿರುವ ಅಧಿಕಾರಿಗಳಿಗೆ ಈ ಶ್ಲೋಕವು ಈ ರೀತಿ ಉಪದೇಶಿಸುತ್ತದೆ:- ಈಶ್ವರನಾದ ನಾನು ಅನಾದಿಯಾಗಿರುವುದರಿಂದ ಹೇಗೆ ನಿತ್ಯನಾಗಿರುವನೋ ಹಾಗೆಯೇ ನೀನೇ ಮೊದಲಾದ ಜೀವರು ಅನಾದಿ ನಿತ್ಯರಾಗಿರುವಿರಿ. ಆದಕಾರಣ ಪಾರ್ಥ! ಯುದ್ಧದಲ್ಲಿ ಭೀಷ್ಮಾದಿ ಜೀವರು ನಾಶವಾಗುತ್ತಾರೆಂದು ನೀನು ಶೋಕಿಸುವುದು ನ್ಯಾಯವಲ್ಲವೆಂದು ಭಾವ. ಈ ಪಕ್ಷದಲ್ಲಿ 'ಅಹಂ' ಎಂಬುದು ದೃಷ್ಟಾಂತವೆಂದು ತಿಳಿಯಬೇಕು.

1 ಜೀವನು ಅನಾದಿಯಾದರೆ ಅವನು ಹುಟ್ಟಿದನು-ಸಾಯುವನು ಎಂಬ ಪ್ರಸಿದ್ಧ ವ್ಯವಹಾರದ ಪಾಡೇನು? ಎಂದರೆ :-

ಸ್ವದೇಹ ಯೋಗವಿಗಮೌ ನಾಮ ಜನ್ಮಮೃತೀ ಪುರಾ ।
ಇತ್ಯೇತೇ ಹ್ಯೆವ ಜೀವಸ್ಯ ಮುಕ್ತೇರ್ನ ತು ಹರೇಃ ಕ್ವಚಿತ್ ॥

**ದೇಹಿನೋಽಸ್ಮಿನ್ನ್ಯಥಾ ದೇಹೇ ಕೌಮಾರಂ ಯೌವನಂ ಜರಾ**
**ತಥಾ ದೇಹಾಂತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ॥2-13॥**

**13.** ಜೀವರು ನಿತ್ಯರಾದರೂ ಭೀಷ್ಮಾದಿಗಳ ಶರೀರಗಳು ನಾಶವಾಗುವ ಕಾರಣ ಶೋಕಿಸುವೆನೆಂಬ ಎರಡನೆಯ ಪಕ್ಷಕ್ಕೆ ಶ್ರೀಕೃಷ್ಣನು ಉತ್ತರ ಹೇಳುತ್ತಾನೆ:- ಶರೀರ ಹೊಂದಿರುವ ಜೀವನಿಗೆ ಈಗಿರುವ ಸ್ಥೂಲದೇಹದಲ್ಲಿಯೇ ಬಾಲ್ಯಾವಸ್ಥೆಯೂ, ಅನಂತರ ಯೌವನಾವಸ್ಥೆಯ ಬಳಿಕ ವೃದ್ಧಾಪ್ಯವೂ ಬರುತ್ತದೆ. ಅದರಂತೆಯೇ ಈಗಿರುವ ದೇಹವು ಹೋದರೆ ಇನ್ನೊಂದು ದೇಹವು ಬಂದೇಬರುವುದು. ಎಂದರೆ ಬಾಲ್ಯ ದೇಹವು ಹೋದಾಗಾಗಲೀ, ಯೌವನ ದೇಹವು ಹೋದಾಗಾಗಲೀ ಯಾರೂ ದುಃಖಿಸುವುದಿಲ್ಲ. ಏಕೆಂದರೆ ಅದಕ್ಕೆ ಪ್ರತಿನಿಧಿಯಾಗಿ ವೃದ್ಧದೇಹಾದಿಗಳು ಲಭಿಸುವುದರಿಂದ ಸಮಾಧಾನಪಡುವರು. ಅಂದಬಳಿಕ ಸತ್ತರೂ ಬೇರೆ ದೇಹವು 1ಬಂದೇಬರುತ್ತದೆಯಾಗಿ ಶೋಕಿಸಲು ಕಾರಣವಿಲ್ಲ. (ಸಮೀಚೀನವಾದ ಯೌವನ ದೇಹವು ಹೋಗಿ ಜೀರ್ಣವಾದ ಮುದಿದೇಹವು ಬಂದಾಗಲೇ ದುಃಖಿಸದೆ ಸಮಾಧಾನಮಾಡಿಕೊಳ್ಳುವವರು ಸಾಯುವುದರಿಂದ ಈ ಮುದಿದೇಹವು ಹೋಗಿ ಬಳಿಕ ಕೋಮಲವಾದ ಬಾಲದೇಹವು ಬರುತ್ತದೆಂದು ತಿಳಿಯುವ ವಿವೇಕಶಾಲಿಗಳಿಗೆ ಶೋಕವೆಲ್ಲಿಂದ ಬಂದೀತು ?

- ಹೀಗೆ ವಿವೇಚನಶೀಲನಾದ ಬುದ್ಧಿವಂತನು ದೇಹನಾಶವಾಗುತ್ತೆಂದು ಸಾಯುವವರ ವಿಷಯದಲ್ಲಿ ಶೋಕ ಪಡುವುದೇ ಇಲ್ಲ.

- ಬಾಲ್ಯಯೌವನ ದೇಹಗಳು ಹೋಗುತ್ತವೆಂದರೆ ದೇಹದ ಬಾಲ್ಯ-ಯೌವನಾವಸ್ಥೆಗಳು ಮಾತ್ರ ಹೋಗುವುವು. ದೇಹವು ಮುದಿತನವನ್ನು ಹೊಂದಿ ಉಳಿದೇ ಇರುವುದು. ಮರಣವು ಅಂತಹುದಲ್ಲ; ಮರಣವಾದರೆ ಯಾವ ರೀತಿಯಾಗಿಯೂ ಈ ದೇಹವು ಉಳಿಯದೆ ಸಂಪೂರ್ಣವಾಗಿ ನಾಶವಾಗುವುದು. ಆದಕಾರಣ ಶೋಕವುಂಟಾಗಬಹುದಲ್ಲವೇ? ಎಂದರೆ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದರೆ ಶೋಕಕ್ಕೆ ಕಾರಣವಿಲ್ಲವೆಂಬುದು ಸ್ಪಷ್ಟಪಡುವುದು. ಹೇಗೆಂದರೆ:- ಕೆಲವರು ಬಂಗಾರದ ಕಂಠಹಾರವನ್ನು ಅಳಿಸಿ ಕೈಗೆ ಬಳೆಯನ್ನು ಮಾಡಿಸಿಕೊಳ್ಳುವರು. ಆಗ ಬಂಗಾರ ವಿದ್ದರೂ ಅದರ ಹಿಂದಿನ ಆಕಾರವು ಹೋಗಿ ಬೇರೆ ಆಕಾರವು ಬರುತ್ತದೆ. ಅದರಿಂದ ಯಜಮಾನನು ದುಃಖಪಡುವುದಿಲ್ಲವೆಂಬುದು ಪ್ರಸಿದ್ಧವಾಗಿದೆ. ಅದರಂತೆಯೇ ಬಂಗಾರದ ನಾಣ್ಯ ಅಥವಾ ಆಭರಣವನ್ನು ಕೊಟ್ಟು ಅದಕ್ಕೆ ಪ್ರತಿಯಾಗಿ ದಿವ್ಯ ಪೀತಾಂಬರವನ್ನು ಸಂತೋಷದಿಂದ ತೆಗೆದುಕೊಳ್ಳುವರು. ಆಗ ಬಂಗಾರವು ಸರ್ವಾತ್ಮನಾ ಹೋಗುವುದು. ಆದರೂ ದುಃಖವಾಗುವುದಿಲ್ಲವೆಂಬುದು ಅನುಭವ ಸಿದ್ಧವಾಗಿದೆ. ಆದ ಕಾರಣ ಒಂದು ವಸ್ತುವು ಹೋದರೂ ಅದಕ್ಕೆ ಪ್ರತಿಯಾಗಿ ಇನ್ನೊಂದು ವಸ್ತುವು ದೊರೆತರೆ ದುಃಖವಾಗುವುದಿಲ್ಲವೆಂದು ಸಿದ್ಧವಾಯಿತು. ಪಾರ್ಥ! ಪ್ರಕೃತ ಯುದ್ಧದಲ್ಲಿ ಈ ಭೀಷ್ಮಾದಿಗಳು ಸತ್ತರೆ ಅವರಿಗೆ ಈ ದೇಹಕ್ಕೆ ಬದಲಾಗಿ ಇನ್ನೊಂದು ಒಳ್ಳೆಯ ದೇಹವೇ ಬರುತ್ತದೆಯಾಗಿ ಈ ದೇಹವು ಹೋಗುವುದೆಂದು ನೀನು ದುಃಖಪಡುವುದು ಯುಕ್ತವಲ್ಲವೆಂದು ಎರಡನೆಯ ಶಂಕೆಗೆ ಉತ್ತರ ಹೇಳಿದಂತಾಯಿತು.

ಆತ್ಮ ದೇಹಗಳು ಬೇರೆಯಲ್ಲ; ದೇಹನಾಶವೇ ಆತ್ಮನಾಶವು ಇತ್ಯಾದಿ ಮೂರನೆಯ ವಿಕಲ್ಪಕ್ಕೂ ಈ ಶ್ಲೋಕದಿಂದಲೇ ಪರಿಹಾರವು ಉಕ್ತವಾಗಿದೆ. ಹೇಗೆಂದರೆ:- ಈ ದೇಹವಿರುವಾಗಲೇ ಬಾಲ್ಯದಲ್ಲಿ ನಾನು ಬಾಲಕನೆಂದೂ, ಯೌವನ ಬಂದಾಗ ಯುವಕನೆಂದೂ, ತರುವಾಯ ವೃದ್ಧನೆಂದೂ2 ತಿಳಿಯುವೆನು. ಮತ್ತು ಯುವಕನಾದಾಗ ಬಾಲ್ಯ ಶರೀರವನ್ನು ಪಡೆದಿದ್ದ ನಾನೇ ಈಗ ಯುವ ಶರೀರವನ್ನು ಪಡೆದಿರುವೆನು ಮುಂತಾಗಿ ಬಾಲ್ಯ ಯೌವನಗಳಲ್ಲಿ ಅನುಭವಿಸಿದ್ದ ಅನೇಕ ವಿಷಯಗಳನ್ನು ಸ್ಮರಿಸಿಕೊಳ್ಳುವನು. ಸ್ಮರಣೆಯು ಚೇತನನಿಗೇ ಸಲ್ಲತಕ್ಕುದು; ಜಡದೇಹಕ್ಕೆ ಸಲ್ಲದು. ಆದಕಾರಣ ಈ ದೇಹದಲ್ಲಿ ಭಿನ್ನನಾದ ಆತ್ಮನಿರುವನೆಂದೂ, ಅವನೇ ಇಂತಹ ಸ್ಮರಣೆಗಳನ್ನು ಪಡೆಯುವನೆಂದೂ ಸಿದ್ಧಿಸುತ್ತದೆ. ಹಾಗೆಯೇ ಈ ಜೀವನಿಗೆ ಮರಣಾನಂತರ ಬೇರೆ ದೇಹವು ಬರುತ್ತದೆ. ಹುಟ್ಟಿದ ಕೂಡಲೇ ಮಕ್ಕಳಿಗೆ ಆಹಾರಾಪೇಕ್ಷೆಯುಂಟಾಗುವುದರಿಂದ ಹಿಂದೆಯೂ ಜೀವನು ಜನ್ಮವೆತ್ತಿ(ಶರೀರವನ್ನು ಪಡೆದು)ನೆಂದೂ ಸಿದ್ಧಿಸುತ್ತದೆ. ಈ ರೀತಿ ವಿವೇಚನೆಯಿಂದ ಜೀವದೇಹಗಳು ಬೇರೆಯೆಂದು ತಿಳಿದಿರುವ ವಿವೇಕಶಾಲಿಯ ದೇಹವೇ

ಆತ್ಮನೆಂದು ಮೋಹಗೊಳ್ಳುವುದಿಲ್ಲವಾಗಿ, ಅಸ್ಥಿರವಾದ ದೇಹವು ನಷ್ಟವಾದರೂ ದುಃಖಪಡುವುದೇ ಇಲ್ಲ. ಪಾರ್ಥಾ! ನೀನೂ ಈ ರೀತಿಯಾದ ವಿವೇಚನೆಯಿಂದ ದುಃಖವನ್ನು ದೂರಮಾಡುವುದೇ ಯುಕ್ತವು. ದೇಹನಾಶವಾದರೆ ಆತ್ಮನಾಶವಾಗುತ್ತದೆಂದು ಶೋಕಿಸುವುದು ಸರಿಯಲ್ಲ.

1 ಕೌಮಾರ, ಯೌವನ, ಜರಾ ಎಂಬ ಪದಗಳಿಗೆ ಕೌಮಾರಸ್ಮರಣೆ, ಯೌವನಸ್ಕಸ್ಮರಣೆ, ಜರಾಸ್ಮರಣೆ ಎಂದರ್ಥ. 'ದೇಹಿನಃ ' ಎಂಬ ಏಕವಚನಾಂತ ಶಬ್ದಕ್ಕೆ ದೇಹವುಳ್ಳ ಒಬ್ಬ ಜೀವನು ಎಂದರ್ಥ. ಅದರಿಂದ ದೇಹವು ಬೇರೆ, ಅದನ್ನು ಪಡೆದಿರುವನನು ಬೇರೆ ಎಂದರ್ಥವಾಗುವುಮ. ದೇಹ-ಜೇವರು ಒಂದೇ ಆಗಿದ್ದರೆ ದೇಹಿನಃ ಎಂದು ಹೇಳಿರುವುದೇ ಅಸಂಗತವಾಗುತ್ತದೆ. ದೇಹಿನಃ ಎಂಬ ಪದಕ್ಕೆ ದೇಹವುಳ್ಳ (ದೇಹಭಿನ್ನನಾದ) ಒಬ್ಬ ಜೀವಾತ್ಮನಿಗೆ ಎಂದರ್ಥ.

ಹಿಂದಿನಿಂದಲೂ ಇದ್ದ ಜೀವನಿಗೆ ನೂತನವಾಗಿ ಪಾಂಚಭೌತಿಕ ಶರೀರ ಸಂಬಂಧವಾಗುವುದೇ ಜನನವು. ಆಗ ಹುಟ್ಟಿದನೆಂದೂ, ಅಂತಹ ಶರೀರ ಸಂಬಂಧವು ಹೋದಾಗ ಸತ್ತನೆಂದೂ ಆ ವ್ಯವಹಾರದ ಗುಟ್ಟು. ಹಿಂದಿಲ್ಲದ ಜೀವಸ್ವರೂಪವೇ ಹೊಸದಾಗಿ ಹುಟ್ಟಿತೆಂದು ತಿಳಿಯಬಾರದು. ಮುಕ್ತಿಪರ್ಯಂತವಾಗಿ ಜೀವನಿಗೆ ಅವನ ಕರ್ಮಾನುಗುಣವಾಗಿ ಶರೀರಗಳು ಹೀಗೆ ಬಂದು ಹೋಗುತ್ತಿರುವುವು. ಹರಿಗಾದರೋ ಇಂತಹ ನೂತನ ಶರೀರಸಂಬಂಧ-ನಾಶಗಳೆಂಬ ಜನನ ಮರಣಗಳೂ ಇಲ್ಲ. ರಾಮಕೃಷ್ಣಾದಿ ರೂಪಗಳೆಲ್ಲವೂ ಹೊಸದಲ್ಲ; ಆವಿರ್ಭಾವ=ಹಿಂದೆ ಕಾಣಿಸದೇ ಇದ್ದುದೇ ವ್ಯಕ್ತವಾಗಿ ಕಾಣಿಸಿಕೊಂಡವು. ಈ ಅರ್ಥದಲ್ಲಿಯೇ 'ರಾಮನು ಹುಟ್ಟಿದನು'. ಮುಂತಾಗಿ ವ್ಯವಹರಿಸುವುದುಂಟು. ಪರಮಾತ್ಮನಿಗೆ ಜೀವನಂತೆ ದೇಹಸಂಬಂಧರೂಪ ಉತ್ಪತ್ತಿಯಿಲ್ಲ; ಆವಿರ್ಭಾವಮಾತ್ರವೆಂಬ ವಿಶೇಷವನ್ನು ಈ ಶ್ಲೋಕದಲ್ಲಿನ 'ತು' ಎಂಬ ಶಬ್ದವು ಸೂಚಿಸುತ್ತದೆ. ಶ್ರೀಕೃಷ್ಣ ಪರಮಾತ್ಮನಿಂದ ಉಪದಿಷ್ಟವಾದ ಈ ಗೀತೆಯಲ್ಲಿ ಒಂದು ಅಕ್ಷರವೂ ವ್ಯರ್ಥವಾಗಿಲ್ಲ. ಪ್ರಮಾಣಾಂತರಗಳ ಸಹಾಯದಿಂದ ಅದರ ಭಾವವನ್ನು ತಿಳಿಯಬೇಕು.

2.ದೇಹೇ ಪಂಚತ್ವಮಾಪನ್ನೇ ದೇಹೀ ಕರ್ಮಾನುಗೋऽವಶಃ
ದೇಹಾಂತರಮನುಪ್ರಾಪ್ಯ ಪ್ರಾಕ್ತನಂ ತ್ಯಜತೇ ವಪುಃ
ವ್ರಜನ್ ತಿಷ್ಠನ್ ಪದೈಕೇನ ಯಥ್ಯೈಥೈವೇಕೇನ ಗಚ್ಛತಿ
ಯಥಾ ತೃಣಜಲೂಕೈವಂ ದೇಹೀ ಕರ್ಮಗತಿಂ ಗತಃ -ಭಾಗವತ ಸಂ. ೧೦, ಅಧ್ಯಾಯ ೧.

**ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖದುಃಖದಾಃ |**
**ಆಗಮಾಪಾಯಿನೋऽನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ॥2-14॥**

**14.** ಕೃಷ್ಣಾ! ಯುದ್ಧದಲ್ಲಿ ಸಂಭವಿಸಬಹುದಾದ ಭೀಷ್ಮದ್ರೋಣಾದಿಗಳ ಹನನದಿಂದ ದುಃಖಿಸುವುದು ನ್ಯಾಯವಲ್ಲ. ಜೀವಸ್ವರೂಪವು ಅನಾದಿನಿತ್ಯವಾಗಿರುವುದರಿಂದ ಸಂಹಾರ ಪ್ರಯುಕ್ತ ಅದಕ್ಕೆ ಯಾವ ಅಪಘಾತವೂ ಆಗಲಾರದು. ಈಗಿನ ದೇಹವು ಹೋದರೂ ಇದಕ್ಕಿಂತ ಉತ್ತಮವಾದ ಬೇರೆ ದೇಹವು ಸಿದ್ಧವಾಗಿರುವುದರಿಂದ ದೇಹನಾಶಕ್ಕಾಗಿ ದುಃಖಿಸಬೇಕಾಗಿಲ್ಲ. ದೇಹಾತಿರಿಕ್ತನಾದ ಆತ್ಮನು ಪ್ರಮಿತನಾಗಿರುವುದರಿಂದ ದೇಹವು ಹೋದರೆ ಆತ್ಮನೂ ಹೋದಂತೆಯೇ ಎಂದು ಶೋಕಿಸುವುದಕ್ಕೂ ಕಾರಣವಿಲ್ಲ ಎಂಬುದಾಗಿ ನೀನು ಹೇಳಿರುವುದೆಲ್ಲವೂ ನಿಜ; ಆದರೆ ನಾನು ದುಃಖಿಸುವುದಕ್ಕೆ ಇನ್ನೂ ಪ್ರಬಲವಾದ ಕಾರಣವಿದೆ. ಯಾವುದನ್ನುವೆಯಾ? ಈ ಭೀಷ್ಮಾದಿಗಳೆಲ್ಲರೂ ನನ್ನ ಅಭಿಮಾನಕ್ಕೆ ಪಾತ್ರರಾದ ಸ್ವಕೀಯರು. ಅವರ ದರ್ಶನ, ಸ್ಪರ್ಶನ ಮತ್ತು ಅವರೊಡನೆ ಸಲ್ಲಾಪಮಾಡುವುದು ಇವೆಲ್ಲವೂ ನನಗೇ ಸುಖದಾಯಕವು. ಅಂತಹವರು ಮೃತರಾದರೆ ಅವರ ದರ್ಶನ, ಸ್ಪರ್ಶನ, ಸಂಭಾಷಣಾದಿಗಳಿಗೆ ಅವಕಾಶವು ತಪ್ಪಿ ಇಲ್ಲಿ ನನಗಾಗಬಹುದಾದ ಸುಖವು ಹೋಗುತ್ತದೆ. ಅಷ್ಟೇ ಅಲ್ಲ; ಯುದ್ಧದಲ್ಲಿ ಬಾಣತಾಡನಾದಿಗಳಿಂದ ಭಿನ್ನಭಿನ್ನಗಳಾದ ಅವರ ದೇಹಗಳನ್ನು ನೋಡುವ ಮಾತ್ರದಿಂದ ಅತ್ಯಂತ ದುಃಖವೂ ಆಗುತ್ತದೆ.

ಹೀಗೆ ಇಷ್ಟ ಹಾನಿ-ಅನಿಷ್ಟ ಪ್ರಾಪ್ತಿಗಳಿಗಾಕರವಾದ ಯುದ್ಧವು ನನಗೆ ಬೇಡ, ಆ ದುಃಖವನ್ನು ನಾನು ಸಹಿಸಲಾರೆನು ಎಂಬ ಅರ್ಜುನನ ನಾಲ್ಕನೆಯ ಶಂಕೆಗೆ ಉತ್ತರವನ್ನು ಹೇಳುತ್ತಾನೆ:- ಘ್ರಾಣ, ರಸನ ಚಕ್ಷುಸ್ಸು, ತ್ವಕ್ಕು, ಶ್ರೋತ್ರ ಎಂಬ ಐದು ಇಂದ್ರಿಯಗಳು ಪ್ರತ್ಯೇಕವಾಗಿ ತನತನಗೆ ಗ್ರಾಹ್ಯವಾದ ಗಂಧ, ರಸ, ರೂಪ, ಸ್ಪರ್ಶ, ಶಬ್ದ ಎಂಬ ವಿಷಯಗಳ ಸಂಪರ್ಕ ಹೊಂದಿದರೆ ಗಂಧಾದಿಗಳು ಅನುಭವಕ್ಕೆ ಬರುವುವು. ಆತ್ಮನಿಗೆ ಇಷ್ಟವಾದ ಸುಗಂಧಾದಿ ವಿಷಯವು ಅನುಭವಕ್ಕೆ ಬಂದಾಗ ಸುಖವೂ, ಅನಿಷ್ಟ ದುರ್ಗಂಧಾದಿ ವಿಷಯಾನುಭವದಿಂದ ದುಃಖವೂ ಬಂದೇಬರುವುದು. ಆದಕಾರಣ ವಿಷಯೇಂದ್ರಿಯ ಸಂಬಂಧವು ವಿಷಯಾನುಭವ ಮೂಲಕವಾಗಿ ಸುಖದುಃಖದಾಯಕವೆಂದು ಸಿದ್ಧವಾಗುತ್ತದೆ. ಸ್ವಜನರು ಬದುಕಿದ್ದರೆ ಅವರ ದರ್ಶನಾದಿಗಳಿಗವಕಾಶವಾಗುವುದು. ಅವರು ಮೃತರಾದರೆ ಅವರ ದರ್ಶನ ಸಲ್ಲಾಪಾದಿಗಳಿಗವಕಾಶವಿಲ್ಲದಂತಾಗಿ ಅದರಿಂದಾಗುವ ಸುಖಹಾನಿಯೂ, ಅವರ ಛಿನ್ನಭಿನ್ನ ದೇಹದರ್ಶನದಿಂದ ದುಃಖವೂ ಉಂಟಾಗುತ್ತ ಎಂದಲ್ಲವೆ, ನಿನ್ನ ಮನೋಗತವು ಎಂಬುದಾಗಿ ಪಾರ್ಥನ ಆಶಯವನ್ನು ಅನುವಾದ ಮಾಡಿ ಶ್ರೀಕೃಷ್ಣನು ಈ ರೀತಿ ಉಪದೇಶಿಸುವನು:- ಕುಂತೀಕುಮಾರಾ? ನೀನು ಹೇಳಿದಂತೆ ವಿಷಯೇಂದ್ರಿಯ ಸಂಬಂಧಮಾತ್ರವೇ ವಿಷಯಾನುಭವ ಮೂಲಕವಾಗಿ ಸುಖದುಃಖದಾಯಕವಾಗಲಾರದು. ಏಕೆಂದರೆ ವಿಷಯೇಂದ್ರಿಯ ಸಂಬಂಧವಿರುವಾಗಲೆಲ್ಲಾ ಸುಖದುಃಖಗಳು ಬರಲಾರವು. ಈಗ ನೋಡು! ನಿದ್ರೆ ಬಂದಾಗ, ಮೂರ್ಛೆ ಹೊಂದಿದಾಗ ದೇಹಕ್ಕೆ ಯಾವುದಾದರೊಂದು ಸ್ಪರ್ಶವು ತಪ್ಪದೆ ಆಗುತ್ತಿರುವುದು. ದೇಹದಲ್ಲೆಲ್ಲಾ ತ್ವಗಿಂದ್ರಿಯವು ವ್ಯಾಪಿಸಿರುತ್ತದೆ. ದೇಹಕ್ಕೆ ಸ್ಪರ್ಶವಾದರೆ, ತ್ವಗಿಂದ್ರಿಯಸ್ಪರ್ಶಗಳ ಸಂಬಂಧವೇರ್ಪಡುವುದು. ಆಗ ತ್ವಗಿಂದ್ರಿಯ-ಸ್ಪರ್ಶ ಸಂಬಂಧವೆಂಬ ವಿಷಯೇಂದ್ರಿಯ ಸಂಬಂಧವಿದ್ದರೂ ಸುಖದುಃಖಗಳಾಗುವುದಿಲ್ಲ. ಎಚ್ಚೆತ್ತಾಗ ಅಥವಾ ಸ್ವಪ್ನ ಕಾಲದಲ್ಲಿ ವಿಷಯೇಂದ್ರಿಯ ಸಂಬಂಧವಾದರೆ ಮಾತ್ರ ವಿಷಯಾನುಭವ ಮೂಲಕವಾಗಿ ಸುಖದುಃಖಗಳಾಗುವುವು. ಹೀಗೆ ವಿಷಯೇಂದ್ರಿಯ ಸಂಬಂಧವು ನಿದ್ರೆ ಮೊದಲಾದ ಕಾಲಗಳಲ್ಲಿ ಸುಖಪ್ರದವಾಗದೆ, ಎಚ್ಚೆತ್ತಾಗ ಮಾತ್ರ ಸುಖಪ್ರದವಾಗುತ್ತಿರುವ ಕಾರಣ ನಿದ್ರೆಯಲ್ಲಿ ಇಲ್ಲದಿರುವ, ಜಾಗ್ರತ್ಸ್ವಪ್ನ ಕಾಲಗಳಲ್ಲಿ ಮಾತ್ರವೇ ಇದ್ದು ವಿಷಯೇಂದ್ರಿಯ ಸಂಬಂಧದಿಂದ ವಿಷಯಾನುಭವ ಮೂಲಕವಾಗಿ ಸುಖದುಃಖಗಳನ್ನುಂಟುಮಾಡಿಸುವಂತಹ ಸಹಕಾರಿ ಕಾರಣವೊಂದಿರಬೇಕೆಂದು ಸಿದ್ಧಿಸುವುದು. ಆತ್ಮನಿಗೆ ವಿಷಯಗಳಲ್ಲಿರುವ ಅಭಿಮಾನವೇ ಅಂತಹ ಸಹಕಾರಿ ಕಾರಣವು. ಬೇರಾವುದೂ ಅಂತಹುದಿಲ್ಲ. ಎಚ್ಚೆತ್ತಾಗಲೂ(ಜಾಗೃದವಸ್ಥೆಯಲ್ಲಿಯೂ)ಕೂಡ ನಮ್ಮ ಅಭಿಮಾನಕ್ಕೆ ಪಾತ್ರರಲ್ಲದ ಉದಾಸೀನಜನರು ಭೇದಭೇದಾದಿಗಳಿಂದ ಕಷ್ಟ ಪಡುತ್ತಿರುವುದನ್ನು ನೋಡಿದರೂ

ನಮಗೆ ದುಃವಾಗುವುದಿಲ್ಲ. ನಮ್ಮ ಅಭಿಮಾನಪಾತ್ರರಾದ ಸಂಬಂಧಿ ಜನರೇನಾದರೂ ಕಷ್ಟ ಪಡುತ್ತಿರುವುದನ್ನು ನೋಡಿದ ಕೂಡಲೇ ಅತ್ಯಂತ ದುಃಖವಾಗುವುದೆಂಬುದೂ ಅನುಭವಸಿದ್ಧವಾಗಿದೆ. ಹೀಗೆ ಅಭಿಮಾನವಿದ್ದರೆ ವಿಷಯೇಂದ್ರಿಯ ಸಂಬಂಧವು ದರ್ಶನಾದಿಗಳ ಮೂಲಕವಾಗಿ ಸುಖದುಃಖದಾಯಕವಾಗುತ್ತದೆ. ಅಭಿಮಾನವಿಲ್ಲದಿದ್ದರೆ ಸುಖದುಃಖದಾಯಕಗಳಾಗುವುದಿಲ್ಲವಾದ ಕಾರಣ ವಿಷಯೇಂದ್ರಿಯ ಸಂಬಂಧಮಾತ್ರವೇ ಸುಖದುಃಖಪ್ರದವಲ್ಲ; ಅಭಿಮಾನ ಸಹಿತವಾದ ವಿಷಯೇಂದ್ರಿಯ ಸಂಬಂಧವೇ ಸುಖದುಃಖಪ್ರದವೆಂದು ಸಿದ್ಧವಾಗುತ್ತದೆ. ಏವಂ ಚ ಅನುಭವದ್ವಾರಾ ಸುಖಾದಿಪ್ರದವಾದ ವಿಷಯೇಂದ್ರಿಯ ಸಂಬಂಧವು ಆಗಮಾಪಾಯಿ=ಅನಿತ್ಯ ಎಂದರೆ ಯಾವಾಗಲೂ ಸುಖದುಃಖಪ್ರದವಲ್ಲ ಅಭಿಮಾನಸಹಿತವಾದಾಗ ಅದು ಸುಖದುಃಖದಾಯಕವಾದರೂ ಅಭಿಮಾನವಿಲ್ಲದಿರುವಾಗ ಮತ್ತು ನಿದ್ರೆ ಮುಂತಾದ ಅವಸ್ಥೆಗಳಲ್ಲಿ ಸುಖದುಃಖದಾಯಕವಾಗುವುದಿಲ್ಲ. ಆಗ ಅದರ ಸುಖಾದಿ ಪ್ರದತ್ವಕ್ಕೆ ಹಾನಿಯುಂಟಾಗುವ ಕಾರಣ ವಿಷಯೇಂದ್ರಿಯ ಸಂಬಂಧದ ಸುಖದುಃಖದಾತೃತ್ವವು ಸರ್ವಥಾ ಅನಿತ್ಯವು. ಆದಕಾರಣ ಪಾರ್ಥಾ! ಸುಖದುಃಖಗಳಿಗೆ ಮೂಲಭೂತವಾದ ವಿಷಯಾಭಿಮಾನವನ್ನು ಎಂದರೆ 'ಇವರು ನಮ್ಮವರು' ಎಂಬ ಮಮತೆಯನ್ನು ಬಿಡು, ಆಗ ಬಂಧುದರ್ಶನ ಸ್ಪರ್ಶನಾದಿಗಳಿಂದ ಸುಖವೂ ಆಗುವುದಿಲ್ಲ ; ಆವರ ಭಿನ್ನಭಿನ್ನ ದೇಹದರ್ಶನದಿಂದ ದುಃಖವೂ ಆಗುವುದಿಲ್ಲ. ವಿಷಯೇಂದ್ರಿಯ ಸಂಬಂಧವು ನಿಷ್ಫಲವಾಗುವುದು. ಸುಖಹಾನಿದುಃಖಪ್ರಾಪ್ತಿಶಂಕೆಯೂ ಮಾಯವಾಗಿ, ಯುದ್ಧದಲ್ಲಿ ನಿಷ್ಕಳಂಕ ಪ್ರವೃತ್ತಿ ಯುಂಟಾಗುವುದು.

ಯಂ ಹಿ ನ ವ್ಯಥಯನ್ತ್ಯೇತೇ ಪುರುಷಂ ಪುರುಷರ್ಷಭ
ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ॥2-15॥

**15.** ಯುದ್ಧದಿಂದ ನನಗೇ ಸುಖಹಾನಿ-ದುಃಖಗಳು ಬರುವ ಸಂಭವವಿದೆಯಾಗಿ ದುಃಖಿಸುವೆನು ಎಂಬ ಶಂಕೆಗೆ, ಯುದ್ಧ ಮಾಡು; ಅದರಿಂದ ಬರಬಹುದಾದ ದುಃಖವನ್ನು ಅಭಿಮಾನತ್ಯಾಗದಿಂದ ದೂರಮಾಡು ಎಂಬ ಉಪದೇಶವು ನನಗೆ ರುಚಿಸಲಾರದು. ದುಃಖಕರವಾದ ಯುದ್ಧವನ್ನು ಮಾಡಿ ದುಃಖವನ್ನು ಸಂಪಾದಿಸಿ, ಅಭಿಮಾನತ್ಯಾಗದಿಂದ ಅದನ್ನು ಪರಿಹರಿಸಿಕೊಳ್ಳುವುದು ಯಾವ ನೀತಿ? ಕೆಸರನ್ನು ತುಳಿದು ಕಾಲು ತೊಳೆದುಕೊಳ್ಳುವುದಕ್ಕಿಂತ, ಕೆಸರನ್ನು ತುಳಿಯದೆ ದೂರದಿಂದ ಸುತ್ತಿಕೊಂಡು ಬರುವುದು ನ್ಯಾಯವಲ್ಲವೆ? ಆ ಕಾರಣ ನಾನು ಯುದ್ಧ ಮಾಡದಿರುವುದೇ ಲೇಸು

ಎಂಬ ಅರ್ಜುನನ ಶಂಕೆಗೆ ಸಮಾಧಾನವನ್ನು ಹೇಳುತ್ತಾನೆ:- ಪುರುಷಶ್ರೇಷ್ಠನಾದ ಅರ್ಜುನಾ! '1ಪುರುಷನು (ಶರೀರಾದಿ ಜ್ಞಾನವುಳ್ಳವನು=ಎಚ್ಚೆತ್ತಿರುವವನು) ಮನೋದೌರ್ಬಲ್ಯರಹಿತನು (ಸುಖ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಇರುವ ಧೈಯ್ಯಶಾಲಿಯು) ಮತ್ತು ಲೌಕಿಕ ವಿಷಯಸುಖವು ಮೋಕ್ಷವಿರೋಧಿಯಾದುದರಿಂದ ದುಃಖದಂತೆ ಹೇಯವೆಂದು ತಿಳಿದವನಾಗಿ ವಿಷಯಾಭಿಮಾನವನ್ನು ಬಿಟ್ಟಿರುವ ಜನರನ್ನು ಈ ಶಬ್ದಾದಿ ವಿಷಯೇಂದ್ರಿಯ ಸಂಬಂಧಗಳು ಸುಖದುಃಖಗಳನ್ನುಂಟುಮಾಡಿ ಹಿಗ್ಗಿಸಿ ಕುಗ್ಗಿಸಲಾರವು. ಹೀಗೆ ಸುಖದುಃಖಗಳಿಂದ ಚಿತ್ತ ಕ್ಷೋಭೆಯನ್ನು ಹೊಂದದಿರುವ ಬ್ರಹ್ಮಜ್ಞಾನಿಯು ಮೋಕ್ಷವನ್ನು ಹೊಂದುವನು. (ದುಃಖ ಬರುತ್ತದೆಂಬ ಭಯದಿಂದ ಸ್ವಧರ್ಮವನ್ನೇ ಬಿಡುವುದು ಶ್ರೇಯಸ್ಕರವಲ್ಲ; ವರ್ಣಾಶ್ರಮವಿಹಿತವಾದ ಧರ್ಮವನ್ನು ಆಚರಿಸಲೇಬೇಕು. ಅದರಿಂದ ಪ್ರಸಕ್ತವಾಗಬಹುದಾದ ದುಃಖವನ್ನು ಧೀರನಾದವನು ಅಭಿಮಾನ ತ್ಯಾಗದಿಂದ ಬರದಂತೆ ಮಾಡಿಕೊಳ್ಳಬೇಕು. ಇದೇ ಮೋಕ್ಷ ಮಾರ್ಗ. ಆದಕಾರಣ ಪಾರ್ಥಾ! ಈಗ ಪ್ರಾಪ್ತವಾಗಿರುವ ಯುದ್ಧವು ನಿನಗೆ ಕರ್ತವ್ಯಧರ್ಮವು. ದುಃಖಭಯದಿಂದ ಅದನ್ನು ಮಾಡದಿದ್ದರೆ ಧರ್ಮಲೋಪವಾಗುವುದು, ಧರ್ಮಲೋಪವು ನಿನ್ನಂತಹವನಿಗೆ ಯೋಗ್ಯವಲ್ಲ. ಸ್ವಜನಾಭಿಮಾನವನ್ನು ಬಿಡು; ಧೈರ್ಯದಿಂದ ಯುದ್ಧದಲ್ಲಿ ತೊಡಗಿ ಶ್ರೇಯೋಭಾಗಿಯಾಗು ಎಂದು ತಾತ್ಪರ್ಯ.)

1 (ಅ) ಪುರಂ=ದೇಹಂ, ಸರತಿ=ಗಚ್ಛತಿ (ಪ್ರತ್ಯಕ್ಷತೋ ಜಾನಾತಿ) ಇತಿ ಪುರುಷಃ=ಶರೀರ ದರ್ಶನವಾನ್ ಎಂದರೆ ಶರೀರ ದರ್ಶನವು ಎಚ್ಚೆತ್ತಿರುವ ಮನುಷ್ಯನಿಗೇ ಸಂಭವಿಸುವ ಕಾರಣ ಪುರುಷ ಎಂದರೆ ಎಚ್ಚೆತ್ತಿರುವವನೆಂದು ಅರ್ಥವು.

(ಆ) ಪುರುಬ್ರಹ್ಮ ಗುಣಾಧಿಖ್ಯಾತ್ತಜ್ಞಾನಾತ್ಪುರುಷಃ ಸ್ಮೃತಃ.

**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ**
**ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ॥2-16॥**

**16.** 'ಪಾಪಮೇವಾಶ್ರಯೇದಸ್ಮಾನ್..., ಅಹೋ ಬತ ಮಹತ್ಪಾಪಂ... ನರಕೇ ನಿಯತಂ ವಾಸಃ' ಇತ್ಯಾದಿ ಶ್ಲೋಕಗಳಿಂದ ನಾನು ಹೇಳಿರುವಂತೆ ಭೀಷ್ಮಾದಿಗಳ ಸಂಹಾರರೂಪ ಯುದ್ಧದಿಂದ ಪಾಪ ಬರುವುದು ನಿಶ್ಚಯ. ಆದರಿಂದ ನರಕಾದಿ ಪರಲೋಕ ದುಃಖವಾಗುತ್ತದೆಯಾಗಿ ನಾನು ಶೋಕಿಸುವುದು ನ್ಯಾಯವೇ ಆಗಿದೆ. ಆದಕಾರಣ ಇವರೆಲ್ಲರೂ ಶೋಚ್ಯರೇ ಸರಿ ಎಂಬ ಅರ್ಜುನನ ಶಂಕೆಗೆ ಸಮಾಧಾನವನ್ನು ಹೇಳುತ್ತಾನೆ:- 1ಕೆಟ್ಟ ಕೆಲಸವನ್ನು ಮಾಡುವುದರಿಂದ ಸುಖವಾಗುವುದಿಲ್ಲ; ಒಳ್ಳೆಯ ಕೆಲಸ ಮಾಡುವುದರಿಂದ ದುಃಖವಾಗುವುದಿಲ್ಲವೆಂಬುದು ಪ್ರಸಿದ್ಧವು. ದುಷ್ಕರ್ಮದಿಂದ ಸುಖವಾಗುವುದಿಲ್ಲ; ಸತ್ಕರ್ಮದಿಂದ ದುಃಖವಾಗುವುದಿಲ್ಲವೆಂಬ ಸಿದ್ಧಾಂತವನ್ನು ತತ್ವಜ್ಞಾನಿಗಳಾದ ಮಹಾತ್ಮರು ತಮ್ಮ ಸ್ವಂತ ಅನುಭವದಿಂದ ದೃಢಪಡಿಸಿಕೊಂಡು ಅದನ್ನು

ಪರಂಪರೆಯಿಂದ ಉಪದೇಶಮಾಡಿರುವರು. (ಪ್ರಕೃತ ಯುದ್ಧವು ಭಗವದ್ವೇಷಿಗಳಾದ ದುರ್ಯೋಧನಾದಿಗಳ ಮತ್ತು ಅವರ ಬಂಧುವರ್ಗದ ನಿಗ್ರಹರೂಪವಾಗಿದೆಯಾಗಿ ಕ್ಷತ್ರಿಯನಾದ ನಿನಗೆ ಅದು ವಿಹಿತವಾದ ಕರ್ಮವೇ ಸರಿ. ಅದು ಪರಲೋಕದುಃಖಕ್ಕೆ ಕಾರಣವಾಗಲಾರದು; ಅಷ್ಟೇ ಅಲ್ಲ; ಪರಲೋಕ ಸುಖದಾಯಕವೂ ಆಗಿದೆ. ಆದಕಾರಣ ಪಾಪಶಂಕೆಯಿಂದ ದುಃಖಿಸುವುದು ನ್ಯಾಯವಲ್ಲವೆಂದು ಭಾವ.)

ಅಥವಾ

ಕೃಷ್ಣನೇ ಈಶ್ವರನು, ಅನಾದಿನಿತ್ಯನು ಎಂದು ತಿಳಿಯದಿರುವ ಜನರನ್ನು ಕುರಿತು 'ನ ತ್ವೇವಾಹಂ' ಎಂಬ ಹನ್ನೆರಡನೆಯ ಶ್ಲೋಕದಿಂದ, ಕೃಷ್ಣಾದಿ ಚೇತನರೆಲ್ಲರೂ ಅನಾದಿ= ಉತ್ಪತ್ತಿರಹಿತರಾಗಿರುವುದರಿಂದ ನಾಶವಿಲ್ಲದವರು=ನಿತ್ಯರು ಎಂಬದಾಗಿ ಆತ್ಮರಿಗೆಲ್ಲಾ ನಿತ್ಯತ್ವವನ್ನು ಸಮರ್ಥನೆಮಾಡಿರುವುದು ಸರಿಯಷ್ಟೆ? ಅದಕ್ಕೆ ಅನಾದಿಯಾದುದೆಲ್ಲವೂ ನಿತ್ಯವೆಂಬ ನಿಯಮವೇ ಮೂಲವು. ಅದನ್ನು ತಿಳಿಯಬೇಕಾದರೆ ಅನಾದಿಯಾಗಿ ನಿತ್ಯವಾಗಿರುವ ಉದಾಹರಣೆಯೊಂದಿರಬೇಕು. ಅಂತಹ ಪ್ರಾಮಾಣಿಕವಾದ ಉದಾಹರಣೆಯೇ ಇಲ್ಲದಿರುವುದರಿಂದ ('ಆತ್ಮರು ನಿತ್ಯರು' ಎಂಬ ಸಮರ್ಥನೆಯು ಸರಿಯಲ್ಲವೆಂದರೆ ಅದಕ್ಕೂ ಈ ಶ್ಲೋಕವು ಉತ್ತರ ವಾಗುವುದು:- ಮಹದಾದಿ ಜಗತ್ತಾಗಿ ಪರಿಣಮಿಸುವ 2ಪ್ರಕೃತಿಗೆ 3ಉತ್ಪತ್ತಿ ನಾಶಗಳಿಲ್ಲ. ಪ್ರಕೃತಿ- ಬ್ರಹ್ಮರು ಅನಾದಿ ನಿತ್ಯರೆಂಬ ಸಿದ್ಧಾಂತವನ್ನು ತತ್ವಜ್ಞಾನಿಗಳಾದ ಮಹಾತ್ಮರು ಸ್ವತಃ ನೋಡಿ ಲೋಕಕ್ಕೆ ಉಪದೇಶಿಸಿರುವರು. ಆದಕಾರಣ ಪ್ರತ್ಯಕ್ಷ ಮೂಲಕವಾದ ಜ್ಞಾನಿಗಳ ಉಪದೇಶ ಪರಂಪರೆ, ವಿಷ್ಣುಪುರಾಣಾದಿ ಆಗಮಾದಿಗಳೂ ಕೂಡ ಪ್ರಕೃತಿಯು ಅನಾದಿನಿತ್ಯವೆಂಬಲ್ಲಿ ಪ್ರಮಾಣವಾಗಿದೆಯಾಗಿ, ಹಿಂದೆ ಹೇಳಿರುವ ನಿತ್ಯತ್ವ ಸಮರ್ಥನೆಗೆ ಮೂಲವಾದ ನಿಯಮಕ್ಕೆ ಪ್ರಕೃತಿಯೇ ಉದಾಹರಣೆಯು ಈ ಪ್ರಕೃತಿಯು ಅನಾದಿಯಾಗಿರುವುದರಿಂದ ಹೇಗೆ ನಿತ್ಯವಾಗಿದೆಯೋ ಹಾಗೆಯೇ ಆತ್ಮರೆಲ್ಲರೂ ಅನಾದಿಗಳಾಗಿರುವುದರಿಂದ ನಿತ್ಯರೆಂದು ಸಿದ್ಧಿಸುತ್ತದೆ, -

1 ಅತ್ರ ಸದಸಚ್ಛಬ್ದೌ ಸಾಧ್ವಸಾಧುಕರ್ಮಪರೌ, ಭಾವಾಭಾವಶಬ್ದೌ ಸುಖದುಃಖವಾಚಕೌ,

ಸಾದ್ಭಾವೇ ಸಾಧುಭಾವೇ ಚ ಸದಿತ್ಯೇತತ್ತ್ವ ಯುಜ್ಯತೇ ಪ್ರಶಸ್ತೇ ಕರ್ಮಣಿ ತಥಾ ...ಗೀತಾ 17,26.

ಸದ್ಭಾನವಾಚಿನಃ ಶಬ್ದಾಃ ಸರ್ವೇ ತೇ ಸುಖವಾಚಿನಃ - ಶಬ್ದ ನಿರ್ಣಯ.

2. ಸಾದ್ಯತೇ=ವ್ಯಕ್ತಮವಗಮ್ಯತೇ ಯತ್, ತತ್ ಸತ್. ನ ಸತ್=ಅಸತ್=ಪ್ರಕೃತಿಃ.

3 ಪ್ರಾಗಭಾವ-ಧ್ವಂಸಗಳೆಂಬ ಎರಡುಬಗೆಯ ಅಭಾವಗಳು ಇಲ್ಲಿನ ಅಭಾವಪದದ ಅರ್ಥ. "ವಿದ್ಯತೇಽಭಾವಃ " ಎಂಬಲ್ಲಿ ಅಭಾವಃ ಎಂದು ಪದಚ್ಛೇದವು.

**ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ**

**ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ॥2-17॥**

**17.** ಪ್ರಕೃತಿಯು ನಮ್ಮ ಪ್ರತ್ಯಕ್ಷಕ್ಕೆ ಗೋಚರವಾಗುವುದಿಲ್ಲ. ಉಪದೇಶ ಪರಂಪರೆಗೆ ಮೂಲವೇ ಸಂಶಯಗ್ರಸ್ತವಾಗಿದೆ. ಪುರಾಣ ವಚನಗಳು 'ಯೋಷಿತಮಗ್ನಿಂ ಧ್ಯಾಯೀತ' ಎಂಬಂತೆ ಉಪಾಸನೆಗಾಗಿ ಇಲ್ಲದುದನ್ನು ಹೇಳುವುದುಂಟು. ಆದುದರಿಂದ ಪ್ರಕೃತಿಯೆಂಬ ವಸ್ತುವೇ ಸಿದ್ಧಿಸುವುದಿಲ್ಲ. ಅಂತಹುದನ್ನು ಆತ್ಮರು ನಿತ್ಯರೆಂಬ ವಿಷಯದಲ್ಲಿ ಉದಾಹರಣೆಯೆಂದು ಹೇಳುವುದು ಹೇಗೆ? ಎಂದರೆ ಈಗ ಪ್ರಕೃತಿಯನ್ನು ಪ್ರಮಾಣಗಳಿಂದ ಸಿದ್ಧಪಡಿಸುವುದು ಪ್ರಕೃತವಲ್ಲವೆಂಬ ಭಾವನೆಯಿಂದ ಆತ್ಮಾತಿರಿಕ್ತವಾದ ಅನೇಕ ಅನಾದಿ ನಿತ್ಯ ವಸ್ತುಗಳಿವೆಯೆಂಬುದನ್ನು ಸಾಮಾನ್ಯ ವ್ಯಾಪ್ತಿಯಿಂದ ವಿವರಿಸಿ ಅವೆಲ್ಲವೂ ದೃಷ್ಟಾಂತವಾಗುತ್ತವೆ ಎಂದು ಹೇಳುತ್ತಾರೆ:- ಈ ಸಕಲ ಜಗತ್ತೂ ಯಾವ ವಸ್ತುವಿನಿಂದ ವ್ಯಾಪಿಸಲ್ಪಟ್ಟಿದೆಯೋ ಅಂತಹ ವ್ಯಾಪಕವಾದ ಅಕಾರಾದಿ ವರ್ಣಸಮುದಾಯ, ಅವ್ಯಾಕೃತಾಕಾಶ ಮುಂತಾದ ವಸ್ತುಗಳೆಲ್ಲವೂ ನಾಶರಹಿತವೆಂದೂ, ಉತ್ಪತ್ತಿಯಿಲ್ಲದುವೆಂದೂ ತಿಳಿ. ಜಗತ್ತಿನಲ್ಲೆಲ್ಲಾ ಒಂದೇ ಸಮನಾಗಿ ವ್ಯಾಪಿಸಿಕೊಂಡಿರುವ ವರ್ಣ-ಆಕಾಶ ಮುಂತಾದುವುಗಳನ್ನು ಬಲಿಷ್ಠ ಪ್ರಯತ್ನಗಳಿಂದಾಗಲೀ ಅಥವಾ ಶಾಪಾದಿ ವಿಶೇಷ ನಿಮಿತ್ತಗಳಿಂದಾಗಲೀ ನಾಶ ಪಡಿಸಲು ಯಾರಿಗೂ ಸಾಧ್ಯವಿಲ್ಲ. ಏಕೆಂದರೆ ವರ್ಣಾದಿಗಳು ಅವ್ಯಯಗಳು ಎಂದರೆ ಹ್ರಾಸ=ವಿಕಾರ ಹೀನಗಳು, ಸ್ವಲ್ಪವಾದರೂ ವಿಕಾರಹೊಂದದಿರುವ ವರ್ಣಾದಿಗಳಿಗೆ ನಾಶವು ಅಸಾಧ್ಯವೆಂದು ಹೇಳಬೇಕಾಗಿಯೇ ಇಲ್ಲ. (ಇಂತಹ ಸರ್ವವ್ಯಾಪಕವಾದ ವರ್ಣಾಕಾಶಾದಿ ಅನೇಕ ಅನಾದಿ ನಿತ್ಯ ವಸ್ತುಗಳಿವೆಯಾಗಿ, ಅವುಗಳ ಉದಾಹರಣೆಯಿಂದ ಆತ್ಮನಿತ್ಯತ್ವವು ಸಿದ್ಧಿಸುತ್ತದೆ. ಹೀಗೆ ಹಿಂದಿನ ಸಮರ್ಥನೆಗೆ ದೃಷ್ಟಾಂತಾಸಿದ್ಧಿ ದೋಷವು ಹೋಗಿ ಅದು ಪರಿಪೂರ್ಣವಾಗುತ್ತದೆಂದು ಭಾವ.

**ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ**

**ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ॥2-18॥**

**18.**ಲೋಕದಲ್ಲಿ ಬಿಂಬ, ಪ್ರತಿಬಿಂಬ ಎಂಬುದಾಗಿ ಎರಡು ವಸ್ತುಗಳು ಪ್ರಸಿದ್ಧವಾಗಿವೆ. ಪ್ರತಿಬಿಂಬವೆಂದರೆ ಬಿಂಬಾಧೀನವಾದ ಬಿಂಬ ಸದೃಶ ವಸ್ತು ಎಂದರ್ಥ. ಮುಖಕ್ಕಿದಿರಾಗಿ ಕನ್ನಡಿಯನ್ನು ಹಿಡಿದರೆ ಕನ್ನಡಿಯೊಳಗೆ ಇನ್ನೊಂದು ಮುಖವು ಕಾಣುವುದು. ಅದೇ ಪ್ರತಿಬಿಂಬವು. ಹೊರಗಿರುವ ಮುಖವೇ ಬಿಂಬವು. ಬಿಂಬದಿಂದ ಪ್ರತಿಬಿಂಬವುಂಟಾಗಲು ಕಾರಣವಾದ ಕನ್ನಡಿಗೆ

ಉಪಾಧಿ ಎಂಬುದಾಗಿ ಸಂಕೇತವು. ಬಿಂಬ, ಉಪಾಧಿ ಮತ್ತು ಇವೆರಡರ ಸನ್ನಿಧಾನ ಎಂಬ ಮೂರು ಕಾರಣಗಳೂ ಒಟ್ಟಾಗಿ ಸೇರಿ ಪ್ರತಿಬಿಂಬವನ್ನು ಉಂಟುಮಾಡುತ್ತವೆ, ಈ ಮೂರು ಕಾರಣಗಳ ಪೈಕಿ ಯಾವುದೊಂದು ಹೋದರೂ ಪ್ರತಿಬಿಂಬವು ನಾಶವಾಗುತ್ತದೆ. ಉದಾ:-"ಮುಖ ಅಥವಾ ಕನ್ನಡಿ ಅಥವಾ ಇವೆರಡರ ಸನ್ನಿಧಾನವು ನಷ್ಟವಾದಾಗ ಪ್ರತಿಬಿಂಬವೆನಿಸಿದ ಒಳಗಿನ ಮುಖವು ನಾಶವಾಗುವುದು. ಪ್ರಕೃತ ಜೀವನು ಪರಮಾತ್ಮನ ಪ್ರತಿಬಿಂಬವೆಂದು 1ಶ್ರುತಿಸ್ಮೃತ್ಯಾದಿಗಳಲ್ಲಿ ಉಕ್ತವಾಗಿದೆ. ಇಲ್ಲಿ ದೇಹವೇ ಉಪಾದಿ; ಬೇರೆಯಿಲ್ಲ. ದೇಹವಾದರೋ ಉತ್ಪತ್ತಿನಾಶವುಳ್ಳುದೆಂದು ಹಿಂದೆಯೇ ನಿರೂಪಿತವಾಗಿದೆ. ದೇಹನಾಶವಾದರೆ ಬಿಂಬ (ಪರಮಾತ್ಮ) ಮತ್ತು ಉಪಾಧಿ (ದೇಹ)ಗಳ ಸನ್ನಿಧಾನವೂ ನಷ್ಟವಾಗುವುದು. ಬಿಂಬವು ನಿತ್ಯವಾದರೂ ದೇಹವೆಂಬ ಉಪಾಧಿನಾಶ ಮತ್ತು ಮೇಲೆ ಹೇಳಿದ ಬಿಂಬೋಪಾಧಿ ಸನ್ನಿಧಿ ನಾಶಗಳೆಂಬ ಎರಡು ಕಾರಣಗಳಿಂದ ಪ್ರತಿಬಿಂಬನಾದ ಜೀವನಿಗೆ ನಾಶವುಂಟೆಂದೇ ಸಿದ್ಧಿಸುವುದರಿಂದ ಜೀವರು ನಿತ್ಯರೆಂಬ ಸಮರ್ಥನೆಯು ಸರಿಯಲ್ಲವೆಂಬ ಆಕ್ಷೇಪಕ್ಕೆ ಸಮಾಧಾನವನ್ನು ಹೇಳುವನು:- ಭರತಕುಲೋತ್ಪನ್ನನಾದ ಅರ್ಜುನಾ! ಜೀವನಿಗೆ ಅನೇಕ ದೇಹಗಳಿವೆ. ಈಗ ಕಾಣುವ ದೇಹವೊಂದೇ ಅಲ್ಲ. ಅವುಗಳಲ್ಲಿ ಸ್ವರೂಪದೇಹವೊಂದು ಅನಾದಿನಿತ್ಯವು ಉಳಿದ ದೇಹಗಳು ಅನಿತ್ಯಗಳು. ಜೀವನು ಈಶ್ವರನ ಪ್ರತಿಬಿಂಬನಾಗುವುದಕ್ಕೆ ನಿತ್ಯಸ್ವರೂಪದೇಹವೇ ಉಪಾಧಿಯು; ಅನಿತ್ಯವಾದ ಈ ಬಾಹ್ಯದೇಹಗಳು ಉಪಾಧಿಯಾಗುವುದಿಲ್ಲ. ಏಕೆಂದರೆ ಇವು ಮುಕ್ತಿಕಾಲದಲ್ಲಿ ಇರುವುದಿಲ್ಲ. ಆಗಲೂ ಜೀವನು ಈಶ್ವರ ಪ್ರತಿಬಿಂಬನೇ ಆಗಿರುವನು. ಆದಕಾರಣ ಮುಕ್ತಿಯಲ್ಲಿಯೂ ಇರುವಂತಹ ಸ್ವರೂಪದೇಹವೇ ಉಪಾಧಿಯೆಂದು ಪ್ರಮಾಣಗಳು ಸಾರುತ್ತಿವೆ. ಅದಕ್ಕೆ ಉತ್ಪತ್ತಿನಾಶಗಳು ಇಲ್ಲವಾಗಿ ಉಪಾಧಿನಾಶದಿಂದ ಜೀವನಾಶವನ್ನು ಶಂಕಿಸುವುದು ಯುಕ್ತವಲ್ಲವೆಂದು 'ಇಮೇ ದೇಹಾಃ=ಕಾಣುತ್ತಿರುವ ಈ ದೇಹಗಳೇ ನಾಶವುಳ್ಳವು. ಇವಲ್ಲದೆ ನಾಶವಿಲ್ಲದ ಬೇರೆ ದೇಹವೂ ಜೀವನಿಗಿದೆ ಎಂಬುದರಿಂದ ಸ್ಪಷ್ಟಪಡುತ್ತದೆ. ಬಿಂಬನಾದ ಈಶ್ವರನು ಅಪ್ರಮೇಯ ಎಂದರೆ ಸರ್ವಗತನಾಗಿರುವುದರಿಂದ ಉಪಾಧಿಯಾದ ಜೀವನ ಸ್ವರೂಪ ದೇಹಕ್ಕೆ ಸರ್ವದಾ ಸನ್ನಿಹಿತನಾಗಿಯೇ ಇರುವನು ಅಂದ ಬಳಿಕ ಬಿಂಬೋಪಾಧಿ ಸನ್ನಿಧಿಯು ನಷ್ಟವಾಗುವ ಸಂಭವವೇ ಇಲ್ಲ. ಆದಕಾರಣ ಬಿಂಬೋಪಾಧಿ ಸನ್ನಿಧಾನ ನಾಶದಿಂದಲೂ ಜೀವನಾಶವನ್ನು ಶಂಕಿಸಲಾಗದು. (ಇದು ಅನಾಶಿನೋಽಪ್ರಮೇಯಸ್ಯ ಎಂಬುದರ ಭಾವ.) ಬಿಂಬನಾದ ಈಶ್ವರನು ನಿತ್ಯನೆಂದು ಹಿಂದೆಯೇ ನಿರೂಪಿಸಿರುವುದರಿಂದ ಬಿಂಬನಾಶ ಪ್ರಯುಕ್ತವಾದ ನಾಶವೂ ಸಂಭವಿಸುವುದಿಲ್ಲ. (ಇದು ನಿತ್ಯಸ್ಯ ಎಂಬುದರ ಅರ್ಥ.) ಒಟ್ಟಿನಲ್ಲಿ ಪ್ರತಿಬಿಂಬನಾದ ಜೀವನ ನಾಶಕ್ಕೆ

ಸಂಭಾವಿತವಾದ, ಬಿಂಬನಾಶ ಉಪಾಧಿನಾಶ ಬಿಂಬೋಪಾಧಿಸನ್ನಿಧಿನಾಶವೆಂಬ ಮೂರು ಕಾರಣಗಳೂ ಇಲ್ಲವಾದುದರಿಂದ ಜೀವನಿಗೆ ಯಾವ ರೀತಿಯಿಂದಲೂ ನಾಶವು ಸಂಭವಿಸುವುದಿಲ್ಲ. ಹೀಗೆ ಜೀವನು ನಿತ್ಯನಾಗಿರುವುದರಿಂದ ಯುದ್ಧದಲ್ಲಿ ಅವನು ನಾಶವಾಗುತ್ತಾನೆಂದು ಶೋಕಿಸುವುದಕ್ಕೆ ಅವಕಾಶವಿಲ್ಲ. ಎಂದಿಗಾದರೂ ಹೋಗಬೇಕಾಗಿಯೇ ಇರುವ ಈ ಬಾಹ್ಯದೇಹವು ಹೋದರೂ ಅದಕ್ಕೆ ಪ್ರತಿನಿಧಿಯಾಗಿ ಸಮೀಚೀನ ದೇಹಾಂತರವು ಬರುವುದರಿಂದ ಶೋಕಕ್ಕೆ ಸಮಾಧಾನವಾಗುವುದು. ಇಷ್ಟಬಂಧು ದರ್ಶನ ಸ್ಪರ್ಶನ ಸಂಭಾಷಣಾದಿಗಳಿಗೆ ಅವಕಾಶ ತಪ್ಪುವುದರಿಂದ ಪ್ರಸಕ್ತವಾಗುವ ಶೋಕವನ್ನು ಅಭಿಮಾನತ್ಯಾಗದಿಂದ ದೂರಮಾಡಬಹುದು. ಹಾಗೆ ಶೋಕ ಬರುವ ಸಂಭವವನ್ನು ವಿವೇಕದಿಂದ ದೂರೀಕರಿಸುವುದೇ ಮೋಕ್ಷಸಾಧನವು. ಆದಕಾರಣ ಅರ್ಜುನಾ! ಯಾವ ಅನರ್ಥವನ್ನೂ ಆಶಂಕಿಸದೇ ಯುದ್ಧ ಮಾಡು!

1. ರೂಪಂ ರೂಪಂ ಪ್ರತಿರೂಪೋ ಬಭೂವ-ಶ್ರುತಿ.

**ಯಂ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ**

**ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ॥2-19॥**

**19.** ಜೀವಾತ್ಮ-ಪರಮಾತ್ಮ ಇವರಿಬ್ಬರ ಸ್ವರೂಪವೂ ನಿತ್ಯವು. ಆದರೆ ಪರಮಾತ್ಮನು ಪೂರ್ಣನು, ಸರ್ವವ್ಯಾಪಕನು, ಯಾವ ವಿಧವಾದ ನಾಶವಿಲ್ಲದವನೂ ಆಗಿರುವ ಸ್ವತಂತ್ರಾತ್ಮನು. ಜೀವನಾದರೋ ಅಪೂರ್ಣನು. ಅವನಿಗೆ ಅನಿಷ್ಟವಾಗಿದ್ದರೂ ದೇಹನಾಶ, ಅದರಿಂದಾಗುವ ದುಃಖಗಳಿಗೆ ಭಾಗಿಯಾಗುತ್ತಿರುವ ಪರಾಧೀನನು - ಎಂದು ನಿರೂಪಿಸಿದುದು ಸರಿಯಲ್ಲ. ಏಕೆಂದರೆ 'ಈ ರಾಜನು ಶತ್ರುವನ್ನು ಸಂಹರಿಸಿದನು' 'ಇವನು ಅವನಿಂದ ಕೊಲ್ಲಲ್ಪಟ್ಟನು' ಎಂಬುದಾಗಿ ವ್ಯವಹರಿಸುವ ವಾಡಿಕೆಯಿದೆ. ಇದರಿಂದ ಜೀವನಿಗೆ ನಾಶ ಮತ್ತು ಸಂಹಾರಾದಿಗಳನ್ನು ಮಾಡುವ ವಿಷಯದಲ್ಲಿ ಜೀವನು ಸ್ವತಂತ್ರನು ಎಂದು ಸಿದ್ಧವಾಗುತ್ತದೆಯಾಗಿ ಉಕ್ತವಾದ ಜೀವನಿತ್ಯತ್ವ-ಪರಾಧೀನತೆಗಳು ಸಂಭವಿಸುವುದಿಲ್ಲವೆಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾನೆ:- ಈ ರಾಜನು ಸ್ವತಂತ್ರವಾಗಿ ಆ ಶತ್ರುವನ್ನು ಸಂಹರಿಸಿದನು' ಎಂದು ಜೀವನೇ ಸ್ವತಂತ್ರನೆಂಬುದಾಗಿ ತಿಳಿಯುವವನು ಮತ್ತು (ಇವನು ಮತ್ತೊಬ್ಬ ಮನುಷ್ಯಮಾತ್ರದವನಿಂದ ಸ್ವತಂತ್ರವಾಗಿ ಕೊಲ್ಲಲ್ಪಟ್ಟನು' ಎಂದು ಜೀವನು ಅನಿತ್ಯನೆಂಬುದಾಗಿ ತಿಳಿಯುವವನು ಇವರಿಬ್ಬರೂ ಜೀವನಿತ್ಯತ್ವ-ಭಗವಸ್ವಾತಂತ್ರಗಳನ್ನು ತಿಳಿಯದ ಮೂಢರೇ ಸರಿ. ಏಕೆಂದರೆ ಹಿಂದೆ ನಿರೂಪಿಸಿರುವಂತೆ ಜೀವನು ಪರಮಾತ್ಮನ ಪ್ರತಿಬಿಂಬನಾಗಿರುವುದರಿಂದ ಸ್ವತಂತ್ರನಲ್ಲ; ಎಲ್ಲಾ ಕಾವ್ಯಗಳಲ್ಲಿಯೂ ಬಿಂಬನಾದ ಪರಮಾತ್ಮನ ಅಧೀನನಾಗಿಯೇ ಇರುವನು. ಅವನ ಪ್ರೇರಣೆಯಿಲ್ಲದೆ ಏನನ್ನೂ ಮಾಡಲಾರನು.

ಮತ್ತು ಬಿಂಬ, ಉಪಾಧಿ, ಅವುಗಳ ಸನ್ನಿಧಾನ ಈ ಮೂರೂ ನಿತ್ಯವಾಗಿರುವುದರಿಂದ ಪ್ರತಿಬಿಂಬನಾದ ಜೀವನ ಸ್ವರೂಪವು ನಿತ್ಯವಾಗಿರುವ ಕಾರಣ ಒಬ್ಬನು ಇನ್ನೊಬ್ಬನನ್ನು ಕೊಲ್ಲುವ ಸಂಭವವಿಲ್ಲ: ತಾನು ಇನ್ನೊಬ್ಬನಿಂದ ಹತನಾಗುವುದೂ ಇಲ್ಲ.

**ನ ಜಾಯತೇ ಮ್ರಿಯತೇ ವಾ ಕದಾಚಿ**

**ನ್ನಾಯಂ ಭೂತ್ವಾ ಭವಿತಾ ವಾ ನ ಭೂಯಃ**

**ಅಜೋ ನಿತ್ಯಃ ಶಾಶ್ವತೋऽಯಂ ಪುರಾಣೋ**

**ನ ಹನ್ಯತೇ ಹನ್ಯಮಾನೇ ಶರೀರೇ॥2-20॥**

**20.** ಜೀವೇಶ್ವರರ ಸ್ವರೂಪವು ಅನಾದಿನಿತ್ಯವು, ಆದರೆ ಜೀವನ ದೇಹವು ಉತ್ಪತ್ತಿನಾಶವುಳ್ಳದ್ದು. ಆದುದರಿಂದಲೇ ಅವನು ಪರಾಧೀನನು. ಈಶ್ವರನ ದೇಹವಾದರೋ ಉತ್ಪತ್ತಿನಾಶರಹಿತವಾದುದು. ಅವನಿಗೆ ಯಾವ ವಿಧವಾದ ನಾಶವೂ ಇಲ್ಲವಾದುದರಿಂದ ಅವನು ಸ್ವತಂತ್ರನು ಎಂಬೀ ವಿಷಯಗಳಲ್ಲಿ ಪ್ರಮಾಣವಾಗಿರುವ ವೇದಮಂತ್ರವನ್ನು ಉದಾಹರಿಸುತ್ತಾನೆ:- (ಈ ಶ್ಲೋಕವು ಜೀವೇಶ್ವರರ ಸ್ವರೂಪವನ್ನು ವಿವೇಚನೆಮಾಡಿ ತಿಳಿಸುತ್ತದೆ.) ಜೀವಪರವಾದ ಅರ್ಥ:- ಈ ಜೀವನು ಹುಟ್ಟು ಸಾವುಗಳಿಲ್ಲದೆ ಯಾವಾಗಲೂ ಒಂದೇ ವಿಧವಾಗಿರುವ ಪರಮೇಶ್ವರನ ಪ್ರತಿಬಿಂಬನಾಗಿರುವುದರಿಂದ ಹುಟ್ಟುವುದಿಲ್ಲ, ಸಾಯುವುದೂ ಇಲ್ಲ. (ಅನಾದಿನಿತ್ಯನು.) ಮತ್ತು ಸರ್ವರೀತಿಯಿಂದಲೂ ಇದ್ದೆ 'ಹುಟ್ಟುವವನು' ಎಂಬ ವ್ಯವಹಾರಕ್ಕೆ ವಿಷಯನೂ ಆಗುವುದಿಲ್ಲ. ಹಾಗಾದರೆ ಅವನು ಹುಟ್ಟಿದನು-ಸತ್ಯನು' ಎಂಬ ವ್ಯವಹಾರಗಳು ಹೇಗೆ? ಎಂದರೆ ಜೀವನು ಈ ಶರೀರವನ್ನು ಬಿಟ್ಟು ಬೇರೆ ಶರೀರವನ್ನು ಹೊಂದುತ್ತಲೇ ಇರುವನು. ಅವನಿಗೆ ಈ ಶರೀರವನ್ನು ಬಿಡುವುದೇ ಸಾವು, ನೂತನ ಶರೀರವನ್ನು ಹೊಂದುವುದೇ ಹುಟ್ಟು, ಏವಂ ಚ ಜೀವನಿಗೆ ಶರೀರ ಪ್ರಾಪ್ತಿ-ಪರಿತ್ಯಾಗಗಳೇ 'ಹುಟ್ಟಿದನು-ಸತ್ತನು' ಎಂಬ ವ್ಯವಹಾರಗಳಿಂದ ತಿಳಿಯಬರುತ್ತವೆ. ಹೀಗೆ ಜೀವನ ದೇಹವು ನಷ್ಟವಾದರೂ ಅವನ ಸ್ವರೂಪವು ಮಾತ್ರ ನಾಶಹೊಂದುವುದೇ ಇಲ್ಲ. ಅದು ಅನಾದಿನಿತ್ಯವೇ ಸರಿ.

ಪರಮಾತ್ಮಪರವಾದ ಅರ್ಥ: [ಈ ಪಕ್ಷದಲ್ಲಿ ಪೂರ್ವಾರ್ಧವನ್ನು ಈಶ್ವರನ ಪರವಾಗಿಯೂ, ಉತ್ತರಾರ್ಧವನ್ನು ಜೀವನ ಪರವಾಗಿಯೂ ಅನ್ವಯಿಸಿಕೊಳ್ಳಬೇಕು. 'ನಾಯಂ' ಎಂಬಲ್ಲಿ ನಾ+ಅಯಂ ಎಂದು ಪದವಿಭಾಗ ಮಾಡಬೇಕು.] ನಾ ಎಂದರೆ ಪರಮಪುರುಷನಾದ ಭಗವಂತನು ಜೀವನಂತೆ ದೇಹಯೋಗ-ವಿಯೋಗಗಳೆಂಬ ಜನನ ಮರಣಗಳನ್ನು ಹೊಂದುವುದಿಲ್ಲ. ಅವನ

ಸ್ವರೂಪ ಮಾತ್ರವೇ ಅಲ್ಲದೆ ಅವನ ದೇಹವೂ ಅನಾದಿ ನಿತ್ಯವು. ಆದಕಾರಣವೇ ಅವನು ಸ್ವತಂತ್ರನೆಂದು ತಾತ್ಪರ್ಯ. ಹಾಗಾದರೆ 'ರಾಮನು ಹುಟ್ಟಿದನು; ಕೃಷ್ಣನು ಪರಂಧಾಮಕ್ಕೆ ಹೋದನು' ಮುಂತಾದ ಜನನಮರಣ ಪ್ರಸಿದ್ಧಿಗೆ ಕಾರಣವೇನೆಂದರೆ:- ಪರಮಾತ್ಮನು ರಾಮಕೃಷ್ಣಾದಿ ರೂಪಗಳಿಂದ ಯಾವಾಗಲೂ ಇದ್ದೇ ಇರುವನು. ಆದರೆ ಆ ರೂಪಗಳು ಯಾವಾಗಲೂ ಜನಗಳಿಗೆ ಗೋಚರವಾಗುವುದಿಲ್ಲ. ಪರಮೇಶ್ವರನು ಸಮಯ ಬಂದಾಗ ತನ್ನ ಅಚಿಂತ್ಯ ಶಕ್ತಿಯಿಂದ ಅವುಗಳನ್ನು ಜನಗಳ ಕಣ್ಣಿಗೆ ಕಾಣುವಂತೆ ಪ್ರಕಟಿಸುವನು. ಹಾಗೆ ಪ್ರಕಟವಾದಾಗ ರಾಮನು ಹುಟ್ಟಿದನು (ಅವತರಿಸಿದನು) ಎಂಬ ಜನನ ಪ್ರಸಿದ್ಧಿಯೂ, ತಿರುಗಿ ಆ ರೂಪವು ಜನಗಳ ಕಣ್ಣಿಗೆ ಕಾಣದಂತೆ ಮಾಡಿದಾಗ 'ಹೋದನು' ಎಂಬ ಮರಣ ಪ್ರಸಿದ್ಧಿಯ ಬಂದಿದೆ. ಅಷ್ಟೇ ಹೊರತು ನ ಭೂಯಃ = ಪರಮಾತ್ಮನಿಗೆ ಜೀವನಂತೆ ದೇಹಯೋಗ ವಿಯೋಗರೂಪವಾದ ಜನನ ಮರಣಗಳಿರುವುದಿಲ್ಲ. ಜೀವನೂ ಕೂಡ ಸ್ವರೂಪತಃ ಉತ್ಪತ್ತಿ ನಾಶರಹಿತನು. ಆದರೂ ಈಶ್ವರನಿಗೆ ಸಮನಾಗಲಾರನು. ಏಕೆಂದರೆ, ಶಾಶ್ವತಃ=ಅನಾದ್ಯನಂತ ಕಾಲಗಳಲ್ಲಿಯೂ ತನ್ನ ಪರಾಧೀನಸ್ವಭಾವವನ್ನು ಬಿಡದೆ ಒಂದೇ ವಿಧವಾಗಿರುವನು. ಕಾರಣವೇನೆಂದರೆ ಪುರಾಣಃ=ತನಗೆ ಇಚ್ಛೆಯಿಲ್ಲದಿದ್ದರೂ ಈ ದೇಹವನ್ನು ಬಿಟ್ಟು ಬೇರೆ ದೇಹವನ್ನು ಸೇರುವನು. ಆದುದರಿಂದಲೇ ಜೀವನು ತನ್ನ ಇಚ್ಛೆಯನ್ನು ಪೂರೈಸಿಕೊಳ್ಳಲಾರದ ಪರಾಧೀನನು ಎಂದು ಸಿದ್ಧಿಸುತ್ತದೆ. ಹೀಗೆ ಸರ್ವನಿಯಾಮಕನಾದ ಪರಮಾತ್ಮನ ಇಚ್ಛೆಯಿಂದ ಜೀವನ ಬಾಹ್ಯದೇಹವು ನಷ್ಟವಾದರೂ ಕೂಡ ಅವನ ಸ್ವರೂಪಕ್ಕೆ ಯಾವ ಧಕ್ಕೆಯೂ ಆಗುವುದಿಲ್ಲ; ಅದು ಅನಾದಿನಿತ್ಯವೇ ಸರಿ.

**ವೇದಾಽವಿನಾಶಿನಂ ನಿತ್ಯಂ ಯ ಏನಮಜಮವ್ಯಯಂ**

**ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹಂತಿ ಕಮ್॥2-21॥**

**21.** ಜೀವಾತ್ಮನು ಅನಿತ್ಯನು, ಸ್ವತಂತ್ರನು ಎಂದು ತಿಳಿಯುವವನು ಅಜ್ಞಾನಿಯು. ಈಶ್ವರ ಪ್ರತಿಬಿಂಬವಾದ ಜೀವನು ಹೇಗೆ ಸ್ವತಂತ್ರನಾದಾನು! ಬಿಂಬನಾದ ಈಶ್ವರನ ಅಧೀನನವೇ ಸರಿ. ಮತ್ತು ಬಿಂಬಾದಿಗಳು ನಿತ್ಯವಾಗಿರುವುದರಿಂದ ಪ್ರತಿಬಿಂಬನೆನಿಸಿದ ಜೀವನೂ ನಿತ್ಯನೇ ಆಗಿರಬೇಕು ಮುಂತಾಗಿ 'ಯ ಏನಂ' ಇತ್ಯಾದಿ ಶ್ಲೋಕಗಳಿಂದ ನಿರೂಪಿತವಾಗಿದೆ. ಜ್ಞಾನಿಯಾದರೋ - ನಾನು ಅಸ್ವತಂತ್ರನು, ಹರಿಯೇ ಸ್ವತಂತ್ರನು, ಅವನ ಪ್ರೇರಣೆಯಿಲ್ಲದೆ ಸ್ವಯಂ ಏನನ್ನೂ ಮಾಡಲಾರೆನು ಮುಂತಾಗಿ ಜೀವೇಶ್ವರ ಸ್ವರೂಪವನ್ನು ಯಥಾವತ್ತಾಗಿ ತಿಳಿದು ಸ್ವಾತಂತ್ರಾಭಿಮಾನವನ್ನು ಹೊಂದುವುದಿಲ್ಲವಾಗಿ "ನಾನೇ ಸ್ವಯಂ ಇವನನ್ನು ಕೊಲ್ಲುವೆನು,

ಕೊಲ್ಲಿಸುವನು' ಮುಂತಾದ ಭಾವನೆಯನ್ನು ಹೊಂದುವುದಿಲ್ಲವೆಂದು ಹೇಳುತ್ತಾನೆ:- [ ಈ ಶ್ಲೋಕಕ್ಕೆ ಜೀವ ಮತ್ತು ಈಶ್ವರಪರವಾಗಿ ಎರಡು ಅರ್ಥಗಳಿವೆ] ಜೀವನು ಬಿಂಬನಾಶ, ಉಪಾಧಿನಾಶ ಮುಂತಾದ ವಿಶೇಷ ಕಾರಣಗಳಿಂದಲೂ, ಸ್ವಾಭಾವಿಕವಾಗಿಯೂ ಸ್ವರೂಪನಾಶಮಾತ್ರ ಹೊಂದದೆ ಸ್ವರೂಪೋತ್ಪತ್ತಿ ವಿಕಾರರಹಿತನಾಗಿರುವನೆಂದೂ, ಈಶ್ವರನಾದರೋ ದೇಹನಾಶವೂ ಇಲ್ಲದವನು, ಸ್ವರೂಪನಾಶಹೀನನು, ಉತ್ಪತ್ತಿಶೂನ್ಯನು ಮತ್ತು ನಿರ್ವಿಕಾರನೂ ಆಗಿರುವುದರಿಂದ ಸ್ವತಂತ್ರನಾಗಿರುವನೆಂದೂ ತಿಳಿದಿರುವವನು ತತ್ವಜ್ಞಾನಿಯು, ಪಾರ್ಥಾ! ಹೀಗೆ ಜೀವೇಶ್ವರಸ್ವರೂಪವನ್ನು ಯಥಾವತ್ತಾಗಿ ತಿಳಿದಿರುವ ಜ್ಞಾನಿಯು 'ನಾನೇ ಇವನನ್ನು ಕೊಲ್ಲುವೆನು, ಕೊಲ್ಲಿಸುವೆನು' ಮುಂತಾದ ಸ್ವಾತಂತ್ರ್ಯದಿ ಭಾವನೆಯನ್ನು ಹೊಂದುವುದೇ ಇಲ್ಲ. ಮತ್ತೇನೆಂದರೆ :- ಶ್ರೀಹರಿಯೇ ಸರ್ವಕರ್ತನು, ಕಾರಯಿತೃವು ಮತ್ತು ಪ್ರೇರಕನು. ಅವನ ಪ್ರೇರಣೆಯಿಲ್ಲದೆ ಯಾವನೂ ಏನನ್ನೂ ಮಾಡಲಾರನು. ಅವನ ಪ್ರೇರಣೆಯಂತೆಯೇ ಸಕಲವೂ ನಡೆಯುವುದು' ಎಂದು ಭಾವಿಸುವನು.

**ವಾಸಾಂಸಿ ಜೀರ್ಣಾನಿ ಯಥಾ ವಿಹಾಯ**
**ನವಾನಿ ಗೃಹ್ಣಾತಿ ನರೋಽಪರಾಣಿ**
**ತಥಾ ಶರೀರಾಣಿ ವಿಹಾಯ ಜೀರ್ಣಾ**
**ನ್ಯನ್ಯಾನಿ ಸಂಯಾತಿ ನವಾನಿ ದೇಹೀ॥2-22॥**

**22.**'ನ ಜಾಯತೇ' ಇತ್ಯಾದಿ ಶ್ಲೋಕದಲ್ಲಿ 'ಪುರಾಣ' ಪದದಿಂದ ಉಕ್ತನಾದ ಜೀವನು ಒಂದು ದೇಹವನ್ನು ಬಿಟ್ಟು ಮತ್ತೊಂದು ದೇಹವನ್ನು ಹೊಂದುತ್ತಿರುವನು ಎಂಬುದು ಅತ್ಯಂತ ಭಿನ್ನಗಳಾದ ಅನೇಕ ದೇಹಗಳಲ್ಲಿ ಒಬ್ಬನೇ ಆತ್ಮನಿದ್ದರೇ ಸರಿಯಾಗುವುದು. ಅದೇ ಅಂಶವನ್ನೇ 'ದೇಹಿನೋಽಸ್ಮಿನ್' ಇತ್ಯಾದಿ ಶ್ಲೋಕದಲ್ಲಿ ಕೌಮಾರಾದಿ ದೇಹಗಳ ದೃಷ್ಟಾಂತದಿಂದ ಸಮರ್ಥಿಸಿದೆ. ಆದರೂ ಕೌಮಾರ, ಯೌವನಾದಿ ದೇಹಗಳು ಪರಸ್ಪರ ಭಿನ್ನವಾಗಿ ಕಾಣಿಸುವುದಿಲ್ಲವಾಗಿ ಆ ದೃಷ್ಟಾಂತದಿಂದ ಅತ್ಯಂತ ಭಿನ್ನವಾದ ಅನೇಕ ದೇಹಗಳಲ್ಲಿ ಒಬ್ಬನೇ ಆತ್ಮನಿರುವನೆಂಬ ಅಂಶವು ಸ್ಪಷ್ಟ ಪಡುವುದಿಲ್ಲವಾದಕಾರಣ ಅತ್ಯಂತ ಭಿನ್ನವಸ್ತುಗಳ ದೃಷ್ಟಾಂತದಿಂದ ಅದನ್ನು ಸ್ಪಷ್ಟವಾಗಿ ನಿರೂಪಿಸುತ್ತಾನೆ:- ಮನುಷ್ಯನು ಹಳೆಯ ಹರಿದ ವಸ್ತ್ರಗಳನ್ನು ಬಿಟ್ಟು ಹೊಸಬಟ್ಟೆಗಳನ್ನು ಧರಿಸುವಂತೆ ಜೀವನೂ ಶಿಥಿಲವಾದ ಮುದಿದೇಹಗಳನ್ನು ಬಿಟ್ಟು ಬೇರೆ ನೂತನವಾದ ಬಾಲದೇಹಗಳನ್ನು ಹೊಂದುವನು. (ಇಲ್ಲಿ ಅತ್ಯಂತ ಭಿನ್ನವಾದ ವಸ್ತ್ರ ದೇಹಗಳನ್ನು ಜೀವ

ದೇಹಗಳಿಗೆ ದೃಷ್ಟಾಂತವಾಗಿ ಹೇಳಿರುವುದರಿಂದ ವಸ್ತ್ರ ದೇಹಗಳಂತೆ ಜೀವದೇಹಗಳು ಅತ್ಯಂತ ಭಿನ್ನಗಳೆಂದು ಸ್ಪಷ್ಟ ಪಡಿಸಿದಂತಾಯಿತು. ಹೀಗೆ ಅತ್ಯಂತ ಭಿನ್ನವಾದ ಅನೇಕ ದೇಹಗಳು ಒಬ್ಬ ಆತ್ಮನಿಗೇ ಬರುವ ಕಾರಣ ಅವುಗಳಲ್ಲೆಲ್ಲಾ ಒಬ್ಬ ಜೀವನೇ ಇರುವನೆಂದು ಸಿದ್ಧವಾಗುತ್ತದೆಂದು ಭಾವ.)

**ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ**

**ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ॥2-23॥**

23.ಜೀವನಿಗೆ ಸ್ವಾಭಾವಿಕವಾಗಿಯೂ, ವಿಶೇಷ ಕಾರಣಗಳಿಂದಲೂ ನಾಶವಿಲ್ಲವೆಂದು ಉಕ್ತವಾಗಿದೆ. ಅಮರ ವರ್ಗಕ್ಕೆ ಸೇರಿದ ದಕ್ಷಪ್ರಜೇಶ್ವರನು ಮರಣರಹಿತನಾದರೂ ಪ್ರಬಲವಾದ ವೀರಭದ್ರನ ತ್ರಿಶೂಲಾಯುಧದಿಂದ ಮರಣಹೊಂದಿದಂತೆ ಇತರ ಜೀವರೂ ಕೂಡ ಶಸ್ತ್ರಾದಿ ಪ್ರಬಲ ಕಾರಣಗಳಿಂದ ನಾಶಹೊಂದಲಿ ಎಂದರೆ, ಹೇಳುತ್ತಾನೆ:- ಶಸ್ತ್ರಗಳು ಈ ಜೀವನನ್ನು ಕತ್ತರಿಸಲಾರವು. ಅಗ್ನಿಯು ಈ ಜೀವನನ್ನು ಸುಡಲಾರದು. ನೀರೂ ಕೂಡ ಈ ಜೀವನನ್ನು ತೋಯಿಸಿ ಶಿಥಿಲಪಡಿಸಲಾರದು. ಗಾಳಿಯು ಇವನನ್ನು ಒಣಗಿಸಲಾರದು.

**ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ**

**ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ॥2-24॥**

24.'ನ ಛಿಂದಂತಿ' ಇತ್ಯಾದಿ ಕ್ರಿಯಾಪದಗಳು ವರ್ತಮಾನಕಾಲದಲ್ಲಿ ಛೇದವನ್ನು ನಿಷೇಧಿಸುತ್ತವೆ. ಈಗಿರುವುದರಿಂದ ಹಿಂದೆ ನಾಶವಾಗಿಲ್ಲವೆಂದು ತಿಳಿಯಬಹುದು. ಆದರೂ ಮುಂದೆ ಯಾವಾಗಲಾದರೂ ಶಸ್ತ್ರಾದಿಗಳಿಂದ ಜೀವನಿಗೆ ನಾಶವಾಗಬಹುದಲ್ಲವೆ ಎಂದರೆ, ಹೇಳುತ್ತಾನೆ:- ಯಾವ ಜೀವನನ್ನೇ ಆಗಲಿ ಶಸ್ತ್ರದಿಂದ ಕತ್ತರಿಸುವುದಕ್ಕೂ, ಬೆಂಕಿಯಿಂದ ಸುಡುವುದಕ್ಕೂ, ನೀರಿನಲ್ಲಿ ತೋಯಿಸಿ ಶಿಥಿಲ ಮಾಡುವುದಕ್ಕೂ, ಗಾಳಿಯಿಂದ ಒಣಗಿಸುವುದಕ್ಕೂ ಸರ್ವಥಾ ಸಾಧ್ಯವಾಗಲಾರದು. ಜೀವನು ಛೇದನಾದಿಗಳಿಗೆ ಯೋಗ್ಯವಸ್ತುವೇ ಅಲ್ಲವಾದ ಕಾರಣ ಮುಂದೆ ಛೇದನಾದಿಗಳಾದೀತೆಂಬ ಶಂಕೆಗೆ ಅವಕಾಶವಿಲ್ಲ. ಆತ್ಮನು ಛೇದನಾದ್ಯನರ್ಹನೆಂಬುದು ಹೇಗೆಂದರೆ :- '1 ನಿತ್ಯಃ ಸರ್ವಗತಃ ಸ್ಥಾಣುಃ=ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿ ಅವಿಚ್ಛಿನ್ನನಾಗಿ ಸರ್ವಗತನು, ಯಾವ ಕಾರಣದಿಂದಲೂ '2. ವಿಕಾರ ಹೊಂದದಿರುವಂತಹ ಸ್ಥಿರಸ್ವಭಾವದವನ್ನು ಪ್ರಾಕೃತ ಚಲನಹೀನನು ಮತ್ತು ಶ್ರುತಿಸ್ಮೃತಿರೂಪ ಶಬ್ದ ಪ್ರತಿಪಾದ್ಯನೂ ಆಗಿರುವ ಈಶ್ವರನ ಪ್ರತಿಬಿಂಬವೇ ಈ ಜೀವನು. ಸಾಮಾನ್ಯವಾಗಿ ಬಿಂಬದ ಗುಣವು ಪ್ರತಿಬಿಂಬದಲ್ಲಿ

ಬರುತ್ತದೆ. ಜೀವರೆಲ್ಲರೂ ಭೇದನಾದ್ಯನರ್ಹನಾದ ಪರಮಾತ್ಮನ ಪ್ರತಿಬಿಂಬವಾಗಿರುವುದರಿಂದ ಅವರೂ ಭೇದನಾದ್ಯನರ್ಹರೆಂದು ಸಿದ್ಧಿಸುತ್ತದೆ. 'ನಿತ್ಯ: (ನಿತ್ಯಂ) ಸರ್ವಗತಸ್ಥಾಣು? ಎಂಬುದಾಗಿ ಒಂದೇ ಪದವನ್ನೂ ಮಾಡಬಹುದು. ಆಗ 'ನಿತ್ಯ ಸತ್ವಗತನಾದ ಹರಿಯಲ್ಲಿ ಆಶ್ರಯಿಸಿಕೊಂಡಿರುವ ಅಣುಜೀವನು' ಎಂದು ಅರ್ಥವಾಗುತ್ತದೆ. ಅದರಿಂದ ಜೀವನು ಹರಿಯ ಅಧೀನನು ಮತ್ತು ಯಾವಾಗಲೂ ಅವನ ಸನ್ನಿಧಾನವನ್ನೇ ಹೊಂದಿರುವವನು ಎಂದು ಸಿದ್ಧಿಸುವುದರಿಂದ ಪ್ರತಿಬಿಂಬತ್ವ ನಿತ್ಯತ್ವಗಳನ್ನು ವಿವರಿಸಿದಂತಾಗುವುದು.

1 ಇಲ್ಲಿ ಸರ್ವಗತಃ, ಸ್ಥಾಣುಃ ಎಂದು ಪದವಿಭಾಗ, ನಿತ್ಯಃ ಎಂಬುದು ಸರ್ವಗತಃ ಎಂಬುದಕ್ಕೆ ವಿಶೇಷಣವು. ಹೀಗೆ ವಿವಕ್ಷೆಮಾಡುವುದರಿಂದ ಮೇಲ್ಕಂಡ ಅರ್ಥವು ಲಭಿಸುತ್ತದೆ.

2 'ತದೈಕ್ಷತ' ಇತ್ಯಾದಿ ಶ್ರುತಿಯಿಂದ ಪರಮಾತ್ಮನು ಈಕ್ಷಣಾದಿ ಕರ್ತನೆಂದು ಸಿದ್ಧಿಸುತ್ತದೆ. ಯಾವನೇ ಆಗಲಿ ಕಾರ್ಯಮಾಡಬೇಕೆಂಬ ಅಭಿನಿವೇಶವಿಲ್ಲದೆ ಕರ್ತನೆನಿಸಲಾರನು, ಅಭಿನಿವೇಶವೂ ಒಂದು ತೆರನಾದ ವಿಕಾರವೇ ಸರಿ. ಅಂದಬಳಿಕ ಕರ್ತನೆಂದು ಉಕ್ತನಾಗಿರುವ ಪರಮಾತ್ಮನು ವಿಕಾರಿಯೆಂದಾಯಿತು. ಹೀಗಿರುವುದರಿಂದ ಇಲ್ಲಿ ಸ್ಥಾಣು' ಎಂಬ ಪದದಿಂದ ಪರಮಾತ್ಮನು ಯಾವ ವಿಧವಾದ ವಿಕಾರವಿಲ್ಲದವನೆಂದು ಹೇಳಿರುವುದು ಸರಿಯಲ್ಲವೆಂಬ ಶಂಕೆಯು ಬರುವುದು. ಆದರೆ ಲೋಕದಲ್ಲಿ ಕರ್ತನಾಗಬೇಕಾದರೆ ಅಭಿನಿವೇಶವೆಂಬ ವಿಕಾರದ ಅವಶ್ಯಕತೆಯು ಕಂಡಿರುವುದೇನೋ ನಿಜ. ಯಾವ ಪದಾರ್ಥವು ಲೌಕಿಕಪ್ರಮಾಣಗಳಿಂದ ಸಿದ್ಧಿಸುವುದೋ ಅದು ಲೋಕನೀತಿಯನ್ನು ಅನುಸರಿಸುವುದಾಗಿರುತ್ತದೆ. ಜೀವನು ಲೌಕಿಕವಾದ ಸಾಕ್ಷಿಪ್ರಮಾಣಗಮ್ಯನಾಗಿರುವುದರಿಂದ ಅವನು ಕರ್ತನಾಗಬೇಕಾದರೆ ಈ ವಿಕಾರವು ಬರಬೇಕಾದುದೇ ಸರಿ. ಪ್ರಕೃತ ಪರಮಾತ್ಮನು ಸನಾತನ=ವೇದೈಕಗಮ್ಯನು. ಎಂದರೆ ಲೌಕಿಕಪ್ರಮಾಣಗಳಿಂದ ಸಿದ್ಧಿಸುವವನಲ್ಲ. ಅಲೌಕಿಕನು. ಲೋಕನೀತಿಬದ್ಧನಲ್ಲ. ಅಂತಹವನ ವಿಷಯದಲ್ಲಿ ಲೋಕನ್ಯಾಯಾನುಸಾರವಾಗಿ ಬರುವ ಶಂಕೆಯು ಹೇಗೆ ಯುಕ್ತವಾದೀತು? ಎಂದರೆ ಪರಮಾತ್ಮನಿರುವನೆಂದು ತಿಳಿಸುವ ಪ್ರಮಾಣವು (ಅವನು ಅಚಿಂತ್ಯಾದ್ಭುತಸಾಮರ್ಥ್ಯವುಳ್ಳವನು. ಲೋಕದಲ್ಲಿ ಒಟ್ಟಿಗೆ ಸೇರದಿರುವ (ವಿರುದ್ಧವೆನಿಸುವ) ಧರ್ಮಗಳನ್ನು ಕೂಡ ತನ್ನಲ್ಲಿ ಒಟ್ಟಿಗೆ ಸೇರಿಸಿಕೊಳ್ಳುವ ಶಕ್ತಿಯುಳ್ಳವನು' ಇತ್ಯಾದಿ ಅದ್ಭುತಮಹಿಮೆಯುಳ್ಳವನೆಂದೇ ಸಾರುತ್ತಿದೆ, ಆದುದರಿಂದ ಲೋಕನ್ಯಾಯಾನುಸಾರಿಯಾದ ಶಂಕೆಗಳಿಗೆ ಪರಮಾತ್ಮನಲ್ಲಿ ಎಡೆಯಿಲ್ಲ.

**ಅವ್ಯಕ್ತೋಽಯಮಚಿಂತ್ಯೋಽಯಮವಿಕಾರ್ಯೋಽಯಮುಚ್ಯತೇ**
**ತಸ್ಮಾದೇನಂ ವಿದಿತ್ವೈವಂ ನಾನುಶೋಚಿತುಮರ್ಹಸಿ॥2-25॥**

೨೫. ಅಣುವಾದ ಜೀವನಿಗೆ ಆಶ್ರಯನಾದ ಪರಮಾತ್ಮನು ಎಲ್ಲಾ ಕಡೆಯೂ ಇದ್ದ ಮೇಲೆ ಅವನೇಕೆ ಕಾಣಿಸುವುದಿಲ್ಲವೆಂದರೆ ಹೇಳುತ್ತಾನೆ:- ಹಿಂದೆ ಸರ್ವಗತನೆಂದು ಉಕ್ತನಾದ ಹರಿಯು ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಪರಮಾತ್ಮನು ನಾಶಹೊಂದದಿರುವಂತಹ ದೇಹಸಹಿತನಾಗಿ ಎಲ್ಲಾ ಕಡೆಯೂ ಇದ್ದ ಮೇಲೆ ಅವನು ಕಾಣಿಸದಿರುವುದು ಹೇಗೆ ಎಂದರೆ, ಅಚಿಂತ್ಯ=ಅಚಿಂತ್ಯಾದ್ಭುತ ಸಾಮರ್ಥ್ಯವುಳ್ಳವನು. (ದೇಹಸಹಿತನಾಗಿ ಸರ್ವತ್ರ ಸದಾ ಇದ್ದರೂ ತನ್ನ ವಿಶೇಷ ಶಕ್ತಿಯಿಂದ ಎಲ್ಲರಿಗೂ ಕಾಣಿಸದಂತೆಯೇ ಇರುವನು. ಭಕ್ತ ಯೋಗಿಗಳಿಗೆ ಮಾತ್ರ ಪ್ರಸನ್ನನಾಗಿ ದೃಶ್ಯನಾಗುವನು.) ಅಂತಹ ಅಚಿಂತ್ಯಶಕ್ತಿಗೆ ಯಾವಾಗಲಾದರೂ ತಡೆ ಅಥವಾ ನಾಶ ಸಂಭವಿಸಿದರೆ ಆಗಲಾದರೂ ಅವನು ಸ್ಪಷ್ಟವಾಗಿ ಕಾಣಬೇಕಲ್ಲವೆ ಎಂದರೆ, ಅವಿಕಾರ=ಆ ಶಕ್ತಿಯು ಯಾವಾಗಲೂ ಏಕರೂಪವಾಗಿರುವುದು ಮತ್ತು ಅಪ್ರತಿಹತವಾಗಿರುವುದು, ಆದಕಾರಣ ಅದಿಲ್ಲದಿರುವ ಸಮಯವೇ ದೊರೆಯುವುದಿಲ್ಲವಾಗಿ ಅವನ ಅವ್ಯಕ್ತಸ್ವಭಾವಕ್ಕೆ ಯಾವ ಕುಂದೂ ಬರುವುದಿಲ್ಲ. ಈ ರೀತಿ ಹರಿಯಲ್ಲಿ ಅಚೈದ್ಯಾದಿ ಸ್ವಭಾವವಿದೆಯೆಂದು 'ಸದ್ದೇಹಃ ಸುಖಗಂಧಶ್ಚ'

ಇತ್ಯಾದಿ ಶ್ರುತಿಗಳಲ್ಲಿ ಉಕ್ತವಾಗಿದೆ. (ಈ ರೀತಿ ಜೀವನಾಶಕ್ಕೆ ಕಾರಣವಾಗಬಹುದಾದ ಬಿಂಬ, ಉಪಾಧಿ ಮತ್ತು ಇವೆರಡರ ಸಾನ್ನಿಧ್ಯ ಇವುಗಳ ನಾಶ, ಶಾಪಾದಿ ನಿಮಿತ್ತ ವಿಶೇಷಗಳು ಮತ್ತು ಶಸ್ತ್ರಾಸ್ತ್ರಾದಿ ಕಾರಣಗಳೂ ಕೂಡ ಇಲ್ಲವಾದುದರಿಂದ ಆತ್ಮನಾಶವಾಗುವ ಸಂಭವವೇ ಇಲ್ಲವಾಗಿ, ಅನಾದಿನಿತ್ಯನಾದ ಆತ್ಮನ ಸ್ವರೂಪವನ್ನು ಮತ್ತು ಸರ್ವಸ್ವತಂತ್ರನಾದ ಹರಿಯೇ ಸಕಲ ದುಃಖ ನಿವೃತ್ತಿ ಪೂರ್ವಕ ಪರಮಾನಂದದಾತನು, ಜೀವನು ಅವನ ಅಧೀನನು, ಬದ್ಧನು ಮತ್ತು ಶ್ರೀಹರಿ ಪ್ರಸಾದದಿಂದಲೇ ಮುಕ್ತಿಯನ್ನು ಪಡೆಯುವವನು ಎಂಬುದಾಗಿ ಜೀವೇಶ್ವರಸ್ವರೂಪವನ್ನೂ ಕೂಡ ಯಥಾವತ್ತಾಗಿ ತಿಳಿದುಕೊಂಡು ಶೋಕವನ್ನು ದೂರಮಾಡಿ ವಿಹಿತ ಯುದ್ಧಾದಿ ಕರ್ಮದಿಂದ ಭಗವಂತನನ್ನು ಆರಾಧಿಸುವುದರ ಮೂಲಕ ನೀನು ಮುಕ್ತನಾಗುವೆ. ಆದಕಾರಣ ನೀನು ದುಃಖಪಡುವುದು ಯೋಗ್ಯವಲ್ಲವೆಂದು ತಾತ್ಪರ್ಯ:)

**ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಂ**
**ತಥಾऽಪಿ ತ್ವಂ ಮಹಾಬಾಹೋ ನೈನಂ ಶೋಚಿತುಮರ್ಹಸಿ॥2-26॥**

**ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ**
**ತಸ್ಮಾದಪರಿಹಾರ್ಯೇऽರ್ಥೇ ನ ತ್ವಂ ಶೋಚತುಮರ್ಹಸಿ॥2-27॥**

**26-27.** ಆತ್ಮಸ್ವರೂಪವು ನಿತ್ಯವಾದರೂ ಅವನಿಗೆ ದೇಹಬರುವುದೆಂಬ ಜನನವೂ, ದೇಹನಾಶವೆಂಬ ಮರಣವೂ ಸಹ ತಪ್ಪುವುದಿಲ್ಲ. ಯುದ್ಧ ಮಾಡಿದರೆ ಬಂಧುಗಳ ಮರಣವಾಗುವುದು ಖಂಡಿತ. ಅದರಿಂದ ಅವರಿಗೆ ದುಃಖವಾಗುವ ಪ್ರಸಂಗವಿರುವ ಕಾರಣ ನಾನು ದುಃಖಪಡುವೆನು. ಯುದ್ಧದಲ್ಲಿ ತೊಡಗಲಾರೆನು ಎಂಬ ಅರ್ಜುನನ ಮನೋಗತವನ್ನು ಆಶಂಕಿಸಿ ಸಮಾಧಾನ ಹೇಳುವನು:- ಅರ್ಜುನಾ! (1) ಈ ಜೀವನು ತಪ್ಪದೆ ದೇಹಯೋಗ ವಿಯೋಗರೂಪ ಜನನ ಮರಣಗಳುಳ್ಳವನೆಂದು ತಿಳಿದಿರುವೆಯಲ್ಲವೆ? ಆದರೂ ಮಹಾವೀರನಾದ ನೀನು ಈ ಜೀವರ ವಿಷಯದಲ್ಲಿ ದುಃಖಿಸುವುದು ಉಚಿತವಲ್ಲ. ಏಕೆಂದರೆ, ಹುಟ್ಟಿದವರಿಗೆ ಸಾವೂ, ಸತ್ತವರಿಗೆ ತಿರುಗಿ ಜನನವೂ ಮೋಕ್ಷಪರ್ಯಂತವಾಗಿ ತಪ್ಪದೆ ಬಂದೇ ಬರುವುದು ಅದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಹೀಗೆ ಪರಿಹರಿಸಲು ಅಶಕ್ಯವಾದ ಬಂಧುಮರಣವನ್ನು ಕುರಿತು ನೀನು ಶೋಕಿಸುವುದು ಯೋಗ್ಯವಲ್ಲ. (೨) ನೀನು ಯುದ್ಧ ಮಾಡದೆ ಬಿಟ್ಟರೆ ಭೀಷ್ಮಾದಿಗಳು ಯಾವಾಗಲೂ ಸಾಯದೇ ಉಳಿಯುವ ಹಾಗಿದ್ದರೆ ಯುದ್ಧವನ್ನು ಬಿಡಬಹುದು ಯುದ್ಧವಾಗಲಿ, ಆಗದಿರಲಿ ಭೀಷ್ಮಾದಿಗಳು ಸಾಯುವುದಂತೂ ನಿಶ್ಚಯ. ಅದನ್ನು ತಡೆಯಲು ಸಾಧ್ಯವೇ ಇಲ್ಲ. ಆದುದರಿಂದ

ಅವರ ಸಾವಿಗಾಗಿ ದುಃಖಿಸುವುದು ನ್ಯಾಯವಲ್ಲ. (೩) ನೀನಾದರೂ ಸಾಯದೇ ಇರುವವನಾಗಿದ್ದರೆ ಭೀಷ್ಮಾದಿಗಳನ್ನು ಬಿಟ್ಟು ಅನಂತಕಾಲ ಹೇಗೆ ಜೀವಿಸಲಿ ಎಂದು ಶೋಕಿಸಬಹುದಾಗಿದ್ದಿತು. ನಿನಗೂ ಮರಣವು ನಿಯತವಾಗಿರುವುದರಿಂದ ಶೋಕವು ಉಚಿತವಲ್ಲ. (೪) ಯುದ್ಧವಾದರೆ ಮರಣವಾಗುವುದರಿಂದ ಯುದ್ಧವನ್ನು ಬಿಟ್ಟು ಬೇರೆ ಕಾರ್ಯವನ್ನು ಮಾಡೋಣವನ್ನುವಿಯಾ? ಅದೂ ಸರಿಯಲ್ಲ. ಯುದ್ಧವು ಕ್ಷತ್ರಿಯನಾದ ನಿನಗೆ ವಿಹಿತಧರ್ಮವು; ಅದನ್ನು ಬಿಟ್ಟರೆ ನಿನಗೆ ಪಾಪ ಬರುತ್ತದೆ. ಯುದ್ಧವಾದರೋ ನಿನಗೆ ಅಪರಿಹಾರ್ಯವಾಗಿ ಒದಗಿದೆ. ಬಿಡುವ ಹಾಗಿಲ್ಲವಾದ್ದರಿಂದ ಅದಕ್ಕಾಗಿ ಶೋಕಿಸಬೇಡ. (೫) ಅರ್ಜುನಾ! ಭೀಷ್ಮಾದಿಗಳಿಗೆ ಆಯುಷ್ಯವು ತೀರಿದಮೇಲೆ ಮರಣವಾಗುವ ಸಂಭವವಿದ್ದರೂ ಯುದ್ಧ ಮಾಡಿದರೆ ಈಗಲೇ ನನ್ನಿಂದ ಅವರಿಗೆ ಮರಣವಾಗುವುದು. ಅದನ್ನು ತಡೆಯುವೆನೆನ್ನುವಿಯಾ? ಅದೂ ಸರಿಯಲ್ಲ. ಹನನಾದಿಗಳನ್ನು ಮಾಡುವುದಕ್ಕೂ, ಬಿಡುವುದಕ್ಕೂ ನೀನು ಸ್ವತಂತ್ರನಲ್ಲ. ಭಗವಂತನೇ ಸರ್ವಸ್ವತಂತ್ರನು. ಅವನು ನಿನ್ನ ಮೂಲಕವಾಗಿಯೇ ಭೀಷ್ಮಾದಿಗಳ ಹನನವಾಗಬೇಕೆಂದು ಸಂಕಲ್ಪಿಸಿದ್ದರೆ ಅದನ್ನು ತಡೆಯಲು ನಿನಗೆ ಸಾಧ್ಯವಾಗಲಾರದು. ಬೇಡವೆಂದರೂ ಯುದ್ಧವು ನಿನಗೆ ಅಪರಿಹಾರ್ಯವು. (೬) ಅಪರಿಹಾರ್ಯ ಎಂದರೆ, ಆ=ವಿಷ್ಣು ಪ್ರಸಾದದಿಂದಲೇ, ಜನನಮರಣ ಪರಿಹಾರವಾಗುವುದು. ಅದಕ್ಕೆ ಬೇರೆ ಉಪಾಯವಿಲ್ಲ. ಹೀಗೆ ಭಗವಂತನಿಂದಲೇ ಸಾಧ್ಯವಾದ ವಿಷಯದಲ್ಲಿ ನೀನು ದುಃಖಿಸುವುದು ಯುಕ್ತವಲ್ಲ. ನಿನ್ನಲ್ಲಿ ನಿಂತು ಭಗವಂತನು ಪ್ರೇರಿಸಿದಂತೆ ಕಾರ್ಯ ನಡೆಯುವುದೆಂಬುದನ್ನು ಮನಗಂಡು, ಸ್ವಧರ್ಮಾನುಷ್ಠಾನತತ್ಪರನಾಗಿ ಭಗವಂತನನ್ನು ಆರಾಧಿಸು.

**ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ**
**ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿವೇದನಾ ॥2-28॥**

28. ಶರೀರನಾಶ ವಿಷಯದಲ್ಲಿ ದುಃಖಿಸುವುದು ಸರಿಯಲ್ಲವೆಂದು ಹೇಳಿದ ವಿಷಯವನ್ನೇ ಜನನ ಮರಣ ಸ್ವರೂಪವನ್ನು ವಿವರಿಸುವುದರಿಂದ ಸ್ಪಷ್ಟಪಡಿಸುತಾನೆ:- [ಭೂತ=ಶರೀರ, ಅವ್ಯಕ್ತ=ಪ್ರಕೃತಿ, ವ್ಯಕ್ತ=ಶರೀರ] ಜೀವರ ಶರೀರಗಳಿಗೆ ಪ್ರಕೃತಿಯೇ ಮೂಲಕಾರಣವು. ಎಂದರೆ ಸತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಯು ಕ್ರಮವಾಗಿ ಮಹದಹಂಕಾರ, ಇಂದ್ರಿಯ, ಶಬ್ದಾದಿ ವಿಷಯ, ಪಂಚಭೂತ ಇವುಗಳಾಗಿ ಪರಿಣಮಿಸಿ ಜೀವರ ಸ್ಥೂಲದೇಹಕ್ಕೆ ಕಾರಣವಾಗುತ್ತದೆ. ಪ್ರಕೃತಿಯೇ ಈ ಶರೀರಗಳ ಮೂಲರೂಪವೆಂದು ಭಾವ. ಹೀಗೆ ಪ್ರಕೃತಿಯ ಪರಿಣಾಮವಾದ

ಶರೀರರೂಪದಿಂದ ಇರುವಿಕೆಯೇ ಶರೀರದ ಮಧ್ಯಾವಸ್ಥೆಯು ಎಂದರೆ ಜೀವಿತಕಾಲವು, ಪರಿದೃಶ್ಯಮಾನವಾದ ಸ್ಥೂಲರೂಪವು ಹೋಗಿ ಮೂಲಪ್ರಕೃತಿರೂಪದಿಂದಿರುವುದೇ ಈ ಶರೀರಗಳ ಲಯವು. ಹೀಗೆ ಪ್ರಕೃತಿಯೇ ಶರೀರವಾಗಿ ಪರಿಣಮಿಸಿ ಸ್ವಲ್ಪ ಕಾಲವಿದ್ದು ತಿರುಗಿ ಪ್ರಕೃತಿರೂಪವಾಗಿಯೇ ನಿಲ್ಲುವುದರಿಂದ ಶರೀರನಾಶವಾದರೆ ಯಾವ ಹಾನಿಯೂ ಇಲ್ಲವಾಗಿ ಶರೀರ ವಿಷಯದಲ್ಲಿ ದುಃಖಿಸುವುದು ಯೋಗ್ಯವಲ್ಲ. ಅಥವಾ ಜೀವ ವಿಷಯದಲ್ಲಿಯೂ ದುಃಖಿಸುವುದು ಯೋಗ್ಯವಲ್ಲವೆಂದು ಈ ಶ್ಲೋಕದಿಂದ ವಿವರಿಸುತ್ತಾನೆ:- [ಭೂತ = ಜೀವರು. ಅವ್ಯಕ್ತ=ಆವ್ಯಕ್ತತ್ವ ಎಂದರೆ ಅದರ್ಶನ, ವ್ಯಕ್ತ=ವ್ಯಕ್ತತ್ವ ಎಂದರೆ ದರ್ಶನ] ಸೃಷ್ಟ್ಯಾದಿಯಲ್ಲಿ ಜೀವರು ಲಿಂಗಶರೀರಸಹಿತರಾಗಿ ದೃಗ್ಗೋಚರರಾಗದೇ ಇದ್ದು ತಮ್ಮ ಕರ್ಮಾನುಗುಣವಾಗಿ ಸ್ಥೂಲಶರೀರಗಳನ್ನು ಹೊಂದಿ ಸುಖದುಃಖಗಳನ್ನನುಭವಿಸಿ, ಕರ್ಮವು ಸವೆದನಂತರ ಆ ದೇಹಗಳನ್ನು ತ್ಯಜಿಸಿ ತಿರುಗಿ ಲಿಂಗದೇಹ ಸಹಿತರಾಗಿ ಅಗೋಚರರಾಗಿಯೇ ಇರುವರು. ಈ ರೀತಿಯಾದ ಹುಟ್ಟು ಸಾವುಗಳು ಅವರಿಗೆ ಮೋಕ್ಷಪರ್ಯಂತವಾಗಿ ಬರುತ್ತಲೇ ಇರುವುವು. ಅದನ್ನು ಪರಿಹರಿಸಿಕೊಳ್ಳಲು ಅಸ್ವತಂತ್ರನಾದ ಜೀವನಿಗೆ ಸಾಧ್ಯವಿಲ್ಲ. ಆದಕಾರಣ ಅಪರಿಹಾರವಾದ ಇಂತಹ ಜನನಮರಣಗಳುಳ್ಳ ಈ ಜೀವ ವಿಷಯದಲ್ಲಿಯೂ ದುಃಖಿಸುವುದಕ್ಕೆ ಕಾರಣವಿಲ್ಲ ಎಂದು ತಾತ್ಪರ್ಯ.

**ಆಶ್ಚರ್ಯವತ್ಪಶ್ಯತಿ ಕಶ್ಚಿದೇವಮಾಶ್ಚರ್ಯವದ್ವದತಿ ತಥೈವ ಚಾನ್ಯಃ**
**ಆಶ್ಚರ್ಯವಚ್ಚೈನಮನ್ಯಃ ಶೃಣೋತಿ ಶ್ರುತ್ವಾಽಪ್ಯೇನಂ ವೇದ ನ ಚೈವ ಕಶ್ಚಿತ್॥2-29॥**

**29.** ಜೀವನು ಅಸ್ವತಂತ್ರನೆಂದು ನಿರೂಪಿಸಿ, ಅವನು ಸ್ವತಂತ್ರನೆಂದು ತಿಳಿಯಬಾರದೆಂದು ಹೇಳಿದನು. ಹಾಗಾದರೆ ಯಾರನ್ನು ಸ್ವತಂತ್ರನೆಂದು ತಿಳಿಯಬೇಕೆಂದರೆ, ಹಿಂದೆಯೇ 'ನೈನಂ' ಇತ್ಯಾದಿ ಶ್ಲೋಕದಲ್ಲಿ ಈಶ್ವರನು ಸ್ವತಂತ್ರನಂದು ತಿಳಿಯಬೇಕೆಂದು ಹೇಳಿದೆ. ಆದರೂ ಈಶ್ವರನೊಬ್ಬನೇ ಸ್ವತಂತ್ರನೇ? ಅಥವಾ ಇನ್ನಾರಾದರೂ ಸ್ವತಂತ್ರರುಂಟೆ? ಎಂಬ ಶಂಕೆಯು ಬಂದೇ ಬರುವುದು. ಅದಕ್ಕೆ ನಿರ್ಣಯವಾದ ಸಮಾಧಾನವನ್ನು ಹೇಳುತ್ತಾನೆ:- (ಪರಮಾತ್ಮನೊಬ್ಬನೇ ಸ್ವತಂತ್ರನು, ಅದ್ಭುತನೂ ಆಗಿರುವನು. ಅಂತಹವನು ಇನ್ನೊಬ್ಬನಿಲ್ಲ. ಆದರೂ) ಸ್ವತಂತ್ರನು, ಅದ್ಭುತವೂ ಆಗಿರುವ ಭಗವಂತನನ್ನೇ ಸಾತ್ವಿಕನು ಸ್ವತಂತ್ರಾದ್ಭುತ ಸದೃಶನನ್ನಾಗಿ ಕಾಣುವನು. (ಹೀಗೆ ಪರಮಾತ್ಮನು ತನಗೆ ತಾನೇ ದೃಷ್ಟಾಂತನಾಗಿ ಸಾತ್ವಿಕನಿಗೆ ಗೋಚರಿಸುವುದರಿಂದ ಸ್ವತಂತ್ರವಾದ ಇತರ ದೃಷ್ಟವ್ಯ ವಸ್ತುವಿಲ್ಲವೆಂದು ಸಿದ್ಧಿಸುತ್ತದೆ.

ಆದುದರಿಂದ ಪರಮಾತ್ಮನೊಬ್ಬನೇ ಸ್ವತಂತ್ರನೆಂದು ಹೇಳಿದಂತಾಯಿತು.) ಹಾಗೆಯೇ ಇನ್ನೊಬ್ಬ ಸಾತ್ವಿಕನು ಸ್ವತಂತ್ರಾದ್ಭುತನಾಗಿರುವ ಈ ಪರಮಾತ್ಮನನ್ನೇ ಸ್ವತಂತ್ರಾದ್ಭುತ ಸಮಾನನೆಂದು ಶಿಷ್ಯರಿಗೆ ಉಪದೇಶಿಸುವನು. (ಇಲ್ಲಿಯೂ ಪರಮಾತ್ಮನಿಗೆ ಅವನನ್ನೇ ದೃಷ್ಟಾಂತವಾಗಿ ಹೇಳಿರುವುದರಿಂದ ವಕ್ತವ್ಯವಾದ ಇತರ ಸ್ವತಂತ್ರಾದ್ಭುತ ವಸ್ತುವಿಲ್ಲವೆಂದು ಸಿದ್ಧಿಸುತ್ತದೆ. ಅಂತೆಯೇ ಮತ್ತೊಬ್ಬ ಸಾತ್ವಿಕನು ಸಮಾಧಿಕರಹಿತನಾಗಿ ಅದ್ಭುತನಾಗಿರುವ ಹರಿಯನ್ನೇ ಆಶ್ಚರ್ಯ ವಸ್ತುವಿನಂತೆ ಕೇಳಿ ತಿಳಿಯುವನು. (ಇದರಿಂದ ಶ್ರೋತವ್ಯ ವಸ್ತುವೆಂದರೆ ಹರಿಯೊಬ್ಬನೇ ಸರಿ. ಇನ್ನಾವುದೂ ಅಂತಹುದಿಲ್ಲವಾಗಿ ಅವನಿಗೆ ಅವನನ್ನೆ ಹೋಲಿಸಬೇಕೇ ಹೊರತು ಹೋಲಿಸುವಂತಹ ಮತ್ತೊಂದು ಪದಾರ್ಥವೇ ಇಲ್ಲ ಎಂದು ಸಿದ್ಧಿಸುವುದು, ಪರಮಾತ್ಮನು ಅತ್ಯದ್ಭುತ ವಸ್ತುವಾಗಿರುವುದರಿಂದ ಅವನ ಮಹಿಮೆಯ ಸರ್ವಸ್ವವನ್ನು ತಿಳಿಯಲು ಅಶಕ್ಯವಾಗಿರುವ ಕಾರಣ ಯಾವ ಸಾತ್ವಿಕನಾದರೂ ಅವನನ್ನು ಕೇಳಿ, ಹೇಳಿ, ನೋಡಿಯೂ ಸಂಪೂರ್ಣವಾಗಿ ತಿಳಿಯಲಾರನು. ಅವನವನ ಯೋಗ್ಯತಾನುಸಾರ ಅಲ್ಪಸ್ವಲ್ಪ ಮಹಿಮೆಯನ್ನು ತಿಳಿದು ಕೃತಾರ್ಥನಾಗಬೇಕು. ಹೀಗೆ ಅಪಾರಮಹಿಮನಾಗಿ ಸ್ವತಂತ್ರನಾಗಿರುವವನೆಂದರೆ ಹರಿಯೊಬ್ಬನೇ ಸರಿ; ಇನ್ನಾರೂ ಇಲ್ಲ. ಎಲ್ಲರೂ ಅವನ ಅಧೀನರೆಂಬುದೇ ತತ್ವ.)

**ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ**
**ತಸ್ಮಾತ್ಸರ್ವಾಣಿ ಭೂತಾನಿ ನ ತ್ವಂ ಶೋಚತುಮರ್ಹಸಿ॥2-30॥**

**30.**ಸ್ವಭಾವಸಿದ್ಧವಾದ ಧರ್ಮಗಳು ಪರಾಧೀನವಾಗಲಾರವು. ಜೀವ ನಿತ್ಯತ್ವವು ಸ್ವಾಭಾವಿಕವಾಗಿರುವುದರಿಂದ ಅದು ಪರಮೇಶ್ವರಾಧೀನವೆಂಬುದು ಹೇಗೆಂದರೆ, ಸ್ವಾಭಾವಿಕ ಧರ್ಮವೂ ಪರಮಾತ್ಮನ ಅಧೀನವೆಂಬುದನ್ನು ವಿವರಿಸುತಾನೆ:- ಪ್ರಾಣಿಗಳಿಗೆಲ್ಲಾ ಸ್ಥೂಲದೇಹ, ಸೂಕ್ಷ್ಮವಾದ ಲಿಂಗದೇಹ ಮತ್ತು ಚಿದ್ರೂಪದೇಹ ಎಂಬುದಾಗಿ ಮೂರು ದೇಹಗಳಿವೆ. ಈ ಎಲ್ಲಾ ದೇಹಗಳಲ್ಲಿಯೂ ಹರಿಯು ರಕ್ಷಕನಾಗಿ ಅಂತರ್ಗತನಾಗಿರುವನು. ಹೀಗೆ ಹರಿಯು ಸಕಲ ದೇಹಗಳಲ್ಲಿಯೂ ರಕ್ಷಕನಾಗಿ ನಿಂತಿರುವುದರಿಂದ ಜೀವಾತ್ಮನು ಯಾವಾಗಲೂ ಸಂಹಾರಕ್ಕೆ ಯೋಗ್ಯನಾಗುವುದಿಲ್ಲ. ನಿತ್ಯವಸ್ತುವಿನ ಸತ್ತೆಯೂ ಪರಮಾತ್ಮನ ಆಧೀನವೇ ಸರಿ. ಈ ವಿಷಯದಲ್ಲಿ ಅನೇಕ 1ಪ್ರಮಾಣಗಳಿವೆ. ಆದುದರಿಂದ ಸ್ವಾಭಾವಿಕವಾದುದು ಪರಮೇಶ್ವರನ ಅಧೀನವಲ್ಲವೆಂಬ ಶಂಕೆಗೆ ಅವಕಾಶವಿಲ್ಲ. ಭರತಕುಲೋತ್ಪನ್ನನಾದ ಪಾರ್ಥ! ಹರಿಯು ಯಾವಾಗಲೂ ಎಲ್ಲಾ ಪ್ರಾಣಿಗಳಲ್ಲಿಯೂ ರಕ್ಷಕನಾಗಿರುವುದರಿಂದ ಆತ್ಮ ಅಥವಾ ದೇಹಗಳನ್ನು ನೀನೇ ಸ್ವತಃ

ನಾಶಮಾಡಲು ಸಾಧ್ಯವಾಗುವುದಿಲ್ಲ. ಆಕಾರಣ ಯಾವ ಪ್ರಾಣಿಗಳ ವಿಷಯದಲ್ಲಿಯೂ ನೀನು ದುಃಖಿಸುವುದು ಯೋಗ್ಯವಲ್ಲ.

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ । ಇತ್ಯಾದಿ.

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ॥2-31॥

ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರಮಪಾವೃತಂ
ಸುಖಿನಃ ಕ್ಷತ್ರಿಯಾಃ ಪಾರ್ಥ ಲಭಂತೇ ಯುದ್ಧಮೀದೃಶಂ॥2-32॥

ಅಥ ಚೇತ್ ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ॥2-33॥

ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂತಿ ತೇಽವ್ಯಯಾಂ
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ ॥2-34॥

ಭಯಾದ್ರಣಾದುಪರತಂ ಮಂಸ್ಯಂತೇ ತ್ವಾಂ ಮಹಾರಥಾಃ
ಯೇಷಾಂ ಚ ತ್ವಂ ಬಹುಮತೋ ಭೂತ್ವಾ ಯಾಸ್ಯಸಿ ಲಾಘವಂ ॥2-35॥

ಅವಾಚ್ಯವಾದಾಂಶ್ಚ ಬಹೂನ್ ವದಿಷ್ಯಂತಿ ತವಾಹಿತಾಃ
ನಿಂದಂತಸ್ತವ ಸಾಮರ್ಥ್ಯಂ ತತೋ ದುಃಖತರಂ ನು ಕಿಂ ॥2-36॥

**31-36.** ಯುದ್ಧ ಮಾಡಬೇಕೆಂದರೆ ನನ್ನ ಶರೀರವು ನಡುಗುವುದು ಮುಂತಾಗಿ ಅರ್ಜುನನು ಮಾಡಿರುವ ಶಂಕೆಗೆ ಸಮಾಧಾನವನ್ನು ಹೇಳುತ್ತಾನೆ:- ಕ್ಷತ್ರಿಯನಿಗೆ ಯುದ್ಧವು ವಿಹಿತ ಧರ್ಮವು. ಅದಕ್ಕೆ ಹಿಂದೆಗೆದರೆ ಪಾಪ ಬರುವುದು, ಆ ಕಾರಣ ಅರ್ಜುನಾ! ಯುದ್ಧವು ನಿನಗೆ ಅವಶ್ಯ ಕರ್ತವ್ಯಧರ್ಮವೆಂಬುದನ್ನು ತಿಳಿ! ನಡುಗಬೇಡ! ಯುದ್ಧದಲ್ಲಿ ಬಂಧುಗಳನ್ನೆಲ್ಲಾ ಕೊಲ್ಲುವುದರಿಂದ ಶ್ರೇಯಃಸ್ಸಾಗುವುದಿಲ್ಲ ಮುಂತಾದ ಅರ್ಜುನನ ಶಂಕೆಗೆ ಉತ್ತರ:- ಪರಲೋಕದಲ್ಲಿ ಸುಖವನ್ನು ಕೊಡುವುದೇ ಧರ್ಮವು, ಕ್ಷತ್ರಿಯನಿಗೆ ಯುದ್ಧವೇ ಧರ್ಮಸಾಧನವು; ಬೇರಾವುದೂ ಇಲ್ಲ. ತಾನಾಗಿಯೇ ಮಹಾಶ್ರೇಯಸ್ಸು ಒದಗಿರುವಾಗ ವಿಷಾದ

ಪಡಬಾರದೆಂದು ಹೇಳುತ್ತಾನೆ :- ಯುದ್ಧವು ಕ್ಷತ್ರಿಯನಾದ ನಿನಗೆ ಪಾರತ್ರಿಕ ಸುಖಸಾಧನವು. ಇಂತಹುದು ನಿನ್ನ ಪ್ರಯತ್ನವಿಲ್ಲದೆ ತಾನಾಗಿ ಈಶ್ವರೇಚ್ಛೆಯಿಂದ ಒದಗಿದೆ. ಎಲ್ಲರಿಗೂ ಹೀಗೆ

ಲಭಿಸುವುದಿಲ್ಲ. ಪುಣ್ಯಶಾಲಿಗಳಾದ ಕ್ಷತ್ರಿಯರಿಗೆ ಮಾತ್ರವೇ ಲಭಿಸುವುದು. ಆದಕಾರಣ ನೀನು ವಿಷಾದಪಡುವುದು ಅನುಚಿತ. ಯುದ್ಧ ಮಾಡದಿದ್ದರೆ ಇಹಪರಗಳಲ್ಲಿ ಅನಿಷ್ಟವೂ ಆಗುವುದೆಂದು ಹೇಳುತ್ತಾನೆ:- ಪಾರತ್ರಿಕ ಸುಖಸಾಧನವಾದ ಯುದ್ಧವು ದೈವೇಚ್ಛೆಯಿಂದ ಅನಾಯಾಸವಾಗಿ ಒದಗಿದ್ದರೂ ನೀನೂ ಇದನ್ನು ಮಾಡದಿದ್ದರೆ ಸ್ವಧರ್ಮಪರಿತ್ಯಾಗದಿಂದ ಇಹದಲ್ಲಿ ಕೀರ್ತಿ ಹಾನಿಯೂ, ಪರದಲ್ಲಿ ಧರ್ಮಹಾನಿಯೂ ಆಗುವುದು. ಅಷ್ಟೇ ಅಲ್ಲದೆ ವಿಹಿತಧರ್ಮವನ್ನು ನಡೆಸದಿದ್ದುದರಿಂದ ಪಾಪವನ್ನೂ ಹೊಂದುವೆ. ಅದೂ ಅಲ್ಲದೆ 'ಪಾರ್ಥನು ಯುದ್ಧವನ್ನು ಮಾಡಲಾರದ ಹೇಡಿ' ಎಂದು ಜನರು ನಿನ್ನನ್ನು ತೆಗಳುವರು. ಇಂತಹ ಅಪಕೀರ್ತಿಯು ನಿನಗೆ ಶಾಶ್ವತವಾಗಿ ನಿಲ್ಲುವುದು. ಜನರು ಹೇಳಿಕೊಳ್ಳಲಿ ಎನ್ನುವಯಾ? ಕೇಳು! ಲೋಕದಲ್ಲಿ ಗೌರವಶಾಲಿಯಾದ ಮನುಷ್ಯನಿಗೆ ಅಪಕೀರ್ತಿಯು ಮರಣಕ್ಕಿಂತಲೂ ದೊಡ್ಡದು. ಆದಕಾರಣ ಅಪಕೀರ್ತಿಗೆ ಎಡೆಗೊಡದೆ ಯುದ್ಧಮಾಡು! (ಈ ಅರ್ಜುನನು ದಯಾಳುವು. ಆ ಕಾರಣ ಬಂಧುಗಳನ್ನು ಹಿಂಸಿಸಲಾರದೆ ಯುದ್ಧವನ್ನು ಬಿಟ್ಟನೆಂದು ನನ್ನ ಸಾಮರ್ಥ್ಯವನ್ನು ತಿಳಿದ ಜನರು ಪ್ರಶಂಸಿಸಬಾರದೇಕ' ಎಂದರೆ, ಹೇಳುತ್ತಾನೆ: ಅರ್ಜುನಾ! ನೀನು ಭಯಪಟ್ಟು, ಯುದ್ಧಕ್ಕೆ ಹೋಗದೆ ನಿಂತಿರುವೆಯೆಂದೇ ಭೀಷ್ಮದ್ರೋಣಾದಿ ಮಹಾರಥಿಕರು ತಿಳಿಯುವರು. ನೀನು ಮಹಾಪರಾಕ್ರಮಿಯೆಂದು ಬಹುಮಾನಿಸುತ್ತಿದ್ದ ಮಹಾರಥಿಕರಿದಿರಿಗೆ ಹೇಡಿಯೆಂದು ಹೀಯಾಳಿಸಿಕೊಳ್ಳುವೆ. (ಉದಾಸೀನ ಜನರು ನನ್ನನ್ನು ಹೀಯಾಳಿಸಿದರೂ, ನಾನು ಯುದ್ಧಮಾಡದೆ ನಿಂತರೆ, ಉಪಕಾರವನ್ನು ಹೊಂದಿದ ಶತ್ರುಗಳು ಕೃತಜ್ಞರಾಗಿ ನನ್ನನ್ನು ಪ್ರಶಂಸಿಸುವರು' ಎಂದರೆ ಹೇಳುತಾನೆ:- ಅರ್ಜುನಾ! ಈ ಭ್ರಾಂತಿಯನ್ನು ಬಿಡು; ನಿನಗೆ ಅಹಿತರಾದ ಶತ್ರುಗಳು ನಿನ್ನ ಪರಾಕ್ರಮವನ್ನೇ ಅಲ್ಲಗಳೆಯುತ್ತ ಕರ್ಣಕಠೋರವು, ಬಾಯಿಂದ ಹೇಳಲನರ್ಹವು, ಮರ್ಮಘಾತುಕವೂ ಆದ ನಿಂದಾವಚನಗಳನ್ನು ನಾನಾ ವಿಧವಾಗಿ, ಹೇಳುವರು. ಹೀಗೆ ಶತ್ರುಗಳು ಆಡುವ ನಿಂದಾವಚನಗಳನ್ನು ಕೇಳುವುದಕ್ಕಿಂತ ಹೆಚ್ಚಾದ ದುಃಖವಾವುದು? ಅದೇ ಅತಿ ಹೆಚ್ಚಿನ ದುಃಖವು. ಅಂತಹ ದುಃಖ ಕೀಡಾಗಬಾರದು.

**ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷಸೇ ಮಹೀಂ**

**ತಸ್ಮಾ ದುಷ್ಟಿಟ್ಟ ಕೌಂತೇಯ ಯುದ್ಧಾ ಯ ಕೃತನಿಶ್ಚಯಃ॥2-37॥**

**ಸುಖದುಃಖ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ**

**ತತೋ ಯುದ್ಧಾ ಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ॥2-38॥**

**37-38** ‘ಯುದ್ಧ ಮಾಡುವುದು ಒಳ್ಳೆಯದೇ? ಮಾಡದಿರುವುದು ಒಳ್ಳೆಯದೆ? ತಿಳಿಯದು. ಯುದ್ಧ ಮಾಡಿದರೆ ಜಯಿಸುವವೋ? ಇಲ್ಲವೋ?’ ಎಂಬ ಸಂಶಯವು ಬಾಧಿಸುತ್ತಿರುವುದೆಂದು ಅರ್ಜುನನು ಹಿಂದಿನ ಅಧ್ಯಾಯದಲ್ಲಿ ಶಂಕಿಸಿರುವುದಕ್ಕೆ ಉತ್ತರವನ್ನು ಹೇಳುತ್ತಾನೆ:- ಅರ್ಜುನಾ! ಯುದ್ಧಮಾಡಿ ಸತ್ತರಂ ವೀರಸ್ವರ್ಗವನ್ನು ಹೊಂದುವೆ. ಒಂದುವೇಳೆ ಜಯಿಸಿದರೆ ಅಖಂಡ ಭೂಮಂಡಲಕ್ಕೆ ಚಕ್ರಾಧಿಪತಿಯಾಗಿ ಇಹದಲ್ಲಿ ಸುಖವನ್ನು ಅನುಭವಿಸಿ ಬಳಿಕ ಸ್ವರ್ಗವನ್ನು ಹೊಂದುವೆ. [1]ಹೀಗೆ ಎರಡು ಪಕ್ಷಗಳಲ್ಲಿಯೂ ಮಹಾಫಲವಿರುವುದರಿಂದ ಯುದ್ಧ ಮಾಡುವೆನೆಂದು ದೃಢಸಂಕಲ್ಪದಿಂದ ಸನ್ನದ್ಧನಾಗು! ಅರ್ಜುನಾ! ಯುದ್ಧ ಮಾಡಿ ಬಂಧುಗಳನ್ನು ಕೊಂದರೆ ಪಾಪವೇ ಬರುವುದೆಂದು ನೀನು ಹೇಳಿದೆಯಲ್ಲವೆ? ಕೇಳು! ದುಃಖದಂತೆ ಸುಖವೂ, ಹಾನಿಯಂತೆ ಲಾಭವೂ, ಅಪಜಯದಂತೆ ಜಯವೂ ಹೇಯವೆಂಬುದನ್ನರಿತು ವಿಷಯಸುಖ-ದುಃಖ, ಇಹದಲ್ಲಿ ಧನಾದಿ ಲಾಭ-ಅಲಾಭ, ಶತ್ರುಜಯ ಅಪಜಯ ಇವೆಲ್ಲವೂ ಸಮಾನವಾಗಿ ಹೇಯವೆಂದೇ ಭಾವಿಸಿ, ವಿಷಯಗಳ ಆಶೆಯನ್ನು ತೊರೆದು, ಸ್ವಧರ್ಮವಾದ ಯುದ್ಧವು ಭಗವತ್ಪೂಜೆಯೆಂದು ಭಾವಿಸಿ ಭಕ್ತಿಪೂರ್ವಕವಾಗಿ ಯುದ್ಧ ಮಾಡಿದರೆ ನಿನಗೆ ಪಾಪವು ಬರುವುದಿಲ್ಲ; ಪುಣ್ಯವೇ ಬರುವುದು.

1 ಯೇ ಯುದ್ಧ್ಯಂತೇ ಪ್ರಧನೇಷು ಶೂರಾಸೋ ಯೇ ತನುತ್ಯಜಃ ( ತನೂತ್ಯಜಃ) ಯೇ ವಾ ಸಹಸ್ರದಕ್ಷಿಣಾಸ್ತಾಂಶ್ಚಿ ದೇವಾಪಿ ಗಚ್ಛತಾತ್ - ಶ್ರುತಿ.

**ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು**
**ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ॥2-39॥**

**39.** ‘ನ ತ್ವೇವಾಹಂ' **2-12**, ಎಂಬ ಶ್ಲೋಕದಿಂದ 'ದೇಹೀ ನಿತ್ಯಮವಧ್ಯೋಽಯಂ' **2-30** ಎಂಬ ಶ್ಲೋಕಪೂರ್ತಿಯಾಗಿ ಉಪದೇಶಮಾಡಿದ 'ದೇಹವು ಹೇಗಾದರೂ ಒಂದು ದಿನ ನಾಶವಾಗುವುದು. ಆತ್ಮನು ಅನಾದ್ಯನಂತನು. ಅವನು ನಾಶವಾಗುವ ಸಂಭವವೇ ಇಲ್ಲ. ದೇಹವು ಹೋದರೂ ಅದಕ್ಕೆ ಪ್ರತಿನಿಧಿಯಾಗಿ ಸಮೀಚೀನ ದೇಹಾಂತರವು ಲಭಿಸುವುದು. ಬಂಧುದರ್ಶನ-ಸ್ಪರ್ಶನ ಸಂಭಾಷಣಾದಿಗಳ ಹಾನಿಯಿಂದ ಪ್ರಸಕ್ತವಾಗುವ ದುಃಖವನ್ನು ಅಭಿಮಾನ ಬಿಡುವುದರಿಂದ ಬರದಂತೆ ಮಾಡಿಕೊಳ್ಳುವುದಕ್ಕೆ ಸಾಧ್ಯವು’ ಎಂಬ ಅಂಶವು ನನ್ನ ಮನನಾಟಿ ಭೀಷ್ಮಾದಿಗಳು ಅಶೋಚ್ಯರೆಂಬುದನ್ನು ದೃಢಪಡಿಸಿಕೊಂಡೆನು. ಅಷ್ಟೇ ಅಲ್ಲ; 'ಸ್ವಧರ್ಮಮಪಿ ಚಾವೇಕ್ಷ್ಯ' **2-31** ಎಂಬ ಶ್ಲೋಕದಿಂದ 'ಯುದ್ಧಾಯ ಕೃತನಿಶ್ಚಯಃ' **2-37** ಎಂಬ ಶ್ಲೋಕಪೂರ್ತಿ ನೀನು ಹೇಳಿರುವ ವಿಚಾರವನ್ನು ಮನಗಂಡು ಯುದ್ಧವು ನನಗೆ ಸ್ವಧರ್ಮವಾದುದರಿಂದ ಅವಶ್ಯ ಕರ್ತವ್ಯವೆಂದೂ ನಿರ್ಧರಿಸಿರುವನು. ‘ಸುಖದುಃಖೇ ಸಮೇ ಕೃತ್ವಾ' **2-38**, ಎಂಬ ಶ್ಲೋಕದಿಂದ ಹೇಳಿರುವುದನ್ನು ‘ಮನನಮಾಡಿ ಅದರಂತೆ ಯುದ್ಧಮಾಡಿ ಬಳಿಕ ನಿನ್ನನ್ನೇ ಹೊಂದಬೇಕೆಂದು ಬಯಸಿರುವೆನು.

ಆದಕಾರಣ ಬಿಟ್ಟ ಬಿಲ್ಲನ್ನು ತಿರುಗಿ ತೆಗೆದುಕೊಂಡು ಬವರಕ್ಕೆ ಬದ್ಧ ಕಂಕಣನಾಗಿರುವೆನು. ಕೃಷ್ಣಾ! ಈ ಸಂದರ್ಭದಲ್ಲಿ ನನ್ನದೊಂದು ಪ್ರಾರ್ಥನೆಯಿದೆ. ಯುದ್ಧದಲ್ಲಿ ಶತ್ರುಗಳಿಂದ ಹತನಾಗುವ ಮಾತ್ರದಿಂದ ಅಥವಾ ಶತ್ರುಗಳನ್ನು ಕೊಂದು ಜಯವನ್ನು ಸಂಪಾದಿಸುವ ಮಾತ್ರದಿಂದ ಮೋಕ್ಷವಾಗಲಾರದು. ಬ್ರಹ್ಮಜ್ಞಾನವನ್ನು ಪಡೆದು ಅವನ ಪ್ರಸಾದವನ್ನು ಹೊಂದುವುದರಿಂದಲೇ ಮೋಕ್ಷವು ಲಭಿಸುವುದೆಂದು ಶಾಸ್ತ್ರ ಸಿದ್ಧಾಂತವಲ್ಲವೆ? ಆ ಕಾರಣ ಬ್ರಹ್ಮಜ್ಞಾನಕ್ಕಾಗಿ ವೇದಾಂತತತ್ತ್ವವನ್ನು ಉಪದೇಶಿಸಬೇಕೆಂಬುದೇ ನನ್ನ ಪ್ರಾರ್ಥನೆ. ಆದರೆ ತತ್ತ್ವೋಪದೇಶಕ್ಕೆ ಇದು ತಕ್ಕ ಸಮಯವಲ್ಲ; ಯುದ್ಧ ಮುಗಿಯಲಿ, ಸಾವಕಾಶವಾಗಿ ತತ್ತ್ವೋಪದೇಶವನ್ನು ಮಾಡುವೆನೆಂದು ಹೇಳಬೇಡ, ಒಂದುವೇಳೆ ಯುದ್ಧದಲ್ಲಿ ನಾನೇ ಇತರರಿಂದ ಹತನಾದರೆ ವೇದಾಂತಶ್ರವಣವೇ ಇಲ್ಲದೆ ಜನ್ಮವು ವ್ಯರ್ಥವಾದೀತು. ಆದಕಾರಣ ಈಗಲೇ - ಸಾರಾರ್ಥವನ್ನು ಉಪದೇಶಿಸಿ ಅನುಗ್ರಹಿಸು ಎಂದು ಅರ್ಜುನನು ಸ್ವಯಂ ಜ್ಞಾನಿಯಾಗಿದ್ದರೂ ಮನುಷ್ಯ ದೇಹವನ್ನು ತಾಳಿರುವುದರಿಂದ ಅವನಂತೆಯೇ ನಟಿಸುತ್ತ ಲೋಕೋಪಕಾರಾರ್ಥವಾಗಿ ಶ್ರೀಕೃಷ್ಣ ಭಗವಂತನನ್ನು ಪ್ರಾರ್ಥಿಸಿದನು. ಪರಮಾತ್ಮನು ಅರ್ಜುನನ್ನು ನಿಮಿತ್ತ ಮಾಡಿ ತತ್ತ್ವೋಪದೇಶದಿಂದ ಲೋಕೋದ್ಧಾರಮಾಡಬೇಕೆಂದು ಸಂಕಲ್ಪಿಸಿ, ಇದುವರೆಗೆ ಹೇಳಿದ ಜ್ಞಾನಯೋಗವನ್ನು ಮುಗಿಸಿ, ಜ್ಞಾನಕ್ಕೆ ಅಂತಃಕರಣಶುದ್ಧಿದ್ವಾರಾ ಸಾಧನವಾದ ಕರ್ಮಯೋಗವನ್ನು ನಿರೂಪಿಸುವೆನೆಂದು ಪ್ರತಿಜ್ಞೆ ಮಾಡುತ್ತಾನೆ:- ಪಾರ್ಥಾ! ನಿನಗೆ ಜೀವಸ್ವರೂಪ, ಅದಕ್ಕೆ ಉಪಪಾದಕವಾಗಿ ಈಶ್ವರಸ್ವರೂಪ ಇವುಗಳನ್ನು 'ನ ತ್ವೇವಾಹಂ' ಇತ್ಯಾದಿ 19 ಶ್ಲೋಕಗಳಿಂದ ಹೇಳಿರುವೆನು. ಈಗ ತತ್ತ್ವಜ್ಞಾನ ಸಾಧನವಾದ ಉಪಾಯವನ್ನು ತಿಳಿಸುವುದಕ್ಕಾಗಿ 'ತ್ರೈಗುಣ್ಯ ವಿಷಯಾ' 2-45 ಎಂಬ ಶ್ಲೋಕದಿಂದ ಆರನೆಯ ಅಧ್ಯಾಯವು ಮುಗಿಯುವವರೆಗೂ ಕರ್ಮ ಯೋಗವೆಂಬ ಜ್ಞಾನೋಪಾಯವನ್ನು ವಿವರಿಸುವೆನು. ಆವನ್ನು ತಿಳಿದು ಅದರಂತೆ ಆಚರಿಸು. ನಾನು ಹೇಳುವ ಉಪಾಯ(ಕರ್ಮಯೋಗ)ವನ್ನು ತಿಳಿದು ಅನುಷ್ಠಾನಮಾಡಿದರೆ ಬ್ರಹ್ಮಸಾಕ್ಷಾತ್ಕಾರವಾಗಿ ಸಂಸಾರವು ವಿಶೇಷವಾಗಿ ಹೋಗುವುದು ಎಂದರೆ ಮುಕ್ತನಾಗುವೆ. (ಫಲಾಶೆಯನ್ನು ಬಿಟ್ಟು ಮಾಡುವ ವಿಹಿತಕರ್ಮಗಳೇ ಭಗವಂತನ ಆರಾಧನೆಯು, ಅದರಿಂದ ಅವನು ಪ್ರೀತನಾಗಲಿ ಎಂಬ ಉದ್ದೇಶದಿಂದ ಆಚರಿಸುವ ವಿಹಿತಧರ್ಮವು ನಿವೃತ್ತಕರ್ಮವೆನಿಸುವುದು. ಅದೇ ಕರ್ಮಯೋಗವು- ಜ್ಞಾನಸಾಧನವು.)

**ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ**

**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್॥2-40॥**

**40.**ಮನುಷ್ಯನು ಮಾಡುವ ಕೆಲಸಗಳಿಗೆ ವಿಘ್ನವು ಸಂಭಾವಿತವು, ಕರ್ಮವನ್ನು ಪ್ರಾರಂಭಿಸಿದ ಮೇಲೆ ವಿಘ್ನ ಬಂದರೆ ಅದು ನಿಂತುಹೋಗಿ ವ್ಯರ್ಥವಾಗುವುದು. ಕೆಲವು ಮುಗಿದರೂ ವಿಧ್ಯುಕ್ತ ಪ್ರಕಾರ ಸಾಂಗವಾಗಿ ನಡೆಯುವುದು ವಿರಳ. ಅಂಗವಿಕಲವಾದರೆ ಪಾಪಬರುವ ಸಂಭವವೂ ಉಂಟು. ಆದಕಾರಣ ಕರ್ಮವು ಜ್ಞಾನಸಾಧನವೆಂಬುದು ಹೇಗೆಂದರೆ, ಹೇಳುತ್ತಾನೆ:- ಜ್ಞಾನೋಪಾಯವಾದ ವಿಷ್ಣ್ವಾರಾಧನರೂಪ ಕರ್ಮಯೋಗವನ್ನು ಪ್ರಾರಂಭಮಾಡಿ ಮುಗಿಸದಿದ್ದರೂ ಅದು ನಿಷ್ಫಲವಾಗುವುದಿಲ್ಲ. ಮಾಡಿದಷ್ಟಕ್ಕೇ ಫಲವಿದೆ. ವಿಷ್ಣು ಧರ್ಮವನ್ನು ಪ್ರಾರಂಭಿಸಿ ವಿಘ್ನದಿಂದ ಅದು ಸಮಾಪ್ತಿಯಾಗದೇ ನಿಂತರೂ ಅಥವಾ ಅನ್ಯಧರ್ಮವನ್ನು ಆಚರಿಸದಿದ್ದರೂ ಪಾಪವು ಬರುವುದಿಲ್ಲ. ವಿಷ್ಣು ಪೂಜಾತ್ಮಕವಾದ ನಿಷ್ಕಾಮಕರ್ಮವನ್ನು ಸ್ವಲ್ಪವಾಗಿ ಮಾಡಿದರೂ ಅದು ಮಹಾಭಯದಿಂದ ಎಂದರೆ ಸಂಸಾರಭಯದಿಂದ ಪಾರುಮಾಡುತ್ತದೆ. ಆದಕಾರಣ ಅಂತಹ ನಿವೃತ್ತ ಕರ್ಮವನ್ನು ನಿಶ್ಶಂಕವಾಗಿ ಆಚರಿಸಿ ಕೃತಕೃತ್ಯನಾಗು.

**ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ**

**ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ॥2-41॥**

**41.**ಅನೇಕ ಮತಗಳಿವೆ. ಎಲ್ಲವೂ ಪರಸ್ಪರ ವಿರುದ್ಧ. ಒಂದೊಂದು ಮತದಲ್ಲಿಯೂ ಜ್ಞಾನೋಪಾಯವನ್ನು ಬೇರೆಬೇರೆಯಾಗಿ ನಿರೂಪಿಸಿರುವರು. ಹೀಗಿರುವಾಗ ನೀನು ಹೇಳುವ ಉಪಾಯವೇ ಸರಿಯಾದುದೆಂದು ಹೇಗೆ ವಿಶ್ವಾಸ ಮಾಡಲಿ ಎಂದರೆ, ಹೇಳುತ್ತಾನೆ:- ಕುರುಕುಲಸಂಜಾತಾ! ಪ್ರಮಾಣಗಳಿಂದ ನಿರ್ಣಯಿಸಲ್ಪಟ್ಟ ಅರ್ಥನಿಶ್ಚಯವೇ ವ್ಯವಸಾಯವೆನಿಸುವುದು. ಅದನ್ನು ಹುಟ್ಟಿಸುವ ವಾಕ್ಯವು ಲೋಕ ಮತ್ತು ವೇದಗಳಲ್ಲಿ ಒಂದೇ ವಿಧವಾಗಿರುವುದೇ ಹೊರತು ವಿರುದ್ಧವಾಗಿರುವುದಿಲ್ಲ. ಅಂತಹ ವಾಕ್ಯವೇ ವೈಷ್ಣವಧರ್ಮಾನುಷ್ಠಾನವನ್ನು ಬೋಧಿಸುತ್ತದೆ. ಅದನ್ನೇ ನಾನೀಗ ಉಪದೇಶಿಸುವನು, ವ್ಯವಸಾಯ ಹೀನರಾದ ಜನರ ವಚನಗಳು ಪರಸ್ಪರ ವಿರುದ್ಧವಾದ ನಾನಾರ್ಥಗಳನ್ನು ಬೋಧಿಸುತ್ತವೆ. ಅಂತಹವು ಅನಂತವಾಗಿವೆ. ಅವೆಲ್ಲವೂ ಪ್ರಾಮಾಣಿಕಗಳಲ್ಲ. ಅಂತಹ ಅಪ್ರಾಮಾಣಿಕ ಮತಗಳು ವಿರುದ್ಧವಾಗಿರುವ ಮಾತ್ರದಿಂದ ನಾನು ಹೇಳುವ ವಿಷಯದಲ್ಲಿ ವಿಶ್ವಾಸಮಾಡದಿರಲು ಕಾರಣವಿಲ್ಲ. ನಾನು ಹೇಳುವ ಜ್ಞಾನೋಪಾಯವಾದರೋ ಪ್ರಮಾಣ

ಸಿದ್ಧವೆಂಬುದು ನನ್ನ ಉಪದೇಶದಿಂದ ವ್ಯಕ್ತವಾಗುವುದು. ಆದುದರಿಂದ ನಾನು ಹೇಳುವುದನ್ನು ವಿಶ್ವಾಸಪೂರ್ವಕವಾಗಿ ಶ್ರವಣಮಾಡಿ ಆಚರಿಸು.

**ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ**
**ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥2-42॥**

**ಕಾಮಾತ್ಮಾನಃ ಸ್ವರ್ಗಪರಾ ಜನ್ಮ ಕರ್ಮಫಲಪ್ರದಾಂ**
**ಕ್ರಿಯಾವಿಶೇಷ ಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ॥2-43॥**

**ಭೋಗೈಶ್ವರ್ಯಪ್ರಸಕ್ತಾನಾಂ ತಯಾಽಪಹೃತಚೇತಸಾಂ**
**ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ॥2-44॥**

**42-44.** ಅವೈದಿಕಮತಗಳು ಅಪ್ರಾಮಾಣಿಕವಾದ ಕಾರಣ ಅವುಗಳನ್ನು - ನಂಬದಿರಬಹುದು. ಪ್ರಾಮಾಣಿಕವಾದ ವೈದಿಕ ಮತಗಳಲ್ಲಿಯೇ ವಿವಾದವು ಕಂಡುಬರುತ್ತದೆ. ಕೆಲವು ವೈದಿಕರು ಕರ್ಮಗಳಿಗೆ ಸ್ವರ್ಗಮಾತ್ರವೇ ಫಲವೆಂದೂ ಅದಕ್ಕಿಂತ ಉತ್ತಮಫಲವಿಲ್ಲವೆಂದೂ ಹೇಳುವರು. ನೀನಾದರೋ ಕರ್ಮವು ಕಾಮ್ಯ ಮತ್ತು ನಿಷ್ಕಾಮ್ಯ ಎಂಬುದಾಗಿ ಎರಡು ಬಗೆಯೆಂದೂ, ಕಾಮ್ಯಕರ್ಮವು (ಸ್ವರ್ಗಾದಿ ಫಲೋದ್ದೇಶದಿಂದ ಆಚರಿಸಲ್ಪಡುವ ಕರ್ಮವು) ಮಾತ್ರ ಸ್ವರ್ಗಾದಿ - ಅಲ್ಪ ಫಲದಾಯಕವೆಂದೂ, ನಿಷ್ಕಾಮ ಕರ್ಮವು (ಫಲಾಶೆಯಿಲ್ಲದೆ ಕೇವಲ ಈಶ್ವರಾರ್ಪಣ ಬುದ್ಧಿಯಿಂದ ಆಚರಿಸಲ್ಪಡುವ ಕರ್ಮವು) ಜ್ಞಾನದಾಯಕವಾಗಿ ಮಹಾಫಲಸಾಧನವಾಗುವುದೆಂದೂ ಹೇಳುತ್ತಿರುವೆ. ಆದಕಾರಣ ವೈದಿಕಮತ ವಿರುದ್ಧವಾದ ನಿನ್ನ ಮಾತಿನಲ್ಲಿ ಹೇಗೆ ವಿಶ್ವಾಸವುಂಟಾದೀತೆಂದರೆ:- ಕರ್ಮವು ಸ್ವರ್ಗಮಾತ್ರಫಲಕವೆಂದು ಹೇಳುವವರು ನಿಜವಾದ ವೈದಿಕರಲ್ಲ; ವೈದಿಕಾಭಾಸರು (ವೇದಮಾರ್ಗಾನುವರ್ತಿಗಳಂತೆ ನಟಿಸುತ್ತಿರುವವರು) ಎಂಬುದನ್ನು ತಿಳಿಸುವುದಕ್ಕಾಗಿ ಅಂತಹ ಮತಗಳನ್ನು ಮೂರು ಶ್ಲೋಕಗಳಿಂದ ನಿಂದಿಸುತ್ತಾನೆ:- ಪಾರ್ಥ! ಅತಿಗಹನವಾದ ವೇದದ ಮುಖ್ಯಾರ್ಥವು ಸಾಮಾನ್ಯ ಭಾಷಾಪರಿಚಯಾದಿಗಳಿಂದ ತಿಳಿಯಲಶಕ್ಯವು. ಆದಕಾರಣ ವೇದ ಮುಖ್ಯಾರ್ಥಜ್ಞಾನಕ್ಕಾಗಿ ಉಪಕ್ರಮಾದಿಗಳು, ಶ್ರುತಿಲಿಂಗಾದಿಗಳು ಎಂಬುದಾಗಿ ಅನೇಕ ಸಾಧನಗಳು ಏರ್ಪಟ್ಟಿವೆ. ಅವುಗಳ ವಿಮರ್ಶೆಯಿಂದ ವೇದತಾತ್ಪರ್ಯವನ್ನು ಕಂಡು ಹಿಡಿದು ಮುಖ್ಯಾರ್ಥವನ್ನು ಜ್ಞಾನಿಗಳು ತಿಳಿಯುವರು. ಅಂತಹ ವಿಮರ್ಶೆಯಿಲ್ಲದ, ಮೇಲೆ ತೋರುವ ಅರ್ಥವು ಆಪಾತಾರ್ಥವೆನಿಸುವುದು; ಅದು ಮುಖ್ಯಾರ್ಥವಲ್ಲ. ಕರ್ಮಾದಿಗಳು ವೇದದ ಆಪಾತಾರ್ಥವು, ಅದೇ ಮುಖ್ಯಾರ್ಥವೆಂದು

ತಿಳಿದಿರುವವರು ವೇದವಾದರತರೆನಿಸುವರು. ಅವರು ವಿಷಯ ಭೋಗಲಂಪಟಮನಸ್ಕರಾಗಿ ಶಾಶ್ವತವಲ್ಲದ ಸ್ವರ್ಗವನ್ನೇ ಪರಮ ಪುರುಷಾರ್ಥವೆಂದು ತಿಳಿಯುತ್ತ ಬೇರೆ ಮೋಕ್ಷ ಎಂಬ ನಿತ್ಯಪುರುಷಾರ್ಥ, ಪರಬ್ರಹ್ಮ ಮುಂತಾದುವನ್ನು ಇಲ್ಲವೆಂದೇ ಹೇಳುವರು. ಅವರು ವೇದ ಮುಖ್ಯಾರ್ಥಜ್ಞಾನವಿಲ್ಲದ ಅವಿವೇಕಿಗಳೇ ಸರಿ. ಅಂತಹವರು 'ಈ ವೇದವು ಬಹು ಕರ್ಮವಿಶೇಷಗಳನ್ನು ಪ್ರತಿಪಾದಿಸುವುದು. ಅದನ್ನು ತಿಳಿದು ಅನುಷ್ಠಾನಮಾಡಿದರೆ ನಾನಾ ಜನ್ಮಗಳು, ಅದರಲ್ಲಿ ಪೂರ್ವಕರ್ಮಾನುಸಾರವಾದ ಫಲ ಇವುಗಳು ಲಭಿಸುತ್ತವೆ. ಎಂದರೆ ಅಸ್ಥಿರಸುಖಹೇತುವಾದ ಪುಷ್ಪದಂತೆ ಸ್ವರ್ಗಾದಿಗಳೂ, ಸ್ರಕ್ಚಂದನಾದಿ ವಿಷಯಭೋಗ, ಅದಕ್ಕೆ ಬೇಕಾಗುವ ಐಶ್ವರ್ಯ ಇವುಗಳೇ ಮುಖ್ಯ ಫಲವು. ಕರ್ಮವು ಇದಕ್ಕೆ ಸಾಧನವೆಂಬುದೇ ವೇದತಾತ್ಪರ್ಯ' ಎಂದು ಹೇಳುತ್ತಾರೆ. ಅಂತಹ ಅಲ್ಪಜ್ಞರ ಮಾತಿಗೆ ಮನಸೋತು ಭೋಗ ಮತ್ತು ಐಶ್ವರಗಳಲ್ಲಿಯೇ ಆಸಕ್ತಚಿತ್ತರಾದ ಜನರಿಗೆ ಭಗವಂತನ ವಿಷಯದಲ್ಲಿ ಬಲಾಬಲ ವಿಮರ್ಶೆಪೂರ್ವಕವಾಗಿ ಪ್ರಮಾಣಗಳಿಂದಾಗಿರುವ ತತ್ತ್ವನಿರ್ಣಯರೂಪವಾದ ಬುದ್ಧಿಯು ಹುಟ್ಟುವುದಿಲ್ಲ. ಅಂತಹ ತತ್ತ್ವ ನಿರ್ಣಯವೇ ಸಮಾಧಿಗೆ (ಧ್ಯಾನಕ್ಕೆ) ಅಂಗವಾಗಿ ಮೋಕ್ಷಕ್ಕೆ ಸಾಧಕವಾಗುವುದು. ಅದು ವೇದಮುಖ್ಯಾರ್ಥಜ್ಞಾನಿಗಳಿಗೇ ಲಭಿಸತಕ್ಕುದು ಮೇಲ್ಕಂಡಂತೆ ಆಪಾತಾರ್ಥಜ್ಞಾನಿಗಳಾದ ಅವಿವೇಕಿಗಳಿಗೆ ಎಂದಿಗೂ ದೊರೆಯಲಾರದು. ಆದಕಾರಣ ಹಾಗೆ ಹೇಳುವವರು ವೈದಿಕರಂತೆ ನಟಿಸುವವರೇ ಹೊರತು ನಿಜವಾದ ವೈದಿಕರಲ್ಲ. ಅವರ ಮತವನ್ನು ನಂಬಬಾರದೆಂದು ಭಾವ.

**ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ**
**ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್॥2-45॥**

**45.** ಯೋಗಸ್ವರೂಪ ವಿವರಣೆ:- ವಿಮರ್ಶೆ ಮಾಡದಿದ್ದರೆ ವೇದಗಳು ಗುಣತ್ರಯಾತ್ಮಕವಾದ ಸ್ವರ್ಗಾದಿಫಲಗಳನ್ನು ಕೊಡುವ ಕಾಮ್ಯಕರ್ಮಾದಿಗಳನ್ನೇ ಪ್ರತಿಪಾದಿಸುತ್ತವೆಯೆಂಬುದಾಗಿ ತೋರುತ್ತದೆ. ಅರ್ಜುನಾ! ನೀನಾದರೋ ವೇದವು ಹಾಗೆ ತ್ರಿಗುಣಜನ್ಯಸ್ವರ್ಗಾದಿಫಲಕಕರ್ಮಮಾತ್ರಪ್ರತಿಪಾದಕವೆಂದು ತಿಳಿಯಬೇಡ. ಎಂದರೆ ಅದು ಆಪಾತಾರ್ಥವು; ಅದನ್ನೇ ಮುಖ್ಯಾರ್ಥವೆಂದು ಭ್ರಮಿಸಬೇಡ. ಗುಣತ್ರಯಾತ್ಮಕ ಸಂಸಾರ ಬಂಧನವೆಂಬ ವಿಷವನ್ನು ಪರಿಹಾರ ಮಾಡುವ ಭಗವಂತನ ಮಹಿಮೆಯೇ ಮುಖ್ಯಾರ್ಥವೆಂದು ತಿಳಿಯೆಂದು ಭಾವ. ಸುಖ ಬಂದಾಗ ಹಿಗ್ಗುವುದು, ದುಃಖ ಬಂದಾಗ ಕುಗ್ಗುವುದು ಇವುಗಳನ್ನು ಬಿಟ್ಟು,

ದುಃಖವು ಹೇಗೆ ಅನಿಷ್ಟವೋ ಹಾಗೆಯೇ ವಿಷಯಸುಖವೂ ಆಪೇಕ್ಷಿಸತಕ್ಕುದಲ್ಲ'ವೆಂದು ತಿಳಿದು, ಯಾವಾಗಲೂ ಸದ್ಗುಣಪೂರ್ಣನಾದ ಶ್ರೀಹರಿಯಲ್ಲಿಯೇ ಮನಸ್ಸನ್ನಿಟ್ಟು, 'ನನಗೆ ಹರಿಯೇ ಸ್ವಾಮಿಯು' ಎಂಬ ಅನುಸಂಧಾನವುಳ್ಳವನಾಗಿ ಶಾಸ್ತ್ರ ವಿರುದ್ಧ ವಿಷಯವನ್ನು ಹೊಂದುವ ಅಥವಾ ಅದು ದೊರೆತರೆ ಅದನ್ನು ಹಾಗೆಯೇ ಸ್ಥಿರಪಡಿಸಿಕೊಳ್ಳುವ ಅಭಿಲಾಷೆಯನ್ನು ಬಿಡು. (ಮೇಲ್ಕಂಡ ಪ್ರಕಾರ: ಐಹಿಕ ಸುಖವೂ ದುಃಖವೂ ಸಮ ಮುಂತಾಗಿ ತಿಳಿದು ಶಾಶ್ವತ ಸುಖಾನುಭವ ರೂಪವಾದ ಮೋಕ್ಷವನ್ನು ಕೊಡುವ ಭಗವಂತನೇ ವೇದಮುಖ್ಯಾರ್ಥವೇ ಹೊರತು, ಕಾಮ್ಯ ಕರ್ಮವಲ್ಲವೆಂದರಿತು, ಕಾಮ್ಯಕರ್ಮ ಪರಿತ್ಯಾಗಮಾಡಿ ಸದ್ಗುಣಪೂರ್ಣನಾದ ಶ್ರೀಹರಿಯೇ ನನಗೂ-ಸರ್ವರಿಗೂ ಸ್ವಾಮಿಯು. ನಾನು ಸ್ವತಂತ್ರನಲ್ಲವೆಂದು ಯಾವಾಗಲೂ ನೆನೆಯುವುದೇ ಜ್ಞಾನೋಪಾಯವು, ನಾನೇ ಹರಿಯೆಂದು ನೆನೆಯುವುದು ಜ್ಞಾನಸಾಧನವಲ್ಲ; ಅನರ್ಥಕರವು ಎಂದು ತಾತ್ಪರ್ಯ)

**ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ**
**ತಾವಾನ್ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ॥2-46॥**

46. ಇದೇ ಅಧ್ಯಾಯದ 'ಯಾಮಿಮಾಂ ಇತ್ಯಾದಿ 42,43,44, ಮೂರು ಶ್ಲೋಕಗಳಿಂದ ಕಾಮ್ಯ ಕರ್ಮವನ್ನಾಚರಿಸುವವರಿಗೆ ಧ್ಯಾನವು ಕೈಗೂಡುವುದಿಲ್ಲ. ಅಂದ ಬಳಿಕ ಜ್ಞಾನವಾಗುವುದಿಲ್ಲ. ಮೋಕ್ಷವಂತೂ ದೂರವೇ ಸರಿ ಎಂದು ಕಾಮ್ಯ ಕರ್ಮವನ್ನು ನಿಂದಿಸಿ, ೪೫ ನೆಯ ಶ್ಲೋಕದಿಂದ ಕಾಮ್ಯ ಕರ್ಮಪರಿತ್ಯಾಗಪೂರ್ವಕವಾಗಿ ಜ್ಞಾನಸಾಧನವೆಂಬ ಯೋಗಾನುಷ್ಠಾನ ನಿಯಮವು ಉಕ್ತವಾಯಿತಷ್ಟೆ? ಆದರೆ ಜ್ಞಾನಫಲವು ಕರ್ಮಿಗಳಿಗಿಲ್ಲ. ಕರ್ಮಫಲವಾದ ಸ್ವರ್ಗಾದಿಗಳು, ಜ್ಞಾನಿಗಳಿಗಿಲ್ಲ. ಹೀಗೆ ಜ್ಞಾನಮಾರ್ಗ-ಕರ್ಮಮಾರ್ಗಗಳು ಸಮವಾಗಿರುವಾಗ, ಕರ್ಮಮಾರ್ಗವನ್ನು ಬಿಡು - ಜ್ಞಾನಮಾರ್ಗವನ್ನು ಆಶ್ರಯಿಸೆಂದು ಹೇಳುವುದು ಹೇಗೆಂದರೆ, ಹೇಳುತ್ತಾನೆ:- ಬಾವಿ ಮುಂತಾದ ಸಣ್ಣ ಜಲಾಶಯಗಳಲ್ಲಿ ಜನರಿಗೆ ಎಷ್ಟರಮಟ್ಟಿಗೆ ಸ್ನಾನಪಾನಾದಿರೂಪ ಪ್ರಯೋಜನ ವಾಗುವುದೋ ಅಷ್ಟೂ, ಅದಕ್ಕಿಂತ ಹೆಚ್ಚಾಗಿಯೂ ದೊಡ್ಡ ಜಲಾಶಯಗಳಾದ ಸಮುದ್ರಾದಿಗಳಿಂದ ಆಗುತ್ತದೆ. ಅದರಂತೆ ಸರ್ವವೇದೋಕ್ತ ಕಾಮ್ಯಕರ್ಮಿಗಳಿಗಾಗುವ ಸ್ವರ್ಗಾದಿ ಫಲವೆಲ್ಲವೂ, ಶಾಸ್ತ್ರಶ್ರವಣಾದಿಗಳಿಂದ ಭಗವನ್ಮಹಿಮೆಯನ್ನರಿತು ಕೇವಲ ಭಗವದರ್ಪಣಬುದ್ಧಿಯಿಂದ ನಿಷ್ಕಾಮ ಕರ್ಮಾನುಷ್ಠಾನ ಮೂಲಕವಾಗಿ ಭಗವದಪರೋಕ್ಷಜ್ಞಾನವನ್ನು ಹೊಂದಿದ ಜ್ಞಾನಿಗಳಿಗಾಗುವ ಮಹಾಫಲದಲ್ಲಿ ಅಡಗುತ್ತವೆ. ಜ್ಞಾನಫಲವು ಮಹಾ ಸಮುದ್ರೋದಕದಂತೆ ಮಹತ್ತಾದುದು. ಕರ್ಮ

ಫಲವಾದರೋ ಬಾವಿಯಿಂದಾಗುವ ಫಲದಂತೆ ಅತ್ಯಲ್ಪವು. ಹೀಗಿರುವಾಗ ಅವೆರಡೂ ಹೇಗೆ ಸಮಾನವಾದೀತು? ಆದಕಾರಣ ಅಲ್ಪ ಅಸ್ಥಿರ ಫಲಪ್ರದವಾದ ಕರ್ಮಮಾರ್ಗವನ್ನು ನಿಂದಿಸಿ, ಮಹತ್ತಾಗಿಯೂ, ಅನಂತ ಫಲದಾಯಕವಾಗಿಯೂ ಇರುವ ಜ್ಞಾನಸಾಧನ ಯೋಗವನ್ನು ಕಡ್ಡಾಯವಾಗಿ ಮಾಡಬೇಕೆಂದು ವಿಧಿಸಿರುವುದು ನ್ಯಾಯವೇ ಸರಿ. (ಈ ಶ್ಲೋಕಕ್ಕೆ ಮತತ್ರಯ ಭಾಷ್ಯಕಾರರ ಅಭಿಪ್ರಾಯವು ಹೀಗಿದೆ:- ವೇದದಲ್ಲಿ ಕಾಮ್ಯಕರ್ಮ ಪ್ರತಿಪಾದಕ ಭಾಗವೆಲ್ಲವೂ ನಿಷ್ಪ್ರಯೋಜನವಾದುದರಿಂದ ಅದನ್ನು ಬಿಡಬೇಕೆಂದು ಶ್ರೀರಾಮಾನುಜಾಚಾರ್ಯರ ಅಭಿಪ್ರಾಯ, ಜ್ಞಾನಿಗಳು ವೇದಗಳನ್ನೂ, ತದುಕ್ತ ಕರ್ಮಗಳನ್ನೂ ಸಂಪೂರ್ಣವಾಗಿ ದೂರಮಾಡಬೇಕೆಂದು ಶ್ರೀ ಶಂಕರಾಚಾರ್ಯರ ಆಶಯ. ವೇದದಲ್ಲಿ ಎಲ್ಲಿಯೂ ಫಲಕಾಮನೆಯನ್ನು ವಿಧಿಸಿಲ್ಲವಾದಕಾರಣ ಅಲ್ಲಿ ಯಾವ ಭಾಗವೂ ತ್ಯಾಜ್ಯವಲ್ಲವಾಗಿರುವುದರಿಂದ ಸರ್ವ ವೇದೋಕ್ತ ಕರ್ಮಗಳೆಲ್ಲವನ್ನೂ ಫಲಾಶೆಯಿಲ್ಲದೆ ಅನುಷ್ಠಾನ ಮಾಡುವುದೇ ಧರ್ಮವು. ಅದೇ ಜ್ಞಾನಸಾಧನವು. ಇಲ್ಲಿ ಶ್ರೀಕೃಷ್ಣನು ಹೇಳಿರುವ ಯೋಗವೂ ಅದೇ ಎಂದು ಶ್ರೀಮಧ್ವಾಚಾರ್ಯರು ವ್ಯಕ್ತಪಡಿಸಿರುವ ಗೀತಾರ್ಥ)

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ**

**ಮಾ ಕರ್ಮಫಲಹೇತುರ್ಭೂರ್ಮಾತೇ ಸಂಗೋಽಸ್ತ್ವಕರ್ಮಣಿ॥2-47॥**

47. 'ಸ್ವರ್ಗ ಕಾಮೋ ಯಜೇತ' ಎಂಬ ಶ್ರುತಿಯಲ್ಲಿ ಫಲಾಪೇಕ್ಷೆಯಿಂದ ಕರ್ಮವನ್ನಾಚರಿಸಬೇಕೆಂದು ವಿಧಿಸಲ್ಪಟ್ಟಿದೆ. ವೇದವಿಹಿತವು ನಿಂದ್ಯವಾಗಲಾರದಷ್ಟೆ; ಅಂದಬಳಿಕ 'ಯಾಮಿಮಾಂ' ಇತ್ಯಾದಿ ಶ್ಲೋಕಗಳಲ್ಲಿ ಕಾಮ್ಯಕರ್ಮವನ್ನು ನಿಂದಿಸಿರುವುದು ಸರಿಯಲ್ಲವೆಂದರೆ, ಹೇಳುತ್ತಾನೆ:- ಪಾರ್ಥ! ನೀನು ಮತ್ತು ನಿನ್ನಂತಹ ಜ್ಞಾನಿಯಾದವರೆಲ್ಲರೂ ಕರ್ಮಮಾಡುವ ಅಧಿಕಾರವನ್ನು ಮಾತ್ರ ಪಡೆದಿರುವಿರಿ. ಅಷ್ಟೇ ಹೊರತು ಸ್ವರ್ಗಾದಿ ಫಲಗಳನ್ನು ಬಯಸುವ ಅಧಿಕಾರ ಮಾತ್ರ ಯಾರಿಗೂ ಸಲ್ಲಲಾರದು. ಎಂದರೆ ಸರ್ವರಿಗೂ ಕರ್ಮಮಾತ್ರವೇ ಕರ್ತವ್ಯವು, ಫಲಾಕಾಂಕ್ಷೆಯು ಕರ್ತವ್ಯವಲ್ಲವೆಂದರ್ಥ. (ಏಕೆಂದರೆ ಕುರ್ವನ್ನೇವೇಹ ಕರ್ಮಾಣಿ' ಎಂಬ ಈಶಾವಾಸ್ಯ ಶ್ರುತಿಯಲ್ಲಿ ಮತ್ತು ಅದರ ಮುಂದಿನ ಭಾಗದಲ್ಲಿಯೂ ಕರ್ಮಮಾಡದಿದ್ದರೆ ಪಾಪವು ಬರುತ್ತದೆಂದು ಹೇಳಿರುವಂತೆ ಫಲವನ್ನು ಅಪೇಕ್ಷಿಸದಿದ್ದರೆ ಪಾಪವು ಬರುತ್ತದೆಂದು ಎಲ್ಲಿಯೂ ಹೇಳಿಲ್ಲವಾಗಿ 'ಸ್ವರ್ಗಕಾಮೋ ಯಜೇತ' ಎಂಬ ಶ್ರುತಿಗೂ ಯಾಗವನ್ನು ವಿಧಿಸುವುದರಲ್ಲಿ ತಾತ್ಪರ್ಯವೇ ಹೊರತು ಕ್ಷುದ್ರ ಬಯಕೆಯನ್ನು ವಿಧಿಸುವ ಆಶಯವಿಲ್ಲವೆಂದು ಸಿದ್ಧಾಂತವಾಗುತ್ತದೆ.) ಆ ಕಾರಣ ನೀನು ಅಲ್ಪ-ಅಸ್ಥಿರಫಲಗಳನ್ನುದ್ದೇಶಿಸಿ ಕರ್ಮವನ್ನಾಚರಿಸಬೇಡ. ಹಾಗಾದರೆ ಕಷ್ಟ ಸಾಧ್ಯವೆಂದು ಕರ್ಮವನ್ನು

ಬಿಡಬಹುದೇ ಎಂದು ಕೇಳುವೆಯೇನು? 'ಮಾ ತೇ ಸಂಗೋಽಸ್ತ್ವ ಕರ್ಮಣಿ'= ನೀನಾಗಲೀ ನಿನ್ನಂತಹ ಜ್ಞಾನಿಯಾಗಲಿ ಯಾರೂ ಕರ್ಮವನ್ನು ಬಿಡಕೂಡದು. ಆಚರಿಸಲೇಬೇಕು. (ನಿಷ್ಕಾಮ ಕರ್ಮಗಳಿಗೆ ಅಸ್ಥಿರವಾದ ಸ್ವರ್ಗಾದಿ ಅಲ್ಪಫಲಗಳಿಲ್ಲದಿದ್ದರೂ ಶಾಶ್ವತಮೋಕ್ಷವೆಂಬ ಮಹಾಪುರುಷಾರ್ಥಕ್ಕೆ ಸಾಧಕವಾದ ಭಗವಂತನ ಜ್ಞಾನ-ಭಕ್ತಿ-ಪ್ರಸಾದಗಳೆಂಬ ಮಹಾಫಲವು ಸಿದ್ಧವಾಗಿಯೇ ಇದೆ. ಜ್ಞಾನ ಭಕ್ತಿ ಪ್ರಸಾದಗಳನ್ನು ಆಶಿಸುವುದು ಯುಕ್ತವೂ ಆಗಿದೆ. ಅಂತಹ ಅಪೇಕ್ಷೆಯು ನಿಷಿದ್ಧವಲ್ಲ. ಅದನ್ನು ಮಾಡುವವರೂ ನಿಷ್ಕಾಮರೇ ಸರಿ. ಮಹಾತ್ಮರ ಆಚಾರವೂ ಹಾಗೆಯೇ ಇದೆಯೆಂದು ಭಾಗವತಾದಿ ಗ್ರಂಥಗಳಿಂದ ತಿಳಿದುಬರುತ್ತದೆ. ಆದಕಾರಣ ಸ್ವರ್ಗಾದಿ ಅಲ್ಪಫಲಾಶೆಯನ್ನು ಬಿಟ್ಟು ಭಗವತ್ಪ್ರಸಾದಾದಿಗಳ ಉದ್ದೇಶದಿಂದ ಸರ್ವರೂ ಕರ್ಮಮಾಡಬೇಕೆಂದು ತಾತ್ಪರ್ಯ.)

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ॥2-48॥

**48.** ಧನಂಜಯಾ! ಯೋಗಸ್ಥಿತನಾಗಿ ಫಲೇಚ್ಛೆ, ನಾನೇ ಸ್ವತಂತ್ರನೆಂಬ ಅಭಿಮಾನ ಇತ್ಯಾದಿ ಸಂಗವನ್ನು ಬಿಟ್ಟು, ಫಲವು ಸಿದ್ಧಿಸಲಿ ಅಥವಾ ಸಿದ್ಧಿಸದೇ ಹೋಗಲಿ ಸಂತೋಷ-ದುಃಖಗಳಿಗೆಡೆಗೊಡದೆ ಒಂದೇ ಸಮವಾಗಿ ವರ್ತಿಸುತ್ತ ಈಶ್ವರ ಪ್ರೀತ್ಯರ್ಥವಾಗಿ ವಿಹಿತಕರ್ಮವನ್ನಾಚರಿಸು. ಮೇಲ್ಕಂಡ ಸಂಗತ್ಯಾಗಪೂರ್ವಕವಾದ ಫಲಸಿದ್ಧಿ-ಅಸಿದ್ಧಿ ಸಂದರ್ಭಗಳಲ್ಲಿ ಸಮವಾಗಿರುವುದೇ ಯೋಗವೆನಿಸುವುದು. ಇದೇ 'ಯೋಗಸ್ಥಃ' ಎಂಬಲ್ಲಿ ಹೇಳಿರುವ ಯೋಗವು, ವಾಸ್ತವಿಕವಾಗಿ ಇದು ಯೋಗದ ಒಂದು ಭಾಗವು; ಸಂಪೂರ್ಣ ಯೋಗವಲ್ಲ. ಫಲಸಂಗವನ್ನು ತ್ಯಜಿಸಿ ಸಿದ್ಧಿ -ಅಸಿದ್ಧಿ ಸಂದರ್ಭಗಳಲ್ಲಿ ವಿಕಾರಹೊಂದದೇ ಸಮನಾಗಿದ್ದು ಕೇವಲ ಈಶ್ವರಪ್ರೀತಿಗಾಗಿ ಕರ್ಮವನ್ನಾಚರಿಸುವುದೇ ಯೋಗವು. ಅದಕ್ಕೇ ನಿವೃತ್ತ ಕರ್ಮಾಚರಣೆಯೆಂದು ಹೆಸರು, ಅದೇ ನಿಜವಾದ ಜ್ಞಾನೋಪಾಯವು.

ದೂರೇಣ ಹ್ಯವರಂ ಕರ್ಮ ಬುದ್ಧಿ ಯೋಗಾದ್ಧನಂಜಯ
ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ॥2-49॥

ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ
ತಸ್ಮಾದ್ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಂ॥2-50॥

**49-50** ಜ್ಞಾನಫಲವು ಮಹತ್ತಾದುದು, ಕರ್ಮಫಲವು ಅಲ್ಪವು. ಆದ ಕಾರಣ ಜ್ಞಾನೋಪಾಯವನ್ನೆ ಆಚರಿಸಬೇಕೆಂದು 'ಯಾವಾನರ್ಥ' ಇತ್ಯಾದಿ ಶ್ಲೋಕದಲ್ಲಿ ಹೇಳಿದ ವಿಷಯವನ್ನೆ ಬೇರೆ ರೀತಿಯಿಂದ

ವಿವರಿಸುತ್ತಾನೆ:- ಧನಂಜಯಾ! ಜ್ಞಾನವೆಂಬ ಮೋಕ್ಷಸಾಧನಕ್ಕಿಂತಲೂ ಕಾಮ್ಯ ಕರ್ಮವು ಬಹು ಕಮ್ಮಿ ದರ್ಜೆಯದು. ಈ ಕಾರಣದಿಂದಲೂ ಜ್ಞಾನಸಾಧನವಾದ ನಿವೃತ್ತಕರ್ಮಾಚರಣೆಯಲ್ಲಿಯೇ ನಿರತನಾಗು! ಫಲೋದ್ದೇಶದಿಂದ ಕರ್ಮ ಮಾಡುವವರು=ಕಾಮ್ಯಕರ್ಮಿಗಳು ದೀನರು ಎಂದರೆ ಇಂತಹುದು ಅಥವಾ ಅದಕ್ಕಿಂತ ಹೀನವಾದ ಇನ್ನೊಂದು ಜನ್ಮವನ್ನೇ ಅವರು ಪಡೆಯುವರು. ಉತ್ತಮ ಮೋಕ್ಷಪದವಿಯನ್ನು ಹೊಂದಲಾರರು. ಹೀಗೆ ಕಾಮ್ಯಕರ್ಮವು ಜ್ಞಾನಯೋಗಕಿಂತ ಅತ್ಯಂತ ಅಧಮವಾದ ಕಾರಣದಿಂದಲೂ ಕಾಮ್ಯಕರ್ಮವನ್ನು ಬಿಟ್ಟು ಜ್ಞಾನೋಪಾಯವನ್ನೇ ಆಚರಿಸಬೇಕೆಂದು ಭಾವ. ಕಾಮ್ಯ ಕರ್ಮನಿಷ್ಠರು-ಜ್ಞಾನಾರ್ಥವಾದ ನಿಷ್ಕಾಮಕರ್ಮನಿಷ್ಠರು ಇವರಿಬ್ಬರಲ್ಲಿ ನಿಷ್ಕಾಮಕರ್ಮಮಾಡಿ ಅಪರೋಕ್ಷಜ್ಞಾನಿಯಾದವರು ಪಾಪ, 1ಅನಿಷ್ಟ ಪುಣ್ಯ ಇವೆರಡನ್ನೂ ಬಿಡುವರು ಎಂದರೆ ಮೋಕ್ಷವನ್ನು ಪಡೆಯುವರು. ನಿಷ್ಕಾಮಕರ್ಮದಿಂದಲೇ ಆಪರೋಕ್ಷಜ್ಞಾನಮೂಲಕವಾಗಿ ಮೋಕ್ಷವೆಂಬ ಮಹಾ ಫಲವು ಲಭಿಸುವ ಕಾರಣ ಜ್ಞಾನಸಾಧನವಾದ ನಿಷ್ಕಾಮಕರ್ಮಕ್ಕಾಗಿ ಪ್ರಯತ್ನಿಸು. ಸಕಾಮ-ನಿಷ್ಕಾಮ ಕರ್ಮಗಳಲ್ಲಿ ನಿವೃತ್ತ ಕರ್ಮವು ಉತ್ತಮಫಲಪ್ರದವಾಗಿರುವುದರಿಂದಲೂ ಅದೇ ಶ್ರೇಷ್ಠವಾದುದು.

1.ಮನುಷ್ಯನು ಬಹುಜನ್ಮಗಳನ್ನೆತ್ತಿ ಸಾಧನೆಮಾಡಿವಮೇಲೆ ಕೊನೆಗೆ ಅಪರೋಕ್ಷಜ್ಞಾನವನ್ನು ಪಡೆಯುವನು. ಹೀಗೆ ಅಪರೋಕ್ಷಜ್ಞಾನವಾಗುವಾಗ ಅನಾದಿಸಂಸಾರದಲ್ಲಿ ಅವನು ಮಾಡಿದ ಕರ್ಮಕ್ಕನುಗುಣವಾಗಿ ಪಾಪಪುಣ್ಯಗಳು ರಾಶಿಯಾಗಿ ಸಂಚಿತವಾಗಿರುವುವು. ಅಪರೋಕ್ಷ ಜ್ಞಾನದಿಂದ ಪಾಪರಾಶಿಯು ಸಂಪೂರ್ಣವಾಗಿ ಹೋಗುವುದು. ಎಂದರೆ ಅವನಿಗೆ ಪಾಪದ ಫಲವು ಬರುವುದಿಲ್ಲ. ಇದೇ ಜ್ಞಾನಿಯ ಪಾಪತ್ಯಾಗವು. ಪುಣ್ಯವಾದರೋ ಸಂಪೂರ್ಣವಾಗಿ ಹೋಗುವುದಿಲ್ಲ. ತಿರುಗಿ ಮನುಷ್ಯ ಜನ್ಮಾದಿಗಳನ್ನು ಕೊಡುವಂತಹ ಪುಣ್ಯ ಮತ್ತು ಜ್ಞಾನದ್ವಾರಾ ಮುಕ್ತಿದಾಯಕವಾದ ಪುಣ್ಯ ಎಂದು ಪುಣ್ಯವು ಎರಡು ಬಗೆ. ಇದರಲ್ಲಿ ಮನುಷ್ಯ ಜನ್ಮಾದಿ ಫಲಪ್ರದವಾದ ಮೊದಲನೆಯ ಪುಣ್ಯವು ಮುಮುಕ್ಷುವಿಗೆ ಅನಿಷ್ಟವಾದುದರಿಂದ ಅನಿಷ್ಟ ಪುಣ್ಯವೆಂದು ಕರೆಯಲ್ಪಡುವುದು. ಎರಡನೆಯದಾದ ಜ್ಞಾನಪ್ರದಪುಣ್ಯವು ಮೋಕ್ಷದಲ್ಲಿಯೂ ಜ್ಞಾನಾನಂದಗಳ ವೃದ್ಧಿಗೆ ಕಾರಣವಾಗುವುದರಿಂದ ಮುಮುಕ್ಷುವಿಗೆ ಸದಾ ಇಷ್ಟವಾಗಿರುವ ಕಾರಣ ಇಷ್ಟ ಪುಣ್ಯವೆನಿಸುವುದು. ಪ್ರಕೃತಶ್ಲೋಕದಲ್ಲಿ ಹೇಳಿರುವ ತ್ಯಾಗವು ಎರಡು ಬಗೆಯ ಪುಣ್ಯಗಳ ತ್ಯಾಗವಲ್ಲ, ಜ್ಞಾನಿಗೆ ಇಷ್ಟ ಪುಣ್ಯವು ಅಪೇಕ್ಷಿತವು. ಆದಕಾರಣ ಬಂಧಕವಾದ ಅನಿಷ್ಟಪುಣ್ಯವನ್ನು ಮಾತ್ರವೇ ಅವನು ಬಿಡುವನು. ಎಂದರೆ ಅನಿಷ್ಟ ಪುಣ್ಯದ ಫಲವನ್ನು ತಾನು ಅನುಭವಿಸದೆ ಇನ್ನೂ ಸಂಸಾರದಲ್ಲಿರುವ ತನ್ನ ಇಷ್ಟಮಿತ್ರರಿಗೆ ಫಲಾನುಭವಕ್ಕಾಗಿ ಅದನ್ನು ದಾನಮಾಡುವನು. ಹೀಗೆ ದಾನಮಾಡುವುದು ಜ್ಞಾನಮಹಿಮೆಯಿಂದ ಅವನಿಗೆ ಸಾಧ್ಯವಾಗುತ್ತದೆ ಎಂದು ಪಾಪಪುಣ್ಯ ತ್ಯಾಗದ ವಿವರವನ್ನು ತಿಳಿಯಬೇಕು.

**ಕರ್ಮಜಂ ಬುದ್ಧಿ ಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ**

**ಜನ್ಮ ಬಂಧವಿನಿರ್ಮುಕ್ತಾಃ ಪದಂ ಗಚ್ಛಂತ್ಯನಾಮಯಂ॥2-51॥**

51. ಬುದ್ಧಿಯುಕ್ತಾಃ=ಶಾಸ್ತ್ರಾಭ್ಯಾಸದಿಂದ ಭಗವತ್ತತ್ತ್ವಜ್ಞಾನವನ್ನು ಸಂಪಾದಿಸಿದ ಜನರು, ಫಲೋದ್ದೇಶದಿಂದ ಕರ್ಮಮಾಡುವುದನ್ನು ಬಿಟ್ಟು, ಕೇವಲ ಈಶ್ವರನು ಸಂತುಷ್ಟನಾಗಲೆಂಬ ಸಂಕಲ್ಪ ಪೂರ್ವಕವಾಗಿ ಕರ್ಮವನ್ನಾಚರಿಸಿ, ಅಪರೋಕ್ಷಜ್ಞಾನವನ್ನು ಪಡೆದವರಾಗಿ, ಜನನ ಮರಣರೂಪ ಸಂಸಾರದಿಂದ ಬಿಡುಗಡೆ ಹೊಂದಿ, ಮೋಕ್ಷವೆಂಬ ದುಃಖಸಂಪರ್ಕವಿಲ್ಲದ ಸ್ಥಾನವನ್ನು ಹೊಂದುವರು. ಇದು ಪ್ರಮಾಣ ನಿರ್ಣಿತಾರ್ಥವು. (ನಿವೃತ್ತ ಕರ್ಮಾನುಷ್ಠಾನವೇ ಜ್ಞಾನ-ಸಾಧನವಾದ ಯೋಗವು. ಮೋಕ್ಷಪ್ರಾಪ್ತಿಯೇ ಜ್ಞಾನದ ಫಲವೆಂದು ತಾತ್ಪರ್ಯ.)

**ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ**

**ತದಾ ಗಂತಾಂಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ॥2-52॥**

52.ಮೋಕ್ಷಸಾಧನವಾದ ಜ್ಞಾನವನ್ನು ಬಯಸುವವನು ಫಲಾಕಾಂಕ್ಷೆಯಿಲ್ಲದೆ ಈಶ್ವರಾರಾಧನೆಯೆಂಬ ಭಾವನೆಯಿಂದ ನಿವೃತ್ತ ಕರ್ಮಗಳನ್ನು ಯಾವ ಕಾಲದವರೆಗೆ ಮಾಡುತ್ತಿರಬೇಕೆಂದರೆ, ಹೇಳುತ್ತಾನೆ:- ಅರ್ಜುನಾ! ನಿಷ್ಕಾಮ ಕರ್ಮಾನುಷ್ಠಾನವೆಂಬ ಯೋಗವು ಮನಸ್ಸಿನ ಮಲವನ್ನು ಹೋಗಲಾಡಿಸಿ ಚಿತ್ತವನ್ನು ನಿರ್ಮಲಗೊಳಿಸುತ್ತದೆ. ನಿರ್ಮಲ ಮನಸ್ಸಿಗೆ ಮಿಥ್ಯಾಜ್ಞಾನವು ಅಂಟುವುದಿಲ್ಲ; ದೂರವಾಗುವುದು. ಮಿಥ್ಯಾಜ್ಞಾನವು ಹೋದಮೇಲೆಯೇ ಶ್ರವಣಾದಿಗಳಿಂದ ಭಗವಂತನ ಮಹಿಮಾತಿಶಯವು ಸರಿಯಾಗಿ ತಿಳಿಯುವುದು. ಬಳಿಕ ಅಪರೋಕ್ಷಜ್ಞಾನವಾಗಿ ಭಗವಂತನ ಅನುಗ್ರಹದಿಂದ ಮೋಕ್ಷವು ದೊರೆಯುವುದು. ಆದಕಾರಣ ಮಿಥ್ಯಾಜ್ಞಾನವು ಹೋಗಿ ತತ್ವಜ್ಞಾನವು ಹುಟ್ಟುವವರೆಗೂ ನಿಷ್ಕಾಮ ಕರ್ಮಾನುಷ್ಠಾನರೂಪ ಯೋಗವು ಕರ್ತವ್ಯವು.

**ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ**

**ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ॥2-53॥**

53.ಕೃಷ್ಣಾ! ತತ್ವಜ್ಞಾನವಾಗುವವರೆಗೂ ಕರ್ಮಮಾಡಬೇಕೆಂದು ಹೇಳಿದೆಯಷ್ಟೆ. ತತ್ವಜ್ಞಾನವು ಶಾಸ್ತ್ರಶ್ರವಣಾದಿಗಳಿಂದ ಉಂಟಾಗುವ ಪರೋಕ್ಷಜ್ಞಾನ ಮತ್ತು ಧ್ಯಾನಾದಿಗಳಿಂದ ಉಂಟಾಗುವ ಅಪರೋಕ್ಷಜ್ಞಾನ ಎಂಬುದಾಗಿ ಎರಡು ಬಗೆಯಾಗಿದೆ. ಅದರಲ್ಲಿ ಪರೋಕಜ್ಞಾನವಾಗುವವರೆಗೂ ಕರ್ಮಮಾಡಿದರೆ ಸಾಕೆ? ಅಥವಾ ಅನಂತರವೂ ಕರ್ಮಮಾಡಬೇಕೇ? ಎಲ್ಲಿಯವರೆಗೆ ಕರ್ಮಮಾಡಿಯೇ ತೀರಬೇಕೆಂಬುದನ್ನು ನಿರ್ಣಯವಾಗಿ ಹೇಳು ಎಂಬ ಅರ್ಜುನನ ಪ್ರಶ್ನೆಗೆ ಉತ್ತರವಾಗಿ ಹಿಂದೆ ಹೇಳಿದ ಮೋಹಕಲಿಲ, ಅದನ್ನು ದಾಟುವಿಕೆ ಮತ್ತು ಅದರ ಪ್ರಯೋಜನ ಮುಂತಾದುವನ್ನು ಸ್ಪಷ್ಟ ಪಡಿಸುತ್ತಾನೆ:- ಸೂಕ್ಷ್ಮದೃಷ್ಟಿಯಿಂದ ವಿಮರ್ಶೆ ಮಾಡದೆ ಸ್ಥೂಲವಾಗಿ ನೋಡಿದರೆ ಅನೇಕ ವೇದವಾಕ್ಯಗಳು ಪರಸ್ಪರ ವಿರುದ್ಧವಾಗಿ ತೋರುತ್ತವೆ. ಅಂತಹ ವಾಕ್ಯಗಳಿಂದ ತತ್ವ ವಿಷಯದಲ್ಲಿ ಸಂಶಯ-ವಿಪರೀತಜ್ಞಾನ ಇವುಗಳುಂಟಾಗುತ್ತವೆ. ಅದರಿಂದ ಮೋಹಗೊಂಡ ಪರೋಕ್ಷಜ್ಞಾನ ಅಥವಾ ನಿನ್ನ ಮನಸ್ಸು ಆ ಮೋಹದಿಂದ ಯಾವಾಗ ಬಿಡುಗಡೆಯಾಗಿ ಶ್ರುತಿವಾಕ್ಯಗಳಿಗೆ ಅವಿರುದ್ಧಾರ್ಥವನ್ನು ಗ್ರಹಿಸಿ, ದುಶ್ಶಾಸ್ತ್ರ ಪ್ರಸಂಗ ಕೋಲಾಹಲಗಳಿಂದ ಚಲಿಸದೆ ಸ್ಥಿರವಾಗಿ ನಿಲ್ಲುವುದೋ ಆಗ ಅದು ನಿಶ್ಚಲ ಪರೋಕ್ಷಜ್ಞಾನವೆನಿಸುವುದು. ಹೀಗೆ ಪರೋಕ್ಷ

ಜ್ಞಾನ ಅಥವಾ ಮನಸ್ಸು ದೃಢವಾಗಿ ನಿಂತ ಕೂಡಲೇ ಸಂಪ್ರಜ್ಞಾತ ಸಮಾಧಿ ಎಂದರೆ ಖಂಡಧ್ಯಾನವು ಸಿದ್ಧಿಸುತ್ತದೆ. ಅದಕ್ಕಾಗಿ ಪರೋಕ್ಷ ಜ್ಞಾನಿಯು ತನ್ನ ಜ್ಞಾನವು ಹೀಗೆ ದೃಢವಾಗುವವರೆಗೂ ಕರ್ಮಮಾಡುತ್ತಿರಬೇಕು. ಉಕ್ತ ಸಂಪ್ರಜ್ಞಾತ ಸಮಾಧಿಯು ಸಿದ್ಧಿಸಿದ ಬಳಿಕ ಅಸಂಪ್ರಜ್ಞಾತ ಸಮಾಧಿ ಎಂದರೆ ಅಖಂಡಧ್ಯಾನವು ಉಂಟಾಗುವುದು. ಅದರಿಂದ ಅಪರೋಕಜ್ಞಾನವು =ಬ್ರಹ್ಮದರ್ಶನವು ಲಭಿಸುತ್ತದೆ. ಅದರಿಂದ ಆನಂದಸಾಗರದಲ್ಲಿ ಮುಳುಗಿ ಮೈಮರೆತು ಭೇರೀತಾಡನಾದಿಗಳಿಂದಲೂ ಚಲಿಸದಂತಾಗಿ ಬುದ್ಧಿಯು ಭಗವಂತನಲ್ಲಿಯೇ ದೃಢವಾಗಿ ನಿಲ್ಲುವಂತಹ ಸ್ಥಿತಿಯು ಬರುವುದು. ಆಗ ನಿವೃತ್ತ ಕರ್ಮಾನುಷ್ಠಾನವೆಂಬ ಯೋಗ(ಜ್ಞಾನೋಪಾಯ)ದ ಫಲವಾದ ಮೋಕ್ಷವನ್ನು ಹೊಂದುವೆ. (ಒಟ್ಟಿನಲ್ಲಿ ಅಪರೋಕ್ಷಜ್ಞಾನವಾದ ಮೇಲೆಯೂ ಭಗವಂತನಲ್ಲಿ ಮನಸ್ಸು ನಿಶ್ಚಲವಾಗಿ ನಿಂತು ಅಪರೋಕ್ಷ ಜ್ಞಾನದ ಪರಿಪಕ್ವಾವಸ್ಥೆಯು ಉಂಟಾಗುವವರೆಗೂ 'ಕರ್ಮವನ್ನಾಚರಿಸುತ್ತಿರಬೇಕು, ಮೋಹಕಲಿಲವೆಂದರೆ ಆಪಾತತಃ=ಸ್ಥೂಲದೃಷ್ಟಿಯಿಂದ ವಿರುದ್ಧವಾಗಿ ತೋರುವ ವೇದವಾಕ್ಯಗಳಿಂದ ಉಂಟಾಗುವ ತತ್ವಜ್ಞಾನದ ಅಪ್ರಾಮಾಣ್ಯಶಂಕೆ ಅಥವಾ ಮನಸ್ಸಿನ ವ್ಯಾಮೋಹ. ಅದರ ತರಣವೆಂದರೆ ವೇದಾರ್ಥಾನುಕೂಲವಾದ ತತ್ವನಿಶ್ಚಯದಲ್ಲಿ ಅಪ್ರಾಮಾಣ್ಯಶಂಕೆಯು ಹೋಗಿ ಮನಸ್ಸಿನ ಚಲಿಸದಂತಹ ದೃಢತಮ ಸ್ಥಿತಿಯು. ಅದಕ್ಕೆ ಮೋಕ್ಷಕವೇ ಫಲವೆಂದು ಹೇಳಿದಂತಾಯಿತು.)

**ಅರ್ಜುನ ಉವಾಚ**

**ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ**
**ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಂ॥2-54॥**

54.ಜ್ಞಾನಿಯ ವಿಷಯವನ್ನು ಹೇಳುತ್ತಿರುವಾಗ ಅರ್ಜುನನು ಇದೇ ಸಮಯವೆಂದರಿತು ಜ್ಞಾನಿಗಳಿಗೆ ಲಕ್ಷಣವೇನು? ಎಂದು ಪ್ರಶ್ನಿಸುತ್ತಾನೆ. 'ಸಮಾಧಿಸ್ಥ' ಎಂದು ಹಿಂದೆಯೇ ಜ್ಞಾನಿ ಲಕ್ಷಣವು ಉಕ್ತವಾಗಿದೆ. ಹೀಗಿರುವಾಗ ತಿರುಗಿ ಲಕ್ಷಣವನ್ನು ಪ್ರಶ್ನಿಸುವುದು ಹೇಗೆ? ಎಂದರೆ ಸಮಾಧಿಸ್ಥತ್ವ ಲಕ್ಷಣವು ಸಮಾಧ್ಯವಸ್ಥೆಯನ್ನು ಹೊಂದಿರುವ ಕಾಲದಲ್ಲಿ ಅವನನ್ನು ಜ್ಞಾನಿಯೆಂದು ತಿಳಿದು ವ್ಯವಹರಿಸುವುದಕ್ಕೆ ಸಾಧಕವಾಗುತ್ತದೆ. ಆದರೆ ಇತರ ಕಾಲದಲ್ಲಿಯೂ ಅವನನ್ನು ಜ್ಞಾನಿಯೆಂದು ವ್ಯವಹರಿಸುವುದುಂಟು. ಆಗ ಸಮಾಧಿಸ್ಥತ್ವ ಲಕ್ಷಣವಿರುವುದಿಲ್ಲ. ಆಗಲೂ ಇರುವಂತಹ ಲಕ್ಷಣವನ್ನು ಹೇಳಿಲ್ಲ. ಆದಕಾರಣ ಅಂತಹ ಸಾಮಾನ್ಯ ಲಕ್ಷಣವನ್ನು ಹೇಳಬೇಕೆಂಬ ಆಶಯದಿಂದ ಅರ್ಜುನನು

ಪ್ರಶ್ನಿಸುತ್ತಾನೆ :- ಕೃಷ್ಣಾ! ಅಸಂಪ್ರಜ್ಞಾತ ಧ್ಯಾನ ಯೋಗನಿಷ್ಠೆಯು ಜ್ಞಾನಿಲಕ್ಷಣವೆಂದು ಹೇಳಿರುವುದು ಸರಿಯಷ್ಟೆ. ಹಾಗಾದರೆ ಧ್ಯಾನದಿಂದ ಎಚ್ಚೆತ್ತ ಮೇಲೆ ಮತ್ತು ಧ್ಯಾನಯೋಗದಲ್ಲಿ ತೊಡಗುವ ಪೂರ್ವದಲ್ಲಿಯೂ ಕೂಡ ಆ ಲಕ್ಷಣದಿಂದ ಜ್ಞಾನಿಯನ್ನು ಗುರ್ತಿಸಿ ವ್ಯವಹರಿಸಲಾಗುವುದಿಲ್ಲ. ಆ ಕಾರಣ ಸ್ಥಿತಪ್ರಜ್ಞಸ್ಯ=ಅಪರೋಕ್ಷಜ್ಞಾನಿಗೆ, ಕಾ ಭಾಷಾ=ಸರ್ವದಾ ಇವನು ಜ್ಞಾನಿಯೆಂಬ ವ್ಯವಹಾರಕ್ಕೆ ನಿಯಾಮಕನಾದ ಲಕ್ಷಣವು ಯಾವುದು? ಹೇಳು! ಅಪರೋಕ್ಷಜ್ಞಾನಿಯು ಯಾವ ಪ್ರಯೋಜನೋದ್ದೇಶದಿಂದ ಮಾತಾಡುವನು? ಸಮಾಧಿಯಿಂದೆದ್ದು ಕೂಡಲು ಕಾರಣವಾದರೂ ಏನು? ಅವನ ಗಮನಾಗಮನಪ್ರವೃತ್ತಿಗೇನು ಕಾರಣ? (ಜ್ಞಾನಿಯು ಪರಬ್ರಹ್ಮಸಾಕ್ಷಾತ್ಕಾರದಿಂದ ಆನಂದ ಸಾಗರದಲ್ಲಿ ಮುಳುಗಿರುವಕಾರಣ ಇತರ ಯಾವ ಪ್ರಯೋಜನವನ್ನೂ ಆಶಿಸುವ ಸಂಭವವಿಲ್ಲವಾಗಿ ಭಾಷಣಾದಿಗಳಲ್ಲಿ ಪ್ರವರ್ತಿಸುವ ಬಗೆ ಹೇಗೆ? ಪ್ರವೃತ್ತಿಯು ಅನುಚಿತವೇ ಸರಿ, ಆದರೆ ಶುಕಾಚಾರ್ಯರೇ ಮುಂತಾದ ಜ್ಞಾನಿಗಳಲ್ಲಿ ಭಾಷಣಾದಿಗಳು ಕಂಡುಬರುತ್ತಿವೆ. ಆದಕಾರಣ ಅಪರೋಕ್ಷಜ್ಞಾನಿಯು ಪರಮಾನಂದಮಗ್ನನೆಂಬುದೇ ಸರಿಯಲ್ಲವೆಂದು ಉತ್ತರಾರ್ಧದಿಂದ ಆಕ್ಷೇಪಿಸಿದರೆ ಪ್ರಬಲಕಾರಣವಿರುವುದರಿಂದ ಜ್ಞಾನಿಯ ಪ್ರವೃತ್ತಿಯು ಸರಿಯೆಂದು ಹೇಳಬೇಕಾಗುವುದು. ಅಂತಹ ಪ್ರಬಲವಾದ ಕಾರಣವಾವುದೆಂಬುದೇ ಅರ್ಜುನನ ಪ್ರಶ್ನೆಯು. ಬ್ರಹ್ಮ ರುದ್ರರಿಗೂ ಪ್ರೇರಕನಾಗಿ ಕೇಶವನೆನಿಸಿದ, ಸರ್ವಜ್ಞತಮನಾದ ನೀನು ಎಂತಹ ಸೂಕ್ಷ್ಮ ವಿಷಯಗಳನ್ನಾದರೂ ಬೋಧಿಸಲು ಸಮರ್ಥನಾಗಿರುವ ಕಾರಣ ಜ್ಞಾನಿಲಕ್ಷಣ, ಜ್ಞಾನಿಪ್ರವೃತ್ತಿ ಕಾರಣ ಮುಂತಾದುವನ್ನೆಲ್ಲಾ ಉಪದೇಶಿಸೆಂದು ಭಾವ.)

ಭಗವಾನುವಾಚ

**ಪ್ರಜಹಾತಿ ಯದಾಕಾಮಾನ್ಸರ್ವಾನ್ಪಾರ್ಥ ಮನೋಗತಾನ್**
**ಆತ್ಮನ್ಯೈವಾತ್ಮನಾ ತುಷ್ಟ ಸ್ಥಿತಪ್ರಜ್ಞಸ್ತದೋಚ್ಯತೇ॥2-55॥**

55.ಮೊದಲು ಲಕ್ಷಣ ಪ್ರಶ್ನೆಗೆ ಭಗವಂತನು ಉತ್ತರವನ್ನು ಹೇಳುತ್ತಾನೆ:- ಪಾರ್ಥಾ! ಮನಸ್ಸಿನಲ್ಲಿರುವ ನಿಷಿದ್ಧವಾದ ಕಾಮಕ್ರೋಧಾದಿ ಸಕಲ ದೋಷಗಳನ್ನೂ ಬಿಟ್ಟು ಪರಮಾತ್ಮನಲ್ಲಿಯೇ ಮನಸ್ಸಿಟ್ಟವನಾಗಿ ಅವನ ಅನುಗ್ರಹದಿಂದ ಯಾವಾಗ ಸಂತೋಷವನ್ನು ಹೊಂದುವನೋ ಆಗ ಸ್ಥಿತಪ್ರಜ್ಞ=ಅಪರೋಕ್ಷಜ್ಞಾನಿಯೆಂದು ಕರೆಯಲ್ಪಡುವನು. (ನಿಷಿದ್ಧ ಕಾಮಕ್ರೋಧಾದಿ ಸಕಲ ದೋಷಗಳನ್ನೂ ಬಹುತೇಕ ತ್ಯಜಿಸಿ ಭಗವಂತನಲ್ಲಿಯೇ ಏಕಾಗ್ರಚಿತ್ತನಾಗಿ ಅವನ ಅನುಗ್ರಹದಿಂದ ಸಂತೋಷಿಸುತ್ತಿರುವುದೇ ಜ್ಞಾನಿಯ ಲಕ್ಷಣ. ಈ ಅವಸ್ಥೆಯು ಜ್ಞಾನಿಗೆ ಸ್ವಭಾವ ಸಿದ್ಧವಾಗಿರುವುದು.

ಜ್ಞಾನಾರ್ಥಿಗಾದರೋ ಕಾಮತ್ಯಾಗಾದಿ ಲಕ್ಷಣವು ಪ್ರಯತ್ನ ಪೂರ್ವಕವಾಗಿ ಸಾಧಿಸಲ್ಪಡತಕ್ಕುದು. ಅದೇ ಜ್ಞಾನಸಾಧಕವಾಗಿ ಯೋಗವೆನಿಸುವುದು. ಹೀಗೆ ಅವಸ್ಥಾಭೇದದಿಂದ ಲಕ್ಷಣ ಮತ್ತು ಯೋಗಗಳೆರಡೂ ಉಕ್ತವಾಗಿವೆಯೆಂದು ತಾತ್ಪರ್ಯ.)

**ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ**
**ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ॥2-56॥**

**ಯಃ ಸರ್ವತ್ರಾನ್ನಭಿಸ್ನೇಹಸ್ತತ್ತತ್ಪ್ರಾಪ್ಯ ಶುಭಾಶುಭಂ**
**ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ॥2-57॥**

**ಯದಾ ಸಂಹರತೇ ಚಾಯಾಂ ಕೂರ್ಮಾಂಗಾನೀವ ಸರ್ವಶಃ**
**ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ॥2-58॥**

**56-58.** ಈ ಲಕ್ಷಣವನ್ನೆ ಸ್ಪಷ್ಟವಾಗಿ ವಿವರಿಸುತ್ತಾನೆ:- ದುಃಖಗಳು ಬಂದರೂ ಚಿತ್ತಕೋಭೆಯನ್ನು ಹೊಂದಿದೆ ಎಂದರೆ ಕುಗ್ಗದೆಯೂ, ಐಹಿಕ ಸುಖ ವಿಷಯದಲ್ಲಿ ಆಶೆಯಿಲ್ಲದವನಾಗಿಯೂ ರಾಗ (ಶ್ರೇಯಸ್ಕರವಲ್ಲದ ವಿಷಯಗಳನ್ನು ಶ್ರೇಯಸ್ಕರವೆಂದು ಭ್ರಮಿಸುವುದು) ಭಯ, ಕ್ರೋಧಗಳನ್ನು ಹೋಗಲಾಡಿಸಿಕೊಂಡಿರುವವನಾಗಿಯೂ, ಸರ್ವದಾ ಭಗವಂತನನ್ನು ನೆನೆಯುತ್ತಿರುವವನು ಸ್ಥಿತಪ್ರಜ್ಞ=ಅಪರೋಕ್ಷಜ್ಞಾನಿಯೆನಿಸಿಕೊಳ್ಳುವನು. ಇದರಿಂದ ಕಾಮತ್ಯಾಗವನ್ನು ವಿವರಿಸಿದಂತಾಯಿತು. ರಾಗ, ಭಯ, ಕ್ರೋಧಗಳನ್ನು ಕಳೆದುಕೊಳ್ಳುವ ಬಗೆಯನ್ನು ವಿವರಿಸುತ್ತಾನೆ:- ಯಾವಾತನು ಸಕಲವಾದ ಐಹಿಕ ಭೋಗ ವಿಷಯಗಳಲ್ಲಿಯೂ ಅತ್ಯಂತಸ್ನೇಹರಹಿತನಾಗಿ ಆಯಾ ಶುಭವಿಷಯಗಳು ಬಂದಾಗ ಅದನ್ನೇ ಪ್ರಶಂಸಿಸಿ ಹಿಗ್ಗುವುದಿಲ್ಲವೋ, ಹಾಗೆಯೇ ಅಶುಭ ವಿಷಯಗಳು ಬಂದಾಗ ಪ್ರತಿಕೂಲವೆಂಬ ಭಾವನೆಯಿಂದ ಕುಗ್ಗುವುದಿಲ್ಲವೋ, ಅಂತಹವನ ಅಪರೋಕಜ್ಞಾನವು ಸ್ಥಿರವಾದುದು. ಎಂದರೆ ಅಂತಹವನು ಸ್ಥಿತಪ್ರಜ್ಞನೆನಿಸುವನೆಂದು ಭಾವ. (ವಿಷಯಾಭಿಮಾನತ್ಯಾಗವೇ ರಾಗಾದಿಗಳನ್ನು ಪರಿಹರಿಸಿಕೊಳ್ಳುವ ದಾರಿಯು ಎಂದು ಹೇಳಿದಂತಾಯಿತು.) ಆಮೆಯು ಕೈ, ಕಾಲು ಮುಂತಾದ ತನ್ನ ಅವಯವಗಳನ್ನು ಹೊರಗೆ ಬಿಡದೆ ಸೆಳೆದು ತನ್ನಲ್ಲಿಯೇ ಅಡಗಿಸಿಟ್ಟುಕೊಳ್ಳುವಂತೆ ಈ ಜ್ಞಾನಿಯೂ ಕೂಡ ತನ್ನ ಇಂದ್ರಿಯಗಳನ್ನೆಲ್ಲಾ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳ ಕಡೆಗೆ ಹೋಗದಂತೆ ಅನಾಯಾಸವಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವನೋ ಆಗ ಅವನ ಜ್ಞಾನವು ಪರಿಪಕ್ವಾವಸ್ಥೆಯನ್ನು ಹೊಂದುವುದು, ಅವನೇ ಸ್ಥಿತಪ್ರಜ್ಞನೆನಿಸುವನು. (ಕೈ, ಕಾಲುಗಳನ್ನು ಒಳಗೆ

ಅಡಗಿಸಿಟ್ಟುಕೊಳ್ಳುವುದು ಕೂರ್ಮದ ಸ್ವಭಾವ ಅದಕ್ಕಾಗಿ ಆಮೆಯು ಆಯಾಸಪಡುವುದಿಲ್ಲ. ಅಂತೆಯೇ ಇಂದ್ರಿಯಗಳು ವಿಷಯಗಳ ಕಡೆಗೆ ಹೋಗದಂತೆ ತಡೆಯುವುದೂ ಜ್ಞಾನಿಗೆ ಸ್ವಾಭಾವಿಕವಾಗಿ ಪರಿಣಮಿಸಬೇಕು. ಅದಕ್ಕಾಗಿ ಅವನು ಪ್ರಯಾಸಪಡಬಾರದು. ಹೀಗೆ ಇಂದ್ರಿಯಗಳನ್ನು ಜಯಿಸಿದವನೇ ಸ್ಥಿತಪ್ರಜ್ಞನೆನಿಸುವನೆಂದು ಆಮೆಯ ದೃಷ್ಟಾಂತದಿಂದ ವ್ಯಕ್ತವಾಗುತದೆ.)

**ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹನಃ**

**ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ॥2-59॥**

59.ಸಕಲ ಕಾಮಗಳನ್ನೂ ಅನಾಯಾಸವಾಗಿ ಬಿಡುವುದೇ ಜ್ಞಾನಿ ಲಕ್ಷಣ ಎಂದು ಹೇಳಿದೆಯಷ್ಟೆ. ಅದರಿಂದ ಕಾಮಕ್ರೋಧಾದ್ಯನರ್ಥಗಳ ಪರಿಹಾರವು ಜ್ಞಾನದಿಂದಾಗುತ್ತದೆಂದು ಹೇಳಿದಂತಾಯಿತು. ಹಾಗಾದರೆ ಕಾಮಾದ್ಯುಪದ್ರವ ಪರಿಹಾರಕ್ಕಾಗಿ ಸರ್ವರೂ ಜ್ಞಾನವನ್ನೇ ಸಂಪಾದಿಸುವುದುಚಿತವು ಆದರೆ ಕಾಮಾದಿಯುಕ್ತ ಜನರು ಅದರ ಪರಿಹಾರಕ್ಕಾಗಿ ಜ್ಞಾನಸಂಪಾದನೆಯನ್ನು ಏಕೆ ಮಾಡುತ್ತಿಲ್ಲವೆಂದರೆ ಪೂರ್ವ ಶ್ಲೋಕದಿಂದ ಇಂದ್ರಿಯಜಯವಾದ ಹೊರತು ಜ್ಞಾನಸಿದ್ಧಿಯಾಗುವುದಿಲ್ಲವೆಂದು ಹೇಳಿದೆ. ಇಂದ್ರಿಯಜಯವಾದರೋ ಸುಲಭ ಸಾಧ್ಯವಲ್ಲ. ಬಹು ಕಷ್ಟ ಸಾಧ್ಯ ಎಂಬುದನ್ನು ವಿವರಿಸುವುದಕ್ಕಾಗಿ ಇಂದ್ರಿಯಜಯವಾಗುವ ಬಗೆಯನ್ನು ಹೇಳುತ್ತಾನೆ:- [ವಿಷಯಾಃ=ರೂಪಾದಯಃ, ಇಂದ್ರಿಯಾಣಾಂ ತದ್ಭೋಗಶಕ್ತಯಃ ಉಪಲಕ್ಷಂತೇ] ಅತಿಯಾಗಿ ತಿನ್ನದೆ ಮಿತಾಹಾರವನ್ನು ಸೇವಿಸುತ್ತ ಕ್ರಮವಾಗಿ ನಿರಾಹಾರನಾಗುವುದರಿಂದ ಆತ್ಮನಿಗೆ ಇಂದ್ರಿಯಗಳ ವಿಷಯಭೋಗಶಕ್ತಿಯು ಹೋಗುವುದು, ಆದರೆ ಆಹಾರ ಸೇವನೆಯಿಲ್ಲದಿದ್ದರೆ ಚಕ್ಷುರಾದಿ ಬಾಹೇಂದ್ರಿಯ ಶಕ್ತಿಯು ಮಾತ್ರಕುಗ್ಗುವುದೇ ಹೊರತು ಮಾನಸಿಕ ವಿಷಯಾಭಿಲಾಷೆಯು ಹೋಗುವುದೇ ಇಲ್ಲ; ಅದು ಪರಮಾತ್ಮನ ದರ್ಶನದಿಂದಲೇ ನಷ್ಟವಾಗುವುದು. (ವಿಷಯಗಳು ಇದಿರಿಗಿದ್ದರೂ ಚಕ್ಷುರಾದಿ ಬಾಹ್ಯೇಂದ್ರಿಯಗಳು ಅವನ್ನು ನೋಡಲೇಬಾರದು. ಒಂದು ವೇಳೆ ನೋಡಿದರೂ ಅದರ ಕಡೆ ಮನಸ್ಸು ಹೋಗಬಾರದು. ಮನಸ್ಸು ವಿಷಯದ ಕಡೆ ತಿರುಗಿದರೂ ಅದರಲ್ಲಿ ಅನುರಾಗ=ಇಚ್ಛೆ ಉಂಟಾಗಬಾರದು. ಹೀಗಾದರೆ ಮಾತ್ರ ಎಂತಹ ಕಠಿನ ಪ್ರಸಂಗ ಬಂದರೂ ಆತ್ಮನಿಗೆ ಕೋಭೆಯುಂಟಾಗುವುದಿಲ್ಲ. ಇದೇ ಇಂದ್ರಿಯಜಯವು. ಇದನ್ನು ಸಂಪಾದಿಸಲು ಬಾಹ್ಯೇಂದ್ರಿಯಗಳ ಭೋಗಶಕ್ತಿ ಮತ್ತು ವಿಷಯಾಭಿಲಾಷೆ ಇವುಗಳನ್ನು ಪರಿಹರಿಸಿ ಕೊಳ್ಳಬೇಕು. ಇವೆರಡರ - ಪರಿಹಾರವು ಜಿಜ್ಞಾಸುವಿಗೆ

ನಿರಾಹಾರದಿಂದಲೂ ಜ್ಞಾನಿಗೆ ಬ್ರಹ್ಮದರ್ಶನದಿಂದಲೂ ಸಂಭವಿಸುವುದು. ಈ ರೀತಿ ಇಂದ್ರಿಯಜಯ ಮೂಲಕವಾದ ಜ್ಞಾನವು ಸುಲಭವಲ್ಲ; ಬಹು ಕಷ್ಟಸಾಧ್ಯವು. ಆದಕಾರಣ ಸರ್ವರೂ ಜ್ಞಾನಸಂಪಾದನೆಗಾಗಿ ಪ್ರವರ್ತಿಸದೆ ಕಾಮಾದ್ಯುಪದ್ರವಕ್ಕೆ ಸಿಲುಕಿ ಸಂಸಾರದಲ್ಲಿ ತೊಳಲುತ್ತಿರುವರೆಂದು ಭಾವ.)

**ಯತತೋ ಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ**

**ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ॥2-60॥**

**60.** ಇಂದ್ರಿಯಜಯವು ಮಹಾಪ್ರಯಾಸಸಾಧ್ಯವೆಂದು ಹೇಳಿರುವುದು ಸರಿಯಲ್ಲ. ನಿರಾಹಾರನಾಗದೆಯೇ 1ಪ್ರತ್ಯಾಹಾರವೆಂಬ ಸಾಧಾರಣ ಪ್ರಯತ್ನದಿಂದಲೇ ಇಂದ್ರಿಯಗಳನ್ನು ವಿಷಯದ ಕಡೆಗೆ ಹೋಗದಂತೆ ತಡೆಯಬಹುದು. ಹಾಗೆಯೇ ಅಪರೋಕ್ಷಜ್ಞಾನವಿಲ್ಲದೆ ನಿತ್ಯಾನಿತ್ಯವಸ್ತು ವಿವೇಕರೂಪವಾದ ಸಾಧಾರಣ ಪರೋಕ್ಷ ಜ್ಞಾನದಿಂದಲೇ ಮನಸ್ಸಿನ ವಿಷಯಾಭಿಲಾಷೆಯು ನಷ್ಟವಾಗುವುದು. ಹೀಗೆ ಅಲ್ಪ ಪ್ರಯತ್ನದಿಂದಲೇ ಇಂದ್ರಿಯಜಯವುಂಟಾಗುವುದೆಂದಮೇಲೆ ನಿರಾಹಾರಾದಿ ಮಹಾಪ್ರಯತ್ನವನ್ನೇಕೆ ಮಾಡಬೇಕು ಎಂದರೆ, ಹೇಳುತ್ತಾನೆ:- ಕುಂತೀಪುತ್ರಾ! ಆತ್ಮನಿಗೆ ಚಿತ್ತವ್ಯಾಕುಲತೆಯನ್ನು ಉಂಟುಮಾಡುವುದೇ ಇಂದ್ರಿಯಗಳ ಸ್ವಭಾವವು. ಅವುಗಳ ಸಹಜವಾದ ಶಕ್ತಿಯನ್ನು ಹೋಗಲಾಡಿಸುವುದು ಬಹಳ ಕಷ್ಟ. ಪರೋಕ್ಷಜ್ಞಾನಿಯಾಗಿ ನಿತ್ಯಾನಿತ್ಯವನ್ನು ವಿವೇಕಜ್ಞಾನವನ್ನು ಹೊಂದಿದ್ದರೂ ಅಥವಾ ಪ್ರತ್ಯಾಹಾರಾದಿ ಸಾಧಾರಣ ಪ್ರಯತ್ನಗಳನ್ನು ಮಾಡಿದವನಾದರೂ ಇಂದ್ರಿಯಗಳು ವಿಷಯಗಳ ಕಡೆಗೆ ಧಾವಿಸಿ ಬಲಾತ್ಕಾರವಾಗಿ ಮನಸ್ಸನ್ನು ಅತ್ತಸೆಳೆದ್ದು ಅದರಲ್ಲಿ ಅನುರಾಗವುಂಟಾಗುವಂತೆ ಮಾಡುತ್ತವೆ. (ಹೀಗೆ ಇಂದ್ರಿಯಗಳು ಆತ್ಮನಿಗೆ ಕೋಭೆಯನ್ನುಂಟುಮಾಡುತ್ತಿರುವಾಗ ಉಕ್ತ ಸಾಧಾರಣ ಪ್ರಯತ್ನದಿಂದ ಅದನ್ನು ಜಯಿಸುವುದು ಅಸಾಧ್ಯವೇ ಸರಿ. ಆದಕಾರಣ ಇಂದ್ರಿಯವನ್ನು ಜಯಿಸಬೇಕಾದರೆ ಹಿಂದೆ ಹೇಳಿದಂತೆ ಮಹಾಪ್ರಯತ್ನವನ್ನೇ ಮಾಡಬೇಕೆಂದು ಭಾವ.)

1 ಇಂದ್ರಿಯಾಣಾಂ ವಿಚರತಾಂ ವಿಷಯೇಷು ಸ್ವಭಾವತಃ ।
ಬಲಾದಾಹರಣಂ ತೇಷಾಂ ಪ್ರತ್ಯಾಹಾರಃ ಸ ಉಚ್ಯತೇ ॥

ಸ್ವಾಭಾವಿಕವಾಗಿ ವಿಷಯಗಳ ಕಡೆ ಹೋಗಿ ಅವನ್ನು ಭೋಗಿಸಬೇಕೆಂದು ತವಕಪಡುತ್ತಿರುವ ಇಂದ್ರಿಯಗಳನ್ನು ಬಲಾತ್ಕಾರದಿಂದ ವಿಷಯದ ಕಡೆಗೆ ಹೋಗದಂತೆ ತಡೆಯುವುದೇ ಪ್ರತ್ಯಾಹಾರವು...

**ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ**

**ವಶೇ ಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ॥2-61॥**

61.ಆಹಾರವನ್ನು ಬಿಟ್ಟರೆ ದೇಹವೇ ಉಳಿಯಲಾರದು. ದೇಹವೇ ಹೋಗುವ ಪ್ರಸಂಗದಲ್ಲಿ ನಿರಾಹಾರದಿಂದ ಇಂದ್ರಿಯ ಜಯವನ್ನು ಸಂಪಾದಿಸುವುದು ಹೇಗೆ? ಮತ್ತು ಬ್ರಹ್ಮ ದರ್ಶನಕ್ಕೆ ಇಂದ್ರಿಯ ಜಯವು ಸಾಧನವಾಗಿರುವಾಗ ಬ್ರಹ್ಮದರ್ಶನದಿಂದ ಇಂದ್ರಿಯಜಯವಾಗುತ್ತೆಂದರೆ ಅನ್ಯೋನ್ಯಾಶ್ರಯ=ಇಂದ್ರಿಯಜಯವಾದ ಹೊರತು ಬ್ರಹ್ಮದರ್ಶನವಾಗುವುದಿಲ್ಲ; ಬ್ರಹ್ಮದರ್ಶನವಾದ ಹೊರತು ಇಂದ್ರಿಯಜಯವಾಗಲಾರದು. ಹೀಗೆ ಪರಸ್ಪರಾಪೇಕ್ಷೆಯಿಂದ ಯಾವುದೂ ಸಿದ್ಧಿಸುವುದಿಲ್ಲ, ಎಂಬ ದೋಷವು ಬರುತ್ತದೆ. ಆದಕಾರಣ ಇಂದ್ರಿಯ ಜಯವು ಅಸಾಧ್ಯವೇ ಸರಿಯೆಂದರೆ ಹೇಳುತ್ತಾನೆ:- ಕಷ್ಟದಿಂದ ನಿಗ್ರಹಿಸಬೇಕಾದ ಸಕಲೇಂದ್ರಿಯಗಳನ್ನೂ ವಿಷಯಗಳ ಕಡೆಗೆ ಹೋಗದಂತೆ ತಡೆದು ಮತ್ಪರಃ=ಕೃಷ್ಣನಾದ ನಾನೇ ಸರ್ವೋತ್ತಮನೆಂದು ತಿಳಿದು, ನಿರಂತರ ನನ್ನಲ್ಲಿಯೇ ಮನಸ್ಸಿಡಬೇಕು. (ಭಗವಂತನೇ ಸರ್ವೋತ್ತಮನೆಂದು ತಿಳಿದು ಅವನನ್ನೇ ಸಂತತವಾಗಿ ಮನದಲ್ಲಿ ನೆನೆಯುತ್ತಿರುವುದು ಇಂದ್ರಿಯ ಜಯಕ್ಕೆ ಮುಖ್ಯ ಸಾಧನವೆಂದು ಭಾವ.) ಹಾಗೆ ಇಂದ್ರಿಯಗಳು ಯಾವನಿಗೆ ಸ್ವಾಧೀನವಾಗುವುವೋ ಅಂತಹ ಜಿತೇಂದ್ರಿಯನು ಸ್ಥಿತಪ್ರಜ್ಞನೆನಿಸುವನು. ಇಂದ್ರಿಯ ಜಯಕ್ಕೆ ಜ್ಞಾನಸಿದ್ಧಿಯೇ ಫಲವು. (ಒಟ್ಟಿನಲ್ಲಿ ಪ್ರತ್ಯಾಹಾರಾದಿ ಸಾಧಾರಣ ಪ್ರಯತ್ನವು ಇಂದ್ರಿಯ ಜಯವನ್ನು ಸಾಧಿಸಲಾರದು. ನಿರಾಹಾರತ್ವಾದಿಗಳಾದರೋ ಅಸಾಧ್ಯ ಸಾಧನೆಗಳು. ಆದಕಾರಣ ಇಂದ್ರಿಯ ಜಯವೇ ಅಸಾಧ್ಯ ಮುಂತಾಗಿ ಹಿಂದೆ ಹೇಳಿದುದೆಲ್ಲವೂ ನಿಜ. ಆದರೆ ಇಂದ್ರಿಯ ಜಯವನ್ನು ಬೇರೆ ವಿಧವಾಗಿ ಸಂಪಾದಿಸಿ ಜ್ಞಾನಸಿದ್ಧಿಯನ್ನು ಪಡೆಯಬಹುದು. ಇಂದ್ರಿಯಜಯವು ಸಮಗ್ರೇಂದ್ರಿಯ ಜಯವೆಂದೂ, ಸಾಧಾರಣೇಂದ್ರಿಯಜಯ ಎಂದೂ ಎರಡು ಬಗೆಯಾಗಿರುವುದು. ಅದರಲ್ಲಿ ಸಮಗ್ರೇಂದ್ರಿಯಜಯವು ಅಪರೋಕಜ್ಞಾನವಾದ ನಂತರ ಅದರಿಂದಲೇ ಉಂಟಾಗತಕ್ಕುದು. ಎರಡನೆಯದು ಅಪರೋಕ್ಷಜ್ಞಾನಕ್ಕೆ ಸಾಧನವು. ಅಂತಹ ಸಾಧಾರಣೇಂದ್ರಿಯ ಜಯಕ್ಕೆ ಯುಕ್ತ ಆಸೀತ ಮತ್ಪರಃ=ಕೃಷ್ಣನೇ ಸರ್ವೋತ್ತಮನೆಂದು ತಿಳಿದು ಅವನನ್ನೆ ಸಂತತವಾಗಿ ಮನಸ್ಸಿನಲ್ಲಿ ನೆನೆಯುತ್ತಿರುವುದು ಸಾಧನವೆಂದು ಈ ಶ್ಲೋಕದ ಪೂರ್ವಾರ್ಧದ ತಾತ್ಪರ್ಯ. ಇದರಿಂದ ಲಭಿಸಿದ ಸಾಧಾರಣೇಂದ್ರಿಯ ಜಯವು ಅಪರೋಕ್ಷಜ್ಞಾನ ಸಿದ್ಧಿಗೆ ಕಾರಣವಾಗುವುದು. ಇದೇ ಈ ಶ್ಲೋಕದ ಉತ್ತರಾರ್ಧದ ಅಭಿಪ್ರಾಯ. ಏವಂಚ ಬ್ರಹ್ಮದರ್ಶನಕ್ಕೆ ಸಾಧನವಾದ ಇಂದ್ರಿಯ ಜಯವೇ ಬೇರೆ. ಅದನ್ನು ಬ್ರಹ್ಮದರ್ಶನವಿಲ್ಲದೆಯೇ ಸರ್ವೋತ್ತಮತ್ವ ಜ್ಞಾನಪೂರ್ವಕ ನಿರಂತರ ಭಗವದ್ಧ್ಯಾನದಿಂದಲೇ ಸಂಪಾದಿಸಬಹುದು. ಆದಕಾರಣ ಅನ್ಯೋನ್ಯಾಶ್ರಯ ದೋಷವಿಲ್ಲ. ಹೀಗೆ ಸಾಧಾರಣೇಂದ್ರಿಯಜಯವನ್ನು ಸಂಪಾದಿಸಿದ ಬಳಿಕ ಮುಮುಕ್ಷುವು ಅಪರೋಕ್ಷಜ್ಞಾನದಿಂದ

ಸಮಗ್ರೇಂದ್ರಿಯ ಜಯವನ್ನು ಹೊಂದಿ ಭಗವಂತನ ಅನುಗ್ರಹದಿಂದ ಮೋಕ್ಷವನ್ನು ಪಡೆಯಬಹುದು. ನಿರಾಹಾರತ್ವಾದಿಗಳು ಸಾಮಾನ್ಯರಿಗೆ ಅಶಕ್ಯವಾದರೂ, ಮಹಾನುಭಾವರಾದ ಉತ್ತಮಾಧಿಕಾರಿಗಳು ಅದನ್ನು ಆಚರಿಸಿ ಅದರಿಂದಲೂ ಇಂದ್ರಿಯಜಯವನ್ನು ಹೊಂದುವರೆಂಬ ವಾಸ್ತವಿಕಾಂಶವನ್ನು ತಿಳಿಸುವುದಕ್ಕಾಗಿಯೇ ಹಿಂದೆ ನಿರಾಹಾರತ್ವಾದಿಗಳು ಇಂದ್ರಿಯಜಯ ಸಾಧನಗಳೆಂದು ಉಕ್ತವಾಗಿವೆ. ಅದರಿಂದಲೇ ಸರ್ವರೂ ಇಂದ್ರಿಯಜಯವನ್ನು ಪಡೆಯಬೇಕೆಂದು ಅಭಿಪ್ರಾಯವಲ್ಲ. ಉಕ್ತ ಜ್ಞಾನಮಾರ್ಗವೇ ಸಾಧುವಾದುದೆಂದು ಪರಮತಾತ್ಪರ್ಯ.)

**ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೋಪಜಾಯತೇ**
**ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿಜಾಯತೇ ॥2-62॥**

**ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ**
**ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ॥2-63॥**

**62-63.** ಭಗವಂತನಲ್ಲಿ ಮನಸ್ಸಂಯೋಜನೆಯಿಂದ ಇಂದ್ರಿಯಗಳನ್ನು ಜಯಿಸಬೇಕೆಂದು ಹೇಳಿರುವುದು ಸರಿಯಷ್ಟೆ. ರಾಗದ್ವೇಷಾದಿಗಳಿಂದ ಕಲುಷಿತವಾಗಿ ವಿಷಯಗಳನ್ನೇ ಚಿಂತಿಸುತ್ತಿರುವ ಮನಸ್ಸನ್ನು ಭಗವಂತನಲ್ಲಿ ಸಂಯೋಜನೆ ಮಾಡುವುದು ಹೇಗೆ? ಎಂದರೆ ರಾಗಾದಿಗಳ ಪರಿಹಾರವೂ ಇಂದ್ರಿಯಜಯಕ್ಕೆ ಮತ್ತೊಂದು ಸಾಧನೆಯೆಂದು ಮುಂದಿನ ಶ್ಲೋಕದಿಂದ ಹೇಳಲ್ಪಡುತ್ತದೆ. ಆದಕಾರಣ ರಾಗಾದಿ ಪರಿಹಾರವಾಗುವ ಬಗೆಯನ್ನು ವಿವರಿಸುವುದಕ್ಕಾಗಿ ಈ ಎರಡು ಶ್ಲೋಕಗಳಿಂದ ರಾಗಾದಿಗಳಿಗೆ ಕಾರಣವನ್ನು ಮತ್ತು ಅವುಗಳ ಫಲವನ್ನೂ ವಿವರಿಸುತ್ತಾನೆ:- ರೂಪಾದಿ ವಿಷಯಗಳನ್ನು (ಭೋಗ್ಯವಸ್ತುಗಳನ್ನು) ಹಿತಕರವೆಂದು ಚಿಂತಿಸುತ್ತಿರುವ ಮನುಷ್ಯನಿಗೆ ಅವುಗಳಲ್ಲಿ ಆಸಕ್ತಿಯುಂಟಾಗುವುದು. ಈ ವಿಷಯಾಸಕ್ತಿಯಿಂದ ಅದರಲ್ಲಿ ಉತ್ಕಟಾಭಿಲಾಷೆಯುಂಟಾಗುವುದು. ಹಾಗೆ ತಾನು ಅತಿಯಾಗಿ ಆಶಿಸಿದ ವಿಷಯವನ್ನು ಉಪಭೋಗಿಸುವುದಕ್ಕೆ ಯಾರಾದರೂ ತಡೆಮಾಡಿದರೆ, ತನ್ನ ಸ್ವೇಚ್ಛಾ ಪ್ರವರ್ತನೆಗೆ ತಡೆಮಾಡಿದವರಲ್ಲಿ ಕ್ರೋಧವು ಹುಟ್ಟುತ್ತದೆ. ಕೋಪದಿಂದ ಸಂಮೋಹ=ಅಕಾರ್ಯೇಚ್ಛೆ ಅಥವಾ ಅಧರ್ಮಕರವಾದ ಪರಹಿಂಸೆ, ಪರವಿತ್ತಾಪಹರಣಾದಿಗಳನ್ನು ಧರ್ಮವೆಂದು ಬಗೆಯುವ ಮಿಥ್ಯಾ ಜ್ಞಾನವು ಬರುವುದು. ಅಂತಹ ಸಂಮೋಹದಿಂದ ಸ್ಮೃತಿವಿಭ್ರಮ=ಇದು ನಿಷಿದ್ಧವು; ಇದನ್ನು ಮಾಡಬಾರದು' ಎಂಬ ಶಾಸ್ತ್ರಾರ್ಥದ ಸ್ಮರಣೆಯು ನಾಶವಾಗುವುದು. ಅಥವಾ ಪರಹಿಂಸೆ ಮುಂತಾದುವು ಅಧರ್ಮವೆಂದು ಶಾಸ್ತ್ರದಿಂದ ತಾನು ಹಿಂದೆ ತಿಳಿದುದನ್ನು ಮರೆತು ಅದೇ

ಧರ್ಮವೆಂಬ ಭ್ರಾಂತಿಯು ಉಂಟಾಗುತ್ತದೆ. ಅಂತಹ ಸ್ಮೃತಿವಿಭ್ರಮದಿಂದ ಬುದ್ಧಿಯು='ಇದು ದುಷ್ಟ'ವೆಂದು ಗ್ರಹಿಸುವ ಬುದ್ಧಿಯು ಸರ್ವಾತ್ಮನಾ ನಷ್ಟವಾಗುವುದು. ಎಂದರೆ ಒಳ್ಳೆಯ ಬುದ್ಧಿಯು ಹೋಗಿ ದುಷ್ಟಬುದ್ಧಿಯುಂಟಾಗುವುದು. ಅದರಿಂದ ಮನುಷ್ಯನು ದುಷ್ಕಾರ್ಯಗಳಲ್ಲಿ ನಿರರ್ಗಳವಾಗಿ ಪ್ರವರ್ತಿಸುವನು. ಅದರಿಂದ ನರಕಾದ್ಯನರ್ಥಗಳಿಗೆ ಭಾಗಿಯಾಗುವನು. ಇಂತಹ ನರಕಾದ್ಯನರ್ಥ ಪ್ರಾಪ್ತಿಯೇ ಆತ್ಮನಿಗೆ ನಾಶವು. (ಹೀಗೆ ರಾಗದ್ವೇಷಗಳಿಗೆ ಪರಂಪರೆಯಾಗಿ ನರಕಾದಿ ಪ್ರಾಪ್ತಿಯೇ ಫಲವೆಂದು ತಿಳಿದರೆ ಅಂತಹ ಅನರ್ಥ ಸಾಧನವಾದ ರಾಗದ್ವೇಷಗಳನ್ನು ಹೇಗಾದರೂ ಪರಿಹರಿಸಿಕೊಳ್ಳಬೇಕೆಂಬ ಇಚ್ಛೆಯುಂಟಾಗುವುದು. ಅಂತಹ ಸಂದರ್ಭದಲ್ಲಿ ವಿಷಯವೇ ಹಿತವೆಂದು ಭಾವಿಸಿ, ಆದನ್ನು ಚಿಂತಿಸುವುದೇ ರಾಗದ್ವೇಷಗಳಿಗೆ ಮೂಲಕಾರಣವೆಂಬ ತಿಳಿವಳಿಕೆಯು ಬಂದರೆ ಕೇವಲ ಜುಗುಪ್ಸಾವಹವಾದ ವಿಷಯಗಳು ಪ್ರಾಪ್ತವಾದಾಗ ಅವುಗಳಲ್ಲಿ ಉದಾಸೀನನಾಗಿರುವಂತೆ ಸುಂದರವಸ್ತು ಮುಂತಾದುವುಗಳನ್ನು ನೋಡಿದರೂ ಅಥವಾ ಕೇಳಿದರೂ ಅದರಲ್ಲಿ ಉದಾಸೀನನಾಗುವನು. ಅವನ್ನು ಹಿತವೆಂಬ ಭಾವನೆಯಿಂದ ನೋಡುವುದಿಲ್ಲವಾಗಿ ಮೂಲಕಾರಣವಾದ ರಾಗದ್ವೇಷಗಳು ಹುಟ್ಟುವುದಿಲ್ಲ. ಹೀಗೆ ರಾಗದ್ವೇಷಾದಿ ಪರಿಹಾರವನ್ನು ಹೊಂದಿದರೆ ಭಗವಂತನಲ್ಲಿ ಚಿತ್ತ ಸಂಯೋಜನೆಯು ಸುಲಭವಾಗಿ ಸಂಭವಿಸಿ ಇಂದ್ರಿಯ ಜಯವು ಸಿದ್ಧಿಸುವುದೆಂದು ತಾತ್ಪರ್ಯ.

**ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್**
**ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ॥2-64॥**

64. ಕೃಷ್ಣಾ ! ರಾಗದ್ವೇಷಾದಿಗಳಿಂದ ನರಕಾದ್ಯನರ್ಥವಾಗುವ ಕಾರಣ ಅದನ್ನು ಪರಿಹರಿಸಿಕೊಳ್ಳುವ ಮಾರ್ಗವನ್ನು ನೀನು ಹೇಳಿದೆ. ಆ ಮಾರ್ಗವನ್ನು ಅನುಸರಿಸಿದರೆ ಅನಿಷ್ಟ ನಿವೃತ್ತಿ ಮಾತ್ರವಾಗುವುದೇ ಅಥವಾ ಇಷ್ಟವಾದ ಲಾಭವೂ ಉಂಟೆ? ಅವೆರಡೂ ಆಗುವುದಾದರೆ ಎಷ್ಟೇ ಕಷ್ಟವಾದರೂ ರಾಗದ್ವೇಷಾದಿಗಳನ್ನು ಪರಿಹರಿಸಿಕೊಳ್ಳುವ ಪ್ರವೃತ್ತಿಯುಂಟಾಗುವುದು. ಆದಕಾರಣ ಅದರಿಂದಾಗುವ ಪ್ರಯೋಜನವನ್ನು ವಿವರಿಸೆಂದರೆ, ಹೇಳುತ್ತಾನೆ:- ಉಕ್ತರೀತಿಯಿಂದ ರಾಗದ್ವೇಷಗಳನ್ನು ತ್ಯಜಿಸಿದ ಮನುಷ್ಯನು ರಾಗದ್ವೇಷವಿರಹಿತವಾದ= ರಾಗದ್ವೇಷಸಹಕಾರವಿಲ್ಲದಿರುವುದರಿಂದ ಸ್ವಾಧೀನಗಳಾದ ಚಕ್ಷುರಾದಿ ಬಾಹ್ಯೇಂದ್ರಿಯಗಳಿಂದ ತಾನು ಬದುಕಿರುವುದಕ್ಕೆ ಸಾಕಾಗುವಷ್ಟು ಮಾತ್ರ ಗ್ರಾಹ್ಯ ವಿಷಯಗಳನ್ನು ಅನುಭವಿಸುವವನಾದರೂ ಮನಸ್ಸನ್ನು ಸ್ವಾಧೀನದಲ್ಲಿಟ್ಟು ಕೊಳ್ಳುವನು. ಹಾಗೆ ಇಂದ್ರಿಯಗಳನ್ನು

ಜಯಿಸುವುದೇ ರಾಗದ್ವೇಷ ಪರಿಹಾರದ ಫಲವು. ಅಂತಹ ಜಿತೇಂದ್ರಿಯನು ಮನಸ್ಸಿನ ಪ್ರಸನ್ನತೆ=ಸ್ವಾಭಾವಿಕವಾಗಿ ವಿಷಯಗಳಲ್ಲಿ ಹೆಚ್ಚಾಗಿ ಪ್ರವರ್ತಿಸದೆ ಇರುವಂತಹ ನೈರ್ಮಲ್ಯವನ್ನು ಹೊಂದುವನು. (ಇದರಿಂದ ಇಂದ್ರಿಯಜಯಕ್ಕೆ ಮನಸ್ಸು ನಿರ್ಮಲವಾಗುವುದೇ ಸಾಕ್ಷಾತ್ಫಲವೆಂದು ಹೇಳಿದಂತಾಯಿತು. ('ವಿಷಯಾಂಶ್ಚರನ್'=ವಿಷಯಗಳನ್ನು ಅನುಭವಿಸುವವನಾದರೂ ಎಂದು ಹೇಳಿರುವುದರಿಂದ ಬದುಕುವುದಕ್ಕೆ ಬೇಕಾಗುವಷ್ಟು ಮಾತ್ರ ಆಹಾರಾದಿಗಳನ್ನು ಸೇವಿಸುವುದು ದೋಷವಲ್ಲವೆಂದೂ ಅಂತಹವನನ್ನು ನಿರಾಹಾರಿಯೆಂದೇ ಪರಿಗಣಿಸಬಹುದೆಂದೂ ಅಭಿಪ್ರಾಯ. ಇದರಿಂದ ಪೂರ್ವೋಕ್ತ ನಿರಾಹಾರತ್ವ ಸಾಧನವು ಅಸಾಧ್ಯವೆಂಬ ಶಂಕೆಯೂ ಹೋಯಿತು. ಏವಂ ಚ ನಿರಾಹಾರ ಎಂದರೆ ಯುಕ್ತಾಹಾರ ಅಥವಾ ಮಿತಾಹಾರವೆಂದು ಅರ್ಥ ಮಾಡಬೇಕು. ಅಂತಹ ಮಿತಾಹಾರ ಸೇವನೆಯು ಅನುಷ್ಠಾನಾರ್ಹ ಸಾಧನವೇ ಸರಿಯೆಂದು ತಾತ್ಪರ್ಯ.)

**ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ**

**ಪ್ರಸನ್ನ ಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠ ತೇ॥2-65॥**

**65.** ರಾಗದ್ವೇಷ ತ್ಯಾಗದಿಂದ ಮನೋನೈರ್ಮಲ್ಯವನ್ನು ಹೊಂದಲಿ, ಅದರಿಂದಲಾದರೂ ಯಾವ ಇಷ್ಟವು ನೆರವೇರಿದಂತಾಗುವುದು ಎಂದರೆ, ಹೇಳುತ್ತಾನೆ:- ಮನಸ್ಸು ಸ್ವಾಭಾವಿಕವಾಗಿ ಹೆಚ್ಚಿನ ವಿಷಯಗಳಲ್ಲಿ ಪ್ರವರ್ತಿಸದೇ ಇರುವಂತಹ ಸ್ಥಿತಿಯನ್ನು ಹೊಂದಿದಮೇಲೆ ಅಂತಹ ನಿರ್ಮಲಚಿತ್ತನಾದ ಮನುಷ್ಯನಿಗೆ ಕೂಡಲೇ ಬ್ರಹ್ಮಾಪರೋಕ್ಷಜ್ಞಾನವು ಚೆನ್ನಾಗಿ ಆಗುವುದು. ಅದರಿಂದ ಈ ಅಪರೋಕಜ್ಞಾನಿಗೆ ಮುಕ್ತಿಯು ಲಭಿಸಿ ಸಕಲದುಃಖಗಳೂ ನಿವೃತ್ತವಾಗುವುವು. (ಮನಃ-ಪ್ರಸಾದವು ಅಪರೋಕಜ್ಞಾನಮೂಲಕವಾಗಿ ದುಃಖಮಿಶ್ರವಲ್ಲದ ಸುಖರೂಪವಾದ ಮೋಕ್ಷವನ್ನು ಕೊಡುವುದರಿಂದ ಹಿಂದೆ ಹೇಳಿದ ಪ್ರಕಾರ ಅದನ್ನು ಅವಶ್ಯವಾಗಿ ಸಂಪಾದಿಸಬೇಕೆಂದು ಭಾವ.)

**ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ**

**ನ ಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಂ॥2-66॥**

**66.** ಮನಃಪ್ರಸಾದದಿಂದ ಅಪರೋಕ್ಷಜ್ಞಾನವಾಗುವುದೆಂದು ಹೇಳಿದುದು ಸರಿಯಲ್ಲ. ಸಚ್ಛಾಸ್ತ್ರ ಶ್ರವಣ-ಮನನ ಸಹಕೃತವಾದ ಧ್ಯಾನದಿಂದಲೇ ಬ್ರಹ್ಮ ಸಾಕ್ಷಾತ್ಕಾರವು ಸಿದ್ಧಿಸುತ್ತದೆ, ಆದಕಾರಣ ಮನಃಪ್ರಸಾದವು ಅನಾವಶ್ಯಕವೆಂದರೆ ಪ್ರಸಾದವಿಲ್ಲದಿದ್ದರೆ ಆಗುವ ಅನಿಷ್ಟವನ್ನು ವಿವರಿಸುತ್ತಾನೆ :- [ಈ ಶ್ಲೋಕಾರಂಭದಲ್ಲಿ 'ಪ್ರಸಾದಾಭಾವೇನ ಯುಕ್ತಿ:'=ಮನೋನೈರ್ಮಲ್ಯವಿಲ್ಲದಿದ್ದರೆ ಮನಸಿಗೆ

ಏಕಾಗ್ರತೆಯುಂಟಾಗುವುದಿಲ್ಲ ಎಂಬ ಭಾಗವನ್ನು ಅಧ್ಯಾಹಾರಮಾಡಿಕೊಳ್ಳಬೇಕು. 'ನಾಸ್ತಿ ಬುದ್ಧಿಃ...' ಎಂಬುದನ್ನು ಮುಂದೆಯೂ ಸೇರಿಸಿಕೊಳ್ಳಬೇಕು.] ಮನಸ್ಸು ನಿರ್ಮಲವಾಗದಿದ್ದರೆ ಅದು ಏಕಾಗ್ರತೆಯನ್ನು ಹೊಂದಲಾಗದು. ಏಕಾಗ್ರಚಿತ್ತನಲ್ಲದವನಿಗೆ ಅಪರೋಕ್ಷಜ್ಞಾನವಾಗುವುದಿಲ್ಲ. ಏಕೆಂದರೆ:- ಅಯುಕ್ತಸ್ಯ=ಚಿತ್ತೈಕಾಗ್ರತೆಯಿಲ್ಲದವನಿಗೆ ಧ್ಯಾನವೇ ಸಿದ್ಧಿಸುವುದಿಲ್ಲ. ಅಭಾವಯತಃ = ಧ್ಯಾನಮಾಡದಿದ್ದವನಿಗೆ ಅಪರೋಕ್ಷಜ್ಞಾನವಾಗಲಾರದು. ಆ ಪರೋಕ್ಷಜ್ಞಾನವಿಲ್ಲದಮೇಲೆ ಮುಕ್ತಿಯಾಗುವುದಿಲ್ಲ. ಮುಕ್ತಿಯನ್ನೇ ಹೊಂದದವನಿಗೆ ದುಃಖಮಿಶ್ರವಲ್ಲದ ಸುಖವು ಹೇಗೆ ಲಭಿಸುವುದು? (ಮನಃಪ್ರಸಾದವು ಸಾಕ್ಷಾತ್ಕಾರಾಂಗವಾದ ಧ್ಯಾನಕ್ಕೆ ಚಿತ್ತೈಕಾಗ್ರತೆಯನ್ನುಂಟುಮಾಡುವುದರ ಮೂಲಕ ಮುಖ್ಯ ಸಾಧನವಾಗುವುದರಿಂದ ಅದನ್ನು ಅವಶ್ಯ ಸಂಪಾದಿಸಬೇಕೆಂದು ಭಾವ.)

**ಇಂದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ**
**ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ ॥2-67॥**

**67.** ಶ್ರವಣ-ಮನನಗಳಿಂದ ತತ್ವನಿಶ್ಚಯವಾದಮೇಲೆ ಅದರಂತೆ ಧ್ಯಾನ ಮಾಡುವುದಕ್ಕೆ ಬರುವುದು. ಇನ್ನು ಚಿತ್ತೈಕಾಗ್ರತೆ ಯೇತಕ್ಕೆಂದರೆ, ಹೇಳುತ್ತಾನೆ:- ಯಥೇಷ್ಟವಾಗಿ ವಿಷಯಗಳ ಕಡೆಗೆ ಧಾವಿಸುತ್ತಿರುವ ಚಕ್ಷುರಾದೀಂದ್ರಿಯಗಳನ್ನು ಮನಸ್ಸು ಹಿಂಬಾಲಿಸಿ ಆಯಾ ವಿಷಯಗಳನ್ನೇ ಭೋಗಿಸಲು ಪ್ರವರ್ತಿಸುವಂತೆ ಈಶ್ವರನು ವಿಧಾಯಕಮಾಡಿರುವನು. ಜಲದಲ್ಲಿ ಸಂಚರಿಸುತ್ತಿರುವ ನೌಕೆಯನ್ನು ಪ್ರತಿಕೂಲವಾದ ಬಿರುಗಾಳಿಯು ಅಪಾಮಾರ್ಗಕ್ಕೆಳೆದು ಸುಳಿಯಲ್ಲಿ ಸಿಕ್ಕಿಸಿ ಮುಳುಗಿಸಿಬಿಡುವಂತೆ ಚಂಚಲವಾದ ಇಂದ್ರಿಯಗಳನ್ನು ಅನುಸರಿಸಿದ ಮನಸ್ಸು ಮನುಷ್ಯನಿಗೆ ಶ್ರವಣಾದಿಗಳಿಂದ ತತ್ವ ನಿರ್ಣಯವಾಗದಂತೆ ತಡೆದು ಅವನನ್ನು ಅನರ್ಥಕ್ಕೀಡು ಮಾಡುವುದು. ಶ್ರವಣಾದಿಗಳಿಂದ ತತ್ವನಿಶ್ಚಯವನ್ನು ಹೊಂದಿದ್ದರೆ ಅದನ್ನೂ ಶಿಥಿಲಗೊಳಿಸಿ ಧ್ಯಾನಸಾಧಕವಾಗದಂತೆ ಮಾಡುವುದು. ಇದೇ ಪ್ರಜ್ಞಾಹರಣವು. (ಪ್ರಕೃತ ಇಂದ್ರಿಯವೇ ಪ್ರತಿಕೂಲವಾಯುವು. ಮನಸ್ಸೇ ನಾವಿಕನು. ಪ್ರಜ್ಞೆಯೇ ನೌಕೆಯೆಂದು ಭಾವಿಸಬೇಕು. ನಾವಿಕನು ಪ್ರತಿಕೂಲವಾದ ಬಿರುಗಾಳಿಯನ್ನೇ ಅನುಸರಿಸಿ ನೌಕೆಯನ್ನು ನಡೆಯಿಸಿದರೆ ಗಾಳಿಯು ಅದನ್ನು ಅಪಾಮಾರ್ಗಕ್ಕೆ ಸೆಳೆದು ಸುಳಿಯಲ್ಲಿ ಸಿಕ್ಕಿಸಿ ನಾಶಪಡಿಸುವುದು. ಅದರಂತೆ ಮನಸ್ಸು ವಿಷಯಾಸಕ್ತವಾದ ಇಂದ್ರಿಯವನ್ನು ಅನುಸರಿಸಿ ಹೋದರೆ ಇಂದ್ರಿಯವು ಅದರ ಏಕಾಗ್ರತೆಗೆ ಅವಕಾಶ ಕೊಡದೆ ತನಗೆ ಬೇಕಾದ ವಿಷಯಗಳ ಕಡೆಗೆ ಸೆಳೆದುಕೊಂಡು ದೃಢವಾದ ತತ್ವ

ನಿರ್ಣಯಕ್ಕೆಡೆಗೊಡುವುದಿಲ್ಲ. ಆದಕಾರಣ ಮನಸ್ಸು ನಿರ್ಮಲವಾಗಿರಬೇಕು. ಹಾಗಿದ್ದರೆ ಅದು ಇಂದ್ರಿಯಗಳನ್ನು ಅನುಸರಿಸದೆ ಭಗವಂತನಲ್ಲಿ ಏಕಾಗ್ರತೆಯನ್ನು ಹೊಂದಿ ಧ್ಯಾನವನ್ನು ಸಾಂಗಗೊಳಿಸುವುದು. ಏಕಾಗ್ರತೆಯೇ ಇಲ್ಲದಿದ್ದರೆ ಧ್ಯಾನವು ಸಿದ್ಧಿಸುವುದಿಲ್ಲವಾಗಿ ಅಪರೋಕ್ಷಜ್ಞಾನದ ಮಾತೆಲ್ಲಿ ಬಂದೀತು? ಆದುದರಿಂದ ಜ್ಞಾನಾರ್ಥಿಗೆ ಮನಃಪ್ರಸಾದವು ಅತ್ಯವಶ್ಯಕವೆಂದು ಭಾವ.

**ತಸ್ಮಾದ್ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ**

**ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ॥2-68॥**

68. (ವಿಷಯಾ ವಿನಿವರ್ತಂತೇ) ಇತ್ಯಾದಿ ಶ್ಲೋಕಗಳಿಂದ ಉಕ್ತವಾದ ವಿಷಯಗಳನ್ನು ಸಂಗ್ರಹಿಸಿ ಮುಗಿಸುತ್ತಾನೆ:- ಇಂದ್ರಿಯ ನಿಗ್ರಹದಿಂದಲೇ ಮನಃ ಪ್ರಸಾದವು. ಅದರಿಂದಲೇ ಚಿತ್ತೈಕಾಗ್ರತೆಯು (ಯುಕ್ತಿ). ಅದರ ಸಹಕಾರದಿಂದಲೇ ಶ್ರವಣ ಮನನ ಸಿದ್ಧಿಯು; ಅದರಿಂದ ತತ್ತ್ವ ನಿಶ್ಚಯವು: ಅದರಿಂದ ಧ್ಯಾನ ಯೋಗಸಿದ್ಧಿಯು. ಅದರಿಂದಲೇ ಅಪರೋಕ್ಷಜ್ಞಾನವು ದೃಢಪಡುವಕಾರಣ ಮಹಾಪರಾಕ್ರಮಶಾಲಿಯಾದ ಅರ್ಜುನಾ! ಯಾವನು ಸಕಲೇಂದ್ರಿಯಗಳನ್ನೂ ಲೌಕಿಕಭೋಗ್ಯವಸ್ತುಗಳ ಕಡೆಗೆ ಹೋಗದಂತೆ ತಡೆದು ಸ್ವಾಧೀನದಲ್ಲಿಟ್ಟುಕೊಂಡಿರುವನೋ ಅಂತಹ ಜಿತೇಂದ್ರಿಯನಿಗೇ ಅಪರೋಕಜ್ಞಾನವು ದೃಢವಾಗಿ ಹುಟ್ಟುವುದು. ಎಂದರೆ ಅವನೇ ಅಪರೋಕ್ಷಜ್ಞಾನಿಯೆಂದು ಭಾವ.[1]

1. 55ನೆಯ ಶ್ಲೋಕದಿಂದ 68ರ ಪೂರ್ತಿ ಒಟ್ಟು ೧೪ ಶ್ಲೋಕಗಳೂ ಲಕ್ಷಣ ಪ್ರಶ್ನೆಗೆ ಉತ್ತರವಾಗಿವೆ. ಅವುಗಳಲ್ಲಿ ಪ್ರಜಹಾತಿ' ಎಂಬ 55ನೆಯ ಶ್ಲೋಕವು ಜ್ಞಾನಿಲಕ್ಷಣ ಕಥನವು. 'ದುಃಖೇಷು' ಇತ್ಯಾದಿ ಮೂರು ಶ್ಲೋಕಗಳು ಲಕ್ಷಣವಿವರಣೆ. 'ವಿಷಯಾ', ಇತ್ಯಾದಿ ಮೂರು ಶ್ಲೋಕಗಳು ಉಕ್ತಲಕ್ಷಣದ ಅಸಂಭವಶಂಕಾಪರಿಹಾರೋಕ್ತಿಯು, 'ತಸ್ಮಾದ್ಯುಕ್ತ್ಯಸ್ಯ.. ಇತ್ಯಾದಿ ಶ್ಲೋಕವು ಉಪಸಂಹಾರವು ಎಂಬುದಾಗಿ ವಿಷಯವಿಭಾಗವನ್ನು ತಿಳಿಯಬೇಕು,

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ**

**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ॥2-69॥**

69. 'ಸ್ಥಿತಧೀಃ ಕಿಂ ಪ್ರಭಾಷೇತ' ಎಂಬ ೫೪ನೆಯ ಶ್ಲೋಕದ ಉತ್ತರಾರ್ಧದಲ್ಲಿ ಹೇಳಲ್ಪಟ್ಟ 'ಪರಮಾನಂದತೃಪ್ತನಾದ ಜ್ಞಾನಿಯು ಏತಕ್ಕಾಗಿ ಭಾಷಣಾದಿ ಕಾರ್ಯಗಳಲ್ಲಿ ಪ್ರವರ್ತಿಸುವನು' ಎಂಬ ಆಕ್ಷೇಪಕ್ಕೆ ಈಗ ಉತ್ತರವನ್ನು ಹೇಳುತಾನೆ:- ಪರಮೇಶ್ವರ ಸ್ವರೂಪವು ಸಕಲ ಪ್ರಾಣಿಗಳಿಗೂ ರಾತ್ರಿಯಂತಿರುವುದು. ರಾತ್ರಿಯ ಕಾಲದಲ್ಲಿ ಮಲಗಿ ನಿದ್ರಿಸುತ್ತಿರುವವರು ಹೇಗೆ ಯಾವ ವಿಷಯವನ್ನೂ ತಿಳಿಯಲಾರರೋ ಅದರಂತೆ ಸಕಲ ಪ್ರಾಣಿಗಳೂ ಭಗವಂತನನ್ನು ಸ್ವಲ್ಪವೂ ತಿಳಿಯುವುದಿಲ್ಲ. ಇಂದ್ರಿಯಗಳನ್ನು ಜಯಿಸಿದ ಜ್ಞಾನಿಯಾದರೋ ಅಂತಹ ಪರಮೇಶ್ವರನನ್ನು

ಸಾಕ್ಷಾತ್ತಾಗಿ ನೋಡುವನು. ಸುಂದರವಾಗಿ ಕಾಣುವ ಯಾವ ಭೋಗ್ಯ ವಸ್ತುಗಳನ್ನು ಆಸಕ್ತಿಯಿಂದ ಪ್ರಾಣಿಗಳು ಅನುಭವಿಸುವರೋ ಅಂತಹ ಭೋಗ್ಯ ವಸ್ತುಗಳು ಶ್ರವಣಮನನಗಳಿಂದ ಪರೋಕ್ಷಜ್ಞಾನವನ್ನು ಹೊಂದಿ ತನ್ಮೂಲಕವಾಗಿ ಅಪರೋಕ್ಷಜ್ಞಾನಿಯಾದವನಿಗೆ ರಾತ್ರಿಯಂತಿರುವುವು. ಎಂದರೆ ಇತರ ಜನರು ನೋಡುವ, ಕೇಳುವ, ಅನುಭವಿಸುವ ವಿಷಯಗಳು ಇದಿರಿಗಿದ್ದರೂ ಜ್ಞಾನಿಯು ನೋಡುವುದಿಲ್ಲ, ಕೇಳುವುದಿಲ್ಲ, ಅತ್ತ ಮನಗೊಡುವುದೂ ಇಲ್ಲ. ಸದಾ ಭಗವಂತನನ್ನೇ ನೋಡಿ ನಲಿಯುತ್ತಿರುವನು. (ಅಜ್ಞಾನಿಗಳಂತೆ ಜ್ಞಾನಿಯು ಭಾಷಣಾದಿಗಳಲ್ಲಿ ಪ್ರವರ್ತಿಸುವುದಿಲ್ಲ. ಆದರೆ ಪ್ರಾರಬ್ಧ ಕರ್ಮದಿಂದ ಜ್ಞಾನಿಗೂ ಸ್ವಲ್ಪ ಮಟ್ಟಿಗೆ ಬ್ರಹ್ಮ ಜ್ಞಾನವು ತಿರೋಹಿತವಾಗುವುದು. ಆಗ ಅಲ್ಪ ಪ್ರಯೋಜನೋದ್ದೇಶದಿಂದ ಜ್ಞಾನಿಯು ಪ್ರವರ್ತಿಸುವನು. ಲೋಕವ್ಯವಹಾರದಲ್ಲಿಯೂ ಕೂಡ ಮದ್ಯಪಾನಾದಿಗಳಿಂದ ಮತ್ತನಾದ ಪುರುಷನು ಯಾವ ಪ್ರಯೋಜನೋದ್ದೇಶವೂ ಇಲ್ಲದೆ ಕೇವಲ ಸುಖೋದ್ರೇಕದಿಂದ ನರ್ತನಗಾನಾದಿಗಳನ್ನು ಮಾಡುತ್ತಿರುವುದು ಪ್ರಸಿದ್ಧವಾಗಿದೆ. ಅದರಂತೆಯೇ ಜ್ಞಾನಿಗಳ ಪ್ರವೃತ್ತಿಯೂ ಅಲ್ಪ ಪ್ರಯೋಜನಕ್ಕಾಗಿಯೇ ಸಂಭವಿಸುತ್ತದೆಯೆಂಬುದೇ ಪ್ರವೃತ್ತ್ಯಾಕ್ಷೇಪಕ್ಕೆ ಉತ್ತರವು. ಈ ಅಭಿಪ್ರಾಯವು ನಿಶಾ (ರಾತ್ರಿ) ದೃಷ್ಟಾಂತವನ್ನು ಹೇಳಿರುವುದರಿಂದ ಸೂಚಿತವಾಗುತ್ತದೆ. ಭಗವಂತನ ಹೊರತು ಇತರ ವಿಷಯಗಳಿಗೆ ಮನಗೊಡದೆ ಸರ್ವದಾ ಭಗವಂತನಲ್ಲಿಯೇ ಆಸಕ್ತಚಿತ್ತತೆಯೆಂಬುದಾಗಿ ಜ್ಞಾನಿಗೆ ಲಕ್ಷಣಾಂತರವೂ ಈ ಶ್ಲೋಕದಲ್ಲಿ ಉಕ್ತವಾಗಿದೆಯೆಂದು ತಿಳಿಯಬೇಕು.)

**ಅಪೂರ್ಯಮಾಣಮಚಲಪ್ರತಿಷ್ಠಂ**
**ಸಮುದ್ರಮಾಪಃ ಪ್ರವಿಶಂತಿ ಯದ್ವತ್**
**ತದ್ವತ್ ಕಾಮಾ ಯಂ ಪ್ರವಿಶಂತಿ ಸರ್ವೇ**
**ಸ ಶಾಂತಿಮಾಪ್ನೋತಿ ನ ಕಾಮಕಾಮೀ॥2-70॥**

**ವಿಹಾಯ ಕಾಮಾನ್ಯಸ್ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ**
**ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ॥2-71॥**

70-71. ಕೃಷ್ಣಾ! ಜ್ಞಾನಿಯು ಮತ್ತನಂತೆ ಭಾಷಣಾದಿಗಳನ್ನು ಮಾಡುವನು; ಅದಕ್ಕೆ ವಿಶೇಷ ಪ್ರಯೋಜನವೇನೆಂದು ಚಿಂತಿಸಬೇಕಾದುದಿಲ್ಲವೆಂದು ಹೇಳಿದುದೇನೋ ಸರಿ. ಆದರೆ ಜ್ಞಾನಿಯು ಊಟಮಾಡುವುದೂ, ಚಂದನಾದಿ ವಿಷಯಗಳನ್ನು ಭೋಗಿಸುವುದೂ ಹೇಗೆ ಸಂಭವಿಸುತ್ತದೆ?

ಅವನು ಇದಿರಿಗಿರುವ ಪದಾರ್ಥಗಳನ್ನೇ ಕಣ್ಣೆತ್ತಿ ನೋಡುವುದಿಲ್ಲ. ಅವನ ಮನಸ್ಸು ಭಗವಂತನಲ್ಲಿಯೇ ಲೀನವಾಗಿರುವುದರಿಂದ ನಗಾರಿ ಹೊಡೆದರೂ ಆ ಶಬ್ದವು ಅವನಿಗೆ ಕೇಳುವುದೇ ಇಲ್ಲ. ಹೀಗೆ ಬಾಹ್ಯ ಪದಾರ್ಥಗಳ ಅರಿವೇ ಇಲ್ಲದಮೇಲೆ ಅಂತಹ ಜ್ಞಾನಿಯು ವಿಷಯದ ಕಡೆ ಮನಗೊಟ್ಟು ಅದನ್ನು ಅನುಭವಿಸುವುದು ಹೇಗೆ? ಹಾಗೂ ವಿಷಯವನ್ನು ಉಪಭೋಗಿಸಿದರೆ ಅವನಿಗೆ ಮೋಕ್ಷವು ಹೇಗೆ ಲಭಿಸೀತು? ವಿಷಯಭೋಗವು ಮೋಕ್ಷಕ್ಕೆ ಪ್ರತಿಬಂಧಕವಲ್ಲವೆ? ಎಂದರೆ ಜ್ಞಾನಿಯ ವಿಷಯಭೋಗದ ರೀತಿಯನ್ನು ವಿವರಿಸುತ್ತಾನೆ:- ಗಂಗಾ ಗೋದಾವರೀ ಮುಂತಾದ ದೊಡ್ಡ ದೊಡ್ಡ ನದಿಗಳು ಬಂದು ಸೇರಿದರೂ ಸಮುದ್ರವು ಅಷ್ಟು ನೀರು ಬಂದುದರಿಂದ ಹೆಚ್ಚಾಗಿ ವೃದ್ಧಿ ಹೊಂದುವುದಿಲ್ಲ. ಸ್ವಾಭಾವಿಕವಾಗಿ ಹಿಂದಿದ್ದಂತೆಯೇ ಕಾಣುವುದು. ನದಿಗಳು ಬಂದು ತನ್ನೊಡನೆ ಸೇರದಿದ್ದರೆ ಸಮುದ್ರವು ಒಣಗಿ ಸಣ್ಣದಾಗಿಯೂ ಆಗುವುದಿಲ್ಲ. ನದಿಗಳು ತನ್ನಲ್ಲಿ ಬಂದು ಬೆರೆಯಲೆಂದು ಸಮುದ್ರವು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಗಂಭೀರವಾಗಿ ಒಂದೇ ಸಮವಾಗಿರುತ್ತದೆ. ಹಾಗೆಯೇ ಭೋಗ್ಯ ವಿಷಯಗಳು ಎಷ್ಟು ಲಭಿಸಿದರೂ ತನಗೆ ಭೋಗೇಚ್ಛೆಯು ಇಲ್ಲದಿರುವುದರಿಂದ ಹಿಗ್ಗದೆ, ವಿಷಯವು ಸಿಕ್ಕದಿದ್ದರೆ ಕುಗ್ಗದೆ, ಭೋಗ್ಯವಸ್ತುಗಳನ್ನು ಸಂಪಾದಿಸುವುದಕ್ಕೆ ಯತ್ನ ಮಾಡದೆ, ಒಂದೇಸಮನಾಗಿ ಯಾವಾಗಲೂ ನಿರ್ವಿಕಾರನಾಗಿ ಸಮುದ್ರದಂತೆ ಗಾಂಭೀರ್ಯದಿಂದಲೇ ಜ್ಞಾನಿಯು ವಿಷಯವನ್ನು ಉಪಭೋಗಿಸುವನು. ಅಂತಹ ಸ್ಥಿತಪ್ರಜ್ಞನು ಮೋಕ್ಷವನ್ನು ಹೊಂದುವನು. ಕುತ್ಸಿತವಿಷಯಗಳನ್ನು ಇಚ್ಛಿಸುವವನು ಅದರ ಲಾಭಾಲಾಭಪ್ರಯುಕ್ತ ಹರ್ಷವಿಷಾದಗಳಿಗೊಳಗಾಗಿ ಅನರ್ಥಕ್ಕೀಡಾಗುವನೇ ಹೊರತು ಮೋಕ್ಷವನ್ನು ಪಡೆಯುವುದಿಲ್ಲ. ಭೋಗೇಚ್ಛಾ(ಸ್ಪೃಹಾ)ರಹಿತನೂ, ವಿಷಯಗಳಿಗೆ ನಾನೇ ಸ್ವಾಮಿಯೆಂಬ ಅಭಿಮಾನ(ಮಮತಾ)ಹೀನನೂ, 'ನಾನೇ ಅನುಭವಿಸುವವನು ಎಂಬ ಕರ್ತೃತ್ವಾಭಿಮಾನ(ಅಹಂಕಾರ)ಶೂನ್ಯನೂ ಆಗಿ ಯಾವನು ಅನಿಷಿದ್ಧ ಸಕಲ ವಿಷಯಗಳನ್ನೂ ಇಚ್ಛೆ-ಮಮತೆ-ಅಹಂಕಾರ ಇವುಗಳನ್ನು ಬಿಡುವುದರ ಮೂಲಕ ಅನುಭವಿಸುವನೋ ಅಂತಹ ಜ್ಞಾನಿಯೇ ಮನುಷ್ಯನು. ಅವನೇ ಮೋಕ್ಷವನ್ನು ಹೊಂದುವನು. ಇತರರು ಪಶುಸಮಾನರು. (ಸ್ಥಿತಪ್ರಜ್ಞನು ಭಗವಂತನ ಇಚ್ಛಾನುಸಾರವಾಗಿ ಪ್ರಾಪ್ತವಾದ ವಿಷಯಗಳನ್ನು ಅನುಭವಿಸುವನು. ತಾನಾಗಿಯೇ ಯಾವ ಭೋಗವನ್ನೂ ಬಯಸುವುದಿಲ್ಲ. ತಾನು ಬಯಸದೆ ಈಶ್ವರದತ್ತವೆಂಬ ಭಾವನೆಯಿಂದ ಭೋಗಿಸುವುದು ಮೋಕ್ಷಕ್ಕೆ ಪ್ರತಿಬಂಧಕವಲ್ಲ; ಸಾಧಕವೇ ಸರಿ, ಕುತ್ಸಿತ ವಿಷಯೇಚ್ಛೆಯೇ ಮೋಕ್ಷಪ್ರತಿಬಂಧಕವು. ಅಜ್ಞಾನಿಗಿರುವಂತೆ ಜ್ಞಾನಿಗೆ ವಿಷಯೇಚ್ಛೆ ಇರುವುದಿಲ್ಲ. ವಿಷಯಲಾಭಾಲಾಭಪ್ರಯುಕ್ತವಾದ ಹರ್ಷವಿಷಾದಗಳಿಲ್ಲ. ಅವನು ತನ್ನ ಪ್ರಯತ್ನವಿಲ್ಲದೆ

ಈಶ್ವರದತ್ತ ವಿಷಯಗಳನ್ನು ಇಚ್ಛೆ, ಮಮತೆ, ಅಹಂಕಾರರಹಿತನಾಗಿ ಭೋಗಿಸುವನು. ಆದುದರಿಂದ ಅವನಿಗೆ ಮೋಕ್ಷವು ಲಭಿಸುವುದೆಂದು ಈ ಎರಡು ಶ್ಲೋಕಗಳ ಒಟ್ಟು ತಾತ್ಪರ್ಯ.)

**ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ**
**ಸ್ಥಿತ್ವಾಸ್ಯಾಮಂತಕಾಲೇಽಪಿ ಬ್ರಹ್ಮ ನಿರ್ವಾಣಮೃಚ್ಛತಿ॥2-72॥**

72.ಸ್ಥಿತಪ್ರಜ್ಞಲಕ್ಷಣ ಪ್ರಕರಣವನ್ನು ಮುಗಿಸಿ, ಅವನು ಯಾವಾಗ ಮುಕ್ತನಾಗುವನೆಂಬುದನ್ನು ವಿವರಿಸುತ್ತಾನೆ:- ಪಾರ್ಥಾ ! 'ಪ್ರಜಹಾತಿ' ಇತ್ಯಾದಿ ಶ್ಲೋಕದಿಂದಾರಂಭಿಸಿ, 'ಯಾ ನಿಶಾ' ಇತ್ಯಾದಿ ಶ್ಲೋಕಾಂತ ಪದ್ಯಗಳಿಂದ ಉಕ್ತವಾದುದೇ ಎಂದರೆ ಸಕಲ ಕಾಮತ್ಯಾಗಪೂರ್ವಕ ಸತತ ಭಗವದನುಸ್ಮೃತಿರೂಪವಾದ ಸ್ಥಿತಿಯೇ ಬ್ರಹ್ಮಜ್ಞಾನಿಯ ಲಕ್ಷಣವು. ಉಕ್ತಮಹಾಪ್ರಯತ್ನದಿಂದ ಇದನ್ನು ಸಂಪಾದಿಸಿದವನಿಗೆ ಮೋಹವು ಹೋಗಿ ಸಂಸಾರಬಂಧದಿಂದ ಬಿಡುಗಡೆಯಾಗುವುದು. ಮರಣಕಾಲದಲ್ಲಿಯೂ ಭಗವಂತನನ್ನೇ ಸ್ಮರಿಸುತ್ತ ದೇಹತ್ಯಾಗಮಾಡಿದರೆ ಅವನು ಪ್ರಾಕೃತಶರೀರರಹಿತನಾಗಿ, ಅಪ್ರಾಕೃತ ದಿವ್ಯಮಂಗಳವಿಗ್ರಹನಾದ ಪರಬ್ರಹ್ಮನನ್ನು ಹೊಂದುವನು. (ಅನಾದಿಸಂಸಾರದಲ್ಲಿ ಪರಂಪರೆಯಾಗಿ ಬೆನ್ನುಹತ್ತಿರುವ ಜೀವನ ಕರ್ಮವು ನಿಶ್ಶೇಷವಾಗಿ ಹೋದಹೊರತು ಮೋಕ್ಷವಾಗುವುದಿಲ್ಲ. ಕರ್ಮವು ಸಂಚಿತ, ಆಗಾಮಿ, ಪ್ರಾರಬ್ಧವೆಂದು ಮೂರು ಬಗೆಯಾಗಿದೆ. ಅಪರೋಕ್ಷಜ್ಞಾನದಿಂದ ಸಂಚಿತ ಕರ್ಮವು ನಾಶವಾಗುವುದು. ಆಗಾಮಿಯು ಲೇಪವಾಗುವುದಿಲ್ಲ. ಪ್ರಾರಬ್ಧ ಕರ್ಮವು ಮಾತ್ರ ಜ್ಞಾನದಿಂದಲೂ ನಾಶವಾಗದೆ ಉಳಿದೇ ಇರುವುದು. ಅದನ್ನು ಭೋಗದಿಂದಲೇ ಕಳೆದುಕೊಳ್ಳಬೇಕು. ಹೀಗೆ ಜ್ಞಾನಿಗೆ ಪ್ರಾರಬ್ಧ ಕರ್ಮವು ಉಳಿದಿದ್ದಾಗ ಮರಣವಾದರೆ ಆಗ ಭಗವಂತನ ಸ್ಮರಣೆಯು ಬರುವುದಿಲ್ಲ. ಅಂತ್ಯಕಾಲದಲ್ಲಿ ಭಗವಂತನ ಸ್ಮರಣೆಯು ಬಂದಹೊರತು ಮೋಕ್ಷವಾಗುವುದಿಲ್ಲ. ಆದುದರಿಂದ ಅಂತಹ ಜ್ಞಾನಿಯು ಕೆಲವು ಜನ್ಮಗಳನ್ನೆತ್ತಿ ಪ್ರಾರಬ್ಧ ಕರ್ಮವನ್ನು ಭೋಗಿಸಿ ಕಳೆದುಕೊಳ್ಳಬೇಕು. ಅನಂತರವೇ ಭಗವದನುಸ್ಮೃತಿಪೂರ್ವಕವಾಗಿ ದೇಹವನ್ನು ಬಿಟ್ಟು ಮೋಕ್ಷವನ್ನು ಪಡೆಯುವನು ಎಂದು ತಾತ್ಪರ್ಯ.)

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಸಾಂಖ್ಯಯೋಗೋ ನಾಮ ದ್ವಿತೀಯೋಽಧ್ಯಾಯಃ॥2-[72]॥

## ತೃತೀಯೋಽಧ್ಯಾಯಃ॥3-[43]॥

**ಅರ್ಜುನ ಉವಾಚ**

| |
|---|
| **ಜ್ಯಾಯಸೀ ಚೇತ್ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ**<br>**ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ॥3-1॥** |
| 1. ಶ್ರೀಕೃಷ್ಣನು ಪೂರ್ವಾಧ್ಯಾಯದಲ್ಲಿ 'ನ ತ್ವೇವಾಹಂ' ಎಂಬ 2-12ನೆಯ ಶ್ಲೋಕದಿಂದ 'ಏಷಾ ತೇಽಭಿಹಿತಾ ಸಾಂಖ್ಯೆ' ಎಂಬ 2-39ನೆಯ ಶ್ಲೋಕದವರೆಗೆ ಜೀವೇಶ್ವರರ ಸ್ವರೂಪವನ್ನು ನಿರೂಪಿಸಿದನು. 'ಯೋಗೇತ್ವಿಮಾಂ ಶೃಣು' ಎಂಬ 2-29ನೆಯ ಶ್ಲೋಕದಿಂದ ಜ್ಞಾನೋಪಾಯ ನಿರೂಪಣೆಯನ್ನು ಪ್ರತಿಜ್ಞೆಮಾಡಿ 'ನೇಹಾಭಿಕ್ರಮನಾಶೋಸ್ತಿ' (2-40) ಇತ್ಯಾದಿ ಶ್ಲೋಕದಿಂದ ನಿವೃತ್ತಕರ್ಮವನ್ನು ಪ್ರಶಂಸಿಸಿ, 'ಯಾಮಿಮಾಂ ಪುಷ್ಪಿತಾಂ ವಾಚಂ (2-42) ಇತ್ಯಾದಿ ಶ್ಲೋಕದಿಂದ ಕಾಮ್ಯಕರ್ಮವನ್ನು ನಿಂದಿಸಿ, 'ಕರ್ಮಣ್ಯೇವಾಧಿಕಾರಸ್ತೇ' (2-47) ಇತ್ಯಾದಿ ಶ್ಲೋಕದಿಂದ ನಿವೃತ್ತ ಕರ್ಮಾನುಷ್ಠಾನವೆಂಬ ಜ್ಞಾನೋಪಾಯವೇ ಕರ್ಮಯೋಗವೆಂದು ಹೇಳಿ, 'ಕರ್ಮಜಂ ಬುದ್ಧಿ ಯುಕ್ತಾ ಹಿ' (2-51) ಇತ್ಯಾದಿ ಶ್ಲೋಕದಿಂದ ಅದನ್ನು ಸ್ವಲ್ಪವಾಗಿ ವಿವರಿಸಿದನು. ಈ ಅಧ್ಯಾಯದಲ್ಲಿ ಪೂರ್ವೋಕ್ತ ನಿವೃತ್ತಕರ್ಮವೆಂಬ ಕರ್ಮಯೋಗವನ್ನು ಜ್ಞಾನಲಾಭಕ್ಕಾಗಿ ಅವಶ್ಯ ಮಾಡಲೇಬೇಕು ಮುಂತಾಗಿ ಪೂರ್ವಾಧ್ಯಾಯದ ಅರ್ಥವನ್ನೇ ಹೆಚ್ಚಾಗಿ ವಿವರಿಸಿರುವನು. |
| 'ತಸ್ಮಾದ್ಯುದ್ಯಸ್ವ ಭಾರತ' (2-18) ಎಂಬುದಾಗಿ ಅರ್ಜುನನಿಗೆ ಯುದ್ಧವು ವಿಧಿಸಲ್ಪಟ್ಟಿತು. ಯುದ್ಧವಾದರೋ ರಾಜ್ಯಲಾಭಕ್ಕಾಗಿ ಮಾಡಬೇಕಾದ ಕಾಮ್ಯ ಕರ್ಮವು. ಅಂತಹುದನ್ನು ಹಿಂದೆಯೇ ನಿಂದಿಸಿರುವುದರಿಂದ ಅರ್ಜುನನು ಪ್ರಶ್ನೆ ಮಾಡುತ್ತಾನೆ:- ಜನಾರ್ದನಾ! 'ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ। ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ (2-49) ಮುಂತಾದ ವಾಕ್ಯಗಳಲ್ಲಿ ಹೇಳಿರುವ ಪ್ರಕಾರ ಜ್ಞಾನವು ಕರ್ಮಕ್ಕಿಂತಲೂ ಶ್ರೇಷ್ಠ ಎಂಬುದೇ ನಿನಗೆ ಸಮ್ಮತವಾಗಿದ್ದ ಪಕ್ಷದಲ್ಲಿ ಅಂತಹ ಅಧಮ ಕರ್ಮವನ್ನು ಮಾಡಬೇಕೆಂದು ಏಕೆ ನನ್ನನ್ನು ಪ್ರೇರಿಸುತ್ತಿರುವ? ಕೇಶವಾ! ಅದರಲ್ಲಿಯೂ ರಾಗದ್ವೇಷಭೂಯಿಷ್ಠವಾದ ಯುದ್ಧ ಎಂಬ ಭಯಂಕರ ಕರ್ಮವನ್ನು ಮಾಡೆಂದು ಪ್ರೇರಿಸುವುದುಚಿತವೆ? ಹೇಳೆಂಬುದಾಗಿ ಅರ್ಜುನನು ಎರಡು ಪ್ರಶ್ನೆಗಳನ್ನು ಮಾಡಿರುವನು. (ಯುದ್ಧಕ್ಕೆ ರಾಜ್ಯ ಪ್ರಾಪ್ತಿ ಅಥವಾ ಸ್ವರ್ಗವೆಂಬ ಫಲವು ಉಕ್ತವಾಗಿರುವುದರಿಂದ ಅದು ಕಾಮ್ಯಕರ್ಮವೇ ಸರಿ. ಅದು ಜ್ಞಾನಯೋಗಕ್ಕಿಂತಲೂ ಅಧಮವು. ಯತ್ಯಾಶ್ರಮಕ್ಕೆ ವಿಹಿತವಾದ ಶಮದಮಾದಿಗಳು ಜ್ಞಾನಕ್ಕೆ ಸಾಧನವಾಗಿ ಉತ್ತಮ |

ಮಾರ್ಗವೆನಿಸಿವೆ. ಆದಕಾರಣ ಕೃಷ್ಣಾ! ನನಗೆ ಹಿತೈಷಿಯಾದ ನೀನು ಯತ್ಯಾಶ್ರಮವನ್ನು ಸ್ವೀಕಾರಮಾಡಿ ಅದಕ್ಕೆ ವಿಹಿತವಾಗಿರುವ ಶಮಾದಿಸಂಪನ್ನನಾಗು' ಎಂದು ನನಗೆ ವಿಧಿಸುವುದೇ ನ್ಯಾಯವಾದುದು. ಅದನ್ನು ಬಿಟ್ಟು ಕಾಮ್ಯಕರ್ಮವಾದ ಯುದ್ಧವನ್ನು ಮಾಡೆಂದು ವಿಧಿಸುವುದು ಯುಕ್ತವಲ್ಲವೆಂದು ಭಾವ.)

**ವ್ಯಾಮಿಶ್ರೇಣೈವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ**
**ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಽಹಮಾಪ್ನುಯಾಂ॥3-2॥**

ಅರ್ಜುನಾ! ಕಾಮ್ಯಕರ್ಮವೂ ಫಲಾಪೇಕ್ಷೆಯಿಲ್ಲದೆ ಮಾಡಲ್ಪಡುವುದೇ ಆದರೆ ಅದೂ ನಿವೃತ್ತ (ಅಕಾಮ್ಯ)ಕರ್ಮವೆನಿಸಿ ಜ್ಞಾನದ್ವಾರಾ ಮೋಕ್ಷಸಾಧಕವೇ ಆಗುವುದು. ನಾನಾದರೋ 'ಸುಖದುಃಖೇ ಸಮೇ ಕೃತ್ವಾ' (2-38) ಇತ್ಯಾದಿ ವಾಕ್ಯದಿಂದ ಅಕಾಮ್ಯವಾದ ಯುದ್ಧ ಕರ್ಮವನ್ನೇ ನಿನಗೆ ವಿಧಿಸಿರುವೆನು. ಆದರೂ ಏಕೆ ಹೀಗೆ ಹೇಳುತ್ತಿರುವೆ? ಎಂದರೆ, ಅರ್ಜುನನು ಹೇಳುತ್ತಾನೆ:- ಕೃಷ್ಣಾ! ಕರ್ಮವನ್ನು ಪ್ರಶಂಸಿಸಿರುವೆ. ಜ್ಞಾನವನ್ನೂ ಹೊಗಳಿರುವೆ. ಯುದ್ಧವು ರಾಜ್ಯ ಸ್ವರ್ಗಾದಿಫಲಕವೆಂದೂ, ಜ್ಞಾನಾರ್ಥಕವೆಂದೂ ಹೇಳಿರುವೆ. ಇಂತಹ ನಿನ್ನ ವಚನಗಳು ಸಂಶಯೋತ್ಪಾದಕವಲ್ಲವೇ? ಅದರಿಂದ ನನ್ನ ಬುದ್ಧಿಯು ಕಲಕಿಹೋಗಿ ಸಂದಿಗ್ಧ ಪರಿಸ್ಥಿತಿಯನ್ನು ಹೊಂದಿದಂತಾಗಿದೆ. ಯುದ್ಧವಾದರೋ ಫಲಾಪೇಕ್ಷೆಯಿರುವವನಿಗೆ ಕಾಮ್ಯವೂ, ಆಶೆಯಿಲ್ಲದವನಿಗೆ ಅಕಾಮ್ಯವೂ ಆಗಲಿ. ಆದರೆ ಅದೂ ವೈಕಲ್ಪಿಕ=ಒಂದು ದೃಷ್ಟಿಯಿಂದ ಕಾಮ್ಯವೆಂದೇ ಆಯಿತು. ಶಮಾದಿ ಯತಿಧರ್ಮವಾದರೋ ನಿಯತ=ಸರ್ವದೃಷ್ಟಿಯಿಂದಲೂ ಅಕಾಮ್ಯವೇ ಸರಿ. ಆದುದರಿಂದ ನಿಯತಾಕಾಮ್ಯವಾದ ಯತಿಧರ್ಮವನ್ನು ವಿಧಿಸುವುದೇ ಯುಕ್ತವು. ವೈಕಲ್ಪಿಕವಾದ ಯುದ್ಧವನ್ನು ವಿಧಾನ ಮಾಡುವುದು ಉಚಿತವಾಗಿ ಕಾಣುವುದಿಲ್ಲ. ಆದಕಾರಣ ಇದೇ ನನಗೆ ಕರ್ತವ್ಯವೆಂಬ ನಿರ್ಣಯವುಂಟಾಗಿ ಶ್ರೇಯಸ್ಸನ್ನು ಹೊಂದುವಂತಹ ಒಂದು ಮಾರ್ಗವನ್ನು ಮಾತ್ರ ಉಪದೇಶಿಸು.

ಭಗವಾನುವಾಚ

**ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾಽನಘ**
**ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಂ॥3-3॥**

3. ಈ ರೀತಿಯಾದ ಅರ್ಜುನನ ಪ್ರಶ್ನೆಗಳನ್ನು ಲಾಲಿಸಿ. 'ಅರ್ಜುನಾ! ನೀನು ಹೇಳುವುದೇನೋ ನಿಜ. ಆದರೆ ನಿನಗೆ ಯುದ್ಧ ಕರ್ಮವನ್ನು ವಿಧಿಸಿರುವುದೇ ನ್ಯಾಯ' ಎಂದು ಪ್ರಥಮಪ್ರಶ್ನೆಗೆ ಉತ್ತರವನ್ನು ಭಗವಂತನು ಹೇಳುತ್ತಾನೆ:- ನಿರ್ದೋಷಿಯಾದ ಅರ್ಜುನಾ! ಮುಕ್ತಿಯೋಗ್ಯ ಜನರಲ್ಲಿ ನಿಷ್ಠಾ=

ನಿಜಸ್ವರೂಪಸ್ಥಿತಿ(ಮುಕ್ತಿ)ಯು ಅಥವಾ ಸಂಸಾರ ನಿವೃತ್ತಿಯು ಎರಡುವಿಧ ಸಾಧನೆಗಳಿಂದ ಸಾಧಿಸಲ್ಪಡತಕ್ಕುದಾಗಿದೆ ಎಂದು ಹಿಂದಿನ ಅಧ್ಯಾಯದಲ್ಲಿ ನಾನು ನಿರೂಪಿಸಿರುವೆನು. ಹೇಗೆಂದರೆ:- ಜ್ಞಾನಪ್ರಧಾನರಾದ ದೇವತೆಗಳಿಗೂ ಮತ್ತು ಸನಕಾದಿಯತಿಗಳಿಗೂ ಜ್ಞಾನವೆಂಬ ಉಪಾಯದಿಂದಲೇ ಮೋಕ್ಷವು ಲಭಿಸುವುದು. ಕರ್ಮಯೋಗಕ್ಕೆ ಅರ್ಹರಾದ ಜನಕ-ಪ್ರಿಯವ್ರತಾದಿಗಳಿಗೂ, ನಿನಗೂ ಕೂಡ ಕರ್ಮಯೋಗದಿಂದಲೇ ಮೋಕ್ಷವು ಲಭಿಸುವುದೆಂದು ಅವರವರ ಯೋಗ್ಯತೆಗೆ ತಕ್ಕಂತೆ ಎರಡು ಮಾರ್ಗಗಳು ನನ್ನಿಂದ ಉಪದಿಷ್ಟವಾಗಿವೆಯೆಂದು ತಿಳಿ, (ಮುಕ್ತಿ ಯೋಗ್ಯ ಜನರು ಕರ್ಮಯೋಗಿ ಮತ್ತು ಜ್ಞಾನಯೋಗಿ ಎಂಬುದಾಗಿ ಎರಡು ಬಗೆಯಾಗಿರುವರು. ಈ ಉಭಯರಿಗೂ ಜ್ಞಾನಕರ್ಮಗಳೆರಡೂ ಅವಶ್ಯ ಕರ್ತವ್ಯವು. ಆದರೆ ಕರ್ಮಯೋಗಿಯು ಅಧಿಕಕರ್ಮ ಅಲ್ಪಜ್ಞಾನಗಳಿಂದಲೂ, ಜ್ಞಾನಯೋಗಿಯು ಅಧಿಕ ಜ್ಞಾನ, ಅಲ್ಪ ಕರ್ಮಗಳಿಂದಲೂ ಮೋಕ್ಷವನ್ನು ಪಡೆಯುವರು, ಹೀಗೆ ಉಭಯರಿಗೂ ಎರಡೂ ಸಾಧಕಗಳಾಗಿದ್ದರೂ, ಜ್ಞಾನವು ಪ್ರಧಾನವಾಗಿರುವವರು ಜ್ಞಾನಯೋಗಿಗಳೆಂತಲೂ, ಕರ್ಮವು ಪ್ರಧಾನವಾಗಿರುವವರು ಕರ್ಮಯೋಗಿಗಳೆಂತಲೂ ನಿರ್ದೇಶಿಸಲ್ಪಟ್ಟಿರುವರು. ದೇವತೆಗಳೂ, ಸನಕಾದಿಯತಿಗಳೂ ಕೂಡ ಜ್ಞಾನಯೋಗಿಗಳು, ಜನಕ, ಪ್ರಿಯವ್ರತಾದಿ ಗೃಹಸ್ಥರು ಕರ್ಮ ಯೋಗಿಗಳು. ಹಾಗೆಯೇ ಅವರವರ ಸ್ವರೂಪಯೋಗ್ಯತೆಯೂ ಅನಾದಿ ಸಿದ್ಧವಾಗಿದೆ. ಅರ್ಜುನಾ! ನೀನೂ ಕೂಡ ಆಧಿಕಾರಿಕ ಜೀವನಾಗಿ ಕರ್ಮಯೋಗಿಯೆನಿಸಿರುವೆ. ಆದುದರಿಂದಲೇ ನಿನಗೆ ಕರ್ಮಮಾರ್ಗವನ್ನೆ ವಿಧಿಸಿರುವೆನು; ಅದೇ ಉಚಿತವು ಎಂದು ಭಾವ. ಇಲ್ಲಿ ಜ್ಞಾನಯೋಗೇನ, ಕರ್ಮಯೋಗೇನ' ಎಂದು ಒಂದೊಂದನ್ನೇ ಹೇಳಿರುವುದು ಆಯಾ ಅಧಿಕಾರಿಗಳಲ್ಲಿ ಜ್ಞಾನ ಅಥವಾ ಕರ್ಮಪ್ರಚುರವಾಗಿರುವುದೆಂದು ತಿಳಿಸುವುದಕ್ಕಾಗಿಯೇ ಹೊರತು ಅವರಲ್ಲಿ ಕರ್ಮವಾಗಲಿ, ಜ್ಞಾನವಾಗಲಿ ಸರ್ವಥಾ ಇಲ್ಲವೆಂಬ ಅಭಿಪ್ರಾಯದಿಂದಲ್ಲ. ಏವಂಚ ಜ್ಞಾನಯೋಗಿಗಳು ಅಪ್ರಚುರಕರ್ಮ ಸಹಿತ ಪ್ರಚುರಜ್ಞಾನದಿಂದಲೂ, ಕರ್ಮಯೋಗಿಗಳು ಅಪ್ರಚುರಜ್ಞಾನಸಹಿತ ಪ್ರಚುರಕರ್ಮಗಳಿಂದಲೂ ಮೋಕ್ಷವನ್ನು ಪಡೆಯುವರೆಂದು ತಾತ್ಪರ್ಯ.)

**ನ ಕರ್ಮಣಾಮನಾರಂಭಾನ್ನೈಶ್ಕರ್ಮ್ಯಂ ಪುರುಷೋಽಶ್ನುತೇ**
**ನ ಚ ಸನ್ನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ॥3-4॥**

೪. ಅರ್ಜುನಾ! ನೀನು ಅಧಿಕಾರಿಕಚೇತನನಾಗಿ ಕರ್ಮಯೋಗಕ್ಕೆ ಯೋಗ್ಯನಾಗಿರುವಕಾರಣ ಜ್ಞಾನದ್ವಾರಾ ಮೋಕ್ಷಸಾಧನವಾದ ಕ್ಷತ್ರಿಯೋಚಿತ ಯುದ್ಧ ಕರ್ಮವನ್ನು ನಿನಗೆ ವಿಧಿಸಿರುವನು

ಎಂಬ ಶ್ರೀಕೃಷ್ಣನ ಮಾತನ್ನು ಕೇಳಿದ ಅರ್ಜುನನು ಕೃಷ್ಣಾ! 'ನೈಶ್ಕರ್ಮ್ಯ' ಶಬ್ದಕ್ಕೆ ಮೋಕ್ಷವೆಂದರ್ಥ. [ಹೇಗೆಂದರೆ:- ಕರ್ಮಣೋಽಭಾವ=ನಿಷ್ಕರ್ಮ. ತೇನ ಪ್ರಾಪ್ಯಂ=ನೈಷ್ಕರ್ಮ್ಯಂ ಎಂದರೆ ಕರ್ಮವನ್ನು ಮಾಡದಿರುವುದರಿಂದ ಲಭಿಸುವಂತಹುದು (ಕರ್ಮಾಕರಣಪ್ರಾಪ್ಯ) ಎಂದು ನೈಷ್ಕರ್ಮ್ಯ ಪದದ ಅವಯವಾರ್ಥ:] ಇಂತಹ ಪದದಿಂದ ಬೋಧ್ಯವಾದ ಮೋಕ್ಷವು ಕರ್ಮಾಕರಣ ಪ್ರಾಪ್ಯವೇ ಸರಿ. ಇಲ್ಲದಿದ್ದರೆ ಆ ಹೆಸರೇ ನಿರರ್ಥಕವಾಗುವುದು. ಹೀಗೆ ಕರ್ಮಾಕರಣದಿಂದಲೇ ಮೋಕ್ಷವು ದೊರೆಯುವ ಕಾರಣ ಅದಕ್ಕಾಗಿ ಜ್ಞಾನಸಂಪಾ'ದನೆಯೇ ಅನಾವಶ್ಯಕ. ಹೀಗಿರುವಾಗ ಜ್ಞಾನಪ್ರದವಾದ ಕರ್ಮವನ್ನು ವಿಧಿಸುವುದು ಅನುಚಿತವಲ್ಲವೆ? ಎಂದರೆ, ಹೇಳುತ್ತಾನೆ:- ಜೀವಾತ್ಮನು ಕರ್ಮಗಳನ್ನು ಮಾಡದೆ ಇರುವುದರಿಂದ ನೈಷ್ಕರ್ಮ್ಯ ಶಬ್ದಬೋಧಿತವಾದ ಮೋಕ್ಷವನ್ನು ಹೊಂದುವುದಿಲ್ಲ. ಏಕೆಂದರೆ ಅವನು ಪುರುಷನೆನಿಸಿರುವನು. [ಪುರಾಣಿ = ಶರೀರಾಣಿ, ಸರತಿ=ಪ್ರಾಪ್ನೋತೀತಿ ಪುರುಷಃ, ಪುರುಸ ಏವ ಪುರುಷಃ, ಹೇತುಗರ್ಭಮಿದಂ ಸದಾ ಸೂಕ್ಷ್ಮೇಣ ಸ್ಥೂಲೇನ ಚ ದೇಹೇನ ಯುಕ್ತತ್ವಾದಿತಿ.] ಪುರುಷನೆಂದರೆ ಯಾವಾಗಲೂ ಸ್ಥೂಲಸೂಕ್ಷ್ಮಶರೀರಗಳನ್ನುಳ್ಳವನೆಂದರ್ಥ. ಕರ್ಮಾಕರಣದಿಂದ ಮೋಕ್ಷವು ಬರುವುದಾದರೆ ಅನಾದಿಸಂಸಾರದಲ್ಲಿ ಇವನಿಗೆ ವಿಹಿತಕರ್ಮಮಾಡಲು ಅನರ್ಹವಾದ ತಿರ್ಯಗ್ಜಂತು, ವೃಕ್ಷಾದಿ ಸ್ಥಾವರಜನ್ಮಗಳೂ ಬಂದಿರುತ್ತವೆ. ಅಲ್ಲಿ ಕರ್ಮಮಾಡುವ ಪ್ರಸಕ್ತಿಯೇ ಇಲ್ಲವಾಗಿ ಆಗಲೇ ಕರ್ಮಾಕರಣವೆಂಬ ಸಾಧನಸಂಪನ್ನನಾಗುವನು. ಅದರಿಂದ ಈ ಜೀವನು ಆಗಲೇ ಮುಕ್ತನಾಗಬೇಕಾಗಿದ್ದಿತು. ಹಾಗಾಗದೆ ಈಗಲೂ ಪ್ರಾಕೃತಶರೀರವನ್ನು ಧರಿಸಿರುವುದು ಗೋಚರವಾಗಿದೆ. ಆದಕಾರಣ ಮೋಕ್ಷವು ಕರ್ಮಾಕರಣದಿಂದ ದೊರೆಯತಕ್ಕುದಲ್ಲ. ಹಾಗಾದರೆ ಮೋಕ್ಷಕ್ಕೆ ನೈಷ್ಕರ್ಮ್ಯವೆಂಬ ನಾಮವು ಹೇಗೆ ಸಲ್ಲುವುದೆಂದರೆ:- ನಿವೃತ್ತ ಕರ್ಮವು ಜ್ಞಾನದ್ವಾರಾ ಮೋಕ್ಷಸಾಧನವು. ಪ್ರವೃತ್ತಿಕರ್ಮವು (ಕಾಮ್ಯಕರ್ಮವು) ಮೋಕ್ಷವಿರೋಧಿಯು. ಆದುದರಿಂದ ಪ್ರವೃತ್ತಿಕರ್ಮಾಕರಣದಿಂದ ಮೋಕ್ಷವು ಲಭಿಸುತ್ತದೆಯಾಗಿ ಅದಕ್ಕೆ ನೈಷರ್ಮ್ಯವೆಂಬ ಹೆಸರು ಬಂದಿದೆ. ನಾನಾದರೋ ಮೋಕ್ಷಸಾಧಕವಾದ ನಿವೃತ್ತಿಕರ್ಮವನ್ನೇ ನಿನಗೆ ವಿಧಿಸಿರುವೆನು. ಅದು ಅವಶ್ಯ ಕರ್ತವ್ಯವೇ ಸರಿ ಎಂದು ಭಾವ.

ಆದರೂ ಮುಕ್ತಿಯು ಕರ್ಮಾಕರಣ ಪ್ರಾಪ್ಯವೆಂದು ಹೇಳುವುದೇ ಯುಕ್ತವಾಗಿ ಕಾಣುತ್ತದೆ. ಕರ್ಮವೇ ಸಂಸಾರಕ್ಕೆ ಬೀಜ. ಅದನ್ನೇ ಮಾಡದಿದ್ದರೆ ಬೀಜವೇ ಇಲ್ಲವಾಗಿ ಸಂಸಾರವು ಮುಂದುವರಿಯದೆ ಅಸಂಸಾರವೆಂಬ ಮೋಕ್ಷವು ದೊರೆಯುವುದೆಂಬುದು ಸ್ಪಷ್ಟ. ಈ ಯುಕ್ತಿಯಿಂದಲಾದರೂ ಮೋಕ್ಷವು ಕರ್ಮಾಕರಣ ಪ್ರಾಪ್ಯವೆಂದು ಹೇಳುವುದು ನ್ಯಾಯವಾಗಿದೆಯೆಂದರೆ ಅದಕ್ಕೂ 'ನ ಕರ್ಮಣಾ

ಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಷ್ನು ತೇ' ಎಂಬ ಪೂರ್ವಾರ್ಧವೇ ಉತ್ತರವು. ಪ್ರಾರಬ್ಧ ಕರ್ಮನಿರ್ಮಿತ ಅನೇಕ ದೇಹವುಳ್ಳವನಾಗಿ ಪುರುಷನಾಮವನ್ನು ಪಡೆದಿರುವ ಈ ಜೀವಾತ್ಮನು ಕರ್ಮಾಕರಣದಿಂದ ಮೋಕ್ಷವನ್ನು ಹೊಂದಲಾರನು. ಕರ್ಮಾಕರಣದಿಂದ ಮೋಕ್ಷವು ದೊರೆಯುವುದೆಂದು ಹೇಳಿದರೆ ಮೋಕ್ಷವನ್ನು ಪಡೆಯಬೇಕೆಂಬ ಆಶೆಯೇ ದೂರವಾಗುತ್ತದೆ. ಏಕೆಂದರೆ:- ಪುರುಷನೆನಿಸಿರುವ ಜೀವಾತ್ಮನು ಅನಾದಿ ಸಂಸಾರದಲ್ಲಿ ಸಂಸಾರ ಬೀಜಕರ್ಮಗಳನ್ನು ಮಾಡಲು ಯೋಗ್ಯವಾದ ಅನಂತ ದೇಹಗಳನ್ನು ಇದುವರೆಗೆ ಪಡೆದಿರುವನು. ಒಂದೊಂದು ಜನ್ಮದಲ್ಲಿಯೂ ಹತ್ತಕ್ಕೆ ಕಮ್ಮಿಯಿಲ್ಲದಷ್ಟು ಜನ್ಮಗಳು ಬರುವುದಕ್ಕೆ ಸಾಧಕವಾಗುವ ಕರ್ಮಗಳನ್ನು ಸಂಗ್ರಹಿಸಿರುವನು. ಅವನ್ನು ಅನುಭವಿಸಿ ಕಳೆದುಕೊಳ್ಳುವುದಂತೂ ಅಸಾಧ್ಯ. ಅದರ ಭೋಗಕ್ಕಾಗಿ ಒಂದು ಜನ್ಮವೆತ್ತಿದಾಗ ತಿರುಗಿ ಹತ್ತು ಜನ್ಮಗಳಿಗೆ ಬೇಕಾಗುವಷ್ಟು ಕರ್ಮವು ಹೆಚ್ಚಿ ಹಿಂದಿನ ರಾಶಿಗೆ ಸೇರುವುದು. ಹೀಗಾಗುವುದರಿಂದ ಕರ್ಮವು ಸಂಪೂರ್ಣವಾಗಿ ಹೋಗುವ ಬಗೆ ಹೇಗೆ? ಆದಕಾರಣ ಈ ಜನ್ಮದಲ್ಲಿ ಕರ್ಮ ಮಾಡದೇ ಬಿಟ್ಟರೂ ಹಿಂದೆ ಸಂಪಾದಿತವಾದ ಕರ್ಮರಾಶಿಯು ಬೆನ್ನುಹತ್ತಿರುವುದರಿಂದ ಅದನ್ನು ತನ್ನ ಪ್ರಯತ್ನದಿಂದ ಸಂಪೂರ್ಣವಾಗಿ ನಾಶಪಡಿಸಿಕೊಳ್ಳಲು ಅಸಮರ್ಥನಾಗಿರುವ ಈ ಪುರುಷನು ಸಂಸಾರಕ್ಕೆ ಕಾರಣವಾದ ಕರ್ಮವಿಲ್ಲದಂತೆ ಮಾಡಿಕೊಂಡು ಮೋಕ್ಷವನ್ನು ಪಡೆಯುವುದು ಅಸಂಭಾವಿತವೇ ಸರಿ.

ಆದರೂ ಮೋಕ್ಷವು ಕರ್ಮಾಕರಣಪ್ರಾಪ್ಯವೆಂದು ಹೇಳಬಹುದು. ಹೇಗೆಂದರೆ:- ಕೃಷ್ಣಾ! ನಿವೃತ್ತ ಕರ್ಮದಿಂದಲೂ, ಸಂನ್ಯಾಸಾಶ್ರಮದಿಂದಲೂ ಮೋಕ್ಷವಾಗುವುದೆಂದು ನಿನ್ನ ಮಾತುಗಳಿಂದಲೂ, ಇತರ ಪ್ರಮಾಣ ವಚನಗಳಿಂದಲೂ ಸ್ಪಷ್ಟ ಪಡುತ್ತದೆ. ನಿವೃತ್ತ ಕರ್ಮ-ಸಂನ್ಯಾಸಾಶ್ರಮಗಳಿಗೆ ಬೇರೆ ಫಲವಿಲ್ಲ. ಕರ್ಮಾಕರಣಕ್ಕೂ ಫಲವಿಲ್ಲ. ಅಂದಬಳಿಕ ಫಲವಿಲ್ಲದ ನಿವೃತ್ತಕರ್ಮ-ಸಂನ್ಯಾಸಗಳಿಂದ ಮೋಕ್ಷವು ದೊರೆಯುವುದಾದರೆ ಅದರಂತೆಯೇ ಫಲರಹಿತವಾದ ಕರ್ಮಾಕರಣದಿಂದ ಮೋಕ್ಷವಾಗಲೇಬೇಕು. ನಿಷ್ಫಲವೆಂಬಲ್ಲಿ ಎಲ್ಲವೂ ಸಮಾನವಾಗಿವೆ. ನಿವೃತ್ತ-ಕರ್ಮಸಂನ್ಯಾಸಗಳಿಂದ ಮೋಕ್ಷವನ್ನು ಪಡೆಯಬೇಕಾದರೆ ಕರ್ಮಮಾಡುವ ಶ್ರಮವನ್ನು ವಹಿಸಬೇಕು, ಕರ್ಮಾಕರಣದಿಂದ ಮೋಕ್ಷವನ್ನು ಸಂಪಾದಿಸಲು ಶ್ರಮವೇ ಇಲ್ಲವಾದಕಾರಣ ಈ ಮಾರ್ಗವೇ ಸುಲಭವೂ, ಉತ್ತಮವೂ ಆಗಿದೆ. ಈ ಯುಕ್ತಿಯಿಂದಲಾದರೂ ಮೋಕ್ಷವು ಕರ್ಮಾಕರಣಲಭ್ಯವೆಂದು ಹೇಳಬಹುದಲ್ಲವೆ? ಎಂದರೆ 'ನ ಚ ಸಂನ್ಯಸನಾದೇವ ಸಿದ್ಧಿಂಸಮಧಿಗಚ್ಛತಿ' ಎಂದು ಉತ್ತರವನ್ನು ಹೇಳಿರುವನು. ಸಂನ್ಯಸನಾದೇವ=ಕಾಮ್ಯಕರ್ಮ ಪರಿತ್ಯಾಗ, ಅಕಾಮ್ಯ ಕರ್ಮಾಕರಣ ಮಾತ್ರದಿಂದ ಅಥವಾ ಯತ್ಯಾಶ್ರಮ ಸ್ವೀಕಾರ ಮಾತ್ರದಿಂದ

ಮೋಕ್ಷವನ್ನು ಪಡೆಯುವುದಿಲ್ಲ. ಅಭಿಪ್ರಾಯವೇನೆಂದರೆ:- ನಿವೃತ್ತಕರ್ಮ-ಸಂನ್ಯಾಸಾಶ್ರಮ ಮಾತ್ರದಿಂದಲೇ ಮೋಕ್ಷವಾಗುವುದಾದರೆ ಬೇರೆ ಫಲವಿಲ್ಲವೆಂಬ ಅಂಶದಲ್ಲಿ ಸಮವಾಗಿರುವುದರಿಂದ ಕರ್ಮಾಕರಣದಿಂದಲೂ ಮೋಕ್ಷವಾಗಲಿ ಎಂದು ವಾದಿಸಬಹುದು. ಹಾಗೆ ಪ್ರಮಾಣಗಳು ತಿಳಿಸುವುದಿಲ್ಲ. ನಿವೃತ್ತ ಕರ್ಮಸಂನ್ಯಾಸಗಳು ಕ್ರಮವಾಗಿ ಚಿತ್ತ ಶುದ್ಧಿ, ವಿಷಯ ವೈರಾಗ್ಯ, ಶ್ರವಣ, ಮನನ, ನಿದಿಧ್ಯಾಸನ, ಅಪರೋಕ್ಷಜ್ಞಾನ ಮತ್ತು ಭಗವತ್ಪ್ರಸಾದದ್ವಾರಾ ಮೋಕ್ಷ ಇವನ್ನು ಸಾಧಿಸಿಕೊಡುತ್ತವೆ. ಕರ್ಮಾಕರಣದಿಂದಲಾದರೋ ಚಿತ್ತಶುದ್ಧ್ಯಾದಿದ್ವಾರಾ ಸಿದ್ಧಿಯೇ ಆಗುವುದಿಲ್ಲವಾದಕಾರಣ ನಿವೃತ್ತ ಕರ್ಮಾದಿಗಳಂತೆ ಇದೂ ಮೋಕ್ಷ ಸಾಧನವೆಂಬ ಶಂಕೆಗೆ ಅವಕಾಶವಿಲ್ಲ. ಲೋಕದಲ್ಲಿಯೂ ಕೂಡ ಫಲಬೇಕೆಂದು ಕೇಳದೆ ನಿರಂತರ ಪ್ರಭುವನ್ನು ಆರಾಧಿಸುವ ಮನುಷ್ಯನಿಗೆ ಪ್ರಭುವು ತಾನೇ ಪ್ರಸನ್ನನಾಗಿ ಫಲಕೊಡುವನು. ಪ್ರಭುವನ್ನು ಆರಾಧಿಸದೆ ಮನೆಯಲ್ಲಿ ಸುಮ್ಮನೆ ಕುಳಿತಿರುವವನಿಗೆ ಪ್ರಭುವು ತನ್ನ ಪ್ರಸಾದ ಲಭ್ಯ ಫಲವನ್ನು ಕೊಡುವುದಿಲ್ಲವೆಂಬುದು ಪ್ರಸಿದ್ಧ. ಫಲಾಪೇಕ್ಷೆಯಿಲ್ಲವೆಂಬ ಅಂಶವು ಇಬ್ಬರಲ್ಲಿಯೂ ಸಮಾನವಾಗಿದೆ. ಆದರೂ ಆ ಆರಾಧನೆಯ ಪ್ರಸಾದದಾಯಕವಾದುದರಿಂದ ಫಲಸಿದ್ಧಿಯಾಗುವುದು. ಪ್ರಭುವನ್ನಾಶ್ರಯಿಸದಿರುವುದು ಪ್ರಸಾದದಾಯಕವಾಗಲಾರದಾದುದರಿಂದ ಫಲವು ದೊರೆಯದಿರುವುದೂ ಸಿದ್ಧವಾಗಿದೆ. ಏವಂಚ ಅರ್ಜುನಾ! ಕರ್ಮಾಕರಣವು ಮೋಕ್ಷಸಾಧಕವಲ್ಲವಾದಕಾರಣ ಫಲವನ್ನು ಅಪೇಕ್ಷಿಸದೆ ಭಗವದಾರಾಧನರೂಪ ಕರ್ಮವನ್ನು ಮಾಡಲೇಬೇಕು. ಅಂತಹ ಕರ್ಮದಿಂದ ಚಿತ್ತಶುದ್ಧ್ಯಾದಿದ್ವಾರಾ ಮೋಕ್ಷವು ಲಭಿಸುತ್ತದೆ. ಈ ಕಾರಣದಿಂದಲೂ ನಿನಗೆ ಕರ್ತವ್ಯವನ್ನು ವಿಧಿಸಿರುವೆನೆಂದು ತಾತ್ಪರ್ಯ.

**ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್**
**ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ॥3-5॥**

5. ಮೋಕ್ಷವು ಕರ್ಮಾಕರಣಲಭ್ಯವಲ್ಲವೆಂದು ಹೇಳಿದೆಯಷ್ಟೆ. ಅದನ್ನೇ ಬೇರೆ ಯುಕ್ತಿಯಿಂದ ವಿವರಿಸುತ್ತಾನೆ:- ಜ್ಞಾನಿಯಾಗಲಿ, ಅಜ್ಞಾನಿಯಾಗಲೀ ಪ್ರತಿಯೊಬ್ಬನೂ ಸಕಲಾವಸ್ಥೆಗಳಲ್ಲಿಯೂ ಒಂದು ಕ್ಷಣವೂ ಯಾವುದಾದರೊಂದು ಕರ್ಮವನ್ನು ಮಾಡದೆ ಸುಮ್ಮನಿರಲಾರನು. ಏಕೆಂದರೆ:- ಸಕಲ ಜನರೂ ಅವಶಃ=ಅಸ್ವತಂತ್ರರು ಅಕಾರವಾಚ್ಯನಾದ ಪರಮಾತ್ಮನ ಅಧೀನರಾಗಿರುವರು. ಆದುದರಿಂದ ಸಕಲ ಕರ್ಮಗಳಿಗೂ ಈಶ್ವರನೇ ಸ್ವತಂತ್ರಕರ್ತನು. ಅವನ ಪ್ರೇರಣಾನುಸಾರವಾಗಿಯೇ ಪ್ರಕೃತಿಯಿಂದುತ್ಪನ್ನವಾದ ಸತ್ವರಜಸ್ತಮೋಗುಣಗಳಿಂದ ಸಾತ್ವಿಕ-

ರಾಜಸ-ತಾಮಸ ಕರ್ಮಗಳು ಅಸ್ವತಂತ್ರನಾದ ಜೀವನಿಂದ ಮಾಡಲ್ಪಡುತ್ತವೆ. (ಜಾಗ್ರತ್, ಸ್ವಪ್ನ, ಸುಷುಪ್ತಿಯೆಂಬ ಮೂರು ಅವಸ್ಥೆಗಳಲ್ಲಿಯೂ ಕಾಯಿಕ, ವಾಚನಿಕ, ಮಾನಸಿಕವೆಂಬ ಮೂರು ಬಗೆಯ ಕರ್ಮಗಳಲ್ಲಿ ಯಾವುದಾದರೊಂದು ಕರ್ಮವನ್ನು ಈಶ್ವರನು ಜೀವನಿಂದ ಮಾಡಿಸುತ್ತಲೇ ಇರುವನು. ಅದನ್ನು ಮಾಡದಿರಲು ಯಾವನಿಗೂ ಸಾಧ್ಯವೇ ಇಲ್ಲ. ಹೀಗೆ ಯಾವಾಗಲೂ ಕರ್ಮಮಾಡುತ್ತಿರುವುದೇ ಜೀವನ ಸ್ವಭಾವವಾದಮೇಲೆ ಕರ್ಮಾಕರಣವು ಯಾರಿಗೂ ಶಕ್ಯವಲ್ಲವಾದಕಾರಣ ಅದನ್ನು ಸಾಧಿಸಿ ಅದರಿಂದ ಮೋಕ್ಷವನ್ನು ಪಡೆಯುವ ಸಂಭವವೇ ಇಲ್ಲ. ಇಂತಹ ಅಶಕ್ಯ ಸಾಧನವನ್ನು ಶಾಸ್ತ್ರವು ಬೋಧಿಸುವುದಿಲ್ಲ. ಆದುದರಿಂದ ಮೋಕ್ಷವು ಕರ್ಮಾಕರಣ ಪ್ರಾಪ್ಯವೆಂಬುದು ಶಾಸ್ತ್ರ ಸಮ್ಮತವೂ ಅಲ್ಲ; ಯುಕ್ತಿ ಸಮ್ಮತವೂ ಅಲ್ಲವೆಂದು ತಿಳಿಯಬೇಕು.)

**ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್**
**ಇಂದ್ರಿಯಾರ್ಥಾನ್ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ॥3-6॥**

**ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ**
**ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ॥3-7॥**

**6-7.** ನಿಜ; ಜೀವನೋಪಯುಕ್ತವಾದ ಕರ್ಮ(ಶ್ವಾಸೋಚ್ಛ್ವಾಸಾದಿ)ಗಳನ್ನು ಮಾಡದಿರುವುದು ಅಸಾಧ್ಯವು, ಅಸಾಧ್ಯ ಕಾರ್ಯವನ್ನು ಶಾಸ್ತ್ರವು ವಿಧಿಸುವುದಿಲ್ಲ. ಆದರೆ ವರ್ಣಾಶ್ರಮೋಚಿತವಾದ ವಿಹಿತಕರ್ಮಗಳನ್ನು ಬಿಡುವುದಕ್ಕೆ ಸಾಧ್ಯವಿದೆ. ಆದುದರಿಂದ ಅಕಾಮ್ಯ ಯುದ್ಧಾದಿಗಳನ್ನು ತ್ಯಜಿಸಬಹುದಾಗಿ ತೋರುತದೆ ಎಂದರೆ, ಹೇಳುತ್ತಾನೆ:- ಕರ್ಮಮಾಡದೆ ಅಶುದ್ಧ ಚಿತ್ತನಾದ ಯಾವ ಮನುಷ್ಯನು ವಾಕ್ಕು, ಪಾಣಿ, ಪಾದ, ಪಾಯು, ಉಪಸ್ತ ಎಂಬ ಕರ್ಮೇಂದ್ರಿಯಗಳನ್ನೂ, ಘ್ರಾಣ, ರಸನ, ಚಕ್ಷುಸ್ಸು, ತ್ವಕ್ಕು, ಶ್ರೋತ್ರ ಎಂಬ ಬಾಹ್ಯ ಜ್ಞಾನೇಂದ್ರಿಯಗಳನ್ನೂ ಕೂಡ ವಿಷಯಗಳ ಕಡೆಗೆ ಹೋಗದಂತೆ ತಡೆದು ಮನಸ್ಸಿನಲ್ಲಿ ಮಾತ್ರ ವಿಷಯಗಳನ್ನು ಚಿಂತಿಸುತ್ತಿರುವನೋ ಅಂತಹವನು ಭ್ರಾಂತ, ಕಪಟಾಚಾರಿ, ದಾಂಭಿಕ ಎನಿಸುವನು. ಯಾವ ಮನುಷ್ಯನು ಚಕ್ಷುರಾದಿ ಜ್ಞಾನೇಂದ್ರಿಯಗಳನ್ನೂ, ಮನಸ್ಸನ್ನೂ ವಿಷಯಗಳ ಕಡೆಗೆ ಹೋಗದಂತೆ ತಡೆದು ಫಲೇಚ್ಛಾರಹಿತನಾಗಿ, ಕರ್ಮ ಸಾಧನವಾದ ಇಂದ್ರಿಯಗಳಿಂದ ಜ್ಞಾನೋಪಾಯವಾದ ಯುದ್ಧಾದಿ ವಿಹಿತಕರ್ಮಗಳೆಂಬ ಕರ್ಮಯೋಗವನ್ನಾಚರಿಸುವನೋ ಅಂತಹ ಮನೋನಿಗ್ರಹವಂತನು ಹಿಂದೆ ಹೇಳಲ್ಪಟ್ಟ ಮನೋನಿಗ್ರಹರಹಿತ ಜನಕ್ಕಿಂತಲೂ ಉತ್ತಮನು. (ಮನಸ್ಸೇ ಬಂಧ ಮೋಕ್ಷಗಳಿಗೆ ಪ್ರಧಾನ ಕಾರಣವೇ ಹೊರತು ಕರ್ಮಕರಣ-ಅಕರಣಗಳು ಪ್ರಧಾನವಲ್ಲವೆಂದು ಈ ಎರಡು

ಶ್ಲೋಕಗಳ ಭಾವ. ತಾತ್ಪರ್ಯವೇನೆಂದರೆ:- ನಿಜವಾದ ವೈರಾಗ್ಯವಿಲ್ಲದೆ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳಲು ಅಸಮರ್ಥನಾಗಿ, ಮನಸ್ಸಿನಲ್ಲಿ ಯಾವಾಗಲೂ ವಿಷಯಗಳನ್ನು ಚಿಂತಿಸುತ್ತಿರುವವನು ಜನಗಳ ದೃಷ್ಟಿಗೆ 'ಇವನು ಜಿತೇಂದ್ರಿಯನು, ಮಹಾತ್ಮನು' ಎಂಬ ಭಾವನೆಯನ್ನು ಹುಟ್ಟಿಸಿ ಮೋಸಗೊಳಿಸುವ ಸಲುವಾಗಿ ಮೇಲೆ ವಿರಕ್ತನಂತೆ ನಟಿಸುತ್ತಿರುವನು. ಅಂತಹವನು ಮೂಢಾತ್ಮ, ಕಪಟಾಚಾರಿ, ದಾಂಭಿಕ ಎನಿಸುವನು. ಈ ರೀತಿ ಮನೋನಿಗ್ರಹವಿಲ್ಲದವನಿಗೆ ಸಂಸಾರ ಬಂಧವು ಹೆಚ್ಚುವುದು; ಮೋಕ್ಷವಾಗುವುದಿಲ್ಲ. ಮನಸ್ಸನ್ನು ನಿಗ್ರಹಿಸಿದರೆ ಬಂಧವು ಪರಿಹಾರವಾಗಿ ಮೋಕ್ಷವು ದೊರೆಯುವುದು. ಹೀಗೆ ಮನಸ್ಸೇ ಬಂಧಕವು; ಕರ್ಮವು ಬಂಧಕವಲ್ಲವಾದ ಕಾರಣ ಫಲಾಪೇಕ್ಷಾರಹಿತನಾಗಿ ವಿಹಿತಕರ್ಮವನ್ನು ಮಾಡಿಯೇ ತೀರಬೇಕು. ಅದರಿಂದ ಸಿದ್ಧಿಯನ್ನು ಹೊಂದುವನು.

**ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋಽಹ್ಯಕರ್ಮಣಃ**

**ಶರೀರಯಾತ್ರಾಽಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ॥3-8॥**

8. ಸ್ವಾಮಿಯೇ! ಕರ್ಮವು ಬಂಧಕವಲ್ಲ. ಮನಸ್ಸೇ ಬಂಧಕವು. ಅದರ ನಿಗ್ರಹದಿಂದಲೇ ಶ್ರೇಯಸ್ಸಾಗುವುದು ಇತ್ಯಾದಿಯಾಗಿ ನೀನು ಹೇಳಿದುದೆಲ್ಲವೂ ನಿಜ. ಈಗ ನಾನು ಮಾಡಬೇಕಾದುದೇನು? ಎಂದರೆ, ಹೇಳುತ್ತಾನೆ:- ಅರ್ಜುನ! ಕರ್ಮವನ್ನೇ ಮಾಡದಿರುವುದು ಅಶಕ್ಯವೆಂದು ಹಿಂದೆಯೇ ನಿರೂಪಿಸಿದೆನಷ್ಟೆ! ಕರ್ಮವನ್ನಾಚರಿಸದೇ ಇರುವುದಕ್ಕಿಂತ ಕರ್ಮಾಚರಣೆಯು ಶ್ಲಾಘ್ಯವಾದ ಕಾರಣ ನಿಯತಂ=ವರ್ಣಾಶ್ರಮೋಚಿತವಾದ ಕರ್ಮವನ್ನಾಚರಿಸು, ಅಷ್ಟೇ ಅಲ್ಲ; ಕರ್ಮವನ್ನೇನೋ ಮಾಡುವೆನು; ಆದರೆ ಹಿಂಸಾತ್ಮಕವಾದ ಯುದ್ಧ ಕರ್ಮವನ್ನು ಮಾತ್ರ ಮಾಡಲಾರೆನು ಎನ್ನಬೇಡ. ಏಕೆಂದರೆ:- ಹಿಂಸಾತ್ಮಕವೆಂದು ಯುದ್ಧವನ್ನು ಮಾಡದಿದ್ದರೆ ಸ್ವಧರ್ಮನಿಷ್ಠೆಯಿಂದ ಆಗುವ ನಿನ್ನ ಶರೀರ ರಕ್ಷಣೆಯೇ ಸಿದ್ಧಿಸುವುದಿಲ್ಲ. (ಧನವನ್ನು ಸಂಪಾದಿಸಿ ಅದರಿಂದ ಅಕ್ಕಿ ಮುಂತಾದ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಅಡಿಗೆ ಮಾಡಿ ಭೋಜನ ಮಾಡಿದರೆ ಶರೀರ ರಕ್ಷಣೆಯಾಗುವುದು. ಧನ ಸಂಪಾದನಾದಿ ಕರ್ಮವಲ್ಲವೂ ಸೂಕ್ಷ್ಮವಾಗಿ ನೋಡಿದರೆ ಯಾವುದೋ ಒಂದು ಹಿಂಸೆಯೆಂಬುದು ಸ್ಪಷ್ಟಪಡುತ್ತದೆ. ಯುದ್ಧವು ಹಿಂಸೆಯೆಂದು ಭಯಪಟ್ಟು ಬಿಡುವುದಾದರೆ ಹಿಂಸೆಯಾದ ಧನಾರ್ಜನಾದಿ ಕರ್ಮಗಳೆಲ್ಲವನ್ನೂ ಬಿಡಬೇಕಾಗುವುದು, ಅವನ್ನು ಮಾಡದಿದ್ದರೆ ಶರೀರವೇ ರಕ್ಷಿತವಾಗುವುದಿಲ್ಲ. ಜನ್ಮವೇ ವ್ಯರ್ಥವಾಗುವುದು. ಆ ಕಾರಣ ಏನೇ ಆಗಲಿ ವರ್ಣಾಶ್ರಮ ವಿಹಿತವಾದುದು ಅವಶ್ಯಕರ್ತವ್ಯವು,

ಕ್ಷತ್ರಿಯನಾದ ನಿನಗೆ ಯುದ್ಧವೇ ಧರ್ಮವಾಗಿರುವುದರಿಂದ ಯುದ್ಧದಲ್ಲಿ ತೊಡಗಿ ಸ್ವಧರ್ಮನಿಷ್ಠನಾಗು ಎಂದು ತಾತ್ಪರ್ಯ)

**ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮ ಬಂಧನಃ**

**ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ॥3-9॥**

9. ಕರ್ಮಣಾ ಬಧ್ಯತೇ ಜಂತುರ್ವಿದ್ಯಯಾ ಚ ವಿಮುಚ್ಯತೇ ।

ತಸ್ಮಾತ್ಕರ್ಮ ನ ಕುರ್ವಂತಿ ಯತಯಃ ಪಾರದರ್ಶಿನಃ ॥

ಎಂಬ ಸ್ಮೃತಿಯಲ್ಲಿ ಹೇಳಿರುವ ಪ್ರಕಾರ ಕರ್ಮವು ಬಂಧಕವು; ಅದರಿಂದ ಮೋಕ್ಷವಾಗುವುದಿಲ್ಲವಾದ ಕಾರಣ ಅದನ್ನು ಮಾಡಬಾರದೆಂಬ ಅರ್ಜುನನ ಆಶಂಕೆಗೆ ಉತ್ತರವನ್ನು ಹೇಳುತ್ತಾನೆ:- ಕುಂತಿಕುಮಾರಾ! ವಿಷ್ಣುವು ಸಂತುಷ್ಟನಾಗಲೆಂಬ ಉದ್ದೇಶದಿಂದ ಮಾಡಿದ ಕರ್ಮವು ಅಕಾಮ್ಯಕರ್ಮವೆನಿಸುವುದು. ಅದು ಬಂಧಕವಲ್ಲ ಪ್ರತ್ಯುತ ಮೋಕ್ಷಸಾಧಕವೇ ಸರಿ. ಅಂತಹುದಲ್ಲದೆ ಬೇರೆ ಯಾವ ಕಾಮ್ಯಕರ್ಮವನ್ನು ಮಾಡಿದರೂ ಜನರು ಅದರಿಂದ ಸಂಸಾರ ಬಂಧಕ್ಕೆ ಸಿಲುಕಿ ನರಳುವರು. ಆದಕಾರಣ ನೀನು ಬೇರೆ ಫಲವನ್ನಪೇಕ್ಷಿಸದೆ ಕೇವಲ ಭಗವತ್ಪೂಜೆಯೆಂಬ ಭಾವನೆಯಿಂದ ವಿಹಿತ ಕರ್ಮವನ್ನು ಮಾಡು 'ಕರ್ಮಣಾ ಬಧ್ಯತೇ ಜಂತುಃ' ಎಂಬ ಸ್ಮೃತಿಯಲ್ಲಿನ ಕರ್ಮಶಬ್ದಕ್ಕೆ 'ಕರ್ಮ' ಎಂಬುದಾಗಿ ಸಾಮಾನ್ಯ ಅರ್ಥವನ್ನು ಹೇಳಬಾರದು. ಏಕೆಂದರೆ ಎಲ್ಲಾ ಕರ್ಮಗಳನ್ನೂ ಸುತರಾಂ ಬಿಡಲು ಸಾಧ್ಯವೇ ಇಲ್ಲ. ಮತ್ತು ಕರ್ಮವನ್ನ ಆಚರಿಸದಿದ್ದರೆ ಶರೀರ ರಕ್ಷಣೆಯೇ ಆಗುವುದಿಲ್ಲ ಮುಂತಾದ ಪೂರ್ವೋಕ್ತ ಬಾಧಕಗಳಿಂದ ಕರ್ಮವೆಲ್ಲವೂ ಬಂಧಕವಲ್ಲ. ಕೆಲವು ಕರ್ಮಗಳು ಮೋಕ್ಷಸಾಧಕಗಳು ಅವಶ್ಯ ಕರ್ತವ್ಯವೆಂದು ಸಿದ್ಧಿಸುತ್ತದೆ. ಆದಕಾರಣ ಸ್ಮೃತಿಯಲ್ಲಿನ ಕರ್ಮ ಶಬ್ದಕ್ಕೆ ಕೆಲವು ಕರ್ಮಗಳು ಮಾತ್ರವೇ ಅರ್ಥವೆಂದು ತಿಳಿಯಬೇಕು. ಅವು ಯಾವುದೆಂಬುದನ್ನು ಈ ಶ್ಲೋಕವು ವಿವರಿಸಿದೆ. ವಿಷ್ಣುಪ್ರೀತ್ಯುದ್ದೇಶ್ಯಕವಲ್ಲದ, ಶರೀರರಕ್ಷಣಾದಿ ಭಿನ್ನ ಕಾಮ್ಯಕರ್ಮಗಳೇ ಬಂಧಕಗಳು; ಅವೇ ತ್ಯಾಜ್ಯವು. ಆದಕಾರಣ ಅರ್ಜುನ! ನೀನು ವಿಷ್ಣುವು ಸಂತುಷ್ಟನಾಗಲೆಂಬ ಉದ್ದೇಶದಿಂದ ಬೇರೆ ಫಲವನ್ನಪೇಕ್ಷಿಸದೆ ವರ್ಣಾಶ್ರಮೋಚಿತವಾದ ಯುದ್ಧವನ್ನು ಮಾಡಿ ಶ್ರೇಯೋಭಾಗಿಯಾಗೆಂದು ಭಾವ.)

**ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ।**

**ಅನೇನ ಪ್ರಸವಿಷ್ಯಧ್ವಮೇಷ ವೋಽಸ್ತ್ವಿಷ್ಟಕಾಮಧುಕ್॥3-10॥**

| |
|---|
| ದೇವಾನ್ ಭಾವಯತಾಽನೇನ ತೇ ದೇವಾ ಭಾವಯಂತು ವಃ<br>ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ॥3-11॥ |
| ಇಷ್ಟಾನ್ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ।<br>ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ॥3-12॥ |
| ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ<br>ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್॥3-13॥ |

೧೦-೧೩, ವರ್ಣಾಶ್ರಮೋಚಿತ ಕರ್ಮವು ಆವಶ್ಯಕರ್ತವ್ಯವೆಂಬ ವಿಷಯದಲ್ಲಿ ಸ್ತುತಿ, ನಿಂದಾದಿರೂಪವಾದ ಅರ್ಥವಾದವನ್ನು ಈ ನಾಲ್ಕು ಶ್ಲೋಕಗಳಿಂದ ಹೇಳುತ್ತಾನೆ:- ಸೃಷ್ಟಿಕರ್ತನಾದ ಭಗವಂತನು ಮೊದಲು ಪ್ರಜೆಗಳನ್ನು ಸೃಷ್ಟಿಸಿ, ಅವರ ಕ್ಷೇಮಕ್ಕಾಗಿ ಯಜ್ಞಾದಿ ವಿಹಿತಕಗಳನ್ನೂ ಸೃಷ್ಟಿಸಿ ಅವರನ್ನು ಕುರಿತು ಹೀಗೆ ಹೇಳಿದನು; ಪ್ರಜೆಗಳಿರಾ! ನಿಮಗೆ ಯೋಗ್ಯಕರ್ಮವಾದ ಯಜ್ಞಾದಿಗಳ ಆಚರಣೆಯಿಂದ ಇಷ್ಟಾರ್ಥಗಳನ್ನು ಪಡೆಯಿರಿ! ಈ ಯಜ್ಞಾದಿಗಳು ನಿಮಗೆ ಇಷ್ಟಾರ್ಥದಾಯಕವಾಗುವುವು. ಹೇಗೆಂದರೆ: ಪ್ರಜೆಗಳಿರಾ! ನೀವು ಯಜ್ಞ ಮಾಡಿ ಹವಿಸ್ಸುಗಳಿಂದ ದೇವತೆಗಳನ್ನು ಸಂತೋಷಪಡಿಸಿರಿ! ಹವಿಸ್ಸನ್ನು ಸ್ವೀಕರಿಸಿ ಸಂತುಷ್ಟರಾದ ದೇವತೆಗಳು ನಿಮಗೆ ಇಷ್ಟಾರ್ಥವನ್ನು ಕೊಟ್ಟು ತೃಪ್ತಿಪಡಿಸುವರು. ಈ ರೀತಿ ಪರಸ್ಪರವಾಗಿ ಉಪಕಾರಮಾಡಿ ಸಂತುಷ್ಟರಾದ ನೀವು ಮತ್ತು ದೇವತೆಗಳೂ ನಿಮನಿಮಗೆ ವಿಹಿತ ಕರ್ಮಾಚರಣೆಯ ಫಲವಾಗಿ ಮೋಕ್ಷವನ್ನು ಹೊಂದುವಿರಿ! ಕರ್ಮವನ್ನು ಮಾಡದಿದ್ದರೆ ಆಗುವ ಅನರ್ಥವೇನೆಂಬುದನ್ನು ಹೇಳುವೆನು ಕೇಳಿರಿ! ಯಜ್ಞದಿಂದ ಸತ್ಕರಿಸಲ್ಪಟ್ಟ ದೇವತೆಗಳು ನಿಮಗೆ ಇಷ್ಟವಾದ ಪಶುಪುತ್ರಧನಧಾನ್ಯಾದಿಗಳನ್ನು ಕೊಡುತ್ತಾರೆ. ಹಾಗೆ ಕೊಟ್ಟ ಧಾನ್ಯಾದಿಗಳಲ್ಲಿ ಕೆಲವು ಭಾಗವನ್ನು ದೇವತೆಗಳಿಗೆ ಹೋಮಾದಿಗಳ ಮೂಲಕ ಸಮರ್ಪಿಸಬೇಕು. ಹಾಗೆ ಮಾಡದೆ ಎಲ್ಲವನ್ನೂ ತಾನೇ ಭೋಗಿಸುವವನು ದೇವತಾಭಾಗವನ್ನು ಅಪಹರಿಸಿದುದರಿಂದ ಚೋರನೆನಿಸುವನು. ಎಂದರೆ ಚೋರನಂತೆ ನರಕಾದ್ಯನರ್ಥಕ್ಕೀಡಾಗುವನು. (ಇದರಿಂದ ಯಜ್ಞಾದಿಗಳ ಮೂಲಕ ದೇವಪೂಜೆಯನ್ನು ಮಾಡದಿರುವವರ ನಿಂದೆಯು ಉಕ್ತವಾಯಿತು.) ದೇವತೆಗಳ ಪೂಜೆಮಾಡಿದರೆ ಆಗುವ ಶ್ರೇಯಸ್ಸೇನೆಂದರೆ:- ವಿಷ್ಣು ಮತ್ತು ಇತರ ದೇವತೆಗಳಿಗೆ ಯಥಾಯೋಗ್ಯವಾಗಿ ಅನ್ನಾದಿರೂಪವಾದ ಹವಿಸ್ಸನ್ನು ಹೋಮಮೂಲಕವಾಗಿ ಸಮರ್ಪಿಸಿ ಉಳಿದ ಅನ್ನಾದಿಗಳನ್ನು ಭುಜಿಸುವ ಸಜ್ಜನರು ಸಕಲ ಪಾಪಗಳನ್ನೂ ಕಳೆದುಕೊಳ್ಳುವರು. ಅಥವಾ

ಯಜ್ಞಶಿಷ್ಟಾಶಿನಃ=ವೈಶ್ವದೇವಾದಿ ಯಜ್ಞ ಮಾಡಿ ಉಳಿದ ಅನ್ನವನ್ನು ಭುಜಿಸುವ ಸಾಧುಜನರು '1ಪಂಚಸೂನಾ ಎಂಬ ದೋಷಗಳನ್ನು ಕಳೆದುಕೊಳ್ಳುವರು, ಯಾರು ತಮಗಾಗಿಯೇ ಅಡಿಗೆಮಾಡಿ ದೇವತಾಭಾಗವನ್ನು ಕೊಡದೆ ತಾವೇ ಭೋಜನ ಮಾಡುವರೋ ಆವರು ಪಾಪಿಗಳೇ ಸರಿ! ಅಂತಹ ಭೋಜನವು ಪಾಪಕಾರಣವು - ಎಂಬುದಾಗಿ ಬ್ರಹ್ಮನು ಹೇಳಿದನು.

1 ಖಂಡನೀ ಪೇಷಣೀ ಚುಲ್ಲೀ ಉದಕುಂಭೀ ಚ ಮಾರ್ಜನೀ |
ಪಂಚಸೂನಾ ಗೃಹಸ್ಥಸ್ಯ ತಾಭಿಃ ಸ್ವರ್ಗಂ ನ ವಿಂದತಿ ॥

ಜೀವನೋಪಯುಕ್ತವಾಗಿ ಆಹಾರವನ್ನು ಸಿದ್ಧಪಡಿಸಿಕೊಳ್ಳುವಾಗ ಹಿಂಸಾರೂಪವಾದ ಐದು ದೋಷಗಳು ತಪ್ಪದೇ ಬರುವುವು. ಅವನ್ನು 'ಸೂನಾ' ಎಂಬುದಾಗಿ ಶಾಸ್ತ್ರದಲ್ಲಿ ಕರೆದಿರುವರು. ಅವು ಯಾವುವೆಂದರೆ:-1. ಖಂಡನೀ=ಬತ್ತ ಮುಂತಾದ ಧಾನ್ಯವನ್ನು ಸಂಗ್ರಹಿಸುವಾಗ ಪೈರನ್ನು ಕುಯ್ಯುವುದರಿಂದಾಗುವ ಸಸ್ಯ ಪ್ರಾಣಿಹಿಂಸೆ, 2.ಪೇಷಣಿ=ಧಾನ್ಯವನ್ನು ಬಡಿದು, ಕುಟ್ಟಿ, ಬೀಸುವಾಗ ಸಂಭವಿಸಬಹುದಾದ ಪ್ರಾಣಿಹಿಂಸೆ, 3. ಚುಲ್ಲೀ=ಒಲೆಯೊಳಗೆ ಬೆಂಕಿ ಹಾಕಿ ಉರಿಸುವಾಗ ಸಂಭವಿಸುವ ಪ್ರಾಣಿಹಿಂಸೆ, 4. ಉದಕುಂಭೀ=ನೀರನ್ನು ತರುವಾಗ, ಕಾಯಿಸುವಾಗ ಸಂಭವಿಸುವ ಪ್ರಾಣಿಹಿಂಸೆ, 5. ಮಾರ್ಜನೀ=ಒಲೆ ಮುಂತಾದುವನ್ನು ಗುಡಿಸಿ ಸಾರಿಸುವಾಗ ಸಂಭವಿಸುವ ಪ್ರಾಣಿಹಿಂಸೆ. ಇವೇ ಪಂಚಸೂನ=ಐದು ಪಾಪಗಳು. ಇವು ಸದ್ಗತಿಗೆ ಪ್ರತಿಬಂಧಕವು. ಇವು ವೈಶ್ವದೇವ ಮಾಡುವುದರಿಂದ ಪರಿಹಾರವಾಗುತ್ತವೆ. ಆದಕಾರಣ ಗೃಹಸ್ಥನು ವೈಶ್ವದೇವ ಮಾಡಿ ಈ ಪಾಪಗಳನ್ನು ಪರಿಹರಿಸಿಕೊಂಡು ಉಳಿದ ಅನ್ನವನ್ನು ಭುಜಿಸುವುದು ಶ್ರೇಯಸ್ಕರವು.

**ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನ ಸಂಭವಃ**
**ಯಜ್ಞಾದ್ಭವತಿ ಪರ್ಜನ್ಯೋ ಯಜ್ಞ ಕರ್ಮಸಮುದ್ಭವಃ॥3-14॥**

**ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಂ ಹಿ**
**ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ॥3-15॥**

**ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ**
**ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ॥3-16॥**

**14-16.** ಈ ಜಗತ್ತು ಚಕ್ರದಂತೆ ತಿರುಗುತ್ತಿರುವುದು. ಅದಕ್ಕೂ ಕರ್ಮವೇ ಕಾರಣವು. ಕರ್ಮವನ್ನು ಮಾಡದಿದ್ದರೆ ಜಗಚ್ಚಕ್ರಪ್ರವರ್ತನೆಯೇ ನಿಂತು ಮಹಾನರ್ಥವಾಗುವುದು. ಆದಕಾರಣ ವರ್ಣಾಶ್ರಮೋಚಿತ ಕರ್ಮವು ಅವಶ್ಯ ಕರ್ತವ್ಯವೆಂದು ಮೂರು ಶ್ಲೋಕಗಳಿಂದ ನಿರೂಪಿಸುತ್ತಾನೆ:- ಅನ್ನಾತ್=ಆಹಾರ ಪದಾರ್ಥಗಳಿಂದ ಪ್ರಾಣಿಗಳು ಹುಟ್ಟುತ್ತವೆ. (ತಿಂದ ಆಹಾರವು ಜಾಠರಾಗ್ನಿಯ ಸಹಾಯದಿಂದ ಶುಕ್ಲಶೋಣಿತರೂಪವಾಗಿ ಪರಿಣಮಿಸಿ ಅದೃಷ್ಟಾದಿ ಸಹಕಾರದಿಂದ ಗರ್ಭವನ್ನುಂಟುಮಾಡಿ ಪ್ರಾಣಿಗಳನ್ನು ಹುಟ್ಟಿಸುತ್ತದೆ.) ಹುಟ್ಟಿದ ಪ್ರಾಣಿಗಳು ಅನ್ನಾದ್ಭವಂತಿ= ಅನ್ನದಿಂದಲೇ ಬದುಕುವುವು. ಬದುಕಿರುವ ಪ್ರಾಣಿಗಳು ಅನ್ನಾದ್ಭವಂತಿ=ಆಹಾರದಿಂದಲೇ ದೇಹಪುಷ್ಟಿಯನ್ನು ಹೊಂದಿ ಕರ್ಮಮಾಡಲು ಸಮರ್ಥವಾಗುವುವು. ಅಂತಹ ಅನ್ನವು ಮೇಘಚಕ್ರಾಭಿಮಾನಿಯಾದ ಪರ್ಜನ್ಯನಾಮಕ ಆದಿತ್ಯನು ಮಳೆಗರೆಯುವುದರಿಂದ ಹುಟ್ಟುತ್ತದೆ. ಆ ಪರ್ಜನ್ಯನು ಯಜ್ಞಾದ್ಭವತಿ=ಯಜ್ಞದಲ್ಲಿ ಯಜಮಾನನು ಕೊಟ್ಟ ಹವಿಸ್ಸನ್ನು ಉಪಭೋಗಿಸಿ

ಸಂತೋಷದಿಂದ ಪ್ರಸನ್ನನಾಗಿ ವೃಷ್ಟಿಪ್ರದನಾಗುತ್ತಾನೆ. ಇಂದ್ರಾದಿ ದೇವತೆಗಳನ್ನುದೇಶಿಸಿ ಆಜ್ಯಾದಿಗಳ ಹೋಮರೂಪವಾದ ಯಜ್ಞವು (ಜ್ಯೋತಿಷ್ಟೋಮಾದಿಗಳು) ಅದರ ಅಂಗಕ್ರಿಯಾ ಕಲಾಪದಿಂದ ನಿಷ್ಪನ್ನವಾಗುತ್ತದೆ. ಅಂತಹ ಯಜ್ಞಾಂಗ ಕ್ರಿಯೆಯು ಪರಬ್ರಹ್ಮನ ಪ್ರೇರಣೆಯಿಂದುಂಟಾಗುವುದೆಂದು ತಿಳಿ. ಆ ಪರಬ್ರಹ್ಮನು ನಿತ್ಯವಾದ ವೇದವೆಂಬ ಶಬ್ದಪ್ರಮಾಣದಿಂದಲೇ ತಿಳಿಯಲ್ಪಡುವನು. ಹಾಗೆ ಯಥಾವತ್ತಾಗಿ ತಿಳಿಯಲ್ಪಟ್ಟರೆ ಅವನು ಅಧಿಕಾರಿಯಿಂದ ಸತ್ಕರ್ಮವನ್ನು ಮಾಡಿಸುವನು. ಹೀಗೆ ಪರಬ್ರಹ್ಮಜ್ಞಾನಕ್ಕೆ ಸಾಧಕವಾದ ವೇದವು ಭೂತ=ಆಧ್ಯಾಪಕ ಪ್ರಾಣಿಗಳಿಂದಲೇ ವ್ಯಕ್ತವಾಗುತ್ತದೆ. ಆ ಪ್ರಾಣಿಗಳಾದರೋ ಮೇಲೆ ಹೇಳಿದ ಪ್ರಕಾರ ಅನ್ನದಿಂದಲೇ ಹುಟ್ಟುತ್ತವೆಯಾದಕಾರಣ ಈ ಜಗತ್ತು ಚಕ್ರದಂತೆ ಸುತ್ತುತ್ತಿರುವುದು. ಹೀಗೆ ಯಜ್ಞವು ವೃಷ್ಟಿ-ಅನ್ನ-ಭೂತ-ವೇದದ್ವಾರಾ ಪರಮಾತ್ಮಸ್ವರೂಪಾಭಿವ್ಯಕ್ತಿಗೆ ಕಾರಣವಾಗಿರುವುದರಿಂದ ಸರ್ವವ್ಯಾಪಿಯಾದ ಪರಮಾತ್ಮನು ಯಾವಾಗಲೂ ಯಜ್ಞದಲ್ಲಿ ಸನ್ನಿಹಿತನಾಗಿರುವನು. ಯಜ್ಞದಿಂದಲೇ ಅಲ್ಲಲ್ಲಿ ಪರಮಾತ್ಮನ ಸ್ವರೂಪವು ವ್ಯಕ್ತವಾಗಿ ಸನ್ನಿಹಿತವಾಗುತ್ತದೆ. ಈ ಪ್ರಕಾರ ಕರ್ಮವು ವೃಷ್ಟಿ, ಅನ್ನ ದ್ವಾರಾ ಭೂತೋತ್ಪತ್ತಿ-ಸ್ಥಿತಿ-ವೃದ್ಧಿಗಳಿಗೆ ಕಾರಣವಾಗಿರುವುದರಿಂದ ಜಗಚ್ಚಕ್ರಪ್ರವರ್ತನೆಗೆ ಕಾರಣವಾಗಿದೆ. ಮತ್ತು ಭೂತ-ವೇದಗಳದ್ವಾರಾ ಪರಬ್ರಹ್ಮಸ್ವರೂಪಾಭಿವ್ಯಕ್ತಿಗೂ ಕಾರಣವಾಗಿರುವುದರಿಂದ ಪರಬ್ರಹ್ಮಸ್ಥಿತಿಗೂ ನಿಮಿತ್ತವಾಗಿದೆ. ವಿಹಿತಕರ್ಮಾನುಷ್ಠಾನವು ಜಗಚ್ಚಕ್ರ ಪ್ರವರ್ತನೆಯ ಮೂಲಕವಾಗಿ ಭೂತಸ್ಥಿತಿ-ಪರಬ್ರಹ್ಮಾಭಿವ್ಯಕ್ತಿಗಳಿಗೆ ಕಾರಣವಾಗಿರುವುದರಿಂದ ಮಹಾ ಸುಕೃತವನ್ನುಂಟುಮಾಡುವ ಕಾರಣ, ಪಾರ್ಥ! ಜಗತ್ತಿನ ಕ್ಷೇಮಕ್ಕಾಗಿ ಮತ್ತು ನನ್ನ ಪ್ರೀತಿಗಾಗಿಯೂ ನೀನು ವಿಹಿತಕರ್ಮವನ್ನಾಚರಿಸಲೇಬೇಕೆಂದು ಭಾವ.

ಈ ಪ್ರಕಾರವಾಗಿ ಈಶ್ವರನಿಂದಲೂ, ಅವನಿಂದಾಜ್ಞಪ್ತರಾದ ಪುರಾತನ ಬ್ರಹ್ಮಾದಿದೇವತೆಗಳಿಂದಲೂ ನಡೆಯಿಸಲ್ಪಡುತ್ತಿರುವ ಜಗಚಕ್ರವು ಕರ್ಮಾಚರಣೆಯಿಂದ ಸಾಗುತ್ತಿರುವುದು. ಯಾವನು ಕರ್ಮವನ್ನಾಚರಿಸದೆ ಇದನ್ನು ತಡೆಯುವನೋ ಅಂತಹವನು ಕೇವಲ ವಿಷಯಲಂಪಟನಾಗಿ ದುಷ್ಕೃತ್ಯಗಳನ್ನೇ ಆಚರಿಸುತ್ತಿರುವವನಾದ ಕಾರಣ ಅವನ ಜೀವಿತಕಾಲವನ್ನೆಲ್ಲಾ ಕೇವಲ ಪಾಪಸಂಪಾದನೆಯಲ್ಲಿಯೇ ಕಳೆಯಬೇಕಾಗುವುದು. ಪಾರ್ಥ! ಅಂತಹವನ ಬದುಕೇ ವ್ಯರ್ಥವು. ಅವನು ಜೀವಿಸಿರುವುದಕ್ಕಿಂತ ಸಾಯುವುದೇ ಲೇಸು. (ಸರ್ವಾಂತರ್ಯಾಮಿಯು, ಸರ್ವರಕ್ಷಕನೂ ಆದ ಪರಮಾತ್ಮನನ್ನು ಪ್ರಾಣಿಗಳು ವೇದದಿಂದಲೇ ತಿಳಿಯುವರು. ಹೀಗೆ ಅವನನ್ನು ತಿಳಿದು ಭಜಿಸುವುದರಿಂದ ಪರಮಾತ್ಮನು ಸತ್ಕರ್ಮಗಳನ್ನು

ಮಾಡಿಸುವನು. ಈ ಕರ್ಮಗಳಿಂದ ಯಜ್ಞವು ನಿಷ್ಪನ್ನವಾಗಿ ಪರ್ಜನ್ಯಾದಿದೇವತೆಗಳು ಪ್ರಸನ್ನರಾಗುವರು. ಆಗ ಅವರು ಮಳೆಗರೆಯುವರು. ಅದರಿಂದ ಸಸ್ಯವೃದ್ಧಿಯಾಗಿ ಆಹಾರವು ದೊರೆಯುವುದು. ಅದರಿಂದ ಪ್ರಾಣಿಗಳು ಪುಷ್ಟರಾಗುವರು. ಹೊಸದಾಗಿ ಶರೀರವನ್ನು ಪಡೆದು ಜನ್ಮವನ್ನೂ ಎತ್ತುವರು. ಅವರು ವೇದಾಭ್ಯಾಸ ಮಾಡಿ ಪರಮಾತ್ಮನನ್ನು ತಿಳಿಯುವರು. ಜ್ಞಾತನಾದ ಪರಮಾತ್ಮನು ಸತ್ಕರ್ಮ ಪ್ರೇರಕನಾಗುವನು. ಹೀಗೆ ಪ್ರವರ್ತಿತವಾದ ಜಗಚ್ಚಕ್ರದಲ್ಲಿ ಸೇರಿದ ಯಜ್ಞಾದಿ ಕರ್ಮವನ್ನಾಚರಿಸದಿದ್ದರೆ ಪರ್ಜನ್ಯನು ಮಳೆಗರೆಯದೆ ಜಗಚ್ಚಕ್ರವು ನಿಂತು ಪಾಪ ಸಂಘಟನೆಯಾಗುತ್ತದೆ. ಹೀಗೆ ಮಾಡಿದ ಮನುಷ್ಯನ ಜೀವಿತವೇ ವ್ಯರ್ಥವಾಗುವುದು. ಆದಕಾರಣ ಗೃಹಸ್ಥಾಶ್ರಮಿಗಳು ವಿಹಿತಯಜ್ಞದಾನಾದಿಗಳನ್ನು ಮಾಡಬೇಕು. ಸಂನ್ಯಾಸಿಗಳು, ಬ್ರಹ್ಮಚಾರಿ ಮುಂತಾದ ಇತರ ಆಶ್ರಮಿಗಳೂ ಅವರವರಿಗೆ ವಿಹಿತವಾದ ವಿದ್ಯಾದಾನ, ಅಭಯದಾನ, ಸ್ವಭೋಜ್ಯಾನ್ನದಾನ, ಅಧ್ಯಯನ, ಪ್ರವಚನ, ಧ್ಯಾನ ಮೊದಲಾದ ವಾಚನಿಕ ಮಾನಸಿಕ ಯಜ್ಞಗಳನ್ನೂ, ಕೃಚ್ಛ್ರಚಾಂದ್ರಾಯಣಾದಿ ತಪಸ್ಸೆಂಬ ಕಾಯಿಕ ಯಜ್ಞಗಳನ್ನೂ ಮಾಡಿ ಈ ಜಗಚಕ್ರವನ್ನು ನಡೆಯಿಸುತ್ತಿರಬೇಕು. ಆದುದರಿಂದ ಅರ್ಜುನ! ನೀನು ವರ್ಣಾಶ್ರಮ ವಿಹಿತಕರ್ಮವನ್ನಾಚರಿಸಲೇಬೇಕೆಂಬುದು ಶ್ರೀಕೃಷ್ಣನ ಆಶಯ.)

**ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಿಶ್ಚ ಮಾನವಃ**

**ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ॥3-17॥**

17.ಸರ್ವರೂ ಕರ್ಮವನ್ನಾಚರಿಸಲೇಬೇಕು. ಇಲ್ಲದಿದ್ದರೆ ಹಾನಿಯಾಗುವುದೆಂದು ಹೇಳಿದೆಯಷ್ಟೆ! ಹಾಗಾದರೆ ಅಸಂಪ್ರಜ್ಞಾತ 1ಸಮಾಧಿಯನ್ನು ಬಿಡಬೇಕಾಗುವುದು. ಅದರಲ್ಲಿ ತೊಡಗಿದಾಗ ಸ್ವಲ್ಪವೂ ಬಾಹ್ಯ ವ್ಯಾಪಾರವಿಲ್ಲವಾದಕಾರಣ ಕರ್ಮಲೋಪವಾಗಲೇಬೇಕಾಗುತ್ತದೆ ಎಂದರೆ, ಹೇಳುತ್ತಾನೆ:- ತು=ಆಸಂಪ್ರಜ್ಞಾತ ಸಮಾಧಿಸ್ಥನಾದ, ಯಾವ ಮಾನವಃ=ಅಪರೋಕ್ಷಜ್ಞಾನಿಯು ಪರಮಾತ್ಮನಲ್ಲಿ ಅಸಂಪ್ರಜ್ಞಾತಸ್ಥಿತಿಮಾತ್ರದಿಂದಲೇ ಮಹಾಸುಖವನ್ನು ಹೊಂದಿದವನಾಗಿ ಪರಮಾತ್ಮನ ಅನುಗ್ರಹದಿಂದ ಇತರ ವಿಷಯಗಳಲ್ಲಿ ಅಲಂಬುದ್ಧಿ=ಜುಗುಪ್ಸೆಯನ್ನು ಹೊಂದಿ ಆತ್ಮರತಿಃ=ಪರಮಾತ್ಮದರ್ಶನದಿಂದಾಗುವ ಸುಖವನ್ನೇ ಅನುಭವಿಸುತ್ತಿರುವನೋ ಅಂತಹ ಜ್ಞಾನಿಗೆ ಮಾತ್ರ ವಿಹಿತ ಸಂಧ್ಯಾವಂದನಾದಿ ಯಾವ ಕರ್ಮವೂ ಇಲ್ಲ. (ಅಸಂಪ್ರಜ್ಞಾತ ಸಮಾಧಿಸ್ಥ ಜ್ಞಾನಿಗೆ ಕರ್ಮವಿಧಿಯಿಂದ ವಿನಾಯತಿ ಕೊಟ್ಟಿರುವ ಕಾರಣ ಆಗಿನ ಕರ್ಮಲೋಪವು ದೋಷವಲ್ಲ. ಅದು ಗ್ರಾಹ್ಯವೇ ಸರಿಯೆಂದು ತಾತ್ಪರ್ಯ)

1. ಮನಸ್ಸನ್ನು ಬಾಹ್ಯ ವಿಷಯಗಳಿಂದ ದೂರಮಾಡಿ ಪರಮಾತ್ಮನಲ್ಲಿಡುವುದೇ ಧ್ಯಾನವು. ಅದು ಸಂಪ್ರಜ್ಞಾತಸಮಾಧಿ-ಅಸಂಪ್ರಜ್ಞಾತಸಮಾಧಿ ಎಂದು ಎರಡು ಬಗೆಯಾಗಿರುವುದು. ಧ್ಯಾನ ಮಾಡುತ್ತಿರುವಾಗ ಭೇರೀತಾಡನಾದಿ ಭಯಂಕರ ಶಬ್ದಾದಿಗಳಾದರೆ ಮನಸ್ಸು ಚಲಿಸಿ ಬಾಹ್ಯಶಬ್ದಾದಿಗಳನ್ನು ಗ್ರಹಿಸಿದರೆ ಅಂತಹ ಧ್ಯಾನವು ಸಂಪ್ರಜ್ಞಾತ ಸಮಾಧಿಯೆನಿಸುವುದು. ಮನಸ್ಸು ಚಲಿಸುವುದಕ್ಕೆ ಕಾರಣವಾದ ಎಂತಹ ಭಯಂಕರ ಶಬ್ದಾದಿಗಳಾದರೂ ಅವನ್ನೆಲ್ಲಾ ವಿಫಲಗೊಳಿಸಿ, ಮನಸ್ಸು ಚಲಿಸದೆ ಕೇವಲ ಪರಮಾತ್ಮನಲ್ಲಿಯೇ ಲೀನವಾಗಿರುವಂತಹ ಧ್ಯಾನವು ಅಸಂಪ್ರಜ್ಞಾತಸಮಾಧಿಯು.

## ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ
## ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ॥3-18॥

18. ಕರ್ಮವಿಧಿಯು ಇತರರಿಗೇ ಹೊರತು ಅಸಂಪ್ರಜ್ಞಾತಸಮಾಧಿಸ್ಥನಿಗಿಲ್ಲವೆಂದು ಹೇಳಲ್ಪಟ್ಟಿತು. ಏಕೆ? ಜ್ಞಾನಿಯು ಸಮಾಧಿಯಲ್ಲಿ ತೊಡಗುವ ಮುನ್ನ ತನಗಾಪ್ತನಾದವನೊಬ್ಬನಲ್ಲಿ 'ನಾನು ಧ್ಯಾನದಲ್ಲಿ ತೊಡಗುವೆನು. ವಿಹಿತ ಕರ್ಮ ಮಾಡಬೇಕಾದ ಕಾಲಕ್ಕೆ ಸರಿಯಾಗಿ ನನ್ನನ್ನೆಬ್ಬಿಸು' ಎಂದು ಹೇಳಿ ಸಮಾಧಿಸ್ಥನಾದರೆ, ಆಯಾಯಾ ಸಮಯಕ್ಕೆ ಸರಿಯಾಗಿ ಅವನಿಂದ ಉದ್ಬೋಧಿತನಾಗಿ ವಿಹಿತ ಕರ್ಮವನ್ನಾಚರಿಸಲು ಅನುಕೂಲವಾಗುವುದು. ಹಾಗೆ ಸಮಾಧಿಸ್ಥನು ಮಾಡುತ್ತಾನೆಂದು ಪೂರ್ವೋಕ್ತ ಶಂಕೆಗೆ ಉತ್ತರ ಹೇಳಬಹುದಾಗಿತ್ತು. ಹಾಗೆ ಹೇಳದೆ ಸಮಾಧಿಸ್ಥನಿಗೆ ಕರ್ಮವಿಧಿ ಬಂಧವಿಲ್ಲವೆಂದು ಉತ್ತರ ಹೇಳಲು ಕಾರಣವೇನೆಂದರೆ, ಹೇಳುತ್ತಾನೆ:- ಸಮಾಧಿಯಿಂದೆಚ್ಚೆತ್ತು ಯಜ್ಞಾದಿ ಕರ್ಮಗಳನ್ನು ಮಾಡುವುದರಿಂದ ಅಸಂಪ್ರಜ್ಞಾತ ಸಮಾಧಿಸ್ಥ ಜ್ಞಾನಿಗೆ ಸಿದ್ಧವಾಗಿರುವ ಪರಮಾತ್ಮದರ್ಶನಸುಖಕ್ಕೆ ಸಮಾನ ಅಥವಾ ಅಧಿಕವಾದ ಯಾವ ಫಲವೂ ಇಲ್ಲ. ಯಜ್ಞಾದಿ ಫಲವು ಅವನು ಅನುಭವಿಸುತ್ತಿರುವ ಸುಖಕ್ಕಿಂತ ಅತ್ಯಲ್ಪವಾದುದರಿಂದ ಅದು ಅವನಿಗೆ ಪ್ರಯೋಜನವೇ ಅಲ್ಲ. ಯಜ್ಞಾದಿ ಕರ್ಮಗಳಿಗಾಗಿ ಸಮಾಧಿಯಿಂದೇಳುವುದು ಅನಾವಶ್ಯಕನಾದರೂ ಸಂಧ್ಯಾವಂದನಾದಿ ನಿತ್ಯನೈಮಿತ್ತಿಕ ಕರ್ಮಗಳನ್ನಾಚರಿಸದಿದ್ದರೆ ಪಾಪ ಬರುತ್ತದೆಯಾದ ಕಾರಣ ಅದಕ್ಕಾದರೂ ಎಚ್ಚರಗೊಳ್ಳುವುದಾವಶ್ಯಕವಲ್ಲವೇ ಎಂದರೆ, “ನಾಕೃತೇನೇಹ ಕಶ್ಚನ' ಆಯಾಯಾ ಕಾಲಗಳಲ್ಲಿ ಆಚರಿಸಬೇಕಾದ ಸಂಧ್ಯಾವಂದನಾದಿ ಕರ್ಮಗಳನ್ನು ಮಾಡದಿದ್ದರೂ ಸಮಾಧಿಸ್ಥನಿಗೆ ಯಾವ ಪಾಪವೂ ಬರುವುದಿಲ್ಲ. ಆದರೂ ಜ್ಞಾನಿಯು ಸಮಾಧಿಯಲ್ಲಿ ಕುಳಿತಿರುವಾಗ ಗುರುಗಳೇ ಮುಂತಾದ ಪೂಜ್ಯ ಜನರು ಬಂದರೆ ಎಚ್ಚೆತ್ತು ಅವರನ್ನು ಸತ್ಕರಿಸಬೇಕಾದುದಾವಶ್ಯಕವಲ್ಲವೆ? ಎಂದರೆ ಹೇಳುತ್ತಾನೆ:- 'ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ=ಪೂಜ್ಯ ಜನ ದರ್ಶನ ಸಂಭಾಷಣ ವಂದನಾದಿಗಳೂ ಆತ್ಮರತಿಗೆ ಸಮಾನ ಅಥವಾ ಅಧಿಕವಾದ ಫಲವಲ್ಲವಾದಕಾರಣ ಅವೂ ಸಮಾಧಿಸ್ಥ ಜ್ಞಾನಿಗೆ ಕರ್ತವ್ಯವಲ್ಲ. ಆದುದರಿಂದ ಅಸಂಪ್ರಜ್ಞಾತಸಮಾಧಿಸ್ಥ ಜ್ಞಾನಿಗೆ ಕರ್ಮಬಂಧವಿಲ್ಲವೆಂದು ಭಾವ.

**ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ**

**ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ॥3-19॥**

**19.** ಅರ್ಜುನ! ಅಸಂಪ್ರಜ್ಞಾತ ಸಮಾಧಿಸ್ಥ ಜ್ಞಾನಿ ಮತ್ತು ಮುಕ್ತ ಇವರಿಬ್ಬರಿಗೆ ಮಾತ್ರ ಕರ್ಮವಿಲ್ಲ. ನೀನು ಈ ಎರಡು ಪಂಗಡಕ್ಕೂ ಸೇರಿದವನಲ್ಲವಾದಕಾರಣ ನೀನು ಮತ್ತು ನಿನ್ನಂತಹವರೆಲ್ಲರೂ ಅವಶ್ಯಕರ್ಮಮಾಡಬೇಕಾಗಿರುವುದರಿಂದ, ನೀನು ಫಲಾಶೆಯನ್ನು ಬಿಟ್ಟು, ಕರ್ತವ್ಯ ಕರ್ಮಗಳನ್ನು ಭಗವತ್ಪೂಜೆಯೆಂಬ ಭಾವನೆಯಿಂದ ಯಾವಜ್ಜೀವವೂ ಆಚರಿಸುವವನಾಗು; ಏಕೆಂದರೆ:- ಯಾವ ಮನುಷ್ಯನೇ ಆಗಲಿ ಫಲಾಪೇಕ್ಷೆಯಿಲ್ಲದೆ ಕರ್ಮವನ್ನು ಮಾಡಿದರೆ ಅದರಿಂದ ಜ್ಞಾನವನ್ನು ಹೊಂದಿ ಮೋಕ್ಷವನ್ನು ಪಡೆಯುವನು. ಹೀಗೆ ಪ್ರಯೋಜನವಿರುವ ಕಾರಣ ಕರ್ತವ್ಯ ಕರ್ಮವನ್ನಾಚರಿಸು!

**ಕರ್ಮಣ್ಯೇವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ**

**ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ॥3-20॥**

**20.**ಜ್ಞಾನದಿಂದಲೇ ಮೋಕ್ಷವು ದೊರೆಯುತ್ತದೆಯೆಂದ ಮೇಲೆ ಕರ್ಮವನ್ನೇಕೆ ಮಾಡಬೇಕು? ನನ್ನಂತಹವರು ಯಾರಾದರೂ ಹಿಂದೆ ಕರ್ಮಮಾಡಿ ಸಿದ್ಧಿಪಡೆದಿರುವರೆ ಎಂಬ ಅರ್ಜುನನ ಶಂಕೆಗೆ ಜ್ಞಾನಿಗಳೂ ಕರ್ಮಮಾಡಬೇಕೆಂಬ ವಿಷಯದಲ್ಲಿ ಪ್ರಮಾಣವಾಗಿ ಜ್ಞಾನಿಸಂಪ್ರದಾಯವನ್ನು ನಿರೂಪಿಸುತ್ತಾನೆ:- ಜನಕ-ಪ್ರಿಯವ್ರತ-ಭಗೀರಥಾದಿ ರಾಜರ್ಷಿಗಳು ಕರ್ಮದಿಂದಲೇ ಜ್ಞಾನವನ್ನು ತದ್ವಾರಾ ಮೋಕ್ಷವನ್ನು ಪಡೆದಿರುವರು. ಜ್ಞಾನಕ್ಕಾಗಿ ಕರ್ಮಮಾಡುವುದೇನೋ ಸರಿ: ಅಪರೋಕ್ಷಜ್ಞಾನವಾದ ಮೇಲೆ ಕರ್ಮದಿಂದೇನು ಫಲ? ಅದನ್ನೇಕೆ ಮಾಡಬೇಕೆಂದರೆ ಅದಕ್ಕೂ ಜನಕಾದಿಗಳ ಆಚಾರವೇ ಉತ್ತರವು. ಅಪರೋಕ್ಷಜ್ಞಾನಿಗಳಾದ ಜನಕಪ್ರಿಯವ್ರತಾದಿಗಳು ಕರ್ಮವನ್ನು ಮಾಡಿಯೇ ಸಂಪೂರ್ಣ ಮೋಕ್ಷವನ್ನು ಪಡೆದಿರುವರು. (ದುಃಖನಿವೃತ್ತಿ, ಯೋಗ್ಯಾನಂದಪ್ರಾಪ್ತಿ ಎಂಬುದಾಗಿ ಮೋಕ್ಷದಲ್ಲಿ ಎರಡು ಅಂಶಗಳಿವೆ. ಜ್ಞಾನಮಾತ್ರದಿಂದ ದುಃಖ ನಿವೃತ್ತಿಯೆಂಬ ಮೋಕ್ಷಭಾಗವು ಸಂಪೂರ್ಣವಾಗಿ ದೊರೆತರೂ ಅಷ್ಟರಿಂದಲೇ ಯೋಗ್ಯಾನಂದವು ಸಂಪೂರ್ಣವಾಗಿ ವ್ಯಕ್ತವಾಗುವುದಿಲ್ಲ. ಜ್ಞಾನಾನಂತರವೂ ಕರ್ಮಮಾಡುವುದರಿಂದ ಆನಂದಾತಿಶಯವು ಅನುಭವಕ್ಕೆ ಬರುವುದು. ಹೀಗೆ ದಳದ್ವಯಾತ್ಮಕವಾದ ಮೋಕ್ಷವನ್ನು ಸಂಪೂರ್ಣವಾಗಿ ಪಡೆಯಬೇಕಾದರೆ ಜ್ಞಾನಕರ್ಮಗಳೆರಡೂ ಅವಶ್ಯಕ. ಈ ಅಭಿಪ್ರಾಯದಿಂದಲೇ ಅಲ್ಲಲ್ಲಿ ಜ್ಞಾನಕರ್ಮಸಮುಚ್ಚಯವು ಮೋಕ್ಷ ಸಾಧನವೆಂದು ಹೇಳಿದೆ. ಏವಂಚ ಜ್ಞಾನವಾಗುವುದಕ್ಕಿಂತ ಮುಂಚೆ ಮಾಡಿದ ಕರ್ಮವು ಜ್ಞಾನದ್ವಾರಾ ಮೋಕ್ಷಸಾಧಕವು.

ಜ್ಞಾನಾನಂತರದಲ್ಲಿ ಮಾಡಿದ ಕರ್ಮವು ಮೋಕ್ಷದಲ್ಲಿ ಆನಂದಾತಿಶಯವನ್ನುಂಟುಮಾಡುತ್ತದೆ. ಆದಕಾರಣ ಸರ್ವರೂ ಮೋಕ್ಷಪರ್ಯಂತವಾಗಿ ವಿಹಿತಕರ್ಮವನ್ನಾಚರಿಸಲೇಬೇಕು. ನೀನೂ ಜನಕಾದಿ ಜ್ಞಾನಿಗಳಂತೆ ವಿಹಿತ ಕರ್ಮವನ್ನಾಚರಿಸು ಎಂದು ತಾತ್ಪರ್ಯ.) ಶಿಷ್ಟಾಚಾರಮಾತ್ರದಿಂದಲೇ ಕರ್ಮವನ್ನು ವಿಧಿಸಿಲ್ಲ. ಜ್ಞಾನಿಗಳು ಮಾಡುವ ಕರ್ಮಕ್ಕೆ ಬೇರೆ ಪ್ರಯೋಜನವೂ ಇರುವ ಕಾರಣ ಕರ್ಮವು ಅವಶ್ಯ ಕರ್ತವ್ಯವೆಂದು ಹೇಳುತ್ತಾನೆ:- ಅರ್ಜುನ! ಲೋಕಸಂಗ್ರಹ=ಕರ್ಮಮಾಡುತ್ತಿರುವ ಜ್ಞಾನಿಗಳನ್ನು ನೋಡಿ ಅಜ್ಞಜನರೂ ಕೂಡ ಕರ್ಮಕರಣವು ಶ್ರೇಯಸ್ಕರವೆಂದು ತಿಳಿದು ವಿಹಿತಾಚರಣೆಯಲ್ಲಿ ಪ್ರವರ್ತಿಸಿ ಶ್ರೇಯೋಭಾಗಿಗಳಾಗುವರು. ಹೀಗೆ ಬಹುಜನರನ್ನು ಸನ್ಮಾರ್ಗದಲ್ಲಿ ಪ್ರೇರಿಸುವುದರಿಂದ ಭಗವಂತನು ಪ್ರಸನ್ನನಾಗಿ, ಕರ್ಮವನ್ನಾಚರಿಸಿದ ಜ್ಞಾನಿಗಳಿಗೆ ಮೋಕ್ಷದಲ್ಲಿ ಆನಂದಾತಿಶಯವನ್ನುಂಟುಮಾಡುವನ್ನು, ಅದಕ್ಕಾಗಿಯೂ ನೀನು ಕರ್ಮವನ್ನಾಚರಿಸು.

**ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ**
**ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥3-21॥**

21. ಜ್ಞಾನಿಗಳು ಕರ್ಮಮಾಡುವುದರಿಂದ ಲೋಕಸಂಗ್ರಹವಾಗುವ ಬಗೆ ಹೇಗೆಂದರೆ, ವಿವರಿಸುತ್ತಾನೆ:- ಜ್ಞಾನಿ, ಸದಾಚಾರನಿಷ್ಠ ಎಂದು ಪ್ರಸಿದ್ಧನಾದ ಮಹಾತ್ಮನು ಯಾವ ಯಾವ ಕರ್ಮವನ್ನಾಚರಿಸುವನೋ ಅದೇ ಕರ್ಮವನ್ನುಅಜ್ಞ ಜನರೂ ಕೂಡ ಮಾಡುವರು. ಆ ಮಹಾತ್ಮನು ಯಾವ ವಿಧಿ ನಿಷೇಧಾದಿ-ವಚನಗಳನ್ನು ಪ್ರಮಾಣವೆಂದು ತಿಳಿಸಿ ಅದರಂತೆ ಅನುಷ್ಠಾನ ಮಾಡುವನೋ, ಇತರ ಜನರೂ ಅದೇ ಶಾಸ್ತ್ರವನ್ನು ನಂಬಿ ಅದರಂತೆ ನಡೆಯುವರು. ಇದು ಸಾಮಾನ್ಯ ನೀತಿಯಾಗಿರುವುದರಿಂದ, ಜ್ಞಾನಿಯ ಆಚಾರದಿಂದ ಹೀಗೆ ಲೋಕಸಂಗ್ರಹವಾಗುತ್ತದೆಂಬುದು ಸ್ಪಷ್ಟವಾಗುತ್ತದೆ.

**ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ**
**ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ॥3-22॥**

**ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ॥3-23॥**

**ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಂ**

**ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ॥3-24॥**

**22-24** ಶ್ರೀಕೃಷ್ಣನು ತನ್ನಾಚರಣೆಯೂ ಲೋಕಸಂಗ್ರಹಕ್ಕಾಗಿಯೇ ಎಂಬುದನ್ನು ವಿವರಿಸುತ್ತಾನೆ:- ಪಾರ್ಥ! ನನಗೆ ಮೂರು ಲೋಕಗಳಲ್ಲಿಯೂ ಇದುವರೆಗೆ ಲಭಿಸದಿರುವ, ಮುಂದೆ ಪಡೆಯಬೇಕಾದ ಯಾವ ಪ್ರಯೋಜನವೂ ಇಲ್ಲ. ನಾನು ಸ್ವತಃ ಪರಿಪೂರ್ಣಕಾಮನು. ಆದಕಾರಣ ನನಗೆ ಯಾವ ಕರ್ಮವೂ ಕರ್ತವ್ಯವಾಗಿಲ್ಲ. ಆದರೂ ನಾನು ಕರ್ಮವನ್ನು ಮಾಡುತ್ತಲೇ ಇರುವೆನು. ಒಂದು ವೇಳೆ ನಾನು ಆಲಸ್ಯ ರಹಿತನಾಗಿ ಯಾವಾಗಲೂ ಕರ್ಮಮಾಡದೇ ಇದ್ದರೆ ಎಲ್ಲಾ ಮನುಷ್ಯರೂ ನನ್ನ ದಾರಿಯನ್ನೇ ಅನುಸರಿಸುವರು. ನನ್ನನ್ನು ನೋಡಿ 'ಮಹಾತ್ಮನಾದ ಕೃಷ್ಣನೇ ಕರ್ಮವನ್ನು ಮಾಡುವುದಿಲ್ಲ. ನಾವೇಕೆ ಮಾಡಬೇಕು' ಎಂದು ಎಲ್ಲರೂ ಕರ್ಮಮಾರ್ಗವನ್ನೇ ಬಿಟ್ಟು ಬಿಡುವರು. ಕರ್ಮವನ್ನು ಬಿಡಲಿ; ಅದರಿಂದಾಗುವ ಅನರ್ಥವೇನೆನ್ನುವಿಯಾ? ಕೇಳು. ನಾನೇ ಕರ್ಮವನ್ನು ಮಾಡದಿದ್ದರೆ ಈ ಜನರೆಲ್ಲರೂ ನನ್ನಂತೆಯೇ ಕರ್ಮವನ್ನು ಬಿಟ್ಟು ಕರ್ತವ್ಯ ಧರ್ಮತ್ಯಾಗದಿಂದ ನರಕಾದ್ಯನರ್ಥಕ್ಕೆ ಭಾಗಿಗಳಾಗುವರು. ಅಷ್ಟೇ ಅಲ್ಲ; ಕರ್ಮ ಲೋಪವಾದರೆ ಬ್ರಾಹ್ಮಣ-ಕ್ಷತ್ರಿಯಾದಿ ಜಾತಿ ವಿವೇಚನೆಯೇ ಇಲ್ಲದೇ ಹೋಗುವುದು ಹೀಗೆ ನಾನೇ ಕರ್ಮವನ್ನು ಬಿಟ್ಟರೆ ಆಗುವ ಅನರ್ಥ ಪರಂಪರೆಯನ್ನು ತಿಳಿದೂ ಸರ್ವಜ್ಞನಾದ ನಾನು ಕರ್ಮವನ್ನು ಬಿಡುವುದರಿಂದ ವರ್ಣಸಾಂಕರ್ಯವನ್ನು ನಾನೇ ಮಾಡಿದಂತಾಗಿ ಪ್ರಜೆಗಳ ನಾಶಕ್ಕೂ ನಾನೇ ಕಾರಣನಾಗಬೇಕಾಗುವುದು. (ಆದುದರಿಂದ ವಿಧಿಬದ್ಧನಲ್ಲದ, ಪೂರ್ಣಕಾಮನಾದ ನಾನೇ ಅಜ್ಞಾನಿಗಳಿಗೆ ಧರ್ಮ ಪ್ರವರ್ತಿಯನ್ನುಂಟು ಮಾಡುವುದಕ್ಕಾಗಿ ಕರ್ಮವನ್ನು ಮಾಡುತ್ತಿರುವಾಗ ನಿಮ್ಮಂತಹ ಜ್ಞಾನಿಗಳು ಕರ್ಮಮಾಡುವುದಾವಶ್ಯಕವೆಂದು ಹೇಳುವುದೇನು! ವಿಹಿತಕರ್ಮವನ್ನಾಚರಿಸೆಂದು ತಾತ್ಪರ್ಯ.)

**ಸಕ್ತಾಃ ಕರ್ಮಣ್ಯ ವಿದ್ವಾಂಸೋ ಯಥಾ ಕುರ್ವಂತಿ ಭಾರತ**

**ಕುರ್ಯಾದ್ವಿದ್ವಾಂಸ್ತಥಾಽಸಕ್ತಶ್ಚಿಕೀರ್ಷುರ್ಲೋಕಸಂಗ್ರಹಮ್॥3-25॥**

**25.** ಅಜ್ಞಾನಿಯಂತೆ ಜ್ಞಾನಿಯೂ ಕರ್ಮವನ್ನು ಬಿಡದೆ ಮಾಡಬೇಕೆಂದರೆ ಜ್ಞಾನಿಗಳಿಗೂ ಅಜ್ಞಾನಿಗಳಿಗೂ ವ್ಯತ್ಯಾಸವೇನೆಂದರೆ, ಹೇಳುತ್ತಾನೆ:- ಭರತಕುಲೋತ್ಪನ್ನನಾದ ಅರ್ಜುನ! ಜ್ಞಾನಿಗಳೂ ಅಜ್ಞಾನಿಗಳಂತೆಯೇ ಕರ್ಮಮಾಡುವರು. ಆದರೆ ಅಜ್ಞರು ಫಲಾಪೇಕ್ಷೆಯಿಂದ ಕರ್ಮ ಮಾಡಿ ಅಲ್ಪಫಲವನ್ನು ಪಡೆಯುವರು. ಜ್ಞಾನಿಗಳಾದರೋ ಫಲಾಶೆಯಿಲ್ಲದೆ ಅಜ್ಞ ಲೋಕಕ್ಕೆ

ಧರ್ಮಮಾರ್ಗದಲ್ಲಿ ಪ್ರವೃತ್ತಿಯನ್ನುಂಟುಮಾಡಿ ಅದರಿಂದ ಭಗವಂತನು ಸಂತುಷ್ಟನಾಗಲೆಂಬ ಉದ್ದೇಶದಿಂದ ಕರ್ಮಮಾಡುವರು. ಅದರಿಂದ ಅಜ್ಞ ಲೋಕೋದ್ಧಾರಮಾತ್ರವೇ ಅಲ್ಲದೆ ಮುಕ್ತಿಯಲ್ಲಿ ಅನಂದಾತಿಶಯರೂಪ ಮಹಾ ಪ್ರಯೋಜನವು ತಾನಾಗಿ ಲಭಿಸುವುದು. ಇದು ಅಜ್ಞರ ಮತ್ತು ಪ್ರಾಜ್ಞರ ಕರ್ಮಗಳಿಗಿರುವ ವ್ಯತ್ಯಾಸವು.

**ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ**
**ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಃ ಸಮಾಚರನ್॥3-26॥**

26. ಅಜ್ಞ ಜನರಿಗೆ ಕರ್ಮಚರಣೆಯಲ್ಲಿ ಶ್ರದ್ಧೆಯನ್ನು ಹುಟ್ಟಿಸುವುದಕ್ಕಾಗಿಯೂ ಜ್ಞಾನಿಗಳು ಕರ್ಮವನ್ನು ಬಿಡದೇ ಮಾಡಬೇಕೆಂದು ಹೇಳುತ್ತಾನೆ:- ಕರ್ಮಾಚರಣೆಯಲ್ಲಿ ಶ್ರದ್ಧೆಯುಳ್ಳ, ಭಗವನ್ಮಹಿಮೆಯನ್ನು ತಿಳಿಯದ ಅಜ್ಞಜನರಿಗೆ ಕರ್ಮವನ್ನು ಮಾಡಬಾರದೆಂಬ ಬುದ್ಧಿಯನ್ನು ಹುಟ್ಟಿಸಬಾರದು. ಅದಕ್ಕಾಗಿಯೂ ಜ್ಞಾನಿಯು ಭಗವಂತನಲ್ಲಿಯೇ ಮನಸ್ಸಿಟ್ಟು, ಭಗವತ್ಪೂಜೆಯೆಂಬ ಭಾವನೆಯಿಂದ ಕರ್ಮಗಳನ್ನಾಚರಿಸಿ, ಸಕಲ ಕರ್ಮಗಳಲ್ಲಿಯೂ ಅಜ್ಞರಿಗೆ ಶ್ರದ್ಧೆಯುಂಟಾಗುವಂತೆ ವರ್ತಿಸಬೇಕು.

**ಪ್ರಕೃತೇ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ**
**ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ॥3-27॥**

27. 'ಸಕ್ತಾಃ' ಇತ್ಯಾದಿ ಶ್ಲೋಕದಲ್ಲಿ ಹೇಳಿರುವ ಅಜ್ಞರ ಕರ್ಮಾನುಷ್ಠಾನದ ರೀತಿಯನ್ನು ವಿವರಿಸುತ್ತಾನೆ:- [ಪ್ರಕೃತಿ ಶಬ್ದಕ್ಕೆ ಈಶ್ವರ, ಜೀವಸ್ವಭಾವ ಮತ್ತು ಜಡ ಪ್ರಕೃತಿಯೆಂದು '1ಮೂರರ್ಥ.] ಪ್ರಕೃತಿನಾಮಕ ಭಗವಂತನು ಸ್ವತಂತ್ರೇಚ್ಛಾ ಪ್ರಯತ್ನಾದಿ ಗುಣಗಳಿಂದ ಉತ್ತಮ, ಮಧ್ಯಮ, ಅಧಮವೆಂಬ ತ್ರಿವಿಧ ಜೀವರಾಶಿಗಳ ಸ್ವಭಾವಾನುಸಾರವಾಗಿ ಉತ್ತಮ ಜೀವರಿಗೆ ಜ್ಞಾನ, ಮಧ್ಯಮರಿಗೆ ಮಿಶ್ರಜ್ಞಾನ, ಅಧಮರಿಗೆ ಮಿಥ್ಯಾ ಜ್ಞಾನಗಳನ್ನು ಹುಟ್ಟಿಸಿ ಸ್ವಾಧೀನ ಜಡ ಪ್ರಕೃತಿಯಿಂದ ಹುಟ್ಟಿದ ಸತ್ವರಜಸ್ತಮೋಗುಣಗಳ ಕಾರ್ಯವಾದ ದೇಹೇಂದ್ರಿಯಾಂತಃಕರಣಗಳನ್ನು ಸಾಧನವಾಗಿ ನಿಯಮಿಸಿ, ಅವರವರ ಸ್ವಭಾವೋಚಿತ ಕರ್ಮಗಳನ್ನು ಆಯಾಯಾ ಜೀವರಿಂದ ಮಾಡಿಸುವನು. ಹೀಗೆ ಹರಿಯೇ ನಿಂತು ಮಾಡಿಸಿದ ಕರ್ಮಗಳಿಗೆಲ್ಲಾ ಪರಾಧೀನನಾದ ಜೀವನು ಅಹಂಕಾರ(ತಾನೇ ಸ್ವತಂತ್ರಕರ್ತನೆಂಬ ಭ್ರಾಂತಿ)ಯಿಂದ ತಾನೇ ಸ್ವತಂತ್ರ ಕರ್ತನೆಂದು ತಿಳಿಯುವನು. ಹೀಗೆ ಭಗವಂತನೇ ಸಕಲ ಕಾರ್ಯಗಳಿಗೂ ಸ್ವತಂತ್ರಕರ್ತನಾಗಿರುವನು. (ಜೀವನಾದರೋ ಅವನ ಅಧೀನನಾಗಿ ಅವನು

ಒದಗಿಸಿಕೊಟ್ಟ ಸಾಧನಗಳಿಂದ ಮಾಡಿಸಿದುದನ್ನು ಮಾಡುವಂತಹ ಪರತಂತ್ರನು. ಈ ವಿವೇಚನೆಯನ್ನರಿಯದೆ ಅಜ್ಞಾನಿಯು ತಾನೇ ಸ್ವತಂತ್ರ ಕರ್ತನೆಂದು ತಿಳಿದು ಸಂಸಾರದಲ್ಲಿಯೇ ನರಳುತ್ತಿರುವನೆಂದು ತಾತ್ಪರ್ಯ.

1. (ಕ್ವಚಿತ್ಸ್ವಭಾವಃ ಪ್ರಕೃತಿಃ ಕ್ವಚಿಚ್ಚ ತ್ರಿಗುಣಾತ್ಮಕಾ।
ಕ್ವಚಿತ್ಪ್ರಕೃಷ್ಟ ಕರ್ತೃತ್ವಾದ್ಭಗವಾನ್ ಪ್ರಕೃತಿರ್ಹರಿಃ ॥ಶಬ್ದ ನಿರ್ಣಯ.

**ತತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ**

**ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜ ತೇ॥3-28॥**

28. ಪ್ರಾಜ್ಞರ ಕರ್ಮಾಚರಣ ಪ್ರಕಾರವನ್ನು ವಿವರಿಸುತ್ತಾನೆ:- ಸಕಲ ಕಾರ್ಯಗಳಿಗೂ ಇಚ್ಛಾ ಪ್ರಯತ್ನಾದಿ ಭಗವಂತನ ಗುಣಗಳು ಮುಖ್ಯ ಪ್ರವರ್ತಕಗಳು. ಜೀವಸ್ವಾಭಾವಿಕ ಗುಣಗಳು, ಸತ್ವಾದಿ ಪ್ರಕೃತಿಗುಣಗಳು, ಪ್ರಕೃತಿ ಪರಿಣಾಮಗಳಾದ ಚಕ್ಷುರಾದೀಂದ್ರಿಯ-ಶರೀರ-ಮನಸ್ಸು ಇವುಗಳು ಅಮುಖ್ಯ ಸಾಧನಗಳು ಎಂಬ ಗುಣವಿಭಾಗ ಮತ್ತು ಸ್ವತಂತ್ರನಾದ ಭಗವಂತನ ಕರ್ಮವು ಮುಖ್ಯವು, ಈಶ್ವರಾಧೀನರಾಗಿ ಜೀವರು ಮಾಡುವ ಕರ್ಮವು ಅಮುಖ್ಯವು, ಪರಾಧೀನ ಪ್ರಕೃತ್ಯಾದಿ ಜಡಗಳ ಕರ್ಮವು ಅತ್ಯಮುಖ್ಯವು ಎಂಬ ಕರ್ಮಪ್ರಭೇದ ಇವುಗಳ ತತ್ವವನ್ನರಿತ ಜ್ಞಾನಿಯಾದರೋ 'ಸ್ವತಂತ್ರ ಭಗವದಿಚ್ಛಾದಿಗುಣಗಳು ಜೀವಸ್ವಭಾವ, ಕರ್ಮಾದಿಗಳಿಗೆ ಪ್ರೇರಕಗಳಾಗಿರುತ್ತವೆ; ಭಗವದಿಚ್ಛಾನುಸಾರವಾಗಿಯೇ ಇಂದ್ರಿಯಗಳು ಶಬ್ದಾದಿ ವಿಷಯಗಳಲ್ಲಿ ಪ್ರವರ್ತಿಸುತ್ತವೆಯಾದ ಕಾರಣ ಜೀವನಿಗೆ ಯಾವ ಕಾರ್ಯದಲ್ಲಿಯೂ ಸ್ವಾತಂತ್ರವಿಲ್ಲ' ಎಂದು ತಿಳಿದು ತಾನೇ ಸ್ವತಂತ್ರ ಕರ್ತನೆಂಬ - ಅಭಿಮಾನವನ್ನು ತ್ಯಜಿಸುವನು. ಅಂತಹವನು ಸಂಸಾರಬಂಧಕ್ಕೆ ಸಿಲುಕುವುದಿಲ್ಲ.

**ಪ್ರಕೃತೇರ್ಗುಣಸಮ್ಮೂಢಾಃ ಸಜ್ಜಂತೇ ಗುಣಕರ್ಮಸು**

**ತಾನಕೃತ್ಸ್ನ ವಿದೋ ಮಂದಾನ್ ಕೃತ್ಸವಿನ್ನ ವಿಚಾಲಯೇತ್॥3-29॥**

29. ಅಜ್ಞ ಪ್ರಾಜ್ಞರ ಆಚರಣೆಗಳಲ್ಲಿ ವ್ಯತ್ಯಾಸವಿರುವುದೇನೋ ಸರಿ. ಪ್ರಾಜ್ಞನು ಅಜ್ಞನಿಗೆ ಸನ್ಮಾರ್ಗವನ್ನುಪದೇಶಿಸಬಹುದೇ ಎಂದರೆ, ಹೇಳುತ್ತಾನೆ:- ಈಶ್ವರನ ಇಚ್ಛಾ ಮಾತ್ರದಿಂದ ಜಡ ಪ್ರಕೃತಿಯ ಸತ್ವಾದಿಗುಣಗಳೇ ನಿಮಿತ್ತವಾಗಿ ಪ್ರಕೃತಿ ಪರಿಣಾಮವಾದ ಚಕ್ಷುರಾದೀಂದ್ರಿಯಗಳು ನನ್ನ ವಶದಲ್ಲಿಯೇ ಇವೆ ಎಂಬ ಅಭಿಮಾನ(ಭ್ರಾಂತಿ)ವನ್ನು ಹೊಂದಿರುವವರು ಆ ಭ್ರಾಂತಿಯಿಂದಲೇ ಶಬ್ದಾದಿ ವಿಷಯಗಳನ್ನೇ ಹೆಚ್ಚಾಗಿ ಪ್ರೀತಿಸುವರು. ಮತ್ತು ಮಾಡುವ ಕರ್ಮಗಳಿಗೆಲ್ಲಾ ತಾವೇ ಸ್ವತಂತ್ರ ಕರ್ತರೆಂದೂ ತಿಳಿಯುವರು. ಹಾಗೆ

ಸ್ವಾತಂತ್ರಾಭಿಮಾನಿಗಳಾದ ಪೂರ್ವೋಕ್ತ ಗುಣಕರ್ಮವಿಭಾಗಜ್ಞಾನವಿಲ್ಲದ ಅಯೋಗ್ಯ ಜನರಿಗೆ ಗುಣಕರ್ಮಸಂಗವನ್ನು ಬಿಟ್ಟು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಜ್ಞಾನಿಯು ಉಪದೇಶಿಸಬಾರದು. (ಅಜ್ಞಾನಿಗಳು ಯೋಗ್ಯರು ಮತ್ತು ಆಯೋಗ್ಯರು ಎಂದು ಎರಡು ಬಗೆಯಾಗಿರುವರು. ಅವರಲ್ಲಿ ಯೋಗ್ಯರನ್ನು ಮಾತ್ರ ಉಪದೇಶಾನುಷ್ಠಾನಾದಿಗಳಿಂದ ಜ್ಞಾನಿಗಳು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಬೇಕೆಂಬುದೇ 'ನ ಬುದ್ಧಿಭೇದಂ ಜನಯೇತ್' ಇತ್ಯಾದಿ ಪೂರ್ವಶ್ಲೋಕಾಭಿಪ್ರಾಯವು. ಅಯೋಗ್ಯರಿಗೆ ಉಪದೇಶಮಾಡಬಾರದು. ಮಾಡಿದರೆ ಫಲಿಸುವುದೂ ಇಲ್ಲ. ಉಪದೇಶಕನಿಗೆ ಪಾಪಸಂಘಟನೆಯಾಗುವುದೆಂದು ಪ್ರಕೃತ ಶ್ಲೋಕದ ತಾತ್ಪರ್ಯ. ಆದುದರಿಂದ ಪೂರ್ವೋತ್ತರ ವಿರೋಧವಿಲ್ಲವೆಂದು ಭಾವ.)

ಮಯಿ ಸರ್ವಾಣಿ ಕರ್ಮಾಣಿ ಸನ್ಯಸ್ಯಾಧ್ಯಾತ್ಮ ಚೇತಸಾ

ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥3-30॥

**30.** ಅಜ್ಞ ಪ್ರಾಜ್ಞರಿಬ್ಬರೂ ಕರ್ಮವನ್ನಾಚರಿಸಲೇಬೇಕು. ಆದರೆ ಅಜ್ಞನು ಅಭಿಮಾನಪೂರ್ವಕವಾಗಿ ಕರ್ಮಮಾಡುವನು. ಪ್ರಾಜ್ಞನಾದರೋ ಅಭಿಮಾನರಹಿತನಾಗಿ ಕರ್ಮಮಾಡುವನು. ಇಷ್ಟೇ ಉಭಯರ ಅನುಷ್ಠಾನಗಳಿಗಿರುವ ವ್ಯತ್ಯಾಸವೆಂದು ಹೇಳಿ, ಈಗ ಅರ್ಜುನ! ನೀನೂ ಜ್ಞಾನಿಯಾದುದರಿಂದ ಅದರಂತೆ ಕರ್ಮವನ್ನಾಚರಿಸೆಂದು ಹೇಳುತ್ತಾನೆ:– ಅರ್ಜುನ! ಸರ್ವೋತ್ತಮನು, ಪರಮಾತ್ಮನೂ ಆದ ನನ್ನನ್ನೇ ಮನದಲ್ಲಿ ನೆನೆಯುತ್ತ ವಿಷ್ಣು ಭಕ್ತಿ ಜ್ಞಾನಗಳ ಹೊರತು ಇನ್ನಾವ ಇಷ್ಟಾರ್ಥಗಳನ್ನೂ ಬಯಸದೆ, ಕರ್ಮಗಳಿಗೆ ನಾನೇ ಸ್ವತಂತ್ರಕರ್ತನೆಂಬ ಅಭಿಮಾನವನ್ನು ತ್ಯಜಿಸಿ, ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ= ಶ್ರೀಕೃಷ್ಣ ಭಗವಂತನೇ ನನ್ನಲ್ಲಿ ಪ್ರೇರಕನಾಗಿದ್ದು ಸಕಲ ಕರ್ಮಗಳನ್ನೂ ಮಾಡಿಸುತ್ತಿರುವನು; ಅವೆಲ್ಲವೂ ಭಗವಂತನ ಪೂಜೆಯು ಎಂಬ ಅನುಸಂಧಾನಪೂರ್ವಕವಾಗಿ ಶೋಕವನ್ನು ಬಿಟ್ಟು ಯುದ್ಧಮಾಡು!

ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।

ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ॥3-31॥

ಯೇ ತ್ವೇತದಭ್ಯ ಸೂಯಂತೋ ನಾನು ತಿಷ್ಠಂತಿ ಮೇ ಮತಂ

ಸರ್ವಜ್ಞಾನವಿಮೂಢಾಂಸ್ತಾನ್ ವಿದ್ಧಿ ನಷ್ಟಾನ ಚೇತಸಃ॥3-32॥

**31-32.** ಜ್ಞಾನಿಗಳು ಈ ರೀತಿ ಕರ್ಮಮಾಡುವ ಮಾತ್ರದಿಂದ ನಾನೂ ಏಕೆ ಕರ್ಮ ಮಾಡಬೇಕು ಎಂದರೆ, ಈ ರೀತಿ ಕರ್ಮ ಮಾಡುವವರಿಗೂ-ಮಾಡದಿರುವವರಿಗೂ ಆಗುವ ಫಲವನ್ನು

ಹೇಳುತ್ತಾನೆ:- ಯಾವ ಮನುಷ್ಯರು ನನ್ನ ಮಾತಿನಲ್ಲಿ ವಿಶ್ವಾಸವುಳ್ಳವರಾಗಿ ಕಷ್ಟಪಟ್ಟು ಮಾಡಬೇಕಾದ ಕರ್ಮದಲ್ಲಿ ಪ್ರವೃತ್ತಿಯುಂಟುಮಾಡಿದನೆಂದು ನನ್ನನ್ನು ಅಪಕಾರಿಯೆಂದೆಣಿಸದೆ, ಪೂರ್ವಶ್ಲೋಕೋಕ್ತ ಪ್ರಕಾರ ಕರ್ಮವನ್ನಾಚರಿಸಬೇಕೆಂಬ ನನ್ನ ಮತವನ್ನು ಯಾವಾಗಲೂ ಅನುಸರಿಸುತ್ತಾರೆಯೋ ಅಂತಹ ಮನುಷ್ಯರೂ ಕೂಡ ನಿಷ್ಕಾಮಕರ್ಮಾಚರಣೆಯಿಂದ ಜ್ಞಾನವನ್ನು ಪಡೆದುಮುಕ್ತರಾಗುತ್ತಾರೆ. ಅಂದ ಬಳಿಕ ಅಪರೋಕ್ಷಜ್ಞಾನಿಗಳು ಮುಕ್ತರಾಗುವರೆಂದು ಹೇಳತಕ್ಕುದೇನು ಎಂಬಂಶವನ್ನು 'ಅಪಿ' ಶಬ್ದವು ಸೂಚಿಸುತ್ತದೆ. ಈ ಕೈಮುತ್ಯ ಸೂಚನೆಯು ಕರ್ಮ ಪ್ರಕರಣದಲ್ಲಿ ಪ್ರಾಸಂಗಿಕವೆಂದು ತಿಳಿಯಬೇಕು. ಯಾರು ಕಷ್ಟಕರ್ಮದಲ್ಲಿ ಪ್ರವರ್ತಿಸುವಂತೆ ಮಾಡಿದನೆಂದು ನನ್ನನ್ನು ಅಪಕಾರಿಯೆಂದೆಣಿಸಿ ಮೇಲ್ಕಂಡ ನನ್ನ ಮತವನ್ನನುಸರಿಸುವುದಿಲ್ಲವೋ ಅಂತಹವರು ವಿವೇಕಶೂನ್ಯರು. ಆದುದರಿಂದಲೇ ಜ್ಞಾತವ್ಯ ಸಕಲ ವಿಷಯಗಳಲ್ಲಿಯ ವಿಶೇಷವಾಗಿ ಮಿಥ್ಯಾಜ್ಞಾನಿಗಳೂ ಆಗಿ ನರಕಾದ್ಯನರ್ಥಗಳಿಗೆ ಗುರಿಯಾಗುವರೆಂದು ತಿಳಿ. (ಹೀಗೆ ಕರ್ಮಕರಣಾಕರಣಗಳಲ್ಲಿ ಫಲಾಫಲಗಳಿರುವುದರಿಂದ ನೀನು ಶ್ರೇಯಸ್ಸಿಗಾಗಿ ಕರ್ಮಮಾಡಬೇಕೆಂದು ಭಾವ.)

**ಸದೃಶಂ ಚೇಷ್ಟ ತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ**
**ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ॥3-33॥**

**33.** ಕೃಷ್ಣ! ನಿನ್ನ ಮತವನ್ನು ಅನುಸರಿಸುವವರಿಗೆ ಮೋಕ್ಷವೂ, ಅನುಸರಿಸದಿರುವವರಿಗೆ ನಾಶವೂ ಆಗುವುದಾದರೆ ಜನರೆಲ್ಲರೂ ನಿನ್ನ ಮತವನ್ನೇ ಏಕೆ ಅನುಸರಿಸುವುದಿಲ್ಲವೆಂದರೆ, ಹೇಳುತ್ತಾನೆ:- [ಪ್ರಕೃತಿ=ಪೂರ್ವ ಸಂಸ್ಕಾರದಿಂದಾಗುವ ರಾಗದ್ವೇಷಗಳು.] ಭಗವಂತನ ಮತವನ್ನು ಅನುಸರಿಸಿದರೆ ಇಷ್ಟಪ್ರಾಪ್ತಿಯೂ, ಇಲ್ಲವಾದರೆ ಅನರ್ಥವೂ ಆಗುವುದೆಂದು ತಿಳಿದವನಾದರೂ ಸಹ ತನ್ನ ಪ್ರಾಚೀನ ಸಂಸ್ಕಾರದಿಂದುಂಟಾದ ರಾಗದ್ವೇಷಗಳಿಗನುಸಾರವಾಗಿಯೇ ಕರ್ಮವನ್ನಾಚರಿಸುವನು. ಹೀಗಿರುವಾಗ ಅಜ್ಞಾನಿಯು ರಾಗದ್ವೇಷಗಳಿಗೀಡಾಗುವನೆಂದು ಹೇಳಬೇಕಾದುದೇನು? ಮನಸ್ಸನ್ನು ನಿಗ್ರಹಿಸಿದರೂ ಸ್ವಭಾವಾನುಸಾರವಾಗಿ ಕರ್ಮಮಾಡುವುದು ತಪ್ಪುವುದಿಲ್ಲ. ಪ್ರಾಣಿಗಳು ತಮ್ಮ ಸ್ವಭಾವಾನುಸಾರವಾಗಿಯೇ ಪ್ರವರ್ತಿಸುತ್ತವೆ. ಈ ವಿಷಯದಲ್ಲಿ ಮನೋನಿಗ್ರಹವು ಏನನ್ನೂ ಮಾಡಲಾರದು. ಸ್ವಭಾವವೇ ಪ್ರಬಲವು.

**ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ**
**ತಯೋರ್ನ ವಶಮಾಗಚ್ಛೇತ್ ತೌ ಹ್ಯಸ್ಯ ಪರಿಪಂಥಿನೌ॥3-34॥**

34. ಸಕಲ ಪ್ರಾಣಿಗಳೂ ತಮ್ಮ ತಮ್ಮ ಸ್ವಭಾವಾನುಸಾರವಾಗಿಯೇ ಕರ್ಮ ಮಾಡುವರು. ನಿಗ್ರಹವು ಅಪ್ರಯೋಜಕವೆನ್ನುವುದಾದರೆ ಹಿಂದೆ ಕರ್ಮವನ್ನು ವಿಧಿಸಿ: ಅದಕ್ಕೆ ಫಲವನ್ನು ಹೇಳಿರುವುದು ವ್ಯರ್ಥವಲ್ಲವೆ? ಎಂದರೆ, ಹೇಳುತ್ತಾನೆ:- ಚಕ್ಷುರಾದಿ ಇಂದ್ರಿಯಗಳಿಗೆ ಸುಂದರವಸ್ತು, ಸುಗಂಧ ಮುಂತಾದ ಅನುಕೂಲ ವಿಷಯಗಳಲ್ಲಿ ರಾಗವೂ, ದುರ್ಗಂಧ ಮುಂತಾದ ಪ್ರತಿಕೂಲ ಪದಾರ್ಥಗಳಲ್ಲಿ ದ್ವೇಷವೂ ಬಂದೇ ಬರುತ್ತದೆ. ಅದಕ್ಕನುಗುಣವಾಗಿಯೇ ಪ್ರಾಣಿಗಳು ಕರ್ಮ ಮಾಡುವರು, ನಿಗ್ರಹವು ವ್ಯರ್ಥವೇ ಸರಿ. ಆದರೂ ರಾಗದ್ವೇಷಗಳು ಶ್ರೇಯಸ್ಕಾಮನಿಗೆ ಶ್ರೇಯಸ್ಸಾಗದಂತೆ ತಡೆದು ಪಾಪವನ್ನುಂಟುಮಾಡುವ ಕಾರಣ ವಿವೇಕಿಯಾದವನು ರಾಗದ್ವೇಷಗಳಿಗೆ ವಶನಾಗಬಾರದು. (ಸಾಮಾನ್ಯ ನಿಗ್ರಹದಿಂದ ಸದ್ಯದಲ್ಲಿ ಫಲವು ಕಾಣದಿದ್ದರೂ ದೃಢವಾಗಿ ಯತ್ನ ಮಾಡಿದರೆ ಪ್ರತಿಬಂಧಕ ದುರಿತವು ನಿವೃತ್ತಿಯಾಗಿ ಯೋಗ್ಯ ಜನರಿಗೆ ಫಲವು ಲಭಿಸುವುದು. ಆಯೋಗ್ಯರಿಗೆ ಎಂತಹ ಪ್ರಯತ್ನವಾದರೂ ನಿಷ್ಫಲವೇ ಸರಿಯೆಂದು ಭಾವ.)

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್**
**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ॥3-35॥**

35. ಕಾಮಕ್ರೋಧಾದಿ ಕಲುಷಿತವಾದ ಘೋರ ಯುದ್ಧವನ್ನು ಮಾಡೆಂದು ಏಕೆ ನನ್ನನ್ನು ನಿರ್ಬಂಧಿಸುವೆ? ಎಂಬ ಅರ್ಜುನನ ಎರಡನೆಯ ಪ್ರಶ್ನೆಗೆ ಈಗ ಉತ್ತರವನ್ನು ಹೇಳುತ್ತಾನೆ:- ಅಭಿಪ್ರಾಯವೇನೆಂದರೆ, ಯುದ್ಧವು ಕಾಮಾದಿ ದೋಷಗಳು ಹೆಚ್ಚುವುದಕ್ಕೆ ಕಾರಣವಾಗಿರುವುದಾದರೂ ನೀನು ರಾಗದ್ವೇಷಗಳಿಗೆ ವಶನಾಗದೆ ಶೋಕವನ್ನು ಬಿಟ್ಟು ಯುದ್ಧ ಮಾಡು! ಇದು ಮಹಾಪ್ರಯತ್ನದಿಂದಲೇ ಸಾಧ್ಯವಾಗುವುದು. ಆಧಿಕಾರಿಕ ಪುರುಷನಾದ ನಿನಗೆ ಇದೇ ವಿಹಿತಕರ್ಮವು ಎಂದು ಉತ್ತರ ಹೇಳಿದಮೇಲೆ ಮಹಾಪ್ರಯತ್ನವನ್ನಾದರೂ ಮಾಡಿ ಕಾಮಾದಿಗಳನ್ನು ಜಯಿಸಿ ಈ ಯುದ್ಧ ಮಾರ್ಗದಲ್ಲಿಯೇ ನಾನೇಕೆ ವರ್ತಿಸಬೇಕು? ಎಂಬ ಅರ್ಜುನನ ಆಕಾಂಕ್ಷೆಗೆ ಈಗ ಉತ್ತರ ಹೇಳುತ್ತಾನೆ:- ಅಂಗಹೀನವಾಗಿ ಮಾಡಲ್ಪಟ್ಟುದಾದರೂ ತನ್ನ ವರ್ಣಾಶ್ರಮವಿಹಿತಧರ್ಮವೇ ಸರ್ವಾಂಗಸುಂದರವಾಗಿ ಮಾಡಲ್ಪಟ್ಟ ಅನ್ಯ ವರ್ಣಾಶ್ರಮಧರ್ಮಗಳಿಗಿಂತಲೂ ಪ್ರಶಸ್ತವು. ಇತರ ವರ್ಣಾಶ್ರಮೋಚಿತ ಧರ್ಮವು ನಿಷಿದ್ಧವಾದುದರಿಂದ ನರಕಾದ್ಯನರ್ಥಕಾರಿಯಾಗುವ ಕಾರಣ ಸ್ವಧರ್ಮವಾದ ಯುದ್ಧಾದಿ ಕರ್ಮಗಳಲ್ಲಿಯೇ ಪ್ರವರ್ತಿಸಿ, ಒಂದು ವೇಳೆ ಅದರಲ್ಲಿ ತಾನು ಮಡಿದರೂ ಸದ್ಗತಿಯೇ ಲಭಿಸುವುದು. ಆದಕಾರಣ ಆದೇ ಉತ್ತಮ ಮಾರ್ಗವು. (ಇಲ್ಲಿ ಸ್ವಧರ್ಮವೆಂದರೆ ಕ್ಷತ್ರಗೃಹಸ್ಥನಿಗೆ ವಿಹಿತವಾದ

ಯುದ್ಧವು. ಯತಿಧರ್ಮವಾದ ಭಿಕ್ಷಾಟನವೇ ಪರಧರ್ಮವು. ಯುದ್ಧದಲ್ಲಿ ಸ್ವಲ್ಪ ಮಟ್ಟಿಗೆ ರಾಗದ್ವೇಷಾದಿಗಳು ಬಂದೇಬರುವುವು. ಆದರೂ ಅರ್ಜುನ! ಕ್ಷತ್ರಿಯನಾದ ನಿನಗೆ ಅದೇ ಶ್ರೇಯಸ್ಕರವಾದ ಧರ್ಮವು, ಬೇರೆ ಯಾವುದೂ ನಿನಗೆ ವಿಹಿತವಲ್ಲ. ಆದಕಾರಣ ಯಾವ ನ್ಯೂನತೆಯು ಬಂದರೂ ನೀನು ಯುದ್ಧ ಮಾಡುವುದೇ ಒಳ್ಳೆಯದು, ನಿಶ್ಶಂಕವಾಗಿ ಯುದ್ಧಮಾಡೆಂದು ತಾತ್ಪರ್ಯ.)

ಅರ್ಜುನ ಉವಾಚ

**ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ**

**ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ॥3-36॥**

**36.** 'ತೌ ಯಸ್ಯ ಪರಿಪಂಥಿನೌ' ಎಂಬುದರಿಂದ ಕಾಮಕ್ರೋಧಾದಿ ಅರಿಷಡ್ವರ್ಗವು ಶ್ರೇಯಸ್ಸಿಗೆ ಪ್ರತಿಬಂಧಕವೆಂಬ ಮಾತನ್ನು ಕೇಳಿದ ಅರ್ಜುನನು ಕಾಮಕ್ರೋಧಾದಿಗಳೆಲ್ಲವನ್ನೂ ಪ್ರತ್ಯೇಕವಾಗಿ ಗೆಲ್ಲುವುದು ಬಹಳ ಪ್ರಯಾಸ ಸಾಧ್ಯವಾದ ಕಾರಣ ಇವುಗಳಿಗೆಲ್ಲಾ ಮೂಲಭೂತವೂ ಬಲಿಷ್ಠವೂ ಆದುದೊಂದನ್ನು ತಿಳಿಸಬೇಕೆಂದೂ, ಅದನ್ನು ಗೆದ್ದು ಕೃತಕೃತ್ಯನಾಗುವೆನೆಂದೂ ಪ್ರಶ್ನಿಸುತ್ತಾನೆ:- [ಪ್ರಕೃತವಾದ ಸ್ವಕೀಯ ಕರ್ಮಕರ್ತವ್ಯತ್ವವನ್ನು ಇಲ್ಲಿ ಹೇಳಿಲ್ಲ. ಪ್ರಾಸಂಗಿಕವಾಗಿ ಬೇರೆ ಪ್ರಶ್ನೆಯೇ ಇಲ್ಲಿ ಉಕ್ತವಾಗಿದೆಯೆಂಬುದನ್ನು 'ಅಥ' ಶಬ್ದವು ತಿಳಿಸುತ್ತದೆ.] ಯದುವಂಶಸಂಭೂತನಾದ ಕೃಷ್ಣ! ಈ ಮನುಷ್ಯನು ಪಾಪಕೃತ್ಯವನ್ನು ಮಾಡಬೇಕೆಂಬ ಇಚ್ಛೆಯಿಲ್ಲದಿದ್ದರೂ ಯಾವುದೋ ಒಂದು ಬಲಿಷ್ಠವಾದ ಕಾರಣದಿಂದ ಬಲಾತ್ಕಾರವಾಗಿ ಪ್ರೇರಿಸಲ್ಪಟ್ಟವನಂತೆ ಪಾಪಕರ್ಮವನ್ನು ಮಾಡುತ್ತಿರುವನು. ಅಂತಹ ಬಲಿಷ್ಠಕಾರಣವಾವುದು ಹೇಳು! 'ಪ್ರಕೃತೇಃ ಕ್ರಿಯಮಾಣಾನಿ' ಇತ್ಯಾದಿ ಶ್ಲೋಕಗಳಿಂದ ಮನುಷ್ಯನು ಕರ್ಮಮಾಡುವುದಕ್ಕೆ ಪರಮಾತ್ಮನು, ಜೀವನ ಯೋಗ್ಯತೆ, ತತ್ತ್ವಾಭಿಮಾನಿದೇವತಾಗಣ ಇತ್ಯಾದಿಗಳೆಲ್ಲವೂ ಕಾರಣವೆಂದು ಹಿಂದೆಯೇ ಹೇಳಿರುವುದನ್ನು ಕೇಳಿಯೂ ಅರ್ಜುನನು ತಿರುಗಿ ಈ ರೀತಿ ಏಕೆ ಪ್ರಶ್ನಿಸಿದನು ಎಂದರೆ, 'ಅಥ' ಎಂಬುದೇ ಅದಕ್ಕೂ ಉತ್ತರವು, ಅಥ=ಪರಮಾತ್ಮನು ಇತರ ದೇವತೆಗಳು ಜೀವಸ್ವಭಾವ ಇವುಗಳ ನಂತರದಲ್ಲಿ ಕಾರಣವೆನಿಸಿರುವ ಕಾಮಾದಿಗಳಲ್ಲಿ ಪ್ರಬಲವಾದುದು ಯಾವುದೆಂದು ಪ್ರಶ್ನಾಭಿಪ್ರಾಯವಾಗಿರುವುದುರಿಂದ ಉಕ್ತ ಶಂಕೆಗೆ ಅವಕಾಶವಿಲ್ಲವೆಂದು ಭಾವ.)

ಶ್ರೀ ಭಗವಾನುವಾಚ

**ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ**

**ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ॥3-37॥**

37. ಭಗವಂತನು ಉತ್ತರವನ್ನು ಹೇಳುತ್ತಾನೆ:- ಅರ್ಜುನ! ಮನುಷ್ಯನನ್ನು ಪಾಪಕೃತ್ಯಗಳಲ್ಲಿ ಪ್ರವರ್ತಿಸುವಂತೆ ಮಾಡುವ ಕಾರಣಗಳಲ್ಲಿ ಪ್ರಬಲವಾದುದು ಕಾಮವೇ ಸರಿ, ಈ ಕಾಮದಿಂದಲೇ ಕ್ರೋಧವು ಹುಟ್ಟುವುದು. ಕ್ರೋಧವಾದರೋ ರಜೋಗುಣದ ಪರಿಣಾಮವು. (ಪಾಪನಿಮಿತ್ತವಾದ ಕ್ರೋಧಾದಿಕಾರಣಗಳಿಗೆಲ್ಲಾ ಕಾಮವೇ ಮೂಲವಾದುದರಿಂದ ಮಹಾ ಪ್ರಯಾಸ ಪಟ್ಟು ಅದನ್ನು ಪರಿಹರಿಸಿಕೊಂಡರೆ ತನ್ಮೂಲಕವಾದ ಕ್ರೋಧಾದಿಗಳೆಲ್ಲವೂ ಹೋಗಿ ಪಾಪಕೃತ್ಯಗಳಲ್ಲಿ ಪ್ರವೃತ್ತಿಯಾಗುವುದಿಲ್ಲವೆಂದು ಭಾವ.) ಕಾಮ=ವಿಷಯೇಚ್ಛೆ. ಅದು ಇಷ್ಟ ಭೋಗ್ಯ ವಿಷಯವು ದೊರೆತರೆ ಸ್ವತಃ ನಿವೃತ್ತವಾಗುವಕಾರಣ ಅಪೇಕ್ಷಿತವಾದುದನ್ನೆಲ್ಲಾ ಭೋಗಿಸಿ ಕಾಮವನ್ನು ನೀಗಿಸಿಕೊಳ್ಳಬಹುದಲ್ಲವೆ ಎಂದರೆ, ಅದು ಅಸಾಧ್ಯವು. ಏಕೆಂದರೆ ಮಹಾಶನಃ=ಕಾಮವು ಮಹತ್ತರವಾದ ಭೋಗ್ಯ ವಿಷಯಗಳನ್ನೊಳಗೊಂಡಿದೆ. ಅಷ್ಟು ವಿಷಯಗಳನ್ನೂ ಭೋಗಿಸಿ ಕಾಮವನ್ನು ಕಳೆದುಕೊಳ್ಳುವುದು ಜನರಿಗೆ ಸಾಧ್ಯವಲ್ಲ. ಅದು ಬ್ರಹ್ಮಹತ್ಯಾದಿ ಮಹಾ ಪಾಪಕರ್ಮಗಳಿಗೆ ಕಾರಣವು ಹೀಗೆ ಸರ್ವದಾ ಪಾಪಕೃತ್ಯಗಳಲ್ಲಿಯೇ ಜನರನ್ನು ತೊಡಗುವಂತೆ ಮಾಡುವ ಈ ಕಾಮವು ಮೋಕ್ಷ ವಿರೋಧಿಯಾಗಿರುವುದು, ಆದುದರಿಂದ ಇದನ್ನು ಈ ಲೋಕ ಪರಲೋಕಗಳಲ್ಲಿ ಪಡೆಯಬೇಕಾದ ಪುರುಷಾರ್ಥಗಳಿಗೆ ಶತ್ರುವೆಂದು ತಿಳಿ! (ಇಂತಹ ದುಷ್ಟಕಾಮಕ್ಕೆ ಕಾಲನೇಮಿ ಎಂಬ ಅಸುರನೇ ಅಭಿಮಾನಿಯು.)

**ಧೂಮೇನಾವ್ರಿಯತೇ ವಹ್ನಿರ್ಯಥಾಽಽದರ್ಶೋ ಮಲೇನ ಚ**

**ಯಥೋಲ್ಬೇನಾವೃತೋ ಗರ್ಭಸ್ತಥಾ ತೇ ನೇದಮಾವೃತಂ॥3-38॥**

38.ಪಾಪಕರ್ಮಪ್ರವರ್ತಕ ಕ್ರೋಧಾದಿಗಳಿಗಿಂತಲೂ ಕಾಮವು ಪ್ರಬಲ ಎಂಬುದನ್ನು ಉದಾಹರಣೆಗಳಿಂದ ವಿವರಿಸುತ್ತಾನೆ:- ಇದಂ=ಜೀವಸಮೂಹವು. ಅದು ಉತ್ತಮ-ಮಧ್ಯಮ-ಅಧಮ ಎಂಬುದಾಗಿ ಮೂರು ಬಗೆಯಾಗಿರುವುದು. ಏವಂಚ ಧೂಮದಿಂದ (ಹೊಗೆಯಿಂದ) ಅಗ್ನಿಯು (ಬೆಂಕಿ) ಆವರಿಸಲ್ಪಡುವಂತೆ ಈ ಉತ್ತಮ ಜೀವಸಂಘವು ಕಾಮದಿಂದ ಸ್ವಲ್ಪವಾಗಿ ಆವರಿಸಲ್ಪಡುವುದು. ಕನ್ನಡಿಯು ಕೊಳೆಯಿಂದ ಅತಿಯಾಗಿ ಮುಚ್ಚಲ್ಪಡುವಂತೆ ಮಧ್ಯಮ ಜೀವಸಮೂಹವು ಈ ಕಾಮದಿಂದ ಅತಿಯಾಗಿ ಆವರಿಸಲ್ಪಡುವುದು. ಗರ್ಭವು ತನಗೆ ಹೊದಿಕೆಯಾಗಿರುವ ಚರ್ಮದಿಂದ ಅತ್ಯಂತವಾಗಿ ಆವರಿಸಲ್ಪಡುವಂತೆ ಅಧಮ ಜೀವ

ಸಮುದಾಯವು ಕಾಮದಿಂದ ಅತ್ಯಂತವಾಗಿ ಆವರಿಸಲ್ಪಟ್ಟಿರುವುದು. ಹೀಗೆ ಕಾಮವು ತ್ರಿವಿಧ ಜೀವರಿಗೂ ಅವರವರ ಯೋಗ್ಯತಾನುಸಾರವಾಗಿ ಪರಾಪರ ತತ್ವಜ್ಞಾನ ಪ್ರತಿಬಂಧಕವಾಗಿರುವುದು. ಅಥವಾ ಇದಂ=ಈಶ್ವರ, ಮನಸ್ಸು, ಜೀವ ಎಂದು ಮೂರು ವಸ್ತುಗಳು ಎಂದರ್ಥವು ಈ ಪಕ್ಷದಲ್ಲಿ ಶ್ಲೋಕಾರ್ಥವನ್ನು ಹೀಗೆ ತಿಳಿಯಬೇಕು:- ಕಾಮವು ಈಶ್ವರ, ಮನಸ್ಸು, ಜೀವ ಎಂಬ ಮೂರು ವಸ್ತುಗಳಿಗೂ ಆವರಕವಾಗಿರುವುದರಿಂದ ಮೋಕ್ಷವಿರೋಧಿಯು. ಹೇಗೆಂದರೆ ಅಗ್ನಿಯು ಸ್ವತಃ ಪ್ರಕಾಶ ಸ್ವರೂಪವಾದರೂ ಧೂಮದಿಂದ ಮುಚ್ಚಲ್ಪಟ್ಟರೆ ಅದನ್ನು ಇತರರು ಹೇಗೆ ತಿಳಿದುಕೊಳ್ಳಲಾಗುವುದಿಲ್ಲವೋ ಅದರಂತೆ ಈಶ್ವರನು ಸರ್ವಜ್ಞನಾದರೂ ಜೀವರ ಕಾಮದಿಂದ ಆವರಿಸಲ್ಪಟ್ಟರೆ ಜೀವರು ಅವನನ್ನು ತಿಳಿಯಲಾರರು. ಕನ್ನಡಿಯು ಧೂಳಿನಿಂದ ಮುಚ್ಚಲ್ಪಟ್ಟರೆ ಅದರಲ್ಲಿ ಮುಖಾದಿಗಳು ಕಾಣಿಸದಿರುವಂತೆ ಜೀವನ ಮನಸ್ಸು ಕಾಮೋಪಹತವಾದರೆ ಅದು ಜೀವ-ಪರಮಾತ್ಮರ ಸ್ವರೂಪವನ್ನು ವ್ಯಕ್ತಮಾಡಲಾರದು. ಗರ್ಭವು ಚರ್ಮದ ಚೀಲದಲ್ಲಿ ಕಟ್ಟಲ್ಪಟ್ಟಾಗ ಹೇಗೆ ಸ್ವಚ್ಛಂದವಾಗಿ ಚಲಿಸಲಾರದೋ ಹಾಗೆಯೇ ಜೀವನು ಕಾಮಬದ್ಧನಾದರೆ ಈಶ್ವರನ ಜ್ಞಾನವನ್ನು ಸಂಪಾದಿಸಲಾರನು. ಮೋಹದಿಂದ ವಿಷಯಲಂಪಟನಾಗಿ ಕ್ಲೇಶವನ್ನು ಅನುಭವಿಸುತ್ತಿರುವನು.

**ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ**
**ಕಾಮರೂಪೇಣ ಕೌಂತೇಯ ದುಷ್ಪೂರೇಣಾನಲೇನ ಚ॥3-39॥**

39. ಕಾಮವು ಅಜ್ಞನಿಗೆ ಮನಸ್ಸನ್ನು ವಿಷಯಲಂಪಟವನ್ನಾಗಿ ಮಾಡಿ ಈಶ್ವರನ ಜ್ಞಾನವಾಗದಂತೆ ತಡೆಯುವುದರಿಂದ ಅದು ಅವನಿಗೆ ಶತ್ರುವಾಗಲಿ. ಶಾಸ್ತ್ರಾಭ್ಯಾಸದಿಂದ ಈಶ್ವರ ಜ್ಞಾನವನ್ನು ಸಂಪಾದಿಸಿದ ಪರೋಕ್ಷಜ್ಞಾನಿಗೆ ಕಾಮವು ಏನುಮಾಡೀತು ಎಂದರೆ, ಹೇಳುತ್ತಾನೆ:- ಕುಂತೀಪುತ್ರ! ಶಾಸ್ತ್ರಜನಿತಜ್ಞಾನವಂತನಿಗೂ ಕಾಮವು ಶತ್ರುವೇ ಸರಿ. ಅಂತಹವನ ಜ್ಞಾನವೂ ಕಾಮದಿಂದಾವರಿಸಲ್ಪಟ್ಟುದೇ ಆದರೆ ಅದು ಆ ಅಪರೋಕ್ಷಜ್ಞಾನಕ್ಕೆ ಸಾಧಕವಾಗದೆ ಪ್ರತಿಬಂಧಕವೇ ಆಗುತದೆ. ಹೀಗೆ ಕಾಮವೆಂಬುದು ಸರ್ವದಾ ಅಪಕಾರಿಯು. ಅಪೇಕ್ಷಿತ ಭೋಗ್ಯ ವಿಷಯಗಳನ್ನೊದಗಿಸಿ ಪೂರ್ಣಗೊಳಿಸಲಶಕ್ಯವಾದುದು. ಮತ್ತು ಎಷ್ಟೇ ಭೋಗ್ಯ ವಿಷಯಗಳು ದೊರೆತರೂ ತೃಪ್ತಿ ಪಡತಕ್ಕುದೂ ಅಲ್ಲ. (ಕಾಮವು ಅಜ್ಞಾನಿಗೆ ಜ್ಞಾನೋತ್ಪತ್ತಿಯನ್ನೂ, ಪರೋಕ್ಷಜ್ಞಾನಿಗೆ ಸಾಕ್ಷಾತ್ಕಾರವನ್ನೂ ತಡೆಯುವ ಕಾರಣ ಇದು ಸರ್ವದಾ ಶತ್ರುವು. ಮಹಾಪ್ರಯಾಸದಿಂದ ಇದನ್ನು ಜಯಿಸಬೇಕೆಂದು ಅಭಿಪ್ರಾಯ.)

**ಇಂದ್ರಿಯಾಣಿ ಮನೋ ಬುದ್ಧಿರಸ್ಯಾಧಿಷ್ಠಾನಮುಚ್ಯತೇ**

**ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಂ ॥3-40॥**

**40.** ಇಂತಹ ಕಾಮವೆಂಬ ಪ್ರಬಲಶತ್ರುವನ್ನು ಸಂಹರಿಸುವುದಕ್ಕಾಗಿ ಅದರ ಆಶ್ರಯವನ್ನು ಹೇಳುತ್ತಾನೆ:- ಈ ಕಾಮವೆಂಬ ಶತ್ರುವಿಗೆ ಚಕ್ಷುರಾದಿ ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ ಇವುಗಳೇ ಆಶ್ರಯಗಳು. ವಿಷಯಾಸಕ್ತಗಳಾದ ಈ ಮನೋಬುದ್ಧೀಂದ್ರಿಯಗಳಿಂದ ಈ ಕಾಮವು ಅಜ್ಞಾನಿಗೆ ಈಶ್ವರ ಜ್ಞಾನವೇ ಹುಟ್ಟದಂತೆಯೂ, ಶಾಸ್ತ್ರದಿಂದ ಈಶ್ವರನನ್ನು ತಿಳಿದ ಪರೋಕ್ಷಜ್ಞಾನಿಗೆ ಅವನ ದರ್ಶನವಾಗದಂತೆ ಮಾಡಿ ಜೀವನನ್ನು ಮೋಹಗೊಳಿಸುತ್ತದೆ. ಆದುದರಿಂದ ಕಾಮವನ್ನು ನಿಗ್ರಹಿಸುವ ಯತ್ನ ಮಾಡಬೇಕು.

**ತಸ್ಮಾತ್ ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ**

**ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ॥3-41॥**

**41.** ಈಗ ಕಾಮಜಯಪ್ರಕಾರವನ್ನು ಹೇಳುತ್ತಾನೆ:- ಭರತರ್ಷಭ! ಕಾಮವು ಇಂದ್ರಿಯಾದಿಗಳನ್ನೇ ಆಶ್ರಯಿಸಿಕೊಂಡಿರುವುದರಿಂದ ನೀನು ಮೊದಲು ಇಂದ್ರಿಯ-ಮನೋಬುದ್ಧಿಗಳನ್ನು ಸ್ವಾಧೀನದಲ್ಲಿಟ್ಟುಕೋ! ಎಂದರೆ, ಇಂದ್ರಿಯಗಳಿಗೆ ವಿಷಯಸಂಪರ್ಕವಾಗದಂತೆಯೇ ತಡೆಯುವುದರಿಂದ, ಒಂದುವೇಳೆ ಸಂಪರ್ಕವಾದರೂ ಮನೋಬುದ್ಧಿಗಳು ವಿಷಯದಲ್ಲಿ ಪ್ರವರ್ತಿಸದಂತೆ ಮಾಡುವುದರಿಂದಲಾದರೂ ಅಥವಾ ಅವುಗಳಿಗೆ ವಿಷಯಸಂಪರ್ಕವಾದರೂ ಅದರಿಂದ ಹಿಗ್ಗಿ ನಲಿಯದೆ ಕುಗ್ಗಿ ದುಃಖಿಸದೆ ಇರುವಂತಹ ಧೈರ್ಯದಿಂದಲಾದರೂ, ಪರೋಕ್ಷಾ ಪರೋಕ್ಷ ಜ್ಞಾನಗಳಿಗೆ ನಾಶಕರವೂ ಪಾಪಸಾಧನವೂ ಆದ ಈ ಕಾಮವೆಂಬ ಶತ್ರುವನ್ನು ಹತಮಾಡು! ಲೋಕದಲ್ಲಿಯೂ ಆಶ್ರಯವನ್ನು ತಪ್ಪಿಸಿದರೆ ಶತ್ರುನಾಶವಾಗುವುದು ಪ್ರಸಿದ್ಧವಾಗಿದೆಯೆಂಬ ಅಂಶವನ್ನು 'ಹಿ' ಶಬ್ದವು ತಿಳಿಸುತ್ತದೆ. ಏವಂಚ ಕಾಮ ಜಯಕ್ಕೆ ಇಂದ್ರಿಯಜಯವೇ ಉಪಾಯವೆಂದು ಅಭಿಪ್ರಾಯ.

**ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ**

**ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ॥3-42॥**

**ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ**

**ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ॥3-43॥**

**42.-43.**ಇಂದ್ರಿಯ ಮನೋಬುದ್ಧಿಗಳ ಜಯವೇ ಕಾಮನಿಗ್ರಹೋಪಾಯ ಎಂದು ಉಕ್ತವಾಯಿತು. ಆದರೆ ಈ ಉಪಾಯದಿಂದ ಕಾಮವು ನಿಃಶೇಷವಾಗಿ ಹೋಗುವುದಿಲ್ಲ. ಆಶ್ರಯವನ್ನು ನಾಶಪಡಿಸಿದುದರಿಂದ ಸ್ಥೂಲಕಾಮವು ನಷ್ಟವಾದರೂ ಸೂಕ್ಷ್ಮವಾಗಿ ಉಳಿದೇ ಇರುವುದು. ಆದಕಾರಣ ಸೂಕ್ಷ್ಮ ಕಾಮವನ್ನು ಕಳೆದುಕೊಳ್ಳುವ ಉಪಾಯವನ್ನು ಎರಡು ಶ್ಲೋಕಗಳಿಂದ ವಿವರಿಸುತ್ತಾನೆ:- ಆಶ್ರಯ ನಿರೋಧದಿಂದ ಸ್ಥೂಲಕಾಮವನ್ನು ಜಯಿಸಿ ಚೇತನಾ ಚೇತನಾತ್ಮಕ ಪ್ರಪಂಚದಿಂದ ಮೊದಲು ಮಾಡಿ ಪರಮಾತ್ಮನ ಪರ್ಯಂತವಾಗಿ ತಾರತಮ್ಯವನ್ನು ತಿಳಿದು, ಪರಮಾತ್ಮನೇ ಸರ್ವೋತ್ತಮನೆಂದರಿತು ಅದರಿಂದ ಕಾಮವನ್ನು ಇನ್ನೂ ಹೆಚ್ಚಾಗಿ ದೂರಮಾಡಿ, ಭಗವಂತನ ಸಾಕ್ಷಾತ್ಕಾರದಿಂದ ಕಾಮವನ್ನು ನಿರ್ಮೂಲವಾಗಿ ನಾಶಪಡಿಸಬೇಕೆಂಬ ಅಭಿಪ್ರಾಯದಿಂದ ತಾರತಮ್ಯವು ಈ ಶ್ಲೋಕದಲ್ಲಿ ವಿವರಿಸಲ್ಪಟ್ಟಿದೆ. ಕಾಠಕೋಪನಿಷತ್ತಿನಲ್ಲಿ ಹೇಳಿರುವ ತಾರತಮ್ಯವೇ ಈ ಗೀತೆಯಲ್ಲಿ ಸಂಗ್ರಹಿಸಲ್ಪಟ್ಟಿದೆ. ಆದರೆ ಉಪನಿಷದ ಕೆಲವು ಅಂಶವು ಗೀತೆಯಲ್ಲಿ ಬಿಟ್ಟು ಹೋಗಿರುವುದರಿಂದ ಆ ಭಾಗವನ್ನೂ ಇಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕು. ಹೇಗೆಂದರೆ:- ಇಲ್ಲಿ 'ಇಂದ್ರಿಯೇಭ್ಯಃ' ಎಂಬುದರ ಮುಂದೆ 'ಪರಾಹ್ಯರ್ಥಾಃ ಅರ್ಥೇಭ್ಯಶ್ಚ' ಎಂಬುದಾಗಿಯೂ, 'ಯೋ ಬುದ್ಧೇಃ ಪರತಸ್ತು ಸಃ' ಎಂಬಲ್ಲಿನ 'ಬುದ್ಧೇಃ' ಎಂಬುದರ ಮುಂದೆ 'ಆತ್ಮಾ ಮಹಾನ್ ಪರಃ ಮಹತಃ ಪರಮವ್ಯಕ್ತಂ ಯೋಽವ್ಯಕ್ತಾತ್ಪರತಸ್ತು ಸಃ' ಎಂಬುದಾಗಿಯೂ ಅಧ್ಯಾಹಾರಮಾಡಿ ಗೀತೋಪನಿಷತ್ತುಗಳ ಸಾಮರಸ್ಯವನ್ನು ತಿಳಿಯಬೇಕು. ಈ ಶ್ಲೋಕದಲ್ಲಿನ ಪ್ರತಿ ಇಂದ್ರಿಯಾದಿ ಪದಗಳಿಗೆ ಜಡೇಂದ್ರಿಯಾದಿಗಳು ಮತ್ತು ಅವುಗಳ ಅಭಿಮಾನಿ ಚೇತನರೂ ಅರ್ಥವು. ಇದರಿಂದ ಜಡಗಳ ತಾರತಮ್ಯ ಚೇತನರ ತಾರತಮ್ಯ, ಈ ಎಲ್ಲಕ್ಕೂ ಪರಮಾತ್ಮನೇ ಉತ್ತಮನೆಂಬ ಅರ್ಥವು ಲಭಿಸುತ್ತದೆ. ಹೇಗೆಂದರೆ:- ಶರೀರ ಮತ್ತು ವಿಷಯಗಳಿಗಿಂತಲೂ ಅವುಗಳನ್ನು ಗ್ರಹಿಸುವಂತಹ ಇಂದ್ರಿಯಗಳು ಉತ್ತಮಗಳು. ಇಂದ್ರಿಯಗಳಿಗಿಂತಲೂ ಮನಸ್ಸು ಉತ್ತಮವು. ಮನಸ್ಸಿಗಿಂತಲೂ ನಿಶ್ಚಯ ಜನಕವಾದ ಬುದ್ಧಿಯು ಉತ್ತಮವು. ಬುದ್ಧಿಗಿಂತಲೂ ಅದಕ್ಕೆ ಗೋಚರನಾಗದ ಪರಮಾತ್ಮನೇ ಶ್ರೇಷ್ಠನು ಎಂದು ಜಡಪರವಾದ ಅರ್ಥ. ಮೇಲ್ಕಂಡ ಅಧ್ಯಾಹಾರಸಹಿತವಾಗಿ ಚೇತನಾಚೇತನಾರ್ಥವನ್ನು ಗ್ರಹಿಸಬೇಕು. ಶರೀರಾಭಿಮಾನಿಯಾದ ಆತ್ಮನಿಗಿಂತಲೂ [1]ಇಂದ್ರಿಯಾಭಿಮಾನಿ ದೇವತೆಗಳು ಉತ್ತಮರು. ಇವರಿಗಿಂತಲೂ ಶಬ್ದ, ಸ್ಪರ್ಶ, ರೂಪ, ರಸ, ಗಂಧವೆಂಬ ಪಂಚವಿಷಯಗಳಿಗೆ ಅಭಿಮಾನಿಗಳಾದ [2]ಸೌಪರ್ಣಿ, ವಾರುಣಿ, ಉಮೆ ಈ ದೇವತೆಗಳು ಶ್ರೇಷ್ಠರು. ಇವರಿಗಿಂತಲೂ ಮನಸ್ಸಿಗೆ ಅಭಿಮಾನಿಗಳಾದ ಶೇಷ, ಗರುಡ, ರುದ್ರರು ಉತ್ತಮರು. ಇವರಿಗಿಂತಲೂ ಬುದ್ಧ್ಯಭಿಮಾನಿಯಾದ ಸ್ವರಸ್ವತಿಯು ಶ್ರೇಷ್ಠಳು. ಈ ದೇವಿಗಿಂತಲೂ

ಮಹತ್ತತ್ತ್ವಾಭಿಮಾನಿಯಾದ ಚತುರ್ಮುಖನು ಉತ್ತಮನು. ಅವನಿಗಿಂತಲೂ ಅವ್ಯಕ್ತ=ಮೂಲಪ್ರಕೃತಿಯ ಅಭಿಮಾನಿಯಾದ ರಮಾದೇವಿಯು ಶ್ರೇಷ್ಠಳು. ಈ ದೇವಿಗಿಂತಲೂ ಪುರುಷೋತ್ತಮನಾದ ಶ್ರೀ ನಾರಾಯಣನು ಉತ್ತಮನು ಎಂಬುದಾಗಿ ಚೇತನ ತಾರತಮ್ಯವು. ಹೀಗೆ ತಾರತಮ್ಯೋಪೇತವಾದ ಚೇತನಾ ಚೇತನಾತ್ಮಕ ಪ್ರಪಂಚಕ್ಕೆಲ್ಲಾ ನಾರಾಯಣನೇ ನಿಯಾಮಕನು; ಅವನೇ ಸರ್ವೋತ್ತಮನು, ಸ್ವತಂತ್ರನೂ ಆಗಿರುವನೆಂದು ತಿಳಿದು ಉಪಾಸನೆ ಮಾಡಿ ಅವನನ್ನು ಸಾಕ್ಷಾತ್ಕರಿಸಿಕೊಂಡು ಬುದ್ಧಿಯಿಂದ ಮನಸ್ಸನ್ನು ಕಾಮಾದಿಗಳಿಂದ ವಿಕಾರಗೊಳ್ಳದೆ ನಿಶ್ಚಲವನ್ನಾಗಿ ಮಾಡಿ, ಕಷ್ಟದಿಂದ ನಾಶಮಾಡಬೇಕಾಗಿರುವ ಕಾಮವೆಂಬ ಶತ್ರುವನ್ನು ಹತಮಾಡು! ಅರ್ಜುನ! ನೀನು ಮಹಾಪರಾಕ್ರಮಶಾಲಿಯು, ಇತರರಿಗೆ ಜಯಿಸಲು ಅಶಕ್ಯವಾದ ಇಂತಹ ಕಾಮಾದಿಗಳನ್ನು ಜಯಿಸಲು ನೀನು ಸಮರ್ಥನಾಗಿರುವೆ. ನಿಷ್ಕಾಮ ಕರ್ಮಾಚರಣೆಯೆಂಬ ಕರ್ಮಯೋಗವು ಸಿದ್ಧಿಸುವುದಕ್ಕಾಗಿ ಕಾಮವನ್ನು ಪರಿಹರಿಸಿಕೊಳ್ಳಬೇಕು. ಅದಕ್ಕಾಗಿ ಕಾಮಾಧಿಷ್ಠಾನವಾದ ಇಂದ್ರಿಯಗಳನ್ನು ವಿಷಯಗಳಿಂದ ದೂರಮಾಡಿ, ಒಂದು ವೇಳೆ ವಿಷಯಸಂಪರ್ಕವಾದರೂ ಮನಸ್ಸು ವಿಕಾರವಾಗದಂತೆ ಮಾಡಿ ಸ್ಥೂಲಕಾಮವನ್ನು ಜಯಿಸಬೇಕು. ಹೀಗೆ ಜಿತಕಾಮನಾದ ಬಳಿಕ ಕರ್ಮಯೋಗವನ್ನಾಚರಿಸಿ ಶುದ್ಧಾಂತಃಕರಣನಾಗಿ ಶಾಸ್ತ್ರಾಭ್ಯಾಸಾದಿಗಳಿಂದ ಭಗವಂತನ ಮಹಿಮೆಯನ್ನು ಪರೋಕ್ಷವಾಗಿ ತಿಳಿದು ಧ್ಯಾನ ಮಾಡುವುದರಿಂದ ಅಪರೋಕ್ಷಜ್ಞಾನವನ್ನು ಹೊಂದಿ ಅದರಿಂದ ಕಾಮವನ್ನು ನಿರ್ಮೂಲವಾಗಿ ಪರಿಹರಿಸಿಕೊಂಡು ಭಗವಂತನ ಅನುಗ್ರಹದಿಂದ ಮುಕ್ತನಾಗಬಹುದು. ಆದಕಾರಣ ಅರ್ಜುನ! ನೀನೀಗ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಸ್ಥೂಲಕಾಮಾದಿಗಳನ್ನು ದೂರಮಾಡಿ, ನಿಷ್ಕಾಮನಾಗಿ ನಿನಗೆ ವಿಹಿತವಾದ ಯುದ್ಧಕರ್ಮವನ್ನು ಮಾಡು, ಅದರಿಂದ ನಿನಗೆ ಮಂಗಳವಾಗುವುದು ಎಂಬುದಾಗಿ ಶ್ರೀಕೃಷ್ಣನು ಪಾರ್ಥನಿಗೆ ಉಪದೇಶಮಾಡಿದನೆಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದನು.

1 ಶ್ರೂತ್ರ, ತ್ವಕ್ಕು, ಚಕ್ಷುಸ್ಸು, ರಸನ, ಘ್ರಾಣ ಎಂಬ ಪಂಚಜ್ಞಾನೇಂದ್ರಿಯಗಳಿಗೆ ಕ್ರಮವಾಗಿ ಸೋಮ, ಕುಬೇರ, ಸೂರ್ಯ, ವರುಣ, ಅಶ್ವಿನೀದೇವತೆಗಳು ಅಭಿಮಾನಿಗಳು, ವಾಕ್, ಪಾಣಿ, ಪಾದ, ಪಾಯು, ಗುಹ್ಯ ಎಂಬ ಐದು ಕರ್ಮೇಂದ್ರಿಯಗಳಿಗೆ ಕ್ರಮವಾಗಿ ಅಗ್ನಿ, ಇಂದ್ರ, ಜಯಂತ, ಯಮ, ದಕ್ಷ ಈ ದೇವತೆಗಳು ಅಭಿಮಾನಿಗಳು.

2 ಶಬ್ದ-ಸ್ಪರ್ಶಗಳಿಗೆ ಸೌಪರ್ಣಿಯೂ, ರೂಪ-ರಸಗಳಿಗೆ ವಾರುಣಿಯೂ, ಗಂಧಕ್ಕೆ ಉಮಾದೇವಿಯೂ ಅಭಿಮಾನಿಗಳೆಂದು ವಿವೇಚನೆ ಮಾಡಿಕೊಳ್ಳಬೇಕು.

**ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ತು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ - ಶ್ರೀಕೃಷ್ಣಾರ್ಜುನಸಂವಾದೇ ಕರ್ಮಯೋಗೋ ನಾಮತೃತೀಯೋಽಧ್ಯಾಯಃ॥3-[43]॥**

## ಚತುರ್ಥೋಽಧ್ಯಾಯಃ॥4-[42]॥

'ಪೂರ್ವಾಧ್ಯಾಯದಲ್ಲಿ ನಿಯತಂ ಕುರು ಕರ್ಮ ತ್ವಂ' 8. ಇತ್ಯಾದಿ ಗ್ರಂಥದಿಂದ ಸ್ವಲ್ಪವಾಗಿ ವಿವರಿಸಲ್ಪಟ್ಟ ನಿವೃತ್ತಕರ್ಮವನ್ನು ಮತ್ತು 'ಯೋ ಬುದ್ಧೇಃ ಪರ ತಸ್ತು ಸಃ 42. ಇತ್ಯಾದಿಗಳಿಂದ ಉಕ್ತವಾದ ವಿಷ್ಣುವಿನ ಮಹಿಮೆಗಳನ್ನೂ ಈ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸುತ್ತಾನೆ. 15ನೆಯ ಶ್ಲೋಕದವರೆಗೆ ವಿಷ್ಣುಮಹಿಮೆ. 15-33ನೆಯ ಶ್ಲೋಕಗಳವರೆಗಿನ ಗ್ರಂಥದಿಂದ ನಿವೃತ್ತ ಕರ್ಮವು ಇದರ ವಿಲಕ್ಷಣವು. ಅದರಲ್ಲಿಯೇ ಉಪಾಸನೆ, ಯಜ್ಞ ಮೊದಲಾದ ಒಳಪ್ರಭೇದಗಳು ಮುಂತಾಗಿ ಕರ್ಮವಿಸ್ತಾರ. ಉಳಿದ ಗ್ರಂಥದಿಂದ ಜ್ಞಾನದ ಮಹಿಮೆಯು ಉಕ್ತವಾಗಿದೆಯೆಂದು ವಿಷಯ ವಿವೇಚನೆಯು.

ಶ್ರೀಭಗವಾನುವಾಚ

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಂ
ವಿವಸ್ವಾನ್ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್॥4-1॥

ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ॥4-2॥

ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ
ಭಕ್ತೋಽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಮ್॥4-3॥

1-3. ನಿವೃತ್ತ ಕರ್ಮವೆಂಬ ಜ್ಞಾನೋಪಾಯವು ಅವಶ್ಯಕರ್ತವ್ಯವೆಂದು ಹಿಂದೆ ಹೇಳಿದೆ. ಆದರೂ ತಿರುಗಿ ನಿವೃತ್ತಕರ್ಮಾಚರಣೆಯಲ್ಲಿ ವಿಶ್ವಾಸವುಂಟು ಮಾಡುವುದಕ್ಕಾಗಿ ಪೂರ್ವಿಕರು ಈ ಧರ್ಮವನ್ನಾಚರಿಸಿರುವರೆಂದು ಶ್ರೀಕೃಷ್ಣಭಗವಂತನು ಮೂರು ಶ್ಲೋಕಗಳಿಂದ ಹೇಳುತ್ತಾನೆ:- ಶಾಶ್ವತಫಲವಾದ ಮೋಕ್ಷವನ್ನು ಕೊಡುವಂತಹ ನಿವೃತ್ತಕರ್ಮ(ಫಲಾಪೇಕ್ಷೆಯಿಲ್ಲದೆ ಈಶ್ವರನ ಪೂಜೆಯೆಂಬ ಭಾವನೆಯಿಂದ ಮಾಡುವ ಕರ್ಮ)ವೆಂಬ ಜ್ಞಾನೋಪಾಯವನ್ನು ಸೂರ್ಯನಿಗೆ ನಾನು ಉಪದೇಶ ಮಾಡಿದೆನು. ಅವನು ತನ್ನ ಮಗನಾದ ವೈವಸ್ವತಮನುವಿಗೆ ಹೇಳಿದನು. ಆ ಮನುವು ತನ್ನ ಮಗನಾದ ಇಕ್ಷ್ವಾಕುರಾಜನಿಗೆ ಉಪದೇಶಿಸಿದನು. ಅವರೆಲ್ಲರು ಸ್ವತಃ ಈ ಕರ್ಮಯೋಗವನ್ನು ಆಚರಿಸಿದರು. ಈ ರೀತಿಯಾಗಿ ಪರಂಪರಾಪ್ರಾಪ್ತವಾದ ಈ ಕರ್ಮಯೋಗವನ್ನು ನಿಮಿ ಮೊದಲಾದ ರಾಜಶ್ರೇಷ್ಠರೂ ಮತ್ತು ಋಷಿಗಳೂ ಇಕ್ಷ್ವಾಕು ಮುಂತಾದವರಿಂದ ತಿಳಿದು ಆಚರಿಸುತ್ತ ಇತರರಿಗೂ ಉಪದೇಶ ಮಾಡುತ್ತ ಬಂದರು. ಶತ್ರುಸಂಹಾರಕನಾದ ಅರ್ಜುನ! ಅಂತಹ ಯೋಗವು ಬಹು

ಕಾಲವಾದುದರಿಂದ ಈ ಲೋಕದಲ್ಲಿ ನಷ್ಟವಾಯಿತು. ಈ ಯೋಗವು ಉತ್ತಮ ರಹಸ್ಯವಾದುದು. ಅನರ್ಹರಿಗೆ ಉಪದೇಶಿಸತಕ್ಕುದಲ್ಲ. ನನಗೆ ನೀನು ಭಕ್ತನು ಮತ್ತು ಸ್ನೇಹಿತನೂ ಆಗಿರುವುದರಿಂದ ಪುರಾತನವಾದ ಈ ಕರ್ಮಯೋಗವನ್ನೇ ನಾನೀಗ ನಿನಗೆ ಉಪದೇಶಿಸಿರುವೆನು.

ಅರ್ಜುನ ಉವಾಚ

**ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ**

**ಕಥಮೇತದ್ವಿಜಾನೀಯಾಂ ತ್ವಮಾದೌ ಪ್ರೋಕ್ತಾನಿತಿ॥4-4॥**

4. ಅರ್ಜುನನು ಪ್ರಶ್ನೆ ಮಾಡುತ್ತಾನೆ:- ಕೃಷ್ಣ! ಸೃಷ್ಟ್ಯಾದಿಯಲ್ಲಿಯೇ ಸೂರ್ಯನು ಹುಟ್ಟಿದನು. ನೀನಾದರೋ ಈಚೆಗೆ ಹುಟ್ಟಿದವನು. ಇಂತಹ ನೀನು ಪೂರ್ವಿಕನಾದ ಸೂರ್ಯನಿಗೆ ಉಪದೇಶ ಮಾಡಿರುವೆಯೆಂಬುದನ್ನು ನಿಜವೆಂದು ನಾನು ಹೇಗೆ ತಿಳಿಯಲಿ? (ಇದು ನಂಬುವುದಕ್ಕೆ ಅರ್ಹವಲ್ಲವೆಂದು ಪಾರ್ಥನು ಪ್ರಶ್ನೆ ಮಾಡಿದುದಾಗಿ ಈ ಶ್ಲೋಕಾಶಯವು ತೋರುತ್ತದೆ. ಆದರೆ 'ನ ತ್ವೈವಾಹಂ 2-12. ಇತ್ಯಾದಿ ಹಿಂದಿನ ಗ್ರಂಥದಿಂದ ಕೃಷ್ಣನಿಗೆ ಸರ್ವಪ್ರಕಾರದಿಂದಲೂ ಜನನ ಮರಣಗಳಿಲ್ಲವೆಂದು ಉಕ್ತವಾದುದನ್ನು ಕೇಳಿರುವ ಅರ್ಜುನನು 'ನೀನು ಈಚೆಗೆ ಹುಟ್ಟಿದವನು' ಮುಂತಾಗಿ ಪ್ರಶ್ನೆಮಾಡುವುದು ಅಸಂಬದ್ಧವಾಗುವುದು. ಆದಕಾರಣ ಶ್ರೀಕೃಷ್ಣನ ಉತ್ತರವನ್ನು ಪರಿಶೀಲಿಸಿ ಅದಕ್ಕನುಗುಣವಾಗಿ ಈ ಪ್ರಶ್ನವಾಕ್ಯದ ಅಭಿಪ್ರಾಯವನ್ನು ನಿರ್ಧರಿಸಬೇಕು. ಹೇಗೆಂದರೆ :- 'ಮಯಿ ಸರ್ವಾಣಿ' 3-30 ಎಂಬಲ್ಲಿ ಹರಿಯು ಪೂಜ್ಯನು, ಸ್ವತಂತ್ರನು; ಅರ್ಜುನಾದಿಗಳು ಪೂಜಕರು, ಪರಾಧೀನಕರ್ತರು ಎಂದು ಹೇಳಿದೆ. ಅದರಿಂದ ಸಿದ್ಧವಾದ ಜೀವೇಶ್ವರಭೇದವನ್ನು ಪ್ರಮಾಣಗಳಿಂದ ದೃಢಪಡಿಸಿಕೊಳ್ಳಲು ಅರ್ಜುನನು ಈ ಪ್ರಶ್ನೆ ಮಾಡಿರುವನು. ಜೀವೇಶ್ವರ ವೈಲಕ್ಷಣ್ಯ ಜ್ಞಾನದ್ವಾರಾ ಭಗವಂತನ ಮಹಿಮೆಯೇ ಪ್ರಶ್ನೆಯ ವಿಷಯವು. ಆದುದರಿಂದಲೇ ಉತ್ತರ ಹೇಳುವಾಗ 'ತಾನ್ಯಹಂ ವೇದ' ಇತ್ಯಾದಿಗಳಿಂದ ಕೃಷ್ಣನ ಸರ್ವಜ್ಞತೆಯೂ, ಅರ್ಜುನನ ಅಲ್ಪಜ್ಞತೆಯೂ ಉಕ್ತವಾಗಿರುವುದು ಸಂಗತವಾಗುತ್ತದೆ. ಹೀಗೆ ಪ್ರಶ್ನಾಭಿಪ್ರಾಯವಿಲ್ಲದಿದ್ದರೆ ಉತ್ತರದಲ್ಲಿ ಆ ಭಾಗವು ವ್ಯರ್ಥವಾಗಬೇಕಾಗುವುದು. ಆದುದರಿಂದ ಉತ್ತರಾನುಸಾರವಾಗಿ ಪ್ರಶ್ನೆಯ ವಾಕ್ಯಕ್ಕೆ ಇದೇ ಅಭಿಪ್ರಾಯವೆಂದು ನಿರ್ಣಯಿಸಬೇಕು.)

ಶ್ರೀ ಭಗವಾನುವಾಚ

**ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ**

**ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ॥4-5॥**

5.ಈ ಪ್ರಶ್ನಾಭಿಪ್ರಾಯವನ್ನು ತಿಳಿದವನಾದ ಶ್ರೀಕೃಷ್ಣನು ಉತ್ತರ ಹೇಳುತ್ತಾನೆ:- ಅರ್ಜುನ! ನನಗೂ ನಿನಗೂ ಬಹುಜನ್ಮಗಳು ಕಳೆದುಹೋಗಿವೆ. ಆದರೆ ನಾನು ಆ ಜನ್ಮಗಳನ್ನು ತಿಳಿದಿರುವೆನು; ನೀನು ತಿಳಿದಿರುವುದಿಲ್ಲ. (ಇದರಲ್ಲಿ 'ನನಗೆ ಬಹುಜನ್ಮಗಳು ಕಳೆದು ಹೋಗಿವೆ. ಅವುಗಳ ಪೈಕಿ ಯಾವುದೋ ಒಂದು ಜನ್ಮದಲ್ಲಿ ನಾನೇ ಸೂರ್ಯನಿಗೆ ಉಪದೇಶಿಸಿರುವೆನು' ಎಂಬ ಮೊದಲನೆಯ ಪಾದಾಭಿಪ್ರಾಯವೇ 'ಈಚಿನವನಾದ ನೀನು ಪೂರ್ವಜನಾದ ಸೂರ್ಯನಿಗೆ ಹೇಗೆ ಉಪದೇಶ ಮಾಡಿದೆ' ಎಂಬ ಆಪಾತ ಪ್ರಶ್ನೆಗೆ ಸಮಂಜಸ ಉತ್ತರವಾಗುವುದು. ಭಗವಂತನಾದರೋ ಅಷ್ಟನ್ನೇ ಹೇಳಿ ಸುಮ್ಮನಿರದೆ 'ನಿನಗೂ ಬಹುಜನ್ಮಗಳು' ಮುಂತಾಗಿ ಮೂರು ಪಾದಗಳನ್ನೂ ಉತ್ತರದಲ್ಲಿ ಸೇರಿಸಿರುವನು. ಆದುದರಿಂದ ಮೇಲೆ ಹೇಳಿದಂತೆ ಜೀವೇಶ್ವರರ ವೈಲಕ್ಷಣ್ಯವನ್ನು ತಿಳಿಸುವುದರ ಮೂಲಕ ಭಗವಂತನ ಮಹಿಮೆಯೇ ಅರ್ಜುನನಿಂದ ಜಿಜ್ಞಾಸಿತವೆಂದು ಸ್ಪಷ್ಟ ಪಡುವುದು. ಅದಕ್ಕೆ ಉತ್ತರವಾದ ಈ ಶ್ಲೋಕದ ಅಭಿಪ್ರಾಯವೇನೆಂದರೆ:- ಇಲ್ಲಿ 'ಮೇ, ತವ' ಎಂಬ ಪದಗಳಿವೆ. ಮೇ=ಜೀವರಿಗೆ ಬಿಂಬರೂಪನಾಗಿ ಶರೀರದೊಳಗಿರುವ ಪ್ರತ್ಯಕ್ ಚೇತನ; ತವ=ಪ್ರತಿಬಿಂಬನಾಗಿ ಇದಿರಿಗಿರುವ ಪರಾಕ್-ಜೀವಚೇತನ ಎಂದರ್ಥ. ಇದರಿಂದ ಈಶ್ವರನ ಪ್ರತಿಬಿಂಬವೇ ಜೀವನೆಂದು ಉಕ್ತವಾಯಿತು. ಲೋಕದಲ್ಲಿ ಪ್ರತಿಬಿಂಬದ ಚಲನವಲನಗಳೆಲ್ಲವೂ ಹೇಗೆ ಬಿಂಬಚೇಷ್ಟಾಧೀನವಾಗಿರುವುದೋ ಅದರಂತೆಯೇ ಪ್ರತಿಬಿಂಬನಾದ ಜೀವನ ಸಕಲ ವ್ಯಾಪಾರಗಳೂ ಬಿಂಬನಾದ ಪರಮಾತ್ಮನ ಅಧೀನ ಎಂದು ಸಿದ್ಧಿಸುವುದರಿಂದ ಈಶ್ವರನು ನಿಯಾಮಕನು, ಜೀವನು ಅವನ ಅಧೀನನು ಎಂಬ ವೈಲಕ್ಷಣ್ಯವು ಸ್ಪಷ್ಟಪಡುವುದು. ಈ ಶ್ಲೋಕದ ಉತ್ತರಾರ್ಧದಿಂದ ಶ್ರೀಕೃಷ್ಣನು ಸರ್ವಜ್ಞನು, ಅರ್ಜುನ ಮುಂತಾದ ಜೀವರು ಅಲ್ಪಜ್ಞರು ಎಂಬ ವೈಲಕ್ಷಣ್ಯವು ವ್ಯಕ್ತವಾಗುತ್ತದೆ. ಹೀಗೆ ನಿಯಾಮಕತ್ವ-ನಿಯಮ್ಯತ್ವ, ಸರ್ವಜ್ಞತ್ವ-ಅಲ್ಪಜ್ಞತ್ವ ಮೊದಲಾದ ಅನೇಕ ವಿರುದ್ಧಧರ್ಮಗಳಿರುವುದರಿಂದ ಜೀವೇಶ್ವರರು ಅತ್ಯಂತ ಭಿನ್ನರೆಂದೂ, ಈಶ್ವರನು ಪೂಜ್ಯನು, ಪಾರ್ಥಾದಿ ಜೀವರು ಪೂಜಕರೆಂದೂ ಹಿಂದೆಯೇ ಹೇಳಿರುವುದನ್ನು ನಿರೂಪಿಸಿದಂತಾಗಿ ಭಗವನ್ಮಹಿಮೆಯ ಪ್ರಶ್ನೆಗೆ ಸಮಂಜಸವಾದ ಉತ್ತರವಾಗುವುದು.)

ಅಜೋಽಪಿಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್

ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ॥4-6॥

6. ಕೃಷ್ಣ! ನನ್ನಂತೆ ನಿನಗೂ ಬಹುಜನ್ಮಗಳು ಕಳೆದಿರುವುದಾದರೆ ನೀನು ಈಶ್ವರನು ಮತ್ತು ಜನನಮರಣ ರಹಿತನು ಎನ್ನುವುದಕ್ಕಾಗುವುದಿಲ್ಲ. ಎರಡನೆಯ ಅಧ್ಯಾಯದಲ್ಲಿ ನಿನಗೆ

ಜನನಮರಣಗಳಿಲ್ಲವೆಂದು ಹೇಳಿರುವುದೂ ವಿರುದ್ಧವಾಗುವುದೆಂದರೆ ಹೇಳುತ್ತಾನೆ:- ಪಾರ್ಥ! ನಾನು ದೇಹೋತ್ಪತ್ತಿರಹಿತನಾದರೂ, ನಾಶವಿಲ್ಲದ ಸ್ವರೂಪದೇಹಗಳುಳ್ಳವನಾದರೂ, ಬ್ರಹ್ಮಾದಿ ಸ್ಥಾವರಾಂತ ಪ್ರಾಣಿಗಳಿಗೆಲ್ಲಾ ಈಶ್ವರನಾಗಿದ್ದರೂ ಕೂಡ ಜನಿಸುವೆನು. ಸ್ವರೂಪ ಮತ್ತು ದೇಹಗಳೆರಡೂ ಉತ್ಪತ್ತಿನಾಶಶೂನ್ಯವಾಗಿರುವಾಗ ಜನಿಸುವ ಬಗೆ ಹೇಗೆಂದರೆ:- ಆತ್ಮ ಮಾಯಯಾ ಪ್ರಕೃತಿಂ ಸ್ವಾಮಧಿಷ್ಠಾಯ=ನನ್ನ ಇಚ್ಛೆಯಿಂದ ನನ್ನ ಅಧೀನವಾದ ಪ್ರಕೃತಿನಿರ್ಮಿತ ದೇಹವುಳ್ಳ ವಸುದೇವದೇವಕ್ಯಾದಿಗಳಲ್ಲಿ ಪ್ರವೇಶಮಾಡಿ ಆವಿರ್ಭವಿಸುತ್ತೇನೆ. ನನ್ನ ಅವತಾರರೂಪಗಳೂ ಅನಾದಿನಿತ್ಯಗಳು. ಆದರೆ ಅವೆಲ್ಲವೂ ಯಾವಾಗಲೂ ಜನರಿಗೆ ಕಾಣಿಸುವುದಿಲ್ಲ. ಬಹಿರಂಗವಾಗಿ ವ್ಯಕ್ತ ಪಡಿಸುವ ಅವಶ್ಯಕತೆಯು ತೋರಿ ನನ್ನ ಇಚ್ಛೆಯು ಬಂದಾಗ ಆಯಾ ಅವತಾರರೂಪಗಳನ್ನು ದೇವಕ್ಯಾದಿ ಸ್ಥಾನಗಳ ಮೂಲಕವಾಗಿ ಜನರಿಗೆ ಗೋಚರವಾಗುವಂತೆ ಬಹಿರಂಗಪಡಿಸುತ್ತೇನೆ, ಆಗ ಲೋಕವು ನನ್ನನ್ನು ಹುಟ್ಟಿದನೆಂದು ಭ್ರಾಂತಿಯಿಂದ ವ್ಯವಹರಿಸುವುದು, ಆ ರೂಪವನ್ನು ಕಾಣಿಸದಂತೆ ಮಾಡಿದಾಗ ಭ್ರಾಂತರಾಗಿ ಸತ್ತನೆಂದು ವ್ಯವಹರಿಸುವುದು, ಇದನ್ನು ಹೊರತು ಇತರ ಚೇತನರಂತೆ ದೇಹಯೋಗವಿಯೋಗರೂಪವಾದ ಜನನ ಮರಣಗಳು ನನಗಿಲ್ಲ. ಈ ರೀತಿ ಅವತಾರ ಮಾಡುವುದರಿಂದ ನಿನಗೆ ಪ್ರಯೋಜನವೇನೆಂದು ಕೇಳುವುದಾದರೆ ಅದಕ್ಕೂ 'ಸ್ವಾಂ ಪ್ರಕೃತಿಮಧಿಷ್ಠಾಯ' ಎಂಬುದೇ ಉತ್ತರವು. (ಈಗ ಪ್ರಕೃತಿ ಎಂದರೆ ಸ್ವಭಾವವೆಂದರ್ಥ) ಸ್ವೇಚ್ಛೆಯಿಂದ ಹೀಗೆ ಅವತರಿಸುವುದು ನನ್ನ ಸ್ವಭಾವವು. ಸ್ವಾಭಾವಿಕವಾಗಿ ನಡೆಯತಕ್ಕೆ ಕಾರ್ಯಗಳಿಗೆ ಪ್ರಯೋಜನೋದ್ದೇಶವಿಲ್ಲವೆಂದು ತಾತ್ಪರ್ಯ. ಹೀಗೆ ಭಗವಂತನ ಜನನಮರಣಗಳು ಇತರ ಜೀವರ ಜನನಮರಣಗಳಿಗಿಂತ ವಿಲಕ್ಷಣವು ಮತ್ತು ಸ್ವತಂತ್ರವೂ ಆಗಿರುವುದರಿಂದ ಅವನು ಪೂಜ್ಯನು, ಪರಾಧೀನರಾದ ಜೀವರು ಪೂಜಕರು ಮುಂತಾಗಿ ಪೂರ್ವೋಕ್ತ ಜೀವೇಶ್ವರ ಭೇದವು ನಿರೂಪಿತವಾಯಿತೆಂದು ತಿಳಿಯಬೇಕು.)

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ**

**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥4-7॥**

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ**

**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ॥4-8॥**

7-8 ಭಗವಂತನ ಜನ್ಮವು ಇತರ ವಿಲಕ್ಷಣವೇ ಸರಿ. ಅಂತಹ ಅವತಾರವನ್ನು ಭಗವಂತನು ಯಾವಾಗ ಮಾಡುವನೆಂದರೆ, ಹೇಳುತ್ತಾನೆ:- ಭರತಕುಲೋತ್ಪನ್ನನಾದ ಅರ್ಜುನ! ಯಾವಾಗ ವರ್ಣಾಶ್ರಮಧರ್ಮ ಹಾನಿಯ, ಅಧರ್ಮ ವೃದ್ಧಿಯೂ ಆಗುವುದೋ ಆಗ ನಾನು ಅವತರಿಸುವೆನು. ಅವತಾರಮಾಡುವುದರಿಂದ ನನಗೇನೂ ಪ್ರಯೋಜನವಿಲ್ಲ. ಆದರೂ ಭಕ್ತರಾದ ಸಾಧುಜನರ ರಕ್ಷಣೆ, ದುಷ್ಟರ ಶಿಕ್ಷಣೆ ಮತ್ತು ವರ್ಣಾಶ್ರಮಧರ್ಮಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಸ್ಥಾಪಿಸುವುದು ಇವುಗಳಿಗಾಗಿ, ಧರ್ಮಹಾನಿ ಮತ್ತು ಅಧರ್ಮವೃದ್ಧಿಯಾದಾಗಲೆಲ್ಲಾ ನಾನು ಅವತರಿಸುವೆನು. (ಭಗವಂತನು ಅವತರಿಸದೆ ಸಂಕಲ್ಪ ಮಾತ್ರದಿಂದಲೇ ಸಜ್ಜನರಕ್ಷಣಾದಿಗಳನ್ನು ಮಾಡಬಲ್ಲವನಾದರೂ ಅವತರಿಸಿ ಈ ಕಾರ್ಯಗಳನ್ನು ಮಾಡುವುದು ಅವನ ಸ್ವಾಭಾವಿಕ ಲೀಲೆಯೆಂದು ತಿಳಿಯಬೇಕು.)

**ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ವತಃ**

**ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ॥4-9॥**

9. ಈ ರೀತಿಯಾದ ಭಗವಂತನ ಅವತಾರ ವ್ಯಾಪಾರಾದಿಗಳ ತತ್ವವನ್ನು ತಿಳಿಯುವುದರಿಂದಾಗುವ ಫಲವನ್ನು ಹೇಳುತ್ತಾನೆ:- ಅರ್ಜುನ! ಈರೀತಿ ಲೋಕ ವಿಲಕ್ಷಣವು, ಅಪ್ರಾಕೃತವೂ ಆದ ನನ್ನ ಜನನ ಮತ್ತು ವ್ಯಾಪಾರಗಳನ್ನು ಯಥಾರ್ಥವಾಗಿ ಯಾವನು ತಿಳಿಯುವನೋ ಅಂತಹ ಜ್ಞಾನಿಯು ಈ ದೇಹವನ್ನು ಬಿಟ್ಟಮೇಲೆ ತಿರುಗಿ ಜನ್ಮಾಂತರವನ್ನು ಹೊಂದುವುದಿಲ್ಲ. ನನ್ನನ್ನೇ ಹೊಂದಿ ಮುಕ್ತನಾಗುವನೆಂದರ್ಥ. (ಜನ್ಮಕರ್ಮರಹಸ್ಯಜ್ಞಾನದಿಂದ ಮುಕ್ತಿಯಾಗುವುದೆಂದು ಹೇಳಿರುವುದು ಮುಕ್ತಿಯಾಗಬೇಕಾದರೆ ಈ ಜ್ಞಾನವು ಅವಶ್ಯಕವು. ಇದಿಲ್ಲದೆ ಮುಕ್ತಿಯಾಗುವುದಿಲ್ಲವೆಂದು ತಿಳಿಸುವುದೇ ಹೊರತು ಇತರ ಗುಣಪೂರ್ಣತ್ವಾದಿ ಜ್ಞಾನಗಳು ಮುಕ್ತ್ಯರ್ಥಿಗೆ ಅನಾವಶ್ಯಕವೆಂದು ತಿಳಿಸುವುದಿಲ್ಲ. ಅವನವನ ಯೋಗ್ಯತಾನುಸಾರವಾಗಿ ಮುಮುಕ್ಷುವು ಭಗವಂತನ ಗುಣಗಳೆಲ್ಲವನ್ನೂ ತಿಳಿಯಲೇಬೇಕೆಂದು ಭಾವ.)

**ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ**

**ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ॥4-10॥**

10. ಜನ್ಮಕರ್ಮ ರಹಸ್ಯಾದಿಗಳನ್ನು ತಿಳಿದು ಯಾರಾದರೂ ಮುಕ್ತರಾಗಿರುವರೇ? ಈ ಜ್ಞಾನವು ಹೇಗೆ ಮುಕ್ತಿಸಾಧನವಾಗುವುದು ಎಂಬ ಶಂಕೆಗಳನ್ನು ಪರಿಹರಿಸುತ್ತಾನೆ:- ಸುಂದರ ವಸ್ತುಗಳ ಅಭಿಲಾಷೆ, ಭಯ, ಕ್ರೋಧಗಳನ್ನು ಬಿಟ್ಟು, ಶ್ರೀಕೃಷ್ಣನೇ ಸರ್ವೋತ್ತಮನೆಂದು ತಿಳಿದು, ಅವನೇ ಸಕಲ

ಪ್ರಾಣಿಗಳಿಗೂ ಸತ್ತಾ ಪ್ರತೀತ್ಯಾದಿ ನಿಯಾಮಕನೆಂದು ತಿಳಿದು, ನನ್ನನ್ನೇ ಶರಣು ಹೊಂದಿರುವ ಬಹು ಸಜ್ಜನರು ಜ್ಞಾನದಿಂದಲು, ತಪಸ್ಸಿನಿಂದಲೂ ಕರ್ಮಬಂಧವನ್ನು ಪರಿಹರಿಸಿಕೊಂಡು ನನ್ನ ಸಾಯುಜ್ಯವೆಂಬ ಸ್ಥಿತಿಯನ್ನು ಹೊಂದಿರುವರು. (ಜನ್ಮಕರ್ಮರಹಸ್ಯ ಜ್ಞಾನದಿಂದ ಮುಕ್ತರಾದವರು ಬಹುಜನರಿದ್ದಾರೆಂದು ಮೊದಲಿನ ಶಂಕೆಗೆ ಉತ್ತರ. ಈ ಜ್ಞಾನವು ಇಂದ್ರಿಯಜಯ - ಮತ್ತು ಭಕ್ತಿಜ್ಞಾನಾದಿಗಳನ್ನುಂಟುಮಾಡುವುದರ ಮೂಲಕ ಮೋಕ್ಷಸಾಧನವಾಗುವುದೆಂದು ಎರಡನೆಯ ಶಂಕೆಗೆ ಉತ್ತರವೆಂದು ಹೇಳಿದಂತಾಯಿತು.)

**ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ॥4-11॥**

11.ಭಗವದ್ಭಕ್ತರಲ್ಲಿ ಜ್ಞಾನಿಗಳು-ತ್ರೈವಿದ್ಯರು ಎಂಬುದಾಗಿ ಎರಡು ಬಗೆ, ವಿಷ್ಣುವೇ ಸರ್ವಾಧಿಕನೆಂದು ತಿಳಿದು ಅವನನ್ನೇ ಆಶ್ರಯಿಸಿ ಅವನ ಪ್ರೀತ್ಯರ್ಥವಾಗಿಯೇ ಸಕಲಕರ್ಮವನ್ನೂ ಮಾಡುವವರು ಜ್ಞಾನಿಗಳು. ಇವರೇ ಪೂರ್ವಶ್ಲೋಕೋಕ್ತರು. ಸಾಮಾನ್ಯವಾಗಿ ವಿಷ್ಣುವು ಸರ್ವೋತ್ತಮನೆಂದು ತಿಳಿದು ಪ್ರಯೋಜನಾಪೇಕ್ಷೆಯಿಂದ ಅನ್ಯದೇವತೆಗಳನ್ನು, ಪಿತೃಗಳನ್ನೂ ಆರಾಧಿಸಿ ಆ ಸತ್ಕರ್ಮಗಳನ್ನು ಕೊನೆಯಲ್ಲಿ ವಿಷ್ಣುವಿಗೆ ಸಮರ್ಪಿಸುವವರು ತ್ರೈವಿದ್ಯರೆಂದು ಉಕ್ತರಾಗಿರುವರು. ಈ ಉಭಯರಲ್ಲಿ ಜ್ಞಾನಿಗಳಿಗೆ ಮೋಕ್ಷಕೊಡುವುದಾಗಿ ಹಿಂದಿನ ಶ್ಲೋಕದಲ್ಲಿ ಹೇಳಿದೆ. ಎರಡನೆಯ ಪಂಗಡದವರಾದ ತ್ರೈವಿದ್ಯರಿಗೂ ಹರಿಯು ಮೋಕ್ಷವನ್ನು ಕೊಡುವನೆ. ಅಥವಾ ಇಲ್ಲವೆ? ಕೊಡುವುದಾದರೆ ಅವನನ್ನೇ ಆಶ್ರಯಿಸಿರುವ ಜ್ಞಾನಿಗಳಿಗೂ, ತ್ರೈವಿದ್ಯರಿಗೂ ವ್ಯತ್ಯಾಸವಿಲ್ಲದೇ ಹೋಗುವುದು. ಮೋಕ್ಷಕೊಡುವುದಿಲ್ಲವೆಂದರೆ ಇಬ್ಬರೂ ಭಕ್ತರಾಗಿರುವಾಗ ಫಲವ್ಯತ್ಯಾಸಮಾಡಲು ಕಾರಣವೇನು? ಎಂದರೆ ಜ್ಞಾನಿಗಳಂತೆ ತ್ರೈವಿದ್ಯರಿಗೆ ಮೋಕ್ಷವನ್ನು ಕೊಡುವುದಿಲ್ಲ. ಅವರು ಉದ್ದೇಶಿಸಿರುವ ಸ್ವರ್ಗಾದಿಫಲಗಳನ್ನೇ ಕೊಡುವನು. ಆದರೂ ಫಲಧಾತನಾದ ವಿಷ್ಣುವಿಗೆ ಪಕ್ಷಪಾತ ದೋಷವು ಬರುವುದಿಲ್ಲ. ಅವನು ಭಕ್ತರ ಸೇವೆಗೆ ತಕ್ಕ ಫಲಕೊಡುವೆನೆಂದೇ ಸಂಕಲ್ಪಿಸಿರುವನು. ಕಾಮ್ಯ ಕರ್ಮಿಗಳಾದ ತ್ರೈವಿದ್ಯರ ಸೇವೆಗೆ ಸ್ವರ್ಗಾದಿಗಳೇ ಯೋಗ್ಯಫಲವು, ಜ್ಞಾನಿಗಳ ಸೇವೆಗೆ ಮೋಕ್ಷವೇ ಯೋಗ್ಯಫಲವು. ಅವರವರ ಸಾಧನಾನುಗುಣವಾಗಿ ಫಲದಾನಮಾಡುವುದರಿಂದ ಭಗವಂತನಿಗೆ ಪಕ್ಷಪಾತಾದಿ ದೋಷಗಳು ಬರುವುದಿಲ್ಲವೆಂಬ ಅಭಿಪ್ರಾಯವನ್ನು ಹೇಳುತ್ತಾನೆ:- ಜ್ಞಾನಿಗಳು ಮೋಕ್ಷೇಚ್ಛೆಯಿಂದ ನನ್ನನ್ನೇ ಭಜಿಸುವರು. ತ್ರೈವಿದ್ಯರು ಸ್ವರ್ಗಾದಿ ಇತರ ಫಲಾಪೇಕ್ಷೆಯಿಂದ ಇಂದ್ರಾದಿ ಇತರ ದೇವತಾರಾಧನ ಮಾರ್ಗವಾಗಿ ನನ್ನನ್ನು ಭಜಿಸುವರು. ನಾನು

ಅವರವರ ಭಜನಾನುಸಾರವಾಗಿ ಜ್ಞಾನಿಗಳಿಗೆ ಮೋಕ್ಷವನ್ನೂ, ತ್ರೈವಿದ್ಯರಿಗೆ ಅಭಿಲಷಿತವಾದ ಸ್ವರ್ಗಾದಿಗಳನ್ನೂ ಕೊಟ್ಟು ಅವರವರನ್ನು ಸಂತೋಷಪಡಿಸುತ್ತೇನೆ. ಪಾರ್ಥ! ಸಕಲ ಜ್ಞಾನಿಗಳೂ ಮತ್ತು ಕಾಮ್ಯಕರ್ಮ ನಿರತರಾದ ಮನುಷ್ಯರೂ (ತ್ರವಿದ್ಯರು) ಶ್ರುತಿಸ್ಮೃತಿವಿಹಿತವಾದ ನನ್ನ ಮಾರ್ಗವನ್ನೇ ಅನುಸರಿಸಿರುವರು. (ನಾನೇ ಎಲ್ಲರ ಕರ್ಮಕ್ಕೂ ಪ್ರೇರಕನಾಗಿ ಸಕಲಕರ್ಮಫಲ ಸಾರಭೋಕ್ತನಾಗಿರುವ ಕಾರಣ ಎಲ್ಲರೂ ನನ್ನ ಮಾರ್ಗಾನುಯಾಯಿಗಳೇ ಆಗಿರುವರು. ಆದುದರಿಂದಲೇ ಎಲ್ಲರಿಗೂ ಅವರವರ ಕರ್ಮಾನುಗುಣವಾಗಿ ಇಷ್ಟವಾದ ಫಲವನ್ನು ಕೊಡುತ್ತಿರುವೆನಾದ ಕಾರಣ ಪಕ್ಷಪಾತಾದಿ ದೋಷಗಳಿಗವಕಾಶವಿಲ್ಲವೆಂದು ಅಭಿಪ್ರಾಯ.)

**ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹ ದೇವತಾಃ**

**ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ॥4-12॥**

12. ಜ್ಞಾನಿ-ತ್ರೈವಿದ್ಯರಿಬ್ಬರೂ ವಿಷ್ಣು ಮಾರ್ಗಾನುಸಾರಿಗಳೇ ಆಗಿರುವರು. ಆದರೂ ಜ್ಞಾನಿಗಳ ಕರ್ಮಾಚರಣೆಗೂ ಇತರರ ಆಚರಣೆಗೂ ವ್ಯತ್ಯಾಸವಿದೆ. ಶ್ರೀಕೃಷ್ಣನೇ ಸಕಲ ಯಜ್ಞಫಲಸಾರಭೋಕ್ತನು ಮತ್ತು ಪ್ರೇರಕನು ಎಂಬುದನ್ನು ತಿಳಿದು ಜ್ಞಾನಿಗಳು ನಿಷ್ಕಾಮವಾಗಿ ನನ್ನನ್ನೇ ಭಜಿಸುವರು. ಈ ತತ್ವವನ್ನು ತಿಳಿಯದೆ ತ್ರೈವಿದ್ಯರು ಕರ್ಮಗಳ ಫಲವನ್ನು ಬಯಸುವವರಾಗಿ ಇತರ ದೇವತೆಗಳನ್ನು ಆರಾಧಿಸಿ ಕೊನೆಯಲ್ಲಿ ನನಗೆ ಸಮರ್ಪಿಸುತ್ತಾರೆ. ಇದೇ ಉಭಯರ ಆಚರಣೆಗೂ ಇರುವ ವ್ಯತ್ಯಾಸ. ಜೀವರು ಅಸ್ವತಂತ್ರರಾಗಿರುವುದರಿಂದ ಅವರು ಮಾಡುವ ಯಜ್ಞಾದಿ ಕರ್ಮಗಳಿಗೆಲ್ಲಾ ವಿಷ್ಣುವೇ ಪ್ರೇರಕನೆಂದು ಸಿದ್ಧವಾಗುವುದು. ಅವನೇ ಯಜ್ಞಾದಿಕರ್ಮಫಲಸಾರಭೋಕ್ತನೆಂದು ತಿಳಿಯುವ ಬಗೆ ಹೇಗೆ? ಎಂದರೆ, ಮನುಷ್ಯ ಲೋಕದಲ್ಲಿ ಕರ್ಮಾಚರಣೆಯಿಂದ ಬೇಗ ಫಲಸಿದ್ಧಿಯಾಗುವುದು ಕಂಡಿದೆ. ವಿಷ್ಣುವೇ ಫಲಧಾತನಾಗಿದ್ದು ಇತರ ದೇವತೆಗಳು ಅವನ ಆಧೀನರಾದುದರಿಂದ ಸ್ವತಂತ್ರವಾಗಿ ಫಲ ಕೊಡಲು ಅವರು ಸಮರ್ಥರಲ್ಲ. ವಿಷ್ಣುವು ಯಜ್ಞಫಲಭೋಕ್ತನಾದರೆ ಮನುಷ್ಯರು ಮಾಡಿದ ಯಜ್ಞಾದಿಫಲವನ್ನು ಸ್ವೀಕರಿಸಿ ಕೂಡಲೇ ಅದಕ್ಕೆ ಪ್ರತಿಫಲವನ್ನು ಕೊಡುವನೆಂದು ಹೇಳಬಹುದು. ಹಾಗಿಲ್ಲದಿದ್ದರೆ ಕರ್ಮಕರ್ತರಿಗೆ ಬೇಗ ಫಲಸಿದ್ಧಿಯಾಗದೇ ಇರಬೇಕಾಗುತ್ತದೆ. ಬೇಗ ಫಲಸಿದ್ಧಿಯಾಗುವುದು ಕಂಡಿದೆ. ಆದಕಾರಣ ವಿಷ್ಣುವೇ ಫಲಭೋಕ್ತೃವೆಂದರಿಯದ ಇತರ ದೇವತೆಗಳನ್ನುದ್ದೇಶಿಸಿ ಯಜ್ಞಾದಿಗಳನ್ನು ಮಾಡಿ ಅವನಲ್ಲಿ ಸಮರ್ಪಿಸಿದರೂ, ದಯಾಳುವಾದ ವಿಷ್ಣುವು ಅದನ್ನೇ ಸ್ವೀಕರಿಸಿ ತಕ್ಷಣ

ಫಲಕೊಡುವನೆಂದು ಸಿದ್ಧಿಸುತ್ತದೆ. ಹೀಗೆ ಕರ್ಮಗಳಿಂದ ಬೇಗ ಫಲಸಿದ್ಧಿಯಾಗುತ್ತಿರುವುದನ್ನು ನೋಡಿ ವಿಷ್ಣುವೇ ಕರ್ಮ ಫಲಭೋಕ್ತೃವೆಂದು ನಿರ್ಣಯಿಸಬಹುದೆಂದು ಅಭಿಪ್ರಾಯವು.

**ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ**

**ತಸ್ಯ ಕರ್ತಾರಮಪಿ ಮಾಂ ವಿದ್ಧಿಕರ್ತಾರಮವ್ಯಯಮ್॥4-13॥**

13. ಭಗವಂತನು ತನ್ನ ಸೇವೆಮಾಡಿದವರಿಗೆ ಮಾತ್ರ ಫಲಕೊಡುವನಷ್ಟೆ; ಸೇವೆ ಮಾಡದವರಿಗೇಕೆ ಫಲಕೊಡುವುದಿಲ್ಲ? ಜ್ಞಾನಿಗಳಿಗೆ ಕೊಟ್ಟಂತೆ ತ್ರೈವಿದ್ಯರಿಗೆ ಮಹಾಫಲವನ್ನೇಕೆ ಕೊಡುವುದಿಲ್ಲ? ಎಂದರೆ, ಭಗವಂತನೇ ಸರ್ವರಿಗೂ ತಂದೆಯು. ಪಿತೃಸೇವೆಯು ಮಕ್ಕಳಿಗೆ ಕರ್ತವ್ಯ. ಕರ್ತವ್ಯಪಾಲನೆ ಮಾಡದಿರುವವರಿಗೆ ಫಲ ಕೊಡುವುದು ನ್ಯಾಯವಲ್ಲವಾದ ಕಾರಣ ಅಂತಹವರಿಗೆ ಭಗವಂತನು ಫಲಕೊಡುವುದಿಲ್ಲವೆಂದು ಪ್ರಥಮ ಪ್ರಶ್ನೆಗೆ ಉತ್ತರ. ತಂದೆಯನ್ನು ಬಿಟ್ಟು ಇತರ ದೇವತೆಗಳನ್ನು ಸೇವಿಸುವ ತ್ರೈವಿದ್ಯರಿಗೆ ಫಲಕೊಡುವುದು ಉಚಿತವಲ್ಲವಾಗಿ ಮಹಾಫಲವನ್ನು ಅವರಿಗೆ ಹರಿಯು ಹೇಗೆ ಕೋಟ್ಟಾನು ಎಂದು ದ್ವಿತೀಯ ಪ್ರಶ್ನೆಗೆ ಉತ್ತರವೆಂಬ ಅಭಿಪ್ರಾಯದಿಂದ ಹೇಳುತ್ತಾನೆ:- ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ವರ್ಣಗಳೂ ಸತ್ವರಜಸ್ತಮೋಗುಣಗಳ ವಿಭಾಗವನ್ನು ನಿಮಿತ್ತ ಮಾಡಿ, ಆಯಾಯಾ ವರ್ಣೋಚಿತ ಕರ್ಮಗಳ ವಿಭಾಗಪೂರ್ವಕವಾಗಿ ನನ್ನಿಂದಲೇ ಸೃಷ್ಟಿಸಲ್ಪಟ್ಟುವು. (ನಾಲ್ಕು ಜಾತಿಯವರ ದೇಹಸೃಷ್ಟಿಗೆ ನಿಮಿತ್ತವಾದ ಗುಣ ವಿಭಾಗವು ಹೀಗಿದೆ:- ರಜೋಗುಣಕ್ಕಿಂತಲೂ ಬಹು ಹೆಚ್ಚಾದ ಸತ್ವಗುಣದಿಂದ ನಿರ್ಮಿತರು ಬ್ರಾಹ್ಮಣರು. ರಜೋಗುಣಕ್ಕಿಂತ ಸ್ವಲ್ಪ ಹೆಚ್ಚಾದ ಸತ್ವಗುಣದಿಂದ ನಿರ್ಮಿತರು ಕ್ಷತ್ರಿಯರು. ತಮೋಗುಣಕ್ಕಿಂತ ಅಧಿಕ ರಜೋಗುಣ, ಅದಕ್ಕೆ ಸಮವಾದ ಸತ್ವಗುಣಗಳಿಂದ ನಿರ್ಮಿತರು ವೈಶ್ಯರು. ರಜೋಗುಣಕ್ಕಿಂತ ಅಧಿಕವಾಗಿ ತಮೋಗುಣ, ಅದಕ್ಕಿಂತಲೂ ಅಧಿಕವಾದ ಸತ್ವಗುಣಗಳಿಂದ ನಿರ್ಮಿತರು ಶೂದ್ರರು – ಎಂದು ಗುಣವಿಭಾಗವು ಶಾಸ್ತ್ರದಲ್ಲಿ ಉಕ್ತವಾಗಿದೆ. ಈ ಪ್ರಕಾರ ಭಿನ್ನಭಿನ್ನ ಗುಣ ನಿಮಿತ್ತವಾದ ಬ್ರಾಹ್ಮಣಾದಿ ಸೃಷ್ಟಿಗನುಸಾರವಾಗಿಯೇ ಭಿನ್ನಭಿನ್ನ ಕರ್ಮಗಳೂ ಕೂಡ ಆಯಾಯಾ ವರ್ಣದವರಿಗೆ ವಿಹಿತವಾಗಿದೆಯೆಂದು ತಿಳಿಯಬೇಕು) ಕೃಷ್ಣ! ನೀನು ಸರ್ವರಿಗೂ ಕರ್ತನಾಗಿರುವುದು ಸರಿ. ನಿನಗಾರುಕರ್ತನೆಂದರೆ:- ನಾನು ಚತುರ್ವರ್ಣಗಳಿಗೆ ನಿತ್ಯ ಕರ್ತನು; ನನಗೆ ಬೇರೆ ಕರ್ತನಿಲ್ಲ; ಅನಾದಿಯಾಗಿರುವೆನೆಂದು ತಿಳಿ!

**ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ**

**ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ॥4-14॥**

**14.** ಕೃಷ್ಣ! ನೀನು ಸತ್ವಾದಿ ಗುಣಗಳಿಂದ ಚತುರ್ವರ್ಣಗಳ ಸೃಷ್ಟಿಗೆ ಕರ್ತನಾದರೆ ಕರ್ಮಕರ್ತೃವಾದ ಜೀವನಂತೆ ನಿನಗೂ ಪುಣ್ಯಪಾಪಗಳ ಲೇಪವಾಗಬೇಕಲ್ಲವೆ ಎಂದರೆ ಹೇಳುತ್ತಾನೆ:- ಸೃಷ್ಟ್ಯಾದಿ ವ್ಯಾಪಾರಗಳಿಂದ ನನಗೆ ಪುಣ್ಯ ಪಾಪಗಳು ಬರುವುದಿಲ್ಲ. ನಾನು ಜೀವನಂತೆ ಕರ್ತನಲ್ಲ. ಅವನು ಪರಾಧೀನನು ಅಪೂರ್ಣನು. ನಾನಾದರೋ ಸ್ವತಂತ್ರನು, ಪೂರ್ಣಕಾಮನು, ಇಚ್ಛಾ ಮಾತ್ರದಿಂದ ಇತರ ಸಹಾಯವಿಲ್ಲದೆ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವವನು. ಹೀಗೆ ನನ್ನ ವ್ಯಾಪಾರವು ಜೀವಕ್ರಿಯಾ ವಿಲಕ್ಷಣವಾಗಿರುವುದರಿಂದ ಅದು ನನ್ನನ್ನು ಪುಣ್ಯಪಾಪಗಳಿಂದ ಬಂಧಿಸಲಾರದು. ಅಷ್ಟೇ ಅಲ್ಲ; ಫಲಾಪೇಕ್ಷೆಯಿಲ್ಲದೆ ಜೀವನಿಂದ ಆಚರಿಸಲ್ಪಟ್ಟ ಕರ್ಮಗಳೂ ಅವನನ್ನು ಪುಣ್ಯಪಾಪಗಳಿಂದ ಬಂಧಿಸುವುದಿಲ್ಲವೆಂದಮೇಲೆ ಪೂರ್ಣಕಾಮನಾದ ನಾನು ಯಾವ ಫಲಾಪೇಕ್ಷೆಯೂ ಇಲ್ಲದೆ ಲೀಲಾರೂಪವಾಗಿ ಮಾಡಿದ ಸೃಷ್ಟ್ಯಾದಿ ವ್ಯಾಪಾರಗಳಿಂದ ನನಗೆ ಪುಣ್ಯ ಪಾಪಗಳು ಬರುವುದಿಲ್ಲ ಎಂದು ಹೇಳಬೇಕಾದುದೇನು! ಈ ರೀತಿ ನನಗೆ ಫಲಾಕಾಂಕ್ಷೆಯಿಲ್ಲವೆಂದೂ, ಕರ್ಮಲೇಪವಿಲ್ಲವೆಂದೂ ನನ್ನ ಸ್ವರೂಪವನ್ನು ತಿಳಿದವನು ಕರ್ಮಬದ್ಧನಾಗುವುದಿಲ್ಲ; ಮುಕ್ತನಾಗುತ್ತಾನೆಂದು ಭಾವ.

ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಮುಮುಕ್ಷುಭಿಃ
ಕುರು ಕರ್ಮೈವ ತಸ್ಮಾತ್ತ್ವಂ ಪೂರ್ವೈಃ ಪೂರ್ವತರಂ ಕೃತಮ್॥4-15॥

**15.** ಜ್ಞಾನದಿಂದ ಮೋಕ್ಷವಾಗುವುದಾದರೆ ನಾನು ಜ್ಞಾನಿಯಾಗಿರುವೆನು. ಕರ್ಮಬಂಧಾಭಾವವೆಂಬ ಮುಕ್ತಿಯು ನನಗೆ ಸಿದ್ಧವಾಗಿಯೇ ಇದೆ. ಹೀಗಿರುವಾಗ ಜ್ಞಾನದ್ವಾರಾ ಮೋಕ್ಷದಾಯಕವಾದ ಕರ್ಮವನ್ನು ನನಗೇಕೆ ವಿಧಿಸುವೆ? ಎಂದರೆ (ಮೋಕ್ಷದಲ್ಲಿ ದುಃಖ(ಬಂಧ)ನಿವೃತ್ತಿ-ಸುಖಪ್ರಾಪ್ತಿ ಎಂಬುದಾಗಿ ಎರಡು ಅಂಶಗಳಿವೆ. ಜ್ಞಾನದಿಂದ ಮೊದಲನೆಯ ಭಾಗವು ಸಿದ್ಧವಾಗುವುದು. ಎರಡನೆಯದಾದ ಸುಖಪ್ರಾಪ್ತಿಯು ಭಗವದನುಗ್ರಹದಿಂದಲೇ ಬರತಕ್ಕುದು. ಅದಕ್ಕಾಗಿ ಜ್ಞಾನಿಯಾದಮೇಲೂ ಕರ್ಮಮಾಡಬೇಕು. ಅದರಿಂದ ವಿಶೇಷಾನುಗ್ರಹವುಂಟಾಗಿ ತನಗೆ ಯೋಗ್ಯವಾದ ಆನಂದವು ಚೆನ್ನಾಗಿ ಅನುಭವಕ್ಕೆ ಬರುತ್ತದೆ. ಇಂತಹ ಸಮ್ಯಗನುಭವರೂಪವಾದ ಆನಂದಾಧಿಕ್ಯವನ್ನು ಪಡೆಯುವುದಕ್ಕಾಗಿ ಪೂರ್ವಿಕರೆಲ್ಲರೂ ಕರ್ಮವನ್ನಾಚರಿಸಿರುವರು. ಆದಕಾರಣ ನೀನು ಜ್ಞಾನಿಯಾದರೂ ಕರ್ಮಮಾಡಬೇಕೆಂದು ವಿಧಿಸಿರುವೆನು ಎಂಬುದಾಗಿ ಹೇಳುತ್ತಾನೆ:- ಆನಂದಾಧಿಕ್ಯವೆಂಬ ಅಧಿಕಮೋಕ್ಷಾಕಾಂಕ್ಷಿಗಳಾದ ಪ್ರಾಚೀನ ಜನಕಾದಿಜ್ಞಾನಿಗಳು ಮೇಲ್ಕಂಡ ಪ್ರಕಾರ ಪರಮಾತ್ಮ ಜ್ಞಾನವಂತರಾದ ಮೇಲೂ ವಿಹಿತಕರ್ಮವನ್ನಾಚರಿಸಿರುವರು.

ಆದಕಾರಣ ಪ್ರಾಚೀನರೂ ಅವರಿಗಿಂತ ಹಿಂದಿನವರೂ ಮಾಡಿಕೊಂಡು ಬರುತ್ತಿರುವ ಕರ್ಮವನ್ನು ಬಿಡದೆ ಮಾಡುವವನಾಗು !

**ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ**

**ತತ್ತೇ ಕರ್ಮ ಪ್ರವಕ್ಷ್ಯಾಮಿ ಯಜ್ಞಾತ್ವಾ ಮೋಕ್ಷ್ಯಸೇಽಶುಭಾತ್॥4-16॥**

16. 'ಕುರು' ಎಂದು ವಿಧಿಸಲ್ಪಟ್ಟ ಕರ್ಮಸ್ವರೂಪವನ್ನು ನಿರ್ಧರಿಸಿ ಹೇಳುವುದಕ್ಕಾಗಿ ಆ ವಿಷಯದಲ್ಲಿ ಜಿಜ್ಞಾಸೆಯನ್ನು ಹುಟ್ಟಿಸಬೇಕೆಂದು, ಕರ್ಮರಹಸ್ಯವನ್ನು ತಿಳಿಯುವುದು ಎಲ್ಲರಿಗೂ ಕಷ್ಟ ಸಾಧ್ಯವೆಂದು ಹೇಳುತ್ತಾನೆ:- [ಅಕರ್ಮ=ಕರ್ಮಾಭಾವ (ಕರ್ಮಾಕರಣ) ಮತ್ತು ವಿರುದ್ಧ ಕರ್ಮವೆಂದರ್ಥ. ಅರ್ಜುನ! ಕರ್ಮವು ಯಾವುದು? ಕರ್ಮಾಭಾವವೆಂದರೇನು? ವಿರುದ್ಧ ಕರ್ಮವಾವುದು ಎಂಬೀವಿಷಯದಲ್ಲಿ ಜ್ಞಾನಿಗಳೂ ಸಹ ಮೋಹಗೊಂಡಿರುವರು; ನಿರ್ಧಾರವಾಗಿ ತಿಳಿದಿಲ್ಲ. ಯಾವ ಕರ್ಮಾದಿಸ್ವರೂಪಜ್ಞಾನಪೂರ್ವಕವಾಗಿ ವಿಹಿತವನ್ನಾಚರಿಸಿ ನೀನು ದುಃಖಮಯವಾದ ಸಂಸಾರದಿಂದ ಮುಕ್ತನಾಗುವೆಯೋ ಅಂತಹ ಕರ್ಮಾದಿಸ್ವರೂಪವನ್ನು ಉಪದೇಶಿಸುವೆನು.

**ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ**

**ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ॥4-17॥**

17. ಕರ್ಮಾದಿಸ್ವರೂಪವನ್ನು ತಿಳಿಯುವ ವಿಷಯದಲ್ಲಿ ಹೆಚ್ಚಿನ ಆದರವನ್ನು ಹುಟ್ಟಿಸುವುದಕ್ಕಾಗಿ ಕರ್ಮತತ್ವವು ಗಹನವೆಂದು ಹೇಳುತ್ತಾನೆ: [ಹಿಂದಿನ ಶ್ಲೋಕದಲ್ಲಿನ 'ಕರ್ಮ, ಅಕರ್ಮ' ಎಂಬ ಪದಗಳನ್ನು ಇಲ್ಲಿಯೂ ಸೇರಿಸಿ ಅರ್ಥಮಾಡಬೇಕು.] ಕರ್ಮಕ್ಕಿಂತ ಬೇರೆಯಾಗಿ ಅಕರ್ಮ (ಕರ್ಮಾಕರಣ) ಮತ್ತು ನಿಷಿದ್ಧ ಕರ್ಮಗಳ ಸ್ವರೂಪವನ್ನು ವಿವೇಚನೆಮಾಡಿ ತಿಳಿಯಬೇಕು. ನಿಷಿದ್ಧ ಕರ್ಮಕ್ಕಿಂತ ಭಿನ್ನವಾಗಿ ಕರ್ಮ ಮತ್ತು ಕರ್ಮಾಕರಣಗಳ ಸ್ವರೂಪವನ್ನು ನಿರ್ಧರಿಸಿಕೊಳ್ಳಬೇಕು. ವಿಹಿತ ಕರ್ಮ-ನಿಷಿದ್ಧ ಕರ್ಮಗಳ ಸ್ವರೂಪವನ್ನು ಕರ್ಮಾಕರಣದ ದೆಸೆಯಿಂದ ಪ್ರತ್ಯೇಕಿಸಿ ನಿಶ್ಚಯಿಸಿಕೊಳ್ಳಬೇಕು. ಮತ್ತು ಕರ್ಮ-ಅಕರ್ಮ-ವಿಕರ್ಮಗಳೆಲ್ಲವೂ ಭಗವಂತನ ಅಧೀನವೆಂದು ತಿಳಿಯಬೇಕು. (ಕರ್ಮಾದಿಸ್ವರೂಪ ನಿರ್ಧಾರಣೆಯು ಗಹನವಾದಕಾರಣ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿ ತಿಳಿಯಬೇಕೆಂದು ಭಾವ.).

**ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ**

**ಸ ಬುದ್ಧಿಮಾನ್ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್॥4-18॥**

**18.** ಕರ್ಮಾದಿಸ್ವರೂಪವನ್ನು ವಿಸ್ತಾರವಾಗಿ ತಿಳಿಸುವವನಾಗಿ ಕರ್ಮಾದಿ ಜ್ಞಾನವನ್ನು ಸ್ತುತಿಸುತ್ತಾನೆ:- ಯಾವಾತನು ವರ್ಣಾಶ್ರಮೋಚಿತ ಕರ್ಮಗಳನ್ನು ಮಾಡುವಾಗಲೂ ತನಗೆ ಕರ್ಮಾಭಾವ(ಕರ್ಮಾಕರಣ)ವನ್ನು ತಿಳಿಯುವನೋ ಎಂದರೆ 'ಭಗವಂತನೇ ಕರ್ಮಕರ್ತನು, ನಾನು ಸ್ವತಂತ್ರನಲ್ಲ; ಆದರೂ ಅವನು ಕೊಟ್ಟ ಕರ್ತೃತ್ವ ಶಕ್ತಿಯಿಂದ ಅವನ ಪ್ರೇರಣಾನುಸಾರವಾಗಿ ಮಾಡುತ್ತಿರುವೆನು' ಎಂದು ತಿಳಿಯುವನೋ ಮತ್ತು ಅಕರ್ಮಣಿ- ಜೀವನು ಕರ್ಮಮಾಡದಿರುವ ಸ್ವಪ್ನ ಸುಷುಪ್ತ್ಯಾವ್ಯವಸ್ಥೆಗಳಲ್ಲಿಯೂ ಕರ್ಮ ಯಃ ಪಶ್ಯೇತ್- ಸ್ವತಂತ್ರನಾದ ಭಗವಂತನೇ ವ್ಯಾಪಾರ ಮಾಡುತ್ತಿರುವನು ಎಂದರೆ ಜೀವನ ವ್ಯಾಪಾರವಿರಲಿ, ಇಲ್ಲದಿರಲಿ. ಸರ್ವದಾ ಭಗವಂತನು ವ್ಯಾಪಾರ ಮಾಡುತ್ತಿರುವನು; ಸ್ವಪ್ನಾದಿಗಳಲ್ಲಿಯೂ ಅವನೇ ಗಜತುರಗಾದಿ ಪದಾರ್ಥಗಳನ್ನು ಸೃಷ್ಟಿಸಿ ಜೀವನಿಗೆ ತೋರಿಸುವನೆಂದು ಯಾವಾತನು ತಿಳಿಯುವನೋ ಆತನೇ ಮನುಷ್ಯವರ್ಗದಲ್ಲಿ ತತ್ವಜ್ಞಾನಿಯು. ಅವನೇ ಜ್ಞಾನೋಪಾಯ ಸಿದ್ಧಿಯುಳ್ಳವನು. ಮತ್ತು ಕರ್ಮಾಚರಣೆಗಳಿಗೆಲ್ಲಾ ಫಲವಾದ ಜ್ಞಾನ ತನ್ಮೂಲಕವಾಗಿ ಸ್ವಯೋಗ್ಯತಾನುಗುಣವಾದ ಮೋಕ್ಷ ಇವುಗಳನ್ನು ಹೊಂದುವಕಾರಣ ವಿಹಿತ ಸಕಲ ಕರ್ಮಕಾರಿಯೆಂದು ತಿಳಿಯಬೇಕು. (ಶ್ರೀಹರಿಯೊಬ್ಬನೇ ಪರಾಪೇಕ್ಷೆಯಿಲ್ಲದೆ ಸಕಲಕ್ಕೂ ಸ್ವತಂತ್ರಕರ್ತನು, ಜೀವನಾದ ತಾನು ಅವನ ಅಧೀನನಾಗಿ ಅವನ ಪ್ರೇರಣಾನುಸಾರ ಕರ್ತನಾಗಿರುವೆನೆಂದು ತಿಳಿದು ಆಚರಿಸಲ್ಪಡುವ ವರ್ಣಾಶ್ರಮವಿಹಿತಾನುಷ್ಠಾನವೇ ಕರ್ಮವು. ಈ ರೀತಿ ತಿಳಿದು ಕರ್ಮವನ್ನು ಮಾಡದಿರುವುದೇ ಅಕರ್ಮವು. ಮೇಲ್ಕಂಡ ಕರ್ತೃತ್ವಾನುಸಂಧಾನವಿಲ್ಲದೆ ತಾನೇ ಸ್ವತಂತ್ರಕರ್ತನೆಂದು ಕರ್ಮಮಾಡಿದರೂ ಅದೂ ಅಕರ್ಮವೇ ಸರಿ, ನಿಷಿದ್ಧ ಕರ್ಮವೇ ವಿಕರ್ಮವು ಎಂದು ವಿವರಿಸಿದಂತಾಯಿತು.) ಅಥವಾ ಕರ್ಮವೆಂದರೆ ವಿಧಿಬದ್ಧನು=ಜೀವನೆಂದರ್ಥ. ಅಕರ್ಮ= ವಿಧಿಬದ್ಧನಲ್ಲದ ಭಗವಂತನು ಎಂದರ್ಥ. ವಿಧಿಬದ್ಧನಾದ ಜೀವನಲ್ಲಿ ಸ್ವತಂತ್ರ ಕರ್ತೃತ್ವವಿಲ್ಲವೆಂತಲೂ, ವಿಧಿಬದ್ಧನಲ್ಲದ ಭಗವಂತನಲ್ಲಿ ಸ್ವತಂತ್ರ ಕರ್ಮಕರ್ತೃತ್ವವುಂಟೆಂತಲೂ ಯಾವಾತನು ತಿಳಿಯುವನೋ ಅವನೇ ತತ್ವಜ್ಞಾನಿಯು ಎಂಬುದಾಗಿ ಪೂರ್ವಾರ್ಧಕ್ಕೆ ಇನ್ನೊಂದು ಅರ್ಥವನ್ನೂ ಹೇಳಬಹುದು.

**ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ**
**ಜ್ಞಾನಾಗ್ನಿದಗ್ಧ ಕರ್ಮಾಣಂ ತಮಾಹುಃ ಪಂಡಿತಂ ಬುಧಾಃ॥4-19॥**

**19.** ಕರ್ತೃತ್ವಾಭಿಮಾನವನ್ನು ಮಾತ್ರ ತ್ಯಾಗಮಾಡಿ ವಿಹಿತಕರ್ಮವನ್ನು ಮಾಡುವುದರಿಂದ ವರ್ಣಾಶ್ರಮೋಚಿತ ಸಕಲ ಕರ್ಮಫಲಭಾಗಿಯಾಗುವುದಿಲ್ಲ; ಫಲಕಾಮನೆಯನ್ನು ಬಿಡುವುದಾವಶ್ಯಕವೆಂಬ ಅಭಿಪ್ರಾಯದಿಂದ ಇನ್ನೂ ಐದು ಶ್ಲೋಕಗಳಿಂದ ಕರ್ಮಸ್ವರೂಪವನ್ನೇ ವಿಸ್ತರಿಸುತ್ತಾನೆ: ಸ್ವರ್ಗಾದಿ ಫಲಗಳು ಬೇಕೆಂಬಾಶೆ, "ಈ ಕರ್ಮಮಾಡಿ ಸ್ವರ್ಗವನ್ನು ಸಾಧಿಸುವೆನು' ಎಂಬ ಸಂಕಲ್ಪ ಇವುಗಳನ್ನು ಮಾಡದೆ ಯಾವನು ಸಕಲ ಕರ್ಮಗಳನ್ನೂ ಉಪಕ್ರಮಿಸಿ ಹಿಂದೆ ಹೇಳಿದಂತೆ ಅನುಸಂಧಾನಪೂರ್ವಕವಾಗಿ ಕರ್ಮಮಾಡುವನೋ ಅಂತಹ ಜ್ಞಾನಾಗ್ನಿದಗ್ಧ ಕರ್ಮಾಣಂ=ಹರಿಯೇ ಎಲ್ಲಕ್ಕೂ ಸ್ವತಂತ್ರ ಕರ್ತನೆಂದು ತಿಳಿದು ತನಗೆ ಸ್ವತಂತ್ರವಾಗಿ ಮಾಡಬಹುದಾದ ಕರ್ಮವೇ ಇಲ್ಲವೆಂದು ತಿಳಿದಿರುವವನನ್ನು ತತ್ವಜ್ಞಾನಿಯೆಂದು ಜ್ಞಾನಿಗಳು ಹೇಳುತ್ತಾರೆ.

1 ಕರ್ಮಶಬ್ದಃ ಸಕಾರಾಂತಃ ಕರ್ಮವಿಧಿವಾಚೀ ತೇನ ಮೀಯತೇ ವಿಷಯಿಕ್ರಿಯತ ಇತಿ ಕರ್ಮ.

ಕರ್ಮೋಽಸ್ಮನ್ನೀಯತ ಇತಿ ಕರ್ಮ ಜೀವ ಉದಾಹೃತಃ।

ವಿಧಿಶಬ್ದೇನಾಮಿತತ್ವಾದಕರ್ಮ ಭಗವಾನ್ ಹರಿಃ॥ - ನಾರದೀಯ.

**ತಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ।**

**ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥4-20॥**

**20.** ಕಾಮ-ಸಂಕಲ್ಪಗಳ ಪರಿತ್ಯಾಗಮಾತ್ರದಿಂದ ಕರ್ಮಸ್ವರೂಪವು ಪೂರ್ಣವಾಗುವುದಿಲ್ಲ; ಕರ್ಮಫಲಸ್ನೇಹತ್ಯಾಗವೂ ಆವಶ್ಯಕವೆಂದು ಹೇಳುತಾನೆ:- ಕರ್ಮದಲ್ಲಿಯೂ, ಅದರ ಫಲದಲ್ಲಿಯೂ ದೃಢಸ್ನೇಹವನ್ನು ಬಿಟ್ಟು, (ನಿತ್ಯತೃಪ್ತನೂ ತನಗೆ ಬೇರೆ ಆಶ್ರಯವಿಲ್ಲದವನೂ ಆದ ಹರಿಗೆ ನಾನು ಪ್ರತಿಬಿಂಬನು ಎಂದರೆ ಅವನಂತೆ ಚೇತನನಾದರೂ ಅವನ ಅಧೀನನಾಗಿಯೇ ಕರ್ಮ ಮಾಡತಕ್ಕವನು) ಎಂಬ ಜ್ಞಾನವುಳ್ಳವನಾಗಿ ಕರ್ಮದಲ್ಲಿ ಪ್ರವೃತ್ತನಾದರೂ ಅಂತಹವನು ಯಾವ ಕರ್ಮವನ್ನೂ ಮಾಡದವನೆನಿಸುವನು. ಎಂದರೆ ಸ್ವಾತಂತ್ರ್ಯಾಭಿಮಾನವಿಲ್ಲದಿರುವುದರಿಂದ ಅವನು ಮಾಡಿದ ಕರ್ಮವು ಬಂಧಕವಾಗದೆ ಈಶ್ವರಾನುಗ್ರಹಕ್ಕೆ ಸಾಧಕವಾಗುವುದೆಂದು ತಾತ್ಪರ್ಯ.

**ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ**

**ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್॥4-21॥**

**21.** ಕಾಮ-ಸಂಕಲ್ಪಾದಿಗಳನ್ನು ಬಿಡುವುದಕ್ಕೆ ಉಪಾಯವನ್ನು ಹೇಳುತಾನೆ:- ಯಾವನು ಚಿತ್ತ=ಬುದ್ಧಿ, ಆತ್ಮಾ=ಮನಸ್ಸು ಈವೆರಡನ್ನೂ ದುರ್ವಿಷಯಗಳ ಕಡೆಗೆ ಹೋಗದಂತೆ ತಡೆದು

ಸ್ವಾಧೀನದಲ್ಲಿಟ್ಟುಕೊಳ್ಳುವನೋ ಅವನು ಕಾಮರಹಿತನೂ ಮತ್ತು ತ್ಯಕ್ತಸರ್ವಪರಿಗ್ರಹಃ= ದೇಹೇಂದ್ರಿಯಾದಿಗಳಲ್ಲಿ ಅಭಿಮಾನತ್ಯಾಗಿಯೂ ಆಗುವನು. ಅಂತಹವನು ಶರೀರ ಪೋಷಣೆಗೆ ಬೇಕಾಗುವ ಕರ್ಮವನ್ನು ಮಾತ್ರ ಶರೀರೇಂದ್ರಿಯಾದಿಗಳಿಂದ ಮಾಡಿದರೂ ಕರ್ಮಬಂಧಕ್ಕೆ ಸಿಕ್ಕುವುದಿಲ್ಲ. (ಇದರಿಂದ ಬುದ್ಧಿ-ಮನೋನಿಗ್ರಹವೇ ಕಾಮಾದಿತ್ಯಾಗೋಪಾಯವೆಂದು ಹೇಳಿದಂತಾಯಿತು.)

**ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ**
**ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಽಪಿ ನ ನಿಬಧ್ಯತೇ॥4-22॥**

22. ಯತಚಿತ್ತಾತ್ಮಾ=ಮನೋಬುದ್ಧಿಗಳನ್ನು ನಿಗ್ರಹಿಸಿದವನು ಹೇಗಿರುವನೆಂದರೆ ಅವನ ಸ್ವರೂಪವನ್ನು ವಿವರಿಸುತ್ತಾನೆ:- ತನ್ನ ಪ್ರಯತ್ನವಿಲ್ಲದೆ ಭಗವದಿಚ್ಛೆಯಿಂದ ದೊರೆತ ಪದಾರ್ಥದಿಂದಲೇ ತೃಪ್ತನಾಗಿ ಸುಖದುಃಖಾದಿ ದ್ವಂದ್ವಗಳನ್ನು ದಾಟಿದವನು ಮತ್ತು ಮಾತ್ಸರ್ಯ(ತನಗೆ ಸಿಕ್ಕದೆ ಇತರಿಗೆ ಸಿಕ್ಕಿರುವುದನ್ನು ನೋಡಿ ಸಹಿಸಲಾರದೆ ದುಃಖಪಡುವುದು)ರಹಿತನೂ ಆಗಿರುವವನು ಯತಚಿತ್ತಾತ್ಮನೆನಿಸುವನು. ಅಂತಹವನು ಕರ್ಮಗಳನ್ನು ಮಾಡಿದರೂ ಬಂಧಕ್ಕೆ ಸಿಕ್ಕುವುದಿಲ್ಲ. ('ದ್ವಂದ್ವಾತೀತ' ಎಂಬುದನ್ನು ವಿವರಿಸುವುದಕ್ಕಾಗಿ 'ಸಿದ್ಧಾವಸಿದ್ಧೌ ಚ ಸಮಃ' ಎಂದು ಹೇಳಿದೆ. ಸುಖವಾಗಲಿ-ದುಃಖವಾಗಲಿ, ಜಯಬರಲಿ-ಅಪಜಯವಾಗಲಿ, ಮಾನವಾಗಲಿ-ಅವಮಾನವಾಗಲಿ ಎಂತಹ ಸನ್ನಿವೇಶ ಬಂದರೂ ಹಿಗ್ಗಿ-ಕುಗ್ಗಿ ಮನೋವಿಕಾರವನ್ನು ಹೊಂದದೇ ಒಂದೇ ಸಮನಾಗಿರುವುದೇ ದ್ವಂದ್ವಾತೀತ ಎಂಬುದರ ಅರ್ಥವು.)

**ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ**
**ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ॥4-23॥**

23. ಅನೇಕ ಶ್ಲೋಕಗಳಿಂದ ಉಕ್ತವಾದ ಸತ್ಕರ್ಮಸ್ವರೂಪವನ್ನು ಒಟ್ಟುಗೂಡಿಸಿ ಹೇಳುತ್ತಾನೆ:- ಫಲಾಶೆಯಿಲ್ಲದೆ, ದೇಹಾದಿಗಳಲ್ಲಿ ಅಭಿಮಾನವನ್ನೂ ಸ್ವಾತಂತ್ರಾಭಿಮಾನವನ್ನೂ ಬಿಟ್ಟು, ವಿಷ್ಣುಜ್ಞಾನದಲ್ಲಿಯೇ ಆಸಕ್ತವಾದ ಮನಸ್ಸುಳ್ಳವನಾಗಿ, ವಿಷ್ಣುವು ಸಂತುಷ್ಟನಾಗಲೆಂಬ ಉದ್ದೇಶದಿಂದಲೇ ಕರ್ಮವನ್ನಾಚರಿಸುವವನ ಕರ್ಮವೆಲ್ಲವೂ ಲಯವಾಗುವುದು. ಎಂದರೆ ಬಂಧಕವಾಗದೆ ಸಾಧಕವೇ ಆಗುವುದೆಂದು ಭಾವ.

**ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಂ**

**ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮ ಕರ್ಮ ಸಮಾಧಿನಾ॥4-24॥**

**24.** 'ಜ್ಞಾನಾವಸ್ಥಿತ ಚೇತಸಃ' ಎಂಬುದರಿಂದ ಉಕ್ತವಾದ ಪರಮೇಶ್ವರಜ್ಞಾನವು ಎಂತಹುದೆಂಬುದನ್ನು ಸ್ಪಷ್ಟಪಡಿಸುತ್ತಾನೆ:- [ಇತಿ ಮಾಂ ಯೋಽಭಿ ಜಾನಾತಿ' ಎಂದು ಈ ಶ್ಲೋಕಾಂತ್ಯದಲ್ಲಿ ಅಧ್ಯಾಹಾರಮಾಡಿ 'ತೇನೈವ ಬ್ರಹ್ಮ ಗಂತವ್ಯಂ' ಎಂದು ಅನ್ವಯಿಸಿಕೊಳ್ಳಬೇಕು. ಅರ್ಪ್ಯತೇ=ಸಮರ್ಪ್ಯತೇಽನೇನೇತ್ಯರ್ಪಣಂ=ಸೌಟು ಮುಂತಾದ ಹೋಮಪಾತ್ರೆಗಳು, ಹವಿಃ=ಹೋಮಿಸಲ್ಪಡುವ ಆಜ್ಯಾದಿಗಳು. ಬ್ರಹ್ಮ=ಬ್ರಹ್ಮಾಧೀನಂ. 'ತ್ವದಧೀನಂ ಯತಃ ಸರ್ವಮತಃ ಸರ್ವೋ ಮತೋ ಭವಾನ್' ಇತ್ಯಾದೇಃ] ಹೋಮಪಾತ್ರೆಗಳು[1] ಬ್ರಹ್ಮಾಧೀನವು, ಹೋಮಮಾಡುವಂತಹ ಆಜ್ಯಾದಿ ಪದಾರ್ಥಗಳು ಬ್ರಹ್ಮಾಧೀನವು. ಆಗ್ನಿಯಲ್ಲಿ ನಿಯಾಮಕನಾಗಿರುವವನೂ ಪರಮಾತ್ಮನೇ. ಹೋಮವು ಬ್ರಹ್ಮನಿಂದಲೇ ಸಿದ್ಧಿಸುವುದು. ಧ್ಯಾನದಿಂದ ಸಹಿತವಾದ ಅಗ್ನಿ ಹೋತ್ರಾದಿ ಕರ್ಮವೂ ಬ್ರಹ್ಮಾಧೀನವು ಎಂಬುದಾಗಿ ಯಾವಾತನು ತಿಳಿದು ಅನುಷ್ಠಾನಮಾಡುವನೋ ಅಂತಹವನಿಂದಲೇ ಬ್ರಹ್ಮನು ಪ್ರಾಪ್ಯನು. ಎಂದರೆ ಅವನು ಅಪರೋಕ್ಷಜ್ಞಾನದ್ವಾರಾ ಮುಕ್ತನಾಗುವನೆಂದು ತಾತ್ಪರ್ಯ. (ಹೋಮಪಾತ್ರಾದಿ ಸಕಲ ಸಾಧನ-ಸಾಧ್ಯಗಳೆಲ್ಲವೂ ಪರಮಾತ್ಮನ ಅಧೀನವೆಂದರಿಯುವುದೇ ಜ್ಞಾನವು.) ಅದನ್ನು ಮನಸ್ಸಿನಲ್ಲಿ ಸ್ಥಿರಪಡಿಸಿಕೊಂಡಿರುವವನೇ ಜ್ಞಾನಾವಸ್ಥಿತಚೇತಸ್ಕನೆಂದು ವಿವರಿಸಿದಂತಾಯಿತು.

**ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ**

**ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ॥4-25॥**

**ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ಸಂಯಮಾಗ್ನಿಷು ಜುಹ್ವತಿ**

**ಶಬ್ದಾದೀನ್ವಿಷಯಾನ್ಯನ್ಯೇ ಇಂದ್ರಿಯಾಗ್ನಿಷು ಜುಹ್ವತಿ॥4-26॥**

**ಸರ್ವಾಣೀಂದ್ರಿಯಕರ್ಮಾಣಿ ಪ್ರಾಣಕರ್ಮಾಣಿ ಚಾಪರೇ**

**ಆತ್ಮ ಸಂಯಮಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ॥4-27॥**

**ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ**

**ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಶಂಸಿತವ್ರತಾಃ॥4-28॥**

| |
|---|
| **ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಽಪರೇ**<br>**ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ॥4-29॥** |
| **ಅಪರೇ ನಿಯತಾಹಾರಾಃ ಪ್ರಾಣಾನ್ಪ್ರಾಣೇಷು ಜುಹ್ವತಿ**<br>**ಸರ್ವೇಽಪ್ಯೇತೇ ಯಜ್ಞವಿದೋ ಯಜ್ಞ ಕ್ಷಪಿತಕಲ್ಮಷಾಃ ॥4-30॥** |

**25-30.** ಹಿಂದೆ ಭಗವದಧೀನ [ಕರ್ತೃತ್ವಾನುಸಂಧಾನಪೂರ್ವಕವಾಗಿ], ಯಾರು ಭಗವಂತನು ಸಂತುಷ್ಟನಾಗಲೆಂಬ ಉದ್ದೇಶದಿಂದ ವರ್ಣಾಶ್ರಮವಿಹಿತಾನುಷ್ಠಾನವೇ ಕರ್ಮವೆಂದು ಕರ್ಮ ಸಾಮಾನ್ಯಸ್ವರೂಪವು ಉಕ್ತವಾಯಿತು. ಈಗ ಅದರ ಪ್ರಭೇದಗಳನ್ನು ವಿವರಿಸುತ್ತಾನೆ:- 1.ಯತಿಗಳೆಂಬ ಕೆಲವರು ಯೋಗಿಗಳು ಭಗವದುಪಾಸನೆಯನ್ನೇ ಯಜ್ಞವೆಂದು ಆಚರಿಸುವರು. 2. ಮತ್ತೆ ಕೆಲವರು ಗೃಹಸ್ಥ ನಿವೃತ್ತ ಕರ್ಮಿಗಳು ಬ್ರಹ್ಮಾಧೀನವಾದ ಅಗ್ನಿಯಲ್ಲಿ ಅಗ್ನಿ ಹೋತ್ರಾದಿಗಳನ್ನು ಯಜ್ಞನಾಮಕ ಭಗವಂತನ ಪ್ರೇರಣೆಯಿಂದಲೇ ಮಾಡುತ್ತೇವೆಂಬ ಅನುಸಂಧಾನ ಪೂರ್ವಕವಾಗಿ ಆಚರಿಸಿ ಅದನ್ನು ಪರಮಾತ್ಮನಿಗೆ ಸಮರ್ಪಿಸುವರು. 3. ಬೇರೆ ಕೆಲವರು ಯೋಗಿಗಳು 'ಸಕಲವೂ ಯಜ್ಞನಾಮಕ ಹರ್ಯಧೀನವು, ಯಾವ ಕಾರ್ಯದಲ್ಲಿಯೂ ನಾನು ಸ್ವತಂತ್ರನಲ್ಲ' ಎಂಬ ಅನುಸಂಧಾನಪೂರ್ವಕವಾಗಿ ಶ್ರೋತ್ರಾದಿ ಜ್ಞಾನೇಂದ್ರಿಯಗಳನ್ನು ವಿಷಯಗಳ ಕಡೆ ಹೋಗದಂತೆ ಮಾಡಿ, ಆ ಇಂದ್ರಿಯ ಸಂಯಮವನ್ನೇ ಯಜ್ಞವೆಂದು ಭಾವಿಸಿ ಭಗವಂತನಿಗೆ ಸಮರ್ಪಿಸುತ್ತಾರೆ. ಇತರ ಯೋಗಿಗಳು ಸಕಲವೂ ಹರ್ಯಧೀನವೆಂದರಿತು, ಸ್ವಾತಂತ್ರ್ಯಾಭಿಮಾನವನ್ನು ಬಿಟ್ಟು, ಭಗವತ್ಪೂಜೆಯೆಂಬ ಭಾವನೆಯಿಂದ ಶಬ್ದಾದಿವಿಷಯಗಳನ್ನು ಶ್ರೋತ್ರಾದೀಂದ್ರಿಯಗಳಿಂದ ಭೋಗಿಸುತ್ತಾರೆ. 5. ಇತರ ಯೋಗಿಗಳು ವಾಕ್-ಪಾಣಿ-ಪಾದ-ಪಾಯು-ಗುಹ್ಯ ಎಂಬ ಕರ್ಮೇಂದ್ರಿಯವ್ಯಾಪಾರಗಳನ್ನೂ ಮತ್ತು ಪ್ರಾಣ-ಆಪಾನ-ವ್ಯಾನ-ಉದಾನ-ಸಮಾನ ವಾಯುಗಳ ವ್ಯಾಪಾರಗಳನ್ನೂ ಮನೋನಿಗ್ರಹರೂಪ ಉಪಾಯವೆಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಎಂದರೆ ಯಜ್ಞನಾಮಕ ಹರ್ಯಧೀನತ್ವ ಜ್ಞಾನಪೂರ್ವಕವಾಗಿ ಸ್ವಾತಂತ್ರ್ಯಾಭಿಮಾನವನ್ನು ಬಿಟ್ಟು ಮನಸ್ಸನ್ನು ನಿಗ್ರಹಿಸಿ ಕರ್ಮೇಂದ್ರಿಯಾದಿ ವ್ಯಾಪಾರಗಳನ್ನು ನಿಯಮನಮಾಡುತ್ತಾರೆ; ಅದೇ ಅವರಿಗೆ ಯಜ್ಞವೆಂದು ತಾತ್ಪರ್ಯ. 6. ದೃಢತರ ಶ್ರದ್ಧೆಯುಳ್ಳ ಮೋಕ್ಷಸಾಧಕರಲ್ಲಿ ಕೆಲವರು ದ್ರವ್ಯದಿಂದ ಯಾಗಮಾಡುವರು. ಎಂದರೆ ಯಜ್ಞನಾಮಕ ಹರಿಯಿಂದ ಪ್ರೇರಿತನಾಗಿರುವೆನೆಂಬ ಅನುಸಂಧಾನದಿಂದ 'ಹರಿಯು ಪ್ರೀತನಾಗಲಿ' ಎಂದು ಹಿರಣ್ಯ-ಗೃಹ-ಆರಾಮಾದಿಗಳನ್ನು ಸತ್ಪಾತ್ರರಿಗೆ ಕೊಟ್ಟು ಆ ದಾನವನ್ನೇ ಯಜ್ಞ ಭಾವನೆಯಿಂದ ಪರಮಾತ್ಮನಿಗೆ ಅರ್ಪಿಸುವರು. 7.

ಮತ್ತೆ ಕೆಲವರು ಯಜ್ಞ ನಾಮಕ ಹರಿಪ್ರೇರಣೆಯೆಂದರಿತ್ತು, ಹರಿಪ್ರೀತ್ಯರ್ಥವಾಗಿ ಕೃಚ್ಛ-ಚಾಂದ್ರಾಯಣ-ವಿಷ್ಣುಪಂಚಕ- ಧಾರಣೆ-ಪಾರಣೆ ಮುಂತಾದ ವ್ರತವನ್ನಾಚರಿಸಿ, ಅದನ್ನೇ ಯಜ್ಞ ಎಂದು ಹರಿಗೆ ಅರ್ಪಣೆಮಾಡುವರು. 8. ಇನ್ನು ಕೆಲವರು ಯಜ್ಞನಾಮಕ ಹರಿ ಪ್ರೇರಣೆಯಿಂದ ಧ್ಯಾನವೇ ಭಗವತ್ಪೂಜೆಯೆಂದು ಭಾವಿಸಿ ಅದನ್ನೇ ಯಜ್ಞವನ್ನಾಗಿ ತಿಳಿಯುವರು. 9. ಕೆಲವುಮಂದಿ ಯಜ್ಞನಾಮಕಪ್ರೇರಣೆಯೆಂಬ ಅನುಸಂಧಾನದಿಂದ ಹರಿಪ್ರೀತಿಗಾಗಿ ವೇದಾಧ್ಯಯನಮಾಡಿ ಅದನ್ನೇ ಯಜ್ಞವನ್ನಾಗಿ ಭಾವಿಸುವರು. 10. ಬೇರೆ ಕೆಲವರು ಯಜ್ಞನಾಮಕಹರಿ ಪ್ರೇರಣೆಯೆಂದು ತಿಳಿದು ಅವನ ಪ್ರೀತಿಗಾಗಿ ಸಚ್ಛಾಸ್ತ್ರಶ್ರವಣಮನನಗಳನ್ನು ಮಾಡಿ ಅದನ್ನೆ ಯಜ್ಞವೆಂದು ತಿಳಿಯುವದು. 11. ಪ್ರಾಣಾಯಾಮ=ಉಚ್ಛ್ವಾಸನಿಶ್ವಾಸಗಳನ್ನು ತಡೆದು ನಿಶ್ಚಲಸ್ಥಿತಿಯಲ್ಲಿ ಆಸಕ್ತರಾದ ಕೆಲವರು ಯೋಗಿಗಳು ಯಜ್ಞನಾಮಕ ಹರಿಪ್ರೇರಣೆಯಿಂದ ಊರ್ಧ್ವಾಧಃ ಶ್ವಾಸಗಳ ಸಂಚಾರವನ್ನು ನಿರೋಧಿಸಿ ಎಂದರೆ ಕುಂಭಕದಲ್ಲಿ ಸ್ಥಾಯಿಯಾಗಿ ಅಪಾನವಾಯುವಿನಲ್ಲಿ ಪ್ರಾಣವಾಯುವನ್ನೂ, ಪ್ರಾಣವಾಯುವಿನಲ್ಲಿ ಅಪಾನವಾಯುವನ್ನೂ ಪ್ರವೇಶಮಾಡಿಸುವರು. ಅವರು ಅದನ್ನೇ ಯಜ್ಞವೆಂದು ಭಾವಿಸುತ್ತಾರೆ. 12. ಕೆಲವರು ಯೋಗಿಗಳು ಯಜ್ಞನಾಮಕ ಹರಿಪ್ರೇರಣೆಯೆಂದರಿತು, ಬದುಕುವುದಕ್ಕೆ ಬೇಕಾಗುವಷ್ಟು ಮಾತ್ರ ಆಹಾರವನ್ನು ಸೇವಿಸುತ್ತ ಇಂದ್ರಿಯವೃತ್ತಿಗಳನ್ನು ಇಂದ್ರಿಯಗಳಲ್ಲಿ ಹೋಮ ಮಾಡುತ್ತಾರೆ. ಎಂದರೆ ಅಲ್ಪಾಹಾರದಿಂದ ಇಂದ್ರಿಯಗಳ ವಿಷಯ ಭೋಗಶಕ್ತಿಯನ್ನು ಹ್ರಾಸಹೊಂದಿಸಿ ಬಾಹ್ಯ ವಿಷಯಗಳ ಕಡೆಗೆ ಹೋಗದಂತೆ ಇಂದ್ರಿಯಗಳನ್ನು ನಿರೋಧಿಸುವರು. ಅಂತಹ ಇಂದ್ರಿಯ ನಿಯಮವನ್ನೇ ಯಜ್ಞವನ್ನಾಗಿ ಭಾವಿಸುವರು. ಈ ಹನ್ನೆರಡು ಬಗೆಯ ಯಜ್ಞಕರ್ತರೆಲ್ಲರೂ ಯಜ್ಞ ತತ್ವಜ್ಞಾನಿಗಳು ಮತ್ತು ಯಜ್ಞಾಚರಣೆಯಿಂದ ಪಾಪವನ್ನು ನಾಶ ಪಡಿಸಿಕೊಳ್ಳುವವರೂ ಆಗಿದ್ದೀರೆ.

1. ಈ ಶ್ಲೋಕದಲ್ಲಿ (ಅರ್ಪಣಂ ಬ್ರಹ್ಮ ಹವಿರ್ಬ್ರಹ್ಮ=ಯಜ್ಞದಲ್ಲಿ ಉಪಯೋಗಿಸುವ ಪಾತ್ರೆಯು, ಹವಿಸ್ಸು ಮೊದಲಾದ ಪದಾರ್ಥಗಳು ಬ್ರಹ್ಮನು ಎಂದು ಹೇಳಿರುವುದರಿಂದ ಹವಿಸ್ಸು ಮೊದಲಾದುವುಗಳಿಗೂ, ಬ್ರಹ್ಮನಿಗೂ ಅಭೇದವು ತೋರುತ್ತದೆ, ಜಡವಾದ ಹವಿಸ್ಸು ಮೊದಲಾದುವುಗಳು ಬ್ರಹ್ಮಸ್ವರೂಪವಲ್ಲದ ಕಾರಣ ಅಭೇದಾರ್ಥವು ಪ್ರಮಾಣವಿರುದ್ಧವು. ಆದುದರಿಂದ ಈ ವಾಕ್ಯಕ್ಕೆ ಅಭೇದಾರ್ಥವೆಂಬುದು ವಕ್ತೃವಿಗಭಿಮತವಲ್ಲ. ಮತ್ತೇನೆಂದರೆ :- ಯಜ್ಞಸಾಧನ ಪಾತ್ರೆ, ಹವಿಸ್ಸು ಮೊದಲಾದುವು ಬ್ರಹ್ಮಾಧೀನವಾದುವು ಎಂಬರ್ಥದಲ್ಲಿಯೇ ತಾತ್ಪರ್ಯವೆಂದು ನಿರ್ಣಯಿಸಬೇಕು. ಈ ಮುಖ್ಯಾರ್ಥವನ್ನೇ ಮೇಲೆ ಹೇಳಿದೆ. ಲೋಕದಲ್ಲಿಯೂ ರಾಜಾ ರಾಷ್ಟ್ರಂ=ರಾಜನೇ ದೇಶವು ಎಂಬುದಾಗಿ ವ್ಯವಹರಿಸುವ ವಾಡಿಕೆಯಿದೆ. ರಾಜನೇ ದೇಶವಲ್ಲ. ರಾಜನು ಬೇರೆ ದೇಶವು ಬೇರೆ ಎಂಬುದು ಪ್ರತ್ಯಕ್ಷಸಿದ್ಧವಾಗಿದೆ. ಆದುದರಿಂದ ದೇಶವು ರಾಜಾಧೀನ ಎಂಬ ಅಭಿಪ್ರಾಯದಿಂದ ರಾಜನೇ ದೇಶವೆಂಮ ಹೇಳಿದೆಯೆಂಬುದು ಪ್ರಸಿದ್ಧವಾಗಿದೆ. ಅದರಂತೆಯೇ 'ಅರ್ಪಣಂ ಬ್ರಹ್ಮ' ಇತ್ಯಾದಿ ವ್ಯವಹಾರವೂ ಬ್ರಹ್ಮಾಧೀನ ಎಂಬ ಅರ್ಥದಲ್ಲಿಯೇ ಮಾಡಲ್ಪಟ್ಟಿದೆಯೆಂದು ಸಿದ್ಧವಾಗುವುದು. ಇಂತಹ ಸಂದರ್ಭಗಳಲ್ಲಿ ಮೇಲೆ ಅಭೇದವು ತೋರಿದರೂ ಅದನ್ನು ಬಿಟ್ಟು ಸ್ವಾಮಿ, ಅಧೀನ ಮುಂತಾದ ಅರ್ಥವನ್ನು ಶಂಕರಾಚಾರ್ಯರೂ ಮಾಡಿರುವರು. "ಧರ್ಮಾವಿರುದ್ಧೋ ಭೂತೇಷು ಕಾಮೋಸ್ಮಿ ಭರತರ್ಷಭ' ಎಂಬ ಇದೇ ಗೀತೆಯ ೭ನೆಯ ಆಧ್ಯಾಯ ೧೧ ನೆಯ ಶ್ಲೋಕದಲ್ಲಿ ಕಾಮಪದಕ್ಕೆ 'ಕಾಮಸ್ವಾಮಿ' ಎಂದು ಅರ್ಥಮಾಡಿರುವರು: ಮತ್ತು ಬ್ರಹ್ಮಸೂತ್ರ ಶಾಂಕರಭಾಷ್ಯ(೨-೪-೧೯)ದಲ್ಲಿ "ಸರ್ವೇ ಪ್ರಾಣರೂಪಮಭವನ್' ಎಂಬ ಬೃಹದಾರಣ್ಯವಾಕ್ಯವನ್ನುದಾಹರಿಸಿ "ಪ್ರಾಣರೂಪಂ' ಎಂಬುದಕ್ಕೆ ಪ್ರಾಣಾಧೀನ ಎಂದು ಅರ್ಥ ಮಾಡಿರುವರು. ಹೀಗೆ ಅಭೇದವಿಲ್ಲದ ವಸ್ತುಗಳಿಗೆ ಅಭೇದವನ್ನು ಬೋಧಿಸುವಂತೆ ತೋರುವ ವ್ಯವಹಾರಗಳಿಗೆ ಪೂರ್ವೋತ್ತರ ಸಂದರ್ಭಾದಿ ಪರ್ಯಾಲೋಚನೆಯಿಂದ ಪ್ರಾಮಾಣಿಕವಾದ ಅರ್ಥವನ್ನು ಹೇಳುವುದು ಲೌಕಿಕ ವೈದಿಕ ಸಂಪ್ರದಾಯ ಸಿದ್ಧವಾಗಿರುವುದರಿಂದ ಪ್ರಕೃತದಲ್ಲಿ ಬ್ರಹ್ಮಪದಕ್ಕೆ ಬ್ರಹ್ಮಾಧೀನವೆಂದು ಅರ್ಥಮಾಡಿದೆ. ಮತ್ತು ಈ ಶ್ಲೋಕದಲ್ಲಿಯೇ ('ಅಗ್ನೌ ಬ್ರಹ್ಮಣ' ಎಂಬುದಾಗಿ ಬೋಧಿಸುವ ಪ್ರಯೋಗಗಳೂ ಈ ಅರ್ಥವನ್ನೇ ದೃಢಪಡಿಸುತ್ತವೆಯೆಂದು ತಿಳಿಯಬೇಕು.

| |
|---|
| ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮ ಸನಾತನಂ<br>ನಾಯಂ ಲೋಕೋSಸ್ತ್ಯಯಜ್ಞಸ್ಯ ಕುತೋSನ್ಯಃ ಕುರುಸತ್ತಮ॥4-31॥ |
| ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ<br>ಕರ್ಮಜಾನ್ವಿದ್ಧಿ ತಾನ್ಸರ್ವಾನೇವಂ ಜ್ಞಾತ್ವಾ ವಿಮೋಕ್ಷಸೇ ॥4-32॥ |
| 31. ಉಕ್ತಯಜ್ಞ ಪ್ರಭೇದಗಳನ್ನು ತಿಳಿದು ಅವುಗಳನ್ನಾಚರಿಸುವವರಿಗೂ, ಆಚರಿಸದಿರುವವರಿಗೂ ಆಗುವ ಫಲಗಳನ್ನು ವಿವರಿಸುತ್ತಾನೆ:- ಯಜ್ಞದಲ್ಲಿ ದೇವತೆಗಳಿಗಾಗಿ ಹೋಮಿಸಿ ಉಳಿದ ಆಜ್ಯಾದಿ ಪದಾರ್ಥಗಳು ಅಮೃತವೆನಿಸುವುವು. ಅದನ್ನು ಭುಂಜಿಸುವ ಯಜ್ಞಕರ್ತರು ಚಿತ್ತಶುದ್ಧಿ ದ್ವಾರಾ ಜ್ಞಾನವನ್ನು ಹೊಂದಿ ಅನಾದಿನಿತ್ಯನಾದ ಬ್ರಹ್ಮನನ್ನು ಹೊಂದುವರು. ಕುರುಕುಲಶೇಖರ! ಯಜ್ಞ ಮಾಡದಿರುವವನಿಗೆ ಅಲ್ಪಸುಖವುಳ್ಳ ಮನುಷ್ಯಲೋಕವೇ ಲಭಿಸುವುದಿಲ್ಲ. ಹೀಗಿರುವಾಗ ಮಹಾಸುಖವುಳ್ಳ ಸ್ವರ್ಗಾದಿಲೋಕ ಪ್ರಾಪ್ತಿಯು ಹೇಗಾದೀತು? ಆದಕಾರಣ ಸರ್ವ ಪ್ರಕಾರದಿಂದಲೂ ಯಜ್ಞವನ್ನಾಚರಿಸಬೇಕೆಂದು ಭಾವ. |
| 32. ಉಕ್ತಕರ್ಮಪ್ರಭೇದಗಳನ್ನು ಉಪಸಂಹಾರಮಾಡುತ್ತಾನೆ:- 'ದೈವಂ' ಇತ್ಯಾದಿ ಆರು ಶ್ಲೋಕಗಳಿಂದ ಉಕ್ತ ಪ್ರಕಾರವಾಗಿ ಮಾನಸಿಕ-ವಾಚನಿಕಾದಿ ಭೇದದಿಂದ ಬಹುವಿಧವಾದ ಯಜ್ಞಗಳು ಪರಮಾತ್ಮನ ಮುಖದಲ್ಲಿ ಸಮರ್ಪಿಸಲ್ಪಟ್ಟಿವೆ. (ಆತನೇ ಸಕಲಯಜ್ಞಭೋಕ್ತನಾದಕಾರಣ ಉಕ್ತಯಜ್ಞಗಳಲ್ಲೆಲ್ಲಾ ಪರಮಾತ್ಮನೇ ಆರಾಧಿಸಲ್ಪಡತಕ್ಕವನೆಂದು ಭಾವ.) ಬಹುವಿಧವಾದ ಆ ಯಜ್ಞಗಳೆಲ್ಲಾ ಮಾನಸಿಕ ಅಥವಾ ವಾಚನಿಕ ಇಲ್ಲವೇ ಕಾಯಿಕಕರ್ಮದಿಂದ ನಿಷ್ಪನ್ನವಾದುವುಗಳೆಂದು ತಿಳಿ. ಅರ್ಜುನ! ಹೀಗೆ ಮಾನಸಿಕ ಅಥವಾ ವಾಚನಿಕವಾದ ಸಕಲಯಜ್ಞಗಳೂ ಕರ್ಮರೂಪವೆಂದು ತಿಳಿದಿದ್ದೇ ಆದರೆ ಮೋಕ್ಷಕ್ಕಾಗಿ ನಿಹಿತವಾದ ಯುದ್ಧಾದಿಕರ್ಮಗಳನ್ನು ಮಾಡಬೇಕೆಂಬ ಇಚ್ಛೆಯು ನಿನಗೇ ಉಂಟಾಗಿ ಅದರಂತೆ ಆಚರಿಸಿ ಮುಕ್ತನಾಗುವೆ. (ಉಕ್ತ ಯಜ್ಞಗಳಲ್ಲಿ ಜ್ಞಾನ-ಉಪಾಸನ-ಸ್ವಾಧ್ಯಾಯಯಜ್ಞಗಳು ಕರ್ಮದಲ್ಲಿ ಸೇರುವುದಿಲ್ಲವೆಂದೂ ಅದನ್ನು ಆಚರಿಸಿ ಭಗವದನುಗ್ರಹವನ್ನು ಪಡೆಯಬಹುದಾಗಿರುವಾಗ ಯುದ್ಧ ಕರ್ಮವನ್ನೇ ಮಾಡಬೇಕೆಂಬ ನಿರ್ಬಂಧವೇಕೆ ಎಂಬ ಪಾರ್ಥನ ಪ್ರಶ್ನೆಗೆ ಇದು ಉತ್ತರವಾಗಿದೆ. ಅಭಿಪ್ರಾಯವೇನೆಂದರೆ:- ಅರ್ಜುನ! ಯುದ್ಧವನ್ನು ಬಿಟ್ಟು ಮೋಕ್ಷಕ್ಕಾಗಿ ಉಪಾಸನಾದಿಗಳನ್ನು ಮಾಡುವುದಾದರೂ ನೀನು ಕರ್ಮವನ್ನು ಬಿಟ್ಟಂತಾಗುವುದಿಲ್ಲ. ಉಪಾಸನಾದಿಗಳೂ ಕರ್ಮವೇ ಆಗಿವೆ. ಯುದ್ಧವನ್ನು ಬಿಟ್ಟರೆ ನೀನು ವಿಹಿತವಾದ ಕರ್ಮವನ್ನು |

ಬಿಟ್ಟಂತಾಯಿತೇ ಹೊರತು ಕರ್ಮತ್ಯಾಗ ಮಾಡಿದಂತಾಗುವುದಿಲ್ಲ; 'ವಿಹಿತಕರ್ಮತ್ಯಾಗದಿಂದ ಅನರ್ಥಕ್ಕೆ ದಾರಿಯಾಗುವುದು. ಆದಕಾರಣ ಕರ್ಮಸ್ವರೂಪವನ್ನರಿತು ಎಲ್ಲವೂ ಕರ್ಮಾತ್ಮಕವೇ ಆಗಿರುವುದೆಂಬ ತತ್ತ್ವವನ್ನು ತಿಳಿದರೆ ಹೇಗೂ ಕರ್ಮವನ್ನು ತ್ಯಾಗಮಾಡಲಾಗುವುದಿಲ್ಲ-ಕರ್ಮವನ್ನು ಮಾಡಿಯೇ ತೀರಬೇಕು-ಅದರಲ್ಲಿ ವಿಹಿತಕರ್ಮವನ್ನು ಬಿಟ್ಟು ವಿಹಿತವಲ್ಲದ ಉಪಾಸನಾದಿಗಳನ್ನಾಚರಿಸಿ ಅನರ್ಥಕ್ಕೀಡಾಗುವುದರ ಬದಲು ವಿಹಿತವನ್ನೇ ಆಚರಿಸಿ ಶ್ರೇಯೋಭಾಗಿಯಾಗೋಣ' ಎಂಬ ವಿವೇಕವುಂಟಾಗಿ ವಿಹಿತಯುದ್ಧವನ್ನು ಮಾಡಿ ಶ್ರೇಯೋವಂತನಾಗುವೆ ಎಂದು ತಾತ್ಪರ್ಯ.)

**ಶ್ರೇಯಾನ್ ದ್ರವ್ಯಮಯಾದ್ಯಜ್ಞಾಜ್ಞಾನಯಜ್ಞಃ ಪರಂತಪ**
**ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ॥4-33॥**

**33.** ಉಕ್ತ ನಾನಾವಿಧ ಯಜ್ಞಗಳಲ್ಲಿ ಯಾವುದು ಶ್ರೇಷ್ಠ ಎಂದರೆ, ಹೇಳುತಾನೆ:- ಉಕ್ತಯಜ್ಞಗಳ ಪೈಕಿ ದೇವತಾಪ್ರೀತಿಗಾಗಿ ಮಾಡುವ ದ್ರವ್ಯತ್ಯಾಗ ರೂಪವಾದ ಯಜ್ಞಗಳಿಗಿಂತ ಭಗವದ್ಜ್ಞಾನಸಂಪಾದನರೂಪವಾದ ಜ್ಞಾನಯಜ್ಞವು ಶ್ರೇಷ್ಠವು. ಏಕೆಂದರೆ, ಪಾರ್ಥ! ಅಖಿಲಂ ಸರ್ವಂ ಕರ್ಮ=ಕರ್ಮ ಸಾಫಲ್ಯದಾಯಕವಾದ ಉಪಾಸನಾದ್ಯಂಗ ಸಹಿತವಾದ ಸಕಲಕರ್ಮಗಳೂ ಜ್ಞಾನವು ಹುಟ್ಟಿದರೆ ಅದರಿಂದ ಸಫಲವಾಗುವುವು. (ಜ್ಞಾನವನ್ನು ಹುಟ್ಟಿಸಿ ಅದರಿಂದ ಸಫಲವೆನಿಸುವ ಕರ್ಮಕ್ಕಿಂತಲೂ ಸಾಕ್ಷಾತ್ತಾಗಿ ಜ್ಞಾನಸಂಪಾದನಾರೂಪವಾಗಿರುವುದರಿಂದ ಜ್ಞಾನಯಜ್ಞವು ಉತ್ತಮವೆಂದು ತಾತ್ಪರ್ಯ.)

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ॥4-34॥**

**34.** ಜ್ಞಾನವು ಕರ್ಮಕ್ಕಿಂತಲೂ ಅಧಿಕವೆಂದು ಹೇಳಿದ್ದಾಯಿತು. ಈಗ ಅದನ್ನು ಸಂಪಾದಿಸು ಎಂದು ಹೇಳುತ್ತಾನೆ:- ಸಕಲ ಕರ್ಮಗಳೂ ಜ್ಞಾನವನ್ನು ಹುಟ್ಟಿಸಿಯೇ ಸಫಲವೆನಿಸುವ ಕಾರಣ ಜ್ಞಾನವೇ ಕರ್ಮಕ್ಕಿಂತಲೂ ಉತ್ತಮ ಸಾಧನವಾಗಿರುವುದು. ಆದುದರಿಂದ, ತತ್ತ್ವ ಸಾಕ್ಷಾತ್ಕಾರವನ್ನು ಹೊಂದಿರುವ ಜ್ಞಾನಿಗಳು, ನೀನು ಮಾಡುವ ಸಾಷ್ಟಾಂಗ ನಮಸ್ಕಾರ ಗುರುಶುಶ್ರೂಷೆ ಮತ್ತು ತತ್ತ್ವಜಿಜ್ಞಾಸೆಯಿಂದ ಕೇಳುವ ಭಗವದ್ವಿಷಯಕ ಪ್ರಶ್ನೆ ಇವುಗಳಿಂದ ನಿನಗೆ ತತ್ತ್ವಜ್ಞಾನಜನಕ ಶಾಸ್ತ್ರವನ್ನು ಉಪದೇಶಿಸುತ್ತಾರೆ. ಅಂತಹ ಉಪದೇಶದಿಂದ ಜ್ಞಾತವ್ಯಾರ್ಥವನ್ನು ತಿಳಿಯುವವನಾಗು! ('ಜ್ಞಾನಿಗಳು ಉಪದೇಶಿಸುವರು' ಎಂದು ಹೇಳಿರುವುದು ಅರ್ಜುನನಿಗಲ್ಲ;

ಇತರ ಜಿಜ್ಞಾಸುಗಳಿಗೆಂದು ತಿಳಿಯಬೇಕು. ಅರ್ಜುನನಿಗಾದರೋ ಶ್ರೀಕೃಷ್ಣನೇ ತತ್ತ್ವೋಪದೇಶ ಮಾಡುವುದಕ್ಕಾಗಿ ಪ್ರವೃತ್ತನಾಗಿರುವುದರಿಂದ 'ಪಾರ್ಥ! ನ ತ್ವೈವಾಹಂ' ಇತ್ಯಾದಿ ಗ್ರಂಥದಿಂದ ಸಂಕ್ಷೇಪವಾಗಿ ಉಪದೇಶಿಸಿರುವೆನು. ('ಜ್ಞಾನಂ ತೇಽಹಂ ಸವಿಜ್ಞಾನಂ ಇತ್ಯಾದಿ ಗ್ರಂಥಗಳಿಂದ ವಿಸ್ತಾರವಾಗಿ ಉಪದೇಶಮಾಡುವೆನು' ಎಂದು ಶ್ರೀಕೃಷ್ಣನ ಅಭಿಪ್ರಾಯವೆಂದು ಭಾವ.)

**ಯಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ**
**ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ॥4-35॥**

**ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ**
**ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ॥4-36॥**

**ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ಕುರುತೇಽರ್ಜುನ**
**ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ॥4-37॥**

**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ**
**ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ॥4-38॥**

**35-38.** ಶ್ರೀಕೃಷ್ಣನು ಉಪದೇಶಿಸುವ ತತ್ತ್ವವನ್ನು ಸ್ತೋತ್ರಮಾಡುತಾನೆ:- ಪಾಂಡುಪುತ್ರನಾದ ಅರ್ಜುನ! ನಾನು ಮುಂದೆ ಉಪದೇಶಿಸುವ ತತ್ತ್ವವನ್ನು ತಿಳಿದಮೇಲೆ ನೀನು 'ಇವರು ನನ್ನ ಬಂಧುಗಳು-ನನ್ನಿಂದ ಹತರಾಗುವರು' ಇತ್ಯಾದಿ ಪ್ರಥಮಾಧ್ಯಾಯೋಕ್ತ ಮೋಹವನ್ನು ಹೊಂದುವುದಿಲ್ಲ. ಮತ್ತು ಯಾವ ಜ್ಞಾನದಿಂದ ಮೋಹನಾಶವಾದ ಬಳಿಕ ಸಕಲ ಪ್ರಾಣಿಗಳೂ ಸರ್ವಾಂತರ್ಯಾಮಿಯಾದ ನನ್ನನ್ನೇ ಉಪಜೀವಿಸಿಕೊಂಡು ಆಶ್ರಯಿಸಿರುವುದನ್ನು ನೋಡುವೆಯೋ ಅಂತಹ ಜ್ಞಾನವನ್ನು ಹೊಂದುವವನಾಗು! ಪಾಪಿಗಳೆಲ್ಲರಿಗಿಂತಲೂ ಅತ್ಯಂತಾಧಿಕವಾಗಿ ಪಾಪಮಾಡಿದವನಾದರೂ ಸಕಲ ಪಾಪವನ್ನೂ ಜ್ಞಾನವೆಂಬ ನಾವೆಯಿಂದ ದಾಟುವವನಾಗುವೆ! (ಜ್ಞಾನವು ಸಕಲ ಪಾಪಗಳನ್ನೂ ನಾಶಪಡಿಸುವುದೆಂದು ಭಾವ.) ಚೆನ್ನಾಗಿ ಪ್ರಜ್ವಲಿಸಿದ ಅಗ್ನಿಯು ಹೇಗೆ ಕಟ್ಟಿಗೆಗಳನ್ನು ಸುಟ್ಟು ಬೂದಿ ಮಾಡುವುದೋ ಹಾಗೆಯೇ ಅಪರೋಕ್ಷಜ್ಞಾನವೆಂಬ ಅಗ್ನಿಯು ಪ್ರಾರಬ್ಧ ಕರ್ಮವನ್ನು ಬಿಟ್ಟು ಉಳಿದ ಸಕಲ ಕರ್ಮಗಳನ್ನೂ ನಾಶಪಡಿಸುವುದು. ಆದಕಾರಣ ಜ್ಞಾನವು ಪ್ರಶಸ್ತವು. ಈ ಲೋಕದಲ್ಲಿ ಜ್ಞಾನಕ್ಕೆ ಸಮವಾದ ಪರಿಶುದ್ಧ ವಸ್ತುವು ಯಾವುದೂ ಇಲ್ಲ. ಸಾಧನವಾದ ನಿವೃತ್ತ ಕರ್ಮಾದಿಗಳನ್ನು ಚೆನ್ನಾಗಿ ಆಚರಿಸಿ ಸಿದ್ಧಿ

ಹೊಂದಿದವನು ಬಹುಕಾಲದಮೇಲೆ ಮನಸ್ಸಿನಲ್ಲಿ ಅಂತಹ ಮಹಾಪವಿತ್ರವಾದ ಶ್ರೀಹರಿಯ ಅಪರೋಕ್ಷಜ್ಞಾನವನ್ನು ಹೊಂದುವನು.

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ॥4-39॥

39. ಈ ರೀತಿಯಾಗಿ ಜ್ಞಾನವನ್ನು ಪ್ರಶಂಸಿಸಿ ಅದರ ಅಂತರಂಗ ಸಾಧನೆಯನ್ನೂ, ಫಲವನ್ನೂ ಹೇಳುತ್ತಾನೆ:- ಆಸ್ತಿಕ್ಯಬುದ್ಧಿಯುಳ್ಳವನು, ನನ್ನನೇ ಶರಣು ಹೊಂದಿದ ಭಕ್ತನು ಮತ್ತು ಜಿತೇಂದ್ರಿಯನೂ ಆಗಿರುವವನು ಅಪರೋಕ್ಷಜ್ಞಾನವನ್ನು ಹೊಂದುತ್ತಾನೆ. ಜ್ಞಾನಪ್ರಾಪ್ತಿಯಾದಮೇಲೆ ಪ್ರಾರಬ್ಧ ಕರ್ಮಶೇಷವಿಲ್ಲದಿದ್ದರೆ ಕೂಡಲೇ ಉತ್ತಮ ಸುಖರೂಪವಾದ ಮೋಕ್ಷವನ್ನು ಹೊಂದುವನು. ಪ್ರಾರಬ್ಧ ಕರ್ಮವಿದ್ದರೆ ಅದನ್ನು ಅನುಭವಿಸಿ ಮುಕ್ತನಾಗುವನೆಂದು ಅಭಿಪ್ರಾಯ.

ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ॥4-40॥

40. ಜ್ಞಾನಸಾಧನೆಗಳನ್ನಾಚರಿಸಿ ಜ್ಞಾನವನ್ನು ಹೊಂದದೆ ಪ್ರತಿಯಾಗಿ ವಿಪರೀತ ಜ್ಞಾನಾದಿಗಳನ್ನೇ ಹೊಂದಿರುವವನಿಗೆ ಆಗುವ ಅನರ್ಥವನ್ನು ಹೇಳುತಾನೆ:- ತತ್ವಜಾನವಿಲ್ಲದೆ ವಿಪರೀತಜ್ಞಾನಿಯು, ಶ್ರದ್ದೆಯಿಲ್ಲದೆ ನಾಸ್ತಿಕ್ಯ ಬುದ್ಧಿಯುಳ್ಳವನು ಮತ್ತು ತತ್ವವಿಷಯದಲ್ಲಿ ಸಂಶಯಚಿತ್ತನೂ ಆಗಿರುವವನು ನರಕಕ್ಕೆ ಭಾಗಿಯಾಗುವನು. ಅಷ್ಟೇ ಅಲ್ಲ; ಸಂಶಯಮನಸ್ಕನಿಗೆ ಅಲ್ಪಸುಖವುಳ್ಳ ಮಾನುಷ ಲೋಕವಾಗಲಿ, ಉತ್ತಮವಾದ ಸ್ವರ್ಗಾದಿ ಲೋಕವಾಗಲಿ ಪ್ರಾಪ್ತವಾಗುವುದಿಲ್ಲ. ಹೆಚ್ಚೇನು? ಸುಖವೇ ಇಲ್ಲ.

ಯೋಗಸನ್ನ್ಯಸ್ತಕರ್ಮಾಣಂ ಜ್ಞಾನಸಂಛಿನ್ನ ಸಂಶಯಂ
ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ॥4-41॥

ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾಽಽತ್ಮನಃ
ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ॥4-42॥

41. ಉಕ್ತ ಜ್ಞಾನಸಾಧನೆಗಳನ್ನು ಅನುವಾದಮಾಡಿ ಜ್ಞಾನಫಲವನ್ನು ಸ್ಪಷ್ಟಪಡಿಸುತ್ತಾನೆ:- ಧನಂಜಯ! ಭಗವಂತನಲ್ಲಿಯೇ ಮನಸ್ಸಿಟ್ಟು, ಸಕಲ ಕರ್ಮಗಳನ್ನೂ ಅವನಿಗೆ ಸಮರ್ಪಿಸುವವನು,

ಅಪರೋಕ್ಷಜ್ಞಾನದಿಂದ ಸಕಲ ಸಂಶಯಗಳನ್ನೂ ಪರಿಹರಿಸಿಕೊಂಡಿರುವವನು ಮತ್ತು ಪರಮಾತ್ಮ ಭಕ್ತನೂ ಆದವನನ್ನು ಕರ್ಮಗಳು ಬಂಧಿಸುವುದಿಲ್ಲ. ಅಂದರೆ ಅವನು ಮುಕ್ತನಾಗುವನೆಂದು ಭಾವ.

42. ಕೃಷ್ಣ! ಜ್ಞಾನಯೋಗ–ಕರ್ಮಯೋಗಗಳ ಮಹಿಮೆಯು ಹಾಗಿರಲಿ: ಈಗ ನಾನೇನು ಮಾಡಬೇಕು? ಎಂಬುದನ್ನು ಕೊನೆಯದಾಗಿ ಸ್ಪಷ್ಟೀಕರಿಸಿ ಹೇಳೆಂದರೆ, ಕರ್ಮವು ಕರ್ತವ್ಯವೆಂದು ತಿಳಿಸಿ ಉಪಸಂಹಾರ ಮಾಡುತ್ತಾನೆ: ಭರತ ಕುಲೋತ್ಪನ್ನನಾದ ಅರ್ಜುನ! ಜ್ಞಾನಸಾಧನೆಯಾದ ನಿಷ್ಕಾಮಕರ್ಮಾನುಷ್ಠಾನದಿಂದ ಪುರುಷಾರ್ಥಲಾಭವೂ, ಅದನ್ನಾಚರಿಸದಿದ್ದರೆ ನರಕಾದ್ಯನರ್ಥವೂ ಆಗುವುದರಿಂದ ಆತ್ಮಸ್ವರೂಪ ಜ್ಞಾನದಿಂದ ಹುಟ್ಟುವ, ಮನೋಗತವಾದ ಜೀವ ಪರಮಾತ್ಮ ವಿಷಯಕ ಸಂಶಯವನ್ನು ಪರಮಾತ್ಮ ತತ್ವಜ್ಞಾನವೆಂಬ ಖಡ್ಗದಿಂದ ಕತ್ತರಿಸಿ ಜ್ಞಾನಸಾಧನವಾದ ಕರ್ಮವನ್ನಾಚರಿಸು. ಏಳು ಪಾರ್ಥ! ಸನ್ನದ್ಧನಾಗು!

**ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ - ಶ್ರೀಕೃಷ್ಣಾರ್ಜುನಸಂವಾದೇ ಜ್ಞಾನಕರ್ಮಸಂನ್ಯಾಸಯೋಗೋ ನಾಮ ಚತುರ್ಥೋಽಧ್ಯಾಯಃ॥4-[42]॥**

## ಪಂಚಮೋಽಧ್ಯಾಯ ॥5-[29]॥

'ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ' 2-48, ಇತ್ಯಾದಿ ಶ್ಲೋಕದಿಂದ ಎರಡನೆಯ ಅಧ್ಯಾಯದಲ್ಲಿ ಸಂಗ್ರಹವಾಗಿ ಹೇಳಿ, ಮೂರು-ನಾಲ್ಕನೆಯ ಅಧ್ಯಾಯಗಳಲ್ಲಿ ವಿಶೇಷವಾಗಿ ವಿವರಿಸಲ್ಪಟ್ಟಿರುವ ಫಲಕಾಮನಾದಿ ತ್ಯಾಗಪೂರ್ವಕವಾಗಿ ಈಶ್ವರನು ಪ್ರೀತನಾಗಲೆಂಬ ಅನುಸಂಧಾನದಿಂದ ವರ್ಣಾಶ್ರಮವಿಹಿತ ಕರ್ಮಾನುಷ್ಠಾನವೆಂಬ ಕರ್ಮ ಯೋಗದಲ್ಲಿ ಸೇರಿರುವ ಫಲಕಾಮನಾತ್ಯಾಗ ಮತ್ತು ಭಗವತ್ಪೂಜೆಯೆಂಬ ಅನುಸಂಧಾನಪೂರ್ವಕ ವಿಹಿತಕರ್ಮಾನುಷ್ಠಾನ ಎಂಬ ಅಂಶಗಳನ್ನು ಈ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸುತ್ತಾನೆ. –

**ಅರ್ಜುನ ಉವಾಚ**

**ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ**
**ಯಚ್ಛ್ರೇಯಃ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಂ॥5-1॥**

1. ಅರ್ಜುನನು ಪ್ರಶ್ನಿಸುತ್ತಾನೆ:- ಕೃಷ್ಣ! ಪೂರ್ವಾಧ್ಯಾಯದಲ್ಲಿ 'ಯದೃಚ್ಛಾ ಲಾಭಸಂತುಷ್ಟಃ' 4-22. ಇತ್ಯಾದಿ ಗ್ರಂಥದಿಂದ ಕಾಮಾದಿ ತ್ಯಾಗ ಎಂಬ ಸಂನ್ಯಾಸವನ್ನೂ, 'ಕುರು ಕರ್ಮೈವ ತಸ್ಮಾತ್ತ್ವಂ' 4-13. ಇತ್ಯಾದಿ ಗ್ರಂಥದಿಂದ ವರ್ಣಾಶ್ರಮವಿಹಿತ ಕರ್ಮಗಳ ಯೋಗಂ=ಈಶ್ವರಾರ್ಪಣ

ಬುದ್ಧಿಪೂರ್ವಕಾನುಷ್ಠಾನವನ್ನೂ ಪ್ರಶಸ್ತವೆಂದು ಹೇಳಿರುವೆ. ಉಕ್ತ ಸಂನ್ಯಾಸ-ಯೋಗ ಇವೆರಡರಲ್ಲಿ ಉತ್ತಮವಾದುದು ಯಾವುದೆಂಬುದನ್ನು ನಿರ್ಧರಿಸಿ ಹೇಳು! (ಸಂನ್ಯಾಸವೇ ಉತ್ತಮ ಸಾಧನವಾಗಿದ್ದರೆ ಅದನ್ನೇ ಆಚರಿಸುವೆನು; ಅದಕ್ಕೆ ವಿರುದ್ಧವಾದ ರಾಗದ್ವೇಷಾದಿಪೂರಿತ ಯುದ್ಧ ಕರ್ಮವನ್ನು ನಿಶ್ಶಂಕವಾಗಿ ಬಿಡಲು ಅನುಕೂಲವಾಗುವುದೆಂಬ ಅಭಿಪ್ರಾಯದಿಂದ ಅರ್ಜುನನು ಈ ರೀತಿ ಪ್ರಶ್ನಿಸಿರುವನೆಂದು ಭಾವ.)

ಶ್ರೀ ಭಗವಾನುವಾಚ.

**ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ**
**ತಯೋಸ್ತು ಕರ್ಮಸಂನ್ಯಾಸಾತ್ಕರ್ಮಯೋಗೋ ವಿಶಿಷ್ಯತೇ॥5-2॥**

2. ಭಗವಂತನು ಉತ್ತರವನ್ನು ಹೇಳುತ್ತಾನೆ:- ಕಾಮಾದಿಪರಿತ್ಯಾಗವೆಂಬ ಸಂನ್ಯಾಸ ಮತ್ತು ಭಗವಪ್ರೀತ್ಯುದ್ದೇಶಪೂರ್ವಕ ವಿಹಿತ ಕರ್ಮಾನುಷ್ಠಾನವೆಂಬ ಕರ್ಮಯೋಗ ಇವೆರಡೂ ಒಟ್ಟಿಗೆ ಸೇರಿಯೇ ಮೋಕ್ಷಸಾಧನೆಗಳಾಗುತ್ತವೆ. ಆ ಎರಡು ಸಾಧನೆಗಳ ಪೈಕಿ ಕರ್ಮ ಸಂನ್ಯಾಸಾತ್=ಕರ್ಮಣಿ ಸಂನ್ಯಾಸಃ ಕರ್ಮಾಚರಣೆಯ ವಿಷಯದಲ್ಲಿ ರಾಗದ್ವೇಷಾದಿ ಪರಿತ್ಯಾಗವೆಂಬ ಸಂನ್ಯಾಸಕ್ಕಿಂತಲೂ ಭಗವತಪ್ರೀತ್ಯುದ್ದೇಶಪೂರ್ವಕ ಕರ್ಮಾನುಷ್ಠಾನವೆಂಬ ಕರ್ಮಯೋಗವೇ ಶ್ರೇಷ್ಠವು. ('ದ್ವಂದ್ವತ್ಯಾಗಾತ್ತು ಸಂನ್ಯಾಸಾನ್ಮತ್ತೂಜ್ಯೈವ ಗರೀಯಸೀ' ಎಂಬ ವಚನವೂ ಇದಕ್ಕೆ ಸಾಧಕವಾಗಿದೆ.)

**ಜ್ಞೇಯಃ ಸ ನಿತ್ಯ ಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ**
**ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ಪ್ರಮುಚ್ಯತೇ॥5-3॥**

3. ಪೂರ್ವೋಕ್ತ ಸಂನ್ಯಾಸಶಬ್ದವು ಯತ್ಯಾಶ್ರಮಬೋಧಕವಲ್ಲವೆಂಬ ಅಭಿಪ್ರಾಯದಿಂದ ಸಂನ್ಯಾಸಶಬ್ದಾರ್ಥವನ್ನು ಭಗವಂತನೇ ಸ್ಪಷ್ಟ ಪಡಿಸುತ್ತಾನೆ:- (ಈ ಸಂನ್ಯಾಸ ಶಬ್ದಾರ್ಥವು 'ಯದೃಚ್ಛಾಲಾಭಸಂತುಷ್ಟಃ' 4-22. ಇತ್ಯಾದಿ ಗ್ರಂಥದಿಂದ ವಿವರಿಸಲ್ಪಟ್ಟಿದೆ. ಅದನ್ನು ತಿಳಿದೂ ಅರ್ಜುನನು ಪ್ರಶ್ನೆ ಮಾಡಿರುವನು. ಆದರೂ ಸಂನ್ಯಾಸವು ಮೋಕ್ಷಸಾಧನವೆಂದು ಹೇಳಿದುದನ್ನು ನಿರೂಪಣೆ ಮಾಡಲು ಉಕ್ತವಾದ ಸಂನ್ಯಾಸ ಪದಾರ್ಥವನ್ನೆ ಜ್ಞಾಪಿಸುವನೆಂದು ಭಾವ.) ಪರಾಕ್ರಮಶಾಲಿಯಾದ ಅರ್ಜುನ! ಯಾವನು ದ್ವೇಷ-ಆಕಾಂಕ್ಷೆಗಳನ್ನು ಬಿಟ್ಟಿರುವನೋ, ಕಾಮ್ಯ ಕರ್ಮವನ್ನೂ ಆಚರಿಸುವುದಿಲ್ಲವೋ ಮತ್ತು ಸುಖದುಃಖಾದಿ ದ್ವಂದ್ವಗಳಿಂದ ವಿಕಾರ ಹೊಂದದೆ ಏಕರೀತಿಯಾಗಿರುವನೋ ಅವನು ನಿತ್ಯಸಂನ್ಯಾಸಿಯೆಂಬುದನ್ನು ನೆನಪಿನಲ್ಲಿಡುವವನಾಗು.

ಅಂತಹ ಸಂನ್ಯಾಸಿಯೇ ಅನಾಯಾಸವಾಗಿ ಬಂಧದಿಂದ ಮುಕ್ತನಾಗುತ್ತಾನೆಂಬುದು ಪ್ರಸಿದ್ಧವಾಗಿದೆ. (ಆದಕಾರಣ ನೀನು ಯುದ್ಧ ಕರ್ಮವನ್ನು ಬಿಡತಕ್ಕದಲ್ಲ; ನಿಷ್ಕಾಮವಾಗಿ ಆಚರಿಸಬೇಕೆಂದು ಭಾವ.)

**ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ**
**ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಂ॥5-4॥**

4. ಸಂನ್ಯಾಸವು ತತ್ವಜ್ಞಾನಸಾಧಕವೆಂದು 'ನ ತಸ್ಯ ತತ್ವಗ್ರಹಣಾಯ ಸಾಕ್ಷಾತ್' ಇತ್ಯಾದಿ ಶ್ರೀಮದ್ಭಾಗವತ ಪಂಚಮಸ್ಕಂಧದಲ್ಲಿ ಹೇಳಿದೆ. (ಅಗ್ನಿ ಮುಗ್ಧಃ' ಇತ್ಯಾದಿ ಶ್ರುತಿಯಲ್ಲಿ ಕರ್ಮಯೋಗವು ಜ್ಞಾನವಿರೋಧಿಯೆಂದು ಹೇಳಿದೆ. ಜ್ಞಾನವಾದರೋ ಮುಮುಕ್ಷುಗಳಿಗೆ ಅವಶ್ಯಬೇಕಾದುದು. ಅದಕ್ಕೆ ಸಂನ್ಯಾಸವು ಸಾಧಕವೂ, ಕರ್ಮಯೋಗವು ವಿರೋಧಿಯೂ ಆಗಿದೆ. ಹೀಗಿರುವಾಗ ಕರ್ಮ ಯೋಗವು ಶ್ರೇಷ್ಠವೆನ್ನುವ ಬಗೆ ಹೇಗೆ? ಅದಕ್ಕಿಂತ ಸಂನ್ಯಾಸವು ಅವರವು ಹೇಗಾದೀತು ಎಂಬ ಶಂಕೆಗೆ ಉತ್ತರ ಹೇಳುತ್ತಾನೆ:- ಶ್ರವಣಾದಿಜನ್ಯ ತತ್ವಜ್ಞಾನ ಮತ್ತು ಭಗವದರ್ಪಣ ಬುದ್ಧಿ ಪೂರ್ವಕ ವಿಹಿತಕರ್ಮಾನುಷ್ಠಾನವೆಂಬ ಕರ್ಮಯೋಗ ಇವರಡೂ ಪೃಥಕ್=ಭಿನ್ನ ಮಾರ್ಗಗಳು (ಎಂದರೆ ಕರ್ಮಯೋಗವು ಜ್ಞಾನಸಾಧಕವಲ್ಲ; ಅದೇ ಪ್ರತ್ಯೇಕವು, ಜ್ಞಾನವು ಕರ್ಮಯೋಗಸಾಧ್ಯವೂ ಅಲ್ಲ; ಅದೇ ಬೇರೆ) ಎಂದು ಅವಿವೇಕಿಗಳು ಹೇಳುತ್ತಾರೆ. ಜ್ಞಾನಿಗಳಾದರೋ ಕರ್ಮಯೋಗಜ್ಞಾನ ಯೋಗಗಳೆರಡೂ ಒಂದೇ ಮೋಕ್ಷಸಾಧನ ಪರಂಪರೆಯಲ್ಲಿ ಸೇರಿರುವುವು (ಎಂದರೆ ಕರ್ಮಯೋಗದಿಂದ ಜ್ಞಾನವುಂಟಾಗುವುದರಿಂದ ಜ್ಞಾನಕರ್ಮಗಳು ಸಾಧ್ಯ-ಸಾಧನ ಭಾವಾಪನ್ನವಾಗಿ ಮೋಕ್ಷಸಾಧನ ಪರಂಪರೆಯಲ್ಲಿ ಸೇರಿರುವುವು) ಎಂದು ತಿಳಿದಿರುವವರೇ ಹೊರತು ಅವಿವೇಕಿಗಳಂತೆ ಕರ್ಮಯೋಗವು ಜ್ಞಾನಸಾಧಕವಲ್ಲವೆಂದು ಹೇಳುವುದಿಲ್ಲ. ಏಕೆಂದರೆ ಜ್ಞಾನಕರ್ಮಮಾರ್ಗಗಳಲ್ಲಿ ಯಾವುದಾದರೊಂದನ್ನು ಚೆನ್ನಾಗಿ ಅನುಸರಿಸಿರುವವನೂ ಜ್ಞಾನಕರ್ಮಗಳೆರಡರ ಫಲವನ್ನೂ ಹೊಂದುವನು. (ಎಂದರೆ ಕರ್ಮಯೋಗಿಯು ಜ್ಞಾನವನ್ನು ಹೊಂದಿ ಸಾಕ್ಷಾತ್ಕಾರ ಮೂಲಕವಾಗಿ ಮೋಕ್ಷವನ್ನು ಪಡೆಯುವನು. ಸಾಂಖ್ಯಯೋಗಿ=ತತ್ವಜ್ಞಾನಿಯು ಸಾಕ್ಷಾತ್ತಾಗಿ ಅಪರೋಕ್ಷಜ್ಞಾನವನ್ನು ಹೊಂದಿ ಭಗವದನುಗ್ರಹದಿಂದ ಮುಕ್ತನಾಗುವನು. ಅಂತೂ ಕರ್ಮಯೋಗಿಗೆ ಜ್ಞಾನವೂ, ಅದರ ಫಲವೂ ಬಂದೇಬರುವುದು. ಆದುದರಿಂದ ಜ್ಞಾನಕರ್ಮಗಳೆರಡೂ ಒಂದೇ ಮೋಕ್ಷಸಾಧನ ಪರಂಪರೆಯಲ್ಲಿ ಸೇರಿದ ಸಾಧಕಗಳು; ವಿರುದ್ಧ ಮಾರ್ಗಗಳಲ್ಲ. ಹೀಗೆ ಸಂನ್ಯಾಸದಂತೆ ಕರ್ಮವೂ

ಜ್ಞಾನಸಾಧನವಾಗಿದೆ. ಆದರೆ ಕರ್ಮಾನುಷ್ಠಾನಕ್ಕೆ ಸಂನ್ಯಾಸವು ಅಂಗವಾಗಿದೆ. ಕರ್ಮವು ಅಂಗಿಯು, ಅಂಗ ಮತ್ತು ಅಂಗಿಗಳಲ್ಲಿ ಅಂಗಕ್ಕಿಂತ ಅಂಗಿಯು ಶ್ರೇಷ್ಠ ಎಂಬುದು ಪ್ರಸಿದ್ಧವು. ಆದಕಾರಣ ಸಂನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠ ಎಂಬುದು ಯುಕ್ತವೇ ಸರಿ. ಹಿಂದೆ ಹೇಳಿದ 'ಅಗ್ನಿ ಮುಗ್ಧಃ' ಇತ್ಯಾದಿ ಶ್ರುತಿಯು ಕಾಮ್ಯಕರ್ಮವನ್ನು ಜ್ಞಾನವಿರೋಧಿಯೆಂದು ತಿಳಿಸುತ್ತದೆ. ಇಲ್ಲಿ ಪ್ರಸಕ್ತವಾಗಿರುವುದು ನಿಷ್ಕಾಮಕರ್ಮವಾದುದರಿಂದ ವಿರೋಧವಿಲ್ಲವೆಂದು ತಿಳಿಯಬೇಕು.)

**ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ**
**ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ॥5-5॥**

5. ಹಿಂದಿನ ಶ್ಲೋಕದಿಂದ ಜ್ಞಾನಕರ್ಮಯೋಗಗಳೆರಡೂ ಯಾವುದೋ ಒಂದು ಫಲಕ್ಕೆ ಸ್ವತಂತ್ರಸಾಧನವೆಂದು ಸಿದ್ಧಿಸುವುದೇ ಹೊರತು ಕರ್ಮ ಯೋಗವು ಜ್ಞಾನಸಾಧನವೆಂದು ಸಿದ್ಧಿಸುವುದಿಲ್ಲವಾದ ಕಾರಣ ಅದರ ಅಭಿಪ್ರಾಯವನ್ನು ತಾನೇ ಸ್ಪಷ್ಟ ಪಡಿಸುತ್ತಾನೆ:- ಜ್ಞಾನಿಗಳಿಂದ ಭಗವಂತನ ಸ್ವರೂಪವೆಂಬ ಯಾವ ಸ್ಥಾನವು ಹೊಂದಲ್ಪಡುವುದೋ ಆ ಸ್ಥಾನವೇ (ಮೋಕ್ಷವು) ಕರ್ಮಯೋಗಿಗಳಿಂದಲೂ ಜ್ಞಾನ ಮೂಲಕವಾಗಿ ಹೊಂದಲ್ಪಡುತ್ತದೆ. ಹೀಗೆ ಸಾಂಖ್ಯ, ಯೋಗ ಇವರಡೂ ಕಾರ್ಯಕಾರಣ ಭಾವವನ್ನು ಹೊಂದಿ ಭಗವತ್ಪ್ರಾಪ್ತಿಯೆಂಬ ಒಂದೇ ಫಲಕ್ಕೆ ಸಾಧಕವಾಗುವುದೆಂದು ಯಾವನು ತಿಳಿಯುವನೋ ಅವನೇ ವಿವೇಚನಾಶೀಲನಾದ ಜ್ಞಾನಿಯು. (ಏವಂಚ ಸಂನ್ಯಾಸಯೋಗಗಳೆರಡೂ ತತ್ತ್ವಜ್ಞಾನಸಾಧಕಗಳೇ ಆಗಿರುವುದರಿಂದ ಯಾವ ವಿರೋಧವೂ ಇಲ್ಲವೆಂದು ಭಾವ.)

**ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ**
**ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ॥5-6॥**

6. ಕರ್ಮಯೋಗಕ್ಕಿಂತಲೂ ಕಾಮಾದಿವರ್ಜನರೂಪ ಸಂನ್ಯಾಸವು ಅಧಮ ಎಂಬುದಕ್ಕೆ ಕಾರಣವನ್ನು ಹೇಳುತ್ತಾನೆ:- ಭಗವದರ್ಪಣಪೂರ್ವಕ ಕರ್ಮಾನುಷ್ಠಾನವಂಬ ಯೋಗವಿಲ್ಲದಿದ್ದರೆ ಕೇವಲ ಕಾಮಾದಿ ಪರಿತ್ಯಾಗವೆಂಬ ಸಂನ್ಯಾಸವು ಆಯಾಸಕ್ಕೆ ಕಾರಣವಾಗುವುದೇ ಅಲ್ಲದೆ, ವಿಹಿತ ಕರ್ಮವನ್ನಾಚರಿಸದೆ ಹೋಗುವುದರಿಂದ ನರಕಕ್ಕೆ ಸಾಧಕವೂ ಆಗುವುದು. (ದ್ವಂದ್ವ ಸಹನಶೀಲನಾದ ಸಂನ್ಯಾಸಿಗೆ ಅವಮಾನಾದಿಗಳಿಂದಾಗಬಹುದಾದ ದುಃಖವಾಗುವುದಿಲ್ಲ. ಅಂತಹ ದುಃಖಾಭಾವವು ಸಂನ್ಯಾಸದ ಫಲವಲ್ಲವೆ ಎಂದರೆ, ಅದು ಅತ್ಯಲ್ಪವಾದುದರಿಂದ

ಮೋಕ್ಷಾರ್ಥಿಯು ಅದನ್ನು ಫಲವೆಂದು ಪರಿಗಣಿಸಲಾರನೆಂದು ಭಾವ.) ಸಂನ್ಯಾಸಿಯು ಈಶ್ವರಾರ್ಪಣೋದ್ದೇಶದಿಂದ ವಿಹಿತ ಕರ್ಮವನ್ನಾಚರಿಸುವವನಾದರೆ ಶೀಘ್ರವಾಗಿ ಬ್ರಹ್ಮನನ್ನು ಹೊಂದುವನು. (ಮೋಕ್ಷವನ್ನು ಪಡೆಯುವನೆಂದು ಭಾವ. ಹೀಗೆ ಕರ್ಮಯೋಗಕ್ಕೆ ಸಂನ್ಯಾಸವು ಅಂಗವಾದುದರಿಂದ ಅಂಗಿಕರ್ಮಕ್ಕಿಂತ ಅದು ಅಧಮವೆಂದು ಹೇಳಿರುವುದು ಯುಕ್ತವೇ ಸರಿ.)

**ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ।**
**ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ॥5-7॥**

7. ಯೋಗಸಹಿತ ಸಂನ್ಯಾಸವು ಮಹಾಫಲದಾಯಕವೆಂದು ವಿವರಿಸುತ್ತಾನೆ:- ಪರಿಶುದ್ಧ ಸ್ವಭಾವವುಳ್ಳ, ಮನಸ್ಸು ಮತ್ತು ಬಾಹ್ಯೇಂದ್ರಿಯಗಳನ್ನು ನಿಗ್ರಹಿಸಿ ಸ್ವಾಧೀನದಲ್ಲಿಟ್ಟುಕೊಂಡು ಕಾಮಕ್ರೋಧಾದಿಗಳನ್ನು ತ್ಯಾಗಮಾಡಿದ ಮೋಕ್ಷಾರ್ಥಿಯು ಈಶ್ವರಾರ್ಪಣಬುದ್ಧಿಪೂರ್ವಕವಾಗಿ ವಿಹಿತ ಕರ್ಮವನ್ನು ಆಚರಿಸುವವನಾಗಿ ಸಕಲ ಪ್ರಾಣಿಗಳಿಗೂ ಅಂತರಾತ್ಮನಾಗಿರುವ ಸರ್ವಶನೇ ನನಗೂ ಸ್ವಾಮಿಯೆಂದರಿಯುವನು. ಅಂತಹವನು ಕರ್ಮವನ್ನು ಮಾಡಿದರೂ ಪಾಪಲೇಪವನ್ನು ಹೊಂದುವುದಿಲ್ಲ. ಮುಕ್ತನಾಗುವನೆಂದು ಭಾವ. (ಇದರಿಂದ ಸಂನ್ಯಾಸಕ್ಕೆ ಜಿತೇಂದ್ರಿಯತ್ವಾತ್ವಾದಿ ಕಾರಣಗಳನ್ನೂ, ಕರ್ಮಯೋಗಕ್ಕೆ ಪಾಪಲೇಪಾಭಾವ-ಭಗವದ್ದಾಸತ್ವಜ್ಞಾನಗಳು ಅವಾಂತರ ಫಲಗಳೆಂದೂ, ಇವುಗಳ ಮೂಲಕವಾಗಿ ಕರ್ಮಯೋಗಿಯು ಸಾಕ್ಷಾತ್ಕಾರವನ್ನು ಹೊಂದಿ ಮುಕ್ತನಾಗುವನೆಂದೂ ವಿವರಿಸಿದುದಾಗಿ ತಿಳಿಯಬೇಕು.)

**ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್**
**ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ ಅಶ್ನನ್ ಗಚ್ಛನ್ ಸ್ವಪನ್ ಶ್ವಸನ್॥5-8॥**

**ಪ್ರಲಪನ್ವಿಸೃಜನ್ ಗೃಹ್ಣನ್ನುನ್ಮಿಷನ್ನಿಮಿಷನ್ನಪಿ**
**ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥5-9॥**

8-9. ಉಕ್ತಸಂನ್ಯಾಸದಲ್ಲಿ ಸಂಕಲ್ಪ ತ್ಯಾಗವೂ ಒಂದು ಭಾಗವೆಂಬುದನ್ನು ವಿವರಿಸುತ್ತಾನೆ :- ಕರ್ಮಯೋಗವನ್ನಾಚರಿಸುವ ತತ್ತ್ವಜ್ಞಾನಿಯು ರೂಪಾದಿಗಳನ್ನು ನೋಡುವುದು, ಶಬ್ದವನ್ನು ಕೇಳುವುದು, ಸ್ಪರ್ಶಮಾಡುವುದು, ವಾಸನೆಯನ್ನು ತಿಳಿಯುವುದು, ತಿಂದು ರುಚಿಯನ್ನು ಗ್ರಹಿಸುವುದು, ತಿರುಗುವುದು, ನಿದ್ರೆಮಾಡುವುದು, ಶ್ವಾಸಬಿಡುವುದು, ಮಾತನಾಡುವುದು, ಮಲಮೂತ್ರವಿಸರ್ಜನೆಮಾಡುವುದು, ಕೈ ಗಳಿಂದ ಹಿಡಿಯುವುದು, ಕಣ್ಣು ಬಿಡುವುದು-ಮುಚ್ಚುವುದು ಎಂಬೀರೀತಿಯಾಗಿ ಚಕ್ಷುರಾದಿ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ವ್ಯಾಪಾರಗಳನ್ನು

ಮಾಡುವವನಾದರೂ 'ಚಕ್ಷುರಾದೀಂದ್ರಿಯಗಳು ಪರಮಾತ್ಮನಿಂದ ಪ್ರೇರಿಸಲ್ಪಟ್ಟು ಶಬ್ದಾದಿ ವಿಷಯಗಳಲ್ಲಿ ಪ್ರವರ್ತಿಸುತ್ತವೆ; ನಾನು ಸ್ವತಂತ್ರವಾಗಿ ಏನನ್ನೂ ಮಾಡಲಾರೆನು' ಎಂದು ಅನುಸಂಧಾನಮಾಡಬೇಕು. –

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ
ಲಿಪ್ಯತೇ ನ ಸ ಪಾಪೇನ ಪದ್ಮಪತ್ರ ಮಿವಾಂಭಸಾ॥5-10॥

**10.**ಸಂನ್ಯಾಸ-ಯೋಗ ಇವೆರಡೂ ಮಿಳಿತವಾಗಿಯೇ ಮೋಕ್ಷಸಾಧನವಾಗುವುವು ಎಂಬ ಪೂರ್ವೋಕ್ತ ನಿಯಮವನ್ನು ಫಲಕಥನಪೂರ್ವಕವಾಗಿ ದೃಢಪಡಿಸುತ್ತಾನೆ:- ಸ್ವಾತಂತ್ರ್ಯಾಭಿಮಾನ ಮತ್ತು ಫಲಾಪೇಕ್ಷೆಗಳನ್ನು ಬಿಟ್ಟು 'ನನ್ನ ಶ್ರೇಯಸ್ಸಿಗಾಗಿ ಹರಿಯೇ ತನ್ನ ಪೂಜಾತ್ಮಕವಾದ ಕರ್ಮಗಳನ್ನು ನನ್ನಿಂದ ಮಾಡಿಸುವನು' ಎಂಬುದಾಗಿ ತಿಳಿದು ಯಾವಾತನು ವಿಹಿತಕರ್ಮಗಳನ್ನು ಮಾಡುವನೋ ಅಂತಹವನು ತಾವರೆಯ ಎಲೆಯಮೇಲೆ ಬಿದ್ದ ನೀರು ಹೇಗೆ ಎಲೆಯ ಸಂಬಂಧವನ್ನು ಹೊಂದುವುದಿಲ್ಲವೋ ಹಾಗೆ ಪಾಪಸಂಬಂಧವನ್ನು ಹೊಂದುವುದಿಲ್ಲ. ಮತ್ತು ಜ್ಞಾನದ್ವಾರಾ ಮುಕ್ತನಾಗುವನು.

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ॥5-11॥

**11.** ಸಂನ್ಯಾಸ-ಯೋಗಗಳೆರಡೂ ಮಿಳಿತವಾಗಿಯೇ ಫಲಕೊಡುತ್ತವೆ ಎಂಬ ವಿಷಯವನ್ನು ಪೂರ್ವಾಚಾರದಿಂದಲೂ ತಿಳಿಯಬಹುದೆಂದು ಹೇಳುತ್ತಾನೆ: ಯೋಗಿಗಳೂ ಸಹ ಮನಶುದ್ಧಿಯನ್ನು ಹೊಂದುವುದಕ್ಕಾಗಿ ಕಾಮ, ಅಹಂಭಾವಗಳನ್ನು ಬಿಟ್ಟು, ಫಲವನ್ನು ಅಪೇಕ್ಷಿಸದೆ ಶರೀರ, ಮನಸ್ಸು, ಬುದ್ಧಿ (ಅಂತಃಕರಣ) ಮತ್ತು ಇಂದ್ರಿಯಗಳು ಇವುಗಳಿಂದ ಕರ್ಮಮಾಡುವರು.

ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಂ
ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ॥5-12॥

**12.** ಯೋಗ-ಸಂನ್ಯಾಸಗಳಲ್ಲಿ ಯೋಗ ಅಥವಾ ಸಂನ್ಯಾಸವು ಪ್ರತ್ಯೇಕವಾಗಿ ಫಲಸಾಧಕವಾಗಲಾರದೆಂದೂ, ಎರಡೂ ಸೇರಿಯೇ ಫಲವನ್ನು ಕೊಡುವುವು ಎಂಬ ನಿಯಮವನ್ನು ಹಿಂದೆ ನಿರೂಪಿಸಿದನು. ಈಗ ಯೋಗ-ಸಂನ್ಯಾಸಗಳೆರಡನ್ನೂ ಬಿಟ್ಟು ಬೇರೆ ಸಾಧನದಿಂದ ಮೋಕ್ಷವನ್ನು ಸಂಪಾದಿಸಬಹುದೇ ಎಂದು ಕೇಳಿದರೆ, ಬೇರೆ ಉಪಾಯವಿಲ್ಲ . ಸಂನ್ಯಾಸಯೋಗಗಳೇ ಉಪಾಯವೆಂಬ ನಿಯಮವನ್ನು ತಿಳಿಸಲು ಸಂನ್ಯಾಸಯೋಗಾನುಷ್ಠಾನ

ಮಾಡಿದವನಿಗೆ ಮುಕ್ತಿಯೂ, ಅದನ್ನಾಚರಿಸದವನಿಗೆ ಸಂಸಾರವೂ ಸಂಭವಿಸುವುದೆಂಬ ಅನ್ವಯ-ವ್ಯತಿರೇಕಗಳನ್ನು ತಿಳಿಸುತಾನೆ:- ಕರ್ಮಫಲಾಕಾಂಕ್ಷೆಯನ್ನು ಬಿಟ್ಟು ಎಂದರೆ ಕಾಮಾದಿಪರಿತ್ಯಾಗವೆಂಬ ಸಂನ್ಯಾಸವನ್ನು ಅವಲಂಬಿಸಿ ಭಗವದರ್ಪಣೋದ್ದೇಶಪೂರ್ವಕವಾಗಿ ವಿಹಿತಕರ್ಮಾನುಷ್ಠಾನರೂಪ ಯೋಗವನ್ನಾಚರಿಸಿದವನು ನೈಷ್ಠಿ ಕೀಂ ಶಾಂತಿ=ಸ್ವರೂಪಾನಂದಾವಿರ್ಭಾವರೂಪ ಮುಕ್ತಿಯನ್ನು ಹೊಂದುತ್ತಾನೆ. ಇಂತಹ ಯೋಗರಹಿತನು ಫಲಾಪೇಕ್ಷೆಯಿಂದಲೇ ಕರ್ಮವನ್ನಾಚರಿಸುವುದರಿಂದ ಕ್ಷುದ್ರಫಲವನ್ನೇ ಅನುಭವಿಸುವವನಾಗಿ ಹೆಚ್ಚಿನ ಸಂಸಾರಬಂಧಕ್ಕೆ ಗುರಿಯಾಗುವನು.

**ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೆ ಸುಖಂ ವಶೀ**

**ನವದ್ವಾರೇ ಪುರೇ ದೇಹೀ ನೈವ ಕುರ್ವನ್ನಕಾರಯನ್॥5-13॥**

**13.** 'ನೈವ ಕಿಂಚಿತ್ಕರೋಮಿ' 5-8, ಎಂಬ ಶ್ಲೋಕದಲ್ಲಿ ಕರ್ತೃತ್ವಾಭಿಮಾನತ್ಯಾಗವನ್ನು ಸಂನ್ಯಾಸದ ಅಂಶವೆಂದು ಸ್ಪಷ್ಟ ಪಡಿಸಿದೆ. ಈಗ ಕಾರಯಿತೃತ್ವಾಭಿಮಾನತ್ಯಾಗವೂ ಸಂನ್ಯಾಸಶಬ್ದಾರ್ಥಾಂತರ್ಗತವೆಂದು ಸ್ಪಷ್ಟಪಡಿಸುತ್ತಾನೆ: ಜಿತೇಂದ್ರಿಯನಾದ ಪ್ರಾಣಿಯು ಸರ್ವಕರ್ಮಾಣಿ[1] ಮನಸಾ ಸಂನ್ಯಸ್ಯ='ಭಗವಂತನೇ ನನ್ನ ಶ್ರೇಯಸ್ಸಿಗಾಗಿ ತನ್ನ ಪೂಜಾತ್ಮಕಗಳಾದ ಸಕಲಕರ್ಮಗಳನ್ನೂ ನನ್ನಿಂದ ಮಾಡಿಸುವನು, ನನ್ನ ಕರ್ತೃತ್ವ ಶಕ್ತಿಯೂ ಆವನ ಅಧೀನವು' [2]ಎಂದು ಭಾವಿಸಿ, 'ನಾನು ಸ್ವತಂತ್ರವಾಗಿ ಏನನ್ನೂ ಮಾಡುವವನಲ್ಲ-ಮಾಡಿಸುವವನೂ ಅಲ್ಲ' ಎಂಬ ಅನುಸಂಧಾನವುಳ್ಳವನಾಗಿ ಕಣ್ಣು, ಕಿವಿ, ಮೂಗುಗಳ ಎರಡೆರಡು ರಂಧ್ರಗಳೂ ಸೇರಿ ಒಂಭತ್ತು ದ್ವಾರಗಳುಳ್ಳ ಶರೀರದಲ್ಲಿ ಸುಖವಾಗಿರುವನು ಎಂದರೆ, ಕರ್ಮಲೇಪರಹಿತನಾಗಿರುವನೆಂದರ್ಥ. (ಹೀಗೆ ದೇಹದಲ್ಲಿ ಅನೇಕ ದ್ವಾರಗಳಿರುವುದರಿಂದ ಕಾಮಾದಿ ಅರಿಷಡ್ವರ್ಗವು ದೇಹದೊಳಗೆ ಪ್ರವೇಶಿಸುವುದಕ್ಕೆ ಬಹಳವಾಗಿ ಅವಕಾಶವಿದ್ದರೂ ಇಂದ್ರಿಯಜಯವು ಅದನ್ನು ತಡೆಯುತ್ತದೆ. ಆದುದರಿಂದ ಜಿತೇಂದ್ರಿಯನು ದೇಹದಲ್ಲಿ ಕಾಮಾದ್ಯುಪದ್ರವರಹಿತನಾಗಿ ಸುಖವಾಗಿ ಬಾಳುವನೆಂದು ಅಭಿಪ್ರಾಯ.)

**ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ**

**ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ॥5-14॥**

**14.** ಜೀವನು ದರ್ಶನಾದಿ ವ್ಯಾಪಾರಗಳನ್ನು ಮಾಡಿಯೂ ಮಾಡಲಿಲ್ಲ ಎಂದು ತಿಳಿಯಬೇಕೆಂದು ಹೇಳಿದರೆ ಅವನು ಮಿಥ್ಯಾಜ್ಞಾನಿಯಾಗಬೇಕಾಗುತ್ತದೆಯಲ್ಲವೆ? ಎಂದರೆ, ಭಗವಂತನು ತನ್ನ

ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಾನೆ: ಪ್ರಭು=ಜಡಕ್ಕಿಂತಲೂ ಸಮರ್ಥನಾದ ಜೀವನು ಸ್ವತಂತ್ರವಾಗಿ ಇತರ ಜನರಿಂದ ಕರ್ಮವನ್ನು ಮಾಡಿಸುವುದಿಲ್ಲ. ತಾನೂ ಸ್ವತಂತ್ರವಾಗಿ ಕರ್ಮವನ್ನು ಮಾಡಲಾರನು. ಇತರ ಜನರಿಗೆ ಸತ್ಕರ್ಮದುಷ್ಕರ್ಮಗಳಿಂದಾಗಬಹುದಾದ ಸುಖದುಃಖ ಫಲಗಳನ್ನೂ ಸ್ವತಂತ್ರವಾಗಿ ಕೊಡಲಾರನು. ತಾನೂ ಸ್ವತಃ ಕರ್ಮಫಲವನ್ನು ಹೊಂದಲಾರನು. (ಜೀವನು ಸರ್ವ ವಿಷಯದಲ್ಲಿಯೂ ಅಸ್ವತಂತ್ರನಾದುದರಿಂದ ಅವನು ಈಶ್ವರಪ್ರೇರಣೆಯಿಂದ ಅನೇಕಕಾರ್ಯಗಳನ್ನು ಮಾಡಿಯೂ, ಮಾಡಿಸಿಯೂ ಇರುವವನಾದರೂ ಸ್ವತಂತ್ರವಾಗಿ ಏನನ್ನೂ ಮಾಡಿಯೂ ಇಲ್ಲ; ಮಾಡಿಸಿಯೂ ಇಲ್ಲವೆಂಬುದೇ ತತ್ತ್ವವು. ಆದಕಾರಣ ನಾನು ಮಾಡಲಿಲ್ಲವೆಂದರೆ ನಾನು ಕರ್ಮಕರಣದಲ್ಲಿ ಸ್ವತಂತ್ರನಲ್ಲವೆಂದರ್ಥ. ಇದು ತತ್ತ್ವವಾದುದರಿಂದ ಅವನು ಮಿಥ್ಯಾ ಜ್ಞಾನಿಯಾಗಬೇಕಾಗುತ್ತದೆಂಬ ಆಪಾದನೆಗೆ ಅವಕಾಶವಿಲ್ಲವೆಂದು ಭಾವ.) - ಹೀಗೆ ಜೀವನಿಗೆ ಯಾವುದರಲ್ಲಿಯೂ ಸ್ವಾತಂತ್ರ್ಯವಿಲ್ಲದಿದ್ದರೆ ಕರ್ಮವು ನಡೆಯುವ ಬಗೆ ಹೇಗೆ ಎಂದರೆ:- [1]ಸ್ವಭಾವಃ=ಜಗದುತ್ಪಾದಕನಾದ ಸ್ವತಂತ್ರ ಪರಮಾತ್ಮನೇ ಯಾವಾಗಲೂ ಸಕಲಕರ್ಮಗಳಲ್ಲಿಯೂ ಸ್ವತಃ ಪ್ರವೃತ್ತನಾಗುವನು. ಇತರರಿಂದಲೂ ಕರ್ಮವನ್ನು ಮಾಡಿಸಿ ಫಲವನ್ನು ಕೊಡುತ್ತಾನೆ ಅವನೇ ಸರ್ವಕರ್ತನೂ ಕಾರಯಿತೃವು ಎಂದರ್ಥ.

1.ಕರ್ಮವನ್ನು ಬಿಟ್ಟೇಬಿಡುವುದು ಸಂನ್ಯಾಸವಲ್ಲ. ಹಾಗೆ ಹೇಳಿದರೆ ಇಲ್ಲಿ 'ಮನಸಾ' ಎಂಬ ಪದವು ವ್ಯರ್ಥವಾಗುವುದೆಂದು ತಿಳಿಯಬೇಕು.

2. ಇಂತಹ ಭಾವನೆಯೇ ಕರ್ತೃತ್ವಕಾರಯಿತೃತ್ವಾಭಿಮಾನತ್ಯಾಗವೆನಿಸುವುದು.

1. ಸ್ವಂ=ಸ್ವಯಮೇವ, ಭವತಿ _ ಪರಾನಪೇಕ್ಷಂ ತಿಷ್ಠತಿ | ತಥಾ ಸ್ವಯಮೇವ ಭಾವಯತಿ=ಜಗದುತ್ಪಾದಯತೀತಿ ಸ್ವಭಾವಃ | (ತಥಾಚ) ಸ್ವತಂತ್ರೋ ಭಗವಾನ್ ಸ್ವಭಾವಶಬ್ದಾರ್ಥಃ ॥ - ಗೀತಾವಿವೃತಿ.

**ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ**

**ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥5-15॥**

15. ಕರ್ಮಫಲಾನುಭವದಲ್ಲಿ ಜೀವನಿಗೆ ಸ್ವತಂತ್ರವಿಲ್ಲವೆಂಬುದನ್ನು ಸ್ಪಷ್ಟ ಪಡಿಸುತ್ತಾನೆ:- ವಿಭುಃ=ಜಡಕ್ಕಿಂತ ಸಮರ್ಥನಾದ ಜೀವನು ದುಷ್ಕೃತ್ಯಮಾಡಿ ಆದರಿಂದ ಸ್ವತಂತ್ರವಾಗಿ ಪಾಪವನ್ನು ಹೊಂದಲಾರನು. ಮತ್ತು ಸುಕರ್ಮಮಾಡಿ ಪುಣ್ಯವನ್ನೂ ಸ್ವತಂತ್ರವಾಗಿ ಹೊಂದಲಾರನು. ಸರ್ವಕ್ಕೂ ಪರಮಾತ್ಮನೇ ಸ್ವತಂತ್ರಕರ್ತನು. ಆದರೆ ಸರ್ವತ್ರ ಸ್ವತಂತ್ರಕರ್ತನಾಗಿ ಈಶ್ವರನಿರುವನೆಂಬುದನ್ನು ಜನರು ತಿಳಿಯುವುದಿಲ್ಲೇಕೆಂದರೆ ಜೀವರ ತತ್ತ್ವಜ್ಞಾನವು ಅಜ್ಞಾನದಿಂದ ಮುಚ್ಚಲ್ಪಟ್ಟಿದೆ. ಅದರಿಂದ ಮೋಹಿತರಾಗಿರುವ ಕಾರಣ, ಪ್ರಾಣಿಗಳು ಭಗವತ್ಸ್ವಾತಂತ್ರ್ಯವನ್ನೂ ತಮ್ಮ ಪರಾಧೀನತೆಯನ್ನೂ ತಿಳಿಯುವುದಿಲ್ಲ.

**ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ**

**ತೇಷಾಮಾದಿತ್ಯವಜ್ಞಾನಂ ಪ್ರಕಾಶಯತಿ ತತ್ಪರಂ॥5-16॥**

**16.** ತತ್ವಜ್ಞಾನವೇ ಅಜ್ಞಾನಕ್ಕೆ ನಾಶವು ಬೇರಾವುದೂ ಇಲ್ಲ. ಅಂತಹ ಜ್ಞಾನವು ಅಜ್ಞಾನದಿಂದ ಆವರಿಸಲ್ಪಡುವುದಾದರೆ ಅದು ಅಜ್ಞಾನವನ್ನು ನಾಶ ಪಡಿಸಲಾರದೆಂದು ಹೇಳಿದಂತಾಗುವುದು. ಹಾಗಾದರೆ ಜ್ಞಾನಸಂಪಾದನೆಯೇ ಅನಾವಶ್ಯಕ. ಜ್ಞಾನಫಲಕವಾದ ಯೋಗ-ಸಂನ್ಯಾಸಗಳು ನಿಷ್ಫಲವೂ ಆಗಬೇಕೆಂಬ ಶಂಕೆಗೆ ಉತ್ತರ ಹೇಳುತ್ತಾನೆ:- ಜ್ಞಾನವು ಸ್ವರೂಪಜ್ಞಾನ ಮತ್ತು ವೃತ್ತಿಜ್ಞಾನ ಎಂಬುದಾಗಿ ಎರಡು ಬಗೆಯಾಗಿದೆ. ಸ್ವರೂಪಜ್ಞಾನವೇ ಅಜ್ಞಾನದಿಂದಾವರಿಸಲ್ಪಡತಕ್ಕುದು. ಅದು ಅಜ್ಞಾನನಾಶಕವಾಗುವುದಿಲ್ಲವೆಂಬುದು ನಿಜ. ಆದರೂ ಭಗವದ್ವಿಷಯಕವಾದ ಪರೋಕ್ಷವೃತ್ತಿ ಜ್ಞಾನದಿಂದ ಯಾವ ಜೀವಾತ್ಮರ ಅಜ್ಞಾನವು ಶಿಥಿಲಮಾಡಲ್ಪಡುವುದೋ ಅಂತಹವರ ಅಪರೋಕ್ಷಜ್ಞಾನವು ಪರಬ್ರಹ್ಮನನ್ನು ಸೂರ್ಯನಂತೆ ಪ್ರಕಾಶಗೊಳಿಸುವುದು. (ಶ್ರವಣಮನನಜನಿತ ಪರೋಕ್ಷವೃತ್ತಿ ಜ್ಞಾನವು ಅಜ್ಞಾನಾವೃತವಾಗುವುದಿಲ್ಲ. ಅದೇ ಅಜ್ಞಾನಕ್ಕೆ ನಾಶಕವು ಸ್ವರೂಪ ಜ್ಞಾನವು ಅಜ್ಞಾನಾವೃತವು. ಅದು ಅಜ್ಞಾನನಾಶಕವೆಂದು ಹೇಳುವುದೇ ಇಲ್ಲ. ಸಂನ್ಯಾಸಯೋಗಗಳಿಂದುಂಟಾಗುವುದು ಪರೋಕ್ಷವೃತ್ತಿಜ್ಞಾನವು. ಅದರಿಂದ ಅಜ್ಞಾನವು ಹೋಗಿ ಅಪರೋಕ್ಷ ಸ್ವರೂಪಜ್ಞಾನವು ವ್ಯಕ್ತವಾಗುತ್ತದೆಯಾಗಿ ಸಂನ್ಯಾಸಯೋಗಗಳು ಸಾರ್ಥಕವೇ ಸರಿ.)

**ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾ ತತ್ಪರಾಯಣಾಃ**

**ಗಚ್ಛಂತ್ಯ ಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ॥5-17॥**

**17.** ಪರೋಕ್ಷಜ್ಞಾನದಿಂದ ಅಪರೋಕ್ಷಜ್ಞಾನವುಂಟಾಗುತ್ತದೆಯೆಂದು ಉಕ್ತವಾಯಿತು. ಆದರೆ ಶ್ರವಣಾದಿಗಳಿಂದ ಪರೋಕ್ಷಜ್ಞಾನವಾದ ಕೂಡಲೇ ಅಪರೋಕ್ಷಜ್ಞಾನವಾಗುವುದೆ? ಅಥವಾ ಮಧ್ಯದಲ್ಲಿ ವ್ಯವಧಾನವಿದೆಯೆ? ಎಂದರೆ ವ್ಯವಧಾನವಿದೆ, ಪರೋಕ್ಷಾನಂತರ ಧ್ಯಾನಮಾಡಿ ಅಪರೋಕ್ಷವನ್ನು ಪಡೆಯಬೇಕು. ಹೀಗೆ ಅಪರೋಕ್ಷಜ್ಞಾನಕ್ಕೆ ಧ್ಯಾನವೇ ಸಾಕ್ಷಾತ್ಸಾಧನವೆಂಬುದನ್ನು ಹೇಳುತ್ತಾನೆ:- ಪರೋಕ್ಷಜ್ಞಾನಿಗಳು ಪರಮಾತ್ಮನನ್ನೆ ಮನಸ್ಸಿನಲ್ಲಿ ಅವಿಚ್ಛಿನ್ನವಾಗಿ ಚಿಂತಿಸುತ್ತ, ಪರಮಾತ್ಮನೇ ತಮಗೆ ಸ್ವಾಮಿಯೆಂದು ತಿಳಿದು ಅವನಲ್ಲಿಯೇ ಅಚಂಚಲನಿಷ್ಠೆಯುಳ್ಳವರಾಗಿ, ಅವನೇ ತಮಗೆ ಮುಖ್ಯಾಶ್ರಯನೆಂಬುದಾಗಿ ತಿಳಿದರೆ ಅಪರೋಕ್ಷಜ್ಞಾನವನ್ನು ಹೊಂದುವರು. ಬಳಿಕ

ಅದರಿಂದ ತಮ್ಮ ಪಾಪಗಳನ್ನು ಕಳೆದುಕೊಂಡವರಾಗಿ ಪುನರಾವರ್ತಿರಹಿತವಾದ ವೈಕುಂಠಾದಿ ಮುಕ್ತ ಸ್ಥಾನವನ್ನು ಹೊಂದುತ್ತಾರೆ.

**ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ**

**ಶುನಿಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ॥5-18॥**

**18.** ಎಲ್ಲರಲ್ಲಿಯೂ ಇರುವ ಪರಮೇಶ್ವರ ರೂಪಗಳು ಸರ್ವವಿಷಯದಲ್ಲಿಯೂ ಸಮಾನವೆಂದು ತಿಳಿಯುವುದೂ ಅಪರೋಕ್ಷಜ್ಞಾನಸಾಧನವೆಂದು ಹೇಳುತ್ತಾನೆ:- ಶಾಸ್ತ್ರಜನಿತಪರೋಕ್ಷಜ್ಞಾನಿಗಳು ವಿದ್ಯೆ, ವಿನಯಾದಿ ಗುಣವಂತನಾದ ಬ್ರಾಹ್ಮಣ-ಗೋವು-ಆನೆ-ನಾಯಿ ಮತ್ತು ನಾಯಿಮಾಂಸವನ್ನು ತಿನ್ನುವ ಚಂಡಾಲ ಎಂಬೀ ಉಚ್ಚನೀಚಸ್ಥಾನಗಳಲ್ಲಿರುವ ಪರಮಾತ್ಮನು ಗುಣ ಮತ್ತು ನಿರ್ದೋಷತ್ವ ವಿಷಯದಲ್ಲಿ ತಾರತಮ್ಯರಹಿತನಾಗಿರುವನು (ಎಂದರೆ ಪರಮಾತ್ಮನು ಉಚ್ಚ ನೀಚ ಪದಾರ್ಥಗಳಲ್ಲೆಲ್ಲಾ ಅಂತರ್ಯಾಮಿಯಾಗಿರುವನು; ಅವನಿರುವ ಸ್ಥಾನ ತಾರತಮ್ಯಾನುಸಾರವಾಗಿ ಅವನ ಗುಣಗಳಿಗೆ ತಾರತಮ್ಯವಿಲ್ಲ; ಸರ್ವತ್ರ ನಿರ್ದೋಷನಾಗಿ ಗುಣಪರಿಪೂರ್ಣನಾಗಿಯೇ ಇರುವನು) ಎಂಬುದಾಗಿ ತಿಳಿಯುವರು. ಹೀಗೆ ತಿಳಿಯುವುದೂ ಅಪರೋಕ್ಷಜ್ಞಾನಕ್ಕೆ ಸಾಧನೆಯೆಂದು ಭಾವ. (ಹಿಂದಿನ ಶ್ಲೋಕದಲ್ಲಿ ಧ್ಯಾನವು ಅಪರೋಕ್ಷಸಾಧನವೆಂದು ಹೇಳಿರುವುದರಿಂದ ಈ ಶ್ಲೋಕೋಕ್ತವಾದ 'ಸರ್ವತ್ರ ಸ್ಥಿತಭಗವದ್ರೂಪಗಳ ಸಾಮ್ಯದರ್ಶನವು ಅಪರೋಕ್ಷಸಾಧನವೆಂದು ತಿಳಿಯಬೇಕು. ಈ ಶ್ಲೋಕದಲ್ಲಿ ಭಗವದ್ರೂಪಸಾಮ್ಯವೇ ಉಕ್ತವಾಗಿದೆಯೆಂಬುದು 'ನಿರ್ದೋಷಂ ಹಿ ಸಮಂ ಬ್ರಹ್ಮ' ಎಂಬ ಮುಂದಿನ ಶ್ಲೋಕದಿಂದ ಸ್ಪಷ್ಟ ಪಡುತ್ತದೆ.)

**ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ**

**ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ॥5-19॥**

**19.** ಸಮದರ್ಶಿಯನ್ನು ಸ್ತುತಿಸುತ್ತಾನೆ:- ಯಾವ ಜನರ ಮನಸ್ಸು ಭಗವದ್ರೂಪಸಾಮ್ಯವನ್ನೇ ವಿಷಯೀಕರಿಸಿರುವುದೋ ಅಂತಹವರಿಂದ ಈ ಜನ್ಮದಲ್ಲಿಯೇ ಜನನಾದಿರೂಪ ಸಂಸಾರವು ಜಯಿಸಲ್ಪಡುವುದು. ಎಂದರೆ ಸಾಮ್ಯಜ್ಞಾನಿಗಳು ಜನ್ಮಾಂತರವನ್ನು ಹೊಂದದೇ ಈ ಜನ್ಮದಿಂದಲೇ ಮುಕ್ತರಾಗುವರೆಂದರ್ಥ. ಸಮವಸ್ತುವು ಯಾವುದು? ಸಾಮ್ಯವು ಎಂತಹುದು? ಎಂದರೆ, ಪರಬ್ರಹ್ಮನೇ ಸಮವಸ್ತುವು. ಸರ್ವತ್ರ ಇರುವ ಅವನ ರೂಪಗಳಿಗೆ ನಿರ್ದೋಷತ್ವವೇ ಸಾಮ್ಯವು

ಎಂದು ತಿಳಿಯಬೇಕು. ಸರ್ವತ್ರ ಸಮನಾಗಿರುವವನು ಬ್ರಹ್ಮನಾದಕಾರಣ ಸಮದರ್ಶಿಗಳು ಬ್ರಹ್ಮಜ್ಞಾನಿಗಳಾಗುವರೆಂದು ಶ್ಲೋಕಾರ್ಥ.

**ನ ಪ್ರಹೃಷ್ಯೇತ್ಪ್ರಿಯಂ ಪ್ರಾಪ್ಯ ನೋದ್ವಿಜೇತ್ಪ್ರಾಪ್ಯ ಚಾಪ್ರಿಯಂ**
**ಸ್ಥಿರಬುದ್ಧಿರಸಮ್ಮೂಢೋ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ॥20॥**

**20.** ತಿರುಗಿ ಸಂನ್ಯಾಸವನ್ನು ವಿಸ್ತಾರವಾಗಿ ನಿರೂಪಿಸುತ್ತಾನೆ:- ಸುಖ ಬಂದಾಗ ಸಂತೋಷದಿಂದ ಹಿಗ್ಗಬಾರದು. ದುಃಖಬಂದಾಗ ಅಧೈರ್ಯದಿಂದ ಕುಗ್ಗಬಾರದು. ಇಂತಹ ಸಂನ್ಯಾಸಕ್ಕೆ 'ಭಗವಂತನೇ ಸ್ವತಂತ್ರನು, ಅವನೇ ಸರ್ವಕರ್ತನು, ಅವನ ಇಚ್ಛೆ ಬಂದಂತೆಯೇ ನಡೆಯುತ್ತದೆ. ಯಾವುದೂ ನಮ್ಮ ಯತ್ನದಿಂದ ಸಾಧ್ಯವಲ್ಲ' ಎಂಬ ಬುದ್ಧಿಸ್ಥೈರ್ಯವೇ ಕಾರಣವು. ಅಂತಹ ಸ್ಥಿರ ಬುದ್ಧಿಯುಂಟಾಗಬೇಕಾದರೆ ಸುಖದುಃಖಪ್ರಾಪ್ತಿಗೆ ಮನುಷ್ಯರಾದ ನಾವೇ ಸ್ವತಂತ್ರರು ಎಂಬ ಮೋಹ(ಮಿಥ್ಯಾಜ್ಞಾನ)ರಹಿತನಾಗಬೇಕು. ಇಂತಹ ಮೋಹವನ್ನು ಬ್ರಹ್ಮನೇ ಸ್ವತಂತ್ರನೆಂದು ದೃಢವಾಗಿ ತಿಳಿಯುವುದರಿಂದ ಕಳೆದುಕೊಂಡು ಸತತವಾಗಿ ಅವನನ್ನೇ ಚಿಂತಿಸುವವನಾಗಬೇಕು.

**ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ಸುಖಂ**
**ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯ ಮಶ್ನುತೇ॥5-21॥**

**21.** ಸಂನ್ಯಾಸದಿಂದ ಕಾಮಾದ್ಯುಪದ್ರವವು ನಷ್ಟವಾಗಿ ಸ್ವರೂಪಸುಖವೇ ಆವಿರ್ಭವಿಸುವುದು. ಹೀಗೆ ಮಹಾಫಲವೇ ಉಂಟಾಗುತ್ತಿರುವಾಗ ಯೋಗಹೀನ ಸಂನ್ಯಾಸವು (ಕಾಮಾದಿ ವರ್ಜನವು) ವ್ಯರ್ಥವೆಂದು ಹಿಂದೆ ಹೇಳಿದುದು ತಪ್ಪಲ್ಲವೆ? ಎಂದರೆ, ನಿಜ; ಆದರೆ ಕೇವಲ ಸಂನ್ಯಾಸದಿಂದಾಗುವ ಸುಖವು ಅಸ್ಥಿರವು. ಭಗವದ್ಧ್ಯಾನರೂಪಯೋಗವನ್ನಾಚರಿಸಿದರೆ ಅದೇ ಸುಖವು ಅಕ್ಷಯವಾಗುವುದು. ಆದ ಕಾರಣದಿಂದಲೂ ಯೋಗವು ಸಂನ್ಯಾಸಕ್ಕಿಂತ ಅಧಿಕವೆಂದು ಹೇಳುತ್ತಾನೆ:- ಶಬ್ದಾದಿವಿಷಯಗಳನ್ನು ಶ್ರೋತ್ರಾದೀಂದ್ರಿಯಗಳಿಂದ ದೂರಮಾಡಿ ಅಂತಹ ವಿಷಯಗಳಲ್ಲಿ ಆಸಕ್ತಿರಹಿತವಾದ ಮನಸ್ಸುಳ್ಳವನು ಎಂದರೆ, ಕಾಮಾದಿವರ್ಜಿತಸಂನ್ಯಾಸಿಯು ಯಾವ ಸ್ವರೂಪಸುಖವನ್ನು ಅನುಭವಿಸುವನೋ, ಅವನೇ ಮನಸ್ಸಿನಲ್ಲಿ ಬ್ರಹ್ಮಧ್ಯಾನವೆಂಬ ಯೋಗನಿರತನಾದರೆ ಅದೇ ಸ್ವರೂಪಸುಖವನ್ನು ತಿರುಗಿ ತಿರೋಹಿತವಾಗದಂತೆ ಶಾಶ್ವತವಾಗಿ ಅನುಭವಿಸುವನು. ಮುಕ್ತನಾಗುವನೆಂದು ತಾತ್ಪರ್ಯ.

**ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ**
**ಆದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ॥5-22॥**

22. ಕಾಮಾದಿವರ್ಜನರೂಪ ಸಂನ್ಯಾಸವು ಪ್ರಶಸ್ತವೆಂದು ಸೂಚಿಸುವುದಕ್ಕಾಗಿ ಕಾಮಭೋಗವನ್ನು ನಿಂದಿಸುತ್ತಾನೆ:- ವಿಷಯಸಂಬಂಧದಿಂದುಂಟಾಗುವ ಸುಖಾನುಭವಗಳೆಲ್ಲವೂ ದುಃಖಕಾರಣವೇ ಆಗಿರುವುದು. ಕಾರಣವೇನೆಂದರೆ:- ಕುಂತೀಕುಮಾರ! ವಿಷಯಸುಖಗಳೆಲ್ಲವೂ ಉತ್ಪತ್ತಿನಾಶವುಳ್ಳವು. (ವಿಷಯ ಭೋಗದಿಂದ ತತ್ಕಾಲದಲ್ಲಿ ಸುಖವು ತೋರಿದರೂ ಅದು ನಷ್ಟವಾದ ಬಳಿಕ ಹೆಚ್ಚಿನ ದುಃಖವೇ ಸಿದ್ಧವಾಗಿರುವುದರಿಂದ ವಿಷಯಸುಖವು ಕ್ಲೇಶಕರವೆಂದು ಭಾವ.) ಜ್ಞಾನಿಯಾದವನು ಅಂತಹ ವಿಷಯ ಭೋಗಗಳಲ್ಲಿ ಆಸಕ್ತಿಯಿಡುವುದಿಲ್ಲ.

**ಶಕ್ನೋತೀ ಹೈವ ಯಃ ಸೋಢುಂ ಪ್ರಾಕ್ಶರೀರವಿಮೋಕ್ಷಣಾತ್**
**ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ॥5-23॥**

23. ಕಾಮೋಪಭೋಗ ತ್ಯಾಗವನ್ನು ಪ್ರಶಂಸೆಮಾಡುತ್ತಾನೆ:- ಯಾವಾತನು, ಈ ಮನುಷ್ಯ ದೇಹದಲ್ಲಿಯೇ ಶರೀರತ್ಯಾಗರೂಪಮರಣವಾಗುವುದಕ್ಕಿಂತ ಪೂರ್ವದಲ್ಲಿ ಕಾಮಕ್ರೋಧಾದಿಗಳಿಂದುಂಟಾದ ಮನೋವಿಕಾರವನ್ನು ಸಹಿಸಲು ಸಮರ್ಥನಾಗುವನೋ=ಪ್ರಸಕ್ತ ಕಾಮಕ್ರೋಧಾದಿಗಳಿಂದ ಚಿತ್ತವಿಕಾರವನ್ನು ಹೊಂದುವುದಿಲ್ಲವೋ ಅಂತಹ ಮನುಷ್ಯನು ಜ್ಞಾನೋಪಾಯಸಿದ್ಧನಾಗಿ ಸುಖಭಾಗಿಯಾಗುವನು. ಆದಕಾರಣ ಈ ದೇಹವಿರುವಾಗಲೇ ಕಾಮಾದಿ ಸಹಿಷ್ಣುತೆಯನ್ನು ಸಂಪಾದಿಸಲು ಯತ್ನಿಸಬೇಕು.

**ಯೋಽನ್ತಃಸುಖೋಽನ್ತರಾರಾಮಸ್ತಥಾನ್ತರ್ಜ್ಯೋತಿರೇವ ಯಃ**
**ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮ ಭೂತೋಽಧಿಗಚ್ಛತಿ॥5-24॥**

24. ಮುಂದಿನ ಶ್ಲೋಕಗಳಿಂದ ಜ್ಞಾನಿಲಕ್ಷಣವನ್ನು ವಿವರಿಸುತ್ತಾನೆ:- ಯಾವಾತನು ಮನಸ್ಸಿನಲ್ಲಿ ಅಭಿವ್ಯಕ್ತವಾದ ಭಗವತ್ಸ್ವರೂಪವುಳ್ಳವನಾಗಿ, ಕಾಮಾದ್ಯುಪದ್ರವನಾಶದಿಂದ ನೈಜಸುಖಾವಿರ್ಭಾವವನ್ನು ಹೊಂದಿರುವವನು ಮತ್ತು ಭಗವಂತನನ್ನು ನೋಡಿ ಆನಂದಪಡುತ್ತಿರುವವನೂ ಆಗಿರುವನೋ ಅಂತಹ ಯೋಗಿಯು (ಜ್ಞಾನಿಯು) ಬ್ರಹ್ಮನನ್ನೇ ಸ್ಮರಿಸುವವನಾಗಿ ಪ್ರಾಕೃತಶರೀರ ರಹಿತನಾದ ಬ್ರಹ್ಮನನ್ನು ಹೊಂದುವನು.

**ಲಭಂತೇ ಬ್ರಹ್ಮ ನಿರ್ವಾಣಮೃಷಯಃ ಕ್ಷೀಣ ಕಲ್ಮಷಾಃ**
**ಛಿನ್ನ ದ್ವೈಧಾ ಯತಾತ್ಮಾನಃ ಸರ್ವಭೂತಹಿತೇ ರತಾಃ॥5-25॥**

25. ಬ್ರಹ್ಮನನ್ನು ಹೊಂದಲು ಉಕ್ತ ಬ್ರಹ್ಮಸ್ಮರಣೆಯೇ ಸಾಲದು; ಪಾಪ ಕ್ಷಯವೂ ಅದಕ್ಕೆ ಕಾರಣವೆಂದು ಹೇಳುತ್ತಾನೆ:- ಜ್ಞಾನಿಗಳು ಪಾಪಗಳನ್ನು ನಿವೃತ್ತಿ ಮಾಡಿಕೊಂಡು ಛಿನ್ನ

| |
|---|
| ದ್ವೈಧಾಃ=ಸಂಶಯವಿಪರ್ಯಯರಹಿತರಾಗಿ ಶ್ರವಣಾದಿಗಳಿಂದ ಸಕಲ ತತ್ತ್ವವನ್ನೂ ತಿಳಿದು ಸರ್ವ ಪ್ರಾಣಿಗಳ ಹಿತದಲ್ಲಿ ನಿರತರಾಗುತ್ತಾರೆ. ಬಳಿಕ ಪ್ರಾಕೃತ ಶರೀರರಹಿತನಾದ ಪರಬ್ರಹ್ಮನನ್ನು ನೋಡುವರು. |
| **ಕಾಮಕ್ರೋಧವಿಮುಕ್ತಾನಾಂ ಯತೀನಾಂ ಯತಚೇತಸಾಂ<br>ಅಭಿತೋ ಬ್ರಹ್ಮ ನಿರ್ವಾಣಂ ವರ್ತತೇ ವಿದಿತಾತ್ಮನಾಮ್॥5-26॥** |
| **26.** ಕಾಮಕ್ರೋಧಾದಿ ದೋಷವಿಲ್ಲದ, ಪ್ರಯತ್ನಶೀಲರಾದ, ಮನಸ್ಸನ್ನು ವಶಪಡಿಸಿಕೊಂಡಿರುವ ಬ್ರಹ್ಮಜ್ಞಾನಿಗಳಿಗೆ ಪ್ರಾಕೃತಶರೀರವಿಲ್ಲದ ಬ್ರಹ್ಮನು ಸಕಲ ದೇಶಕಾಲಗಳಲ್ಲಿಯೂ ರಕ್ಷಕನು, ಜ್ಞೇಯನೂ ಆಗಿರುತ್ತಾನೆ. (ಸಕಲ ದೇಶಕಾಲಗಳಲ್ಲಿಯೂ ಅನಾಯಾಸವಾಗಿ ಬ್ರಹ್ಮದರ್ಶನವನ್ನು ಪಡೆದಿರುವವರು ಜ್ಞಾನಿಗಳು ಎಂಬುದಾಗಿ ಅವರ ಲಕ್ಷಣವನ್ನು ವಿಸ್ತರಿಸಿದಂತಾಯಿತು.) |
| **ಸ್ಪರ್ಶಾನ್ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾಂತರೇ ಭ್ರುವೋಃ<br>ಪ್ರಾಣಾಪಾನೌ ಸಮಂ ಕೃತ್ವಾ ನಾಸಾಭ್ಯಂತರಚಾರಿಣಮ್॥5-27॥** |
| **ಯತೇಂದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ<br>ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ॥5-28॥** |
| **27-28** ಧ್ಯಾನಪ್ರಕಾರವನ್ನು ಹೇಳುತ್ತಾನೆ:- ದುಃಖಸಂಪಾದಕಗಳಾದ ಸ್ಪರ್ಶಾನ್=ಶಬ್ದಾದಿ ವಿಷಯಗಳನ್ನು ಇಂದ್ರಿಯಗಳಿಗೆ ಗೋಚರಿಸದಂತೆ ಮಾಡಿ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು, ಅರೆದೆರೆದ ನೇತ್ರಗಳುಳ್ಳವನಾಗಿ, ಹುಬ್ಬುಗಳ ಮಧ್ಯಭಾಗವನ್ನು ನೋಡುವವನಾಗಿ, ಪ್ರಾಣಾಪಾನವಾಯುಗಳನ್ನು ನಾಸಿಕಮಧ್ಯದಲ್ಲಿ ಮಂದಗತಿಯುಳ್ಳುದನ್ನಾಗಿ ಮಾಡಿಕೊಂಡು ಸಮವಾಗಿ=ನಿಶ್ಚಲವಾಗಿರುವಂತೆ ಮಾಡಿ ಎಂದರೆ ಕುಂಭಕಸ್ಥಾನದಲ್ಲಿ ನಿಲ್ಲಿಸಿ, ಜಿತೇಂದ್ರಿಯಮನಸ್ಕನಾದ, ಯಾವ ಮನನಶೀಲಯೋಗಿಯು ಮೋಕ್ಷವನ್ನೇ ಬಯಸುವವನಾಗಿ ಇಚ್ಛೆ-ಭಯ-ಕ್ರೋಧರಹಿತನಾಗುವನೋ ಅಂತಹವನು ಮುಕ್ತನೇ ಸರಿ. ಹೀಗೆಂಬುದಾಗಿ ಜ್ಞಾನಿಸ್ತುತಿಯು ಅಥವಾ ಅವನು ಅಭಿಮಾನಾದಿಗಳನ್ನು ಪರಿತ್ಯಾಗಮಾಡಿರುವುದರಿಂದ ಮುಕ್ತಸದೃಶನೆಂದಭಿಪ್ರಾಯ. |
| **ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಂ<br>ಸುಹೃದಂ ಸರ್ವ ಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ॥5-29॥** |

ಧ್ಯಾನಪ್ರಕಾರವನ್ನು ವಿವರಿಸಿ ಧ್ಯೇಯವನ್ನು ವಿವರಿಸುತ್ತಾನೆ: ಜ್ಯೋತಿಷ್ಟೋಮಾದಿ ಯಜ್ಞಗಳು ಮತ್ತು ಕೃಚ್ಛಚಾಂದ್ರಾಯಣಾದಿ ತಪಸ್ಸು ಇವುಗಳ ಸಾರಭೋಕ್ತನು, ಸಕಲಲೋಕಗಳಿಗೂ ಸ್ವತಂತ್ರ ನಿಯಾಮಕನು ಸಕಲ ಪ್ರಾಣಿಗಳಿಗೂ ಉಪಕಾರಮಾಡುವವನು ಮುಕ್ತಿದಾತನೂ ಆದ ಭಗವಂತನನ್ನು ಧ್ಯಾನಮಾಡಿ ಅಧಿಕಾರಿಯು ಅಪರೋಕ್ಷಜ್ಞಾನವನ್ನು ಹೊಂದುತ್ತಾನೆ.

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಕರ್ಮಸಂನ್ಯಾಸಯೋಗೋ ನಾಮ ಪಂಚಮೋಽಧ್ಯಾಯಃ॥5-[29]॥

## ಷಷ್ಠೋಽಧ್ಯಾಯಃ॥6-[47]॥

### ಶ್ರೀ ಭಗವಾನುವಾಚ

ಮೊಕ್ಷಾರ್ಥಿಗೆ ಆವಶ್ಯಕವಾದ ಜ್ಞಾನವು ಯೋಗದಿಂದುಂಟಾಗತಕ್ಕುದೆಂಬುದು ಪ್ರಸಿದ್ಧವಾಗಿದೆ. ಯೋಗದಲ್ಲಿ ಕರ್ಮಯೋಗ-ಧ್ಯಾನಯೋಗ ಎಂದು ಎರಡು ಬಗೆ. ಅದರಲ್ಲಿ ಕರ್ಮಯೋಗವು ಜ್ಞಾನಕ್ಕೆ ಬಹಿರಂಗಸಾಧನೆ, ಧ್ಯಾನ ಯೋಗವು ಅಂತರಂಗ ಸಾಧನೆ. ಕರ್ಮಯೋಗವು ಎರಡನೆಯ ಅಧ್ಯಾಯದಿಂದಾರಂಭಿಸಿ ಐದನೆಯ ಅಧ್ಯಾಯಪೂರ್ತಿ ಸಾಂಗೋಪಾಂಗವಾಗಿ ನಿರೂಪಿಸಲ್ಪಟ್ಟಿದೆ. ಸೂತ್ರಪ್ರಾಯವಾದ ಪಂಚಮಾಧ್ಯಾಯದ ಕೊನೆಯ ಎರಡು ಶ್ಲೋಕಗಳಿಂದ ಸಂಕ್ಷೇಪವಾಗಿ ಉಕ್ತವಾದ ಧ್ಯಾನಯೋಗವೇ ಈ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಡುತ್ತದೆ.

ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನಚಾಕ್ರಿಯಃ ॥6-1॥

1. ಈ ರೀತಿಯಾಗಿ ಪ್ರಕೃತವಾದ ಧ್ಯಾನಯೋಗವನ್ನು 'ಉದ್ಧರೇದಾತ್ಮನಾತ್ಮಾನಂ' ಇತ್ಯಾದಿ ಗ್ರಂಥದಿಂದ ಭಗವಂತನು ನಿರೂಪಿಸುವವನಾಗಿ ಈ ಧ್ಯಾನ ಯೋಗಕ್ಕೆ ಕರ್ಮಯೋಗಿಯೇ ಅಧಿಕಾರಿಯೆಂದು ತಿಳಿಸಲು ಮೊದಲು ಪೂರ್ವೋಕ್ತ ದಳದ್ವಯಾತ್ಮಕವಾದ ಕರ್ಮಯೋಗವನ್ನು ಹೇಳುತ್ತಾನೆ:- ಯಾವಾತನು ಫಲಾಬಿಲಾಷೆಯಿಲ್ಲದೆ ಈಶ್ವರಾರ್ಪಣಬುದ್ಧಿಪೂರ್ವಕವಾಗಿ ವರ್ಣಾಶ್ರಮವಿಹಿತ ಕರ್ಮವನ್ನಾಚರಿಸುತ್ತಾನೆಯೋ ಅವನೇ ಸಂನ್ಯಾಸಿ ಮತ್ತು ಯೋಗಿಯು (ಅಂತಹ ಕರ್ಮಯೋಗಿಯೇ ಧ್ಯಾನಾಧಿಕಾರಿಯೆಂದು ಭಾವ) ಆಹವನೀಯಾದ್ಯಗ್ನಿಯನ್ನೂ, ಅಗ್ನಿಹೋತ್ರಾದಿ ಕ್ರಿಯೆಗಳನ್ನೂ ಬಿಟ್ಟು ನಿಸ್ಸಂಗನಾಗಿರುವವನೇ ಸಂನ್ಯಾಸಿಯೆಂದೂ, ಅವನೇ ಧ್ಯಾನಾಧಿಕಾರಿಯೆಂದೂ ಹೇಳುವ ಸಾಂಖ್ಯ ಮತವನ್ನು ನಿರಾಕರಿಸುತ್ತಾನೆ:- ನ ನಿರಗ್ನಿರ್ನಚಾಕ್ರಿಯಃ=ಆಹವನೀಯಾದ್ಯಗ್ನಿ ಮತ್ತು ಅಗ್ನಿಹೋತ್ರಾದಿ ಕ್ರಿಯೆಗಳನ್ನು ಬಿಟ್ಟು

ನಿಸ್ಸಂಗನಾಗಿರುವವನು ಸಂನ್ಯಾಸಿಯೂ ಅಲ್ಲ; ಯೋಗಿಯೂ ಅಲ್ಲ ಎಂದರೆ ಅಂತಹವನು ಧ್ಯಾನಾಧಿಕಾರಿಯೂ ಆಗುವುದಿಲ್ಲವೆಂದರ್ಥ. ಹಾಗಾದರೆ ಲೋಕದಲ್ಲಿ ಚತುರ್ಥಾಶ್ರಮವನ್ನು ಸ್ವೀಕರಿಸಿದ, ಅಗ್ನಿಕ್ರಿಯಾರಹಿತನಾದ ಯತಿಯೇ ಸಂನ್ಯಾಸಿಯೆಂದು ಪ್ರಸಿದ್ಧವಾಗಿದೆ. ಅಂತಹವನಿಗೆ ಧ್ಯಾನಾಧಿಕಾರವಿಲ್ಲವೆ? ಎಂದರೆ:- ಯತಿಗೂ ಧ್ಯಾನಾಧಿಕಾರವಿದೆ. ಆದರೆ ಅವನು ಆಗಿ ಕ್ರಿಯಾರಹಿತನೆಂದು ಭಾವಿಸಬಾರದು. 'ದೈವಮೇವಾಪರೇ ಯಜ್ಞಂ' 4-24 ಎಂಬ ಶ್ಲೋಕದಿಂದ ಯತಿಗೂ ಅಗ್ನಿಕ್ರಿಯೆಗಳು ಉಕ್ತವಾಗಿವೆ. ಮತ್ತು ಸಂನ್ಯಾಸಾಶ್ರಮ ಸ್ವೀಕರಿಸುವಾಗ ಪೂರ್ವಾಶ್ರಮದಲ್ಲಿ ಸ್ವೀಕೃತವಾದ ಅಗ್ನಿಯನ್ನು ಆತ್ಮನಲ್ಲಿ ಸಮಾರೋಪಣೆಮಾಡಿರುತ್ತಾನೆ. ಹೀಗೆ ಉಕ್ತ ಸಂನ್ಯಾಸಯೋಗಗಳು ಯತಿಗಳಿಗೂ ಉಂಟಾದ ಕಾರಣ ಅವನೂ ಯೋಗಿಯೆನಿಸಿ ಧ್ಯಾನಾಧಿಕಾರಿಯಾಗುವನೆಂದು ತಿಳಿಯಬೇಕು.

ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ
ನ ಹ್ಯಹಂ ನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ॥6-2॥

2.'ಸಂನ್ಯಾಸೀ ಚ ಯೋಗೀ ಚ' ಎಂದು ಹೇಳಿರುವುದರಿಂದ ಸಂನ್ಯಾಸಯೋಗಗಳಿಗೆ ಭೇದವುಂಟೆಂಬಶಂಕೆ ಬರುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ಸಂನ್ಯಾಸವು ಯೋಗೈಕದೇಶವಾಗಿದೆಯಾಗಿ ಅಮುಖ್ಯಯೋಗವಾಗಬಹುದೆಂಬ ಅಭಿಪ್ರಾಯದಿಂದ ಕೆಲವೆಡೆಗಳಲ್ಲಿ ಅದನ್ನು ಪೃಥಕ್ಕಾಗಿ ಹೇಳಿದೆ. ಆದರೂ ಸಂನ್ಯಾಸವು ಸಮಗ್ರಯೋಗದ ಒಂದು ಭಾಗವೇ ಆಗಿದೆಯೆಂದು ಹೇಳುತ್ತಾನೆ:- ಯಾವ ಕಾಮಕ್ರೋಧಾದಿ ವರ್ಜನವನ್ನು ಸಂನ್ಯಾಸವೆಂದು ಹೇಳುವರೋ ಆ ಸಂನ್ಯಾಸವನ್ನು ಜ್ಞಾನಸಾಧನವಾದ, ಕಾಮಾದಿವರ್ಜನಸಹಿತವಾದ ನಿವೃತ್ತ ಕರ್ಮಾನುಷ್ಠಾನವೆಂಬ ಮುಖ್ಯಯೋಗದ ಒಂದು ಭಾಗವೆಂದು ತಿಳಿ! ಪಾಂಡುನಂದನ! ಯಾವಾತನು ಸಂನ್ಯಾಸವಿಲ್ಲದೆ ಎಂದರೆ ಕಾಮಾದಿಗಳನ್ನು ಬಿಡದೆ ಕರ್ಮ ಮಾತ್ರವನ್ನು ಮಾಡುವನೋ ಅಂತಹವನು ಜ್ಞಾನಸಾಧನಸಂಪನ್ನ(ಯೋಗಿ)ನಾಗುವುದಿಲ್ಲ. (ಕರ್ಮಾನುಷ್ಠಾನವು ಜ್ಞಾನಸಾಮಗ್ರಿಯ ಒಂದು ಭಾಗ. ಅಷ್ಟು ಮಾತ್ರದಿಂದ ಕಾರ್ಯಸಿದ್ಧಿಯಾಗುವುದಿಲ್ಲ. ಮತ್ತೊಂದು ಭಾಗವಾದ ಸಂನ್ಯಾಸವು ಸೇರಿದರೇ ಜ್ಞಾನಸಿದ್ಧಿಯಾಗುವುದು. ಸಂನ್ಯಾಸಸಹಿತ ಕರ್ಮಯೋಗವೇ ಮುಖ್ಯಯೋಗವು. ಅದೇ ಜ್ಞಾನಸಾಮಗ್ರಿಯು. ಕೆಲವೆಡೆಗಳಲ್ಲಿ ಸಂನ್ಯಾಸ-ಕರ್ಮಯೋಗಗಳನ್ನು ಬೇರೆ ಬೇರೆಯಾಗಿ ಹೇಳಿರುವುದು ಏಕದೇಶಾಭಿಪ್ರಾಯಕವೆಂದೇ ತಿಳಿಯಬೇಕೆಂದು ಭಾವ.)

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ

ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ॥6-3॥

3. ಧ್ಯಾನಾಧಿಕಾರವೆಂದು ಹೇಳಿದ ಮುಖ್ಯ ಕರ್ಮಯೋಗವನ್ನು ಯಾವಾಗಲೋ ಒಂದು ಬಾರಿ ಆಚರಿಸಿದರೆ ಸಾಕೇ? ಅಥವಾ ಫಲಪ್ರಾಪ್ತಿ ಪರ್ಯಂತವಾಗಿ ಆಚರಿಸುತ್ತಿರಬೇಕೇ? ಎಂದರೆ ಫಲವಾಗುವವರೆಗೂ ಆಚರಿಸಬೇಕೆಂದು ಹೇಳುತ್ತಾನೆ:- ಜ್ಞಾನೋಪಾಯವನ್ನು ಸಂಪೂರ್ಣವಾಗಿ ಸಿದ್ಧಿಸಿಕೊಳ್ಳಬೇಕೆಂದು ಅಪೇಕ್ಷಿಸುವ ಪರೋಕ್ಷಜ್ಞಾನಿಗೆ ಸಾಕ್ಷಾತ್ಕಾರವುಂಟಾಗಲು ವಿಹಿತಕರ್ಮಾನುಷ್ಠಾನವು ಕಾರಣವೆಂದು ಉಕ್ತವಾಗಿದೆ. ಆದಕಾರಣ ಅಪರೋಕ್ಷಜ್ಞಾನವೆಂಬ ಫಲವು ಸಿದ್ಧವಾಗುವವರೆಗೂ ಕರ್ಮವನ್ನಾಚರಿಸಬೇಕೆಂದು ಭಾವ. ಯೋಗಾರೂಢಸ್ಯ=ಸಂಪೂರ್ಣ ಜ್ಞಾನೋಪಾಯ ಸಿದ್ಧಿಹೊಂದಿದ ಅಪರೋಕ್ಷಜ್ಞಾನಿಗೆ ಮುಕ್ತಿಯಲ್ಲಿ ಆನಂದಾತಿಶಯವುಂಟಾಗುವುದಕ್ಕೆ ಭಗವದ್ಯಾನ(ಸಮಾಧಿ), ವ್ಯಾಖ್ಯಾನ, ಅರ್ಚನಾದಿಕಗಳು ಕಾರಣವೆಂದು ಉಕ್ತವಾಗಿದೆ. ಅಪರೋಕ್ಷಜ್ಞಾನಿಯು ಮುಕ್ತಿಯಾಗುವವರೆಗೂ ಉಕ್ತಕರ್ಮಗಳನ್ನು ಮಾಡುತ್ತಿರಬೇಕೆಂದು ಭಾವ.

ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ

ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ॥6-4॥

4.ಯೋಗಾರೂಢನಿಗೆ (ಸಂಪೂರ್ಣೋಪಾಯಸಿದ್ಧಿ ಹೊಂದಿದವನಿಗೆ) ಲಕ್ಷಣವನ್ನು ಹೇಳುತ್ತಾನೆ:- ಸತ್ವ ಸಂಕಲ್ಪ ಸಂನ್ಯಾಸ=ಸಕಲ ಕರ್ಮಗಳಲ್ಲಿಯೂ ಮಮತಾತ್ಯಾಗ, ಎಂದರೆ ಕ್ರಿಯಾದಿಗಳೆಲ್ಲವೂ ಭಗವದಧೀನವೆಂದೂ, ನಾನು (ಜೀವನು) ಯಾವುದಕ್ಕೂ ಸ್ವತಂತ್ರಕರ್ತನಲ್ಲವೆಂದೂ ತಿಳಿಯುವುದೆಂದರ್ಥ. ಯಾವಾಗ ಕ್ರಿಯಾದಿಗಳೆಲ್ಲವೂ ಭಗವಂತನ ಆಧೀನವೆಂದೂ, ತಾನು ಯಾವುದಕ್ಕೂ ಸ್ವತಂತ್ರಕರ್ತನಲ್ಲವೆಂದೂ ತಿಳಿದು, ಕರ್ಮಗಳಲ್ಲಿ ಆಸಕ್ತಿರಹಿತನಾಗಿ, ಪ್ರಯತ್ನವಿಲ್ಲದೆ ಶಬ್ದಾದಿ ವಿಷಯಗಳಲ್ಲಿ ಅನಾಸಕ್ತನಾಗುವನೋ ಆಗ ಯೋಗಾರೂಢನೆನಿಸುವನು. (ಇದರಿಂದ ಸಕಲವೂ ಭಗವದಧೀನ - ಭಗವಂತನೇ ಸರ್ವಕರ್ತನು - ಅವನೇ ನನ್ನಿಂದ ಕರ್ಮಮಾಡಿಸುತ್ತಿರುವನು-ಇದರಿಂದ ಅವನೇ ಪ್ರೀತನಾಗಲಿ' ಎಂದು ತಿಳಿದು ಸ್ವಾಭಾವಿಕವಾಗಿಯೇ ಶಬ್ದಾದಿವಿಷಯಗಳನ್ನು ದೂರಮಾಡಿದವನು? ಜ್ಞಾನಿಯು ಎಂದು ಲಕ್ಷಣವನ್ನು ಹೇಳಿದಂತಾಯಿತೆಂದು ಭಾವ.)

| |
|---|
| **ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್**<br>**ಆತ್ಮೈವಹ್ಯಾತ್ಮನೋ ಬಂಧುರಾತ್ಮೈವರಿಪುರಾತ್ಮನಃ॥6-5॥** |
| **5.**ಪ್ರಕೃತ ಧ್ಯಾನಯೋಗವು ಶಪಥಪೂರ್ವಕವಾಗಿ ಕರ್ತವ್ಯವೆಂದು ಹೇಳುತಾನೆ:- ಜೀವನಿಗೆ ಮನಸ್ಸೇ ಬಂಧು-ಉಪಕಾರಿಯು. ಅದೇ ರಿಪು=ಅಪಕಾರಿಯೂ ಆಗುವುದು. ಆದಕಾರಣ ವಿವೇಕಶಾಲಿಯಾದ ಮನುಷ್ಯನು ಮನಸ್ಸನ್ನು ವಶಪಡಿಸಿಕೊಂಡು ಅದರಿಂದಲೇ ತನ್ನನ್ನು ಶ್ರೇಯೋಭಾಗಿಯಾಗುವಂತೆ ಮಾಡಿಕೊಳ್ಳಬೇಕು. ಮನಸ್ಸನ್ನು ಸ್ವಾಧೀನವಾಗಿಟ್ಟುಕೊಳ್ಳದೆ ಅದು ಹೋದಂತೆಲ್ಲಾ ತಾನೂ ಪ್ರವರ್ತಿಸುತ್ತ ದುಃಖಕ್ಕೀಡಾಗಬಾರದು. |
| **ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ**<br>**ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್॥6-6॥** |
| **6.** ಎಂತಹ ಮನಷ್ಯನಿಗೆ ಎಂತಹ ಮನಸ್ಸು ಬಂಧುವು? ಎಂತಹ ಮನಸ್ಸು ಶತ್ರುವು? ಎಂದರೆ ಅದನ್ನು ಸ್ಪಷ್ಟಪಡಿಸುತ್ತಾನೆ:- ಯಾವ ಜೀವಾತ್ಮನಿಂದ ಮನಸ್ಸು ಜಯಿಸಲ್ಪಡುವುದೋ=ಸ್ವಾಧೀನಪಡಿಸಿಕೊಳ್ಳಲ್ಪಡುವುದೋ, ಅಂತಹ ಜೀವಾತ್ಮನಿಗೆ, ಭಗವಧ್ಯಾನಕ್ಕೆ ಸಹಕಾರಿಯಾಗಿ ಮನಸ್ಸು ಬಂಧು=ಉಪಕಾರಿಯಾಗುವುದು. ಮನಸ್ಸನ್ನು ಸ್ವಾಧೀನವಾಗಿಟ್ಟುಕೊಳ್ಳದಿರುವ ಮನುಷ್ಯನಿಗೆ 'ಮನಸ್ಸೇ ಶತ್ರುವಾಗುವುದು. ಎಂದರೆ ಅಜಿತಮನಸ್ಕನಾದವನನ್ನು ಮನಸ್ಸು ದುರ್ವಿಷಯಗಳ ಕಡೆಗೆ ತಿರುಗಿಸಿ ನರಕಾದಿ ಕಷ್ಟಗಳಿಗೀಡುಮಾಡುವುದೆಂದರ್ಥ. |
| **ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ**<br>**ಶೀತೋಷ್ಣ ಸುಖದುಃಖೇಷು ತಥಾ ಮಾನಾಪಮಾನಯೋಃ॥6-7॥** |
| **ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ**<br>**ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ॥6-8॥** |
| **7.**ಅಜಿತಮನಸ್ಕನಿಗೆ ಅನರ್ಥವಾಗುವುದು ಸರಿ, ಜಿತಮನಸ್ಯನಿಗಾಗುವ ಉಪಕಾರವು ಯಾವುದೆಂದರೆ ಹೇಳುತ್ತಾನೆ:- ಮನಸ್ಸನ್ನು ವಶಪಡಿಸಿಕೊಂಡವನಿಗೆ ಸ್ವಾಭಾವಿಕವಾಗಿ ಮನಸ್ಸು ವಿಷಯಗಳಲ್ಲಿ ಪ್ರವರ್ತಿಸುವುದಿಲ್ಲ. ಶಾಂತನಾಗಿರುವನು. ಅಂತಹವನ ಹೃದಯದಲ್ಲಿ ಪರಮಾತ್ಮನು ಸನ್ನಿಹಿತನಾಗಿರುವನು. ಎಂದರೆ ಶಾಂತಾತ್ಮನು ಮಾಡುವ ಧ್ಯಾನವು ಸಿದ್ಧವಾಗಿ |

ಪರಮಾತ್ಮನ ಸಾಕ್ಷಾತ್ಕಾರವಾಗುವುದು. ಆಗ ಆವನು ಯೋಗಫಲವನ್ನು ಸಂಪೂರ್ಣವಾಗಿ ಹೊಂದಿ ಯೋಗಾರೂಢನೆನಿಸುವನೆಂದು ಭಾವ[1]

ಈ ಶ್ಲೋಕದ ಉತ್ತರಾರ್ಧವು ಮುಂದಿನ ಶ್ಲೋಕದಿಂದ ಅನ್ವಿತವಾಗಿರುವ ಕಾರಣ ಪೂರ್ವಾರ್ಧಮಾತ್ರವೇ ಇಲ್ಲಿ ವಿವರಿಸಲ್ಪಟ್ಟಿದೆ.

8."ಯದಾ ಹಿ ನೇಂದ್ರಿಯಾರ್ಥಷು' ಎಂಬ ಶ್ಲೋಕದಲ್ಲಿ ಯೋಗಾರೂಢನ ಲಕ್ಷಣವನ್ನು ಹೇಳಿದೆ. ಅದನ್ನು ಈಗ ಸ್ಪಷ್ಟಪಡಿಸುತ್ತಾನೆ:- ಶ್ರವಣ ಮನನಗಳಿಂದ ಭಗವನ್ಮಾಹಾತ್ಮ್ಯಯನ್ನು ತಿಳಿದು, ಅವನನ್ನು ಸಾಕ್ಷಾತ್ತಾಗಿ ದರ್ಶನಮಾಡುವುದರಿಂದ ವಿಷಯ ಭೋಗದಲ್ಲಿ ಅಲಂಬುದ್ಧಿಯನ್ನು ಹೊಂದಿ, ಆದರಿಂದ ಇಂದ್ರಿಯವನ್ನು ಅತ್ಯಂತವಾಗಿ ಸ್ವಾಧೀನಪಡಿಸಿಕೊಂಡು, ಮಣ್ಣು ಮುದ್ದೆ ಮತ್ತು ಕಲ್ಲುಗಳಂತೆ ವಜ್ರವೈಡೂರ್ಯ, ಸುವರ್ಣ ಇವೆಲ್ಲವೂ ಅಸಾರ ಮತ್ತು ಆನಿತ್ಯವಾಗಿರುವುದರಿಂದ ತುಚ್ಛವೆಂದೆಣಿಸಿ ಎಲ್ಲವೂ ಸಮಾನವಾದುವೆಂಬ ಭಾವನೆಯನ್ನು ಹೊಂದಿದವನಾಗಿ, ಶೀತ-ಉಷ್ಣ, ಸುಖ-ದುಃಖ, ಮಾನ-ಅಪಮಾನ ಇತ್ಯಾದಿ ದ್ವಂದ್ವಗಳು ಸಂಭವಿಸಿದರೂ ಕುಗ್ಗುವುದಾಗಲಿ ಹಿಗ್ಗುವುದಾಗಲಿ ಈ ಯಾವ ವಿಕಾರವನ್ನೂ ಹೊಂದದೆ, ನಿರ್ವಿಕಾರಚಿತ್ತನಾದ ಧ್ಯಾನಯೋಗಿಯು ಯೋಗಾರೂಢ ಅಥವಾ ಅಪರೋಕ್ಷಜ್ಞಾನಿಯೆನಿಸುವನು.

**ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥ ದ್ವೇಷ್ಯಬಂಧುಷು**
**ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ॥6-9॥**

9.ಸುಹೃತ್=ಪ್ರತ್ಯುಪಕಾರಾಪೇಕ್ಷೆಯಿಲ್ಲದೆ ಉಪಕಾರಮಾಡುವವನು, ಮಿತ್ರ-ದುಃಖಕಾರಣವನ್ನು ತಿಳಿಸಿ ಅದು ಬರದಂತೆ ರಕ್ಷಿಸುವವನು, ಅರಿ=ಸಂಹಾರ ಮಾಡುವವನು, ಉದಾಸೀನ=ಉಪಕಾರ ಅಪಕಾರಗಳನ್ನು ಮಾಡಬೇಕಾದ ಸಂದರ್ಭ ಬಂದರೂ ಯಾವುದನ್ನೂ ಮಾಡದೆ ಸುಮ್ಮನಿರುವವನು, ಮಧ್ಯಸ್ಥ=ಉಪಕಾರ-ಅಪ ಕಾರಗಳೆರಡನ್ನೂ ಮಾಡುವವನು, ದ್ವೇಷ್ಯ=ಅನಿಷ್ಟಕಾರಿಯು, ಬಂಧು=ಉಪಕಾರಿಯು, ಸಾಧುಗಳು ಮತ್ತು ಪಾಪಿಷ್ಠರು ಇವರೆಲ್ಲರಲ್ಲಿಯೂ ಸಮಬುದ್ಧಿಯುಳ್ಳವನು ಯೋಗಿವರ್ಗದಲ್ಲಿ ಉತ್ತಮನು. (1. ಸುಹೃದಾದಿಗಳಲ್ಲಿ ಅಂತರ್ಯಾಮಿಯಾಗಿರುವ ಭಗವಂತನ ರೂಪಗಳೆಲ್ಲವೂ ಸಮಾನವು, ಗುಣಕ್ರಿಯಾದಿ ತಾರತಮ್ಯವುಳ್ಳವುಗಳಲ್ಲ ಎಂಬ ಬುದ್ಧಿಯೇ ಸಮಬುದ್ಧಿಯೆನಿಸುವುದು. 2. ಅಥವಾ ಭಗವಂತನು ಸುಹೃತ್ತಿಗೆ ಸುಹೃತ್ತ್ವವನ್ನೇ ಕೊಡುವನು. ಮಿತ್ರನಿಗೆ ಮಿತ್ರತ್ವವನ್ನೇ ಕೊಡುವನು. ಸುಹೃತ್ತಿಗೆ ಮಿತ್ರತ್ವವನ್ನಾಗಲಿ, ಮಿತ್ರನಿಗೆ ಸುಹೃತ್ತ್ವವನ್ನಾಗಲಿ ಕೊಡುವುದಿಲ್ಲ. ಹೀಗೆ ಅವರವರಿಗೆ ಯೋಗ್ಯ ಧರ್ಮವನ್ನೇ ಈಶ್ವರನು ಕೊಡುವನು ಎಂಬ ಬುದ್ಧಿಯು ಸಮಬುದ್ಧಿಯು, ಅಥವಾ 3. ಸುಹೃದಾದಿ ಜೀವರೆಲ್ಲರ ಸ್ವರೂಪವೂ ಅಪ್ರಾಕೃತವಾಗಿ ಒಂದೇ ಸಮನಾಗಿರುವುದು. ಸುಹೃತ್ತ್ವ ಮಿತ್ರತ್ವಾದಿ

ಧರ್ಮಗಳು ಸ್ವಾಭಾವಿಕವಲ್ಲ. ಅವರವರ ಮನೋವ್ಯಾಪಾರ ಭೇದದಿಂದ ಉಂಟಾದುವು. ದೇವದಾನವ ಮಾನವ ಎಂಬುದಾಗಿ ಜೀವರು ಸ್ವಾಭಾವಿಕ ವೈಲಕ್ಷಣ್ಯಯುಕ್ತರು. ಇಂತಹ ಎಲ್ಲಾ ಚೇತನರಲ್ಲಿರುವ ಚಿತ್ವ=ಚೈತನ್ಯ ಸ್ವಭಾವವು, ಒಂದೇ ವಿಧವಾಗಿರುವುದೆಂಬ ಬುದ್ಧಿಯೇ ಸಮಬುದ್ಧಿಯು. 4.ಅಥವಾ ಚೇತನತ್ವವಿಷಯದಲ್ಲಿ ಸುಹೃದಾದಿಗಳು ಸಮಾನರೆಂದು ತಿಳಿಯುವುದು ಸರಿ; [ಆದರೆ ಅವರೆಲ್ಲರಿಗೂ ಸಮವಾಗಿ ಸತ್ಕರಿಸುವುದು ಉಚಿತವಲ್ಲ. ಶಾಸ್ತ್ರದಲ್ಲಿ ಸುಹೃದಾದಿಗಳನ್ನು ಯಾವ ರೀತಿ ಸತ್ಕರಿಸಬೇಕೆಂದು ವಿಹಿತವಾಗಿದೆಯೋ ಆಯಾ ರೀತಿಯಲ್ಲಿ ಅವರವರನ್ನು ಪುರಸ್ಕರಿಸಿ ಸತ್ಕಾರಮಾಡಬೇಕೆಂದು ತಿಳಿಯುವುದು ಮತ್ತು ಅದರಂತೆ ವರ್ತಿಸುವುದೆಂಬ ಬುದ್ಧಿಯು ಸಮ ಬುದ್ಧಿಯು. ಹೀಗೆ ಸಂದರ್ಭಾನುಗುಣವಾಗಿ ನಾಲ್ಕು ಬಗೆಯ ಸಮಬುದ್ಧಿಗಳು ಉಕ್ತವಾಗಿವೆ. ಇವೆಲ್ಲವೂ ಯೋಗಾರೂಢನ(ಅಪರೋಕ್ಷಜ್ಞಾನಿಯ)ಲಕ್ಷಣಗಳು. ಸಾಧಕನಾದ ಆರುರುಕ್ಷುವಿಗೆ ಸಾಧನಗಳಾಗುವುವೆಂದು ತಿಳಿಯಬೇಕು.

**ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ**

**ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ॥6-10॥**

10. 'ಉದ್ಧರೇತ್' ಇತ್ಯಾದಿ ಶ್ಲೋಕದಿಂದ ವಿಹಿತವಾದ ಧ್ಯಾನಯೋಗವನ್ನು ಅನುವಾದಮಾಡಿ ಅದನ್ನಾಚರಿಸುವ ರೀತಿಯನ್ನು ಹೇಳುತ್ತಾನೆ:- ಕರ್ಮಾಚರಣೆಯಿಂದ ಶುದ್ಧಾಂತಃಕರಣನಾಗಿ ಧ್ಯಾನಯೋಗದಲ್ಲಿ ಪ್ರವರ್ತಿಸಿದವನು ಯಾವಾಗಲೂ ಏಕಾಕಿಯಾಗಿ ನಿರ್ಜನಪ್ರದೇಶದಲ್ಲಿ ಕುಳಿತು ಮನಸ್ಸು-ದೇಹ ಇವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಯಾವ ಪ್ರಯೋಜನವನ್ನೂ ಅಪೇಕ್ಷಿಸದೆ ಭಾರ್ಯಪುತ್ರಾದಿ ಸಕಲ ಪರಿವಾರಗಳಲ್ಲಿಯೂ ಮಮತೆಯನ್ನು ಬಿಟ್ಟು ಮನಸ್ಸನ್ನು ಕೇವಲ ಭಗದ್ವಿಷಯದಲ್ಲಿಯೇ ಯೋಜಿಸಬೇಕು. ಎಂದರೆ ಮನಸ್ಸಿನಲ್ಲಿ ಬೇರೆ ಯಾವ ವಿಷಯವನ್ನೂ ನೆನೆಯದೆ ಶ್ರೀಹರಿಯನ್ನೆ ಸತತ ಚಿಂತಿಸಬೇಕು. ಅದೇ ಧ್ಯಾನಯೋಗವು,

**ಶುಚೌದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ**

**ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಂ॥6-11॥**

**ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ**

**ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮ ವಿಶುದ್ಧಯೇ॥6-12॥**

11-12. ಸ್ವಾಭಾವಿಕವಾಗಿ ಅಥವಾ ಸಂಮಾರ್ಜನಾದಿಗಳಿಂದ ಪರಿಶುದ್ಧವಾದ, ಮನಃಪ್ರಸನ್ನತೆಯನ್ನುಂಟುಮಾಡುವಂತಹ ಸ್ಥಳದಲ್ಲಿ ಅತಿ ಎತ್ತರವೂ, ಅತಿ ತಗ್ಗಾಗಿಯೂ

ಇಲ್ಲದಿರುವ ತನ್ನದೇ ಆದ ಮಣೆ ಮುಂತಾದ ಆಸನವನ್ನು ದೃಢವಾಗಿ ನಿಲ್ಲುವಂತೆ ಸ್ಥಾಪಿಸಿ, ಅದರ ಮೇಲೆ ದರ್ಭೆಯನ್ನು ಹರಡಬೇಕು. ಅದರ ಮೇಲೆ ಕೃಷ್ಣಾಜಿನವನ್ನು ಹಾಕಿ, ಅದರ ಮೇಲೆ ಶುದ್ಧವಾದ ವಸ್ತ್ರವನ್ನು ಹಾಸಿ, ಅದರಲ್ಲಿ ಕುಳಿತು, ಮನಸ್ಸು ಮತ್ತು ಇಂದ್ರಿಯಗಳನ್ನು ವಿಷಯಾಂತರದಲ್ಲಿ ಹೋಗದಂತೆ ಸಕಲ ವ್ಯಾಪಾರಗಳನ್ನೂ ನಿಲ್ಲಿಸಿ, ಧ್ಯೇಯನಾದ ಪರಮಾತ್ಮನಲ್ಲಿಯೇ ಸ್ಥಿರವಾಗಿ ಮನಸ್ಸನ್ನಿಟ್ಟು, ಅದರ ಮಾಲಿನ್ಯವನ್ನು ಅಥವಾ ಸಂಸಾರವೆಂಬ ಮಲವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಧ್ಯಾನಯೋಗವನ್ನಾಚರಿಸಬೇಕು.

**ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ**

**ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್॥6-13॥**

**ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ**

**ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ॥6-14॥**

**13-14.** ಸಹಜವಾಗಿಯೇ ವಿಷಯಗಳ ಕಡೆಗೆ ಗಮನಿಸದಿರುವ ಮನಸ್ಸುಳ್ಳ ವ್ಯಾಘ್ರಚೋರಾದಿ ಭಯರಹಿತನಾದ, ವಿಷಯ ಭೋಗಾದಿ ಪರಿತ್ಯಾಗವೆಂಬ ಬ್ರಹ್ಮಚರ್ಯನಿಷ್ಠನಾದ ಧ್ಯಾನಯೋಗಿಯು ಶರೀರದ ಮಧ್ಯಭಾಗ-ತಲೆ-ಕುತ್ತಿಗೆ ಈ ಮೂರನ್ನೂ ಬಗ್ಗಿಸಿ ಅತ್ತಿತ್ತ ತಿರುಗಿರದಂತೆ ಸರಿಯಾಗಿಟ್ಟುಕೊಂಡು, ಚಲಿಸದಂತೆ ದೃಢವಾಗಿ ಕುಳಿತು, ಹಿಂದೆ ಮುಂದೆ ಪಾರ್ಶ್ವಭಾಗಗಳಲ್ಲಿ ದೃಷ್ಟಿಯು ಹೋಗದಂತೆ ಮಾಡುವುದಕ್ಕಾಗಿ ಕಣ್ಣುಗಳನ್ನು ಅರ್ಧ ಮುಚ್ಚಿ, ತನ್ನ ಮೂಗಿನ ಕೊನೆಯ ಭಾಗವನ್ನೇ ನೋಡುತ್ತ, ಪ್ರತ್ಯಾಹಾರದಿಂದ ಮನಸ್ಸನ್ನು ಚೆನ್ನಾಗಿ ವಶಪಡಿಸಿಕೊಂಡು, ನನ್ನ ಧ್ಯಾನವನ್ನೇ ಮಾಡುವವನಾಗಿ (ಮನಸ್ಸಿನಲ್ಲಿ ನನ್ನನ್ನೇ ನೆನೆಯುತ್ತ ನಾನೇ ಸರ್ವೋತ್ತಮನೆಂದು ನಿರ್ಧಾರವಾಗಿ ತಿಳಿದು ಸಮಾಧಿಸಂಪನ್ನನಾಗಬೇಕು.)

**ಯುಂಜನ್ನೇವಂ ಸದಾತ್ಮಾನಂ ಯೋಗೀ ನಿಯತಮಾನಸಃ**

**ಶಾಂತಿಂ ನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ॥6-15॥**

**15.** ಧ್ಯಾನದ ಫಲವನ್ನು ಹೇಳುತ್ತಾನೆ:- ಮನಸ್ಸಿನ ಇತರ ವ್ಯಾಪಾರಗಳನ್ನೆಲ್ಲಾ ವಿಶೇಷವಾಗಿ ಬಿಟ್ಟು ಪೂರ್ವೋಕ್ತ ರೀತಿಯಿಂದ ಯಾವಾಗಲೂ ಮನಸ್ಸನ್ನು ಭಗವಂತನಲ್ಲಿಯೇ ಆಸಕ್ತವನ್ನಾಗಿ ಮಾಡಿ ಧ್ಯಾನ ಮಾಡುವ ಯೋಗಿಯು ಪ್ರಾಕೃತದೇಹತ್ಯಾಗಾನಂತರದಲ್ಲಿ ಸಂಭವಿಸುವ, ನನ್ನಲ್ಲಿ ಸ್ಥಿತಿರೂಪವಾದ ಶಾಂತಿಯನ್ನು ಎಂದರೆ ಸಾಯುಜ್ಯಾದಿ ಮುಕ್ತಿಯನ್ನು ಹೊಂದುತ್ತಾನೆ.

**ನಾತ್ಯಶ್ನತಸ್ತು ಯೊಗೋಸ್ತಿ ನ ಚೈ ಕಾಂತಮನಶ್ನತಃ**

**ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ॥6-16॥**

**16.**ಧ್ಯಾನಯೋಗಪರನಿಗೆ ಆಹಾರಾದಿ ನಿಯಮವನ್ನು ಹೇಳುತ್ತಾನೆ:- ಹೆಚ್ಚಾಗಿ ಭೋಜನಮಾಡುವವನಿಗೂ, ಸುತರಾಂ ಆಹಾರವನ್ನು ತೆಗೆದುಕೊಳ್ಳದಿರುವವನಿಗೂ, ಅತಿಯಾಗಿ ನಿದ್ರೆಮಾಡುವವನಿಗೂ ಮತ್ತು ಅತ್ಯಂತ ಎಚ್ಚರಿಕೆಯಿಂದ ಇರುವವನಿಗೂ ಧ್ಯಾನಯೋಗವು ಸಿದ್ಧಿಸುವುದಿಲ್ಲ. (ಶಕ್ತನಾದವನು ಆಹಾರವನ್ನು ತೆಗೆದುಕೊಳ್ಳದೆಯೂ, ಎಚ್ಚರಿಕೆಯಿಂದಿರುವಾಗಲೂ ಧ್ಯಾನಯೋಗ ಸಿದ್ಧಿಯನ್ನು ಪಡೆಯಬಹುದು. ಅಶಕ್ತರು ಮೇಲ್ಕಂಡ ರೀತಿಯಾಗಿ ಯೋಗಸಿದ್ಧಿಯನ್ನು ಹೊಂದಬಹುದೆಂದು ತಾತ್ಪರ್ಯ)

**ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು**

**ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ॥6-17॥**

**17.** ಯಾವರೀತಿಯಾಗಿರುವವನಿಗೆ ಯೋಗವು ಸಿದ್ಧಿಸುವುದೆಂದರೆ ಹೇಳುತಾನೆ:- ಎಷ್ಟು ಆಹಾರವನ್ನು ಸೇವಿಸಿದರೆ ಮತ್ತು ಸಂಚಾರಮಾಡಿದರೆ ದೇಹಕ್ಕೆ ತೊಂದರೆಯಾಗಿ ಶ್ರಮಾದಿಗಳಾಗುವುದಿಲ್ಲವೋ ಅಷ್ಟು ಮಾತ್ರ ಆಹಾರಸೇವನೆಸಂಚಾರಗಳನ್ನು ಮಾಡುವವನಿಗೂ, ಕರ್ತವ್ಯಕರ್ಮಾಚರಣೆಯ ಕಾಲದಲ್ಲಿ ಶ್ರಮವಾಗದಂತೆ ಯಥೋಚಿತವಾಗಿ ಕರಚರಣಾದಿ ವ್ಯಾಪಾರಮಾಡುವವನಿಗೂ ಮತ್ತು ಯೋಗಾಚರಣೆಗೆ ಬಾಧಕವಾಗದಿರುವಷ್ಟು ನಿದ್ರೆ-ಎಚ್ಚರಿಕೆಯುಳ್ಳವನಿಗೂ ಧ್ಯಾನ ಯೋಗವು ಸಿದ್ಧವಾಗಿ ಅದು ಸಕಲ ದುಃಖಗಳನ್ನೂ ಪರಿಹರಿಸುತ್ತದೆ.

**ಯದಾ ವಿನಿಯತಂ ಚಿತ್ತಮಾತ್ಮನ್ಯೇವಾವತಿಷ್ಠ ತೇ**

**ನಿಃಸ್ಪೃಹಃ ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೇ ತದಾ॥6-18॥**

**18.** ಯೋಗಸಂಪೂರ್ತಿಯನ್ನು ವಿವರಿಸುತ್ತಾನೆ:- ಯೋಗಿಯ ಮನಸ್ಸು ನಿಶ್ಶೇಷವಾಗಿ ವಿಷಯಸಂಬಂಧವನ್ನು ಬಿಟ್ಟು ಯಾವಾಗ ಪರಮಾತ್ಮನಲ್ಲಿಯೇ ಸ್ಥಿರವಾಗಿ ನಿಲ್ಲುತ್ತದೆಯೋ ಮತ್ತು ಯಾವಾಗ ಯೋಗಿಯು ಸಕಲ ವಿಷಯಾಭಿಲಾಷೆಗಳನ್ನೂ ನಿವೃತ್ತಿ ಮಾಡಿಕೊಳ್ಳುವನೋ ಆಗ ಯೋಗಸಂಪೂರ್ತಿಯುಳ್ಳವನೆಂದು ಕರೆಯಲ್ಪಡುವನು.

**ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ**

**ಯೋಗಿನೋ ಯತಚಿತ್ತಸ್ಯ ಯುಂಜತೋ ಯೋಗಮಾತ್ಮನಃ॥6-19॥**

| |
|---|
| **19.**ಯೋಗಸಂಪನ್ನನ ಸ್ಥಿತಿಯನ್ನು ಉದಾಹರಣೆಯಿಂದ ವಿವರಿಸುತ್ತಾನೆ:- ಗಾಳಿಯಿಲ್ಲದ ಸ್ಥಳದಲ್ಲಿರುವ ದೀಪವು ಹೇಗೆ ಚಲಿಸುವುದಿಲ್ಲವೋ ಹಾಗೆ. ಪರಮಾತ್ಮವಿಷಯಕ ಸಮಾಧಿಯನ್ನಾಚರಿಸುವ ಯೋಗಿಯಿಂದ ನಿಯಮಿಸಲ್ಪಟ್ಟ ಅವನ ಮನಸ್ಸೂ ನಿಶ್ಚಲವಾಗಿರುವುದು. ಅಂತಹ ಯೋಗಿಯ ಚಿತ್ತಕ್ಕೆ ಗಾಳಿಯಿಲ್ಲದ ಸ್ಥಳದಲ್ಲಿರುವ ದೀಪವೇ ದೃಷ್ಟಾಂತವು. (ಆ ದೀಪವು ಗಾಳಿಗೆ ಸಿಕ್ಕಿಲ್ಲ. ನಿಶ್ಚಲವಾಗಿದೆ. ಪ್ರಕಾಶವನ್ನು ಬೀರುತ್ತಿದೆ. ಅದರಂತೆಯೇ ಯೋಗಿ ಚಿತ್ತವು ವಿಷಯಸಂಸ್ಪೃಷ್ಟ ಬುದ್ಧೀಂದ್ರಿಯಗಳಿಗೆ ಸಿಕ್ಕುವುದಿಲ್ಲ. ಏಕಾಗ್ರವಾಗಿರುವುದು ಮತ್ತು ಭಗವಂತನನ್ನು ಪ್ರಕಾಶಪಡಿಸುವುದು. ಇಂತಹ ಮನಃಪರಿಪಾಕವನ್ನು ಹೊಂದಿರುವವನೇ ಯೋಗಸಂಪನ್ನನೆಂದು ಭಾವ.) |
| ಯತ್ರೂಪರಮತೇ ಚಿತ್ತಂ ವಿರುದ್ಧಂ ಯೋಗಸೇವಯಾ<br>ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ॥6-20॥ |
| ಸುಖಮಾತ್ಯಂತಿಕಂ ಯತ್ತದ್ಬುದ್ಧಿ ಗ್ರಾಹ್ಯಮತೀಂದ್ರಿಯಂ<br>ವೇತ್ತಿ ಯತ್ರ ನ ಚೈವಾಯಂ ಸ್ಥಿತಶ್ಚಲತಿ ತತ್ವತಃ॥6-21॥ |
| ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ<br>ಯಸ್ಮಿಂಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ॥6-22॥ |
| ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂಜ್ಞಿತಂ<br>ಸ ನಿಶ್ಚಯೇನ ಯೋಕ್ತವ್ಯೋ ಯೋಗೋ ನಿರ್ವಿಣ್ಣ ಚೇತಸಾ॥6-23॥ |
| **20-23.** [ಈ ಶ್ಲೋಕದಿಂದ ನಾಲ್ಕು ಶ್ಲೋಕಗಳನ್ನೂ ಒಟ್ಟಿಗೆ ಅನ್ವಯಿಸಿಕೊಳ್ಳಬೇಕು. ಮೂರು ಶ್ಲೋಕಗಳಲ್ಲಿರುವ 'ಯತ್' ಶಬ್ದಗಳಿಗೆ ನಾಲ್ಕನೆಯಶ್ಲೋಕದಲ್ಲಿರುವ 'ತಂ' ಎಂಬ ಶಬ್ದದಿಂದ ಅನ್ವಯವು.] ಸಮಾಧಿಯೋಗವು ವಿವರಿಸಲ್ಪಡುತ್ತದೆ:- ನಿರಂತರ ಧ್ಯಾನಾಚರಣೆಯಿಂದ ತಡೆಯಲ್ಪಟ್ಟ ಮನಸ್ಸು ಯಾವ ಅವಸ್ಥೆಯಲ್ಲಿ ಬಾಹ್ಯ ವ್ಯಾಪಾರರಹಿತವಾಗುವುದೋ, ಯಾವ ಯೋಗಾವಸ್ಥೆಯಲ್ಲಿ ಮನಸ್ಸಿನಿಂದ ಭಗವಂತನನ್ನು ನೋಡುವವನಾಗಿ ದೇಹದಲ್ಲಿ ಸಂತೋಷವನ್ನು ಹೊಂದುವನೋ, ಯಾವ ಧ್ಯಾನಯೋಗದಲ್ಲಿ ಸ್ಥಿತನಾದವನು ಅನುಭವದಿಂದಲೇ ವೇದ್ಯವಾಗುವ, ಲೌಕಿಕೇಂದ್ರಿಯಗಳಿಗೆ ಗೋಚರವಾಗದಿರುವ, ಆತಿಶಯಿತವಾದ ಸುಖವನ್ನು ಅನುಭವಿಸುವನೋ, ಯಾವ ಯೋಗದಲ್ಲಿ ನಿರತನಾದವನು ಭಗವಂತನ ದೆಸೆಯಿಂದ ಚಲಿಸುವುದಿಲ್ಲವೋ |

(ಭಗವಂತನನ್ನೆ ಬಿಡದೆ ನೆನೆಯುತ್ತಿರುವನೋ) ಯಾವ ಯೋಗವನ್ನು ಹೊಂದಿದ ಬಳಿಕ ಬೇರೆ ಲಾಭವನ್ನು ಅದಕ್ಕಿಂತ ಹೆಚ್ಚಾಗಿ ತಿಳಿಯುವುದಿಲ್ಲವೋ, ಯಾವ ಯೋಗನಿರತನು ಮಹತ್ತರ ದುಃಖಸಾಮಗ್ರಿಗಳೊದಗಿದರೂ ಯೋಗದಿಂದ ಚಲಿತನಾಗುವುದಿಲ್ಲವೋ, ದುಃಖಸಂಬಂಧವನ್ನು ಪರಿಹರಿಸುವ ಉಕ್ತಾನೇಕ ವಿಶೇಷಣಯುಕ್ತವಾದ ಅಂತಹ ಸಮಾಧಿಯನ್ನು ಯೋಗ ನಾಮಕವೆಂದು ತಿಳಿಯಬೇಕು. ಆ ಸಮಾಧಿಯೋಗವನ್ನೇ ವಿರಕ್ತ ಮನಸ್ಸುಳ್ಳ ಮೋಕ್ಷಾರ್ಥಿಯು ಅವಶ್ಯವಾಗಿ ಆಚರಿಸಬೇಕು.

**ಸಂಕಲ್ಪ ಪ್ರಭವಾನ್ ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ**
**ಮನಸ್ಯೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ॥6-24॥**

**ಶನೈಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ**
**ಆತ್ಮ ಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್॥6-25॥**

**24-25** (ಇಂತಹ ಪ್ರಯೋಜನಕ್ಕಾಗಿ ಈ ಕರ್ಮವನ್ನು ಮಾಡುತ್ತೇನೆ ಎಂದು ಮನಸ್ಸಿನಲ್ಲಿ ಉದ್ದೇಶಿಸುವುದೇ ಸಂಕಲ್ಪವು.) ಸಂಕಲ್ಪ ಪೂರ್ವಕವಾಗಿ ಅನುಷ್ಠಾನಮಾಡುವುದರಿಂದುಂಟಾಗುವ ಸಕಲ ವಿಷಯಭೋಗಗಳನ್ನೂ ನಿಶ್ಶೇಷವಾಗಿ ತ್ಯಜಿಸಿ, ಮನಸ್ಸಿನಿಂದಲೇ ಇಂದ್ರಿಯ ಸಮೂಹವನ್ನು ಯಾವ ವಿಷಯಗಳ ಕಡೆಗೂ ಹೋಗದಂತೆ ನಿಯಮಿಸಿ, ಧೈರ್ಯ್ಯಯುಕ್ತವಾದ ಧಾರಣೆಯಿಂದ ಬುದ್ಧಿಯನ್ನು ಸ್ವಾಧೀನಮಾಡಿಕೊಂಡು, ಮನಸ್ಸನ್ನು ಕ್ರಮವಾಗಿ ವಿಷಯಗಳಿಂದ ದೂರಮಾಡಬೇಕು. ಮತ್ತು ಬುದ್ಧಿಯಿಂದ ಮನಸ್ಸನ್ನು ಭಗವಂತನಲ್ಲಿಯೇ ಸ್ಥಿರವಾಗಿ ನಿಲ್ಲಿಸಿ ಬೇರೆ ಯಾವುದನ್ನೂ ಚಿಂತಿಸಬಾರದು.

**ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಂ**
**ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್॥6-26॥**

**26.** ಚಂಚಲಸ್ವಭಾವವುಳ್ಳ ಮನಸ್ಸು ಸುಂದರ ವಿಷಯದಿಂದ ಆಕರ್ಷಿಸಲ್ಪಟ್ಟು ಅಸ್ಥಿರವಾಗಿ ಯಾವ ಯಾವ ವಿಷಯಗಳಲ್ಲಿ ಭೋಗಾರ್ಥವಾಗಿ ಪ್ರವರ್ತಿಸುತ್ತಿದೆಯೋ ಆಯಾ ವಿಷಯಗಳ ಕಡೆಯಿಂದ ಈ ಮನಸ್ಸನ್ನು ಹಿಂತಿರುಗಿಸಿ ಭಗವಂತನಲ್ಲಿಯೇ ನಿಲ್ಲುವಂತೆ ಮಾಡಬೇಕು. (ಹೀಗೆ ತಿರುತಿರುಗಿ ಅಭ್ಯಾಸದಿಂದ ಚಿತ್ತಸ್ಥೈರ್ಯವನ್ನು ಹೊಂದಬೇಕೆಂದಭಿಪ್ರಾಯ.)

**ಪ್ರಶಾಂತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಂ**

**ಉಪೈತಿ ಶಾಂತರಜಸಂ ಬ್ರಹ್ಮ ಭೂತಮಕಲ್ಮಷಮ್॥6-27॥**

**27.** ಈ ಪ್ರಕಾರ ಧ್ಯಾನಯೋಗವನ್ನು ಸಾಂಗವಾಗಿ ನಿರೂಪಿಸಿ ಅದನ್ನಾಚರಿಸುವವನಿಗಾಗುವ ಫಲವನ್ನು ವಿಸ್ತಾರವಾಗಿ ಹೇಳುತ್ತಾನೆ:- ರಜೋಗುಣ ಸಂಬಂಧವನ್ನು ಕಳೆದುಕೊಳ್ಳುವುದರಿಂದ ಕಾಮಕ್ರೋಧಾದಿ ದೋಷಗಳು ಹೋಗುವುವು. ಅದರಿಂದ ಮನಸ್ಸು ಪ್ರಶಾಂತವಾಗುವುದು. ಎಂದರೆ ಸ್ವಪ್ರಯತ್ನವಿಲ್ಲದೆ ಅದಾಗಿಯೇ ವಿಷಯಗಳ ಕಡೆಗೆ ಹೋಗದೆ ಇರುವುದು. ಈ ರೀತಿ ಶಾಂತಮನಸ್ಕನಾದ ಬ್ರಹ್ಮನಿಷ್ಠೆಯುಳ್ಳ, ಸಮಾಧಿಯೋಗನಿರತನಾದವನಿಗೆ ಉತ್ತಮ ಸುಖವು ದೊರೆಯುತ್ತದೆ. (ಧ್ಯಾನಯೋಗಿಯು ಮುಕ್ತನಾಗುವನೆಂದು ಭಾವ.)

**ಏವಂ ಯುಂಜನ್ ಸದಾತ್ಮಾನಂ ಯೋಗೀ ವಿಗತಕಲ್ಮಷಃ**

**ಸುಖೇನ ಬ್ರಹ್ಮ ಸಂಸ್ಪರ್ಶಮತ್ಯಂತಂ ಸುಖಮಶ್ನುತೇ॥6-28॥**

**28.** ಧ್ಯಾನಯೋಗಿಗಾಗುವ ಸುಖವು ಎಂತಹುದು? ಆ ಸುಖವು ಆಯಾಸದಿಂದ ಬರುವುದೇ ಹೇಗೆ? ಎಂದರೆ, ಹೇಳುತ್ತಾನೆ:- ಕಾಮಕ್ರೋಧಾದಿ ದೋಷರಹಿತನಾದ ಧ್ಯಾನಯೋಗಿಯು ಹಿಂದೆ ಹೇಳಿದ ರೀತಿ ಧ್ಯಾನಮಾಡತಕ್ಕವನಾಗಿ, ಆಯಾಸವಿಲ್ಲದೆ ಪರಮಾತ್ಮ ಸಂಬಂಧದಿಂದ ವ್ಯಕ್ತವಾದ ಅತಿಶಯಿತ ದುಃಖಮಿಶ್ರವಲ್ಲದ ಸುಖವನ್ನು ಹೊಂದುವನು.

**ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ**

**ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ॥6-29॥**

**29.** ಧ್ಯಾನಪ್ರಕರಣವನ್ನು ಮುಗಿಸಿ ಈಗ ಧ್ಯೇಯವನ್ನು ಹೇಳುತ್ತಾನೆ: ಧ್ಯಾನಯೋಗನಿರತವಾದ ಮನಸ್ಸುಳ್ಳವನು ಬ್ರಹ್ಮಾದಿ ತೃಣಾಂತವಾದ ವಸ್ತುಗಳಲ್ಲಿ ಅಂತರ್ಯಾಮಿಯಾಗಿರುವ ಭಗವಂತನು ಐಶ್ವರ್ಯಾದಿ ಸರ್ವಪ್ರಕಾರದಿಂದಲೂ ಸಮನಾಗಿರುವನೆಂದು ತಿಳಿದು, ಪರಮಾತ್ಮನು ಸಕಲ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿರುವುದನ್ನೂ, ಸಕಲ ಪ್ರಾಣಿಗಳೂ ಪರಮಾತ್ಮನಲ್ಲಿಯೇ ಆಶ್ರಯಿಸಿರುವುದನ್ನೂ ದರ್ಶನಮಾಡುತ್ತಾನೆ. ಇಲ್ಲಿ ಹೇಳಿರುವುದು ವ್ಯಾಪ್ತ್ಯೋಪಾಸಕರಾದ ಉತ್ತಮಾಧಿಕಾರಿಗಳ ಧ್ಯೆಯವಸ್ತುವು; 5ನೆಯ ಅಧ್ಯಾಯದ ಕೊನೆಯಲ್ಲಿ ಮತ್ತು ಇದೇ ಅಧ್ಯಾಯದಲ್ಲಿ 'ಮಚ್ಚಿತ್ತೋ ಯುಕ್ತ ಆಸೀತ' ಎಂಬಲ್ಲಿಯೂ ಉಕ್ತವಾಗಿರುವುದು ಸಾಮಾನ್ಯಾಧಿಕಾರಿಗಳ ಧ್ಯೇಯವು ಎಂದು ವಿವೇಚನೆ ಮಾಡಿಕೊಳ್ಳಬೇಕು.

| |
|---|
| **ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ**<br>**ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ॥6-30॥** |
| **30.** ಸಕಲ ಪ್ರಾಣಿಸ್ಥಿತ ಭಗವದ್ರೂಪಧ್ಯಾನಕ್ಕೆ ಫಲವನ್ನು ಹೇಳುತ್ತಾನೆ:- ಬ್ರಹ್ಮಾದಿ ತೃಣಾಂತ ಸಕಲ ವಸ್ತುಗಳಲ್ಲಿ ಅಂತರ್ಯಾಮಿಯಾಗಿರುವ ನನ್ನನ್ನು ಮತ್ತು ಸಕಲ ಜಗತ್ತೂ ನನ್ನನ್ನೇ ಉಪಜೀವಿಸಿಕೊಂಡು ಆಶ್ರಯಿಸಿದೆಯೆಂಬುದನ್ನೂ ಯಾವಾತನು ನೋಡುತ್ತಾನೆಯೋ ಅಂತಹ ಜ್ಞಾನಿಗೆ ನಾನು ವಿನಾಶಕನಾಗುವುದಿಲ್ಲ. ಎಂದರೆ ಯಾವಾಗಲೂ ಅವನ ಯೋಗಕ್ಷೇಮವನ್ನು ವಹಿಸುವೆನು, ಆ ಜ್ಞಾನಿಯೂ ಸರ್ವದಾ ನನ್ನ ಭಕ್ತನೇ ಆಗಿರುವನು; ದ್ವೇಷ ಮಾಡುವುದಿಲ್ಲವೆಂದರ್ಥ. |
| **ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ**<br>**ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ॥6-31॥** |
| **31.** ಪೂರ್ವಶ್ಲೋಕಾರ್ಥವನ್ನೇ ವಿವರಿಸುತ್ತಾನೆ:- 'ಸಕಲ ಚರಾಚರ ವಸ್ತುಗಳಲ್ಲಿಯೂ ನಿಯಾಮಕನಾಗಿರುವವನು ಪರಮೇಶ್ವರನೊಬ್ಬನೇ' ಎಂದು ನಿಶ್ಚಯಿಸಿಕೊಂಡಿರುವ ಯಾವ ಜ್ಞಾನಿಯು ಸಕಲ ಪ್ರಾಣಿಸ್ಥಿತನಾದ ನನ್ನನ್ನು ಸೇವಿಸುತ್ತಾನೆಯೋ ಆ ಯೋಗಿಯು ನ್ಯಾಯಾನ್ಯಾಯ ಮಾರ್ಗಗಳಲ್ಲಿ ಹೇಗೆ ವರ್ತಿಸುತ್ತಿದ್ದರೂ ನನ್ನಲ್ಲಿಯೇ ಸೇರುತ್ತಾನೆ. ಎಂದರೆ ಮುಕ್ತಿಯನ್ನು ಹೊಂದುತ್ತಾನೆ. ಅನ್ಯಾಯಮಾರ್ಗದಲ್ಲಿ ಪ್ರವರ್ತಿಸಿದರೂ ಜ್ಞಾನಿಗೆ ಮೋಕ್ಷ ಆಗೇ ತೀರುವುದೆಂದು ಭಾವ. |
| **ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ**<br>**ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ॥6-32॥** |
| **32.** ಭಗವಂತನ ವಿಷಯದಲ್ಲಿ ಸಮದರ್ಶನವನ್ನು 'ಏಕತ್ವ ಮಾಸ್ಥಿತಃ' ಎಂಬುದಾಗಿ ತಾನೇ ವಿವರಿಸಿದನು. ಈಗ ಭಗವದ್ಭಕ್ತರ ವಿಷಯದಲ್ಲಿ ಸಾಮ್ಯದರ್ಶನವನ್ನು ವಿವರಿಸುತ್ತಾನೆ:- ಅರ್ಜುನ! ತನಗೆ ಸುಖವು ಹೇಗೆ ಪ್ರಿಯವಾಗಿಯೂ ದುಃಖವು ಅಪ್ರಿಯವಾಗಿಯೂ ಇರುವುದೋ ಹಾಗೆಯೇ ಇತರ ಭಗವದ್ಭಕ್ತರಿಗೂ ಸುಖವು ಪ್ರಿಯವೂ, ದುಃಖವು ಅಪ್ರಿಯವೂ ಆಗಿರುವುದೆಂದು ತಿಳಿಯುವುದೇ ತನ್ನ ಸಾಮ್ಯದರ್ಶನವು. ಹೀಗೆ ತನ್ನಂತೆಯೇ ಸಕಲ ಭಗವದ್ಭಕ್ತರಿಗೂ ಸುಖವೇ ಆಗಬೇಕೆಂದೂ, ದುಃಖವು ಬರಲೇಬಾರದೆಂದೂ ಯಾವ ಜ್ಞಾನಿಯು ಅಪೇಕ್ಷಿಸುವನೋ ಅಂತಹ ಯೋಗಿಯು ಶ್ರೇಷ್ಠನು. |

**ಅರ್ಜುನ ಉವಾಚ**

ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ
ಏತಸ್ಯಾಹಂ ನ ಪಶ್ಯಾಮಿ ಚಂಚಲತ್ವಾತ್ ಸ್ಥಿತಿಂ ಸ್ಥಿರಾಂ॥6-33॥

33. ಈ ಧ್ಯಾನಯೋಗದ ಆಚರಣೆಯೇ ಅಸಾಧ್ಯವೆಂದು ಪಾರ್ಥನು ಶಂಕಿಸುತ್ತಾನೆ:- ಮಧು ಎಂಬ ದೈತ್ಯನನ್ನು ಸಂಹರಿಸಿದ ಸ್ವಾಮಿಯೇ! ವಿಲಕ್ಷಣ ಜಗದ್ವಸ್ತುಗಳಲ್ಲೆಲ್ಲಾ ಗುಣಪೂರ್ಣನೂ, ನಿರ್ದುಷ್ಟನೂ ಆಗಿರುವ ಭಗವಂತನೊಬ್ಬನೇ ತಾರತಮ್ಯರಹಿತನಾಗಿ ನಿಯಾಮಕನಾಗಿರುವನು ಎಂಬ ಭಗವದ್ರೂಪಗಳ ಸಾಮ್ಯದರ್ಶನ ಮತ್ತು ತನ್ನಂತೆಯೇ ಭಗವದ್ಭಕ್ತರಿಗೂ ಸುಖವೇ ಆಗಬೇಕು ದುಃಖವಾಗಬಾರದು ಎಂಬುದಾಗಿ ಭಾಗವತರಲ್ಲಿ ಸಾಮ್ಯದೃಷ್ಟಿ ಅಥವಾ ವಿಕ್ಷೇಪವಿಲ್ಲದೆ ಮನಸ್ಸು ಭಗವಂತನಲ್ಲಿಯೇ ಏಕಾಗ್ರತೆಯಿಂದಿರುವುದೆಂಬ ಮನಸ್ಸಿನ ಸಾಮ್ಯ ಇವುಗಳಿಂದ ಸಹಿತವಾದ ಈ ಧ್ಯಾನಯೋಗವು ನಿನ್ನಿಂದ ಉಪದೇಶಿಸಲ್ಪಟ್ಟಿರುವುದು ಸರಿಯಷ್ಟೆ! ಮನಸ್ಸು ಸ್ವಾಭಾವಿಕವಾಗಿ ಚಂಚಲವಾಗಿರುವ ಕಾರಣ ಅಂತಹ ಈ ಧ್ಯಾನಯೋಗಕ್ಕೆ ದೃಢವಾದ ಸ್ಥಿತಿಯುಂಟಾಗುವುದನ್ನು ಕಾಣಲಾರೆನು.

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ಧೃಢಂ
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ॥6-34॥

34. ಮನಸ್ಸನ್ನು ನಿಗ್ರಹಿಸಿ ಸ್ವಾಧೀನಪಡಿಸಿಕೊಳ್ಳುವುದರಿಂದ ಯೋಗವು ಸ್ಥಿರಪಡಲಾರದೆ? ಎಂದರೆ, ಹೇಳುತ್ತಾನೆ:- ಕೃಷ್ಣ ! ಮನಸ್ಸು ಚಪಲವೆಂಬುದು ಪ್ರಸಿದ್ಧ! ಅದು ದೇಹೇಂದ್ರಿಯಗಳಿಗೆ ಕ್ಷೋಭೆಯನ್ನುಂಟು ಮಾಡುವುದು. ವಿವೇಕದಿಂದಲೂ ಜಯಿಸಲು ಅಶಕ್ಯ. ಅನಾದಿವಿಷಯವಾಸನೆಯು ಆವರಿಸಿರುವುದರಿಂದ ಅದನ್ನು ಬೇರ್ಪಡಿಸಿ ಸದ್ವಿಷಯದಲ್ಲಿ ನಿಲ್ಲಿಸಲು ಶಕ್ಯವಲ್ಲ. ಆದಕಾರಣ ಆಕಾಶದಲ್ಲಿ ಬೀಸುತ್ತಿರುವ ಗಾಳಿಯನ್ನು ಬಟ್ಟೆಯಿಂದ ಮೂಟೆಗಟ್ಟಿ ನಿಲ್ಲಿಸುವುದು ಹೇಗೆ ಅಸಾಧ್ಯವೋ ಹಾಗೆಯೇ ಅಂತಹ ಮನಸ್ಸನ್ನು ನಿಗ್ರಹಿಸುವುದು ಅಸಾಧ್ಯವೆಂದು. ನಾನು ಭಾವಿಸುವೆನು. (ಹೀಗೆ ಮನೋನಿಗ್ರಹವೇ ಅಸಾಧ್ಯವಾಗಿರುವುದರಿಂದ ಚಿತ್ತೈಕಾಗ್ರತೆಯಿಂದ ಆಚರಿಸಬೇಕಾದ ಯೋಗವು ಅನುಷ್ಠಾನಾರ್ಹವಲ್ಲ ಅಂತಹುದರ ಉಪದೇಶದಿಂದ ಏನು ಫಲ? ಇಷ್ಟು ಉಪದೇಶವೂ ವ್ಯರ್ಥವೆಂದು ಅರ್ಜುನನ ಅಭಿಪ್ರಾಯ.)

ಶ್ರೀ ಭಗವಾನುವಾಚ

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ॥6-35॥

**35-ಭಗವಂತನು ಉತ್ತರ ಹೇಳುತ್ತಾನೆ:- ಮಹಾಪರಾಕ್ರಮಶಾಲಿಯಾದ ಅರ್ಜುನ! ಮನಸ್ಸು ಚಂಚಲಸ್ವಭಾವವುಳ್ಳುದು. ಅದನ್ನು ನಿಗ್ರಹಿಸಿ ಸ್ವಾಧೀನಪಡಿಸಿಕೊಳ್ಳುವುದು ಕಷ್ಟ ಸಾಧ್ಯವೇ ಆಹುದು, ಸಂಶಯವಿಲ್ಲ. ಆದರೆ ಸರ್ವಥಾ ನಿಗ್ರಹವು ಸಾಧ್ಯವೇ ಇಲ್ಲವೆಂದು ತಿಳಿಯಬೇಡ. ಉಪಾಯವನ್ನು ಹೇಳುವೆನು ಕೇಳು:- ಕುಂತೀಕುಮಾರ! ವಿಷಯಗಳೆಲ್ಲವೂ ದುಃಖಕರ, ಅಸಾರ ಮತ್ತು ಅಶಾಶ್ವತ ಎಂಬುದನ್ನರಿತು ವಿಷಯತೃಷ್ಣೆಯನ್ನು ಬಿಡುವುದರಿಂದಲೂ (ಇದೇ ವೈರಾಗ್ಯ) ಚಂಚಲವಾದ ಮನಸ್ಸು ವಿಷಯಗಳಲ್ಲಿ ಹೋದಾಗಲೆಲ್ಲಾ ವಿವೇಕದಿಂದ ತಡೆಯುತ್ತ ಅದನ್ನು ಒಂದೇ ಕಡೆ ನಿಲ್ಲಿಸುವ ಅಭ್ಯಾಸಮಾಡುವುದರಿಂದಲೂ ಮನಸ್ಸು ನಿಗ್ರಹಿಸಲ್ಪಡುತ್ತದೆ. (ಅಭ್ಯಾಸ ವೈರಾಗ್ಯಗಳೇ ಮನೋನಿಗ್ರಹೋಪಾಯವೆಂದು ಭಾವ)**

**ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ**

**ವಶ್ಯಾತ್ಮನಾ ತು ಯತತಾ ಶಕ್ಯೋऽವಾಪ್ತುಮುಪಾಯತಃ॥6-36॥**

**36. ಮದಿಸಿದ ಆನೆಯು ಯಥೇಷ್ಟವಿಹಾರಮಾಡಿ ಬಳಲಿ ತಾನಾಗಿಯೇ ಶಾಂತವಾಗುವಂತೆ ಮನಸ್ಸೂ ಬೇಕಾದಷ್ಟು ವಿಷಯಗಳನ್ನು ಭೋಗಿಸಿ ಆಯಾಸ ಹೊಂದಿ ಶಕ್ತಿಯು ಕುಗ್ಗುವುದರಿಂದ ವಿಷಯಗಳನ್ನು ದೂರಮಾಡಿ ಒಂದಾನೊಂದು ಕಾಲದಲ್ಲಿ ವಶವೇ ಆಗುತ್ತದೆ. ಅದಕ್ಕಾಗಿ ಅಭ್ಯಾಸಾದಿ ಪ್ರಯತ್ನಗಳನ್ನೇಕೆ ಮಾಡಬೇಕೆಂದರೆ, ಹೇಳುತ್ತಾನೆ:- ವೈರಾಗ್ಯಾಭ್ಯಾಸಗಳನ್ನಾಚರಿಸಿ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳದಿರುವ ಮನುಷ್ಯನಿಗೆ ಯೋಗಸಿದ್ಧಿಯು ಅಸಾಧ್ಯವೇ ಆಗುವುದು. ಆದರೆ ಅಭ್ಯಾಸ-ವೈರಾಗ್ಯಗಳಿಂದ ಮನಸ್ಸನ್ನು ವಶಪಡಿಸಿಕೊಂಡ ಮನುಷ್ಯನಿಗೆ ತಿರುತಿರುಗಿ ಅಭ್ಯಾಸಾದಿ ಪ್ರಯತ್ನ ಮಾಡುವುದರಿಂದ ಯೋಗಸಿದ್ಧಿಯನ್ನು ಪಡೆಯಲು ಸಾಧ್ಯವಾಗುವುದೆಂಬುದೇ ನನ್ನ ಮತವು.**

**ಅರ್ಜುನ ಉವಾಚ**

**ಅಯತಿಃ ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ**

**ಅಪ್ರಾಪ್ಯ ಯೋಗ ಸಂಸಿದ್ಧಿಂ ಕಾಂ ಗತಿಂ ಕೃಷ್ಣ ಗಚ್ಛತಿ॥6-37॥**

**ಕಚ್ಚಿನ್ನೋ ಭಯವಿಭ್ರಷ್ಟಃ ಛಿನ್ನಾಭ್ರಮಿವ ನಶ್ಯತಿ**

**ಅಪ್ರತಿಷ್ಠೋ ಮಹಾಬಾಹೋ ವಿಮೂಢೋ ಬ್ರಹ್ಮಣಃ ಪಥಿ॥6-38॥**

| |
|---|
| ಏತನ್ಮೇ ಸಂಶಯಂ ಕೃಷ್ಣ ಛೇತ್ತುಮರ್ಹಸ್ಯಶೇಷತಃ<br>ತ್ವದನ್ಯಃ ಸಂಶಯಸ್ಯಾಸ್ಯ ಛೇತ್ತಾ ನ ಹ್ಯುಪಪದ್ಯತೇ॥6-39॥ |
| **37-39.** ಪಾರ್ಥನು ಪ್ರಶ್ನೆ ಮಾಡುತ್ತಾನೆ:- ಕೃಷ್ಣ! ಯೋಗ ಸಂಪೂರ್ತಿಯಾಗುವುದಕ್ಕೆ ತಕ್ಕಷ್ಟು ದೃಢ ಪ್ರಯತ್ನ ಮಾಡದೆ ಅಲ್ಪ ಪ್ರಯತ್ನ ಶೀಲನಾದ ಮನುಷ್ಯನು ಆಸ್ತಿಕ್ಯನಿಷ್ಠೆಯಿಂದ ಕರ್ಮವನ್ನಾಚರಿಸಿ ಪರಿಶುದ್ಧಾಂತಃಕರಣನಾಗಿ ಧ್ಯಾನಯೋಗವನ್ನು ಮಾಡುತ್ತಿರುವಾಗ ಮಧ್ಯದಲ್ಲಿ ಪ್ರಬಲ ಕಾರಣಗಳಿಂದ ಮನಸ್ಸು ಚಲಿಸಿ ಯೋಗಭ್ರಷ್ಟನಾಗುವನು ಧ್ಯಾನಸಂಪೂರ್ತಿಮಾಡಲಿಲ್ಲವಾಗಿ ಧ್ಯಾನಫಲವಾದ ಜ್ಞಾನವನ್ನು ಹೊಂದಲವಕಾಶವಿಲ್ಲ; ಅಂತಹವನು ಯಾವ ಫಲವನ್ನು ಹೊಂದುವನು? ಚತುರ್ವಿಧ ಪುರುಷಾರ್ಥ ಪ್ರಧಾನ ಸಮರ್ಥನು, ಚತುರ್ಬಾಹು ಯುಕ್ತನೂ ಆದ ಶ್ರೀಕೃಷ್ಣ ! ಹೀಗೆ ಮಧ್ಯದಲ್ಲಿ ಯೋಗವನ್ನು ಬಿಟ್ಟವನು ಸ್ವರ್ಗ ಸಾಧಕವಾದ ಕಾಮ್ಯಕರ್ಮಾನುಷ್ಠಾನ ಮತ್ತು ಮೋಕ್ಷ ಸಾಧಕವಾದ ಧ್ಯಾನ ಮಾರ್ಗಗಳನ್ನೂ ಬಿಟ್ಟಿರುವುದರಿಂದ ಯಾವ ಆಶ್ರಯವೂ (ಸಾಧನಮಾರ್ಗವೂ) ಇಲ್ಲದೆ ಪರಬ್ರಹ್ಮಪ್ರಾಪ್ತ್ಯುಪಾಯರಹಿತನಾಗಿ ಗಾಳಿಯಿಂದ ಚದರಿಸಲ್ಪಟ್ಟ ಮೇಘಗಳು ಮಳೆಗರೆಯದೆ ಕರಗಿ ನಾಶವಾಗುವಂತೆ ನರಕಾದ್ಯನರ್ಥವನ್ನು ಹೊಂದುವನೇ ಇಲ್ಲವೆ? (ನರಕ ಪ್ರಾಪ್ತಿಯೇ ಜೀವರಿಗೆ ನಾಶವೆಂದು ಭಾವ.) ಕೃಷ್ಣ! ಈ ನನ್ನ ಸಂಶಯವನ್ನು ನಿಶ್ಶೇಷವಾಗಿ ಪರಿಹರಿಸುವುದಕ್ಕೆ ನೀನೇ ಅರ್ಹನು. ನಿನ್ನ ಹೊರತು ಬೇರೆ ಯಾರೂ ಈ ಸಂಶಯವನ್ನು ಪರಿಹರಿಸಲು ಸಮರ್ಥರಾದವರಿಲ್ಲ. (ಆದುದರಿಂದ ದಯಮಾಡಿ ಈ ವಿಷಯದಲ್ಲಿ ತತ್ತ್ವಾಂಶವನ್ನು ನೀನೇ ಅಪ್ಪಣೆಕೊಡಿಸಬೇಕೆಂದು ಅರ್ಜುನನು ಪ್ರಶ್ನೆ ಮಾಡಿದನು.) |

ಶ್ರೀ ಭಗವಾನುವಾಚ

| |
|---|
| ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ<br>ನಹಿ ಕಲ್ಯಾಣಕೃತ್ಕಶ್ಚಿದ್ದುರ್ಗತಿಂ ತಾತ ಗಚ್ಛತಿ॥6-40॥ |
| ಪ್ರಾಪ್ಯ ಪುಣ್ಯ ಕೃತಾನ್ಲೋಕಾನುಷಿತ್ವಾ ಶಾಶ್ವತೀಃ ಸಮಾಃ<br>ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ॥6-41॥ |
| ಅಥವಾ ಯೋಗಿನಾಮೇವ ಕುಲೇ ಭವತಿ ದೀಮತಾಂ<br>ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಂ॥6-42॥ |

**40-42.** ಪಾರ್ಥನ ಪ್ರಶ್ನೆಗೆ ನಾಲ್ಕುವರೆ ಶ್ಲೋಕಗಳಿಂದ ಶ್ರೀಕೃಷ್ಣನು ಉತ್ತರ ಹೇಳುತ್ತಾನೆ:- ಪಾರ್ಥ! ಧ್ಯಾನಯೋಗವನ್ನಾರಂಭಿಸಿ ಮಧ್ಯಕಾಲದಲ್ಲಿ ಬಿಟ್ಟವನಿಗೆ ಈ ಲೋಕಪರಲೋಕಗಳೆರಡರಲ್ಲಿಯೂ ನಾಶವೇ ಇಲ್ಲ. (ಈ ಲೋಕದಲ್ಲಿ ನಾಶವೆಂದರೆ ಕೃಮಿಕೀಟಾದಿಜನ್ಮ ಪ್ರಾಪ್ತಿ, ಪರಲೋಕದಲ್ಲಿ ನಾಶವೆಂದರೆ ನರಕ ಪ್ರಾಪ್ತಿ) ಏಕೆಂದರೆ, ಅಪ್ಪಾ! ಮಗು! ಸತ್ಕಾರ್ಯಮಾಡಿದವನಾರೂ ನರಕಪ್ರಾಪ್ತ್ಯಾದಿರೂಪ ದುರ್ಗತಿಯನ್ನು ಹೊಂದುವುದಿಲ್ಲ ಆದಕಾರಣ ಸ್ವಲ್ಪ ಕಾಲವಾದರೂ ಧ್ಯಾನಾದಿಗಳನ್ನು ಮಾಡಿರುವ ಈ ಯೋಗಭ್ರಷ್ಟನು ಎಂದಿಗೂ ದುರ್ಗತಿಹೊಂದುವುದಿಲ್ಲ ಹಾಗಾದರೆ ಅವನು ಎಂತಹ ಫಲವನ್ನು ಹೊಂದುವನೆಂದರೆ, ಹೇಳುವನು:- ಯೋಗ ಭ್ರಷ್ಟನು ಪುಣ್ಯದಿಂದ ಲಭಿಸುವಂತಹ ಲೋಕಗಳಿಗೆ ಹೋಗಿ ಅಲ್ಲಿ ಬಹುವರ್ಷಗಳು ವಾಸಮಾಡಿ, ಬಳಿಕ ಸದಾಚಾರಾದಿ ಗುಣಸಂಪನ್ನರಾದ ಧನಿಕರ ಮನೆಯಲ್ಲಿ ಹುಟ್ಟುತಾನೆ:- ಅಥವಾ ಜ್ಞಾನಿಗಳಾದ ಯೋಗಿಗಳ ವಂಶದಲ್ಲಿಯಾದರೂ ಹುಟ್ಟುತ್ತಾನೆ. ಈ ರೀತಿ ಲೋಕದಲ್ಲಿ ಧನಿಕ ಗೃಹಜನನ-ಯೋಗಿಕುಲಜನನವೆಂಬ ಎರಡು ಬಗೆಯ ಜನ್ಮವೂ ಕಷ್ಟ ಲಭ್ಯವಾದುದು. ಸುಲಭಸಾಧ್ಯವಲ್ಲವೆಂಬುದು ಪ್ರಸಿದ್ಧವು.

ತತ್ರ ತಂ ಬುದ್ಧಿ ಸಂಯೋಗಂ ಲಭತೇ ಪೌರ್ವದೇಹಿಕಮ್
ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನಂದನ॥6-43॥

ಪೂರ್ವಾಭ್ಯಾಸೇನ ತೇನೈವ ಕ್ರಿಯತೇ ಹ್ಯವಶೋಽಪಿ ಸಃ
ಜಿಜ್ಞಾಸುರಪಿ ಯೋಗಸ್ಯ ಶಬ್ದ ಬ್ರಹ್ಮಾತಿವರ್ತತೇ॥6-44॥

**43-44.** ಹಾಗೆ ಲಭಿಸಿದ ಎರಡುಬಗೆಯ ಜನ್ಮಗಳಲ್ಲಿಯೂ ಹಿಂದಿನ ಜನ್ಮದಲ್ಲಿ ಆಚರಿಸಿದ್ದ ಭಗವಂತನಲ್ಲಿ ಮನಸ್ಸಂಯೋಜನೆಯೆಂಬ ಧ್ಯಾನವನ್ನು ಹೊಂದುತಾನೆ. (ಪೂರ್ವಜನ್ಮದಲ್ಲಿ ಮಾಡಿದ ಧ್ಯಾನಾಭ್ಯಾಸ ವಾಸನೆಯಿಂದ ಧ್ಯಾನದಲ್ಲಿಯೇ ತಿರುತಿರುಗಿ ಪ್ರವೃತ್ತನಾಗುವನೆಂದು ಭಾವ.) ಕುರುಕುಲೋತ್ಪನ್ನನಾದ ಅರ್ಜುನ! ಅಂತಹವನು ಪೂರ್ವಜನ್ಮದಲ್ಲಿ ಮಾಡಿದ ಪ್ರಯತ್ನಕ್ಕಿಂತಲೂ ಅಧಿಕವಾಗಿಯೇ ಧ್ಯಾನಸಂಪೂರ್ತಿಗಾಗಿ ಪ್ರಯತ್ನಿಸುತ್ತಾನೆ.) ಯೋಗಭ್ರಷ್ಟನು ಮುಂದಿನಜನ್ಮದಲ್ಲಿ ಬುದ್ಧಿಪೂರ್ವಕವಾಗಿ ಧ್ಯಾನಾದಿಗಳಲ್ಲಿ ಪ್ರವರ್ತಿಸದೇ ಇದ್ದರೂ ಪೂರ್ವಜನ್ಮದ ಧ್ಯಾನಾಭ್ಯಾಸವಾಸನೆಯೇ ಅವನ ಮನಸ್ಸನ್ನು ಧ್ಯಾನದಲ್ಲಿಯೇ ಆಕರ್ಷಿಸುವುದು, ಆದಕಾರಣ ಅವನು ಈ ಜನ್ಮದಲ್ಲಿಯೂ ಅಧಿಕಯೋಗ ಸಂಪನ್ನನಾಗುವನು, ಧ್ಯಾನ ಯೋಗವನ್ನು ತಿಳಿದುಕೊಳ್ಳಬೇಕೆಂಬ ಇಚ್ಛಾಮಾತ್ರವುಳ್ಳವನಾದರೂ ವಿಧಿನಿಷೇಧ ಶಾಸ್ತ್ರವನ್ನು

ಅತಿಕ್ರಮಿಸುವನು-ಬದ್ಧನಾಗುವುದಿಲ್ಲ-ಮುಕ್ತನಾಗುವನು. ಹೀಗಿರುವಾಗ ಸ್ವಲ್ಪಕಾಲ ಯೋಗಾನುಷ್ಠಾನಮಾಡಿದವನು ಮುಕ್ತನಾಗುವುದೇವೀನಾಶ್ಚರ್ಯ!

**ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧ ಕಿಲ್ಬಿಷಃ**

**ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್॥6-45॥**

**45.** ಧ್ಯಾನಯೋಗವನ್ನು ತಿಳಿಯಬೇಕೆಂಬ ಜಿಜ್ಞಾಸಾಮಾತ್ರದಿಂದಲೇ ಮೋಕ್ಷವು ಲಭಿಸುವುದಾದರೆ ಧ್ಯಾನಾನುಷ್ಠಾನವು ವ್ಯರ್ಥವಲ್ಲವೆ? ಎಂದರೆ ಹೇಳುತ್ತಾನೆ:- ಯೋಗಜಿಜ್ಞಾಸೆಯುಳ್ಳವನೂ ಯೋಗವನ್ನು ತಿಳಿದವನಾಗಿ ಯೋಗಾಭ್ಯಾಸ ಮಾಡುತ್ತ ಆ ಪ್ರಯತ್ನ ಬಲದಿಂದ ಧ್ಯಾನಯೋಗವುಳ್ಳವನಾಗಿ ಪೂರ್ವಾರ್ಜಿತ ಪಾಪಗಳನ್ನು ಕಳೆದುಕೊಂಡು ಹಾಗೆಯೇ ಅನೇಕ ಜನ್ಮಗಳಲ್ಲಿ ಧ್ಯಾನವನ್ನಾಚರಿಸುವುದರಿಂದ ಅಪರೋಕ್ಷಜ್ಞಾನವೆಂಬ ಸಿದ್ಧಿಯನ್ನು ಪಡೆದು ಅದರಿಂದ ಮುಕ್ತಿಯನ್ನು ಹೊಂದುತ್ತಾನೆ.

**ತಪಸ್ವಿಭ್ಯೋ ಅಧಿಕೋ ಯೋಗೀ ಜ್ಞಾನಿಭ್ಯೋಪಿ ಮತೋಧಿಕಃ**

**ಕರ್ಮಿಭಿಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ॥6-46॥**

**46.** ಯೋಗವನ್ನು ಸ್ತೋತ್ರ ಮಾಡುತ್ತಾನೆ:- ಧ್ಯಾನಸ್ವರೂಪವನ್ನು ತಿಳಿದು, ಧ್ಯಾನದಲ್ಲಿ ನಿರತನಾದ ಯೋಗಿಯು ಕಾಮ್ಯಕರ್ಮಾನುಷ್ಠಾನಪರರಿಗಿಂತಲೂ, ಕೃಚ್ಛ್ರಚಾಂದ್ರಾಯಣಾದಿ ತಪಸ್ಸನ್ನಾಚರಿಸುವವರಿಗಿಂತಲೂ, ಧ್ಯಾನಸ್ವರೂಪ ಜ್ಞಾನಮಾತ್ರವುಳ್ಳವನಿಗಿಂತಲೂ ಉತ್ತಮನೆಂದು ಸಮ್ಮತನಾಗಿರುವನು. ಹೀಗೆ ಯೋಗವು ಸಾರ್ವಾಧಿಕವಾಗಿರುವುದರಿಂದ, ಅರ್ಜುನ ! ನೀನು ಧ್ಯಾನಯೋಗದಲ್ಲಿ ನಿರತನಾಗು!

**ಯೋಗೀನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ**

**ಶ್ರದ್ಧಾವಾನ್ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ॥6-47॥**

**47.** ಧ್ಯಾನವಂತರಲ್ಲಿಯೂ ತಾರತಮ್ಯವನ್ನು ವಿವರಿಸುತ್ತಾನೆ:- ಸಕಲ ಯೋಗಿಗಳಲ್ಲಿಯೂ ಭಕ್ತಿಯುಳ್ಳವನು ಜ್ಞಾನಸಾಧಕವಾದ ಯೋಗವುಳ್ಳವನು. ಭಕ್ತಿಯುಳ್ಳವರಲ್ಲಿಯೂ ಯಾವಾತನು ನನ್ನನ್ನು ಸೇವಿಸುವನೋ ಅವನು ಮೇಲ್ಕಂಡವನಿಗಿಂತ ಉತ್ತಮ ಸಾಧನಸಂಪನ್ನನಾದ ಯೋಗಿಯು. ಅಂತಹವರಲ್ಲಿಯೂ ನನ್ನಲ್ಲಿಯೇ ಅಂತಃಕರಣವಿಟ್ಟು ಎಂದರೆ, ನನ್ನನ್ನೇ ಧ್ಯಾನಿಸುತ್ತ ಯಾವ ಫಲವನ್ನೂ ಆಶಿಸದೆ ಭಗವತ್ಪ್ರೀತ್ಯುದ್ದೇಶದಿಂದಲೇ ನನ್ನನ್ನು ಭಜಿಸುವನು ಯುಕ್ತತಮನು ಎಂದರೆ, ಸರ್ವೋತ್ತಮ ಸಾಧನ ಸಂಪನ್ನನು ಎಂದು ನನ್ನ ಮತ.

ಅರ್ಜುನ! ಪರಮ ಪುರುಷಾರ್ಥವಾದ ಮೋಕ್ಷಕ್ಕೆ ಭಗವದಪರೋಕ್ಷಜ್ಞಾನವು ಸಾಕ್ಷಾತ್ಸಾಧನವು. ಅದಕ್ಕೆ ಧ್ಯಾನಯೋಗವೇ ಸಾಧಕವು. ಧ್ಯಾನವಾದರೋ ಶ್ರವಣಮನನಾದಿಗಳಿಂದ ತತ್ತ್ವನಿರ್ಣಯವಾದ ಹೊರತು ಸಿದ್ಧಿಸಲಾರದು. ತತ್ತ್ವನಿರ್ಣಯವು ಪರಿಶುದ್ಧಾಂತಃಕರಣನಿಗೇ ಸಂಭವಿಸುವುದು. ಆದಕಾರಣ ಮುಮುಕ್ಷುವು ಅಂತಃಕರಣ ಪರಿಶುದ್ಧಿಯನ್ನು ಸಂಪಾದಿಸಬೇಕು. ಹೀಗೆ ಆವಶ್ಯಕವಾದ ಚಿತ್ತಶುದ್ಧಿಯುಂಟಾಗುವುದಕ್ಕೆ ನಿಷ್ಕಾಮಕರ್ಮಾಷ್ಠಾನರೂಪವಾದ ಕರ್ಮಯೋಗವೇ ಮೂಲಕಾರಣವು. ಈ ಕರ್ಮಯೋಗವು ವರ್ಣಾಶ್ರಮಭೇದದಿಂದ ಅನೇಕ ವಿಧವಾಗಿ ವಿಹಿತವಾಗಿದೆ. ನೀನು ಕ್ಷತ್ರಿಯನಾಗಿರುವುದರಿಂದ ಪ್ರಜಾಪಾಲನೆಯು ನಿನಗೆ ಮುಖ್ಯ ಕರ್ತವ್ಯವು. ಈ ದೇಶದ ಹಿತಕ್ಕೆ ಕಂಟಕರಾದ ದುಷ್ಟರನ್ನು ನಿಗ್ರಹಿಸಿದ ಹೊರತು ಪ್ರಜೆಗಳಿಗೆ ಕ್ಷೇಮವಾಗುವುದಿಲ್ಲ. ಆದಕಾರಣ ದುಷ್ಟನಿಗ್ರಹರೂಪ ಯುದ್ಧವು ನಿನಗೆ ಆದ್ಯ ಕರ್ತವ್ಯವಾದುದರಿಂದ ನೀನು ಯಾವ ಫಲವನ್ನೂ ಆಶಿಸದೆ ಕರ್ತವ್ಯಭಾವನೆಯಿಂದ ಯುದ್ಧಮಾಡು! ಅದರಿಂದ ನಿನಗೆ ಮಂಗಳವಾಗುವುದು ಎಂದು ಈ ಯೋಗೋಪದೇಶದ ಸಾರವು.

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ತು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ - ಶ್ರೀಕೃಷ್ಣಾರ್ಜುನಸಂವಾದೇ ಆತ್ಮಸಂಯಮಯೋಗೋ ನಾಮಷಷ್ಠೋಽಧ್ಯಾಯಃ॥6-[47]॥

ಇತಿ ಶ್ರೀಮದ್ವಿದ್ವತ್ಕುಲತಿಲಕ ಗೋವಿಂದಕೃಷ್ಣಾಚಾರ್ಯಸುತ ವಾಸುದೇವಾಚಾರ್ಯ ವಿರಚಿತ ಶ್ರೀಮದ್ಭಗವದ್ಗೀತಾ ಕರ್ಣಾಟಕ ಟೀಕಾಯಾಮಾದ್ಯಷಟ್ಕಂ ಸಂಪೂರ್ಣಂ॥6-[47]॥

## ಸಪ್ತಮೋಽಧ್ಯಾಯಃ॥7-7-[30]॥

'ಬುದ್ಧಿರ್ಯೋಗೇ ತ್ವಿಮಾಂ ಶೃಣು' **2-29**, ಎಂಬ ಶ್ಲೋಕದಲ್ಲಿ ಮುಂದಿನ ಗ್ರಂಥದಿಂದ ಭಗವದಪರೋಕ್ಷಜ್ಞಾನಸಾಧನೆಯನ್ನು ಹೇಳುವೆನೆಂದು ಪ್ರತಿಜ್ಞೆ ಮಾಡಿರುವ ಪ್ರಕಾರ ಜ್ಞಾನದ ಬಹಿರಂಗಸಾಧನವಾದ ಫಲಕಾಮನಾಪರಿತ್ಯಾಗ ಸಹಿತ ವಿಹಿತಕರ್ಮಾನುಷ್ಠಾನರೂಪ ಕರ್ಮಯೋಗವನ್ನು ಐದು ಅಧ್ಯಾಯಗಳಲ್ಲಿ ಭಗವಂತನು ಹೇಳಿದನು. ಆರನೆಯ ಅಧ್ಯಾಯದಲ್ಲಿ ಜ್ಞಾನಾಂತರಂಗಸಾಧನವಾದ ಧ್ಯಾನಯೋಗವನ್ನು ಸಪರಿಕರವಾಗಿ ಉಪದೇಶಿಸಿದನು. ಈಗ, ಉಕ್ತ ಧ್ಯಾನವನ್ನು ಭಕ್ತಿಪೂರ್ವಕವಾಗಿ ಆಚರಿಸಿದರೆ ಅದು ಜ್ಞಾನಸಾಧನವಾಗುವುದು. ಶಿಶುಪಾಲಾದಿಗಳಂತೆ ದ್ವೇಷಪೂರ್ವಕವಾಗಿ ಮಾಡಿದ ಧ್ಯಾನವು ಜ್ಞಾನಸಾಧಕವಾಗುವುದಿಲ್ಲ; ಅನರ್ಥಕಾರಿಯೇ ಆಗುವುದು. ಆದುದರಿಂದ ಭಕ್ತಿಯು ಅವಶ್ಯಕರ್ತವ್ಯವು. ಪರಮಾತ್ಮನ ಮಹಿಮೆಯನ್ನು ತಿಳಿದ ಹೊರತು ಅವನಲ್ಲಿ ಭಕ್ತಿಯುಂಟಾಗಲಾರದು. ಅದಕ್ಕಾಗಿ

ಭಗವನ್ಮಾಹಾತ್ಮ್ಯೆಯನ್ನು ಪ್ರಧಾನವಾಗಿ ಈ ದ್ವಿತೀಯಷಟ್ಕದಲ್ಲಿ (7-12) ಅಧ್ಯಾಯಗಳಲ್ಲಿ ನಿರೂಪಿಸುತ್ತಾನೆ.

ಶ್ರೀ ಭಗವಾನುವಾಚ

ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ಮದಾಶ್ರಯಃ
ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು॥7-1॥

1.ಅವಶ್ಯವಕ್ತವ್ಯವಾದ ಭಗವನ್ಮಹಿಮೆಯನ್ನು ಉಪದೇಶಿಸುವುದಕ್ಕಾಗಿ ಭಗವಂತನು ಮುಂದೆ ಹೇಳುವ ವಿಷಯವನ್ನು ಪ್ರತಿಜ್ಞೆ ಮಾಡುತ್ತಾನೆ:- ಪಾರ್ಥ! ನನ್ನಲ್ಲಿ (ಶ್ರೀಕೃಷ್ಣ ಭಗವಂತನಲ್ಲಿ) ಅತ್ಯಂತ ಸ್ನೇಹಪೂರಿತ ಚಿತ್ತವುಳ್ಳವನಾಗಿ ಹಿಂದೆ ಹೇಳಿರುವ ಕರ್ಮ-ಧ್ಯಾನಗಳೆಂಬ ಜ್ಞಾನೋಪಾಯಗಳನ್ನಾಚರಿಸುತ್ತ 'ಭಗವಂತನೇ ನನ್ನಿಂದ ಸಕಲ ಕರ್ಮಗಳನ್ನೂ ಮಾಡಿಸುವವನು, ನಾನು ಸ್ವತಂತ್ರನಲ್ಲ, ಅವನೇ ನನಗೆ ರಕ್ಷಕನು, ನಾನು ಅವನನ್ನೇ ಆಶ್ರಯಿಸಿರುವೆನು' ಎಂಬುದಾಗಿ ತಿಳಿದು ನಾನು ಹೇಳುವುದನ್ನು ಕೇಳಿ ಅದರಲ್ಲಿ ವಿಶ್ವಾಸವಿಡು! ನಿನ್ನ ಯೋಗ್ಯತೆಗನುಸಾರವಾಗಿ ಎಷ್ಟರಮಟ್ಟಿಗೆ ನನ್ನ ಸ್ವರೂಪವನ್ನು ತಿಳಿಯಬಹುದೋ ಅಷ್ಟನ್ನೂ ಸಂಪೂರ್ಣವಾಗಿ ಸಂದೇಹಕ್ಕಾಸ್ಪದವಾಗದಂತೆ ನಿನಗೆ ಹೇಳುವೆನು.

ಜ್ಞಾನಂ ದೇಹಂ ಸವಿಜ್ಞಾನಮಿದಂ ವಕ್ಷಾಮ್ಯಶೇಷತಃ
ಯಜ್ಞಾತ್ವಾ ನೇಹ ಭೂಯೋಽನ್ಯಜ್ಞಾತವ್ಯಮವಶಿಷ್ಯತೇ॥7-2॥

2. ಪಾರ್ಥ! ನೀನು ವಿಶೇಷವಾಗಿ ತಿಳಿಯಬೇಕಾದ ನನ್ನ ಮಹಿಮೆ(ವಿಶೇಷ ಜ್ಞಾತವ್ಯ)ಯಿಂದ ಸಹಿತವಾದ, ಸಾಮಾನ್ಯವಾಗಿ ತಿಳಿಯಬೇಕಾದ ನನ್ನ ಮಾಹಾತ್ಮ್ಯ(ಜ್ಞಾತವ್ಯ)ವನ್ನೂ ಕೂಡ ಸ್ವಲ್ಪವೂ ಉಳಿಯದಂತೆ ಸಂಪೂರ್ಣವಾಗಿ ಹೇಳುವೆನು. ನಾನು ಹೇಳುವ ಮಾಹಾತ್ಮ್ಯೆಯನ್ನು ತಿಳಿದ ಬಳಿಕ ಪುನಃ ತಿಳಿಯಬೇಕಾದ ಬೇರೆ ವಿಷಯವಾವುದೂ ಉಳಿಯುವುದಿಲ್ಲ. (ಆದುದರಿಂದ ಸಾವಧಾನ ಮನಸ್ಕನಾಗಿ ನನ್ನ ಉಪದೇಶವನ್ನು ಗಮನಿಸಿ ಅದರಂತೆ ಉಪಾಸನೆ ಮಾಡುವವನಾಗು ಎಂದು ಭಾವ.)

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ॥7-3॥

3.ಈ ವಿಷಯದಲ್ಲಿ ಅಧಿಕ ವಿಶ್ವಾಸವನ್ನುಂಟುಮಾಡುವುದಕ್ಕಾಗಿ ಭಗವಂತನ ತತ್ವಜ್ಞಾನವು ದುರ್ಲಭವೆಂದು ಹೇಳುತ್ತಾನೆ:- ಸಾವಿರಾರು ಮನುಷ್ಯರ ಮಧ್ಯದಲ್ಲಿ ಯಾವನೋ ಒಬ್ಬ

ಪುಣ್ಯಪುರುಷನು ಜ್ಞಾನವನ್ನು ಸಂಪಾದಿಸಲು ಯತ್ನಿಸುತ್ತಾನೆ. ಹಾಗೆ ಪ್ರಯತ್ನ ಮಾಡಿದ ಬಹು ಜನರಲ್ಲಿ ಒಬ್ಬಾನೊಬ್ಬನು ಜ್ಞಾನವನ್ನು ಪಡೆಯುವನು. ಜ್ಞಾನಿಗಳಾದವರಲ್ಲಿಯೂ ಸಹ ಸಾತ್ವಿಕರಾದ ಕೆಲವರು ಮಾತ್ರ ನನ್ನ ಸ್ವರೂಪವನ್ನು ಯಥಾರ್ಥವಾಗಿ ತಿಳಿಯುವರು. ಈ ರೀತಿ ಪರಮಾತ್ಮ ತತ್ವಜ್ಞಾನವು ದುರ್ಲಭವಾಗಿದೆ.

**ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ**

**ಅಹಂಕಾರ ಇತೀದಂ ಮೇ ಭಿನ್ನಾ ಪ್ರಕೃತಿರಷ್ಟಧಾ॥7-4॥**

**ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಂ**

**ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್॥7-5॥**

**ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ**

**ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ॥7-6॥**

**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ**

**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ॥7-7॥**

**4-7.** ಈಗ ಮೊದಲನೆಯದಾಗಿ ಪ್ರತಿಜ್ಞೆ ಮಾಡಿದ ಜ್ಞಾತವ್ಯ=ಸಾಮಾನ್ಯವಾಗಿ ತಿಳಿಯಬೇಕಾದ ವಿಷಯವನ್ನು ಹೇಳುತ್ತಾನೆ:- ನನ್ನ ಅಧೀನವಾದ ಪ್ರಕೃತಿಯು ನನ್ನ ಪ್ರೇರಣಾನುಸಾರವಾಗಿ ಪರಿಣಾಮ ಹೊಂದಿ ಪೃಥಿವೀ-ಜಲ-ಅಗ್ನಿ-ವಾಯು-ಆಕಾಶ ಎಂಬ ಪಂಚ ಮಹಾಭೂತಗಳು, ಮನಸ್ತತ್ವ, ಬುದ್ಧಿತತ್ವ, ಅಹಂಕಾರತತ್ವ ಮತ್ತು ಮಹತ್ತತ್ವ ಎಂಬುದಾಗಿ ಒಂಭತ್ತು ವಿಧವಾಗಿರುತ್ತದೆ. [ಇಲ್ಲಿ ಮಹತ್ತತ್ವವನ್ನು ಸಾಕ್ಷಾತ್ತಾಗಿ ಹೇಳಿಲ್ಲ. ಆದರೂ ಅಹಂಕಾರಪದದಿಂದಲೇ ಅದನ್ನೂ ಗ್ರಹಿಸಬೇಕು. ಹೀಗೆ ಮಹತ್ತತ್ವವನ್ನು ಸೇರಿಸಬೇಕಾಗಿರುವುದರಿಂದ ಒಂಭತ್ತು ಬಗೆಯೆಂದು ಅರ್ಥಮಾಡಿದೆ.] ಜಡ ಪ್ರಕೃತಿಯು ತನ್ನ ಈ ಕಾರ್ಯಸಹಿತವಾಗಿ ನನ್ನ ಅಧೀನದಲ್ಲಿದೆಯೆಂಬುದು ಮಾತ್ರವೇ ಅಲ್ಲ; ಬ್ರಹ್ಮಾದಿ ಸಕಲ ಜಗತ್ತಿಗೂ ತಾಯಿಯಾದ ಚೇತನಪ್ರಕೃತಿ=ಲಕ್ಷ್ಮೀದೇವಿಯೂ ಸಹ ನನ್ನ ಅಧೀನಳಾಗಿಯೇ ಇರುವಳೆಂದು ಹೇಳುತ್ತಾನೆ:- ಈ ಜಡಪ್ರಕೃತಿಯು, ಅದರ ಕಾರ್ಯವಾದ ಮಹದಾದಿತತ್ವಗಳು ಮತ್ತು ಜೀವರೂ ಸಹ ಅಧಮರು. ಇವರೆಲ್ಲರಿಗಿಂತ ಭಿನ್ನಳು, ಈ ಚರಾಚರ ಪ್ರಪಂಚಧಾರಕಳು, ಸಕಲ ಜೀವರ ದೇಹಗಳಲ್ಲಿಯೂ ನೆಲೆಸಿ ಅವರ ಪ್ರಾಣಗಳನ್ನು ಅವರವರ ದೇಹಗಳಲ್ಲಿ ಧಾರಣೆ ಮಾಡಿಸುವುದರಿಂದ 'ಜೀವ' ಎನಿಸಿರುವವಳು, ನಿತ್ಯಳೂ ಆಗಿರುವ

ಲಕ್ಷ್ಮಿದೇವಿಯನ್ನು ನನ್ನ ಅಧೀನಳನ್ನಾಗಿಯೂ, ಬ್ರಹ್ಮಾದಿ ಜಗತ್ತಿಗಿಂತಲೂ ಉತ್ತಮಳನ್ನಾಗಿಯೂ ತಿಳಿಯುವವನಾಗು. ಶರೀರೇಂದ್ರಿಯ ವಿಷಯಗಳೆಂಬ ಭೂತಕಾರ್ಯಸಹಿತವಾದ ಸಕಲಪ್ರಾಣಿಗಳೂ ಜಡ ಪ್ರಕೃತಿ ಮತ್ತು ಚೇತನ ಪ್ರಕೃತಿಗಳಿಂದ ಆಯಾಯಾ ವಸ್ತು ಸ್ವಭಾವಕ್ಕನುಗುಣವಾದ ಉತ್ಪತ್ತಿಯನ್ನು ಹೊಂದುವುದೆಂದು ತಿಳಿ! ಹೀಗೆ ನನ್ನ ಅಧೀನವಾದ ಪ್ರಕೃತಿ ಮೂಲಕವಾಗಿ ನಾನೇ ಸಕಲ ಪ್ರಪಂಚಕ್ಕೂ ಸೃಷ್ಟಿಕರ್ತನು ಮತ್ತು ಸಂಹಾರಕರ್ತನೂ ಆಗಿರುವೆನು. ಧನಂಜಯ! ನನಗಿಂತ ಬೇರೆ ಸರ್ವೋತ್ತಮವಸ್ತು ಯಾವುದೂ ಇಲ್ಲ. (ಇಷ್ಟೇ ಅಲ್ಲ; ಜಗತ್ತಿನ ಸ್ಥಿತಿಯೂ ನನ್ನ ಅಧೀನವೇ ಆಗಿದೆ.) ಹೇಗೆಂದರೆ: ದಾರದಲ್ಲಿ ಪೋಣಿಸಿದ ಮುತ್ತು ಮೊದಲಾದ ರತ್ನಗಳು ಹೇಗೆ ದಾರದ ಆಧಾರದಿಂದ ನಿಂತಿರುವುವೋ ಅದರಂತೆ ಈ ಸಕಲ ಜಗತ್ತೂ ನನ್ನಲ್ಲಿಯೇ ಅತ್ಯಂತವಾಗಿ ಆಶ್ರಿತವಾಗಿ ಉಪಜೀವಿಸಿಕೊಂಡಿದೆ.

ರಸೋಽಹಮಪ್ಸು ಕೌಂತೇಯ ಪ್ರಭಾಸ್ಮಿ ಶಶಿಸೂರ್ಯಯೋಃ
ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು॥7-8॥

ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು॥7-9॥

ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಂ
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಂ॥7-10॥

ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಂ
ಧರ್ಮಾಽವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ॥7-11॥

**8-11.** 'ಜ್ಞಾನಂ ತೇಽಹಂ' ಎಂಬಲ್ಲಿನ ಜ್ಞಾನಪದದಿಂದ ಪ್ರತಿಜ್ಞಾತವಾದ ಸಾಮಾನ್ಯ ಜ್ಞಾತವ್ಯ ಭಗವನ್ಮಹಿಮೆಯನ್ನು 'ಭೂಮಿರಾಪಃ' ಇತ್ಯಾದಿ ನಾಲ್ಕು ಶ್ಲೋಕಗಳಿಂದ ಹೇಳಿದ್ದಾಯಿತು. ಈಗ ವಿಜ್ಞಾನ ಪದದಿಂದ ಪ್ರತಿಜ್ಞಾತವಾದ ವಿಶೇಷವಾಗಿ ತಿಳಿಯಬೇಕಾದ ಅಲೌಕಿಕ ಭಗವನ್ಮಹಿಮೆಯನ್ನು ಹೇಳುತ್ತಾನೆ: ಕುಂತೀಕುಮಾರ! ಜಲದಲ್ಲಿ ಸಾರಭೂತವಾದ ರಸಕ್ಕೆ ನಿಯಾಮಕನಾಗಿ ಅಲ್ಲಿಯೇ ನಾನು [1]ರಸನಾಯಕನಾಗಿರುವೆನು. ಚಂದ್ರಸೂರ್ಯರ ಪ್ರಕಾಶಕ್ಕೆ ನಿಯಾಮಕನಾಗಿ ಅಲ್ಲಿಯೇ ಇದ್ದು ನಾನು ಪ್ರಭೆಯೆನಿಸಿರುವನು. ಸಕಲ ವೇದಗಳಲ್ಲಿಯೂ ಮುಖ್ಯವಾದ ಪ್ರಣವ=ಓಂಕಾರದಲ್ಲಿ ನಿಂತು ಅದಕ್ಕೆ ನಿಯಮಕನಾಗಿ ನಾನೇ ಪ್ರಣವ

ಶಬ್ದವಾಚ್ಯನಾಗಿರುವೆನು. ಆಕಾಶದಲ್ಲಿ ಧ್ವನ್ಯಾತ್ಮಕ ಶಬ್ದವು ಸ್ವಾಭಾವಿಕವಾಗಿರುವುದಕ್ಕೆ ನಿಯಾಮಕನಾಗಿ ಆ ಶಬ್ದದಲ್ಲಿಯೇ ನೆಲೆಸಿ ನಾನು ಶಬ್ದ ಎಂದು ಕರೆಯಲ್ಪಡುವನು. ಸ್ತ್ರೀಯರಲ್ಲಿಲ್ಲದ ಪುರುಷಮಾತ್ರದಲ್ಲಿರುವ ಪೌರುಷವೆಂಬ ಧರ್ಮವು ಸ್ವಾಭಾವಿಕವಾಗಿರುವುದಕ್ಕೆ ನಿಯಾಮಕನಾಗಿ ನಾನು ಪುರುಷನಾಮಕನಾಗಿರುವೆನು. ಪೃಥಿವಿಯಲ್ಲಿರುವ ಸುಗಂಧಕ್ಕೆ ನಿಯಾಮಕನಾಗಿ ಅದರಲ್ಲಿರುವವನಾಗಿ ನಾನು ಗಂಧವೆನಿಸಿರುವೆನು. ಅಗ್ನಿಯಲ್ಲಿರುವ ದಾಹಕಶಕ್ತಿಗೆ ನಿಯಾಮಕನಾಗಿ ತೇಜಸ್ಸೆನಿಸಿರುವೆನು. ಸಕಲ ಪ್ರಾಣಿಗಳಲ್ಲಿರುವ ಪ್ರಾಣಧಾರಣ ಸಾಮರ್ಥ್ಯಕ್ಕೆ ನಿಯಾಮಕನಾಗಿ ನಾನು ಜೀವನನಾಮಕನು, ತಪಸ್ವಿಗಳಲ್ಲಿರುವ ಕೃಚ್ಛಚಾಂದ್ರಾಯಣಾದಿ ತಪಸ್ಸಿಗೆ ನಿಯಾಮಕನಾಗಿರುವುದರಿಂದ ನಾನು ತಪೋನಾಮಕನಾಗಿರುವೆನು. ಉತ್ಪತ್ತಿನಾಶಗಳಿಲ್ಲದ ನಾನು ಸಕಲ ಪ್ರಾಣಿಗಳಿಗೂ ಉತ್ಪಾದಕ(ವ್ಯಂಜಕ)ನೆಂದು ತಿಳಿ! ಜ್ಞಾನಿಗಳಲ್ಲಿರುವ ಜ್ಞಾನಕ್ಕೆ ನಾನು ನಿಯಾಮಕನಾಗಿರುವುದರಿಂದ ನನಗೆ ಬುದ್ಧಿಯೆಂದು ಹೆಸರು. ತೇಜೋವಂತರಲ್ಲಿರುವ ತೇಜಸ್ಸಿಗೆ ನಿಯಾಮಕನಾಗಿರುವುದರಿಂದ ನಾನು ತೇಜಶ್ಶಬ್ದ ವಾಚ್ಯನು. ಬಲವಂತರಾದ ಜನರಲ್ಲಿರುವ, ಫಲಾಪೇಕ್ಷೆಯಿಲ್ಲದೆ ಯೋಗ್ಯಸ್ಥಾನದಲ್ಲಿಯೇ ಉಪಯೋಗಿಸಲ್ಪಡುವ ಬಲಕ್ಕೆ ಪ್ರವರ್ತಕನಾದುದರಿಂದ ನಾನು ಬಲವೆನಿಸಿರುವೆನು. ಸಕಲ ಪ್ರಾಣಿಗಳಲ್ಲಿರುವ ಧಾರ್ಮಿಕ ಕಾಮಗಳಿಗೆ ಪ್ರವರ್ತಕನಾಗಿ ನಾನು ಕಾಮನಾಮಕನಾಗಿರುವೆನು.

1.'ರಸೋಹಂ' ಎಂಬ ಶ್ಲೋಕದಿಂದ 'ಕಾಮೋಸ್ಮಿ' ಎಂಬ ಶ್ಲೋಕಪೂರ್ತಿ ನಾಲ್ಕು ಶ್ಲೋಕಗಳೂ ರಸ, ಪ್ರಭೆ, ಪ್ರಣವ, ಶಬ್ದ, ತೇಜಸ್ಸು, ಬಲ, ಕಾಮ ಇವುಗಳೇ ಪರಮಾತ್ಮನೆಂದು ಪರಮಾತ್ಮ ಮತ್ತು ರಸಾದಿಗಳಿಗೆ ಅಭೇದವನ್ನು ಹೇಳುವಂತೆ ಮೇಲೆ ತೋರುತ್ತದೆ. ವಿಚಾರ ಮಾಡಿದರೆ ಇಲ್ಲಿ ಅಭೇದವು ವಿವಕ್ಷಿತವಲ್ಲವೆಂದು ಸ್ಪಷ್ಟವಾಗುತ್ತದೆ. ಈ ಶ್ಲೋಕಗಳ ಪೂರ್ವೋತ್ತರ ವಾಕ್ಯಗಳು ಮತ್ತು ಬೇರೆ ಪ್ರಮಾಣಗಳೂ ಸಹ ರಸಾದಿ ಪರಮಾತ್ಮನಿಗೆ ಭೇದವನ್ನೇ ಹೇಳುತ್ತವೆ. 'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಳಯಸ್ತಥಾ' 7-9 ಎಂಬ ಪೂರ್ವಶ್ಲೋಕದಲ್ಲಿ ಸಕಲ ಜಗತ್ತಿಗೂ ಪರಮಾತ್ಮನೇ ಜನಕನೂ ನಾಶಕನೂ ಎಂದು ಜನ್ಯ ಜನಕ ಭಾವ – ನಾಶ್ಯ ನಾಶಕ ಭಾವಗಳು ಉಕ್ತವಾಗಿವೆ, 'ಯೇ ಚೈವ ಸಾತ್ವಿಕಾ ಭಾವಃ...ಮತ್ತ ಏವೇತಿ ತಾನ್ವಿದ್ಧಿ...' 7-12. ಎಂಬ ಉತ್ತರ ಶ್ಲೋಕದಲ್ಲಿ ಸಾತ್ವಿಕಾದಿ ವಿವಿಧ ಪದಾರ್ಥಗಳು ನನ್ನಿಂದಲೇ ಹುಟ್ಟುವುವು, ನನ್ನಲ್ಲಿಯೇ ಆಶ್ರಯಸಿಕೊಂಡಿವೆ – ಎಂದು ಜನ್ಯ ಜನಕ ಭಾವ, ಆಧಾರಾಧೇಯ ಭಾವ, ಅತ್ಯಧೀನ ಭಾವಗಳು ಉಕ್ತವಾಗಿವೆ. ಇವೆಲ್ಲವೂ ರಸಾದಿ ಪರಮಾತ್ಮನಿಗೆ ಭೇದವಿದ್ದರೇ ಯುಕ್ತವಾಗುವುದು. ಎರಡೂ ಒಂದೇ ಆಗಿದ್ದರೆ ಜನ್ಯ ಜನಕ ಭಾವಾದಿಗಳು ಕೂಡುವುದಿಲ್ಲ. ಆದಕಾರಣ ಈ ಪೂರ್ವೋತ್ತರ ಸಂದರ್ಭಗಳು ರಸಾದಿ ಪರಮಾತ್ಮನಿಗೆ ಭೇದವನ್ನೇ ನಿರೂಪಿಸುತ್ತವೆ. ಮತ್ತು 'ವಕ್ತುಮರ್ಹಸ್ಯ ಶೇಷೇಣ ದಿವ್ಯಾಹ್ಯಾತ್ಮ ವಿಭೂತಯಃ। ಯಾಭಿರ್ಭಿಭೂತಿನಿರ್ಲೋಕಾಮಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ' 10-16. ಎಂಬ ಶ್ಲೋಕದಲ್ಲಿ ಈ ಸಮಸ್ತ ಲೋಕಗಳಲ್ಲಿಯೂ ವ್ಯಾಪಿಸಿಕೊಂಡಿರುವ ಪರಮಾತ್ಮನ ವಿಭೂತಿರೂಪಗಳನ್ನು ಹೇಳಬೇಕೆಂದು ಪ್ರಶ್ನೆ ಮಾಡಿದೆ. 'ತೇಷು ತೇಷು ಚ ಭಾವೇಷು ಚಿಂತ್ಯೋಸಿ ಭಗವನ್ಮಯಾ' 10-17. ಎಂಬಲ್ಲಿ ಯಾವಯಾವ ಪದಾರ್ಥಗಳಲ್ಲಿ ನಿನ್ನನ್ನು ಧ್ಯಾನಿಸಬೇಕು? ಪರಮಾತ್ಮನು ಇಲ್ಲಿ ವಿಶೇಷವಾಗಿ ವ್ಯಕ್ತನಾಗುತ್ತಾನೆ ಎಂದು ಪ್ರಶ್ನೆ ಮಾಡಿದೆ. 'ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ। ಅಹಮಾದಿಶ್ಚ ಮಧ್ಯಂ ಚ ಭೂತನಾಮಂತ ಏವ ಚ' 10-20 ಎಂಬ ಶ್ಲೋಕದಿಂದ ಪರಮಾತ್ಮನು ಸಕಲ ಪ್ರಾಣಿಗಳ ಹೃದಯದಲ್ಲಿ ನಿಯಾಮಕನಾಗಿರುವನು. ಅವನೇ ಸರ್ವಕ್ಕೂ ಉತ್ಪಾದಕನೂ, ರಕ್ಷಕನೂ, ನಾಶಕನೂ ಎಂದು ಉಕ್ತವಾಗಿದೆ. 'ನತದಸ್ತಿ ವಿನಾ ಯಸ್ಯಾಂ ಮಯಾ ಭೂತಂ ಚರಾಚರಂ' 10-39 'ಇಷ್ಟಾಭ್ಯಾಹಮಿಂದ ಕೃತ್ಸ್ನಮೇ ಏಕಾಂಶೇನ ಸ್ಥಿತೋ ಜಗತ್ ' 10-42 ಈ ಶ್ಲೋಕಗಳಲ್ಲಿಯೂ 'ಸಕಲ ಪದಾರ್ಥಗಳಲ್ಲಿಯೂ ಪರಮಾತ್ಮನು ವ್ಯಾಪ್ತನಾಗಿರುವನು; ಅವನಿಲ್ಲದ ಪದಾರ್ಥವೇ ಇಲ್ಲ' ಎಂದು ಹೇಳಿದೆ. ಹೀಗೆ ಇದೇ ಗೀತೆಯ ನಾನಾ ಭಾಗಗಳಲ್ಲಿ ಜಗತ್ತೂ-ಪರಮಾತ್ಮನಿಗೆ ವ್ಯಾಪ್ಯ-ವ್ಯಾಪಕ ಭಾವ, ನಿಯಮ್ಯ- ನಿಯಾಮಕ ಭಾವ, ಜನ್ಯ-ಜನಕ ಭಾವ, ಆಶ್ರಯ-ಆಶ್ರಯೀ ಭಾವ ಮುಂತಾದ ಭಿನ್ನ ಪದಾರ್ಥಗಳಿಗೆ ಸಲ್ಲತಕ್ಕ ಧರ್ಮಗಳು ಉಕ್ತವಾಗಿರುವುದರಿಂದಲೂ, ರಸಾದಿ-ಪರಮಾತ್ಮನಿಗೆ ಭೇದವಿದೆಯೆಂದು ಸಿದ್ಧವಾಗುತ್ತದೆ. ಆದಕಾರಣ 'ಅಹಂ ರಸಃ' ಇತ್ಯಾದಿ ವಾಕ್ಯಗಳಿಗೆ 'ರಸಾದಿಗಳಲ್ಲಿ ನಾನು ನಿಯಾಮಕನಾಗಿದ್ದು ಆಯಾ ಪದಾರ್ಥಗಳಿಗೆ ಸಜಾತೀಯ ಇತರ ಪದಾರ್ಥಗಳಿಗಿಂತಲೂ ಶ್ರೇಷ್ಠತ್ವವನ್ನುಂಟು ಮಾಡಿ ಆಯಾಯಾ ವಸ್ತುಗಳ ಸಾರಭೋಕ್ತನಾಗಿರುವನಾದುದರಿಂದ ರಸನೆನಿಸಿರುವೆನು; ರಸವೇ ನಾನಲ್ಲ – ಎಂಬ ಅರ್ಥವೇ ಸರಿ.

ಹತ್ತನೇಯೆ ಅಧ್ಯಾಯದಲ್ಲಿಯೂ 'ವೇದಾನಾಂ ಸಾಮವೇದೋಸ್ಮಿ' - 'ಇಂದ್ರಿಯಾಣಾಂ ಮನಶ್ಚಾಸ್ಮಿ' ಮುಂತಾದ ಆಪಾತತಃ ಸಾಮವೇದಾದಿ ಪರಮಾತ್ಮನಿಗೆ ಐಕ್ಯತೋರುವ ವಾಕ್ಯಗಳಿವೆ. ಆ ವಾಕ್ಯಗಳಿಗೂ ಸಹ ಮೇಲ್ಕಂಡ ಪೂರ್ವೋತ್ತರ ವಾಕ್ಯಗಳ ಪರಿಶೀಲನೆ, ಪ್ರಮಾಣಾಂತರಗಳು ಇವುಗಳ ಬಲದಿಂದ ಪರಮಾತ್ಮನೂ ಸಾಮವೇದಾದಿಗಳಿಗೆ ನಿಯಾಮಕನಾಗಿ ಅವುಗಳಿಗೆ ಸಜಾತೀಯ ವ್ಯೂಹದಲ್ಲಿ ಶ್ರೇಷ್ಠತ್ವವನ್ನೂ ಕೊಟ್ಟು ಅಲ್ಲಲ್ಲಿ ಇರುವನು ಎಂಬುದಾಗಿಯೆ ಅರ್ಥಮಾಡಬೇಕು. ಸಾಮವೇದಾದಿಗಳೇ ಪರಮಾತ್ಮನೂ ಎಂದು ಅಭೇದಪರವಾದ ಅರ್ಥವನ್ನು ಹೇಳುವುದು ಪ್ರಾಮಾಣಿಕವಲ್ಲ. ಪರಮಾತ್ಮನೂ ರಸಾದಿಗಳಿಗೆ ನಿಯಾಮಕನಾಗಿ ಅಲ್ಲಲ್ಲಿರುವನು ಎಂಬ ಅರ್ಥಕ್ಕೆ' ಯಃ ಪೃಥಿವ್ಯಾಂ ತಿಷ್ಠನ್ ಯೋಪ್ಸು ತಿಷ್ಠನ್' ಇತ್ಯಾದಿ ಶ್ರುತಿವಾಕ್ಯಗಳೂ ಸಾಧಕಗಳಾಗಿವೆ.

ಐಕ್ಯವಾದಿಗಳಾದ ಶಂಕರಾಚಾರ್ಯರೂ ಸಹ 'ಕಾಮೋಸ್ಮಿ' ಎಂಬ ಈ ವಾಕ್ಯಕ್ಕೆ 'ಈಶ್ವರನು ಕಾಮಸ್ವಾಮಿಯೂ-ಕಾಮವೂ ಈಶ್ವರಾಧೀನವು' ಎಂಬ ಅರ್ಥವನ್ನೇ ಹೇಳಬೇಕೆಂದು, 'ಸರ್ವಕಾಮಃ ಸರ್ವಗಂಧಃ' 3-14-2 ಎಂಬ ಛಾಂದೋಗ್ಯೋಪನಿಶತ್ತಿನ ವಾಕ್ಯಕ್ಕೆ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಆ ಭಾಷ್ಯದಲ್ಲಿ ಸಯುಕ್ತಿಕವಾಗಿ ನಿರ್ಣೈಸಿರುತ್ತಾರೆ. ಆದುದರಿಂದ ' ರಸೋಹಮಪ್ಸು' ಇತ್ಯಾದಿ ಶ್ಲೋಕಗಳಿಗೆ ಹೇಳಿರುವ ಅರ್ಥವು ಪ್ರಾಮಾಣಿಕವೂ ಮತ್ತು ಸರ್ವಸಮ್ಮತವೂ ಆಗಿದೆಯೆಂದು ತಿಳಿಯಬೇಕು.

**ಯೇ ಚೈವ ಸಾತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ**

**ಮತ್ತ ಏವೇತಿ ತಾನ್ವಿದ್ಧಿ ನ ತ್ವಹಂ ತೇಷು ತೇ ಮಯಿ॥7-12॥**

**12.**ರಸಾದಿ ಅಸಾಧಾರಣಧರ್ಮಗಳಿಗೆ ಮಾತ್ರವೇ ನಾನು ನಿಯಾಮಕನೆಂದಲ್ಲ; ಜಲಾದಿ ಸಕಲವಸ್ತುಗಳಿಗೂ ನಾನೇ ನಿಯಾಮಕನೆಂದು ಹೇಳುತ್ತಾನೆ:- ಅರ್ಜುನ! ಸತ್ವಗುಣಜನ್ಯವಾದ ಸಾತ್ವಿಕ ಪದಾರ್ಥಗಳಾವುವೋ, ರಜೋಗುಣೋತ್ಪನ್ನವಾದ ರಾಜಸವಸ್ತುಗಳಾವುವೋ ಮತ್ತು ತಮೋಗುಣವಿಕಾರವಾದ ತಾಮಸ ಪದಾರ್ಥಗಳು ಯಾವುವೋ ಅವೆಲ್ಲವೂ ನನ್ನಿಂದಲೇ ಉತ್ಪನ್ನವಾದವುಗಳೆಂದು ತಿಳಿ! ಮತ್ತು ನನ್ನಿಂದ ಉತ್ಪನ್ನವಾದ ಆ ಪದಾರ್ಥಗಳೆಲ್ಲವೂ ನನ್ನನ್ನೇ ಉಪಜೀವಿಸಿ ಕೊಂಡು ನನ್ನಲ್ಲಿಯೇ ಆಶ್ರಯಿಸಿರುತ್ತವೆ. ನಾನಾದರೋ ಈ ಯಾವ ಪದಾರ್ಥಗಳನ್ನೂ ಉಪಜೀವಿಸಿಕೊಂಡಿಲ್ಲ; ಸ್ವತಂತ್ರನಾಗಿರುವೆನೆಂದು ತಿಳಿ! (ಲೋಕದಲ್ಲಿ ಬಟ್ಟೆಗಳನ್ನು ನೇಯುವ ನೆಯ್ಗೆಯವರು ಬಟ್ಟೆಯೆಂಬ ವಸ್ತುವನ್ನು ನಿರ್ಮಿಸುವರೇ ಹೊರತು ತಾವು

ಮಾಡಿದ ಬಟ್ಟೆಗಳಿಗೆ ಹಿಮನಿವಾರಣೆ ಮಾಡುವ ಸಾಮರ್ಥ್ಯವನ್ನು, ಭೂಷಣತ್ವ ಮುಂತಾದ ವಿಶಿಷ್ಟ ಧರ್ಮಗಳನ್ನೂ ಉಂಟುಮಾಡಲಾರರು. ಪರಮಾತ್ಮನಾದರೋ ಹೀಗೆ ಪರಿಮಿತಶಕ್ತಿವಂತನಲ್ಲ; ಜಲಾದಿದ್ರವ್ಯಗಳನ್ನು ಹುಟ್ಟಿಸಿ, ಅವುಗಳಲ್ಲಿ ರಸಾದಿಗುಣಗಳನ್ನೂ, ಅವಕ್ಕೆ ಶ್ರೇಷ್ಠತ್ವಾದಿಗಳನ್ನೂ ಹೆಚ್ಚೇನು! ಅವುಗಳ ಸ್ಥಿತ್ಯಾದಿಗಳನ್ನೂ ಸಹ ಉಂಟುಮಾಡುವನು. ಹರಿಯ ಈ ಲೋಕವಿಲಕ್ಷಣ ಮಹಿಮೆಯೇ ವಿಜ್ಞಾನ ಪದದಿಂದ ಪ್ರತಿಜ್ಞಾತವಾಗಿರುವುದೆಂದು ಭಾವ.)

**ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್**
**ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಂ॥7-13॥**

**13.** ಸತ್ವಾದಿಗುಣಗಳಿಂದ ನಿಷ್ಪನ್ನವಾಗುವ ಸಕಲ ಪದಾರ್ಥಗಳಿಗೂ ಪರಮಾತ್ಮನೇ ಕಾರಣನು, ಆಶ್ರಯನು ಮುಂತಾಗಿ ಹೇಳಿರುವುದರಿಂದಲೇ ಅವನು ತ್ರಿಗುಣಾತೀತನು ಎಂದು ಹೇಳಿದಂತಾಯಿತು. ಅದು ಸರಿಯಲ್ಲ. ಪರಮಾತ್ಮನು ತ್ರಿಗುಣಾತೀತನೆಂಬುದು ನಿಜವಾದರೆ ಕೃಷ್ಣ! ನೀನು ತ್ರಿಗುಣಾತೀತನಾಗಿ ಏಕೆ ಗೋಚರಿಸುತ್ತಿಲ್ಲ? ಗುಣವಂತನಾಗಿಯೇ ಜ್ಞಾತನಾಗಲು ಕಾರಣವೇನು? ಎಂದರೆ ಹೇಳುತ್ತಾನೆ:- ಈ ಲೋಕದಲ್ಲಿರುವ ಅಜ್ಞ ಜನರೆಲ್ಲರೂ ಗುಣತ್ರಯಕಾರ್ಯಗಳಾದ ಈ ಪದಾರ್ಥಗಳಿಂದ ಮೋಹಿತರಾಗಿ (ಪಾಂಚಭೌತಿಕಶರೀರವನ್ನು ಧರಿಸಿರುವ ಜನರನ್ನು ನೋಡುವುದರಿಂದ ಅವರಂತೆಯೇ ಪರಮಾತ್ಮನೂ ತ್ರಿಗುಣಮಯಶರೀರವುಳ್ಳವನೆಂದು ಭ್ರಾಂತಿಗೊಂಡು) ತ್ರಿಗುಣ ಮತ್ತು ಅದರ ಕಾರ್ಯಗಳಿಗಿಂತ ಭಿನ್ನನು, ಗುಣತ್ರಯಬಂಧಶೂನ್ಯನು, ತ್ರಿಗುಣಮಯವಲ್ಲದ ದೇಹವುಳ್ಳ ಕಾರಣ ನಾಶರಹಿತ ದೇಹವುಳ್ಳವನು, ಅವಿನಾಶಿಸ್ವರೂಪಿಯೂ ಆಗಿರುವ ನನ್ನನ್ನು ಯಥಾವತ್ತಾಗಿ ತಿಳಿಯುವುದಿಲ್ಲ. ಲೌಕಿಕಜನರಂತೆ ಶ್ರೀಕೃಷ್ಣನೂ ಕೂಡ ಗುಣಮಯ-ಪ್ರಾಕೃತದೇಹವುಳ್ಳವನು, ಬ್ರಹ್ಮಾದಿಜೀವರಂತೆ ಶ್ರೀಕೃಷ್ಣನೂ ಒಬ್ಬ ಪ್ರಾಕೃತಶರೀರವುಳ್ಳ ಜೀವನು ಎಂದು ಅಜ್ಞಜನರು ಭ್ರಾಂತರಾಗುವರು. ಇದಕ್ಕೆ ಅವರ ಅಜ್ಞಾನವೇ ಕಾರಣವು.(ವಾಸ್ತವಿಕವಾಗಿ ಶ್ರೀಕೃಷ್ಣನು ಗುಣತ್ರಯ ನಿರ್ಮಿತವಲ್ಲದ, ನಾಶರಹಿತವಾದ, ದಿವ್ಯ ದೇಹವುಳ್ಳ ಪರಮಚೇತನನೆಂದು ಭಾವ.)

**ದೈವೀ ಹ್ಯೆಷಾ ಗುಣಮಯೀ ಮಮ ಮಾಯಾ ದುರತ್ಯಯಾ**
**ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ॥7-14॥**

**14.** ಬ್ರಹ್ಮಾದಿ ಜೀವರ ದೇಹದಂತೆ ಭಗವಂತನ ದೇಹವೂ ಗುಣಮಯವೆಂದು ತಿಳಿಯುವುದು (ಬುದ್ಧಿಯು) ಭ್ರಾಂತಿಯೆನ್ನಲು ಕಾರಣವೇನು? ಭಗವದ್ದೇಹವು ಗುಣಮಯವಲ್ಲವೆಂಬ

ಬಾಧಕನಿರ್ಣಯವುಂಟಾಗುವುದೇ ಇಲ್ಲವಾದ ಕಾರಣ ಗುಣಮಯವೆಂಬ ಬುದ್ಧಿಯು ಯಥಾರ್ಥವೇ ಸರಿ ಎಂದರೆ, ತತ್ವಜ್ಞಾನಿಗಳಿಗೆ ಭಗವದ್ದೇಹವು ಗುಣಮಯವಲ್ಲವೆಂಬ ಬಾಧಕಜ್ಞಾನವು ಬಂದೇಬರುತ್ತದೆ. ಅನಾದಿಕಾಲದಿಂದ ಭ್ರಾಂತಿಯೇ ಅನುವೃತ್ತವಾಗಿ ಬಂದಿರುವ ಅಜ್ಞರಿಗೂ ಸಹ ಬಹುಕಾಲ ಸಾಧನಮಾಡಿದಮೇಲೆ ಭಗವದನುಗ್ರಹದಿಂದ ಬಾಧಕಜ್ಞಾನವು ಬರುತ್ತದೆ. ಯಥಾರ್ಥಜ್ಞಾನವು ಹುಟ್ಟದೇ ಇರುವುದಕ್ಕೂ ಭ್ರಾಂತಿಯುಂಟಾಗುವುದಕ್ಕೂ ವಿಷ್ಣುಮಾಯೆಯೆನಿಸಿದ, ಗುಣಾಭಿಮಾನಿನಿಯಾದ ದುರ್ಗಾದೇವಿಯೇ ಕಾರಣಳು; ಇತರ ಯುಕ್ತ್ಯಾದಿಗಳು ಬಾಹ್ಯ ನಿಮಿತ್ತ ಮಾತ್ರ. ಅಂತಹ ಮಾಯೆಗೂ ಭಗವಂತನೇ ನಿಯಾಮಕನು. ಆದಕಾರಣ ಅವನ ಅನುಗ್ರಹದಿಂದ ಮೋಹವನ್ನು ಕಳೆದುಕೊಂಡು ಯಥಾರ್ಥಜ್ಞಾನವನ್ನು ಸಂಪಾದಿಸಬಹುದು ಎಂಬ ಅಭಿಪ್ರಾಯದಿಂದ ಭಗವಂತನು ಹೇಳುತ್ತಾನೆ:- ಜಗತ್ಸೃಷ್ಟ್ಯಾದಿ ಲೀಲೆಗಳುಳ್ಳ ದೇವನಾದ ನನಗೆ ಅತಿಪ್ರಿಯಳು, ವೇದಾದಿ ಪ್ರಮಾಣ ಸಿದ್ಧಳು, ಪ್ರಾಕೃತಗುಣಾಭಿಮಾನಿನಿಯೂ ಆಗಿರುವ ದುರ್ಗಾ ದೇವಿಯೇ ತಮೋಗುಣದಿಂದ ಜೀವರಿಗೆ ಮೋಹವನ್ನುಂಟುಮಾಡತಕ್ಕವಳು. ಅಂತಹ ತಾಮಸವಾದ ಮೋಹಕ್ಕೆ ಸಿಕ್ಕದೆ ಅದನ್ನು ದೂರಮಾಡುವುದಕ್ಕೆ ಯಾರೂ ಸಮರ್ಥರಲ್ಲ. ಹಾಗಾದರೆ ಯಾರಿಗೂ ತತ್ವಜ್ಞಾನವುಂಟಾಗದೇ ಹೋಗಬೇಕಾಗುತ್ತದೆ ಎಂದರೆ, ಮೋಹವನ್ನತಿಕ್ರಮಿಸುವ ಉಪಾಯವನ್ನು ಹೇಳುತ್ತಾನೆ:- ನನ್ನ ಸರ್ವೋತ್ತಮತ್ವಾದಿ ಮಹಿಮೆಯನ್ನರಿತು ನನ್ನನ್ನೇ ಶರಣುಹೊಂದಿ ಭಜಿಸುವವರು ಈ ಮಾಯೆಯಿಂದುಂಟಾದ ಮೋಹವನ್ನು ಪರಿಹರಿಸಿಕೊಳ್ಳುವರು. (ಮೋಹಕಳಾದ ದುರ್ಗಾದೇವಿಗೂ ನಿಯಾಮಕನಾದ ಭಗವಂತನು ಪ್ರಸನ್ನನಾದರೆ ಮಾತ್ರವೇ ಈ ಮೋಹ ಪರಿಹಾರವಾಗುವುದೇ ಹೊರತು ಬೇರೆ ಯಾವ ಉಪಾಯದಿಂದಲೂ ಆಗುವುದಿಲ್ಲವೆಂದು ಭಾವ.)

**ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ**

**ಮಾಯಯಾಽಪಹೃತಜ್ಞಾನಾ ಆಸುರಂ ಭಾವಮಾಶ್ರಿತಾಃ॥7-15॥**

**15.** ಕೃಷ್ಣ! ನಿನ್ನ ಭಜನೆಯಿಂದ ಮೋಹಪರಿಹಾರವಾಗುವುದಾದರೆ ಎಲ್ಲರೂ ನಿನ್ನನ್ನೆ ಭಜಿಸಿ ಮೋಹವನ್ನೇಕೆ ಪರಿಹರಿಸಿಕೊಳ್ಳುವುದಿಲ್ಲ? ಎಂದರೆ, ಹೇಳುತ್ತಾನೆ:- ಭಗವದ್ಭಜನೆಯೆಂಬ ಉಪಾಯವೇನೋ ಸುಲಭವೆಂದು ತೋರುತ್ತದೆ. ಆದರೆ ಇದು ಪಾಪಿಗಳಿಗೆ ಲಭ್ಯವಾಗುವುದಿಲ್ಲ ವಿವೇಕಹೀನರು, ಮನುಷ್ಯಾಧಮರು, [1]ಪ್ರಕೃತಿಯಿಂದಲೂ ಈಶ್ವರೇಚ್ಛಾರೂಪಮಾಯಾಶಕ್ತಿಯಿಂದಲೂ ಆವರಿಸಲ್ಪಟ್ಟು, ತತ್ವಜ್ಞಾನವಾಗದೆ ಮಿಥ್ಯಾ

ಜ್ಞಾನವನ್ನು ಹೊಂದಿರುವವರು ಮತ್ತು ಸಹಜವಾಗಿ ಅಸುರಭಾವವನ್ನು ಹೊಂದಿ ಶಬ್ದಾದಿವಿಷಯಗಳಲ್ಲಿಯೇ ಆಸಕ್ತರಾದವರು ಎಂಬುದಾಗಿ ನಾಲ್ಕು ಬಗೆಯ ಪಾಪಿಷ್ಠರು ನನ್ನನ್ನು ಭಜಿಸುವುದಿಲ್ಲ. ಆದುದರಿಂದ ಅವರಿಗೆ ಮೋಹವು ಪರಿಹಾರವಾಗುವುದಿಲ್ಲ.

ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ
ಆರ್ತೋ ಜಿಜ್ಞಾಸುರರ್ಥಾರ್ಥಿ ಜ್ಞಾನೀ ಚ ಭರತರ್ಷಭ॥7-**16**॥

**16.**ಕೃಷ್ಣ! ನಿನ್ನನ್ನು ಸೇವಿಸುವವರು ಯಾರು? ಎಂದರೆ ಹೇಳುತ್ತಾನೆ:- ಭರತಕುಲಶೇಖರನೇ! ಪೂರ್ವಜನ್ಮಗಳಲ್ಲಿ ಪುಣ್ಯ ಮಾಡಿರುವ ಜನರು ನನ್ನನ್ನು ಸೇವಿಸುತ್ತಾರೆ. ರೋಗಾಧಿಪೀಡಿತನು, ಆತ್ಮಜ್ಞಾನಕ್ಕಾಗಿ ಶಾಸ್ತ್ರಾಧ್ಯಯನ ಮಾಡಬೇಕೆಂಬ ಅಭಿಲಾಷೆಯುಳ್ಳವನು, ಐಶ್ವರ್ಯಕಾಮನು ಮತ್ತು ಪರಮಾತ್ಮನ ಮಹಿಮೆಯನ್ನು ಯಥಾವತ್ತಾಗಿ ತಿಳಿದಿರುವವನು ಎಂಬುದಾಗಿ ಪುಣ್ಯವಂತರು ನಾಲ್ಕು ಬಗೆಯಾಗಿರುವರು.

ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ॥7-**17**॥

**17.**ಈ ನಾಲ್ಕು ಜನರಲ್ಲಿ ತಾರತಮ್ಯವನ್ನು ನಿರೂಪಿಸುತ್ತಾನೆ :- ರೋಗಪೀಡಿತ ಮುಂತಾದ ನಾಲ್ಕು ಬಗೆಯ ಪುಣ್ಯವಂತರಲ್ಲಿ ಸರ್ವದಾ ಭಗವಾನಲ್ಲಿಯೇ ಆಸಕ್ತನಾಗಿ ನನ್ನಲ್ಲಿಯೇ ಪ್ರಧಾನವಾದ ಭಕ್ತಿಯುಳ್ಳ ಭಗವತ್ತತ್ವ ಜ್ಞಾನಿಯು ಶ್ರೇಷ್ಠನು. ಏಕೆಂದರೆ:- ಜ್ಞಾನಿಗೆ ನಾನು ಅತ್ಯಂತ ಪ್ರಿಯನಾಗಿರುವೆನು; ನನಗೂ ಜ್ಞಾನಿಯು ಪ್ರೀತಿಪಾತ್ರನಾಗಿರುವನು. ಆದುದರಿಂದ ಅವನೇ ಪುಣ್ಯವಂತರಲ್ಲಿ ಉತ್ತಮನು.

ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಂ
ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಂ॥7-**18**॥

**18.** ಈ ರೀತಿ ನಾಲ್ಕು ಬಗೆಯ ಸೇವಕರಲ್ಲಿ ಜ್ಞಾನಿಯನ್ನು ಮಾತ್ರ ಹೊಗಳಿರುವುದರಿಂದ ಉಂಟಾಗುವ, ಇತರ ಮೂರು ಒಗೆಯ ಭಕ್ತರು ನಿಂದ್ಯರೆ? ಎಂಬ ಶಂಕೆಗೆ ಸಮಾಧಾನ ಹೇಳುತ್ತಾನೆ:- ಅರ್ಜುನ! ಈ ಚತುರ್ವಿಧ ಸೇವಕರೂ ಉತ್ತಮರೇ ಸರಿ. ಆದರೂ ಅವರಲ್ಲಿ ತಾರತಮ್ಯವಿದೆ. ಜ್ಞಾನಿಯು ನಾನೇ ಎಂದು ನನ್ನ ಸಿದ್ದಾಂತವು. ಏಕೆಂದರೆ:- ಜ್ಞಾನಿಯು ಅತ್ಯುತ್ತಮಗತಿ ಎಂದರೆ ಮೋಕ್ಷವನ್ನು ಅಪೇಕ್ಷಿಸುವವನಾಗಿ ನನ್ನಲ್ಲಿಯೇ ಮನಸ್ಸಿಟ್ಟು ಧ್ಯಾನಿಸಿ ನನ್ನನ್ನೇ ಹೊಂದುವನು. ಆದಕಾರಣ ಅವನು ನನಗೆ ಅತ್ಯಂತ ಪ್ರಿಯನೆಂದು ಭಾವ.

1. ಇದರಿಂದ ಜ್ಞಾನಿ-ಪರಮಾತ್ಮರಿಗೆ ಐಕ್ಯವೆಂದು ತಿಳಿಯಬಾರದು. ಜ್ಞಾನಿಯು ಪರಮಾತ್ಮನಿಗೆ ಅತ್ಯಂತ ಪ್ರೀತಿಪಾತ್ರನು. ಮತ್ತು ಅವನು ತನ್ನ ಸ್ಥಿತ್ಯಾದಿಗಳೆಲ್ಲವೂ ನನ್ನ ಅಧೀನವೆಂದು ತಿಳಿದಿರುವನು. ಆದಕಾರಣ 'ನಾನೇ ಅವನು' ಎಂದು ಐಕ್ಯವು ಉಕ್ತವಾಗಿದೆ. ಲೋಕದಲ್ಲಿಯೂ ಸಹ ರಾಜನು ತನಗೆ ಅತ್ಯಂತ ಪ್ರಿಯನಾದ ಸೇವಕನನ್ನು ಕುರಿತು ('ನೀನೇ ನಾನು' ಎಂಬುದಾಗಿ ವ್ಯವಹರಿಸುವ ವಾಡಿಕೆಯಿದೆ. ಅಥವಾ 'ಆಪ್ನೋತೀತ್ಯಾತ್ಮಾ' ಎಂಬ ವ್ಯುತ್ಪತ್ತಿಯಿಂದ ನನ್ನನ್ನು ಹೊಂದತಕ್ಕವನು ಜ್ಞಾನಿಯು ಎಂದು ಆತ್ಮೈವ ಎಂಬುದರ ಅರ್ಥವೆಂದು ತಿಳಿಯಬೇಕು. ಹೀಗೆ ಇದು ಔಪಚಾರಿಕವ್ಯವಹಾರವೇ ಹೊರತು ಇದರಿಂದ ಐಕ್ಯವು ಸಿದ್ಧಿಸುವುದಿಲ್ಲ. ಐಕ್ಯವೇ ಗೀತಾರ್ಥವೆಂದೇ ಹೇಳಬಾರದೆಂದರೆ ಈ ಶ್ಲೋಕದ ಉತ್ತರಾರ್ಧದಲ್ಲಿ ಅನುತ್ತಮಾಂ ಗತಿಂ ಮಾಂ=ಪರಮ ಪ್ರಾಪ್ಯನಾದ ನನ್ನನ್ನೇ ಉದ್ದೇಶಿಸಿ ಎಂಬುದಾಗಿ ಬೇಧವನ್ನು ಹೇಳಿರುವುದರಿಂದ ಅದಕ್ಕೆ ವಿರುದ್ಧವಾಗಿ ಪೂರ್ವಾರ್ಧಕ್ಕೆ ಐಕ್ಯತಾತ್ಪರ್ಯವನ್ನು ಹೇಳಕೂಡದು. ಆದುದರಿಂದ ಜ್ಞಾನಿಯು ಅತಿಪ್ರಿಯನೆಂದು ತಿಳಿಸುವುದಕ್ಕಾಗಿ ಈ ವ್ಯವಹಾರವು ಪ್ರವೃತ್ತವಾಗಿದೆಯೆಂದು ತಿಳಿಯಬೇಕು.

**ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ**

**ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ॥7-19॥**

**19.**ಇಂತಹ ಜ್ಞಾನಿಯು ದುರ್ಲಭನೆಂದು ಹೇಳುತ್ತಾನೆ:- ಜ್ಞಾನವು ಸುಲಭವಾಗಿ ಬರತಕ್ಕುದಲ್ಲ, ಬಹು ಜನ್ಮಗಳಲ್ಲಿ ಮಾಡಿದ ಪುಣ್ಯರಾಶಿಯ ಪರಿಪಾಕದಿಂದ ಲಭ್ಯವಾಗತಕ್ಕುದು. ಆದಕಾರಣ ಪರಮಾತ್ಮನ ಜ್ಞಾನಕ್ಕಾಗಿ ಸಾಧನ ಮಾಡಲು ಅರ್ಹವಾದ ಅನೇಕ ಮನುಷ್ಯ ಶರೀರಗಳನ್ನು ಹೊಂದಿ ಜೀವನು ಸಾಧನಮಾಡಿದಮೇಲೆ ಈ ಸಕಲ ಪ್ರಪಂಚವೂ ಪರಮಾತ್ಮನ ಅಧೀನವೆಂಬ ದೃಢನಿರ್ಣಯವುಳ್ಳವನಾಗಿ ನನ್ನನ್ನು ಹೊಂದುತ್ತಾನೆ. ಅಂತಹ ಮಹಾನುಭಾವನು ಬಹು ದುರ್ಲಭನು. ಅಂತಹವನು ಲಕ್ಷಸಹಸ್ರಕೋಟಿಗಳಲ್ಲೊಬ್ಬನು ದೊರೆತಾನು!!

**ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ**

**ತಂ ತಂ ನಿಯಮಮಾಸ್ಥಾಯ ಪ್ರಕೃತ್ಯಾ ನಿಯತಾಃ ಸ್ವಯಾ॥7-20॥**

**20.** ಲೋಕದಲ್ಲಿ ನೂರಕ್ಕೆ ತೊಂಭತ್ತು ಜನರು ಜ್ಞಾನಸಾಧನ ಕರ್ಮಾನುಷ್ಠಾನಪರರಾದ ಆಸ್ತಿಕರು ಕಾಣಬರುತ್ತಿರುವುದರಿಂದ ಮೇಲ್ಕಂಡಂತಹ ಜ್ಞಾನಿಗಳು ಬಹು ಜನರಿರಬಹುದು. ಆದಕಾರಣ ಜ್ಞಾನಿಯು ಅತ್ಯಂತ ದುರ್ಲಭನೆಂಬುದು ಸರಿಯಲ್ಲವೆಂದರೆ, ಹೇಳುತ್ತಾನೆ:- ಕರ್ಮಾನುಷ್ಠಾನಪರರಾಗಿ ಆಸ್ತಿಕಜನರಂತೆ ಕಾಣಿಸುತ್ತಿರುವ ಜನರು ತಮ್ಮ ಸ್ವಭಾವಾಧೀನರಾಗಿ ಅದಕ್ಕನುಸಾರವಾದ ಇಷ್ಟ ವಿಷಯ ಲೋಲುಪತೆಯಿಂದ ಭಗವಂತನೇ ಸರ್ವೋತ್ತಮನು ಮುಂತಾದ ತತ್ವಜ್ಞಾನವನ್ನು, ಕಳೆದುಕೊಂಡು, ಇಷ್ಟ ವಿಷಯಪ್ರದದೇವತಾನುಗ್ರಹಕ್ಕಾಗಿ ಆಯಾಯಾ ಕರ್ಮಗಳನ್ನು ಮಾಡುತ್ತ ಅದರ ಅಂಗವಾದ ಕಷ್ಟಸಾಧ್ಯ ನಿಯಮಗಳನ್ನೂ ಆಚರಿಸಿ ಇತರ ದೇವತೆಗಳನ್ನ ಭಜಿಸುತ್ತಿರುವರು. (ಇವರೆಲ್ಲರೂ ಕಾಮ್ಯಕರ್ಮಿಗಳು, ಇಂತಹವರು ಅನೇಕರಿರಬಹುದು, ಆದರೆ ಯಾವ ಫಲವನ್ನೂ ಅಪೇಕ್ಷಿಸದೆ ಕೇವಲ ಭಗವತ್ಪ್ರೀತ್ಯರ್ಥವಾಗಿ ಕರ್ಮವನ್ನಾಚರಿಸಿ ಜ್ಞಾನವನ್ನು ಪಡೆದು ನನ್ನನ್ನು ಹೊಂದಲು ಅರ್ಹನಾದ ಶುದ್ಧಭಾಗವತನು ದುರ್ಲಭನೇ ಸರಿ-ಎಂದು ಭಾವ.)

| |
|---|
| ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ<br>ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ॥7-21॥ |
| ಸ ತಯಾ ಶ್ರದ್ಧಯಾ ಯುಕ್ತಸ್ಯ ಸ್ಯಾರಾಧನಮೀಹತೇ<br>ಲಭತೇ ಚ ತತಃ ಕಾಮಾನ್ ಮಯ್ಯೈವ ವಿಹಿತಾನ್ಹಿತಾನ್॥7-22॥ |
| **21-22** ಸ್ವರ್ಗಾದಿ ಫಲಾಕಾಂಕ್ಷೆಯಿಂದ ಯಾಗಾದಿ ಕರ್ಮವನ್ನು ಮಾಡುವವನು ಕ್ರಮವಾಗಿ ಕೆಲವು ಕಾಲಾನಂತರ ಶುದ್ಧ ಭಾಗವತನಾಗುತ್ತಾನೆಯೇ? ಎಂದರೆ, ಅವನ ಸ್ವಭಾವಾನುಸಾರವಾಗಿ ನಿರ್ಣಯಿಸಬೇಕು. ಅವನು ಮಿಶ್ರಸ್ವಭಾವದವನೇ? (ನಿತ್ಯಸಂಸಾರಿ) ಅಥವಾ ಸ್ವಭಾವಾಭಿವ್ಯಂಜಕವಾದ ಸದುಪದೇಶಾದಿ ಸಾಮಗ್ರಿಗಳೊದಗಲಿಲ್ಲವಾಗಿ ಅನ್ಯ ದೇವತಾಯಾಜಕನಾಗಿರುವನೇ? ಎಂಬುದಾಗಿ ವಿಕಲ್ಪಿಸಿ, 'ಅವನು ಮಿಶ್ರಸ್ವಭಾವದವನು' ಎಂಬ ಮೊದಲನೆಯ ಪಕ್ಷಕ್ಕೆ ಉತ್ತರ ಹೇಳುತ್ತಾನೆ:- ಶುದ್ಧ ಭಾಗವತ (ಸಾತ್ವಿಕ) ಮತ್ತು ತಾಮಸ ಜೀವರಿಂದ ಭಿನ್ನನು, ವಿಷ್ಣು ತತ್ವಜ್ಞಾನ-ವಿಪರೀತಜ್ಞಾನರಹಿತನೂ ಆದ ಯಾವ ಯಾವ ಮಿಶ್ರ ಜೀವನು ನಿಮಿತ್ತ ವಿಶೇಷದಿಂದ ಅನ್ಯದೇವತೆಗಳಲ್ಲಿ ಭಕ್ತಿಯುಳ್ಳವನಾಗಿ ಶ್ರದ್ಧೆಯಿಂದ ಬ್ರಹ್ಮ ರುದ್ರಾದಿ ದೇವತೆಗಳನ್ನು ಪೂಜಿಸಬೇಕೆಂದು ಅಪೇಕ್ಷಿಸುವನೋ ಆಯಾಯಾ ಜನರಿಗೆ ಆಯಾ ದೇವತೆಗಳಲ್ಲಿರುವ ಶ್ರದ್ಧೆಯನ್ನೆ ಸ್ಥಿರಮಾಡುತ್ತೇನೆ. ಆಯಾ ಅನ್ಯದೇವತಾಭಕ್ತನೂ ಅದೇ ಶ್ರದ್ದೆಯಿಂದ ಕೂಡಿದವನಾಗಿ ಆ ದೇವತೆಯ ಆರಾಧನೆಯನ್ನೇ ಮಾಡುವನು. ಅದರಿಂದಲೂ ಕೂಡ ತನ್ನ ಅಭೀಷ್ಟಗಳನ್ನು ಆ ದೇವತೆಯಲ್ಲಿ ಸನ್ನಿಹಿತನಾದ ನನ್ನಿಂದಲೇ ಹೊಂದುವನು. |
| ಈ ಶ್ಲೋಕಗಳಿಂದಲೇ ಎರಡನೆಯ ವಿಕಲ್ಪಕ್ಕೂ ಉತ್ತರವು ಉಕ್ತವಾಗಿದೆ:- ಸ್ವಾಭಾವಿಕವಾಗಿ ವಿಷ್ಣುಭಕ್ತನಾದ ಯಾವ ಮನುಷ್ಯನು (ಶುದ್ಧ ಭಾಗವತಸ್ವಭಾವದವನು) ವಿಷ್ಣುವಿನ ಸರ್ವೋತ್ಕೃಷ್ಟ ಮಹಿಮೆಯನ್ನು ತಿಳಿದಿದ್ದರೂ ಲೌಕಿಕ ಕಾರಣಾಂತರಗಳಿಂದ ಬ್ರಹ್ಮರುದ್ರಾದ್ಯನ್ಯದೇವತೆಗಳನ್ನು ಶ್ರದ್ದೆಯಿಂದ ಪೂಜಿಸಲಿಚ್ಛಿಸುವನೋ ಅವನಿಗೆ ಆ ಶ್ರದ್ದೆಯನ್ನೆ ಸ್ಥಿರಪಡಿಸುತ್ತೇನೆ. ಅವನೂ ಸಹ ಅಂತಹ ಶ್ರದ್ದೆಯಿಂದ ಯುಕ್ತನಾಗಿ ಅನ್ಯದೇವತೆಯ ಆರಾಧನೆಯನ್ನು ಮಾಡುತ್ತಾನೆ. ಅದರಿಂದುಂಟಾದ ಆ ದೇವತಾಂತರ್ಗತ ಭಗವದನುಗ್ರಹದಿಂದ ಲಭಿಸಿದ ಗುರೂಪದೇಶ ಮೂಲಕವಾಗಿ ಯೋಗ್ಯಸಾಧನಕ್ರಮವನ್ನರಿತು ಅವನ ಸ್ವಭಾವಾನುಸಾರವಾದ ವಿಷ್ಣ್ವಾರಾಧನೆಯನ್ನೇ ಪ್ರಧಾನವಾಗಿ ಮಾಡಿ ನನ್ನಿಂದಲೇ ಮೋಕ್ಷಾದಿ ಪುರುಷಾರ್ಥಗಳನ್ನು ಹೊಂದುವನು. |

**ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಂ**

**ದೇವಾನ್ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ॥7-23॥**

**23.** ಸ್ವಾಮೀ! ಅನ್ಯದೇವತಾಪೂಜಕರಿಗೂ ನೀನೇ ಫಲ ಕೊಡುವುದಾದರೆ ಅನ್ಯದೇವ ಪೂಜೆಯನ್ನು ಬಿಟ್ಟು ನಿನ್ನನ್ನೇ ಏಕೆ ಆರಾಧಿಸಬೇಕು? ಎಂದರೆ ಹೇಳುತ್ತಾನೆ: -ರಮಾ ಬ್ರಹ್ಮಾದಿ ದೇವತೆಗಳಿಗಿಂತಲೂ ವಿಷ್ಣುವೇ ಉತ್ತಮನು ಎಂಬುದಾಗಿ ವಿಷ್ಣುವಿನ ಸರ್ವೋತ್ಕರ್ಷವನ್ನು ತಿಳಿದು, ಅಲ್ಪ ಫಲಾಕಾಂಕ್ಷಿಗಳಾದ ಅನ್ಯದೇವತೋಪಾಸಕರಿಗೆ ಲಭಿಸುವ ಫಲವು ಅಶಾಶ್ವತವೇ ಸರಿ, ಏಕೆಂದರೆ ವಿಷ್ಣೂತ್ಕರ್ಷವನ್ನು ತಿಳಿದೂ ಸಹ ಬ್ರಹ್ಮಾದಿ ಪರತಂತ್ರದೇವತೆಗಳನ್ನೆ ಆರಾಧಿಸುವವರು ಆರಾಧ್ಯ ದೇವತೆಗಳಾದ ಬ್ರಹ್ಮಾದಿಗಳನ್ನೇ ಹೊಂದುವರು; ಅವರ ಪದವೇ ಅಶಾಶ್ವತವಾದ ಕಾರಣ ಅವರ ಆರಾಧಕರಿಗೆ ಲಭಿಸುವ ಫಲವೂ ಅಶಾಶ್ವತವೇ ಆಗುವುದು. ನನ್ನ ಭಕ್ತರಾದರೋ ಆದಿಯಲ್ಲಿ ಇತರ ದೇವತೆಗಳನ್ನು ಹೊಂದಿದರೂ ಕ್ರಮವಾಗಿ ನನ್ನನ್ನು ಹೊಂದುವರು. ನನ್ನನ್ನು ಹೊಂದಿದಬಳಿಕ ಪುನರಾವೃತ್ತಿಯಿಲ್ಲವಾದ ಕಾರಣ ಅವರ ಫಲವು ಶಾಶ್ವತವು. ಅಂದಬಳಿಕ ವಿವೇಕಿಗಳಾದವರು ನನ್ನ ಪರಿವಾರವೆಂಬ ಭಾವನೆಯಿಂದ ಇತರ ದೇವತಾರಾಧನೆಯನ್ನೂ, ಪ್ರಧಾನವಾಗಿ ನನ್ನ ಆರಾಧನೆಯನ್ನೂ ಮಾಡಬೇಕೆಂದು ಅಭಿಪ್ರಾಯ.

**ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ**

**ಪರಂ ಭಾವಮಜಾನಂತೋ ಮಾಮವ್ಯಯಮನುತ್ತಮಂ॥7-24॥**

**24.** ಬ್ರಹ್ಮಾದಿ ಇತರ ದೇವತೆಗಳಿಗಿಂತಲೂ ನಿನ್ನಲ್ಲಿರುವ ಮಹತ್ವವೇನು? ಎಂದರೆ, ಹೇಳುತ್ತಾನೆ :- ಇತರ ವಿಲಕ್ಷಣವು, ತನಗಿಂತ ಉತ್ತಮವಾದ ಬೇರೆ ವಸ್ತುವಿಲ್ಲದುದು, ನಾಶರಹಿತವೂ ಆದ ನನ್ನ ಯಥಾರ್ಥಸ್ಥಿತಿಯನ್ನು ಅಜ್ಞಾನಿಗಳು ತಿಳಿಯದೆ ಜನ್ಯದೇಹಾದಿರಹಿತನಾದ ನನ್ನನ್ನು ಪ್ರಾಕೃತ(ಜನ್ಯ)ದೇಹಾದಿಗಳುಳ್ಳವನೆಂದು ತಿಳಿಯುವರು. (ಬ್ರಹ್ಮಾದಿ ಇತರ ದೇವತೆಗಳಿಗೆ ಉತ್ಪತ್ತಿ ವಿನಾಶಶೀಲವಾದ ದೇಹವಿದೆ, ನನಗೆ ಅಂತಹ ದೇಹವಿಲ್ಲ. ಸರ್ವದಾ ಅಪ್ರಾಕೃತ ಚಿದಾನಂದಾತ್ಮಕ ದೇಹವುಳ್ಳವನಾಗಿ ನಶ್ವರದೇಹವಿಲ್ಲದಿರುವುದೇ ಬ್ರಹ್ಮಾದಿಗಳಿಗಿಂತ ನನ್ನಲ್ಲಿರುವ ವಿಶೇಷ ಎಂದು ಭಾವ.)

- ಅಥವಾ ಅನ್ಯದೇವತೋಪಾಸಕರಾದ ಮಿಶ್ರಜೀವರು ಮತ್ತು ನನ್ನನ್ನೇ ಪೂಜಿಸುವ ಶುದ್ಧ ಭಾಗವತರು ಎಂದು ದ್ವಿವಿಧ ಜನರಿರುವಂತೆ ನನಗೆ ದ್ವೇಷಿಗಳೂ ಕೆಲವರಿರುವರೆಂದು ಈ ಶ್ಲೋಕದಿಂದ ಹೇಳುತ್ತಾನೆ:- ಸಂಪೂರ್ಣವಾಗಿ ಜ್ಞೇಯನಾಗುವುದಿಲ್ಲವಾದ ಕಾರಣ

ಅವ್ಯಕ್ತನೆನಿಸಿರುವ ನನ್ನನ್ನು ಅಜ್ಞಾನಿಗಳು ಸರ್ವಾತ್ಮನಾ ಜ್ಞೇಯನಾಗಿ ವ್ಯಕ್ತನೆನಿಸಿದ ಜೀವನೆಂದು ತಿಳಿಯುವರು. ಅಂತಹವರು ಸರ್ವೋತ್ತಮವು, ಶಾಶ್ವತವು, ಲೋಕವಿಲಕ್ಷಣವು, ಪ್ರಾಮಾಣಿಕವೂ ಅದ ನನ್ನ ಸ್ವರೂಪವನ್ನು ತಿಳಿದವರಲ್ಲ; ವಿಪರೀತಜ್ಞಾನಿಗಳಾದ ತಾಮಸಜನರು. ಅವರು ಸಹಜವಾಗಿ ನನ್ನಲ್ಲಿ ದ್ವೇಷವುಳ್ಳವರು ಎಂದು ತಿಳಿಯಬೇಕು.

**ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ**

**ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಂ॥7-25॥**

25. ಸ್ವಾಮೀ! ನಿನ್ನ ವಿಷಯದಲ್ಲಿ ವಿಪರೀತಜ್ಞಾನವುಳ್ಳವರಾದ ಕಾರಣ ತಾಮಸಸಜನರು ನಿನ್ನನ್ನು ನಿಂದಿಸುವರು. ಅದರಿಂದ ನಿನಗೇನಾದರೂ ಖೇದವಾಗುವುದೇ? ಎಂದರೆ, ಅವರ ವಿಪರೀತ ಜ್ಞಾನಕ್ಕೆ ಕಾರಣವಾದ ಅಜ್ಞಾನವು ಸ್ವತಂತ್ರವಲ್ಲ; ಅವರ ಅಧೀನವೂ ಅಲ್ಲ ; ನನ್ನ ಅಧೀನವಾಗಿಯೇ ಇದೆ. ಅಂತಹ ಅಜ್ಞಾನ ಕಾರಣದಿಂದ ನನಗೇಕೆ ಖೇದವಾದೀತು? ಎಂಬ ಅಭಿಪ್ರಾಯದಿಂದ ಅಜ್ಞಾನವು ತನ್ನ ಅಧೀನವೆಂದು ಭಗವಂತನು ಹೇಳುತ್ತಾನೆ:- ಅಚಿಂತ್ಯಾದ್ಭುತ ಶಕ್ತಿಯೆಂಬ ಉಪಾಯದಿಂದಲೂ, ಸ್ವಾಧೀನಪ್ರಕೃತಿಯಿಂದಲೂ ಸಹ ಆಚ್ಛಾದಿತನಾಗಿ ನಾನು ಸಕಲ ಜನರ ದೃಗ್ಗೋಚರನಾಗುವುದಿಲ್ಲ. ಹೀಗೆ ನನ್ನ ಇಚ್ಛೆಯಿಂದಲೇ ಮೋಹಿತರಾದ ಈ ಜನರು ನಾನು ಜನನ ಮರಣರಹಿತನೆಂಬುದನ್ನು ತಿಳಿಯುವುದಿಲ್ಲ.

**ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ**

**ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ ॥7-26॥**

26. ಸ್ವಾಮೀ! ಲೋಕದಲ್ಲಿ ಒಂದು ತೆರೆಯಿಂದ ಮರೆಮಾಡಿದರೆ ಅದರ ಹಿಂಭಾಗದಲ್ಲಿರುವವರು ಮುಂಭಾಗದಲ್ಲಿರುವ ಜನರನ್ನೂ, ಮುಂದಿರುವವರು ಹಿಂಭಾಗದಲ್ಲಿರುವ ಜನರನ್ನೂ ನೋಡಲು ಸಾಧ್ಯವಾಗುವುದಿಲ್ಲ. ಅದರಂತೆಯೇ ನೀನು ಮಾಯೆಯೆಂಬ ತೆರೆಯನ್ನು ಹಾಕಿಕೊಂಡಿರುವುದರಿಂದ ನಿನ್ನನ್ನು ಜನರು ಹೇಗೆ ತಿಳಿಯುವುದಿಲ್ಲವೋ ಹಾಗೆಯೇ ನೀನೂ ತೆರೆಯಿಂದಾಚೆಗೆ ಇರುವ ಜನರನ್ನು ನೋಡಲಾರೆಯಾ? ಆ ಮಾಯೆಯು ನಿನಗೂ ದರ್ಶನ ಪ್ರತಿಬಂಧಕವಾಗುತ್ತದೆಯೇ? ಹಾಗಾದರೆ ನಿನಗೆ ಲೋಕದ ಅಜ್ಞಾನವುಂಟೆ? ಎಂದರೆ ಭಗವಂತನು ಉತ್ತರ ಹೇಳುತ್ತಾನೆ:- ಅರ್ಜುನ! ಮಾಯೆಯು ಸರ್ವಥಾ ನನ್ನ ಅಧೀನವು. ನನ್ನ ಇಚ್ಛೆಯಂತೆ ಇತರರಿಗೆ ಬಂಧಕವಾಗುತ್ತದೆ. ಅದು ನನಗೆ ಬಂಧಕವಾಗಲಾರದು. ಹೀಗೆ ಮಾಯಾಬಂಧರಹಿತನಾದ ನಾನು ಹಿಂದೆ ಇದ್ದ, ಈಗಿರುವ ಮತ್ತು ಮುಂದೆ ಬರುವ ಸಕಲ

ಪ್ರಾಣಿಗಳನ್ನೂ ತಿಳಿದಿರುವೆನು. ನನ್ನನಾದರೋ ಯಾವನೂ ತಿಳಿಯುವುದಿಲ್ಲ. (ಬ್ರಹ್ಮಾದಿ ಜ್ಞಾನಿಗಳೂ ಸಹ ಅವರವರ ಯೋಗ್ಯತಾನುಸಾರವಾಗಿ ನನ್ನ ವಿಷಯದಲ್ಲಿ ಕೆಲವಂಶಗಳನ್ನು ಮಾತ್ರ ತಿಳಿಯುವರೇ ಹೊರತು ಸಂಪೂರ್ಣವಾಗಿ ನನ್ನ ಸ್ವರೂಪವನ್ನು ಯಥಾವತ್ತಾಗಿ ತಿಳಿದವರು ಯಾರೂ ಇಲ್ಲವೆಂದು ಭಾವ.)

**ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ**
**ಸರ್ವಭೂತಾನಿ ಸಮ್ಮೋಹಂ ಸರ್ಗೇ ಯಾಂತಿ ಪರಂತಪ॥7-27॥**

**27.** 'ದೈವೀ ಹ್ಯೇಷಾ ಗುಣಮಯಿ' 7-14, 'ನಾಹಂ ಸರ್ವಸ್ಯ ಪ್ರಕಾಶಃ' 7-25, ಎಂಬ ಶ್ಲೋಕಗಳಿಂದ ತ್ರಿಗುಣಾತ್ಮಕ ಮಾಯೆಯು, ಭಗವಂತನೂ ಸಹ ಉಕ್ತಮೋಹಕ್ಕೆ ಮುಖ್ಯ ಕಾರಣರೆಂದು ಉಕ್ತವಾಗಿದೆ. ಈಗ [1]ದ್ವಂದ್ವ ಮೋಹವೂ ಜೀವಾಭೇದಾದಿ ಮೋಹಕ್ಕೆ ಅಮುಖ್ಯವಾದ ಕಾರಣವಾಗಿದೆಯೆಂದು ಹೇಳುತ್ತಾನೆ:- ಶತ್ರುಸಂಹಾರಕನಾದ ಅರ್ಜುನ! ಉತ್ಕಟೇಚ್ಛಾ ಮತ್ತು ಪರಿಪಕ್ವ ದ್ವೇಷಗಳಿಂದ ಹುಟ್ಟಿದ [2]ದ್ವಂದ್ವಮೋಹದಿಂದ ಸಕಲ ಪ್ರಾಣಿಗಳೂ ಸೃಷ್ಟಿಯಾದಾಗಿನಿಂದಲೂ ಭಗವಂತನು ಜೀವಾಭಿನ್ನನು ಮುಂತಾದ ಮಿಥ್ಯಾ ಜ್ಞಾನವನ್ನು ಹೊಂದುವರು.

1. ಆಭೋಗ್ಯೇ ಭೋಗ್ಯತಾಬುದ್ಧಿಃ, ಅದ್ವೇಷ್ಯೇ ದ್ವೇಷ್ಯತಾಬುದ್ಧಿಃ, ಅಸ್ವತಂತ್ರೇ ಸ್ವಾತಂತ್ರ್ಯಬುದ್ಧಿಃ ಇತ್ಯಾದಿರೂಪೋ ಮೋಹಃ...

2. ಪರಸ್ಪರವಿರುದ್ಧವಾದ ಸುಖ-ದುಃಖ, ಲಾಭ-ಅಲಾಭ, ಮಾನ-ಅಪಮಾನ ಮುಂತಾದುವೇ ಧ್ವಂದ್ವವು, ದುಃಖ, ಅಪಮಾನ ಮುಂತಾದ ಪ್ರತಿಕೂಲ ವಿಷಯಗಳು ನಾವು ಬೇಡವೆಂದರೂ ಬರುವುದು ಅನುಭವಸಿದ್ಧವಾಗಿದೆ. ಆದಕಾರಣ ದುಃಖಾದಿಗಳು ನಮ್ಮ ಅಧೀನವಲ್ಲ-ಶಾಶ್ವತವೂ ಅಲ್ಲ – ಹೇಯವು ಎಂಬುದೇ ತತ್ತ್ವವು. ಹೀಗೆ ತಿಳಿಯದೇ ಇದಕ್ಕೆ ವಿರುದ್ಧವಾಗಿ (ವಿಷಯಸುಖಾದಿಗಳು ಉಪಾದೇಯಗಳು, ಶಾಶ್ವತವು, ನನ್ನ ಅಧೀನವು, ನಾನೇ ಸ್ವತಂತ್ರನು' ಮುಂತಾಗಿ ಭ್ರಮಿಸುವುದೇ ದ್ವಂದ್ವಮೋಹವು. ಇದರಿಂದ ನಾನೇ ಈಶ್ವರನು ಮುಂತಾದ ಜೀವೈಕ್ಯಮೋಹವುಂಟಾಗುತ್ತದೆ.

**ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಂ**
**ತೇ ದ್ವಂದ್ವಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ ॥7-28॥**

**28.** ಸಕಲ ಪ್ರಾಣಿಗಳೂ ಮಿಥ್ಯಾಜ್ಞಾನವನ್ನು ಹೊಂದುವವರಾದರೆ ಮೋಕ್ಷಮಾರ್ಗಕ್ಕೆ ಅಧಿಕಾರಿಗಳೇ ಇಲ್ಲವಾಗುತ್ತದೆ ಎಂದರೆ, ದ್ವಂದ್ವಮೋಹರಹಿತರು ಕೆಲವರಿದ್ದಾರೆಂದು ಭಗವಂತನು ಹೇಳುತ್ತಾನೆ:- ಭಗವಂತನೇ ಸಕಲಕ್ಕೂ ಕರ್ತೃಕಾರಯಿತೃ ಎಂದು ತಿಳಿದು ನಿಷ್ಕಾಮನೆಯಿಂದ ವಿಹಿತ ಕರ್ಮವನ್ನಾಚರಿಸುವ ಯಾವ ಪುಣ್ಯವಂತರಿಗೆ ಪಾಪವು ನಷ್ಟವಾಗಿರುವುದೋ ಆ ಪುಣ್ಯಾತ್ಮರು ಉಕ್ತವಾದ ದ್ವಂದ್ವವಿಷಯದಲ್ಲಿ ಭಗವಂತನ ವಿಷಯದಲ್ಲಿಯೂ ಸಹ ಮಿಥ್ಯಾ ಜ್ಞಾನರಹಿತರಾಗಿ ಸ್ಥಿರವಾದ ನಿಯಮಾನುಷ್ಠಾನಪರರಾಗಿ ನನ್ನನ್ನು ಸೇವಿಸುವರು.

**ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ**

**ತೇ ಬ್ರಹ್ಮ ತದ್ವಿದುಃ ಕೃತ್ಸ್ನ ಮಧ್ಯಾತ್ಮಂ ಕರ್ಮ ಚಾಖಿಲಂ ॥7-29॥**

**29.** ಈಗ ಭಗವದ್ಭಜನೆಗೆ ಫಲವನ್ನು ಹೇಳುತ್ತಾನೆ:- ಯಾವ ಸಾತ್ವಿಕ ಸ್ವಭಾವದ ಜನರು ಜನನ ಮರಣ, ವಿಷಯಾಭಿಲಾಷೆ ಮುಂತಾದ ಅನರ್ಥಗಳೆಂಬ ಬಂಧವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ನನ್ನನ್ನು ಸೇವಿಸುವರೋ ಅಂತಹ ಸೇವಕರು ಆ ಬ್ರಹ್ಮನನ್ನು ತಿಳಿಯುವರು. ಸಕಲ ಅಧ್ಯಾತ್ಮವನ್ನೂ ತಿಳಿಯುವರು. ಸಕಲ ಕರ್ಮಗಳನ್ನೂ ತಿಳಿಯುವರು.

**ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ**

**ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತ ಚೇತಸಃ ॥7-30॥**

**30.** 'ತತ್' ಎಂಬ ಶಬ್ದವು ಇದಿರಿಗಿಲ್ಲದ ಪರೋಕ್ಷವಸ್ತು ವಾಚಕವು. ಅಂತಹುದು ಬ್ರಹ್ಮ ಎನ್ನುವುದಕ್ಕೆ ವಿಶೇಷಣವಾಗಿ ಇಲ್ಲಿ ಉಕ್ತವಾಗಿದೆ. ಆದುದರಿಂದ ಉಪದೇಶಿಸುತ್ತಿರುವ ಸನ್ನಿಹಿತನಾದ ಕೃಷ್ಣನಿಗಿಂತಲೂ ಬ್ರಹ್ಮನು ಬೇರೆ ಎಂದು ಶಂಕ ಬರುತ್ತದೆ. ಅದನ್ನು ನಿರಾಕರಿಸುವುದಕ್ಕಾಗಿ ಹೇಳುತ್ತಾನೆ:- ಅಧಿಭೂತ ಮತ್ತು ಅಧಿದೈವಗಳಿಂದ ಸಹಿತನು ಮತ್ತು ಅಧಿಯಜ್ಞಸಹಿತನೂ ಆದ ನನ್ನನ್ನು ಯಾರು ತಿಳಿದವರೋ ಮತ್ತು ಮರಣಕಾಲದಲ್ಲಿಯೂ ಸಹ ಯಾರು ನನ್ನನ್ನು ಸ್ಮರಿಸುವರೋ ಅವರು ಸಮಾಧಿಯೋಗಸಹಿತ ಚಿತ್ತವುಳ್ಳವರು.

ಈ ಶ್ಲೋಕಗಳ ವಿಶೇಷಾರ್ಥ ಸಹಿತವಾದ ಅಭಿಪ್ರಾಯವು ಮುಂದಿನ ಅಧ್ಯಾಯದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆಯಾದಕಾರಣ ಇಲ್ಲಿ ವಿಶೇಷ ವಿವರಣೆಯನ್ನು ಕೊಟ್ಟಿಲ್ಲ.

**ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಜ್ಞಾನವಿಜ್ಞಾನಯೋಗೋ ನಾಮ - ಸಪ್ತ ಮೋಽಧ್ಯಾಯಃ॥7-[30]॥**

## ಅಷ್ಟಮೋಽಧ್ಯಾಯಃ॥8-[28]॥

'ಬ್ರಹ್ಮ ತದ್ವಿದುಃ' 7-29. 'ಪ್ರಯಾಣಕಾಲೇಪಿ ಚ ಮಾಂ ವಿದುಃ' 7-30 ಎಂದು ಹೇಳಿರುವುದರ ಅರ್ಥವಿವರಣೆಯೇ ಈ ಅಧ್ಯಾಯದ ಮುಖ್ಯಾರ್ಥವು. ವಿವರಣೆಯ ಸಂದರ್ಭದಲ್ಲಿ ಅವಶ್ಯ ವಕ್ತವ್ಯವಾದ ಅಂತ್ಯಕಾಲ ಸ್ಮರಣೆಯ ಫಲ, ಅದರ ಉಪಾಯ, ಪ್ರಕಾರ ಮತ್ತು ಬ್ರಹ್ಮಪ್ರಾಪ್ತಿ ಮಾರ್ಗವೂ ಸಹ ಉಕ್ತವಾಗಿದೆ. ಭಗವಂತನು ಸ್ಮರ್ತವ್ಯನು ಮತ್ತು ಪ್ರಾಪ್ಯನು ಎಂಬ ಮಹಿಮೆಯೇ ಉಕ್ತವಾಗಿದೆಯಾಗಿ ಭಗವನ್ಮಾಹಾತ್ಮ್ಯ ಪರ ಷಟ್ಕದಲ್ಲಿ ಈ ಅಧ್ಯಾಯವು ಸೇರಿರುವುದು ಸಂದರ್ಭೋಚಿತವೆಂದು ತಿಳಿಯಬೇಕು.

**ಅರ್ಜುನ ಉವಾಚ**

| |
|---|
| ಕಿಂ ತದ್ಬ್ರಹ್ಮ ಕಿಮಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ<br>ಅಧಿಭೂತಂ ಚ ಕಿಂ ಪ್ರೋಕ್ತಮಧಿದೈವಂ ಕಿಮುಚ್ಯತೇ॥8-1॥ |
| ಅಧಿಯಜ್ಞಃ ಕಥಂ ಕೋತ್ರ ದೇಹೇಸ್ಮಿನ್ ಮಧುಸೂದನ<br>ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ॥8-2॥ |
| **1-2.** 'ಬ್ರಹ್ಮ ತತ್' ಎಂದು ಪರೋಕ್ಷನಿರ್ದೇಶಮಾಡಿರುವುದರಿಂದ ಇದಿರಿಗಿರುವ ಶ್ರೀಕೃಷ್ಣನು ಬ್ರಹ್ಮನಲ್ಲವೆಂದೂ, ಬ್ರಹ್ಮನೇ ಬೇರೆ ಎಂದೂ ತೋರುತ್ತದೆ. 'ಸಾಧಿಭೂತಂ ಸಾಧಿದೈವಂ ಸಾಧಿಯಜ್ಞಂ ಚ ಮಾಂ ವಿದುಃ' ಎಂಬುದರಿಂದ ಕೃಷ್ಣ ಜ್ಞಾನವೇ ಬೇರೆ-ಬ್ರಹ್ಮಜ್ಞಾನವೇ ಬೇರೆ ಎಂದು ತೋರುತ್ತದೆ. 'ವಾಸುದೇವಾತ್ಮಕಂ ಬ್ರಹ್ಮ' ಇತ್ಯಾದಿಗಳಲ್ಲಿ ಕೃಷ್ಣನೇ ಬ್ರಹ್ಮನೆಂದು ಉಕ್ತವಾಗಿದೆ. ಹೀಗೆ ವಿರುದ್ಧವಾದ ಅನೇಕ ವಾಕ್ಯಗಳನ್ನು ಶ್ರವಣ ಮಾಡಿದುದರಿಂದ ಸಂಶಯನ್ನು ಹೊಂದಿದ ಪಾರ್ಥನು ಉಕ್ತ ಬ್ರಹ್ಮಾದಿ ಪದಗಳ ಅರ್ಥವನ್ನು ವಿವೇಚನೆಮಾಡಿ ತಿಳಿಸಬೇಕೆಂದು ಪ್ರಶ್ನೆಮಾಡುತ್ತಾನೆ:- ಪುರುಷೋತ್ತಮ! ಮಧುಸೂದನ! 1. 'ತದ್ಬ್ರಹ್ಮ' ಎಂಬುದರ ಅರ್ಥವೇನು? 2. ಆಧ್ಯಾತ್ಮ ಪದಾರ್ಥವು ಯಾವುದು? 3. ಕರ್ಮವಾವುದು? 4. ಆದಿಭೂತವೆಂದರೇನು? 5. ಅಧಿದೈವ ಪದಾರ್ಥವೇನು? 6. ಈ ದೇಹದಲ್ಲಿ ಅಧಿಯಜ್ಞನು ಯಾರು? 7. ಅವನು ಅಧಿಯಜ್ಞನೆನಿಸಿರುವ ಬಗೆ ಹೇಗೆ? 8. ಮನೋಜಯವನ್ನು ಹೊಂದಿರುವ ಜ್ಞಾನಿಗಳು ಮರಣಕಾಲದಲ್ಲಿ ನಿನ್ನನ್ನು ಏತಕ್ಕಾಗಿ ಹೇಗೆ ಸ್ಮರಿಸಬೇಕು? (ಎಂಬುದಾಗಿ ಅರ್ಜುನನು ಎಂಟು ಪ್ರಶ್ನೆಗಳನ್ನು ಮಾಡಿರುವನು.) |

**ಶ್ರೀ ಭಗವಾನುವಾಚ –**

| |
|---|
| ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ<br>ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ ॥8-3॥ |
| ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಂ<br>ಅಧಿಯಜ್ಞೋಹಮೇವಾತ್ರ ದೇಹೇ ದೇಹಭೃತಾಂ ವರ॥8-4॥ |
| **3-4.** ಭಗವಂತನು ಆ ಎಂಟು ಪ್ರಶ್ನೆಗಳಿಗೂ ಉತ್ತರ ಹೇಳುತ್ತಾನೆ:- ಪರಮಾಕ್ಷರ ಶಬ್ದವಾಚ್ಯನಾದವನೇ ಬ್ರಹ್ಮನು ಜೀವನಿಗೆ ಅಂಟಿಕೊಂಡು ಅವನಿಗೆ ಉಪಕಾರಕವಾಗಿರುವ ದೇಹ, ಇಂದ್ರಿಯ, ಅಂತಃಕರಣಾದಿಗಳು (ಸ್ವಭಾವ) ಅಧ್ಯಾತ್ಮವು, ಜೀವ ಜಡಗಳ ಉತ್ಪತ್ತಿಗೆ ಕಾರಣವಾದ |

| |
|---|
| ಈಶ್ವರನ ಸೃಷ್ಟಿ ವ್ಯಾಪಾರವು ಕರ್ಮವೆನಿಸುತ್ತದೆ. ದೇಹಸಹಿತರಾದ ಜೀವರಿಗೆ ಉಪಕಾರಕವಾಗಿರುವ, ಉತ್ಪತ್ತಿ ವಿನಾಶಶಾಲಿಯಾದ ದೇಹಾದ್ಯನ್ಯ ಪದಾರ್ಥಗಳೇ ಅಧಿಭೂತವು. ಬ್ರಹ್ಮಾಂಡಾಭಿಮಾನಿಯಾದ, ಪುರುಷನಾಮಕ ಹಿರಣ್ಯಗರ್ಭನು ಸಕಲ ದೇವತೆಗಳಿಗೂ ಸ್ವಾಮಿಯಾಗಿರುವುದರಿಂದ ಅಧಿದೈವನೆನಿಸುವನು. ಪ್ರಾಣಿಶ್ರೇಷ್ಠ ನಾದ ಪಾರ್ಥ! ಸಕಲ ಪ್ರಾಣಿಗಳ ದೇಹದಲ್ಲಿಯೂ ಇದ್ದು ಕರ್ತೃತ್ವ, ಭೋಕ್ತೃತ್ವ ಫಲದಾತೃತ್ವಾದಿಗಳಿಗೆ ನಿಯಾಮಕನಾಗಿರುವುದರಿಂದ ಈ ದೇಹದಲ್ಲಿ ಅಧಿಯಜ್ಞನಾಮಕನಾಗಿರುವವನು ನಾನೇ ಎಂದು ತಿಳಿ ! |
| ಹೀಗೆ ಬ್ರಹ್ಮಾದಿ ಪದಾರ್ಥಗಳನ್ನು ವಿವರಿಸಿದ ಬಳಿಕ 'ತೇ ಬ್ರಹ್ಮ 'ಸಾಧಿಭೂತಾಧಿ' ಎಂಬ ಎರಡು ಶ್ಲೋಕಗಳಿಗೆ ಅರ್ಥವು ಸುಗಮವಾಗುವುದು. ಹೇಗೆಂದರೆ:- ಬ್ರಹ್ಮ=ವ್ಯಾಪ್ತನಾದ, ತತ್=ನನ್ನ ಸ್ವರೂಪವನ್ನು, ತೇ=ಆ ಜ್ಞಾನಿಗಳು (ತಿಳಿದವರು.) ಕೃತ್ಸ್ನಮಧ್ಯಾತ್ಮಂ=ಜೀವೋಪಕಾರಿ ದೇಹೇಂದ್ರಿಯಾಂತಃಕರಣವೆಂಬ ವಸ್ತುವನ್ನು, ಅಖಿಲಂ ಕರ್ಮ=ಜಗತ್ಸೃಷ್ಟಿ ರೂಪವಾದ ಈಶ್ವರ ವ್ಯಾಪಾರವನ್ನು ತಿಳಿದವರು, ಸಾಧಿಭೂತಾಧಿದೈವಂ=ದೇಹಸಹಿತ ಜೀವರಿಗೆ ಉಪಕಾರಕವಾಗಿರುವ, ಉತ್ಪತ್ತಿನಾಶಶಾಲಿಯಾದ ಪೃಥಿವ್ಯಾದಿ ಪದಾರ್ಥಗಳಲ್ಲಿ ನಿಯಾಮಕನಾಗಿರುವ ನನ್ನನ್ನು, ಸಾಧಿದೈವಂ=ದೇವಾಧಿಪತಿಯಾದ ಹಿರಣ್ಯಗರ್ಭನಲ್ಲಿ ಅಂತರ್ಯಾಮಿಯಾಗಿರುವ ನನ್ನನ್ನು, ಸಾಧಿಯಜ್ಞಂ=ಯಜ್ಞಕರ್ತರು-ಫಲವನ್ನು ಅನುಭವಿಸುವವರು-ಫಲಧಾತೃಗಳು ಅವರೆಲ್ಲರಿಗೂ ಪ್ರವರ್ತಕರೂಪದಿಂದ ಅವರವರ ದೇಹಗತನಾದ ನನ್ನ ರೂಪವಿಶೇಷವನ್ನೂ ಸಹ ಆ ಯೋಗಿಗಳು ತಿಳಿದವರಾಗುವರು ಎಂದು ಅರ್ಥದ್ವಯದ ಅಭಿಪ್ರಾಯವು. |
| **ಅಂತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಂ**<br>**ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ॥8-5॥** |
| 5.ಅಂತ್ಯಕಾಲದಲ್ಲಿ ಶ್ರೀಕೃಷ್ಣನ ಸ್ಮರಣೆಯನ್ನೇಕೆ ಮಾಡಬೇಕೆಂಬ ಪ್ರಶ್ನೆಗೆ ಉತ್ತರ ಹೇಳುತ್ತಾನೆ:- ಮರಣವಾಗುವ ಸಮಯದಲ್ಲಿ ನನ್ನನ್ನೇ ಸ್ಮರಿಸುತ್ತ ಯಾವಾತನು ಈ ದೇಹವನ್ನು ತ್ಯಜಿಸಿ ಪ್ರಯಾಣಮಾಡುವನೋ, ಅವನು ನನ್ನ ಸನ್ನಿಧಿಯಲ್ಲಿ ನಿರ್ದುಖಾನಂದಾನುಭವರೂಪವಾದ ಸ್ಥಿತಿಯನ್ನು ಹೊಂದುವನು. ದುಃಖಲೇಶವೂ ಇಲ್ಲದ ನಿತ್ಯಾನಂದಾಭಿವ್ಯಕ್ತಿರೂಪವಾದ ಸ್ಥಿತಿಯನ್ನು ಹೊಂದುವುದಕ್ಕಾಗಿ ಅಂತ್ಯಕಾಲದಲ್ಲಿ ಭಗವಂತನ ಸ್ಮರಣೆಯನ್ನು ಮಾಡಬೇಕೆಂದು ಭಾವ. |

**ಯಂ ಯಂ ವಾಪಿ ಸ್ಮರನ್ಭಾವಂ ತ್ಯಜತ್ಯಂತೇ ಕಲೇವರಂ**

**ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ॥8-6॥**

6.ಸ್ವಾಮೀ! ಅಂತ್ಯಕಾಲದಲ್ಲಿ ನಿನ್ನನ್ನು ಸ್ಮರಿಸುವವರಿಗೆ ನಿನ್ನ ಸಮೀಪದಲ್ಲಿ ನಿನ್ನಂತೆ ನಿರ್ದುಖಾನಂದಾನುಭವರೂಪಸ್ಥಿತಿಯು ಲಭಿಸಲು ಕಾರಣವೇನು? ಎಂದರೆ, ಭಗವಂತನು ಸಾಮಾನ್ಯ ನ್ಯಾಯವನ್ನು ಹೇಳಿ ವಿವರಿಸುತ್ತಾನೆ:- ಜೀವನು ಮರಣಹೊಂದುವಾಗ ಯಾವಯಾವ ಪದಾರ್ಥವನ್ನು ಸ್ಮರಿಸುತ್ತ ದೇಹವನ್ನು ಬಿಡುವನೋ ಆಯಾ ಪದಾರ್ಥಗಳನ್ನೇ ಹೊಂದುವನು. ಅಂತ್ಯ ಕಾಲದಲ್ಲಿ ಭಗವಂತನ ಸ್ಮರಣೆ ಮಾಡುತ್ತ ಮೃತನಾದರೆ ಅವನು ಭಗವಂತನನ್ನೇ ಹೊಂದಿ ನಿರ್ದುಖಾನಂದಾನುಭವವುಳ್ಳವನಾಗುವನು. ಕೌಂತೇಯ! ಅಂತ್ಯಕಾಲದಲ್ಲಿ ಭಗವಂತನ ಸ್ಮರಣೆಯು ಬರಬೇಕಾದರೆ ಸದಾ ತದ್ಭಾವಭಾವಿತಃ=ಯಾವಾಗಲೂ ಭಗವಂತನಲ್ಲಿಯೇ ಲೀನವಾದ ಮನಸ್ಸಿನಿಂದ ಅವನನ್ನೇ ಧ್ಯಾನಮಾಡಿ ದೃಢವಾದ ಸಂಸ್ಕಾರವುಳ್ಳವನಾಗಿರಬೇಕು. ಆ ಸಂಸ್ಕಾರವೇ ಮರಣಕಾಲದಲ್ಲಿ ಸ್ಮರಣೆಯನ್ನುಂಟು ಮಾಡುತ್ತದೆ. ಈ ರೀತಿ ಸರ್ವದಾ ಭಗವಂತನನ್ನೇ ಧ್ಯಾನಮಾಡಿ ದೃಢಸಂಸ್ಕಾರವನ್ನು ಪಡೆದಿರುವ ಮನುಷ್ಯನು ಅಂತ್ಯಕಾಲದಲ್ಲಿ ಭಗವಂತನನ್ನು ಸ್ಮರಿಸಿ ಅವನನ್ನೇ ಹೊಂದಿ ಮುಕ್ತನಾಗುವನೆಂದು ಭಾವ.

1. ಬ್ರಹ್ಮನು ಕೃಷ್ಣನೇ ಅಥವಾ ಬೇರೊಬ್ಬನೇ ಎಂಬುದೇ ಪ್ರಥಮ ಪ್ರಶ್ನೆಯ ಆಶಯವು. ಅದಕ್ಕೆ ಕೃಷ್ಣನು 'ನಾನೇ ಬ್ರಹ್ಮನು' ಎಂದು ಉತ್ತರ ಹೇಳುವುದು ಉಚಿತ. ಅದವನ್ನು ಬಿಟ್ಟು "ಪರಮಾಕ್ಷರಂ ಬ್ರಹ್ಮ' ಎಂದೇಕೆ ಹೇಳಿದನು? ಎಂದರೆ:- ತಸ್ಮಾದಕ್ಷರಂ ತಸ್ಮಾದಕ್ಷರಮಿತ್ಯಾಚಕ್ಷತ ಏತಮೇವ ಸಂತಂ' ಇತ್ಯಾದಿ ಶ್ರುತಿಯಲ್ಲಿ ವಿಷ್ಣುವೇ ಅಕ್ಷರಶಬ್ದ ವಾಚ್ಯನೆಂದು ಸ್ಪಷ್ಟವಾಗಿ ನಿರೂಪಿಸಿರುವುದರಿಂದ ಅಕ್ಷರನೇ ಬ್ರಹ್ಮನೆಂದು ಹೇಳಿದುದರಿಂದಲೇ ವಿಷ್ಣು ವಾದ ತಾನೇ ಬ್ರಹ್ಮ ನೆಂದು ತಿಳಿಯಬಹುದು. ಹೀಗೆ ಹೇಳಿದರೆ ತನ್ನ ಅಕ್ಷರ ಮಹಿಮೆಯೂ ತಿಳಿಸಿದಂತಾಗುವುದು. ಆದಕಾರಣ ಈರೀತಿ ಉತ್ತರ ಹೇಳಿದನೆಂದು ತಿಳಿಯಬೇಕು. ಅದರಲ್ಲಿಯೂ 'ಅಕ್ಷರ ನಾಮಕನು ಬ್ರಹ್ಮನು' ಎಂದು ಆಷ್ಟೇ ಹೇಳಿದರೆ ಸಾಲದು. ಸ್ಕಾಂದಪುರಾಣದಲ್ಲಿ 'ಅಧಮಂ ತ್ವಕ್ಷರಂ ಯಾ ಸಾ ಪ್ರಕೃತಿರ್ಜಡರೂಪಿಕಾ' | ಶ್ರೀಃ ಪರಾ ಪ್ರಕೃತಿಃ ಪ್ರೋಕ್ತಾ ಚೇತನಾ ವಿಷ್ಣು ಸಂಶ್ರಯಾ | ತಾಮಕ್ಷರಂ ಪರಂ ಪ್ರಾಹುಃ ಪರತಃ ಪರಮಕ್ಷರಂ | ಹರಿಮೇವಾಖಿಲಗುಣ ಮಕ್ಷರತ್ರಯಮೀರಿತಂ' ಎಂಬುದಾಗಿ ಜಡಪ್ರಕೃತಿ ರಮಾದೇವಿಯೆಂಬ ಚೇತನ ಪ್ರಕೃತಿ ಮತ್ತು ಹರಿ ಈ ಮೂವರೂ ಸಾಮಾನ್ಯವಾಗಿ ಅಕ್ಷರನಾಮಕರು. ಅದರಲ್ಲಿ ಜಡಪ್ರಕೃತಿಗೆ ಅಕ್ಷರನಾಮವೂ, ರಮಾದೇವಿಗೆ ಪರಾಕ್ಷರನಾಮವೂ, ಶ್ರೀಹರಿಗೆ ಪರಮಾಕ್ಷರನಾಮವು ಎಂದು ವಿವೇಚನೆ ಮಾಡಿ ಉಕ್ತವಾಗಿದೆ. ಆದಕಾರಣ ಅಕ್ಷರವೆಂದರೆ ಜಡಪ್ರಕೃತ್ಯಾದಿಗಳೂ ಪ್ರಸಕ್ತವಾಗುವುವು. ಅವು ಬ್ರಹ್ಮವಲ್ಲವೆಂದೂ, ಶ್ರೀಹರಿಯೇ ಬ್ರಹ್ಮನೆಂದೂ ತಿಳಿಸುವುದಕ್ಕಾಗಿ ಅವನಿಗೇ ಮೀಸಲಾಗಿರುವ 'ಪರಮಾಕ್ಷರ' ಎಂಬ ನಾಮಧೇಯವನ್ನೇ ಶ್ರೀಕೃಷ್ಣನು 'ಪರಮಂ' ಎಂಬ ವಿಶೇಷಣವನ್ನು ಹೇಳಿ ಬೋಧಿಸಿರುವನು.

**ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ |**

**ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯ ಸಂಶಯಮ್॥8-7॥**

7. ಭಗವತ್ಪ್ರಾಪ್ತಿ ಕಾರಣವಾದ ಭಗವಂತನ ಸ್ಮರಣೆಯು ಅಂತ್ಯಕಾಲದಲ್ಲಿ ಬರುವುದಕ್ಕೆ ನಿರಂತರ ಮಾಡುವ ನನ್ನ ಸ್ಮರಣೆಯೇ ಕಾರಣವಾಗಿರುವುದರಿಂದ ಅರ್ಜುನ! ಯಾವಾಗಲೂ ನನ್ನಲ್ಲಿಯೇ ಮನೋಬುದ್ಧಿಗಳನ್ನಿಟ್ಟವನಾಗಿ, ನನ್ನನ್ನೇ ಸ್ಮರಿಸುತ್ತ ನನ್ನ ಪೂಜೆಯೆಂಬ ಭಾವನೆಯಿಂದ ವಿಹಿತವಾದ ಯುದ್ಧವನ್ನಾಚರಿಸು. ನೀನು ಹಾಗೆ ಮಾಡಿದರೆ ನಿಸ್ಸಂಶಯವಾಗಿ ನನ್ನನ್ನೇ ಹೊಂದುವೆ.

| |
|---|
| ಅಭ್ಯಾಸಯೋಗಯುಕ್ತೇನ ಚೇತಸಾಽನನ್ಯಗಾಮಿನಾ<br>ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿಂತಯನ್॥8-8॥ |
| **8.** ನಿರಂತರ ಭಗವತ್ಸ್ಮರಣೆಯು ಬರುವ ಬಗೆಯನ್ನು ವಿವರಿಸುತ್ತಾನೆ:- ಚಂಚಲವಾದ ಮನಸ್ಸು ಒಂದೇ ವಿಷಯದಲ್ಲಿ ನಿಲ್ಲುವುದು ಕಷ್ಟ. ಆದರೂ ಅದು ಇತರ ವಿಷಯಗಳ ಕಡೆಗೆ ಹೋಗದಂತೆ ಅದನ್ನು ಭಗವಂತನಲ್ಲಿಯೇ ನಿಲ್ಲಿಸಬೇಕು. ಮಧ್ಯದಲ್ಲಿ ವಿಷಯಾಂತರದ ಕಡೆ ಮನಸ್ಸು ಹೋಗುವ ಸಂಭವ ಬಂದಾಗಲೆಲ್ಲಾ ವಿವೇಕದಿಂದ ತಡೆದು ಭಗವಂತನಲ್ಲಿಯೇ ನಿಲ್ಲಿಸುತ್ತಿರಬೇಕು. ಈ ರೀತಿ ಅನೇಕ ಬಾರಿ ಮಾಡುವುದಕ್ಕೆ ಅಭ್ಯಾಸವೆಂದು ಹೆಸರು. ಇದೇ ನಿರಂತರ ಸ್ಮರಣೆಗೆ ಉಪಾಯವು. ಇಂತಹ ಉಪಾಯವನ್ನು ಆಚರಿಸಿ ವಿಷಯಾಂತರದ ಕಡೆಗೆ ಹೋಗದಂತೆ ಮಾಡಲ್ಪಟ್ಟ ಮನಸ್ಸಿನಿಂದ ಉತ್ತಮನು, ಕ್ರೀಡಾದಿ ಗುಣಯುಕ್ತನು, ಸಕಲ ಪ್ರಾಣಿಗಳ ದೇಹದಲ್ಲಿ ನಿಯಾಮಕನಾಗಿರುವವನೂ ಆದ ಪುರುಷನಾಮಕ ಭಗವಂತನನ್ನು ಸರ್ವದಾ ಚಿಂತಿಸುತ್ತ ಬಂದರೆ ಅಂತ್ಯಕಾಲದಲ್ಲಿ ಅನಾಯಾಸವಾಗಿ ಸ್ಮರಣೆಯು ಬಂದು ಆ ಪರಮಾತ್ಮನನ್ನೇ ಹೊಂದುವನು. |
| ಕವಿಂ ಪುರಾಣಾಮನುಶಾಸಿತಾರಮಣೋರಣೀಯಾಂಸಮನುಸ್ಮರೇದ್ಯಃ<br>ಸರ್ವಸ್ಯ ಧಾತಾರಮಚಿಂತ್ಯರೂಪಮಾದಿತ್ಯವರ್ಣಂ ತಮಸಃ ಪರಸ್ತಾತ್॥8-9॥ |
| ಪ್ರಯಾಣಕಾಲೇ ಮನಸಾಚಲೇನ ಭಕ್ತ್ಯಾ ಯುಕ್ತೋ ಯೋಗಬಲೇನ ಚೈವ<br>ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್ಸತಂ ಪರಂ ಪುರುಷಮುಪೈತಿ ದಿವ್ಯಂ॥8-10॥ |
| **9-10.** ಭಗವಂತನನ್ನು ಯಾವ ರೀತಿ ಚಿಂತಿಸಬೇಕೆಂಬ ಪ್ರಶ್ನೆಗೆ ಉತ್ತರ ಹೇಳುತ್ತಾನೆ:- ಸರ್ವಜ್ಞನು, ಅನಾದಿಯು, ಶಿಕ್ಷಕನು, ಅತ್ಯಂತಾಣುಪರಿಮಾಣನು, ಸಕಲ ಚರಾಚರ ಪ್ರಪಂಚಕ್ಕೂ ಧಾರಣ-ಪೋಷಣಕರ್ತನು, ಮನಸ್ಸಿಗೆ ಸಂಪೂರ್ಣವಾಗಿ ಗೋಚರಿಸದಿರುವವನು, ಸೂರ್ಯನಂತೆ ಪ್ರಕಾಶಮಾನನು, ಮೃತ್ಯು ಮತ್ತು ಪ್ರಕೃತಿಗಳಿಗೆ ಸಿಲುಕದೇ ಇರತಕ್ಕವನೂ ಆದ ಪರಮಾತ್ಮನನ್ನು ಯಾವಾತನು ಭಕ್ತಿಸಂಪನ್ನನಾಗಿ ಮರಣಕಾಲದಲ್ಲಿ [1]ಯೋಗ=ಪ್ರಾಣಾಯಾಮಾಭ್ಯಾಸಬಲದಿಂದ ಪ್ರಾಣವಾಯುವನ್ನು ನಾಭ್ಯಧೋಭಾಗಸ್ಥಿತವಾದ [1]ಮೂಲಾಧಾರ ಚಕ್ರದಿಂದ ಕ್ರಮವಾಗಿ ಸ್ವಾಧಿಷ್ಠಾನಾದಿ ಆಯಾಯಾ ಚಕ್ರ ಮೂಲಕವಾಗಿ ಸುಷುಮ್ನಾನಾಡಿಯ ಮಾರ್ಗದಿಂದ ಹುಬ್ಬುಗಳ ಮಧ್ಯದಲ್ಲಿರುವ ಆಜ್ಞಾ ಚಕ್ರದಲ್ಲಿ ನಿಶ್ಚಲವಾಗಿ ನಿಲ್ಲಿಸಿ ಸ್ಥಿರಮನಸ್ಸಿನಿಂದ ಸ್ಮರಿಸುವನೋ, ಅವನು ವೈಕುಂಠದಲ್ಲಿರುವ ಉತ್ತಮಪುರುಷನಾದ ಪರಮಾತ್ಮನನ್ನು ಹೊಂದುವನು. |

**ಯದಕ್ಷರಂ ವೇದವಿದೋ ವದಂತಿ ವಿಶಂತಿ ಯದ್ಯತಯೋ ವೀತರಾಗಾಃ**

**ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ ಪದಂ ಸಂಗ್ರಹೇಣ ಪ್ರವಕ್ಷ್ಯೇ॥8-11॥**

**11.** ವಾಯುಜಯಾದಿಗಳನ್ನುಳ್ಳ ಯೋಗಿಗಳಿಗೆ ಮರಣಕಾಲದಲ್ಲಿನ ಕರ್ತವ್ಯವನ್ನೂ, ಆಗ ಧ್ಯಾನಿಸಬೇಕಾದ ಭಗವದ್ರೂಪವನ್ನೂ ಸ್ಪಷ್ಟವಾಗಿ ಹೇಳುತ್ತಾನೆ:- ವೇದ ಮತ್ತು ಅದರ ಅರ್ಥತತ್ವಜ್ಞರು ಯಾವ ವಸ್ತುವನ್ನು ದೇಹನಾಶವೂ ಇಲ್ಲದಿರುವುದರಿಂದ 'ಅಕ್ಷರ' ಎಂದು ಹೇಳುವರೋ, ಕಾಮಾದಿದೋಷರಹಿತರು-ಪ್ರಯತ್ನಶೀಲರೂ ಆದ ಜನರು ಯಾವ ತತ್ವವನ್ನು ಹೊಂದುವರೋ, ಯಾರನ್ನು ತಿಳಿಯಬೇಕೆಂದೂ ನೋಡಬೇಕೆಂದೂ ಹಂಬಲಿಸುವ ಜನರು ಬ್ರಹ್ಮನಲ್ಲಿಯೇ ಮನ ಆದಿ ಇಂದ್ರಿಯಗಳ ಸಂಚಾರ=ಮನ ಅದೀಂದ್ರಿಯಗಳು ಬ್ರಹ್ಮನನ್ನು ಮಾತ್ರ ವಿಷಯೀಕರಿಸುವುದು ಎಂಬ ಬ್ರಹ್ಮಚರ್ಯವನ್ನಾಚರಿಸುವರೋ, ಮೋಕ್ಷಾರ್ಥಿ ಲಭ್ಯವಾದ, ಅಂತಹ ಸ್ವರೂಪವನ್ನು ಸ್ಮರಿಸುವ ಪ್ರಕಾರವನ್ನು ವಿವರಿಸಿ ಹೇಳುವೆನು.

1.ಯೋಗವು ರಾಜಯೋಗ-ಹಠಯೋಗ ಎಂದು ಎರಡುಬಗೆ. ಕರ್ಮಾಚರಣೆ, ಅದರಿಂದ ಚಿತ್ತಶುದ್ಧಿ ದ್ವಾರಾ ಶ್ರವಣ, ಮನನ, ಧ್ಯಾನ, ಅಪರೋಕ್ಷಜ್ಞಾನಾದಿರೂಪವಾದುದು ರಾಜಯೋಗವು. ಇದು ಉತ್ತಮ ಮತ್ತು ಕಷ್ಟ ಸಾಧ್ಯವು. ಇದನ್ನು 'ಆಚರಿಸಲು ಅಶಕ್ತನಾದ ಮುಮುಕ್ಷುವು ಸ್ವಲ್ಪಮಟ್ಟಿಗೆ ಶ್ರವಣಾದಿಗಳನ್ನು ಮಾಡಿ ಹಠಯೋಗದಲ್ಲಿ ಪ್ರವರ್ತಿಸುವನು. ಹಠಯೋಗವೆಂದರೆ:- ರೇಚಕ-ಪೂರಕ-ಕುಂಭಕ ಕ್ರಮದಿಂದ ವಾಯುನಿರೋಧಮಾಡಿ ಅದನ್ನು ಕ್ರಮವಾಗಿ ಮೂಲಾಧಾರದಿಂದ ಬ್ರಹ್ಮರಂಧ್ರ ಪರ್ಯಂತವಾಗಿರುವ ಚಕ್ರಗಳ ಮೂಲಕ ಸುಷುಮ್ನಾ ನಾಡಿಯ ಮಾರ್ಗದಿಂದ ಒಯ್ಯುತ್ತಾ ಬ್ರಹ್ಮರಂಧ್ರದಿಂದ ಹೊರಗೆ ಬಿಡುವುದು ಹಠಯೋಗವು. ಇವುಗಳಲ್ಲಿ ರಾಜಯೋಗಿಗಳಿಗೆ ಸಾವಕಾಶವಾಗಿ ಬ್ರಹ್ಮಪ್ರಾಪ್ತಿಯಾಗುವುದು. ಅವರಿಗಾಗುವ ಸುಖವು ಅಧಿಕವಾದುದು. ಹಠಯೋಗಿಗಳು ವಾಯುಜಯವುಳ್ಳವರಾದುದರಿಂದ ಶ್ರವಣಾದಿಸಾಧನಗಳಲ್ಲಿ ಸ್ವಲ್ಪ ನ್ಯೂನತೆಯಿದ್ದರೂ ಶೀಘ್ರವಾಗಿ ಉತ್ಕ್ರಮಣಹೊಂದಿ ಬ್ರಹ್ಮನನ್ನು ಹೊಂದುವರು. ಆದರೆ ಅವರಿಗಾಗುವುದು ಅಲ್ಪ ಮುಕ್ತಿಯು=ಅಲ್ಪ ಸುಖವು. ಈ ಶ್ಲೋಕದಲ್ಲಿ ಹೇಳಿರುವ ಯೋಗಬಲದಿಂದ ಪ್ರಾಣವಾಯುವನ್ನು ಭ್ರೂಮಧ್ಯದಲ್ಲಿ ಸ್ಥಾಪಿಸುವುದೇ ಮುಂತಾದ ಸಾಧನಕ್ರಮವು ವಾಯುಜಯವಂತರಾದ ಯೋಗಿಗಳಿಗೆ ಮಾತ್ರ ಅನ್ವಯಿಸಿಕೊಳ್ಳಬೇಕು. ವಾಯುಜಯಹೀನರಾವ ಅಧಿಕಾರಿಗಳಿಗೆ ಸಂಪೂರ್ಣಜ್ಞಾನಭಕ್ತಿವೈರಾಗ್ಯಗಳಿಂದಲೇ ಪೂರ್ಣಮುಕ್ತಿಯು ದೊರಕುವುದೆಂದು ವಿಶೇಷಾಂಶವನ್ನು ತಿಳಿಯಬೇಕು.

1.ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ, ಸಹಸ್ರಾರ ಎಂದು ದೇಹದಲ್ಲಿ ಏಳು ಚಕ್ರಗಳಿವೆ, ಇವುಗಳಲ್ಲಿ ನಾಭಿಯ ಕೆಳಭಾಗದಲ್ಲಿ ಮೂಲಾಧಾರ, ಅದರ ಮೇಲೆ ನಾಭಿಯ ಕೆಳಗಿನ ಪ್ರದೇಶದಲ್ಲಿಯೇ ಸ್ವಾಧಿಷ್ಠಾನ ಎಂಬುದಾಗಿ ಎರಡು ಚಕ್ರಗಳೂ, ಮಣಿಪೂರಾದಿಗಳು ಕ್ರಮವಾಗಿ ನಾಭಿ, ವಕ್ಷಸ್ಥಲ, ಕಂಠ, ಭ್ರೂಮಧ್ಯ, ಬ್ರಹ್ಮರಂಧ್ರಪ್ರದೇಶಗಳಲ್ಲಿರುತ್ತವೆಯೆಂದು ತಿಳಿಯಬೇಕು.

**ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ**

**ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಂ ।**

**ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್**

**ಯಃ ಪ್ರಯಾತಿ ತ್ಯಜನ್ದೇಹಂ ಸ ಯಾತಿ ಪರಮಾಂ ಗತಿಂ॥8-13॥**

**13.**ಶರೀರದ ಒಳಭಾಗದಲ್ಲಿರುವ ವಾಯುಸಂಚಾರಮಾರ್ಗವಾದ ಸುಷುಮ್ನಾನಾಡಿಯನ್ನು ಬಿಟ್ಟು ಉಳಿದ ಎಪ್ಪತ್ತೆರಡು ನಾಡಿಗಳಲ್ಲಿ ವಾಯುವನ್ನು ಸಂಚರಿಸದಂತೆ ಮಾಡಿ, ಜಗತ್ಸಂಹಾರಕರ್ತನಾದುದರಿಂದ ಹೃನ್ನಾಮಕನಾದ ನಾರಾಯಣನಲ್ಲಿಯೇ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸಿ, ತನ್ನ ದೇಹದಲ್ಲಿರುವ ಪ್ರಾಣ ವಾಯುವನ್ನು ಸುಷುಮ್ನಾನಾಡಿಯ ಮಾರ್ಗವಾಗಿ

| |
|---|
| ಬ್ರಹ್ಮರಂಧ್ರಕ್ಕೆ ತಂದಿಟ್ಟು, ಅಖಂಡಸ್ಮೃತಿರೂಪಯೋಗಧಾರಣೆಯಲ್ಲಿಯೇ ನಿರತನಾಗಿ 'ಓಂ' ಎಂಬ ಏಕಾಕ್ಷರ ವಾಚ್ಯನಾದ ಪರಬ್ರಹ್ಮನನ್ನು ಓಂಕಾರದಿಂದ ನಿರ್ದೇಶಮಾಡಿ, ಅದರ ಅರ್ಥವಾದ ಬ್ರಹ್ಮನಾಗಿರುವ ನನ್ನನ್ನು ಧ್ಯಾನಿಸುತ್ತ ಯಾವಾತನು ದೇಹಬಿಟ್ಟು ಪ್ರಯಾಣ ಮಾಡುವನೋ ಅಂತಹವನು ಉತ್ತಮಗತಿಯನ್ನು ಹೊಂದುವನು. |
| ಅನನ್ಯ ಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ<br>ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥8-14॥ |
| 14. ಅಂತ್ಯಕಾಲದಲ್ಲಿ ನನ್ನ ಸ್ಮರಣೆಯು ನಿರಂತರಾಭ್ಯಾಸದಿಂದಲೇ ಬರತಕ್ಕುದೇ ಹೊರತು ಬೇರೆ ಉಪಾಯದಿಂದ ಬರಲಾರದೆಂದು ಸ್ಪಷ್ಟವಾಗಿ ಹೇಳುತ್ತಾನೆ:- ಪಾರ್ಥ! ಯಾವಾಗಲೂ ಇತರ ವಿಷಯಗಳಲ್ಲಿ ಮನಗೊಡದೆ ಯಾವಾತನು ನಿರಂತರವೂ ನನ್ನನ್ನು ಸ್ಮರಿಸುತ್ತಾನೆಯೋ, ಸತತ ಅಂತಹ ಉಪಾಯವನ್ನೇ ಆಚರಿಸುತ್ತಿರುವ, ಸಂಪೂರ್ಣ ಸಾಧನಸಂಪನ್ನನಾದ ಜ್ಞಾನಿಗೆ ಅಂತ್ಯಕಾಲದಲ್ಲಿ ನಾನು ಅನಾಯಾಸವಾಗಿ ಸ್ಮರಣೆಗೋಚರನಾಗುವೆನು. |
| ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಂ<br>ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ॥8-15॥ |
| 15. ಪೂರ್ವೋಕ್ತ ಪರಮಗತಿಯನ್ನು ವಿವರಿಸುತ್ತಾನೆ:- ಜ್ಞಾನಿಗಳು ನನ್ನನ್ನು ಹೊಂದಿದಮೇಲೆ ಪರಮಾಂ ಸಿದ್ಧಿಂ=ಮೋಕ್ಷವನ್ನು ಹೊಂದುವರು. ಆದಕಾರಣ ದುಃಖದಬೀಡು, ಅನಿತ್ಯವೂ ಆದ ಜನ್ಮವನ್ನು ಹೊಂದುವುದಿಲ್ಲ. (ವೈಕುಂಠಾದಿ ಮುಕ್ತಲೋಕಗಳಲ್ಲಿ ನೈಜಸುಖವನ್ನು ಅನುಭವಿಸುತ್ತ ಪರಮಾತ್ಮನ ಸೇವೆ ಮಾಡಿಕೊಂಡಿರುವರೆಂದು ತಾತ್ಪರ್ಯ.) |
| ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ<br>ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ॥8-16॥ |
| 16. ಸ್ವಾಮೀ! ಬ್ರಹ್ಮಾದಿ ಇತರ ದೇವತೆಗಳನ್ನು ಹೊಂದಿದವರಿಗೂ ಕೂಡ ಪುನರ್ಜನ್ಮವು ಬರುವುದಿಲ್ಲ. ಅಂದ ಬಳಿಕ ನಿನ್ನನ್ನು ಹೊಂದಿದವರ ಆಧಿಕ್ಯವೇನು? ಎಂದರೆ ಭಗವಂತನು ಹೇಳುತ್ತಾನೆ:- ಅರ್ಜುನ! [1] 'ಮೇರುಪರ್ವತದಲ್ಲಿರುವ ಬ್ರಹ್ಮಸದನ ಮತ್ತು ಅದರ ಕೆಳಗಿರುವ ಲೋಕಗಳಲ್ಲಿರುವ ಜನರು ತಿರುಗಿ ಭೂಲೋಕದಲ್ಲಿ ಜನ್ಮತಾಳುವರು. ಕುಂತೀ ಕುಮಾರ! ನನ್ನನ್ನು ಹೊಂದಿದಮೇಲೆ ತಿರುಗಿ ಈ ಭೂಲೋಕದಲ್ಲಿ ಜನ್ಮ ಬರುವುದಿಲ್ಲ. |

**ಸಹಸ್ರಯುಗಪರ್ಯಂತಮಹರ್ಯದ್ಬ್ರಹ್ಮಣೋ ವಿದುಃ**

**ರಾತ್ರಿಂ ಯುಗಸಹಸ್ರಾಂ ತಾಂ ತೇಽಹೋರಾತ್ರ ವಿದೋ ಜನಾಃ॥8-17॥**

**17.** ಈ ವಿಷಯವನ್ನು ಸಮರ್ಥನೆಮಾಡುವುದಕ್ಕಾಗಿ ಇತರ ದೇವತೆಗಳಿಗಿಂತ ತಾನು ಅತಿಶಯಿತ ಮಹಿಮನೆಂದು ತಿಳಿಸಬೇಕಾಗಿದೆ. ಅದಕ್ಕಾಗಿ ಇತರರಿಗೆ ಸಲ್ಲದ, ತನ್ನ ಸೃಷ್ಟಿ ಪ್ರಳಯಾದಿ ಕರ್ತೃತ್ವಮಹಿಮೆಯನ್ನು ಹೇಳಲು ಭಗವಂತನು ಪೀಠಿಕಾ ರಚನೆಮಾಡುತ್ತಾನೆ:- ಇಲ್ಲಿ ಸಹಸ್ರ=ಬಹಳ ಎಂದು ಅರ್ಥವು ವಿವಕ್ಷಿತವು. ಯಾವ ಜನರು 2'ಪರಬ್ರಹ್ಮನ ಹಗಲು ಬಹುಯುಗಗರ್ಭಿತವಾದ 3ದ್ವಿಪರಾರ್ಧಾತ್ಮಕ ಕಾಲವೆಂದು ತಿಳಿಯುವರೋ ಮತ್ತು ಪರಬ್ರಹ್ಮನ ರಾತ್ರಿ ಕಾಲವನ್ನು ಬಹುಯುಗಗಳನ್ನೊಳಗೊಂಡ ದ್ವಿಪರಾರ್ಧಾತ್ಮಕ ಕಾಲವೆಂದೂ ತಿಳಿಯುವರೋ ಅವರು ಹಗಲು ರಾತ್ರಿಗಳನ್ನು ತಿಳಿದ ಜನರು (ಪರಬ್ರಹ್ಮನು ನಿರ್ವಿಕಾರನು ಮತ್ತು ಅನಾದಿ ನಿತ್ಯನೂ ಆಗಿರುವುದರಿಂದ ಅವನಿಗೆ ಕಾಲಾವಧಿಯಿಲ್ಲ. ಆದರೂ ಅವನು ಸೃಷ್ಟ್ಯಾದಿ ವ್ಯಾಪಾರಮಾಡುವ ಕಾಲ, ಸೃಷ್ಟ್ಯಾದಿಗಳನ್ನು ಮಾಡದಿರುವ ಅವಸ್ಥೆ ಇವುಗಳನ್ನು ಅವಧಿಯಾಗಿಟ್ಟುಕೊಂಡು ಆತನಿಗೆ ಹಗಲು ರಾತ್ರಿ ಎಂದು ಉಕ್ತವಾಗಿದೆಯೆಂದು ತಿಳಿಯಬೇಕು.)

1.'ಆಮೇರುಬ್ರಹ್ಮಸದನಾದಾಜನಾನ್ನ ಜನಿರ್ಭುವಿ" ಎಂಬ ಪ್ರಮಾಣವಚನದಿಂದ ಮೇರುಸ್ಥ ಬ್ರಹ್ಮಸದನದ ಮೇಲೆ ಜನೋಲೋಕ- ತಪೋಲೋಕ-ಸತ್ಯಲೋಕಗಳಲ್ಲಿರುವವರಿಗೆ ಪುನ ರ್ಜನ್ಮವಿಲ್ಲವೆಂದು ಸಿದ್ಧಿಸುವುದರಿಂದ ಬ್ರಹ್ಮಭವನಪದಕ್ಕೆ ಮೇರುಸ್ಥಬ್ರಹ್ಮಸದನವೆಂದು ಅರ್ಥಮಾಡಿದೆ. ಆದರೂ ಉಕ್ತ ಪ್ರಮಾಣವಚನದಿಂದಲೇ ಜನಾದಿಲೋಕಸ್ಥರಿಗೂ ಪುನರ್ಜನ್ಮವಿಲ್ಲ ಎಂದು ಸಿದ್ಧಿಸುವುದರಿಂದ ಕೃಷ್ಣನನ್ನು ಹೊಂದಿದವರಿಗೆ ಮಾತ್ರವೇ ಪುನರ್ಜನ್ಮವಿಲ್ಲವೆಂಬುದು ಹೇಗೆಂದರೆ:-ಜನಾದಿ ಲೋಕಸ್ಥಿತಿಮಾತ್ರದಿಂದ ಜನ್ಮಾಭಾವವು ಸಿದ್ಧಿಸುವುದಿಲ್ಲ. ಮತ್ತೇನೆಂದರೆ ಜನಾದಿಲೋಕಗಳಲ್ಲಿರುವ ಶ್ರೀಕೃಷ್ಣನನ್ನು ಹೊಂದಿದವರಿಗೇನೆ ಪುನರ್ಜನ್ಮವಿಲ್ಲವೆಂದು ಉಕ್ತವಚನಕ್ಕೆ ಅಭಿಪ್ರಾಯವನ್ನು ಹೇಳಬೇಕು. 'ತಥಾಪ್ಯಾಭಾವಸ್ಸರ್ವತ್ರ ಪ್ರಾಪ್ಯೈವ ವಸುದೇವಜಂ' (ಆಭಾವಃ=ಜನನಾಭಾವ ಇತ್ಯರ್ಥಃ) ಇತ್ಯಾದಿ ಪ್ರಮಾಣವು ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಆದಕಾರಣ ಪ್ರಕೃತಶ್ಲೋಕದ ಬ್ರಹ್ಮಭವನಪದಕ್ಕೆ ಮೇರುಪರ್ವತದಲ್ಲಿರುವ ಬ್ರಹ್ಮಸದನ ಎಂದು ಅರ್ಥಮಾಡಿರುವುದು ಯುಕ್ತವೇ ಸರಿ.

2. ಈ ಶ್ಲೋಕದಲ್ಲಿ 'ಬ್ರಹ್ಮಣಃ' ಎಂದು ಹೇಳಿರುವುದರಿಂದ ಚತುರ್ಮುಖಬ್ರಹ್ಮನ ಹಗಲುರಾತ್ರಿಗಳನ್ನು ಹೇಳಿದಂತೆ ತೋರುತ್ತದೆ. ಆದರೂ ಮುಂದಿನ ಶ್ಲೋಕದಲ್ಲಿ ಲಯಕಾರಣತ್ವವನ್ನು ಹೇಳಿರುವುದರಿಂದ ಅದು ಚತುರ್ಮುಖನಿಗೆ ಸಂಭವಿಸುವುದಿಲ್ಲವಾಗಿ ಪರಮಾತ್ಮನ ಹಗಲು ರಾತ್ರಿ ಎಂಬುದಾಗಿ ಅರ್ಥಮಾಡುವುದೇ ಸಂದರ್ಭೋಚಿತವೆಂದು ತಿಳಿಯಬೇಕು.

3. ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದುದಿನ, ಅಂತಹ **360** ದಿನಗಳು ದೇವಮಾನದ ಒಂದುವರ್ಷ. ಆಂತಹ ಹನ್ನೆರಡುಸಾವಿರ ವರ್ಷಗಳು ನಾಲ್ಕು ಯುಗಗಳು. ಅಂತಹ ಒಂದುಸಾವಿರ ಚತುರ್ಯುಗಗಳು ಚತುರ್ಮುಖ ಬ್ರಹ್ಮನಿಗೆ ಒಂದು ಹಗಲು. ಅಷ್ಟೇ ಕಾಲವು ರಾತ್ರಿಯು; ಇಂತಹ ಮೂವತ್ತು ಅಹೋರಾತ್ರಿಗಳು ಒಂದು ಮಾಸ. ಅಂತಹ ಹನ್ನೆರಡು ಮಾಸಗಳು ಒಂದು ವರ್ಷ. ಚತುರ್ಮುಖನಿಗೆ ಆಂತಹ ನೂರು ವರ್ಷಗಳು ಆಯುಸ್ಸು. ಈ ಆಯುಸ್ಸಿಗೆ ಪರವೆಂದು ಹೆಸರು. ಅದರ ಪ್ರಥಮಾರ್ಧವು ಐವತ್ತು ವರ್ಷ. ಉಳಿದ ಐವತ್ತು ವರ್ಷಗಳು ದ್ವಿತೀಯಾರ್ಧವೆನಿಸುವುದು. ಈಗ ಚತುರ್ಮುಖನ ದ್ವಿತೀಯಪರಾರ್ಧವೇ ನಡೆಯುತ್ತಿದೆ. ಈ ರೀತಿ ಮನುಷ್ಯಮಾನ, ದೇವಮಾನ, ಬ್ರಹ್ಮಮಾನಗಳ ಗಣನೆಯನ್ನು ತಿಳಿಯಬೇಕು. ಒಟ್ಟಿನಲ್ಲಿ ಮನುಷ್ಯಮಾನದ ಎಂಟುನೂರು ಅರುವತ್ತು ನಾಲ್ಕು ಕೋಟ **(8,64,00,00,000).** ವರ್ಷಗಳು ಚತುರ್ಮುಖನಿಗೆ ಒಂದು ದಿವಸ ಇಂತಹ ಮುನ್ನೂರು ಅರುವತ್ತು ದಿನಗಳು ಬ್ರಹ್ಮನಿಗೆ ಒಂದು ವರ್ಷ. ಇಂತಹ ವರ್ಷಗಳು ಒಂದುನೂರು ಆದರೆ ದ್ವಿಪರಾರ್ಧವಾಗುವುದೆಂದು ತಿಳಿಯಬೇಕು.

**ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ**

**ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ॥8-18॥**

18. ಬ್ರಹ್ಮದೇವನಿಗೆ ಹಗಲು ಪ್ರಾಪ್ತವಾದಾಗ=ಮಹಾಪ್ರಳಯವಾದ ಮೇಲೆ ಸೃಷ್ಟಿ ಕಾಲದಲ್ಲಿ ಅವ್ಯಕ್ತನಾಮಕ ಭಗವಂತನಿಂದ ಪ್ರೇರಿತವಾಗಿ ಅವ್ಯಕ್ತವೆಂಬ ಪ್ರಕೃತಿಯು ಪರಿಣತವಾಗಿ ಸಕಲ ಕಾರ್ಯಗಳೂ ಹುಟ್ಟುತ್ತವೆ. ರಾತ್ರಿ ಬಂದಾಗ=ಮಹಾಪ್ರಳಯಾರಂಭಕಾಲದಲ್ಲಿ ಆ ಕಾರ್ಯ ಪದಾರ್ಥಗಳೆಲ್ಲವೂ ಅವ್ಯಕ್ತನಾಮಕ ತತ್ವದಲ್ಲಿ ಲೀನವಾಗಿ=ತಿರುಗಿ ಉಪಾದಾನವಾದ ಪ್ರಕೃತಿರೂಪವನ್ನೇ ಹೊಂದಿ, ತನ್ನ ಅನುಗ್ರಹವಿಲ್ಲದೆ ಯಾರಿಗೂ ಗೋಚರನಾಗದಿರುವ ಕಾರಣ ಅವ್ಯಕ್ತ ನಾಮಕನಾದ ಭಗವಂತನಲ್ಲಿಯೇ ಲಯವನ್ನು ಹೊಂದುತ್ತದೆ.

**ಭೂತಗ್ರಾಮಃ ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ**
**ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ॥8-19॥**

19. ಪಾರ್ಥ! ಹೀಗೆ ಉತ್ಪತ್ತಿ ವಿನಾಶಶಾಲಿಯಾಗಿರುವ ಈ ಚರಾಚರ ಪ್ರಪಂಚವು ಪರಬ್ರಹ್ಮನ-ಪ್ರತಿ ಹಗಲಿನಲ್ಲಿಯೂ (ಪ್ರತಿ ಸೃಷ್ಟಿಕಾಲದಲ್ಲಿಯೂ) ಹುಟ್ಟಿ ಪ್ರತಿರಾತ್ರಿಕಾಲದಲ್ಲಿಯೂ (ಪ್ರತಿ ಮಹಾಪ್ರಳಯಕಾಲದಲ್ಲಿಯೂ) ಭಗವಂತನ ಪ್ರೇರಣಾನುಸಾರವಾಗಿ ಲಯವನ್ನು ಹೊಂದುತ್ತಲೇ ಇರುತ್ತದೆ. ಹೀಗೆ ಭಗವಂತನು ಸೃಷ್ಟಿ ಲಯಗಳನ್ನು ಅನಾದ್ಯನಂತ ಕಾಲಗಳಲ್ಲಿ ಪ್ರವಾಹರೂಪವಾಗಿ ನಡೆಸುತ್ತಲೇ ಇರುವನೆಂದು ತಿಳಿಯಬೇಕು.

**ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ**
**ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ॥8-20॥**

20. ಭಗವಂತನಿಗೂ ಅಹೋರಾತ್ರಿಗಳುಂಟೆಂದು ಹೇಳಿರುವುದರಿಂದ ಜಗತ್ತಿಗಿರುವಂತೆ ಅವನಿಗೂ ಇತರರಿಂದ ಉತ್ಪತ್ತಿ ಲಯಗಳುಂಟೆ? ಎಂದರೆ, ಇಲ್ಲ ಎಂದು ಭಗವಂತನು ಹೇಳುತ್ತಾನೆ:- ಭಗವಂತನಾದರೋ ಉತ್ಪತ್ತಿ ನಾಶಗಳುಳ್ಳ ಚರಾಚರ ಪ್ರಪಂಚ ಸಮೂಹಕ್ಕಿಂತ ವಿಲಕ್ಷಣನು, ಸ್ವತಂತ್ರನು, ಉತ್ತಮನು ಮತ್ತು ಅನಾದಿಯೂ ಆಗಿರುವನು. ಅಂತಹ ಮಹಿಮೆಯುಳ್ಳ ಅವನು ಸಕಲ ಪ್ರಾಣಿಗಳು ನಷ್ಟವಾದರೂ ನಾಶಹೊಂದುವುದಿಲ್ಲ.

**ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂ ಗತಿಂ**
**ಯಂ ಪ್ರಾಪ್ಯ ನ ನಿವರ್ತಂತೇ ತದ್ಧಾಮ ಪರಮಂ ಮಮ॥8-21॥**

21. ಅವ್ಯಕ್ತನಾಮಕ ಪರಮಾತ್ಮನು ಹೀಗೆ ಯಾವ ರೀತಿಯಾಗಿಯೂ ನಾಶ ಹೊಂದುವುದಿಲ್ಲವಾದ ಕಾರಣ 'ತಸ್ಮಾದಕ್ಷರಂ' ಇತ್ಯಾದಿ ಶ್ರುತಿಗಳಲ್ಲಿ ಅಕ್ಷರನಾಮಕನಾಗಿ ಹೇಳಿಸಿಕೊಳ್ಳಲ್ಪಟ್ಟಿರುವನು. ಅಂತಹ ಪರಮಾತ್ಮನನ್ನು ಪರಮ ಪ್ರಾಪ್ಯನೆಂದು ಜ್ಞಾನಿಗಳು ಹೇಳುತ್ತಾರೆ. ಏಕೆಂದರೆ:-

ಸಾಧನಸಂಪನ್ನರಾದ ಅಧಿಕಾರಿಗಳು ಯಾವಾತನನ್ನು ಹೊಂದಿದ ಬಳಿಕ ತಿರುಗಿ ಜನನಮರಣಾತ್ಮಕ ಸಂಸಾರಕ್ಕೆ ಹಿಂದಿರುಗುವುದಿಲ್ಲವೋ ಅದೇ ನನ್ನ (ಭಗವಂತನ) ಸ್ವರೂಪವು. ಪರಮಾತ್ಮನ ಪ್ರಾಪ್ತಿಯು ಸಂಸಾರ ನಿವರ್ತಕವಾಗುವುದರಿಂದ ಅವನೇ ಪರಮ ಪ್ರಾಪ್ಯನೆಂದು ಭಾವ)

**ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ**
**ಯಸ್ಯಾಂತಃಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಂ॥8-22॥**

22. 'ಭಕ್ತಾ ಯುಕ್ತೋ ಯೋಗಬಲೇನ ಚೈವ' ಎಂಬಲ್ಲಿ ಯೋಗಬಲಾದಿ ಸಾಧನೆಗಳ ಸಹಿತವಾಗಿ ಭಕ್ತಿಯು ಭಗವತ್ಪ್ರಾಪಿ ಸಾಧನವೆಂದು ಹೇಳಿದೆ. ಅದರಿಂದ ಇತರ ಸಾಧನಗಳಂತೆ ಭಕ್ತಿಯೂ ಸಾಮಾನ್ಯ ಸಾಧನವೆಂದು ತೋರುತ್ತದೆ. ಅದು ಸರಿಯಲ್ಲ; ಭಕ್ತಿಯು ಪರಮಸಾಧನವೆಂಬ ಅಭಿಪ್ರಾಯವನ್ನು ತಿಳಿಸುತ್ತಾನೆ:- ಪ್ರಾಣಿಗಳು ಯಾವ ಪರಮಾತ್ಮನಲ್ಲಿ ಆಶ್ರಿತವಾಗಿವೆಯೋ, ಯಾರಿಂದ ಈ ಜಗತ್ತು ವ್ಯಾಪಿಸಲ್ಪಟ್ಟಿದೆಯೋ ಅಂತಹ ಪರಮಪುರುಷನಾದ ಭಗವಂತನು ಇತರ ದೇವತೆಗಳಿಗೆ ಸಲ್ಲದ, ಸರ್ವೋತ್ತಮತ್ವಜ್ಞಾನಪೂರ್ವಕವಾದ ಭಕ್ತಿಯಿಂದಲೇ ಪ್ರಾಪ್ಯನು.

**ಯತ್ರ ಕಾಲೇ ತ್ವನಾವೃತ್ತಿಮಾವೃತ್ತಿಂ ಚೈವ ಯೋಗಿನಃ**
**ಪ್ರಯಾತಾ ಯಾಂತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ॥8-23॥**

23. ಭಗವಂತನನ್ನು ಹೊಂದಿದ ಜ್ಞಾನಿಗಳಿಗೆ ಪುನರ್ಜನ್ಮವಿಲ್ಲ; ಅನ್ಯ ದೇವತೆಗಳನ್ನು ಹೊಂದಿದವರಿಗೆ ಪುನರ್ಜನ್ಮವಿದೆ ಎಂದು ಹೇಳಿದುದು ಸರಿಯಷ್ಟೆ: ಇವರಿಬ್ಬರೂ ಒಂದೇ ಮಾರ್ಗದಲ್ಲಿ ಪ್ರಯಾಣಮಾಡುವರೆ? ಅಥವಾ ಫಲಭೇದಾನುಸಾರವಾಗಿ ಇವರಿಗೆ ಭಿನ್ನ ಮಾರ್ಗಗಳಿವೆಯೆ? ಹಾಗಿದ್ದರೆ ಅವು ಯಾವುವು? ಆ ಮಾರ್ಗಗಳಿಗೆ ಅಧಿಷ್ಠಾನದೇವತೆಗಳಾರು? ಎಂದರೆ, ಅವುಗಳನ್ನೆಲ್ಲಾ ಹೇಳುತ್ತೇನೆಂದು ಪ್ರತಿಜ್ಞೆ ಮಾಡುತ್ತಾನೆ:- (ಫಲತಾರತಮ್ಯಾನುಸಾರವಾಗಿ ಈ ಯೋಗಿಗಳಿಗೆ ಮಾರ್ಗಗಳೂ ಬೇರೆಬೇರೆಯಾಗಿವೆ. ಅವರಲ್ಲಿ ಕರ್ಮಯೋಗಿಗಳು ಒಂದು ಮಾರ್ಗದಲ್ಲಿ ಪ್ರಯಾಣಮಾಡಿ ಪುನಃ ಹಿಂತಿರುಗಿ ಜನ್ಮಾಂತರವನ್ನು ಹೊಂದುವರು. ಜ್ಞಾನಯೋಗಿಗಳು ಇನ್ನೊಂದು ಮಾರ್ಗದಲ್ಲಿ ಹೊರಟು ಪರಬ್ರಹ್ಮನನ್ನು ಹೊಂದಿ ಮುಕ್ತರಾಗುವರು; ಹಿಂತಿರುಗುವುದಿಲ್ಲ. ಈ ಎರಡೂ ಮಾರ್ಗಗಳಲ್ಲಿಯೂ ಕಾಲಾಭಿಮಾನಿದೇವತೆಗಳು ಸನ್ನಿಹಿತರಾಗಿರುವರು. ಆದಕಾರಣ ಆ ಎರಡುಮಾರ್ಗಗಳೂ ಇಲ್ಲಿ ಕಾಲಶಬ್ದದಿಂದ ಉಕ್ತವಾಗಿವೆ.) ಭರತ ಕುಲಶೇಖರನಾದ ಪಾರ್ಥ! ಜ್ಞಾನ ಯೋಗಿಗಳೂ,

ಕರ್ಮಯೋಗಿಗಳೂ ಯಾವಯಾವ ಕಾಲಾಭಿಮಾನಿಗಳಾದ ದೇವತೆಗಳ ಸನ್ನಿಧಾನವುಳ್ಳ ಮಾರ್ಗದಲ್ಲಿ ಪ್ರಯಾಣಮಾಡಿದವರಾಗಿ, ಜ್ಞಾನಿಗಳು ಮುಕ್ತಿಯನ್ನೂ, ಕರ್ಮಿಗಳು ತಿರುಗಿ ಸಂಸಾರವನ್ನೂ ಹೊಂದುವರೋ ಆಯಾಯಾ ಕಾಲಾಭಿಮಾನಿದೇವತೆಗಳನ್ನು ಹೇಳುವೆನು.

**ಅಗ್ನಿ ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಂ**

**ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ॥8-24॥**

**24.** ಅಗ್ನಿದೇವತೆ, ಅರ್ಚಿನಾಮಕದೇವತೆ (ಇವರಿಬ್ಬರೂ ಪ್ರಧಾನಾಗ್ನಿಯ ಮಕ್ಕಳು, ಒಂದೇ ಸ್ಥಾನದಲ್ಲಿರತಕ್ಕವರು) ಹಗಲಿನ ಅಭಿಮಾನಿದೇವತೆ, ಶುಕ್ಲ ಪಕ್ಷಾಭಿಮಾನಿದೇವತೆ ಆರುಮಾಸಗಳ ಅಭಿಮಾನಿದೇವತೆ, ಉತ್ತರಾಯಣಾಭಿಮಾನಿ ದೇವತೆ ಇವರುಗಳಿಂದ ಪಾಲಿಸಲ್ಪಡುತ್ತಿರುವ ಮಾರ್ಗದಲ್ಲಿ ಕ್ರಮವಾಗಿ ಪ್ರಯಾಣ ಮಾಡಿದ ಬ್ರಹ್ಮಜ್ಞಾನಿಗಳಾದ ಜನರು ಪರಬ್ರಹ್ಮನನ್ನು ಹೊಂದುವರು. ಅವರು ತಿರುಗಿ ಸಂಸಾರಕ್ಕೆ ಹಿಂದಿರುಗುವುದಿಲ್ಲ.

**ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ**

**ತತ್ರ ಚಾಂದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ॥8-25॥**

**25.** ಮೇಘಾಭಿಮಾನಿದೇವತೆ, ರಾತ್ರ್ಯಾಭಿಮಾನಿದೇವತೆ, ಕೃಷ್ಣಪಕ್ಷಾಭಿಮಾನಿದೇವತೆ, ದಕ್ಷಿಣಾಯನದ ಆಷಾಢಾದಿ ಆರುಮಾಸಗಳಿಗಭಿಮಾನಿದೇವತೆ, ದಕ್ಷಿಣಾಯನಾಭಿಮಾನಿದೇವತೆ ಇವರುಗಳಿಗೆ ಅಧಿಷ್ಠಾನವಾದ ಮಾರ್ಗದಲ್ಲಿ ಕ್ರಮವಾಗಿ ಪ್ರಯಾಣಮಾಡಿದ ಕರ್ಮಯೋಗಿಗಳು ಚಂದ್ರಾದಿಗಳ ನಿವಾಸಸ್ಥಾನವಾದ ತೇಜೋಮಯ ಸ್ವರ್ಗಾದಿಲೋಕಗಳನ್ನು ಹೊಂದಿ ಅಲ್ಲಲ್ಲಿ ತಮ್ಮ ಪುಣ್ಯಫಲವಾದ ಸುಖವನ್ನು ಅನುಭವಿಸಿದ ನಂತರ ತಿರುಗಿ ಭೂಲೋಕದಲ್ಲಿ ಜನ್ಮತಾಳಲು ಹಿಂತಿರುಗುವರು.

**ಶುಕ್ಲ ಕೃಷ್ಣ ಗತೀ ಹ್ಯೇತೇ ಜಗತಃ ಶಾಶ್ವತೇ ಮತೇ**

**ಏಕಯಾ ಯಾತ್ಯನಾವೃತ್ತಿಮನ್ಯಯಾऽऽವರ್ತತೇ ಪುನಃ॥8-26॥**

**26.** ಹೀಗೆ ಉಕ್ತವಾದ ಉತ್ತರಾಯಣ ದಕ್ಷಿಣಾಯನ ಮಾರ್ಗಗಳೆರಡೂ ಜ್ಞಾನಯೋಗಿ ಮತ್ತು ಕರ್ಮಯೋಗಿಗಳಿಗೆ ಶಾಶ್ವತವಾಗಿರುವುವು. ಎಂದರೆ, ಜ್ಞಾನ ಯೋಗಿಗಳು ಉಕ್ತವಾದ ಉತ್ತರಾಯಣಮಾರ್ಗದಲ್ಲಿಯೇ ಕ್ರಮವಾಗಿ ಹೋಗಿ ಮೋಕ್ಷಭಾಗಿಗಳಾಗಬೇಕು. ಕರ್ಮಯೋಗಿಗಳು ದಕ್ಷಿಣಾಯನಮಾರ್ಗದಲ್ಲಿಯೇ ಉಕ್ತ ಕ್ರಮದಿಂದ ಪ್ರಯಾಣಮಾಡಿ ಹಿಂತಿರುಗಬೇಕು ಎಂಬುದು ಜ್ಞಾನಿಸಮ್ಮತವು. ಒಂದು ಮಾರ್ಗ(ಉತ್ತರಾಯಣ)ದಿಂದ

ಹೋದವನು (ಜ್ಞಾನಯೋಗಿಯು) ತಿರುಗಿ ಸಂಸಾರಕ್ಕೆ ಹಿಂದಿರುಗುವುದಿಲ್ಲ. ಮತ್ತೊಂದು ಮಾರ್ಗ(ದಕ್ಷಿಣಾಯನ)ದಿಂದ ಹೊರಟವನು (ಕರ್ಮಯೋಗಿಯು) ತಿರುಗಿ ಈ ಲೋಕಕ್ಕೆ ಬರುತ್ತಾನೆ.

ನೈತೇ ಸೃತೀ ಪಾರ್ಥ ಜಾನನ್ ಯೋಗೀ ಮುಹ್ಯತಿ ಕಶ್ಚನ

ತಸ್ಮಾತ್ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ॥8-27॥

27. ಮಾರ್ಗದ್ವಯೋಕ್ತಿಯ ಫಲವನ್ನು ಹೇಳುತ್ತಾನೆ:- ಪಾರ್ಥ! ಈ ಎರಡುಮಾರ್ಗಗಳನ್ನೂ ತಿಳಿದು ಕರ್ಮಜ್ಞಾನಗಳೆಂಬ ಉಪಾಯವುಳ್ಳ ಯಾವನೂ ಭಗವದ್ವಿಸ್ಮರಣೆಯೆಂಬ ಮೋಹವನ್ನು ಹೊಂದುವುದಿಲ್ಲ. ಹೀಗೆ ಯೋಗವು ಪುರುಷಾರ್ಥಸಾಧನವಾದ ಕಾರಣ ಅರ್ಜುನ! ನೀನು ಯಾವಾಗಲೂ ಭಗವದ್ಜ್ಞಾನ ಭಕ್ತಿಪೂರ್ವಕವಾಗಿ ಫಲಾಶೆಯನ್ನು ಬಿಟ್ಟು ಪರಮಾತ್ಮನು ತೃಪ್ತಿ ಹೊಂದಲೆಂಬ ಭಾವನೆಯಿಂದ ನಿನ್ನ ವರ್ಣಾಶ್ರಮವಿಹಿತ ಕರ್ಮಾನುಷ್ಠಾನರೂಪವಾದ ಉಪಾಯದಲ್ಲಿ ನಿರತನಾಗು.

ವೇದೇಷು ಯಜ್ಞೇಷು ತಪಸ್ಸು ಚೈವ ದಾನೇಷು ಯುಣ್ಯಫಲಂ ಪ್ರದಿಷ್ಟಂ

ಅತ್ಯೇತಿ ತತ್ಸರ್ವಮಿದಂ ವಿದಿತ್ವಾ ಯೋಗೀ ಪರಂ ಸ್ಥಾನಮುಪೈತಿ ಚಾದ್ಯಂ॥8-28॥

28. ವೇದಾಧ್ಯಯನ, ಜ್ಯೋತಿಷ್ಟೋಮಾದಿಯಾಗಗಳು, ಕೃಚ್ಛ್ರಚಾಂದ್ರಾಯಣಾದಿ ತಪಸ್ಸು ಮತ್ತು ಸತ್ಪಾತ್ರರಿಗೆ ನ್ಯಾಯಾರ್ಜಿತವಿತ್ತ ದಾನ ಇವುಗಳಿಗೆ ಯಾವ ಪುಣ್ಯಫಲವು ಶಾಸ್ತ್ರದಲ್ಲಿ ಉಕ್ತವಾಗಿದೆಯೋ ಅದಕ್ಕಿಂತಲೂ ಹೆಚ್ಚಾದ ಫಲವನ್ನು ಉಕ್ತಜ್ಞಾನೋಪಾಯವಂತನು ಅಧ್ಯಾತ್ಮಾದಿ ಸ್ವರೂಪ, ಭಗವಂತನ ನಿಖಿಲಜಗತ್ಕರ್ತೃತ್ವಾದಿ ಮಹಿಮೆ ಮತ್ತು ಶುಕ್ಲ-ಕೃಷ್ಣ ಮಾರ್ಗ ಮೊದಲಾದ ಉಕ್ತ ವಿಷಯಗಳನ್ನೆಲ್ಲಾ ತಿಳಿಯುವುದರಿಂದಲೇ ಹೊಂದುವನು. ಎಂದರೆ, ಜ್ಞಾನಯೋಗಿಯು ಸನಾತನವು, ಉತ್ತಮವೂ ಆದ ವೈಕುಂಠಾದಿ ಸ್ಥಾನವನ್ನು ಹೊಂದುವನು.

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಅಕ್ಷರಬ್ರಹ್ಮಯೋಗೋ ನಾಮ ಅಷ್ಟಮೋऽಧ್ಯಾಯಃ॥8-[28]॥

## ನವಮೋऽಧ್ಯಾಯಃ॥9-[34]॥

'ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ' ೭-೩೦ ಇತ್ಯಾದಿ ಸಪ್ತಮಾಧ್ಯಾಯದ ಶ್ಲೋಕಗಳಿಂದುಕ್ತವಾದ ಭಗವನ್ಮಹಿಮೆಯು ಈ ಅಧ್ಯಾಯದಲ್ಲಿ ವಿಸ್ತರಿಸಲ್ಪಡುತ್ತದೆ. ಹಾಗಾದರೆ ಸಪ್ತಮಾಧ್ಯಾಯವು ಮುಗಿದ ಕೂಡಲೇ ಈ ಅಧ್ಯಾಯವನ್ನು ಸಂಯೋಜನೆ ಮಾಡುವುದು ಉಚಿತವಲ್ಲವೆ? ಎಂದರೆ ಅಧಿಭೂತಾದಿ ಪದಗಳಿಗೆ ಅರ್ಥವಿವರಣೆ ಮಾಡಿದ ಹೊರತು

ಶ್ಲೋಕಾರ್ಥವಾಗುವುದಿಲ್ಲವಾಗಿ ಎಂಟನೆಯ ಅಧ್ಯಾಯದಲ್ಲಿ ಅಧಿಭೂತಾದಿ ಪದಗಳ ಅರ್ಥವನ್ನು ವಿವರಿಸಬೇಕಾಯಿತು. ಅದರಿಂದ ವಿಶಿಷ್ಟ ಶ್ಲೋಕಾರ್ಥರೂಪವಾದ ಭಗವನ್ಮಹಿಮೆಯು ಸಂಕ್ಷೇಪವಾಗಿ ತಿಳಿದನಂತರ ಅದನ್ನು ವಿಸ್ತರಿಸುವ ಅವಕಾಶವುಂಟಾಯಿತಾದ ಕಾರಣ ಈಗ ಭಗವನ್ಮಹಿಮೆಯನ್ನು ವಿಸ್ತಾರವಾಗಿ ನಿರೂಪಿಸುವುದು ಉಚಿತವೇ ಸರಿ.

ಶ್ರೀ ಭಗವಾನುವಾಚ

**ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ**
**ಜ್ಞಾನಂ ವಿಜ್ಞಾನ ಸಹಿತಂ ಯಜ್ಞಾತ್ವಾ ಮೋಕ್ಷ್ಯಸೇಽಶುಭಾತ್॥9-1॥**

1. ವಿಚಿತ್ರತಮವಾದ ಭಗವನ್ಮಹಿಮೆಯ ಶ್ರವಣದಲ್ಲಿ ಆದರವನ್ನು ಹೆಚ್ಚಿಸುವುದಕ್ಕಾಗಿ ವಕ್ಷ್ಯಮಾಣವಿಷಯವನ್ನು ಶ್ರೀಕೃಷ್ಣನು ಪ್ರಶಂಸೆಮಾಡುತ್ತಾನೆ:- ಅರ್ಜುನ! ಯಾವ ವಿಷಯವನ್ನು ತಿಳಿಯುವುದರಿಂದ ಅಮಂಗಳಕರವಾದ ಸಂಸಾರ ಬಂಧನದಿಂದ ಬಿಡುಗಡೆಯಾಗುವೆಯೋ ಅಂತಹ ಅತ್ಯಂತ ರಹಸ್ಯವಾದ, ಮುಂದೆ ಹೇಳುವ, ವಿಶೇಷವಾಗಿ ತಿಳಿಯಬೇಕಾದ ಪ್ರಮೇಯವನ್ನೊಳಗೊಂಡ ಜ್ಞಾತವ್ಯಾರ್ಥವನ್ನು ಹೊಟ್ಟೆಕಿಚ್ಚು ಮುಂತಾದ ದೋಷರಹಿತನಾಗಿರುವ ನಿನಗಾಗಿ ಹೇಳುತ್ತೇನೆ. (ಇಲ್ಲಿ 'ಅನಸೂಯವೇ' ಎಂದು ಅರ್ಜುನನಿಗೆ ವಿಶೇಷಣ ಕೊಟ್ಟಿರುವುದರಿಂದ ಅಸೂಯಾದಿ ದೋಷರಹಿತನೇ ಬ್ರಹ್ಮಜ್ಞಾನಾಧಿಕಾರಿಯೆಂದು ತಿಳಿದು ಬರುತ್ತದೆ.)

**ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಮ್**
**ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಮ್॥9-2॥**

2. ಇಲ್ಲಿ ಹೇಳಿರುವುದು ವಿದ್ಯೆಗಳಲ್ಲೆಲ್ಲಾ ಪ್ರಧಾನವಾದ ವಿದ್ಯೆಯು, ರಹಸ್ಯಗಳಲ್ಲೆಲ್ಲಾ ಮುಖ್ಯವಾದುದು, ಪರಿಶುದ್ಧ ಕರ್ಮವು, ಆದುದರಿಂದಲೇ ಶ್ರೇಷ್ಠವು, ಸಕಲೇಂದ್ರಿಯಗಳಿಗೂ ಪ್ರೇರಕನಾಗಿ ಅಲ್ಲಿ ಸಂನಿಹಿತನಾಗಿರುವುದರಿಂದ ಪ್ರತ್ಯಕ್ಷನೆನಿಸಿದ ಭಗವಂತನ ದರ್ಶನಮಾಡುವುದಕ್ಕೆ ಸಾಧನವು, ಸರ್ವಧಾರಕನಾದ ಭಗವಂತನಿಗೆ ಪ್ರೀತಿಕರವು, ಅಕ್ಷಯಮೋಕ್ಷಫಲಕವು. ಮತ್ತು ಸಾಧಿಸುವುದಕ್ಕೆ ಬಹು ಸುಲಭವೂ ಆಗಿದೆ. ಅಂತಹುದನ್ನು ನಿನಗೆ ಹೇಳುವೆನು; ಶ್ರದ್ಧೆಯಿಂದ ಕೇಳು.

**ಅಶ್ರದ್ಧಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ**
**ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯು ಸಂಸಾರವರ್ತ್ಮನಿ॥9-3॥**

3. ಸ್ವಾಮಿ! ಅಂತಹ ಮಹಾಮಹಿಮೆಯಿಂದ ಕೂಡಿದ ಮೋಕ್ಷಸಾಧಕವಾದ ವಿದ್ಯೆಯು ಸುಲಭವಾಗಿ ಸಂಪಾದಿಸಲು ಅರ್ಹವಾದುದಾದರೆ ಸರ್ವರೂ ಅದನ್ನೆ ಆಚರಿಸಿ ಏಕೆ ಮುಕ್ತರಾಗಲಿಲ್ಲ? ಎಂದರೆ, ಭಗವಂತನು ಹೇಳುತ್ತಾನೆ:- ಶತ್ರುಸಂಹಾರಕನಾದ ಅರ್ಜುನ! ಭಗವದ್ವಿಷಯಕವಾದ ಈ ಜ್ಞಾನವು ಪುರುಷಾರ್ಥ ಸಾಧನವೆಂಬುದರಲ್ಲಿ ಶ್ರದ್ಧೆಯಿಲ್ಲದ ಜನರು ನನ್ನನ್ನು ಹೊಂದದೆ ಜನನ ಮರಣ ಪ್ರವಾಹರೂಪವಾದ ಸಂಸಾರಮಾರ್ಗದಲ್ಲಿಯೇ ಪ್ರವರ್ತಿಸಿ ಸಂಸಾರದಲ್ಲಿಯೇ ತೊಳಲುತ್ತಿರುವರು.

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ

ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ॥9-4॥

4. ಸಾಮಾನ್ಯ ಜ್ಞಾತವ್ಯ (ಜ್ಞಾನ)ವನ್ನು ನಿರೂಪಿಸುವನು:- ಪಾರ್ಥ! ಈ ಚರಾಚರಾತ್ಮಕ ಪ್ರಪಂಚವು ಸೂಕ್ಷ್ಮದೇಹವುಳ್ಳ ನನ್ನಿಂದ ವ್ಯಾಪಿಸಲ್ಪಟ್ಟಿದೆ. ಆದರೂ ನಾನು ಅವ್ಯಕ್ತನಾಗಿರುವುದರಿಂದ ಜಗತ್ತಿಗೆ ಗೋಚರವಾಗುವುದಿಲ್ಲ. ಜೀವ ಜಡಾತ್ಮಕವಾದ ಸಕಲ ಪದಾರ್ಥಗಳೂ ನನ್ನನ್ನೇ ಉಪಜೀವಿಸಿಕೊಂಡು ಆಶ್ರಯಿಸಿರುತ್ತವೆ. ನಾನಾದರೋ ಆ ವಸ್ತುಗಳಲ್ಲಿ ಉಪಜೀವಿತನಾಗಿ ಆಶ್ರಯಿಸಿಕೊಂಡಿರುವುದಿಲ್ಲ.

ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಂ

ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ ಭೂತಭಾವನಃ॥9-5॥

5.ಬಿಸಿಯಾಗಿರುವ ಬೆಂಕಿಯು ತಾನಿರುವ ಸ್ಥಳವನ್ನು ಬಿಸಿಮಾಡುವುದು. ತಣ್ಣೀರಿರುವ ಸ್ಥಳವು ತಣ್ಣಗಾಗುವುದು. ಬಿಸಿ ಅಥವಾ ತಣ್ಣಗಿರುವ ಸ್ಥಳದಲ್ಲಿಟ್ಟ ವಸ್ತ್ರಾದಿಗಳೂ ಸಹ ಬಿಸಿಯಾಗುವುದು ಇಲ್ಲವೇ ತಣ್ಣಗಾಗುವುದು. ಹೀಗೆ ಲೋಕದಲ್ಲಿ ಆಶ್ರಯವಸ್ತುವಿನ ಧರ್ಮವು ಆಶ್ರಿತರಲ್ಲಿಯೂ, ಆಶ್ರಿತವಸ್ತುವಿನ ಧರ್ಮವು ಆಶ್ರಯದಲ್ಲಿಯೂ ಸೇರುವುದು (ಆಧಾರಾಧೇಯಗಳಿಗೆ ಪರಸ್ಪರ ಧರ್ಮಸಂಕ್ರಾಂತಿಯು) ಕಂಡು ಬರುತ್ತಿದೆ. ಮತ್ತು ನಾವು ಭೂಮಿಯಲ್ಲಿದ್ದೇವೆ ಮುಂತಾಗಿ ನಾವಿರುವ ಆಶ್ರಯವನ್ನು ತಿಳಿಯುತ್ತಲೂ ಇದ್ದೇವೆ. ಸ್ವಾಮೀ! ಸಕಲ ಭೂತಗಳೂ ನಿನ್ನಲ್ಲಿರುವುದಾದರೆ "ನಾವು ಭಗವಂತನಲ್ಲಿದ್ದೇವೆ' ಎಂಬ ಜ್ಞಾನವು ಬರಲಿ ಮತ್ತು ನಿನ್ನ ಆಶ್ರಯದಲ್ಲಿರುವ ಇತರ ಪ್ರಾಣಿಗಳ ದುಃಖಾದಿಧರ್ಮಗಳು ನಿನಗೂ ನಿನ್ನ ಪೂರ್ಣಸುಖಾದಿಗಳು ಆಶ್ರಿತಜೀವರಿಗೂ ಬರಲಿ ಎಂದು ಶಂಕಿಸಿದರೆ ಭಗವಂತನು ಹೇಳುತ್ತಾನೆ:

| |
|---|
| ಲೋಕರೀತಿಯಿಂದ ಸರ್ವ ಪ್ರಾಣಿಗಳೂ ನನ್ನಲ್ಲಿಲ್ಲ; ನಾನು ಅಸಂಗನು, ಯಾರೂ ನನ್ನನ್ನು ಸ್ಪರ್ಶಮಾಡಲಾರರು. ನನ್ನನ್ನು ಮುಟ್ಟಿ ತಿಳಿಯದಂತೆಯೇ ಪ್ರಾಣಿಗಳಿಗೆ ನಾನು ಆಶ್ರಯನಾಗಿರುವನು. ಆದುದರಿಂದ ಲೋಕದಂತೆ ಪರಸ್ಪರ ಧರ್ಮಸಂಕ್ರಾಂತಿಗೆ ಅವಕಾಶವಿಲ್ಲ. ಅದು ಹೇಗೆಂದರೆ:- ನನಗೆ ಅಂತಹ ಅಚಿಂತ್ಯಾದ್ಭುತ ಸಾಮರ್ಥ್ಯವಿದೆ; ನೋಡು! ಇತರ ಪ್ರಾಣಿಗಳಂತೆ ನನಗೆ ಭಿನ್ನನಶ್ವರದೇಹವಿಲ್ಲ. ದೇಹವೂ ನನ್ನ ಸ್ವರೂಪವೇ ಆಗಿದೆ. ಅದೂ ನನ್ನಂತೆ ಭೂತಾಧಾರತ್ವಾದಿ ಮಹಿಮೆಯುಳ್ಳದ್ದೆಂದು ಉತ್ತರಾರ್ಧದಿಂದ ಹೇಳುತ್ತಾನೆ:- ಪ್ರಾಣಿಗಳ ಸೃಷ್ಟಿಕರ್ತೃವಾದ ನನ್ನ ದೇಹವೂ ನನ್ನಂತೆಯೇ ಸಂಶ್ಲೇಷ ಧರ್ಮಸಂಕ್ರಾಂತ್ಯಾದಿಗಳಿಲ್ಲದೆ ಸಕಲ ಪ್ರಾಣಿಗಳನ್ನೂ ಧರಿಸಿದೆ. ಅಸಂಗವಾಗಿಯೇ ಪ್ರಾಣಿಗಳಲ್ಲಿದೆ. ಲೋಕದ ಪದಾರ್ಥಗಳಂತೆ ನನ್ನ ದೇಹವೂ ಸಂಶ್ಲೇಷವುಂಟಾಗಿ ಒಂದರ ಧರ್ಮವನ್ನು ಮತ್ತೊಂದರಲ್ಲಿ ಬೆರಸುವಂತಹ ಆಶ್ರಯವಲ್ಲ. ಆಶ್ರಿತವೂ ಅಲ್ಲ. ನನ್ನಂತೆಯೇ ವಿಲಕ್ಷಣವು. ಇದೆಲ್ಲವೂ ನನ್ನ ಅಚಿಂತ್ಯಸಾಮರ್ಥ್ಯವೆಂದು ತಿಳಿ. |
| ಯಥಾऽಕಾಶಸ್ಥಿತೋ ನಿತ್ಯಂ ವಾಯುಃ ಸರ್ವತ್ರಗೋ ಮಹಾನ್<br>ತಥಾ ಸರ್ವಾಣಿ ಭೂತಾನಿ ಮತ್ಸ್ಥಾನೀತ್ಯುಪಧಾರಯ॥9-6॥ |
| ಹೇತುನಾನೇನ ಕೌಂತೇಯ ಜಗದಿ ಪರಿವರ್ತತೇ॥9-10॥ |
| 6.ಭಗವಂತನು ಸರ್ವಾಧಾರನಾಗಿದ್ದರೂ ಪರಸ್ಪರ ಧರ್ಮಸಂಪರ್ಕವಾಗುವುದಿಲ್ಲವೆನ್ನುವುದು ಊಹೆಗೂ ನಿಲುಕುವುದಿಲ್ಲವೆಂದರೆ ಉದಾಹರಣೆಯನ್ನು ತೋರಿಸಿ ಭಗವಂತನು ನಿರೂಪಿಸುತ್ತಾನೆ:- ಸರ್ವದಾ ಆಕಾಶದಲ್ಲಿರುವ ಮಹಾವಾಯುವು ಸಕಲ ಸ್ಥಳಗಳಲ್ಲಿದ್ದರೂ ಆಯಾಯಾ ಆಶ್ರಯಸ್ಥಾನದಲ್ಲಿರುವ ಧರ್ಮಗಳ ಸಂಪರ್ಕವನ್ನು ಹೇಗೆ ಹೊಂದುವುದಿಲ್ಲವೋ ಹಾಗೆಯೇ ಸಕಲ ಚರಾಚರ ಪ್ರಪಂಚವು ನನ್ನಲ್ಲಿದ್ದರೂ ನನ್ನ ಧರ್ಮ ಸಂಪರ್ಕವಿಲ್ಲದೆಯೇ ಇರುವುದೆಂದು ತಿಳಿ, (ಕೆಲವು ಸಂದರ್ಭಗಳಲ್ಲಿ ವಾಯುವು ಶೀತಳವಾಗಿಯೂ, ಉಷ್ಣವಾಗಿಯೂ, ಸುಗಂಧವಾಗಿಯೂ ಕಂಡು ಬಂದರೂ ಆ ಶೈತ್ಯಾದಿಗಳು ಗಾಳಿಯು ತನ್ನ ಸಂಗಡ ತಂದ ಜಲ, ತೇಜಸ್ಸು, ಪೃಥಿವೀ ಇವುಗಳ ಭಾಗದಲ್ಲಿರುವ ಗುಣಗಳೇ ಹೊರತು ಗಾಳಿಗೆ ಸಂಬಂಧಿಸಿದವುಗಳಲ್ಲವೆಂದು ತಿಳಿಯಬೇಕು.) |
| ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಂ<br>ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಂ॥9-7॥ |

7. ಕೌಂತೇಯ! ಪ್ರಳಯಕಾಲದಲ್ಲಿ ಸರ್ವಜೀವಜಡಾತ್ಮಕ ಪದಾರ್ಥಸಮೂಹವೂ ನನ್ನ ಅಧೀನವಾದ ಪ್ರಕೃತಿಯನ್ನು ಸೇರಿ ಲೀನವಾಗುತ್ತದೆ. (ಜೀವರು ಚೇತನ ಪ್ರಕೃತಿಯಲ್ಲಿಯೂ, ಜಡಗಳು ಸತ್ವಾದಿಗುಣಾತ್ಮಕ ಜಡ ಪ್ರಕೃತಿಯಲ್ಲಿಯೂ ಲಯ ಹೊಂದುವುವೆಂದು ವಿವೇಚನೆಯು) ಅವುಗಳನ್ನು ನಾನು ಪುನಃ ಸೃಷ್ಟಿ ಕಾಲದಲ್ಲಿ ನಾನಾ ವಿಧವಾಗಿ ಸೃಷ್ಟಿಮಾಡುತ್ತೇನೆ.

**ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ**

**ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್॥9-8॥**

8. ನನ್ನ ಅಧೀನವಾದ ಪ್ರಕೃತಿಯನ್ನು ಸೃಷ್ಟ್ಯುಪ್ರಕರಣ ಪದಾರ್ಥವನ್ನಾಗಿ ಮಾಡಿಕೊಂಡು (ಜಡ ಪ್ರಕೃತಿಯನ್ನು ಉಪಾದಾನವನ್ನಾಗಿಯೂ ಚೇತನ ಪ್ರಕೃತಿಯನ್ನು ನಿಮಿತ್ತವನ್ನಾಗಿಯೂ ಮಾಡಿ) ಪ್ರಕೃತಿವಶವಾದುದರಿಂದಲೇ ಅಸ್ವತಂತ್ರವಾಗಿರುವ ಈ ಭೂತಸಮುದಾಯವನ್ನು ಪ್ರತಿಕಲ್ಪದಲ್ಲಿಯೂ ನಾನಾ ಪ್ರಕಾರವಾಗಿ ಸೃಷ್ಟಿ ಮಾಡುತ್ತಿರುವೆನು. (ಸ್ವಾಧೀನವಾದ ಪ್ರಕೃತ್ಯಾದಿ ಸಾಧನಗಳ ದ್ವಾರಮಾಡುವುದು ಭಗವಂತನ ಲೀಲೆಯೆಂದು ತಿಳಿಯಬೇಕು.)

**ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ**

**ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು॥9-9॥**

9.ನಾನಾವಿಧವಾದ ಸೃಷ್ಟಿಯನ್ನು ಮಾಡುತ್ತಿರುವ ನಿನಗೆ ಜೀವನಂತೆ ಕರ್ಮಬಂಧವಿದೆಯೇ? ಎಂದರೆ, ಇಲ್ಲವೆಂದು ಭಗವಂತನು ಹೇಳುತ್ತಾನೆ:- ಧನಂಜಯ! ಹೀಗೆ ನಾನು ನಾನಾವಿಧ ಸೃಷ್ಟ್ಯಾದಿಗಳನ್ನು ಮಾಡುತ್ತಿದ್ದರೂ ಆ ಕರ್ಮಗಳು ನನ್ನನ್ನು ಬಂಧಿಸುವುದಿಲ್ಲ. ಏಕೆಂದರೆ:- ನಾನು ವಾಸ್ತವಿಕವಾಗಿ ಉದಾಸೀನನಲ್ಲದಿದ್ದರೂ ಉದಾಸೀನ ಪುರುಷನೋಪಾದಿಯಲ್ಲಿರುವೆನು, ಆ ಸೃಷಟ್ಯಾದಿ ಕರ್ಮಗಳಲ್ಲಿ ಯಾವ ಪ್ರಯೋಜನಾಪೇಕ್ಷೆಯೂ ಇಲ್ಲದೆ ನಾನು ಅನಾಯಾಸವಾಗಿ ಪ್ರವೃತ್ತನಾಗಿರುತ್ತೇನೆ. (ಪರಮಾತ್ಮನು ಸ್ವಪ್ರಯೋಜನಕ್ಕಾಗಿ ಸೃಷ್ಟ್ಯಾದಿಗಳನ್ನು ಮಾಡುವುದಿಲ್ಲ. ಆತನು ಪೂರ್ಣಾನಂದನಾಗಿರುವನು. ಸೃಷ್ಟಾದಿಗಳೆಲ್ಲವೂ ಆತನ ಲೀಲೆಯು. ಅದರಿಂದ ಯಾವ ಆಯಾಸವೂ ಇಲ್ಲ. ಆತನೇ ಸ್ವತಂತ್ರನು. ಆದಕಾರಣ ಅವನು ನಿರ್ಲಿಪ್ತನು, ಕರ್ಮಬಂಧಶೂನ್ಯನೂ ಆಗಿರುವನೆಂದು ಭಾವ.)

**ಮಯ್ಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ**

**ಹೇತುನಾಽನೇನ ಕೌಂತೇಯ ಜಗದ್ವಿಪರಿವರ್ತತೇ॥9-10॥**

**10.** ಸ್ವಾಮಿ! ಹಿಂದೆ 'ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ' (ಉದಾಸೀನವದಾಸೀನಂ' ಎಂಬ ವಾಕ್ಯಗಳಿಂದ ನೀನು ನಿಷ್ಕ್ರಿಯನೆಂದೂ, ಪ್ರಕೃತಿಯೇ ಸ್ವತಂತ್ರವಾಗಿ ಜಗತ್ತನ್ನು ಸೃಷ್ಟಿಸುವುದೆಂದೂ ಭಾಸವಾಗುತ್ತದೆ. ಅದರಿಂದ ಕೆಲವೆಡೆಗಳಲ್ಲಿ ನೀನು ಕರ್ತೃವೆಂದು ಹೇಳಿರುವುದು ಔಪಚಾರಿಕವು ಎಂದರೆ, ಕರ್ತ್ರಿಯಾದ ಪ್ರಕೃತಿಯ ಸನ್ನಿಧಾನವಿರುವುದರಿಂದ ಮಾತ್ರವೇ ನೀನು ಕರ್ತನೆನಿಸಿರುವೆ; ವಸ್ತುತಃ ಪ್ರಕೃತಿಯೇ ಕರ್ತೃವು ಎಂದು ಹೇಳಬೇಕಾಗುತ್ತದೆಯೆಂಬ ಶಂಕೆಗೆ ಭಗವಂತನು ಉತ್ತರ ಹೇಳುತ್ತಾನೆ:- ಸ್ವಾಮಿಯಾದ ನನ್ನಿಂದ ಪ್ರೇರಿತವಾಗಿ ಪ್ರಕೃತಿಯು ಚರಾಚರ ಪ್ರಪಂಚವನ್ನು ಹುಟ್ಟಿಸುತ್ತದೆ. ಕೌಂತೇಯ! ಹೀಗೆ ನನ್ನಿಂದ ಪ್ರೇರಿತವಾದ ಪ್ರಕೃತಿಯೆಂಬ ಈ ಕಾರಣದಿಂದಲೇ ಚರಾಚರಾತ್ಮಕ ಜಗತ್ತು ತಿರುತಿರುಗಿ ಹುಟ್ಟುತ್ತಿರುತ್ತವೆ. (ಒಟ್ಟಿನಲ್ಲಿ ಪರಮಾತ್ಮನ ಸರ್ವವ್ಯಾಪಕತ್ವ, ಜಗದಾಧಾರತ್ವ, ಪರಮಾತ್ಮನು ಸರ್ವತ್ರ ಇದ್ದರೂ ಅವನಿಗೆ ಆಯಾ ಪದಾರ್ಥಗಳಲ್ಲಿನ ದೋಷಾದಿಗಳ ಸಂಪರ್ಕವಾಗದಿರುವಿಕೆ, ಕರ್ಮಲೇಪಾಭಾವ, ಸ್ವತಂತ್ರ ಸೃಷ್ಟಿಕರ್ತೃತ್ವ, ಪುನಃಪುನಃ ಜಗತ್ಸೃಷ್ಟಿಕರ್ತೃತ್ವ ಮತ್ತು ಅವನೇ ಪ್ರಕೃತ್ಯಾದಿ ಜಗದವಾಂತರಕಾರಣಗಳಿಗೂ ನಿಯಾಮಕನೆಂಬ ಈ ಪ್ರಮೇಯವು ಜ್ಞಾನ=ಸಾಮಾನ್ಯ ಜ್ಞಾತವ್ಯವಾದ ಭಗವನ್ಮಹಿಮೆಯು ಎಂದು ಸಿದ್ಧವಾಯಿತು.)

**ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ**

**ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಂ॥9-11॥**

**11.** ಸ್ವಾಮಿ! ನೀನು ಇಂತಹ ಜಗತ್ಸೃಷ್ಟಿ ಕರ್ತೃತ್ವಾದಿ ಮಹಾಮಹಿಮೆಯುಳ್ಳವನಾದರೆ ಕೆಲವರು ನಿನ್ನನ್ನು 'ಸಾಮಾನ್ಯ ಮನುಷ್ಯ, ಜಾರ, ಚೋರ' ಇತ್ಯಾದಿಯಾಗಿ ಏಕೆ ತಿರಸ್ಕರಿಸುವರು? ಎಂದರೆ, ಭಗವಂತನು ಹೇಳುತ್ತಾನೆ:- ಅವಿವೇಕಿಗಳಾದ ತಾಮಸಜನರು ಯಾವಾಗಲೂ ಇರುವ ಗುಣಪೂರ್ಣತೆಯೆಂಬ ಉತ್ತಮವಾದ ನನ್ನ ನೈಜಸ್ವರೂಪವನ್ನು ತಿಳಿಯದೇ ನನ್ನನ್ನು ಸಾಮಾನ್ಯ ಮನುಷ್ಯ ದೇಹಧಾರಿಯು ಮುಂತಾಗಿ ಅಧಮವಾಗಿ ತಿಳಿಯುವರು. (ಹೀಗೆ ನನ್ನಲ್ಲಿ ತಿರಸ್ಕಾರಭಾವನೆಗೆ ಅವರ ದುಷ್ಟ ಸ್ವಭಾವ, ಅವಿವೇಕಾದಿಗಳೇ ಕಾರಣವೆಂದು ಭಾವ.)

**ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ**

**ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ॥9-12॥**

**12.** ಈ ರೀತಿ ನಿನ್ನನ್ನು ಅವಜ್ಞೆಮಾಡಿದವರಿಗೆ ಆಗುವ ಗತಿಯೇನು? ಎಂದರೆ, ಹೇಳುತ್ತಾನೆ:- ನನ್ನನ್ನು ತಿರಸ್ಕರಿಸುವಂತಹವರ ಆಶೆಯೆಲ್ಲವೂ ಭಗ್ನವಾಗುವುದು. (ಒಂದು ವೇಳೆ ಅವರು ಆಶಿಸಿದ

ಐಶ್ವರ್ಯಾದಿಗಳು ತತ್ಕಾಲದಲ್ಲಿ ಲಭಿಸಿದರೂ ಅದು ಬಹುಕಾಲ ನಿಲ್ಲುವುದಿಲ್ಲ. ಸದ್ವ್ಯಯವಾಗಿ ಪರಲೋಕ ಶ್ರೇಯಸ್ಸಿಗೆ ಸಾಧಕವಂತೂ ಆಗುವುದೇ ಇಲ್ಲ. ಪ್ರತ್ಯುತ ಅಂತಹ ಐಶ್ವರ್ಯ್ಯದಿಂದ ಮತ್ತರಾಗಿ ಅಕಾರ್ಯಮಾಡಿ ಅನರ್ಥಕ್ಕೆ ಗುರಿಯಾಗುವರೆಂದು ಭಾವ.) ಅವರ ಯಜ್ಞಾದಿ ಕರ್ಮಗಳೆಲ್ಲಾ ಪುಣ್ಯಸಾಧಕವಾಗುವುದಿಲ್ಲ. ಅವರು ಸಂಪಾದಿಸಿದ ತತ್ತ್ವ ಜ್ಞಾನವೂ ಸಹ ವ್ಯರ್ಥವು, ಎಂದರೆ ಭಕ್ತಿಪೂರ್ವಕವಲ್ಲದುದರಿಂದ ಅದು ಭಗವಂತನ ದರ್ಶನಕ್ಕೆ ಸಾಧಕವಾಗುವುದಿಲ್ಲವೆಂದರ್ಥ. ಅವರು ವಿರುದ್ಧಮನಸ್ಕರು. ಹೆಚ್ಚು ವಿವರಿಸುವುದೇನು? ಅಂತಹವರಿಗೆ ಯಾವ ಪುರುಷಾರ್ಥವೂ ಲಭಿಸುವುದಿಲ್ಲವೆಂದು ತಿಳಿಯಬೇಕು. ಅವರು ಅಂತಹ ಅವಿವೇಕಿಗಳಾಗಲು ಕಾರಣವೇನೆಂದರೆ, ಅವರು 'ರಾಕ್ಷಸೀಂ'=ಹಿಂಸೆಗೆ ಕಾರಣವಾದ, ದ್ವೇಷವೇ ಪ್ರಧಾನವಾಗಿ ಉಳ್ಳ ತಾಮಸವಾದ ಮತ್ತು ಆಸುರೀ' = ವಿಷಯ ಭೋಗಪ್ರಧಾನವಾದ, ರಾಜಸ ಸ್ವಭಾವವುಳ್ಳವರಾಗಿ ಬುದ್ಧಿಭ್ರಂಶಕರವಾದ ಮೋಹವನ್ನು ಹೊಂದಿರುತ್ತಾರೆ. ಅಂತಹವರು ತಮೋಯೋಗ್ಯರು. ಅವರೇ ನನ್ನನ್ನು ತಿರಸ್ಕರಿಸಿ ಅನರ್ಥಭಾಗಿಗಳಾಗುವರೆಂದು ಭಾವ.

**ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ**

**ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಂ॥9-13॥**

13. ಸ್ವಾಮೀ! ಭಗವಂತನು ದೋಷಿಯಾಗಿರುವುದರಿಂದಲೇ ಅವರು ತಿರಸ್ಕರಿಸುತ್ತಾರೆಂದು ಏಕೆ ಹೇಳಬಾರದು? ಎಂದರೆ ವಾಸ್ತವಿಕವಾಗಿ ಭಗವಂತನು ದೋಷಿಯಾಗಿದ್ದರೆ ದೇವಸ್ವಭಾವದವರೂ ಸಹ ಅವನನ್ನು ದ್ವೇಷಿಸಬೇಕು. ಅಂತಹ ಸಾತ್ವಿಕರು ಅವನನ್ನು ದ್ವೇಷಿಸುವುದೇ ಇಲ್ಲ; ಸ್ತೋತ್ರವನ್ನೇ ಆದಕಾರಣ ತಾಮಸಜನಗಳ ಅವಿವೇಕವೇ ದ್ವೇಷಕಾರಣವೆಂಬ ಅಭಿಪ್ರಾಯದಿಂದ ಹೇಳುತ್ತಾನೆ:- ಪಾರ್ಥ! ಸಾತ್ವಿಕರ=ಮುಕ್ತಿ ಯೋಗ್ಯರಾದ ಉತ್ತಮ ಜೀವರ ಸ್ವಭಾವವನ್ನು ಹೊಂದಿದ ವಿವೇಕಶೀಲರಾದ ಮಹಾನುಭಾವರಾದರೋ ನನ್ನನ್ನು ಸಕಲ ಪ್ರಪಂಚ ಸೃಷ್ಟಿಕರ್ತನು, [1]ಚತುರ್ವಿಧನಾಶರಹಿತನು ಎಂದು ತಿಳಿದು ಇತರ ದೇವತೆಗಳಲ್ಲಿ ಮನಸ್ಸನ್ನಿಡದೆ ನನ್ನನ್ನೇ ಭಜಿಸುವರು.

**ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ**

**ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ॥9-14॥**

14. ಅವರ ಭಜನೆಯ ರೀತಿಯು ಹೀಗಿದೆ:- ಸಾತ್ವಿಕರಾದ ಅವರು ನನ್ನನ್ನು ಯಾವಾಗಲೂ ನಿರತಿಶಯ ಭಕ್ತಿಪೂರ್ವಕವಾಗಿ ಕೃಷ್ಣ! ಕೃಷ್ಣ! ಎಂಬುದಾಗಿ ಕೀರ್ತನೆ ಮಾಡುತ್ತ ಅಥವಾ 'ತತ'

ಎಂದರೆ ವೀಣಾದಿ ವಾದ್ಯಗಳು, ಅವುಗಳಿಂದ ನಾಮಸಂಕೀರ್ತನೆ ಮಾಡುತ್ತ, ನನ್ನ ಸ್ತೋತ್ರ, ಮಂತ್ರೋಚ್ಚಾರಣೆ, ಪೂಜೆ ಮುಂತಾದ ಕರ್ಮಗಳು, ಅದಕ್ಕನುಕೂಲವಾದ ವ್ಯಾಪಾರಗಳಲ್ಲಿಯೇ ಪ್ರಯತ್ನವುಳ್ಳವರಾಗಿ, ನನಗೆ ಸಂತೋಷಕರವಾದ ನಿಯಮೋಪವಾಸಾದಿ ವ್ರತಗಳನ್ನಾಚರಿಸುತ್ತ, ಮಧ್ಯದಲ್ಲಿ ಸಂಭವಿಸುವ ಅಂಗವೈಕಲ್ಯಾದಿ ದೋಷಗಳಿಗೆ ಪರಿಹಾರಕವಾಗಿ ನನ್ನನ್ನು ನಮಸ್ಕರಿಸುವವರಾಗಿ ಸರ್ವದಾ ನನ್ನಲ್ಲಿಯೇ ಮನಸ್ಸನ್ನಿಟ್ಟು ನನ್ನನ್ನೇ ಉಪಾಸಿಸುವರು.

**ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೇ**
**ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಂ॥9-15॥**

**15.** ಇತರ ಕೆಲವು ಮಹಾತ್ಮರು ಸಚ್ಛಾಸ್ತ್ರಶ್ರವಣ ಮನನ ಧ್ಯಾನಾದಿಗಳನ್ನು ಮಾಡುವುದು, ಇತರರಿಗೆ ಅನವರತವೂ ಭಗವನ್ಮಾಹಾತ್ಮ್ಯೆಯನ್ನು ಉಪದೇಶಿಸುವುದು ಎಂಬ ಜ್ಞಾನವ್ಯಾಪಾರವೇ (ಜ್ಞಾನಯಜ್ಞ) ನನ್ನ ಪೂಜೆಯೆಂದು ಭಾವಿಸಿ ಯಾವಾಗಲೂ ಭಗವನ್ಮಾಹಾತ್ಮ್ಯ ಜ್ಞಾನದಲ್ಲಿಯೇ ಆಸಕ್ತರಾಗಿ ಸರ್ವತ್ರ ಅಂತರ್ಯಾಮಿಯಾಗಿರುವ ನನ್ನನ್ನು ಸ್ವರೂಪಗುಣಕ್ರಿಯಾ ಭೇದರಹಿತನೆಂದೂ, ಸಕಲ ಜಗದ್ವಿಲಕ್ಷಣನೆಂದೂ, ಬಹುರೂಪನೆಂದೂ ಚಿಂತಿಸುತ್ತ ಉಪಾಸನೆಮಾಡುವರು.

**ಅಹಂ ಕ್ರತುರಹಂ ಯಜ್ಞಃ ಸ್ವಧಾಹಮಹಮೌಷಧಂ**
**ಮಂತ್ರೋಹಮಹಮೇವಾಜ್ಯಮಹಮಗ್ನಿರಹಂ ಹುತಂ॥9-16॥**

**16.**ಅಧ್ಯಾಯಾರಂಭದಲ್ಲಿ ಪ್ರತಿಜ್ಞೆ ಮಾಡಿದುದರಲ್ಲಿ ಜ್ಞಾನಪಧಾರ್ಥವಾದ, ಸಾಮಾನ್ಯ ಜ್ಞಾತವ್ಯವಾದ ಸೃಷ್ಟಿ ಸ್ಥಿತಿ ಸಂಹಾರಾದಿ ಕರ್ತೃತ್ವ ಮಹಿಮೆಯನ್ನು ವಿವರಿಸಿದುದಾಯಿತು. ಈಗ ವಿಜ್ಞಾನ ಪದಾರ್ಥವಾದ ವಿಶೇಷವಾಗಿ ತಿಳಿಯಬೇಕಾದ ಮಹಾತ್ಮ್ಯೆಯನ್ನು ವಿವರಿಸುತ್ತಾನೆ:- 'ಕ್ರತುಃ=ಯಾಗದಲ್ಲಿ ಕರ್ತವ್ಯವಾದ ದೀಕ್ಷಾದಿ ಅವಭೃಥಾಂತ ಕರ್ಮಸಮೂಹವು ನಾನೇ. 'ಯಜ್ಞ'= ದೇವತಾ ಪ್ರೀತ್ಯರ್ಥವಾಗಿ ಪುರೋಡಾಶಾದಿಗಳನ್ನು ಅಗ್ನಿಯಲ್ಲಿ ಹೋಮಮಾಡುವುದು; ಇದೇ ಯಾಗದಲ್ಲಿ ಪ್ರಧಾನ ಕರ್ಮವು. ಇಂತಹ ಕರ್ಮವೂ ನಾನೇ, 'ಸ್ವಧಾ' ಎಂದು ಹೇಳುತ್ತ ಪಿತೃಗಳಿಗೆ ಕೊಡುವ ತಿಲೋದಕಾದಿಗಳೂ ನಾನೇ, ಸಸ್ಯಗಳು, ಅಥವಾ ರೋಗಪರಿಹಾರಕವಾದ ಔಷಧವೂ ನಾನೇ. ವೇದವ್ಯಾಕ್ಯವೂ ನಾನೇ. ಮೃತವೂ ನಾನೇ, ಅಗ್ನಿಯೂ ನಾನೇ, ಹೋಮವೂ ನಾನೇ ಆಗಿರುವನು. (ಇಲ್ಲಿ ಹೇಳಿರುವ ಕೃತ್ವಾದಿಗಳಿಗೂ ಪರಮಾತ್ಮನಿಗೂ ಆಪಾತತಃ ಅಭೇದವು ತೋರಿದರೂ ಅದು ಅಭಿಪ್ರೇತವಲ್ಲ; ಇಲ್ಲಿ ಹೇಳಿರುವ ಕೃತ್ವಾದಿ ಅಚೇತನ ಪದಾರ್ಥಗಳಿಗೆ

ಸ್ವರೂಪಸತ್ತ ನಿಯಾಮಕನು ಪರಮಾತ್ಮನು. ಆದುದರಿಂದ ಆಯಾಯಾ ಪದಾರ್ಥಗಳೇ ನಾನು ಎಂಬುದಾಗಿ ಆಯಾಯಾ ಶಬ್ದವಾಚ್ಯನೆಂದು ಹೇಳಿರುವುದಾಗಿ ತಿಳಿಯಬೇಕು. ಆ ಪದಾರ್ಥಗಳೂ ಪರಮಾತ್ಮನೂ ಒಂದಲ್ಲ. ಪರಮಾತ್ಮನೇ ಅವುಗಳಲ್ಲಿ ಸಂನಿಹಿತನಾಗಿ ಆಯಾಯಾ ಶಕ್ತಿಪ್ರದನು, ಯಜ್ಞಾದಿ ಕರ್ತೃಭೋಕ್ತೃವು ಎಂಬ ವಿಶೇಷ-ಮಹಿಮೆಯನ್ನು ತಿಳಿಯಲು 'ನಾನೇ ಕ್ರತು' ಇತ್ಯಾದಿಯಾಗಿ ಅಭೇದ ವ್ಯವಹಾರವೆಂದು ತಿಳಿಯಬೇಕು. ಈ ವಿಷಯದಲ್ಲಿ .. ಪುಟಗಳಲ್ಲಿರುವ ಟಿಪ್ಪಣಿಯನ್ನು ನೋಡಿ ವಿವರವನ್ನು ತಿಳಿಯ ಬಹುದು.)

1. ಅನಿತ್ಯತ್ವ ದೇಹಹಾನಿ, ದುಃಖಪ್ರಾಪ್ತಿ, ಅಪೂರ್ಣತಾ ಎಂಬುದಾಗಿ ನಾಶವು ನಾಲ್ಕು ಬಗೆ. ಆಯಾ ಪದಾರ್ಥಸ್ವಭಾವಾನುಗುಣವಾಗಿ ಅವುಗಳನ್ನು ಅನ್ವಯಿಸಿಕೊಳ್ಳಬೇಕು.

**ಪಿತಾಮಹಸ್ಯ ಜಗತೋ ಮಾತಾ ಧಾತಾ ಪಿತಾಮಹಃ**

**ವೇದ್ಯಂ ಪವಿತ್ರಮೋಂಕಾರ ಋಕ್ಸಾಮ ಯಜುರೇವ ಚ॥9-17॥**

**17.** ಮತ್ತು ಈ ಜಗತ್ತಿಗೆ ನಾನೇ ಜನಕನು, ಜನನಿಯು, ಪಿತಾಮಹನು ಮುಂತಾಗಿ ಸಕಲವಿಧವಾದ ಬಂಧುತ್ವವುಳ್ಳವನಾಗಿರುವೆನು. ಎಂದರೆ, ಅವರವರಲ್ಲಿದ್ದು, ತತ್ತನ್ನಾಮಕನಾಗಿ ಬಂಧುಕಾರ್ಯಗಳನ್ನು ನಡೆಸುತ್ತಿರುವನೆಂದರ್ಥ. ಆಯಾಯಾ ಬಂಧುರೂಪದಿಂದ ನಾನೇ ಪೋಷಣಕರ್ತನೂ ಆಗಿರುವೆನು, ನಾನೇ ಜ್ಞೇಯವಸ್ತುವು, ಪಾವನನು, ನಾನೇ ಪ್ರಣವಾರ್ಥನು, ಋಕ್ಕು, ಯಜಸ್ಸು, ಸಾಮವೆಂಬ ವೇದತ್ರಯಗಳಿಗೆ ಮುಖ್ಯ ಪ್ರತಿಪಾದ್ಯನು, ಅವುಗಳಿಗೆ ಅರ್ಥ ಬೋಧನ ಸಾಮರ್ಥ್ಯಪ್ರದನೂ ಆಗಿರುವುದರಿಂದ ಋಗಾದಿಗಳೂ ನಾನೇ ಎನಿಸಿರುವೆನು.

**ಗತಿರ್ಭರ್ತಾ ಪ್ರಭುಃ ಸಾಕ್ಷಿ ನಿವಾಸಃ ಶರಣಂ ಸುಹೃತ್**

**ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯಮ್॥9-18॥**

**18.** ನಾನೇ ಮುಮುಕ್ಷುಗಳಿಗೆ ಪರಮಪ್ರಾಪ್ಯನು, ಪೋಷಕನು, ಸ್ವಾಮಿಯು, ಸಕಲವನ್ನೂ ಸಾಕ್ಷಾತ್ತಾಗಿ ನೋಡುವುದರಿಂದ ಸಾಕ್ಷಿಯೆನಿಸಿರುವವನು, ಆಶ್ರಯನು, ಭೀತರಕ್ಷಕನು (ಮುಕ್ತಾಶ್ರಯನು) ಪ್ರತ್ಯುಪಕಾರಾಪೇಕ್ಷೆಯಿಲ್ಲದೆ ಉಪಕಾರಮಾಡುವವನು, ಜಗದುತ್ಪತ್ತಿಕರ್ತನು, ಪ್ರಳಯಕರ್ತನು, ಸರ್ವಾಧಾರನು, ಪ್ರಳಯ ಕಾಲದಲ್ಲಿ ಸಕಲ ಜಗತ್ತನ್ನೂ ತನ್ನಲ್ಲಿಯೇ ಅಡಗಿಸಿಟ್ಟು ಕೊಂಡಿರುವವನು, ಜಗದ್ವ್ಯಂಜಕನೂ ಆದರೂ ವಿನಾಶಾದಿ ವಿಕಾರರಹಿತನೂ ಆಗಿರುವೆನು.

**ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ**

**ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ॥9-19॥**

**19.** ನಾನು ಸೂರ್ಯನಲ್ಲಿ ಸನ್ನಿಹಿತನಾಗಿ ತಾಪಕಾರಿಯಾಗುತ್ತೇನೆ. ನಾನೇ ಮೇಘಚಕ್ರಗತನಾಗಿ ಮಳೆಬರುವಂತೆ ಮಾಡುವೆನು ಮತ್ತು ಮಳೆಯನ್ನು ನಿಲ್ಲಿಸುವೆನು. ನಾನು ಅಮರ್ತ್ಯರಾದ ದೇವತೆಗಳಲ್ಲಿದ್ದು ಅವರಿಗೆ ಮೃತ್ಯು ಪರಿಹಾರಕನಾಗಿರುವುದರಿಂದ ಅಮೃತನೆನಿಸಿರುವೆನು. ಮನುಷ್ಯರಿಗೆ ಮರಣಕಾರಕನಾಗಿ ಮೃತ್ಯುವೆನಿಸಿರುವೆನು. ಅರ್ಜುನ! ಕಾರ್ಯವಸ್ತುಗಳಿಗೂ ಕಾರಣವಸ್ತುಗಳಿಗೂ ನಾನೇ ನಿಯಾಮಕನು.

**ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾ**
**ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ**
**ತೇ ಪುಣ್ಯಮಾಸಾದ್ಯ ಸುರೇಂದ್ರಲೋಕ**
**ಮಶ್ನಂತಿ ದಿವ್ಯಾನ್ ದಿವಿ ದೇವಭೋಗಾನ್॥9-20॥**

**ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ**
**ಏವಂ ತ್ರಯೀಧರ್ಮಮನುಪ್ರಪನ್ನಾ ಗತಾಗತಂ ಕಾಮಕಾಮಾ ಲಭಂತೇ॥9-21॥**

**20-21.** ಸ್ವಾಮಿ! ನೀನೇ ಸಕಲ ಯಜ್ಞಾದಿಭೋಕ್ತೃವೆಂದಮೇಲೆ [1]ತ್ರೈವಿದ್ಯಕೃತವಾದ ಯಜ್ಞಕ್ಕೂ ನೀನೇ ಭೋಕ್ತನಾಗಿರುವೆ. ನೀನು ಆ ಯಜ್ಞಾದಿ ಫಲವನ್ನು ಸ್ವೀಕರಿಸಿದ ಬಳಿಕ ಅವರಿಗೆ ಬೇರೆ ಫಲವನ್ನು ಕೊಡಲು ಕಾರಣವೇನು? ಶುದ್ಧಭಾಗವತರಿಗೆ ಕೊಡುವಂತಹ ಉತ್ತಮ ಫಲವನ್ನು ಅವರಿಗೇಕೆ ಕೊಡುವುದಿಲ್ಲ? ಎಂದರೆ ತ್ರೈವಿದ್ಯಭಾಗವತರುಗಳಿಗೆ ನ್ಯೂನಾಧಿಕಫಲವನ್ನು ಸಕಾರಣವಾಗಿ ವಿವರಿಸುತ್ತಾನೆ:- ತ್ರೈವಿದ್ಯರು ಯಜ್ಞ ಮಾಡಿ ಕೊನೆಯಲ್ಲಿ ಶ್ರೀಕೃಷ್ಣಾರ್ಪಣವೆಂದು ನನ್ನಲ್ಲಿ ಸಮರ್ಪಿಸಿ, ಹೋಮಮಾಡಿ ಉಳಿದ ಸೋಮರಸವನ್ನು ಪಾನಮಾಡಿ, ಪಾಪಗಳನ್ನು ಪರಿಹರಿಸಿಕೊಂಡು, ಸ್ವರ್ಗ ಪ್ರಾಪ್ತಿಯಾಗಬೇಕೆಂದು ಪ್ರಾರ್ಥಿಸುವರು.

ಅವರು ತಮ್ಮ ಪ್ರಾರ್ಥನಾನುಸಾರವಾಗಿ ಪುಣ್ಯ ಲಭ್ಯವಾದ ಸ್ವರ್ಗಲೋಕವನ್ನು ಹೊಂದಿ ಅಲ್ಲಿ ಅದ್ಭುತವಾದ ದೇವಭೋಗ್ಯ ಸುಖಗಳನ್ನು ಅನುಭವಿಸುವರು. ಹೀಗೆ ಸ್ವರ್ಗಕಾಮನೆಯಿಂದ ಅನ್ಯದೇವತಾರಾಧನೆ ಮಾಡುವವರು ಕಾಮ್ಯಪುಣ್ಯ ಕರ್ಮಲಬ್ದವಾದ, ಈ ಲೋಕಸುಖಕ್ಕಿಂತಲೂ ಹೆಚ್ಚಾದ ಸ್ವರ್ಗಸುಖವನ್ನನುಭವಿಸಿ ಆ ಪುಣ್ಯವು ಮುಗಿದಮೇಲೆ ಬೇರೆ ಪುಣ್ಯಯುಕ್ತರಾಗಿ ಭೂಲೋಕಕ್ಕೆ ಬರುತ್ತಾರೆ. ಇದೇ ಪ್ರಕಾರ ಸ್ವರ್ಗಾದಿ ಕಾಮ್ಯಫಲಾಶೆಯುಳ್ಳವರಾಗಿ ವೇದೋಕ್ತ ಧರ್ಮವನ್ನಾಚರಿಸುತ್ತ ಸ್ವರ್ಗಕ್ಕೆ ಹೋಗುವುದು, ಪುನಃ ಈ ಲೋಕದಲ್ಲಿ ಜನ್ಮವೆತ್ತುವುದು, ಹೀಗೆ

ಗಮನಾಗಮನ ಸ್ಥಿತಿಯನ್ನು ಹೊಂದುವರು. ಅವರಿಗೆ ಯಾವಾಗಲೂ ಪುನರಾವೃತ್ತಿರಹಿತವಾದ ಶಾಶ್ವತಲೋಕ ಪ್ರಾಪ್ತಿಯಾಗುವುದಿಲ್ಲವೆಂದು ಭಾವ.

1.ವಿಷ್ಣುವು ಸರ್ವೋತ್ತಮನೆಂದು ತಿಳಿದು ಋಗ್ಯಜುಸ್ಸಾಮಗಳೆಂಬ ಮೂರು ವಿದ್ಯೆಗಳನ್ನು ಅಧ್ಯಯನ ಮಾಡಿ ಅದರಲ್ಲಿ ಮೇಲೆ ತೋರುವ ಅರ್ಥವನ್ನೇ ಎಂದರೆ ಸ್ವರ್ಗಾದಿ ಫಲ ಪ್ರಾಪ್ತಿಗಾಗಿ ಅನ್ಯದೇವತಾ ಯಜನವೇ ಕರ್ತವ್ಯವೆಂದು ತಿಳಿದು ಹಾಗೆಯೇ ಅನುಷ್ಠಾನಮಾಡಿ ಕೊನೆಯಲ್ಲಿ ವಿಷ್ಣುವಿಗೆ ಆ ಕರ್ಮಗಳನ್ನು ಸಮರ್ಪಿಸುವವರು ತ್ರೈವೈದ್ಯರೆನಿಸುವರು.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ**

**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ॥9-22॥**

22. ಭಾಗವತರಿಗೆ ಫಲವನ್ನು ಹೇಳುತ್ತಾನೆ:- ನಶ್ವರಫಲವನ್ನು ಕೊಡುವ ಇತರ ದೇವತೆಗಳನ್ನು ಬಿಟ್ಟು ನನ್ನನ್ನೇ ಧ್ಯಾನಿಸುವವರಾಗಿ ಯಾವ ಜನರು ನನ್ನನ್ನು ಪರಿಪಕ್ವಭಕ್ತಿಯಿಂದ ಸೇವಿಸುವರೋ, ಸಕಲ ದೇಶಕಾಲಗಳಲ್ಲಿಯೂ ಭಗವಂತನಲ್ಲಿಯೇ ಮನಸ್ಸನ್ನಿಟ್ಟು ಅವನ ಸೇವೆಯಲ್ಲಿಯೇ ಉದ್ಯುಕ್ತರಾಗಿರುವ ಆ ಜನರಿಗೆ ನಾನು ಅಪ್ರಾಪ್ತವಾಗಿದ್ದ ಮೋಕ್ಷವನ್ನು ಕೊಟ್ಟು ಅದನ್ನು ಸ್ಥಿರವಾಗಿ ಶಾಶ್ವತವಾಗಿರುವಂತೆ ಮಾಡುವೆನು. (ತ್ರೈವಿದ್ಯ ಭಾಗವತರಿಬ್ಬರೂ ಭಗವದ್ಭಕ್ತರು, ಭಗವದ್ಭೋಗ್ಯ ಕರ್ಮಕರ್ತರೂ ಅಹುದು. ಆದರೂ ಅವರಿಬ್ಬರ ಸಾಧನದಲ್ಲಿ ತಾರತಮ್ಯವಿರುವುದರಿಂದ ಫಲವೂ ನ್ಯೂನಾಧಿಕವಾಗಿರುವುದು. ಹೇಗೆಂದರೆ :- ತ್ರಿವಿದ್ಯರು :

ಭಾಗವತರು :

1.ಅನ್ಯದೇವತೋಪಾಸನೆ ಮಾಡುವವರಲ್ಲ.

2.ಪರಿಪಕ್ವಭಕ್ತಿಯುಳ್ಳವರು.

3.ನಿವೃತ್ತ ಕರ್ಮಾಚರಣಪರರು.

4.ಭಗವತ್ಪ್ರೀತ್ಯರ್ಥವಾಗಿಯೇ ಸಕಲ ಕರ್ಮಗಳನ್ನೂ ಪ್ರಾರಂಭಿಸಿ ಯಾವಾಗಲೂ ಭಗವತ್ಸ್ಮರಣೆ ಮಾಡುತ್ತ ಅವನಲ್ಲಿಯೇ ಸಮರ್ಪಿಸುವವರು.

ತ್ರೈವಿದ್ಯರು:

1. ಪ್ರಧಾನವಾಗಿ ಅನ್ಯದೇವತೋಪಾಸಕರು

2. ಪರಿಪಕ್ವಭಕ್ತಿಮಂತರಲ್ಲ

3. ಕಾಮ್ಯಕರ್ಮಾಚರಣಶೀಲರು.

4. ಕರ್ಮಮಾಡಿ ಕೊನೆಯಲ್ಲಿ ಭಗವಂತನಿಗೆ ಅರ್ಪಿಸುವವರು.

ಈ ರೀತಿಯಾಗಿ ಇವರಿಬ್ಬರ ಸಾಧನೆಗಳು ಭಿನ್ನವಾಗಿರುವುದರಿಂದ ಫಲವೂ ಭಿನ್ನವಾಗಿದೆಯೆಂದು ತಿಳಿಯಬೇಕು.

**ಯೇಽಪ್ಯನ್ಯ ದೇವತಾಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ**
**ತೇಽಪಿ ಮಾಮೇವ ಕೌಂತೇಯ ಯಜಂತ್ಯ ವಿಧಿಪೂರ್ವಕಂ॥9-23॥**

23. ಈಗ ಅನ್ಯದೇವತಾಯಾಜಕರಿಗೆ ಭಾಗವತರಿಗಾಗುವ ಫಲವಾಗದೆ ಬೇರೆ ಫಲವಾಗುವುದನ್ನು ಕಾರಣೋಕ್ತಿಪೂರ್ವಕವಾಗಿ ವಿವರಿಸುತ್ತಾನೆ:- ಯಾರು ವಿಷ್ಣ್ವೇತರ ದೇವತೆಗಳನ್ನೇ ಸರ್ವೋತ್ತಮರೆಂದು ತಿಳಿದು ಅವರಲ್ಲಿ ಉತ್ಕೃಷ್ಟ ಭಕ್ತಿಯುಳ್ಳವರಾಗಿ ವಿಶ್ವಾಸದಿಂದ ಅವರನ್ನುದ್ದೇಶಿಸಿ ಯಾಗಾದಿಗಳನ್ನು ಮಾಡುವರೋ ಅವರೂ ಸಹ ನನ್ನನ್ನೇ ಪೂಜಿಸುವರು. ಆದರೆ ಅವರ ಪೂಜೆಯು ವಿಧ್ಯುಕ್ತ ಮಾರ್ಗವನ್ನು ಅನುಸರಿಸಿದುದಲ್ಲ. ನನ್ನ ಪ್ರೀತ್ಯರ್ಥವಾಗಿಯೇ ಕರ್ಮವು ಕರ್ತವ್ಯವು. ತ್ರೈವಿದ್ಯರಾದರೋ ಇತರ ದೇವತೋದ್ದೇಶದಿಂದ ಕರ್ಮಮಾಡಿ ಕೊನೆಯಲ್ಲಿ ಅದನ್ನು ನನಗೆ ಸಮರ್ಪಿಸುವರು. ಇದು ವಿಹಿತಮಾರ್ಗವಲ್ಲ.

**ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ**
**ನ ತು ಮಾಮಭಿಜಾನಂತಿ ತತ್ವೇನಾತಶ್ಚ್ಯವಂತಿ ತೇ॥9-24॥**

24.ಭಗವದ್ಭೋಗ್ಯವಾದ ತ್ರೈವಿದ್ಯ ಕೃತಯಜ್ಞವು ಅವಿಧಿಪೂರ್ವಕವೆಂಬಲ್ಲಿ ಕಾರಣವನ್ನು ಹೇಳುತ್ತಾನೆ:-ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞಾದಿಗಳಿಗೆಲ್ಲಾ ನಾನೇ ಪ್ರವರ್ತಕನು ಮತ್ತು ಉದ್ದೇಶ್ಯನೂ ಆಗಿರುವನು. ತ್ರೈವಿದ್ಯರಾದರೋ ನನ್ನನ್ನು ಸರ್ವೋತ್ತಮನೆಂದು ತಿಳಿದವರಾದರೂ ನಾನೇ ಸಕಲ ಯಜ್ಞ ಪ್ರವರ್ತಕನು ಮತ್ತು ಭೋಕ್ತನು ಎಂಬುದನ್ನು ಸಪರಿಕರವಾಗಿಯೂ, ಯಥಾರ್ಥವಾಗಿಯೂ ತಿಳಿಯುವುದಿಲ್ಲ. ಅಷ್ಟೇ ಅಲ್ಲದೆ ಬ್ರಹ್ಮಾದ್ಯನ್ಯ ದೇವತೆಗಳು ಭಗವಂತನ ಪರಿವಾರವೆಂಬ ತತ್ವವನ್ನೂ ಚೆನ್ನಾಗಿ ನಿರ್ಣಯಿಸಿಕೊಂಡಿಲ್ಲ. ಅಂತಹವರು ಮಾಡುವ ಯಜ್ಞವು ಹೇಗೆ ವಿಧಿಪೂರ್ವಕವಾದೀತು? ಆದಕಾರಣ ಅವರು ಸ್ವರ್ಗ ಲೋಕವನ್ನು ಬಿಟ್ಟು ಮನುಷ್ಯಲೋಕಕ್ಕೆ ಬರುತ್ತಾರೆ.

**ಯಾಂತಿ ದೇವವ್ರತಾ ದೇವಾನ್ ಪಿತೄನ್ ಯಾಂತಿ ಪಿತೃವತಾಃ**
**ಭೂತಾನಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋಽಪಿ ಮಾಮ್॥9-25॥**

25.ವ್ರತನಿಯಮಾದಿಗಳಿಂದ ಬ್ರಹ್ಮಾದ್ಯನ್ಯ ದೇವತೆಗಳನ್ನು ಆರಾಧಿಸುವವರು ಆ ದೇವತೆಗಳನ್ನೇ ಹೊಂದುವರು. ನಿಯತವಾಗಿ ಪಿತ್ರಾರಾಧನೆಮಾಡುವವರು ಅರ್ಯಮಾದಿ ಪಿತೃ ದೇವತೆಗಳನ್ನೇ

ಹೊಂದುತ್ತಾರೆ. ಸಪ್ತ ಮಾತೃಕಾದೇವತಾ ಪೂಜಕರು ಚಂಡಿಕಾದಿ ಮಾತೃಕಾದೇವತೆಗಳನ್ನೇ ಹೊಂದುವರು. ನನ್ನನ್ನು ಉಪಾಸನೆಮಾಡುವವರು ನನ್ನನ್ನೇ ಹೊಂದುವರು.

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ**

**ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ॥9-26॥**

**26.** ಅನ್ಯದೇವತಾ ಭಜನೆಗೆ ಫಲವು ಸ್ವಲ್ಪವಾದರೂ ಅದನ್ನೇ ಮಾಡುವುದು ಯುಕ್ತವು. ಸ್ವಾಮೀ! ನೀನು ಮಹಾಮಹಿಮೆಯುಳ್ಳವನಾದಕಾರಣ ದುರ್ಬಲರು ನಿನ್ನನ್ನು ಆರಾಧಿಸುವುದು ಕಷ್ಟ ಎಂದರೆ, ಭಗವಂತನು ಹೇಳುತ್ತಾನೆ:- ಅನಿಷಿದ್ಧವಾದ ತುಲಸ್ಯಾದಿ ಪತ್ರಗಳು, ಮಲ್ಲಿಕಾದಿ ಪುಷ್ಪಗಳು, ತೆಂಗಿನಕಾಯಿ ಮೊದಲಾದ ಫಲಗಳು, ಶುದ್ಧೋದಕ ಇವುಗಳನ್ನು ಯಾರಾದರೂ ಭಕ್ತಿಯಿಂದ ನನಗೆ ಅರ್ಪಿಸಿದರೆ ನಾನು ಅಂತಹ ವಿಷಯವಿರಕ್ತನಿಂದ ಭಕ್ತಿಪೂರ್ವಕವಾಗಿ ಸಮರ್ಪಿತವಾದ ಆ ಪತ್ರಾದಿಗಳನ್ನೆ ಸ್ವೀಕರಿಸಿ ಸಂತುಷ್ಟನಾಗುವೆನು. (ನನಗೆ ಭಕ್ತಿಯೇ ಮುಖ್ಯ ವಾದುದು. ಅದರಿಂದಲೇ ನಾನು ಸಂತುಷ್ಟನಾಗುವೆನು. ಅವರು ಕೊಡುವ ಪದಾರ್ಥವನ್ನು ನಾನು ಗಮನಿಸುವುದಿಲ್ಲ. ಪೂರ್ಣಕಾಮನಾದ ನನಗೆ ಅದರಿಂದಾಗಬೇಕಾದುದೇನು? ಭಕ್ತ ಜನರನ್ನು ಉದ್ಧರಿಸಲು ಪಣತೊಟ್ಟಿರುವೆನು ಎಂದು ಭಾವ.)

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್**

**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್॥9-27॥**

**27.** ಭಕ್ತಿಯಿಂದ ಸಮರ್ಪಿತವಾದುದು ಎಂತಹುದೇ ಆಗಲಿ ಅದು ನನಗೆ ಪ್ರೀತಿಕರವಾದ ಕಾರಣ ಅರ್ಜುನ! ನೀನು ಈ ರೀತಿಯಾಗಿ ಮಾಡೆಂದು ವಿಧಿಸುತಾನೆ:- ಕೌಂತೇಯ! ನೀನು ಯಾವ ಕರ್ಮವನ್ನು ಮಾಡುವೆಯೋ, ಯಾವುದನ್ನು ತಿನ್ನುವಯೋ, ಯಾವ ಹೋಮವನ್ನಾಚರಿಸುವೆಯೋ, ಏನನ್ನು ದಾನ ಮಾಡುವೆಯೋ ಮತ್ತು ಯಾವ ತಪಸ್ಸನ್ನು ಮಾಡುವೆಯೋ ಅವೆಲ್ಲವನ್ನೂ ನನ್ನ ತೃಪ್ತ್ಯರ್ಥವಾಗಿಯೇ ಮಾಡುತ್ತೇನೆಂದು ಸಂಕಲ್ಪಿಸಿ ನನಗೆ ಸಮರ್ಪಿಸಿಬಿಡು.

**ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ**

**ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ॥9-28॥**

**28.** ಸ್ವಾಮೀ! ನನ್ನ ಕರ್ಮಗಳೆಲ್ಲವನ್ನೂ ನಿನಗೆ ಸಮರ್ಪಣೆಮಾಡುವುದುರಿಂದೇನು ಫಲ? ಎಂದರೆ, ಹೇಳುತ್ತಾನೆ:- ಈ ರೀತಿಯಾಗಿ ನನ್ನಲ್ಲಿ ಸರ್ವ ಸಮರ್ಪಣೆ ಮಾಡಿದರೆ ಸುಖದುಃಖಪ್ರದಗಳಾದ ಕರ್ಮವೆಂಬ ಬಂಧನದಿಂದ ಬಿಡುಗಡೆಯನ್ನು ಹೊಂದುವೆ. ಎಂದರೆ ಫಲಾಭಿಸಂಧಿ

ಪರಿತ್ಯಾಗಪೂರ್ವಕವಾದ ವಿಹಿತ ಕರ್ಮಾನುಷ್ಠಾನದಲ್ಲಿ ಮನಸ್ಸು ಮಾಡುವವನಾಗು; ಆದರಿಂದ ನೀನು ಮುಕ್ತನಾಗಿ ನನ್ನನ್ನೇ ಹೊಂದುವೆ.

**ಸಮೋಽಹಂ ಸರ್ವಭೂತೇಷು ನ ಮೇ ದ್ವೇಷೋಽಸ್ತಿ ನ ಪ್ರಿಯಃ**

**ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್॥9-29॥**

**29.**ಸ್ವಾಮೀ! 'ಭಕ್ತ್ಯುಪಹೃತಮಶ್ನಾಮಿ' ಇತ್ಯಾದಿಗಳಲ್ಲಿ ಹೇಳಿದ ಪ್ರಕಾರ ನೀನು ಭಕ್ತಿಪ್ರಿಯನಾದರೆ ದ್ವೇಷಿಗಳಿಗೆ ಅಪ್ರಿಯನಾಗಬೇಕಾಗುತ್ತದೆ. ಏವಂಚ ನಿನಗೆ ಭಕ್ತರಲ್ಲಿ ಪ್ರೀತಿಯು, ದ್ವೇಷಿಗಳಲ್ಲಿ ದ್ವೇಷವೂ ಸಹಜವಾದುದರಿಂದ ಅಲ್ಪ ಭಕ್ತಿ ಮಾಡಿದವನಿಗೂ ಸುಖವೆಂಬ ಮಹಾಫಲವನ್ನೂ, ಅಲ್ಪ ದ್ವೇಷ ಮಾಡಿದವರಿಗೆ ಬಹು ದುಃಖವನ್ನೂ ಕೊಡುವವನಾಗಬಹುದು. ಲೋಕದಲ್ಲಿ ರಾಜರು ಮುಂತಾದವರು ಪ್ರಿಯಾಪ್ರಿಯರ ವಿಷಯದಲ್ಲಿ ಹಾಗೆ ನಡೆದುಕೊಳ್ಳುವುದು ಕಂಡಿದೆ. ನೀನೂ ಹಾಗೆ ಮಾಡುವುದಾದರೆ ನಿನಗೆ ವೈಷಮ್ಯ ನೈರ್ಘೃಣ್ಯಗಳು ಬರಬೇಕಾಗುತ್ತವೆ. ದೇವದೇವನೆನಿಸಿದ ನಿನಗೆ ಇದು ಯುಕ್ತವಲ್ಲ ಎಂದರೆ, ಭಗವಂತನು ಹೇಳುತ್ತಾನೆ:- ನಾನು ಸಕಲ ಪ್ರಾಣಿಗಳ ವಿಷಯದಲ್ಲಿಯೂ ಸಮನಾಗಿರುವನು. ನನಗೆ ದ್ವೇಷ್ಯನೂ ಇಲ್ಲ-ಪ್ರಿಯನೂ ಇಲ್ಲ. ಎಂದರೆ ಯಾವನು ನನ್ನಲ್ಲಿ ಎಷ್ಟರಮಟ್ಟಿನ ದ್ವೇಷವನ್ನು ಮಾಡುವನೋ, ಯಾವನು ಎಷ್ಟರಮಟ್ಟಿನ ಭಕ್ತಿಯನ್ನು ಮಾಡುವನೋ ಅವರವರಿಗೆ ಅವರವರು ಮಾಡುವ ದ್ವೇಷಭಕ್ತಿಗಳಿಗೆ ತಕ್ಕಷ್ಟೇ ದುಃಖಸುಖಗಳನ್ನು ಕೊಡುವೆನು. ಸ್ವಲ್ಪವೂ ಹೆಚ್ಚು ಕಮ್ಮಿ ಮಾಡುವುದಿಲ್ಲ. ಅವರವರ ಸಾಧನಾನುಸಾರವಾಗಿ ಫಲಕೊಡುವುದೇ ಸಾಮ್ಯವು, ಲೋಕದಲ್ಲಿಯೂ ದುಷ್ಟಶಿಕ್ಷಣ ಶಿಷ್ಟ ಪರಿಪಾಲನೆಗಳನ್ನು ಮಾಡುವ ರಾಜನೂ ಸಾಧನಾನುಗುಣ ಫಲದಾತೃವಾಗಿ ಸಮನೆನಿಸಿರುವುದು ಪ್ರಸಿದ್ಧವಾಗಿದೆ. ಆಯಾಯಾ ಪ್ರಾಣಿಗಳ ಕರ್ಮಾನುಸಾರವಾಗಿ ಸ್ವರ್ಗನರಕಾದಿ ಫಲಕೊಡುತ್ತಿರುವ ಯಮನು ವಿಷಮನಲ್ಲ, ಸಮನೇ ಸರಿ. ಆದುದರಿಂದಲೇ ಯಮನಿಗೆ 'ಸಮವರ್ತಿ' ಎಂಬ ಹೆಸರು ಬಂದಿದೆ. ಹಾಗೆಯೇ ನಾನೂ ಕೂಡ ಅವರವರ ಭಕ್ತಿಗೆ ತಕ್ಕಷ್ಟು ಸುಖವನ್ನೂ, ದ್ವೇಷಕ್ಕೆ ತಕ್ಕಷ್ಟು ದುಃಖವನ್ನೂ ಕೊಡುವನಾದುದರಿಂದ ನಾನು ಎಂದಿಗೂ ವಿಷಮನಲ್ಲ; ಎಲ್ಲರ ವಿಷಯದಲ್ಲಿಯೂ ಸಮನಾಗಿಯೇ ಇರುವೆನು. ಅವರ ದ್ವೇಷಕ್ಕಿಂತ ಅಧಿಕ ದ್ವೇಷ್ಯನೂ, ಭಕ್ತಿಗಿಂತ ಹೆಚ್ಚಿನ ಪ್ರೀತಿ ವಿಷಯನೂ ನನಗೆ ಯಾರೂ ಇಲ್ಲವೆಂದು ಭಾವ. ಯಾರು ನನ್ನನ್ನು ಭಕ್ತಿಯಿಂದ ಸೇವಿಸುವರೋ ಅವರು ತಾವು ನನ್ನ ಆಧೀನರೆಂಬ ಅಂಶವನ್ನು ತಿಳಿದವರು. ನಾನೂ ಕೂಡ ಅವರಿಗೆ ವಶನಾಗುವೆನು ಎಂದರೆ ಅವರ

ಭಕ್ತಿಗನುಗುಣವಾಗಿ ಫಲವನ್ನು ಕೊಟ್ಟು, ಅವರ ಯೋಗಕ್ಷೇಮವನ್ನು ವಹಿಸಿಕೊಳ್ಳುವೆನು ಎಂದು ಭಾವ.

**ಅಪಿ ಚೇತ್ಸು ದುರಾಚಾರೋ ಭಜತೇ ಮಾಮನನ್ಯಭಾಕ್**
**ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯ ವಹಿತೋ ಹಿ ಸಃ॥9-30॥**

**30.** ಭಕ್ತಿಯನ್ನು ಸ್ತೋತ್ರಮಾಡುತ್ತಾನೆ:- ಭಗವದ್ಭಕ್ತನಾದ ದೇವಾಂಶ ಅಥವಾ ಋಷ್ಯಾದ್ಯಂಶ ಸಂಭೂತನಾದವನು ತನ್ನ[1] ಯೋಗ್ಯತೆಗೆ ಮೀರಿದ ಪುಣ್ಯವನ್ನು ಸಂಪಾದಿಸಿದಾಗ ಅದನ್ನು ನಾಶಪಡಿಸಿಕೊಳ್ಳುವುದಕ್ಕಾಗಿ ದೈವಿಕವಾಗಿ ಅತ್ಯಂತ ದುರಾಚಾರಿಯಾಗಿದ್ದರೂ ಅವನು ಪ್ರಧಾನವಾಗಿ ಇತರ ದೇವತೆಗಳನ್ನು ಭಜಿಸದೆ ನನ್ನನ್ನೇ ಭಜಿಸುವವನಾದರೆ ಅವನು ಸತ್ಪುರುಷನೆಂದೇ ತಿಳಿಯಬೇಕು. ಏಕೆಂದರೆ:- ಸೂರ್ಯ ಚಂದ್ರಾದಿ ದೇವಾಂಶದವನಾದ ಅವನು ಭಗವನ್ಮಹಿಮೆಯನ್ನು ಚೆನ್ನಾಗಿ ನಿರ್ಣಯಿಸಿಕೊಂಡಿರುವನು. ಆದಕಾರಣ ಅಂತಹವನು ತತ್ಕಾಲದಲ್ಲಿ ಕಾರಣಾಂತರದಿಂದ ದುರಾಚಾರಿಯಾಗಿದ್ದರೂ ಭಗವದುತ್ಕರ್ಷನಿರ್ಣಯವುಳ್ಳವನಾದುದರಿಂದ ಯೋಗ್ಯ ಜೀವನೇ ಸರಿ.

1. ದೇವತೆ, ಋಷಿ ಯಾರೇ ಆಗಲಿ ಅವರಲ್ಲಿ ಪ್ರತಿಯೊಬ್ಬರಿಗೂ ಅನಾದಿ ಸಿದ್ಧವಾದ ಯೋಗ್ಯತೆಯು ಕ್ಲೃಪವಾಗಿದೆ. ಅವರವರ ಯೋಗ್ಯತೆಗೆ ಅನುಸಾರವಾಗಿ ಅವರವರಿಂದ ಸಾಧನವನ್ನು ಮಾಡಿಸಿ ಭಗವಂತನು ತಕ್ಕ ಫಲವನ್ನು ಅವರವರಿಗೆ ಕೊಡುವನು. ಹೀಗೆಯೇ ಭಗವಂತನ ಸತ್ಯಸಂಕಲ್ಪವಿರುವುದರಿಂದ ಅದಕ್ಕೆ ವಿರುದ್ಧವಾಗಿ ಏನೂ ನಡೆಯುವುದಿಲ್ಲ. ಕೆಲವು ಸಂದರ್ಭಗಳಲ್ಲಿ ದೇವ, ಋಷ್ಯಾದಿಗಳ ಅಂಶಸಂಭೂತರಾದವರು ಸಾಧನಾತಿಶಯದಿಂದ ಅವರ ಯೋಗ್ಯತೆಗೆ ಮೀರಿದ ಪುಣ್ಯವನ್ನು ಸಂಪಾದಿಸುವರು. ಅಂತಹ ಅಧಿಕ ಪುಣ್ಯಕ್ಕೆ ಫಲಕೊಡುವುದಾದರೆ ಅವರ ಯೋಗ್ಯತೆಗೆ ಮೀರಿದ ಫಲವನ್ನು ಕೊಡಬೇಕಾಗುತ್ತದೆ. ಸತ್ಯಸಂಕಲ್ಪನಾದ ಭಗವಂತನು ಹಾಗೆ ಕೊಡುವುದಿಲ್ಲ. ಆಗ ಅವರ ಅಧಿಕ ಪುಣ್ಯವು ವ್ಯರ್ಥವಾಗಬೇಕಾಗುತ್ತದೆ. ಪುಣ್ಯವು ವ್ಯರ್ಥವಾಗುವುದೂ ಭಗವಂತನಿಗೆ ಸಮ್ಮತವಲ್ಲ. ಆದುದರಿಂದ ಯೋಗ್ಯತಾಧಿಕ ಸಾಧನಮಾಡಿ ಪುಣ್ಯವನ್ನು ಹೆಚ್ಚಾಗಿ ಯಾರಾದರೂ ಗಳಿಸಿದರೆ ಸರ್ವಜ್ಞನಾದ ಭಗವಂತನು ಅಧಿಕ ಪುಣ್ಯ ಕ್ಷಯವಾಗುವಂತೆ, ಯೋಜನೆ ಮಾಡುವನು. ಎಂದರೆ ಹಾಗೆ ಯೋಗ್ಯಾಧಿಕ ಪುಣ್ಯವನ್ನು ಗಳಿಸಿದ ದೇವಾಂಶ ಅಥವಾ ಋಷ್ಯಾದ್ಯಂಶನಾದವನು ಜ್ಞಾನಿಯಾಗಿದ್ದರೂ ದುರಾಚಾರಾದಿಗಳನ್ನು ಮಾಡುವಂತೆ ಅವನಿಗೆ ಭಗವಂತನು ಮೋಹಪಡಿಸುವನು. ಆ ಮೋಹಕ್ಕೆ ಸಿಲುಕಿ ದುರಾಚಾರಾದಿಗಳನ್ನು ಮಾಡಿ ಹಿಂದೆ ಸಂಪಾದಿಸಿದ್ದ ಅಧಿಕ ಪುಣ್ಯವನ್ನು ನಾಶಪಡಿಸಿಕೊಳ್ಳುವನು.ಬಳಿಕ ಭಗವಂತನು ಅವನ ಯೋಗ್ಯತೆಗೆ ತಕ್ಕಷ್ಟೇ ಫಲವನ್ನು ಕೊಟ್ಟು ಅವನನ್ನು ಉದ್ಧರಿಸುವನು ಎಂಬ ಪ್ರಮೇಯವನ್ನು ತಿಳಿಯಬೇಕು. ಇದರಿಂದ ಈ ಶ್ಲೋಕಾರ್ಥವು ಚೆನ್ನಾಗಿ ಮನದಟ್ಟಾಗುವುದು.

**ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ**
**ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ॥9-31॥**

**31.** ಭಗವತ್ತತ್ತ್ವ ನಿರ್ಣಯವುಳ್ಳವನಾದರೂ ದುರಾಚಾರಿಯನ್ನು ಸಾಧುವೆನ್ನುವುದು ಹೇಗೆ? ಎಂದರೆ, ಭಗವಂತನು ಹೇಳುತ್ತಾನೆ:- ಅವನು ಸಮೀಚೀನ ತತ್ವನಿಶ್ಚಯವುಳ್ಳವನಾದಕಾರಣ ಶೀಘ್ರವಾಗಿಯೇ ದುರಾಚಾರವನ್ನು ಬಿಟ್ಟು ಧರ್ಮ ಮಾರ್ಗದಲ್ಲಿ ಮನಸ್ಸನ್ನಿಡುವನು. ಬಳಿಕ ಶಾಶ್ವತವಾದ ಮೋಕ್ಷವನ್ನು ಚೆನ್ನಾಗಿ ಹೊಂದುತ್ತಾನೆ. ಕೌಂತೇಯ! ನನ್ನ ಭಕ್ತನು ಒಂದು ಕಾಲದಲ್ಲಿ ದುರಾಚಾರವುಳ್ಳವನಾದರೂ ನರಕಾದ್ಯನರ್ಥವನ್ನು ಹೊಂದುವುದೇ ಇಲ್ಲವೆಂದು

ತಿಳಿಯುವವನಾಗು. (ಈ ಎರಡು ಶ್ಲೋಕಗಳಲ್ಲಿ ಹೇಳಿರುವ ವಿಷಯವು ದೇವ, ದೇವಾಂಶ, ಋಷ್ಯಾದಿಗಳಿಗೆ ಮಾತ್ರ ಅನ್ವಯಿಸುವುದೆಂದು ತಿಳಿಯಬೇಕು.)

**ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ**
**ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಂ॥9-32॥**

ಶ್ರೀ ಭಗವಾನುವಾಚ

**ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ**
**ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್॥9-33॥**

**32-33.** ವೈವಸ್ವತಮನುಸುತನಾದ ಸುದ್ಯುಮ್ನನು ರುದ್ರದೇವರ ಶಾಪಗ್ರಸ್ತವಾದ ವನಪ್ರವೇಶಮಾಡಿದುದರಿಂದ 'ಇಲಾ' ಎಂಬ ಸ್ತ್ರೀ ಜನ್ಮವನ್ನು ಹೊಂದಿರುವನು. ಹಾಗೆ ಸ್ವಾಭಾವಿಕವಾಗಿ ಪುರುಷಚೇತನನಾದರೂ ಪಾಪನಿಮಿತ್ತದಿಂದ ಸ್ತ್ರೀಜನ್ಮವನ್ನು ಹೊಂದಿದವರು ಮತ್ತು ಸ್ವತಃ ಬ್ರಾಹ್ಮಣಾದಿಗಳಾದರೂ ಪಾಪದಿಂದ ವೈಶ್ಯಶೂದ್ರರಾಗಿ ಹೀನವರ್ಣದಲ್ಲಿ ಜನ್ಮತಾಳಿದವರು ಹೀಗೆ ಸ್ವಾಭಾವಿಕವಾಗಿ ಉತ್ತಮ ಚೇತನರಾದರೂ ಪಾಪಕೃತ್ಯಾಚರಣೆಯಿಂದ ಯಾರು ಹೀನ ಜನ್ಮವನ್ನು ಹೊಂದಿ ಆಗಲೂ ನನ್ನಲ್ಲಿಯೇ ಅನನ್ಯ ಭಕ್ತಿಯುಳ್ಳವರಾಗುವರೋ ಅವರೂ ಕೂಡ ಉತ್ತಮಲೋಕವನ್ನು ಹೊಂದುವರು. ಹೀಗಿರುವಾಗ ಸ್ವತಃ ಶೂದ್ರಾದಿಗಳಾದ ಚೇತನರು ಪುಣ್ಯ ವಿಶೇಷದಿಂದ ಬ್ರಾಹ್ಮಣರೂ, ರಾಜರೂ, ಋಷಿಗಳೂ ಆಗಿ ಭಗವಂತನಲ್ಲಿ ಅನನ್ಯ ಭಕ್ತಿಯುಳ್ಳವರಾದರೆ ಅವರು ಮುಕ್ತರಾಗುವರೆಂದು ಹೇಳುವುದೇನು? ಮುಕ್ತರಾಗಿಯೇ ತೀರುತ್ತಾರೆ. ಈ ರೀತಿ ಭಕ್ತಿಯು ಸರ್ವೋತ್ತಮ ಸಾಧನವಾಗಿದೆ. ಪಾರ್ಥ! ನೀನಾದರೋ ಭಕ್ತ್ಯಾದಿಸಾಧನಾನುಷ್ಠಾನಕ್ಕೆ ಯೋಗ್ಯವಾದ ಈ ಭೂಲೋಕದಲ್ಲಿ ಜನ್ಮವನ್ನು ಹೊಂದಿರುವೆ. ಈ ಜನ್ಮವೇ ಶಾಶ್ವತವಲ್ಲ. ಸುಖರಹಿತವೂ ಆಗಿದೆ. ಆದಕಾರಣ ವಿಳಂಬಮಾಡದೆ ನೀನು ನನ್ನನ್ನು ಭಜಿಸು.

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು**
**ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ॥9-34॥**

**34.** ಭಜನೆಮಾಡುವ ರೀತಿಯನ್ನು ತೋರಿಸಿ ಅದರಿಂದಾಗುವ ಫಲವನ್ನು ಭಗವಂತನು ವಿವರಿಸುತ್ತಾನೆ:- ಪಾರ್ಥ! ನನ್ನಲ್ಲಿಯೇ ಮನಸ್ಸಿಡು. ನನ್ನಲ್ಲಿಯೇ ಅಸಾಧಾರಣ ಭಕ್ತಿಮಾಡು. ನನ್ನ ಪ್ರೀತ್ಯರ್ಥವಾಗಿಯೇ ಯಾಗಾದಿ ಕರ್ಮಗಳನ್ನಾಚರಿಸು. ನನ್ನನ್ನೇ ನಮಸ್ಕರಿಸು. ಈ ರೀತಿ ನಾನೇ

ಮುಖ್ಯಾಶ್ರಯನೆಂಬ ಅನುಸಂಧಾನವುಳ್ಳವನಾಗಿ ನನ್ನಲ್ಲಿಯೇ ಮನಸ್ಸನ್ನು ಯೋಜನೆಮಾಡಿ ನನ್ನನ್ನೇ ಧ್ಯಾನ ಮಾಡುವುದರಿಂದ ನನ್ನನ್ನೇ ಹೊಂದುವೆ ಎಂದು ಭಗವಂತನು ಉಪದೇಶಿಸಿದನು.

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ರಾಜವಿದ್ಯಾರಾಜಗುಹ್ಯಯೋಗೋ ನಾಮ ನವಮೋಽಧ್ಯಾಯಃ॥9-[34]॥

## ದಶಮೋಽಅಧ್ಯಾಯ॥10-[42]॥

ಆರನೆಯ ಅಧ್ಯಾಯದಲ್ಲಿ ಧ್ಯಾನಯೋಗವು ಉಕ್ತವಾಗಿದೆ. ತಿರುಗಿ ಒಂಭತ್ತನೇಯ ಅಧ್ಯಾಯದ ಕೊನೆಯಲ್ಲಿ 'ಮನ್ಮನಾ' ೯-೩೪, ಇತ್ಯಾದಿ ಶ್ಲೋಕದಿಂದ ಆ ಧ್ಯಾನವನ್ನು ಸ್ಮರಣೆಗೆ ತರಲಾಯಿತು. ಧ್ಯೇಯವಸ್ತುವನ್ನು ನಿರ್ಧರಿಸಿ ತಿಳಿದ ಹೊರತು ಧ್ಯಾನವು ಸಿದ್ಧಿಸುವುದಿಲ್ಲ. ಆದಕಾರಣ ಧ್ಯಾನಸಿದ್ಧಿಗಾಗಿ ಭಗವಂತನ ವಿಭೂತಿರೂಪಗಳನ್ನು ಈ ಅಧ್ಯಾಯದಲ್ಲಿ 'ಹಂತ ತೇ ಕಥಯಿಷ್ಯಾಮಿ' ಇತ್ಯಾದಿ ಶ್ಲೋಕಗಳಿಂದ' ಪ್ರಚುರವಾಗಿ ಹೇಳುತ್ತಾನೆ. ಅದಕ್ಕೆ ಮುಂಚಿತವಾಗಿ ಮೊದಲು ಭಗವಂತನು ಬುದ್ಧ್ಯಾದಿಗಳನ್ನೂ, ವಿಶೇಷ ಸಾಮರ್ಥ್ಯಯುಕ್ತರಾದ ಮಹರ್ಷ್ಯಾದಿಗಳನ್ನೂ ನಿರ್ಮಾಣಮಾಡುವನೆಂಬ ಅವನ ಮಹಿಮೆಯನ್ನು ಹೇಳುತ್ತಾನೆ. 'ಭೋಕ್ತಾರಂ ಯಜ್ಞತಪಸಾಂ' ೫-೨೯, ಇತ್ಯಾದಿ ಪಂಚಮಾಧ್ಯಾಯಾಂತ್ಯದಲ್ಲಿ ಧ್ಯೆಯಸ್ವರೂಪವು ವರ್ಣಿತವಾಗಿದ್ದರೂ, ಅದು ಸಾಮಾನ್ಯವು, ಉತ್ತಮಾಧಿಕಾರಿಗಳಿಗೆ ಉಪಾಸ್ಯವಾದ ವಿಭೂತಿರೂಪಗಳು ಇಲ್ಲಿ ಹೇಳಲ್ಪಡುತ್ತವೆ. ಅವೂ ಸಹ (ರಸೋಽಹಮುಪ್ಸು ೭-೮ ಮತ್ತು 'ಅಹಂ ಕ್ರತುಃ' ೯-೧೬. ಇತ್ಯಾದಿ ಶ್ಲೋಕಗಳಿಂದ ಹಿಂದೆಯೇ ಸಂಕ್ಷೇಪವಾಗಿ ವರ್ಣಿತವಾಗಿದೆ. ಅದನ್ನೇ ಇಲ್ಲಿ ವಿಸ್ತಾರವಾಗಿ ಹೇಳುತ್ತಾನೆ . ಈ ಅಭಿಪ್ರಾಯದಿಂದಲೇ ಇದು ವಿಭೂತ್ಯಧ್ಯಾಯವೆಂದು ಪ್ರಸಿದ್ಧವಾಗಿದೆ.

ಶ್ರೀ ಭಗವಾನುವಾಚ

**ಭೂಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ**
**ಯತ್ತೇಹಂ ಪ್ರಿಯಮಾಣಾಯ ವಕ್ಷ್ಯಾಮಿ ಹಿತಕಾಮ್ಯಯಾ॥10-1॥**

1. ಇಲ್ಲಿ ಹೇಳುವ ವಿಷಯ ಶ್ರವಣದಲ್ಲಿ ಪಾರ್ಥನಿಗೆ ವಿಶ್ವಾಸವನ್ನುಹುಟ್ಟಿಸುವುದಕ್ಕಾಗಿ ತನ್ನ ವಚನವನ್ನು ಪ್ರಶಂಸೆಮಾಡಿ ಅವನನ್ನು ಪ್ರೋತ್ಸಾಹಗೊಳಿಸುತ್ತ ಭಗವಂತನು ಪ್ರತಿಜ್ಞೆ ಮಾಡುತ್ತಾನೆ:- ಮಹಾಪರಾಕ್ರಮಶಾಲಿಯಾದ ಅರ್ಜುನ! ಭಗವನ್ಮಾಹಾತ್ಮ್ಯಪರವಾದ ಉತ್ತಮ ವಚನವನ್ನು ಹೇಳುವೆನು. ಅದನ್ನು ಕೇಳಿ ಅದರಲ್ಲಿ ವಿಶ್ವಾಸವಿಡು. ಇದುವರೆಗಿನ ನನ್ನ ಮಾತನ್ನು

ಕೇಳಿ ಸಂತೋಷ ಪಡುತ್ತಿರುವುದರಿಂದ ಮುಖ್ಯ ಶೋತೃವಾದ ನಿನಗೆ ಹಿತವಾಗಲೆಂಬ ಇಚ್ಛೆಯಿಂದ ಇದನ್ನು ಹೇಳುವೆನು ಎಂಬುದಾಗಿ, ಭಗವಂತನು ಪ್ರತಿಜ್ಞೆ ಮಾಡಿರುವನು.

ನ ಮೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ

ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ॥10-2॥

2. ಈಗ ಭಗವಂತನ ಮಾಹಾತ್ಮ್ಯೆಯನ್ನು ಹೇಳುತ್ತಾನೆ:- ಸಕಲ ದೇವತೆಗಳು ಮತ್ತು ಮಹರ್ಷಿಗಳೂ ಸಹ 'ಮೇ ಪ್ರಭವಂ'=ನನ್ನಿಂದಲೇ ಸಕಲ ಜಗತ್ತೂ ಉತ್ಪನ್ನವಾಗುವುದು, ನನಗೆ ಉತ್ಪತ್ತಿಯಿಲ್ಲವಾದರೂ ರಾಮಕೃಷ್ಣಾದಿ ನಾನಾರೂಪಗಳಿಂದ ನಾನೇ ಆವಿರ್ಭವಿಸುವೆನು, ಅನೇಕ ವಿಧವಾದ ವಿಭೂತಿರೂಪಗಳಿಂದ ಅಲ್ಲಲ್ಲಿರುವೆನು ಮುಂತಾದ ನನ್ನ ಮಹಿಮೆಯನ್ನು ತಿಳಿದವರಲ್ಲ ಜ್ಞಾನಿಗಳೆಂದು ಸಮ್ಮತರಾದ ದೇವರ್ಷ್ಯಾದಿಗಳೇ ಭಗವಂತನಿಂದಾಗುವ ತಮ್ಮ ಮತ್ತು ಇತರ ಜಗತ್ತಿನ ಉತ್ಪತ್ತಿ ಪ್ರಕಾರವನ್ನು ಅರಿಯರು ಅಂದಮೇಲೆ ಇತರರು ಭಗವದಧೀನವಾದ ಜಗದುತ್ಪತ್ತಿಯನ್ನು ತಿಳಿದಿಲ್ಲವೆಂದು ಹೇಳಬೇಕಾದುದೇ ಇಲ್ಲ ಎಂದು ಭಾವ. ಜಗತ್ತಿನಂತೆ ನನಗೂ ಉತ್ಪತ್ತಿಯಿದೆಯೆಂದು ತಿಳಿಯಬಾರದು. ಏಕೆಂದರೆ:- ದೇವತೆ, ಋಷಿ, ಮನುಷ್ಯ ಮುಂತಾದ ಸಕಲ ಪ್ರಪಂಚಕ್ಕೂ ಉತ್ಪಾದಕನು, ಬುದ್ಧಿ-ಜ್ಞಾನ-ಶಕ್ತ್ಯಾದಿ ಪ್ರವರ್ತಕನೂ ಆಗಿ ಸರ್ವವಿಧದಿಂದಲೂ ನಾನೇ ಕಾರಣನಾಗಿರುವೆನು. ಸರ್ವವೂ ನನ್ನಿಂದಲೇ ಸೃಷ್ಟವಾಗಿರುವುದರಿಂದ ನನಗೆ ಜನಕನಾಗುವವನಾರೂ ಇಲ್ಲವಾದಕಾರಣ ನನಗೆ ಉತ್ಪತ್ತಿಯಿಲ್ಲವೆಂದು ಸಿದ್ಧಿಸುವುದೆಂದು ಭಾವ.

ಯೋ ಮಾಮಜಮನಾದಿಂ ಚ ವೇ ಲೋಕಮಹೇಶ್ವರಂ

ಅಸಂಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ॥10-3॥

3. ಭಗವದ್ಜ್ಞಾನವು ಮೋಕ್ಷಪ್ರದವೆಂಬ ಮಹಿಮೆಯನ್ನು ಹೇಳು ಹೇಳುತ್ತಾನೆ:- ಯಾವ ಸಾಧಕನು ಉತ್ಪತ್ತಿಹೀನನು, ಸರ್ವ ಚೇಷ್ಟೆಗಳಿಗೂ ನಿಯಾಮಕನು, ಜಗತ್ಕಾರಣನು ಮತ್ತು ಲೋಕಕ್ಕೆಲ್ಲಾ ಸ್ವತಂತ್ರನಿಯಾಮಕನು ಎಂಬುದಾಗಿ ನನ್ನನ್ನು ತಿಳಿಯುವನೋ ಅವನು ಸಂಮೋಹಹೀನನಾಗಿ ಸಕಲ ಪಾಪಗಳನ್ನೂ ಪರಿಹರಿಸಿಕೊಂಡು ಮುಕ್ತನಾಗುವನು.

ಬುದ್ಧಿರ್ಜ್ಞಾನಮಸಮ್ಮೋಹಃ ಕ್ಷಮಾ ಸತ್ಯಂ ದಮಃ ಶಮಃ

ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ॥10-4॥

**ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಃ**

**ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ॥10-5॥**

**4-5.** ಭಗವಂತನೇ ಬುದ್ಧ್ಯಾದಿಪ್ರದನೆಂಬ ಮಹಿಮೆಯನ್ನು ಹೇಳುತಾನೆ:- ಕಾರ್ಯಾಕಾರ್ಯ ನಿಶ್ಚಯವು, ಜ್ಞಾನ (ಸಂಶಯಾದಿಗಳೂ ಜ್ಞಾನವೇ), ಅಕಾರ್ಯೇಚ್ಛಾತ್ಯಾಗ ಅಥವಾ ಮಿಥ್ಯಾಜ್ಞಾನ ಪರಿತ್ಯಾಗ, ಅಪಕಾರ ಮಾಡಿದವರಲ್ಲಿ ಕೋಪಗೊಳ್ಳದೆ ಪ್ರತಿಕಾರಮಾಡದಿರುವುದು, ಯಥಾರ್ಥಜ್ಞಾನಪೂರ್ವಕವಾದ ಅನುಷ್ಠಾನ, ಇಂದ್ರಿಯ ನಿಗ್ರಹ, ಭಗವನ್ನಿಷ್ಠತಾಬುದ್ಧಿ, ಅನುಕೂಲವೆಂದು ತಿಳಿಯಲ್ಪಡುವುದು, ಪ್ರತಿಕೂಲವೆಂದು ತಿಳಿಯಲ್ಪಡುವುದು, ಉತ್ಪತ್ತಿ, ಸ್ಥಿತಿ, ಭೀತಿ, ಅದಕ್ಕೆ ವಿರುದ್ಧವಾದ ಮನೋವ್ಯಾಪಾರ, ಇತರ ಪ್ರಾಣಿಗಳಿಗೆ ಹಿಂಸೆಮಾಡದಿರುವುದು, ಸುಖದುಃಖಾದಿ ದ್ವಂದ್ವಗಳು ಸಂಭವಿಸಿದಾಗ ಉಬ್ಬಿ ಕುಗ್ಗಿ ವಿಕಾರವಾಗದಿರುವಿಕೆ, ವಿಷಯಸುಖವು ಸಾಕು ಎಂಬ ಅಲಂಬುದ್ಧಿಯು, ಬ್ರಹ್ಮಚರ್ಯಾದಿಗಳು, ನ್ಯಾಯಮಾರ್ಗದಲ್ಲಿ ಸಂಪಾದಿಸಿದುದನ್ನು ಇತರರಿಗೆ ಕೊಡುವುದು, ಕೀರ್ತಿ, ಅಪಕೀರ್ತಿ ಇತ್ಯಾದಿ ಅನೇಕ ವಿಧವಾದ ಈ ಧರ್ಮಗಳೆಲ್ಲವೂ ಪ್ರಾಣಿಗಳಿಗೆ ನನ್ನ ದೆಸೆಯಿಂದಲೇ ಬರುತ್ತವೆ.

**ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಸ್ತಥಾ**

**ಮದ್ಭಾವಾ ಮನಸಾ ಜಾತಾ ಯೇಷಾಂ ಲೋಕ ಇಮಾಃ ಪ್ರಜಾಃ॥10-6॥**

**6.**ಬುದ್ಧ್ಯಾದಿಗಳು ಮಾತ್ರವೇ ಅಲ್ಲ; ಪ್ರಾಣಿಗಳೂ ಸಹ ನನ್ನಿಂದಲೇ ಉತ್ಪನ್ನವಾಗುತ್ತವೆಂದು ಹೇಳುತ್ತಾನೆ:- ಪೂರ್ವಮನ್ವಂತರಸ್ಥರಾದ ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠರೆಂಬ ಏಳುಮಂದಿ ಮಹರ್ಷಿಗಳು ಮತ್ತು ಭೂಲೋಕದಲ್ಲಿರುವ ಪ್ರಜೆಗಳು ಯಾವ ಮನುಗಳ ಪುತ್ರಪೌತ್ರಾದಿಗಳಾಗಿ ಅವರ ವಂಶಪರಂಪರೆಗೆ ಸೇರಿರುವರೋ ಅಂತಹ, ಮೂಲಪುರುಷರಾದ ಸ್ವಾಯಂಭುವ, ಸ್ವಾರೋಚಿಷ, ರೈವತ, ಉತ್ತಮ ಎಂಬ ನಾಲ್ಕು ಮಂದಿ ಮನುಗಳು ಅಥವಾ '[1]ಮನವಶ್ಚತ್ವಾರಃ' - ವಿಶೇಷಜ್ಞಾನವಂತರಾದುದರಿಂದ ಮನುನಾಮಕರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು [2]ಜಾತಿಯವರಾದ ದೇವತೆಗಳು ನನ್ನಿಂದಲೇ ಹುಟ್ಟಿದವರು.

1. ಮನವಃ ಎಂಬ ಶಬ್ದವು ಮನು=ಅವಬೋಧನೇ ಎಂಬ ಧಾತುವಿನಿಂದ ನಿಷ್ಪನ್ನವಾಗಿರುವುದರಿಂದ ಆ ಹೆಸರಿನವರು ವಿಶೇಷಜ್ಞಾನವಂತರೆಂದು ಅರ್ಥವಾಗುತ್ತದೆ.

2.ವಿಷ್ಣೋರ್ಬ್ರಾಹ್ಮಣಜಾತಿಃ ಸಂಜ್ಞೆ ಬ್ರಹ್ಮಾ ಚತುರ್ಮುಖಃ
ಇತೋಽಗ್ರೇ ಜಗತಸ್ತಸ್ಮಾತ್ ಕ್ಷತ್ರಜಾತಿರಜಾಯತ

ವಾಯುಃ ಸದಾಶಿವೋಽನಂತೋ ಗರುಡಃ ಶಕ್ರ ಏವ ಚ
ಕಾಮಶ್ಚ ವರುಣಶ್ಚೈವ ಸೋಮಃ ಸೂರ್ಯೋ ಯಮಸ್ತಥಾ

ಏವಮಾದ್ಯಾಃ ಕ್ಷತ್ರಿಯಾಸ್ತು ದೇವತಾ ಬ್ರಹ್ಮನಿರ್ಮಿತಾಃ
ವಿವಸ್ವದಿಂದ್ರ ವರುಣ ವಿಷ್ಣುಭ್ಯೋಽನ್ಯೇಽದಿತೇಃ ಸುತಾಃ

ರುದ್ರಾದನ್ಯೇ ತಥಾ ರುದ್ರಾಃ ವಾಯೋರನ್ಯೇಚ ವಾಯವಃ
ಅಗ್ನೇರನ್ಯೇ ಚ ವಸವೋ ವೈಶ್ಯಾ ಇತ್ಯೇವ ಕೀರ್ತಿತಾಃ
ಅಶ್ವಿನೌ ಪೃಥಿವೀ ಚೈವ ಕಾಲೋ ಮೃತ್ಯೈವ ಏವ ಚ
ಶೂದ್ರದೇವಾಃ ಸಮುದ್ದಿಷ್ಟಾ ದೇವವರ್ಣಾ ಇತಿ ಸ್ಮೃತಾ - ಬೃಹದ್ಭಾಷ್ಯ ಪ್ರಥಮಾಧ್ಯಾಯ ಅವ್ಯಾಕೃತಬ್ರಾಹ್ಮಣ .4

ಈ ಪ್ರಮಾಣ ವಚನದಲ್ಲಿ ಹೇಳಿರುವಂತೆ ದೇವತೆಗಳಲ್ಲಿ ನಾಲ್ಕು ಜಾತಿಗಳನ್ನೂ, ಆಯಾ ಜಾತಿಗೆ ಸೇರಿದ ದೇವತೆಗಳ ವಿಭಾಗವನ್ನೂ ತಿಳಿಯಬೇಕು,

**ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ |**

**ಸೋऽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ॥10-7॥**

7. ಇಂತಹ ಸರ್ವಕರ್ತೃತ್ವ ಜ್ಞಾನಿಗಾಗುವ ಫಲವನ್ನು ಹೇಳುತ್ತಾನೆ:-'ನ ಮೇ ಸುರಗಣಾ ವಿದುಃ' ಇತ್ಯಾದಿಗಳಿಂದ ಉಕ್ತವಾದ ನನ್ನ ವಿಭೂತಿಯನ್ನು, ದೇವಗಣಕ್ಕೂ ಅಜ್ಞೇಯವಾದ ಮಹಿಮೆಯನ್ನೂ, ಮುಂದೆ ಹೇಳುವ ನಾನಾವಿಧ ರೂಪಗಳನ್ನು ಮತ್ತು ಬುದ್ಧ್ಯಾದಿ ಸರ್ವಕರ್ತೃತ್ವ ಸಾಮರ್ಥ್ಯಾತಿಶಯವನ್ನೂ ಯಾವಾತನು ಯಥಾವತ್ತಾಗಿ ತಿಳಿಯುವನೋ ಅವನು ನಿಶ್ಚಲಧ್ಯಾನಯೋಗಸಂಪನ್ನನಾಗುವನು. ಈ ವಿಷಯದಲ್ಲಿ ಸಂದೇಹವಿಲ್ಲ.

**ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ**

**ಇತಿ ಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ॥10-8॥**

8. ಉಕ್ತಫಲದಲ್ಲಿ ಆದರವನ್ನು ಹುಟ್ಟಿಸುವುದಕ್ಕಾಗಿ ಪೂರ್ವೋಕ್ತ ಮಾಹಾತ್ಮ್ಯಜ್ಞಾನಪೂರ್ವಕವಾಗಿ ನನ್ನನ್ನು ಭಜಿಸುವವರಿದ್ದಾರೆಂದು ಈ ಎರಡು ಶ್ಲೋಕಗಳಿಂವ ಹೇಳಿ ಅದರ ಮುಂದಿನ 'ತೇಷಾಂ' ಇತ್ಯಾದಿ ಎರಡು ಶ್ಲೋಕಗಳಿಂದ ಫಲವನ್ನು ವ್ಯಕ್ತಪಡಿಸುತ್ತಾನೆ:- ಕೃಷ್ಣನಾದ ನಾನು ಸಕಲ ಜಗತ್ತಿಗೂ ಉತ್ಪಾದಕನು. ನನ್ನಿಂದಲೇ ಸಕಲ ಪ್ರಾಣಿಗಳೂ ಇಷ್ಟ ಸಾಧನದಲ್ಲಿ ಮತ್ತು ಅನಿಷ್ಟ ಪರಿಹಾರೋಪಾಯದಲ್ಲಿಯೂ ಪ್ರವರ್ತಿಸುತ್ತವೆ. ಇಷ್ಟೇ ಅಲ್ಲದೆ ಸಂಹಾರಾದಿಗಳೂ ನನ್ನಿಂದಲೇ ಆಗುತ್ತವೆ. ಹೀಗೆ ತಿಳಿದು ಜ್ಞಾನಿಗಳು ಭಕ್ತಿಸಂಪನ್ನರಾಗಿ ನನ್ನನ್ನು . ಸೇವಿಸುತ್ತಾರೆ=ಪತ್ರಪುಷ್ಪಾದಿಗಳಿಂದ ಪೂಜಿಸುವರು ಮತ್ತು ಧ್ಯಾನಿಸುವರು.

**ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಂ**

**ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ॥10-9॥**

9.ಈ ರೀತಿಯಾಗಿ ಭಜನಮಾಡುವವರು ಯಾವಾಗಲೂ ನನ್ನಲ್ಲಿಯೇ ಮನಸ್ಸನ್ನಿಟ್ಟು, ಚಕ್ಷುರಾದೀಂದ್ರಿಯಗಳನ್ನು ನನ್ನಲ್ಲಿಯೇ ಪ್ರವರ್ತಿಸುವಂತೆ ಮಾಡಿ, ನನ್ನ ವಿಷಯದಲ್ಲಿಯೇ ಸಕಲ ವ್ಯಾಪಾರಗಳನ್ನೂ ಮಾಡುವವರಾಗಿ, ಶಿಷ್ಯರಿಗೂ ನನ್ನ ವಿಷಯವನ್ನೇ ಉಪದೇಶಿಸುತ್ತ, ಅಂತಹ

ಭಕ್ತರಿಬ್ಬರು ಕಲೆತಾಗ ಪರಸ್ಪರ ನನ್ನ ವಿಷಯವನ್ನೇ ಸಲ್ಲಾಪ ಮಾಡುತ್ತ ಸುಖವಾಗಿರುವರು. ಅದರಿಂದಲೇ ತೃಪ್ತರಾಗಿ ವಿಷಯಗಳಲ್ಲಿ ಅಲಂಬುದ್ಧಿಯನ್ನು ಹೊಂದುವರು.

**ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ**

**ದದಾಮಿ ಬುದ್ಧಿ ಯೋಗಂ ತಂ ಯೇನ ಮಾಮುಪಯಾಂತಿ ತೇ॥10-10॥**

10.ಯಾವಾಗಲೂ ನನ್ನಲ್ಲಿಯೇ ಚಿತ್ತವನ್ನು ಸ್ಥಾಪಿಸಿ ಭಕ್ತಿಪೂರ್ವಕವಾಗಿ ನನ್ನನ್ನು ಸೇವಿಸುವಂತಹ ಭಕ್ತರಿಗೆ ಮಾತ್ರ ನನ್ನನ್ನು ಹೊಂದುವುದಕ್ಕೆ ಸಾಧಕವಾದ ಜ್ಞಾನವೆಂಬ ಮುಖ್ಯೋಪಾಯವನ್ನು ಕೊಡುವೆನು. ಅಂತಹ ಭಕ್ತರಿಗೆ ನಾನು ದರ್ಶನವಿತ್ತು ಮುಕ್ತಿಯನ್ನು ಅನುಗ್ರಹಿಸುವೆನೆಂದು ಭಾವ.

**ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ**

**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ॥10-11॥**

11. ಅನಾದಿ ಸಿದ್ಧವಾದ ಅಜ್ಞಾನದಿಂದ ಬದ್ಧರಾಗಿರುವ ಜೀವರು ಪರಮಾತ್ಮನನ್ನು ಹೊಂದುವ ಬಗೆ ಹೇಗೆ? ಎಂದರೆ, ಭಗವಂತನು ಹೇಳುತ್ತಾನೆ:- ಅಂತಹ ಭಕ್ತರಿಗೆ ಅನುಗ್ರಹ ಮಾಡುವುದಕ್ಕಾಗಿಯೇ ನಾನು ಆ ಯೋಗಿಯ ಚಿತ್ತವೃತ್ತಿಯಲ್ಲಿಯೇ ನಿಂತು ಪ್ರತಿಬಂಧಕವನ್ನು ನಾಶಪಡಿಸಲು ಸಮರ್ಥವಾದ, ಪ್ರಕಾಶಮಾನವಾದ ಜ್ಞಾನಾಖ್ಯದೀಪದಿಂದ ಅಜ್ಞಾನದಿಂದುತ್ಪನ್ನವಾದ ಸುಖದುಃಖಾದಿಕ್ಲೇಶರೂಪ ಬಂಧವನ್ನು ನಾಶಪಡಿಸುವೆನು. ಹೀಗೆ ನನ್ನನ್ನು ಹೊಂದಲು ತಡೆಯಾಗಿರುವ ಬಂಧವನ್ನು ನಾನೇ ಪರಿಹರಿಸುವುದರಿಂದ ನನ್ನ ಪ್ರಾಪ್ತಿರೂಪವಾದ ಮುಕ್ತಿಯು ನಿರಾತಂಕವಾಗಿ ಅವರಿಗೆ ದೊರೆಯುತ್ತದೆ ಎಂದು ಭಾವ.

**ಅರ್ಜುನ ಉವಾಚ**

**ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್**

**ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಮ್॥10-12॥**

**ಆಹುಸ್ತ್ವಾಮೃಷಯಃ ಸರ್ವೇ ದೇವರ್ಷಿನಾರದಸ್ತಥಾ**

**ಅಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ॥10-13॥**

**ಸರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ**

**ನಹಿ ತೇ ಭಗವನ್ ವ್ಯಕ್ತಿಂ ವಿದುರ್ದೇವಾ ನ ದಾನವಾಃ॥10-14॥**

12-14, ಹೀಗೆ ಸಂಕ್ಷೇಪವಾಗಿ ಉಕ್ತವಾದ ವಿಭೂತಿ ಮತ್ತು ಭಗವಂತನ ವಿಶೇಷ ಸಾಮರ್ಥ್ಯಾದಿಗಳನ್ನು ಕೇಳಿದ ಅರ್ಜುನನು ಆ ವಿಭೂತ್ಯಾದಿಗಳನ್ನೇ ವಿಸ್ತಾರವಾಗಿ ತಿಳಿಯಬೇಕೆಂದು ಬಯಸಿ ಶ್ರೀಕೃಷ್ಣನನ್ನು ಸ್ತೋತ್ರಮಾಡಿ ವಿಭೂತಿಯನ್ನು ವಿಸ್ತರಿಸಿ ಹೇಳಬೇಕೆಂದು ಪ್ರಾರ್ಥಿಸುತ್ತಾನೆ:- ಕೇಶವ=ಬ್ರಹ್ಮ ರುದ್ರ ಪ್ರವರ್ತಕನಾದ ಸ್ವಾಮಿಯೇ! ನೀನು 'ಪರಬ್ರಹ್ಮ'=ಪರಿಪೂರ್ಣನು, ಉತ್ತಮಾಶ್ರಯನು, ಪರಮಶುದ್ಧನೂ ಆಗಿರುವೆ. ನಿನ್ನನ್ನು ವಸಿಷ್ಠಾದಿ ಋಷಿಗಳು ದೇವರ್ಷಿಯಾದ ನಾರದನು, ಅಸಿತ-ದೇವಲ ಋಷಿಗಳು ಮತ್ತು ಶ್ರೀಕೃಷ್ಣ ದ್ವೈಪಾಯನನೂ ಸಹ ಪೂರ್ಣಷಡ್ಗುಣನು, ಅನಾದ್ಯನಂತ ಕಾಲದಲ್ಲಿಯೂ ವಿಕಾರಹೊಂದದೆ ಏಕಪ್ರಕಾರವಾಗಿರುವವನು, ಲೋಕವಿಲಕ್ಷಣನು, ಜಗತ್ಕಾರಣನು, ಉತ್ಪತ್ತಿರಹಿತನು ಮತ್ತು ಮಹಾಸಮರ್ಥನು' ಎಂದು ಹೇಳುತ್ತಾರೆ. ನೀನೂ ಕೂಡ ಇಂತಹ ನಿನ್ನ ಪ್ರಭಾವವನ್ನು ಹೇಳುತ್ತಿರುವೆ. ಕೇಶವ! ನೀನು ನನಗೆ ಏನನ್ನು ಹೇಳಿರುವೆಯೋ ಈ ಸಕಲ ಮಾಹಾತ್ಮ್ಯಯನ್ನೂ ಸತ್ಯವೆಂದು ತಿಳಿದಿರುವೆನು. ಷಡ್ಗುಣಪೂರ್ಣನಾದ ಸ್ವಾಮಿಯೇ! ನಿನ್ನ ವಿಶೇಷ ಸಾಮರ್ಥ್ಯವನ್ನು ದೇವಾಸುರರೂ ಸಹ ತಿಳಿದವರಲ್ಲ. ಈ ಪ್ರಮೇಯವು ಶ್ರುತ್ಯಾದಿ ಪ್ರಮಾಣ ಸಿದ್ಧವಾಗಿದೆ.

**ಸ್ವಯಮೇವಾತ್ಮನಾತ್ಮಾನಂ ವೇತ್ಥ ತ್ವಂ ಪುರುಷೋತ್ತಮ**
**ಭೂತಭಾವನ ಭೂತೇಶ ದೇವದೇವ ಜಗತ್ಪತೇ॥10-15॥**

15.ಹಾಗಾದರೆ ಇದನ್ನು ತಿಳಿದಿರುವವರು ಯಾರು? ಎಂದರೆ, ಹೇಳುತ್ತಾನೆ:- ಸ್ವಾಮಿ ನೀನು ಈ ಪ್ರಾಣಿಗಳಿಗೆಲ್ಲಾ ಉತ್ಪಾದಕನು ಮತ್ತು ನಿಯಾಮಕನು, ಸಕಲ ದೇವತೆಗಳಿಗೂ ಪೂಜ್ಯನು, ಜಗತ್ಪಾಲಕನೂ ಆಗಿ ಪುರುಷೋತ್ತಮನಾಗಿರುವೆ. ಅಂತಹ ನಿನ್ನ ಸ್ವರೂಪವನ್ನು ಸಂಪೂರ್ಣವಾಗಿ ಇತರರ ಸಹಾಯವಿಲ್ಲದೆ ಸ್ವಸಾಮರ್ಥ್ಯದಿಂದ ನೀನು ಮಾತ್ರ ತಿಳಿದಿರುವೆ. ಈ ರೀತಿ ಸಮಗ್ರವಾಗಿ ನಿನ್ನನ್ನು ಇತರರಾರೂ ತಿಳಿಯಲಾರರು. ನೀನೊಬ್ಬನೇ ತಿಳಿದವನೆಂದು ಭಾವ.

**ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ**
**ಯಾಭಿರ್ವಿಭೂತಿಭಿರಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ॥10-16॥**

16. ಹೀಗೆ ಅರ್ಜುನನು ಭಗವಂತನನ್ನು ಸ್ತೋತ್ರಮಾಡಿ ಈಗ ಪ್ರಾರ್ಥಿಸುತ್ತಾನೆ:- ಸ್ವಾಮಿ ! ಯಾವ[1] ವಿಭೂತಿರೂಪಗಳಿಂದ ನೀನು ಈ ಪೃಥಿವ್ಯಾದಿ ಲೋಕಗಳಲ್ಲಿ ವ್ಯಾಪಿಸಿರುವೆಯೋ ಅದ್ಭುತಗಳಾದ ಆ ವಿಭೂತಿರೂಪಗಳನ್ನು ನನ್ನ ಯೋಗ್ಯತೆಗೆ ತಕ್ಕಂತೆ ಸಂಪೂರ್ಣವಾಗಿ ಉಪದೇಶಿಸು, ಇದನ್ನು ಉಪದೇಶಿಸಲು ನೀನೇ ಸಮರ್ಥನು.

| |
|---|
| 1. ವಿಭೂತಯೋ ನಾಮ ವಿವಿಧತಯಾ ನಾನಾರೂಪತಯಾ ರಾಮಕೃಷ್ಣಾದಿತಯಾ ಭೂತಾನಿ ರೂಪಾಣಿ. ಯದ್ವಾ ಯೇಷಾಂ ವಿಷ್ಣು ಸ್ವರೂಪಾಣಂ ಸನ್ನಿಧೇರನ್ಯವಸ್ತುಷು \| ವಿಶಿಷ್ಟತ್ವಂ ಸ್ವಜಾತೇಃ ಸ್ಯಾದ್ವಿಭೂತ್ಯಾಖ್ಯಾನಿ ತಾನಿ ತು' |
| (ವಿಭೂತಿ ಎಂದರೆ ನಾನಾರೂಪಗಳಿಂದಿರುವುದು. ಈ ನಾನಾರೂಪಗಳು ಭಗವಂತನ ಸಾಕ್ಷಾದವತಾರಗಳಾದ ರಾಮಕೃಷ್ಣಾದಿ ರೂಪಗಳು ಮತ್ತು ಇತರ ವಸ್ತುಗಳಲ್ಲಿ ಸನ್ನಿಹಿತ ಭಗವದ್ರೂಪಗಳು ಎಂಬುದಾಗಿ ಎರಡು ಬಗೆಯಾಗಿದೆ. ಸಕಲ ವಸ್ತುಗಳಲ್ಲಿಯೂ ಪರಮಾತ್ಮನು ಅಂತರ್ಗತನಾಗಿದ್ದೇ ಇರುವನು. ಆದರೂ ಆ ರೂಪಗಳೆಲ್ಲವೂ ವಿಭೂತಿರೂಪಗಳಾಗುವುದಿಲ್ಲ. ವಸ್ತುಗಳಲ್ಲಿ ಯಾವಯಾವರೂಪದಿಂದಿದ್ದು ಪರಮಾತ್ಮನು ತನ್ನ ಸಾಮರ್ಥ್ಯವಿಶೇಷವನ್ನು ವ್ಯಕ್ತ ಪಡಿಸಿ ಆ ವಸ್ತುವಿಗೆ ತನ್ನ ಸಜಾತಿವಸ್ತುಗಳಿಗಿಂತಲೂ ಆಧಿಕ್ಯದಾಯಕನಾಗುವನೋ ಆ ಭಗವದ್ರೂಪಗಳು ಮಾತ್ರ ವಿಭೂತಿಯೆನಿಸುವುವು. ಅವು ಆಯಾಯಾ ವಸ್ತುಗಳಲ್ಲಿ ಸನ್ನಿಹಿತವಾದ ಪರೋಕ್ಷವಿಭೂತಿರೂಪಗಳು. ಭಗವಂತನ ರಾಮಕೃಷ್ಣಾದಿ ರೂಪಗಳು ಪ್ರತ್ಯಕ್ಷವಿಭೂತಿಗಳು. ಮತ್ತೊಬ್ಬ ಜೀವನಲ್ಲಿ ಆವಿಷ್ಟವಾದುವುಗಳಲ್ಲ; ಸಾಕ್ಷಾದವತಾರಗಳು. ಇವು ರಾಮ, ಕೃಷ್ಣ, ಮತ್ಸ್ಯ, ಕೂರ್ಮ ಮುಂತಾದ ನಾಮಗಳಿಂದ ಪ್ರಸಿದ್ಧವಾಗಿ ಬ್ರಹ್ಮಾದಿಗಳಿಗೂ ಅಸಾಧ್ಯವಾದ ವಿಚಿತ್ರ ಸಾಮರ್ಥ್ಯವನ್ನು ತೋರಿಸಿ, ತನ್ನ ಲೀಲೆಯನ್ನು ಕೊಂಡಾಡಿ ಭಜಿಸುವ ಭಕ್ತರಿಗೆ ಮುಕ್ತಿ ಪ್ರದಗಳಾಗುವುವು. ಇವು ಅಸಂಖ್ಯಾಕಗಳಾಗಿವೆ. |
| ಪರೋಕ್ಷವಿಭೂತಿಗಳಲ್ಲಿ ಕೆಲವು ರೂಪಗಳು ತನ್ನ ಅಧಿಷ್ಠಾನವಸ್ತುವಿಗೆ ಸಜಾತೀಯವಾದ ಇತರ ವಸ್ತುಗಳಿಗಿಂತಲೂ ಅಧಿಕ್ಯಪ್ರದವಾಗುವುವು. ಉದಾ:-ಲಕ್ಷ್ಮಿ ದೇವಿಯಲ್ಲಿ ಲಕ್ಷ್ಮಿನಾಮದಿಂದ ಸನ್ನಿಹಿತವಾಗಿರುವ ವಿಭೂತಿರೂಪವು ಆ ದೇವಿಗೆ ಸಜಾತೀಯ ಸಕಲ ಚೇತನರಿಗಿಂತಲೂ ಶ್ರೇಷ್ಠತ್ವ ಸಂಪಾದಕವಾಗಿದೆ. ಅಶ್ವತ್ಥ ವೃಕ್ಷದಲ್ಲಿ ಅಶ್ವತ್ಥನಾಮದಿಂದಿರುವ ಭಗವದ್ರೂಪವು ವೃಕ್ಷ ಜಾತಿಯಲ್ಲೇ ಅಶ್ವತ್ಥವೃಕ್ಷಕ್ಕೆ ಆಧಿಕ್ಯಪ್ರದವಾಗಿದೆ. |

**ಕಥಂ ವಿದ್ಯಾಮಹಂ ಯೋಗಿಂಸ್ತ್ವಾಂ ಸದಾ ಪರಿಚಿಂತಯನ್**
**ಕೇಷು ಕೇಷು ಚ ಭಾವೇಷು ಚಿಂತ್ಯೋಽಸಿ ಭಗವನ್ಮಯಾ॥10-17॥**

**ವಿಸ್ತರೇಣಾತ್ಮನೋ ಯೋಗಂ ವಿಭೂತಿಂ ಚ ಜನಾರ್ದನ**
**ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಂ॥10-18॥**

**17-18.** ಅರ್ಜುನ! ವಿಭೂತಿರೂಪಗಳನ್ನು ಹೇಳಬೇಕೆಂದು ನನ್ನನ್ನೇಕೆ ಪ್ರಾರ್ಥಿಸುವೆ? ನನ್ನನ್ನು ಸರ್ವದಾ ಧ್ಯಾನಮಾಡಿ ವಿಭೂತಿರೂಪಗಳನ್ನು ತಿಳಿಯುನವನಾಗು ಎಂದರೆ, ಅರ್ಜುನನು ಹೇಳುತ್ತಾನೆ:- ಸ್ವಾಮಿ! ನಾನು ಸರ್ವದಾ ನಿನ್ನನ್ನು ಚಿಂತಿಸುವವನಾದರೂ ನಿನ್ನ ವಿಭೂತಿರೂಪಗಳನ್ನು ಹೇಗೆ ತಿಳಿದೇನು? ನೀನು ಅಪರಿಮಿತೈಶ್ವರ್ಯ ಬಲವೀರ್ಯಾದಿ ಶಕ್ತಿಪೂರ್ಣನಾಗಿರುವೆ; ನಿನ್ನ ವಿಭೂತಿಯು ಬಹು ದೊಡ್ಡದು. ಅಲ್ಪಮತಿಯಾದ ನಾನು ತಿಳಿಯುವುದು ಅಸಾಧ್ಯ. ನೀನೇ ಉಪದೇಶಿಸಬೇಕು. ಆದಕಾರಣ ಷಡ್ಗುಣೈಶ್ವರ್ಯಪೂರ್ಣನಾದ ಸ್ವಾಮಿಯೆ! ನೀನು ಯಾವಯಾವ ಪದಾರ್ಥಗಳಲ್ಲಿ ಅವುಗಳಿಗೆ ಸಜಾತೀಯೋತ್ತಮತ್ವ ಸಂಪಾದಕನಾಗಿರುವವನಾಗಿ ನನ್ನಿಂದ ಚಿಂತಿಸಲ್ಪಡುವೆಯೋ ಅಂತಹ ನಿನ್ನ ವಿಭೂತಿರೂಪಗಳನ್ನು ಮತ್ತು ಸಾಮರ್ಥ್ಯವನ್ನೂ ವಿಸ್ತಾರವಾಗಿ ತಿರುತಿರುಗಿ ಹೇಳುವವನಾಗು. ಜನಾರ್ದನ! ನಿನ್ನ ವಚನಾಮೃತವನ್ನು ಕೇಳುತ್ತಿರುವ ನನಗೆ ತೃಪ್ತಿಯಾಗಿಲ್ಲ. ಆದ ಕಾರಣ ವಿಸ್ತರಿಸಿ ಹೇಳು ಎಂಬುದಾಗಿ ಅರ್ಜುನನು ಭಗವಂತನನ್ನು ಪ್ರಾರ್ಥಿಸಿದನು.

ಶ್ರೀ ಭಗವಾನುವಾಚ

**ಹಂತ ತೇ ಕಥಯಿಷ್ಯಾಮಿ ದಿವ್ಯಾ ಹ್ಯಾತ್ಮವಿಭೂತಯಃ**
**ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ॥10-19॥**

19. ಭಗವಂತನು ಅರ್ಜುನನ ಪ್ರಶ್ನೆಗೆ ಉತ್ತರಹೇಳಲು ಪ್ರತಿಜ್ಞೆ ಮಾಡುತ್ತಾನೆ:- ಕುರುಶ್ರೇಷ್ಠ! ಅರ್ಜುನ! ನೀನು ಚೆನ್ನಾಗಿ ಪ್ರಶ್ನೆಮಾಡಿರುವೆ; ನನಗೆ ಬಹಳ ಸಂತೋಷ. ಪರಮಾತ್ಮನ ಅಲೌಕಿಕಗಳಾದ ಯಾವ ವಿಭೂತಿರೂಪಗಳೋ ಅವುಗಳಲ್ಲಿ ಪ್ರಧಾನಗಳಾಗಿರುವುದನ್ನು ನಿನಗೆ ಹೇಳುವೆನು. ಆದರೆ ನನ್ನ ವಿಭೂತಿ ರಾಶಿಯು ಅನಂತವಾಗಿದೆ. ಅದರ ಸಮಾಪ್ತಿಯೇ ಇಲ್ಲವಾದುದರಿಂದ ನೀನು ಕೇಳಿದಂತೆ ಸಕಲವನ್ನೂ ನಿಶ್ಶೇಷವಾಗಿ ಹೇಳುವುದಕ್ಕಾಗುವುದಿಲ್ಲವೆಂದು ಭಾವ.

ಇನ್ನು ಕೆಲವು ಪರೋಕ್ಷವಿಭೂತಿರೂಪಗಳು ತನ್ನ ಅಧಿಷ್ಠಾನ ವಸ್ತುವಿಗೆ ಸಜಾತೀಯವಸ್ತುಗಳಲ್ಲಿ ಕೆಲವು ಪದಾರ್ಥಗಳಿಗಿಂತ ಆಧಿಕ್ಯವನ್ನು ಮಾತ್ರ ತಂದುಕೊಡುತ್ತವೆ. ಉದಾ:- ಇಂದ್ರ, ವಜ್ರಾದಿಗಳು. ಇಂದ್ರನಲ್ಲಿರತಕ್ಕ ಇಂದ್ರನಾಮಕವಿಭೂತಿರೂಪವು ಇಂದ್ರನಿಗಿಂತ ಅಧಿಕರಾದ ಬ್ರಹ್ಮವಾಯ್ವಾದಿಗಳನ್ನುಳಿದು ಇಂದ್ರನಿಗಿಂತ ಕಮ್ಮಿಯಾಗಿರುವ ದೇವತೆಗಳಿಗಿಂತ ಇಂದ್ರನಿಗೆ ಆಧಿಕ್ಯಸಂಪಾದಕವಾಗುವುದು. ಮತ್ತೆ ಕೆಲವು ವಿಭೂತಿರೂಪಗಳು ತಮ್ಮ ಅಧಿಷ್ಠಾನವಸ್ತುಗಳಿಗೆ ವಿಜಾತೀಯ ಇತರ ವಸ್ತುಗಳಿಗಿಂತಲೂ ಆಧಿಕ್ಯಪ್ರದವಾಗುವುವು. ಉದಾ:- ಚಂದ್ರನಲ್ಲಿ ಭಗವಂತನು ಚಂದ್ರನಾಮದಿಂದಿದ್ದು ವಿಜಾತೀಯವಾದ ನಕ್ಷತ್ರ ಜಾತಿಯ ಎಲ್ಲಾ ನಕ್ಷತ್ರಗಳಿಗಿಂತಲೂ ಚಂದ್ರನಿಗೆ ಆಧಿಕ್ಯದಾಯಕನಾಗಿರುವನು. ಮುಂದೆ ಈ ಅರ್ಥವು ಸ್ಪಷ್ಟವಾಗುವುದು.

**ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ**

**ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ॥10-20॥**

20. ನನ್ನಿಂದ ಯಾವಯಾವ ಪದಾರ್ಥಗಳಲ್ಲಿ ನೀನು ಚಿಂತಿಸಲ್ಪಡುವೆ ? ಎಂಬ ಅರ್ಜುನನ ಪ್ರಶ್ನೆಗೆ ಉತ್ತರ ಹೇಳುತ್ತಾನೆ:- ನಿದ್ರೆಯನ್ನು ಜಯಿಸಿರುವ ಪಾರ್ಥ! ನಾನು ಸರ್ವತ್ರ ವ್ಯಾಪಕನಾಗಿದ್ದರೂ ಸೂಕ್ಷ್ಮರೂಪದಿಂದ ಸಕಲ ಪ್ರಾಣಿಗಳ ಹೃದಯಗುಹೆಯಲ್ಲಿರುವೆನು. ನಾನೇ ಈ ಭೂತಗಳಿಗೆ ಸೃಷ್ಟಿ ಸ್ಥಿತಿಸಂಹಾರಕರ್ತನು. (ಇದರಿಂದ ಸಕಲ ಪ್ರಾಣಿಗಳಲ್ಲಿಯೂ ಭಗವಂತನು ಚಿಂತ್ಯನೆಂದು ಉತ್ತರ ಹೇಳಿದಂತಾಯಿತು.)

**ಆದಿತ್ಯಾನಾಮಹಂ ವಿಷ್ಣು ರ್ಜ್ಯೋತಿಷಾಂ ರವಿರಂಶುಮಾನ್**

**ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ॥10-21॥**

21.ಮೇಲೆ ಹೇಳಿದಂತೆ ಪ್ರತ್ಯಕ್ಷ, ಪರೋಕ್ಷ ಎಂಬುದಾಗಿ ದ್ವಿವಿಧವಾಗಿರುವ ಭಗವದ್ವಿಭೂತಿರೂಪಗಳನ್ನು ಹೇಳುತ್ತಾನೆ:- ಅರ್ಜುನ! ನಾನು ದ್ವಾದಶಾದಿತ್ಯರ ಮಧ್ಯದಲ್ಲಿ ವಿಷ್ಣುವು=ಸರ್ವತ್ರ ವ್ಯಾಪ್ತನಾಗಿರುವುದರಿಂದ ಅಥವಾ ಸಕಲ ಪದಾರ್ಥಗಳಲ್ಲಿಯೂ ಪ್ರವಿಷ್ಟನಾಗಿರುವುದರಿಂದ ವಿಷ್ಣುನಾಮಕನಾಗಿರುವೆನು. ಎಲ್ಲೆಲ್ಲಿ ನಿನ್ನನ್ನು ಧ್ಯಾನಿಸಬೇಕೆಂಬುದಕ್ಕೆ ಉತ್ತರ ಹೇಳುತ್ತಾನೆ:- ನಾನು ಪ್ರಕಾಶಿಸುವ ಪದಾರ್ಥಗಳಲ್ಲಿ ಜಗದ್ವ್ಯಾಪಕ ಕಿರಣಗಳುಳ್ಳ ರವಿಯಾಗಿರುವೆನು. ಎಂದರೆ, ವೇದಶಬ್ದಗಳಿಂದ ತಿಳಿಯಲ್ಪಡುವವನಾದಕಾರಣ ರವಿನಾಮಕನಾಗಿ ರವಿಯಲ್ಲಿ ಸನ್ನಿಹಿತನಾಗಿರುವನು. ನಲವತ್ತೊಂಬತ್ತು ಮರುತ್ತುಗಳ ಪೈಕಿ ಮರೀಚಿ ಎಂಬ ಮರುತ್ತಿನಲ್ಲಿ ಸನ್ನಿಹಿತವಾಗಿ ಇತರ ಮರುತ್ತುಗಳಿಗಿಂತಲೂ ಅವನಿಗೆ ಆಧಿಕ್ಯಪ್ರದನಾಗಿ, ಉದಕಸಹಿತವಾದ ಮೇಘವನ್ನು ಚಲನೆಮಾಡಿಸುವ ನಿಮಿತ್ತದಿಂದ ಮರೀಚಿನಾಮಕನಾಗಿರುವೆನು. ನಾನು ನಕ್ಷತ್ರಗಳಲ್ಲಿ ಚಂದ್ರನಾಗಿರುವೆನು=ನಕ್ಷತ್ರಗಳಿಗಿಂತಲೂ ಚಂದ್ರನಿಗೆ ಆಧಿಕ್ಯಸಂಪಾದಕನು, ಅತ್ಯಂತ ಸುಖವುಳ್ಳವನಾದುದರಿಂದ ಶಶಿನಾಮಕನೂ ಆಗಿ ಚಂದ್ರನಲ್ಲಿ ಸನ್ನಿಹಿತನಾಗಿದ್ದೇನೆ. (ಹೀಗೆಯೇ ಮುಂದೆಯೂ ಪರೋಕ್ಷವಿಭೂತಿರೂಪಗಳನ್ನು ತಿಳಿಯಬೇಕು.)

**ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ**
**ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ॥10-22॥**

22.ಋಗ್ವೇದಾದಿ ವೇದಗಳಪೈಕಿ ಸಾಮವೇದದಲ್ಲಿ ಸನ್ನಿಹಿತನಾಗಿ, ಯಜುರ್ವೇದಾದಿಗಳಿಗಿಂತ ಅದಕ್ಕೆ ಆಧಿಕ್ಯವನ್ನು ಕೊಟ್ಟು, ಸರ್ವತ್ರ ಸಮನಾಗಿರುವುದರಿಂದಲೂ, ಸಾಮಜ್ಞಾನವಂತನಾಗಿರುವುದರಿಂದಲೂ ಸಾಮನಾಮಕನಾಗಿರುವೆನು, ದೇವತೆಗಳ ಪೈಕಿ ದೇವೇಂದ್ರನಲ್ಲಿ ಸನ್ನಿಹಿತನಾಗಿದ್ದು ಅವನಿಗೆ ಇತರ ಬೃಹಸ್ಪತ್ಯಾದಿ ಅವರ ದೇವತೆಗಳಿಗಿಂತ ಶ್ರೇಷ್ಠತ್ವ ಸಂಪಾದಕನಾಗಿ, ಸಕಲ ದೇಶಗಳಲ್ಲಿ ವಾಸಿಸುವುದರಿಂದ ವಾಸವನಾಮಕನಾಗಿರುವನು. (ಇವೆರಡೂ ಸಜಾತೀಯೈಕದೇಶಶ್ರೇಷ್ಠತ್ವ ಸಂಪಾದಕ ವಿಭೂತಿಗಳು.) ಇಂದ್ರಿಯವರ್ಗದಲ್ಲಿ ಮನಸ್ಸಿನಲ್ಲಿದ್ದು ಅದನ್ನೇ ಶ್ರೇಷ್ಠವೆನಿಸಿ, ಜ್ಞಾನರೂಪನಾದುದರಿಂದ ಮನೋನಾಮಕನಾಗಿರುವನು. ಚೇತನಾ ಎಂಬ ಬಹುಸ್ಮರಣಶಕ್ತಿಗೆ ನಿಯಾಮಕನಾಗಿ, ಜ್ಞಾನನಿಯಾಮಕನಾಗಿರುವುದರಿಂದ ಚೇತನಾನಾಮಕನಾಗಿ ಪ್ರಾಣಿಗಳಲ್ಲಿರುವೆನು.

**ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಂ**

**ವಸೂನಾಂ ಪಾವಕಶ್ಚಾಸ್ಮಿಮೇರುಃ ಶಿಖರಿಣಾಮಹಂ॥10-23॥**

23. ಏಕಾದಶ ರುದ್ರರ ಗಣದಲ್ಲಿ ಪಾರ್ವತೀಶನಿಗೆ ಆಧಿಕ್ಯಪ್ರದನಾಗಿ ಸುಖಕಾರಣನಾದುದರಿಂದ ಶಂಕರನೆನಿಸಿ ನಾನು ಅವನಲ್ಲಿರುವೆನು. ಯಕ್ಷರಾಕ್ಷಸರಲ್ಲಿ ಕುಬೇರನಲ್ಲಿದ್ದು, ಅವನಿಗೆ ಶ್ರೇಷ್ಠತ್ವಪ್ರದನಾಗಿ, ಧನಸ್ವಾಮಿಯಾಗಿರುವುದರಿಂದ ನಾನು ವಿತ್ತೇಶನಾಮಕನಾಗಿರುವನು. ಅಷ್ಟವಸುಗಳ ಪೈಕಿ ಅಗ್ನಿದೇವನಿಗೆ ಆಧಿಕ್ಯಪ್ರದನಾಗಿ, ಶುದ್ಧಿಕರ್ತನಾದುದರಿಂದ ಪಾವಕನಾಮಕನಾಗಿ ಅಲ್ಲಿರುವೆನು. ಪರ್ವತ ವರ್ಗದಲ್ಲಿ ಮೇರುಪರ್ವತದಲ್ಲಿದ್ದು ಅದಕ್ಕೆ ಶ್ರೇಷ್ಠತೆಯನ್ನು ಕೊಟ್ಟು, ಸರ್ವಪ್ರೇರಕನಾದ ನನಗೆ ಬೇರೆ ಪ್ರೇರಕರಿಲ್ಲದಕಾರಣ ನಾನೇ ಮೇರು ಶಬ್ದವಾಚ್ಯನಾಗಿರುವನು.

**ಪುರೋಧಸಾಂ ಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಂ**

**ಸೇನಾನೀನಾಮಹಂ ಸ್ಕಂದಃ ಸರಸಾಮಸ್ಮಿಸಾಗರಃ॥10-24॥**

24. ಪಾರ್ಥ! ಪುರೋಹಿತರಲ್ಲಿ ಶ್ರೇಷ್ಠನಾದ 'ಬೃಹಸ್ಪತಿ' ಎಂಬ ದೇವ-ಪುರೋಹಿತನಲ್ಲಿದ್ದು, ಉತ್ತಮರಾದ ಬ್ರಹ್ಮಾದಿಗಳಿಗೂ ನಿಯಾಮಕನಾಗಿರುವುದರಿಂದ ಬೃಹಸ್ಪತಿನಾಮಕನಾಗಿ ನಾನು ಬೃಹಸ್ಪತಿಗೆ ಉತ್ತಮತ್ವ ಸಂಪಾದಕನಾಗಿರುವೆನೆಂದು ತಿಳಿ. ಸೇನಾಪತಿಗಳ ಮಧ್ಯದಲ್ಲಿ ಕುಮಾರಸ್ವಾಮಿಗೆ ಶ್ರೇಷ್ಠತಾಸಂಪಾದಕನಾಗಿ, ಜಗತ್ತನ್ನು ನನ್ನ ದೇಹದಿಂದ ನಿರ್ಮಿಸುವಕಾರಣ ಸ್ಕಂಧನೆನಿಸಿ, ಷಣ್ಮುಖನಲ್ಲಿ ಸನ್ನಿಹಿತನಾಗಿರುವೆನು, ಸರೋವರಗಳಲ್ಲಿ ಸಮುದ್ರಕ್ಕೆ ಶ್ರೇಷ್ಠತೆಯನ್ನು ಕೊಟ್ಟು ಸಾರಭೋಕ್ತನಾದ ಕಾರಣ ಸಾಗರನೆನಿಸಿ ನಾನು ಸಮುದ್ರದಲ್ಲಿ ಸನ್ನಿಹಿತನಾಗಿರುವೆನು.

**ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಂ**

**ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ॥10-25॥**

25. ಮಹರ್ಷಿಗಳಲ್ಲಿ ಭೃಗುಮುನಿಯಲ್ಲಿದ್ದು ಅವನಿಗೆ ಮಹತ್ವವನ್ನು ಕೊಡುತ್ತ, ವಿರೋಧಿಗಳನ್ನು ದಹಿಸುವವನಾದುದರಿಂದ ಭೃಗುಶಬ್ದವಾಚ್ಯನಾಗಿರುವೆನು. ವಾಕ್ಯಗಳಲ್ಲಿ ಮುಖ್ಯಾಕ್ಷರವಾದ ಪ್ರಣವ(ಓಂಕಾರ)ದಲ್ಲಿದ್ದು, ಯಾವ ವಿಧವಾದ ನಾಶವೂ ಇಲ್ಲವಾದಕಾರಣ ಅಕ್ಷರನಾಮಕನಾಗಿ ಅದಕ್ಕೆ ಶ್ರೇಷ್ಠತಾಸಂಪಾದಕನಾಗಿರುವೆನು. ಯಜ್ಞಗಳಲ್ಲಿ ಮಂತ್ರಾವೃತ್ತಿರೂಪ ಜಪವೆಂಬ ಯಜ್ಞದಲ್ಲಿ, ಸನ್ನಿಹಿತನಾಗಿದ್ದು ಅದಕ್ಕೆ ಉತ್ತಮತ್ವಪ್ರದನಾಗಿ, ಸೃಷ್ಟರಾದವರನ್ನು ಪಾಲಿಸುವುದರಿಂದಲೂ, ಪೂಜ್ಯನಾಗಿರುವುದರಿಂದಲೂ ಜಪಯಜ್ಞನಾಮಕನಾಗಿರುವೆನು.

ಸ್ಥಿರವಾಗಿ ಒಂದೇ ಸ್ಥಳದಲ್ಲಿರುವ ಪರ್ವತಗಳ ಪೈಕಿ ಹಿಮವತ್ಪರ್ವತದಲ್ಲಿ ಸನ್ನಿಹಿತನಾಗಿ ಹ್ರೀ-ಶ್ರೀ ಎಂಬ ಲಕ್ಷ್ಮೀದೇವಿಯ ರೂಪದ್ವಯಗಳಿಗೆ ಆಶ್ರಯನಾಗಿರುವುದರಿಂದ (ಹಿಮಾಲಯ ಶಬ್ದ ವಾಚ್ಯನಾಗಿ ಅದಕ್ಕೆ ಶ್ರೇಷ್ಠತಾ ಸಂಪಾದಕನಾಗಿರುವನು.

ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದಃ
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ॥10-26॥

26. ಸಕಲ ವೃಕ್ಷಗಳ ಮಧ್ಯದಲ್ಲಿ ಅಶ್ವತ್ಥವೃಕ್ಷದಲ್ಲಿ ಸನ್ನಿಹಿತನಾಗಿದ್ದು ಅಗನ್ನೆ ವೃಕ್ಷಶ್ರೇಷ್ಟವೆನಿಸಿ, ಶೀಘ್ರಗಾಮಿಯಾದ ಕಾರಣ ಅಶ್ವತ್ಥನಾಮಕನಾಗಿರುವೆನು. ದೇವರ್ಷಿಗಳಲ್ಲಿ ನಾರದನಿಗೆ ಶ್ರೇಷ್ಠತೆಯನ್ನು ಕೊಟ್ಟು ಸರ್ವರಿಗೂ ಇಷ್ಟಾರ್ಥದಾತನಾಗಿರುವ ಕಾರಣ ನಾರದನಾಮಕನಾಗಿ ನಾರದಮುನಿಯಲ್ಲಿ ಸನ್ನಿಹಿತನಾಗಿರುವೆನು. ಗಂಧರ್ವರ ಪೈಕಿ ಚಿತ್ರರಥನೆಂಬ ಗಂಧರ್ವನಲ್ಲಿದ್ದು ಅವನಿಗೆ ಆಧಿಕ್ಯಸಂಪಾದಕನಾಗಿ ಚಿತ್ರವಾದ ದೇವಾದಿದೇಹವೆಂಬ ರಥವುಳ್ಳವನಾದ ಕಾರಣ ಚಿತ್ರರಥ ನಾಮಕನಾಗಿರುವೆನು. ಜ್ಞಾನಿಗಳ ಮಧ್ಯದಲ್ಲಿ ನಾನು ಸುಖರೂಪನು, ಜಗತ್ಪಾಲಕನು ಲಯಕರ್ತನೂ ಆಗಿರುವುದರಿಂದ ಕಪಿಲನಾಮಕನಾಗಿರುವನು. (ಇದು ಪ್ರತ್ಯಕ್ಷ ವಿಭೂತಿರೂಪವು.)

ಉಚ್ಚೈಃಶ್ರವಸಮಶ್ವಾನಾಂ ವಿದ್ಧಿಮಾಮಮೃತೋದ್ಭವಂ
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಂ॥10-27॥

ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕಿಃ॥10-28॥

ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಂ
ಪಿತೄಣಾಮರ್ಯಮಾ ಚಾಸ್ಮಿ ಯಮಃ ಸಂಯಮತಾಮಹಂ॥10-29॥

ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಂ
ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಂ॥10-30॥

ಪವನಃ ಪವತಾಮಸ್ಮಿ ರಾಮಃ ಶಸ್ತ್ರಭೃತಾಮಹಂ
ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ॥10-31॥

27-31. ಕುದುರೆಗಳ ಪೈಕಿ ಕ್ಷೀರಸಮುದ್ರದಲ್ಲಿ ಹುಟ್ಟಿದ ಉಚ್ಚೈಶ್ರವಸ್ಸೆಂಬ ಅಶ್ವದಲ್ಲಿ ಸಂನಿಹಿತನಾಗಿ ಅದಕ್ಕೆ ಆಧಿಕ್ಯಪ್ರದನಾಗಿ ನಾನು ಸರ್ವೋತ್ಕೃಷ್ಟ ಕೀರ್ತಿ ಸಂಪನ್ನನಾದುದರಿಂದ

ಉಚ್ಚೈಶ್ರವನಾಮಕನು. ಶ್ರೇಷ್ಠ ಗಜವರ್ಗದಲ್ಲಿ ಇಂದ್ರ ವಾಹನವಾದ ಐರಾವತನೆಂಬ ಆನೆಯಲ್ಲಿ ಸಂನಿಹಿತನಾಗಿ ಅದಕ್ಕೆ ಆಧಿಕ್ಯವನ್ನುಂಟು ಮಾಡಿ, ವೈಕುಂಠದಲ್ಲಿರುವ ಐರವೆಂಬ ಸರೋವರ ರೂಪಳಾದ ಶ್ರೀದೇವಿಯನ್ನು ಕಾಪಾಡುವುದರಿಂದ ನಾನು ಐರಾವತನಾಮಕನಾಗಿರುವೆನು. ಮನುಷ್ಯವರ್ಗದಲ್ಲಿ ಮಹಾರಾಜನಿಗೆ ಶ್ರೇಷ್ಠತೆಯನ್ನು ಕೊಟ್ಟು, ಸಕಲ ಪುರುಷರಿಗಿಂತಲೂ ಅಧಿಕವಾಗಿರುವುದರಿಂದ ನರಾಧಿಪನಾಮಕನಾಗಿ, ರಾಜರಾಜೇಶ್ವರವೆಂಬ ವಿಭೂತಿರೂಪದಿಂದ ರಾಜನಲ್ಲಿ ಸಂನಿಹಿತನಾಗಿರುವೆನೆಂದು ತಿಳಿ. ಆಯುಧಗಳ ಪೈಕಿ ವಜ್ರಾಯುಧದಲ್ಲಿದ್ದು ಅದಕ್ಕೆ ಇತರ ಆಯುಧಗಳಿಗಿಂತ ಆಧಿಕ್ಯವನ್ನು ಕೊಟ್ಟು ನಾನು ದೋಷವರ್ಜಿತನಾಗಿರುವುದರಿಂದ ವಜ್ರನಾಮಕನಾಗಿರುವನು. ಗೋಸಮುದಾಯದಲ್ಲಿ ಕಾಮಧೇನುವಿನಲ್ಲಿದ್ದು ಅದಕ್ಕೆ ಶ್ರೇಷ್ಠತೆಯನ್ನು ಕೊಟ್ಟು, ನಾನು ಭಕ್ತಕಾಮಿತಪ್ರದನಾದುದರಿಂದ ಕಾಮಧೇನುನಾಮಕನು. ನಾನು ಸುಖಪ್ರಭೇದಗಳನ್ನು ಅನುಭವಿಸುವುದರಿಂದ ಕಂದರ್ಪನಾಮಕನಾಗಿ ಪ್ರಕೃಷ್ಟಜನನಕಾರಣನಾದ ಮನ್ಮಥನಲ್ಲಿ ಸನ್ನಿಹಿತನಾಗಿರುವನು. ಒಂದೇ ಹೆಡೆಯುಳ್ಳ ಸರ್ಪಜಾತಿಯಲ್ಲಿ ವಾಸುಕಿಯನ್ನು ಶ್ರೇಷ್ಠನೆನಿಸಿ, ಸ್ವವಾಸದಿಂದ ಭಕ್ತರಿಗೆ ಸುಖದಾಯಕನಾಗುವಕಾರಣ ವಾಸುಕಿ ಎಂದು ಕರೆಯಲ್ಪಡುತ್ತ ನಾನು ವಾಸುಕಿಯಲ್ಲಿ ಸನ್ನಿಹಿತನಾಗಿರುವೆನು. ಅನೇಕ ಹೆಡೆಗಳುಳ್ಳ ಹಾವುಗಳಲ್ಲಿ ಶೇಷನಿಗೆ ಶ್ರೇಷ್ಠತೆಯನ್ನು ಕೊಟ್ಟು ಅವನಲ್ಲಿ, ಅನಾದ್ಯನಂತದೇಶಕಾಲಗಳಲ್ಲಿಯೂ ಗುಣಪೂರ್ಣನಾಗಿರುವುದರಿಂದ ಅನಂತನಾಮಕನಾಗಿ ನೆಲೆಸಿರುವೆನು. ಜಲಚರ ಪ್ರಾಣಿಗಳಿಗೆಲ್ಲಾ ವರುಣನನ್ನು ಶ್ರೇಷ್ಠನನ್ನಾಗಿ ಮಾಡಿ, ಅವನಲ್ಲಿ ಉತ್ಕೃಷ್ಟಾನಂದರೂಪನಾದ ಕಾರಣ ವರುಣನಾಮಕನಾಗಿರುವೆ. ಆರ್ಯಮಾ ಎಂಬ ಪಿತೃ ದೇವತೆಯಲ್ಲಿ ನಾನು ಜ್ಞೇಯವನ್ನೆಲ್ಲಾ ತಿಳಿದವನಾದಕಾರಣ ಅರ್ಯಮಾ ನಾಮಕನಾಗಿ ನೆಲೆಸಿದ್ದು ಅವನನ್ನು ಉಳಿದ ಪಿತೃದೇವತೆಗಳಿಗೆಲ್ಲಾ ಶ್ರೇಷ್ಠನನ್ನಾಗಿ ಮಾಡಿರುವೆನು. ನಾನು ಮುಖ್ಯ ನಿಯಮನಕರ್ತನಾದುದರಿಂದ ಯಮನಾಮಕನಾಗಿ ಯಮದೇವನಲ್ಲಿ ಸನ್ನಿಹಿತನಾಗಿರುವೆನು. ದಿತಿಕುಲೋತ್ಪನ್ನರಾದವರಲ್ಲಿ ಪ್ರಹ್ಲಾದನಲ್ಲಿ ನಾನು ಸಂನಿಹಿತನಾಗಿ, ಅವನ ಶ್ರೇಷ್ಠತ್ವಕ್ಕೆ ನಿಯಾಮಕನಾಗಿ, ಉತ್ಕೃಷ್ಟ ಸುಖವುಳ್ಳವನಾದ ಕಾರಣ ಪ್ರಹ್ಲಾದನಾಮಕನಾಗಿರುವೆನು. ಬಂಧನ ಮಾಡುವವರ ಪೈಕಿ ಕಾಲಕ್ಕೆ ಮುಖ್ಯ ಸಂಪಾದಕನಾಗಿ, ನಾನು ಸರ್ವಜ್ಞನಾದುದರಿಂದ ಕಾಲನಾಮಕನಾಗಿ ಕಾಲದಲ್ಲಿರುವೆನು. ಮೃಗವರ್ಗದಲ್ಲಿ ಸಿಂಹವನ್ನು ಮೃಗರಾಜನನ್ನಾಗಿ ಮಾಡಿ, ತನ್ನ ಸ್ವರೂಪವನ್ನು ತಿಳಿಯಲು ವಿಚಾರಮಾಡುವ ಭಕ್ತರಿಗೆ ಅಧಿಪತಿಯಾಗಿರುವುದರಿಂದ ನಾನು ಮೃಗೇಂದ್ರನಾಮಕನಾಗಿ ಸಿಂಹದಲ್ಲಿರುವೆನು. ಪಕ್ಷಿವರ್ಗದಲ್ಲಿ ವಿನತಾಸುತನಾದ ಗರುಡನಿಗೆ

ಪಕ್ಷಿರಾಜಪದವಿಯನ್ನು ಕೊಟ್ಟು ವಿಶೇಷ ನಮನಾದಿಗಳಿಂದ ಸೇವಿಸುವ ಭಕ್ತರಿಗೆ ಆಶ್ರಯನಾಗಿರುವುದರಿಂದ ವೈನತೇಯನಾಮಕನಾಗಿ ಗರುಡನಲ್ಲಿ ನೆಲೆಸಿರುವೆನು. ಶೋಧಕವಸ್ತು ಸಮುದಾಯದಲ್ಲಿ ಅಥವಾ ವೇಗವುಳ್ಳವಸ್ತುಗಳಲ್ಲಿ ವಾಯುವಿನಲ್ಲಿದ್ದು, ವಾಯುವಿಗೆ ಆಧಿಕ್ಯ ಸಂಪಾದಕನಾಗಿ, ನಾನು ಲೋಕಪಾಲಕ ಸೇವಿತನಾಗಿರುವುದರಿಂದ ಪವನನಾಮಕನಾಗಿರುವೆನು. ಶಸ್ತ್ರಧಾರಿಗಳ ಗುಂಪಿನಲ್ಲಿ ನಾನು ಲೋಕರಂಜಕನಾದುದರಿಂದ ರಾಮನಾಮಕನಾಗಿರುವೆನು. (ಇದು ಪ್ರತ್ಯಕ್ಷ ವಿಭೂತಿರೂಪವು.) ಮೀನುಗಳ ಮಧ್ಯದಲ್ಲಿ ಮೊಸಳೆಯಲ್ಲಿದ್ದು ಅದಕ್ಕೆ ಆಧಿಕ್ಯಪ್ರದನಾಗಿ ನಾನು ಲೋಕಕ್ಕೆ ಅಲ್ಪ ಜ್ಞಾನವನ್ನುಂಟುಮಾಡುವುದರಿಂದ ಮಕರನಾಮಕನಾಗಿರುವೆನು. ನದೀವರ್ಗದಲ್ಲಿ ಗಂಗಾ ನದಿಯನ್ನು ಶ್ರೇಷ್ಠವೆನಿಸಿ ನಾನು ಅಸಾರ ಸಂಸಾರತ್ಯಾಗಿಗಳನ್ನು ರಕ್ಷಿಸುವ ನಿಮಿತ್ತ ಜಾಹ್ನವೀನಾಮಕನಾಗಿ ಗಂಗೆಯಲ್ಲಿ ಸಂನಿಹಿತನಾಗಿರುವೆನು.

ಸರ್ಗಾಣಾಮಾದಿರಂತಶ್ಚ ಮಧ್ಯಂ ಚೈವಾಹಮರ್ಜುನ
ಅಧ್ಯಾತ್ಮ ವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಂ॥10-32॥

ಅಕ್ಷರಾಣಾಮಕಾರೋಽಸ್ಮಿ ದ್ವಂದ್ವ ಸಾಮಾಸಿಕಸ್ಯ ಚ
ಅಹಮೇವಾಕ್ಷಯಃ ಕಾಲೋ ಧಾತಾಹಂ ವಿಶ್ವತೋಮುಖಃ॥10-33॥

ಮೃತ್ಯುಃ ಸರ್ವಹರಶ್ಚಾಹಮುದ್ಭವಶ್ಚ ಭವಿಷ್ಯತಾಂ
ಕೀರ್ತಿಃ ಶ್ರೀರ್ವಾಕ್ಚನಾರೀಣಾಂ ಸ್ಮೃತಿರ್ಮೇಧಾ ಧೃತಿಃಕ್ಷಮಾ॥10-34॥

ಬೃಹತ್ಸಾಮಾ ತಥಾ ಸಾಮ್ನಾಂ ಗಾಯತ್ರೀ ಛಂದಸಾಮಹಂ
ಮಾಸಾನಾಂ ಮಾರ್ಗಶೀರ್ಷೋಽಹಮೃತೂನಾಂ ಕುಸುಮಾಕರಃ॥10-35॥

**32-35** ಅರ್ಜುನ! ಜನಿಸುವ ಪ್ರಾಣಿಗಳಿಗೆ ನಾನು ಸೃಷ್ಟಿ, ಸ್ಥಿತಿಲಯ ಕಾರಣನು. ತತ್ವಜ್ಞಾನಜನಕಶಾಸ್ತ್ರಗಳಲ್ಲಿ ಬ್ರಹ್ಮವಿದ್ಯೆಗೆ ಆಧಿಕ್ಯವನ್ನುಂಟು ಮಾಡಿ, ನಾನು ಜೀವರಿಗೆ ಸ್ವಾಮಿಯೂ ಮತ್ತು ಜ್ಞಾನರೂಪನೂ ಆಗಿರುವುದರಿಂದ ಆಧ್ಯಾತ್ಮವಿದ್ಯಾನಾಮಕನಾಗಿ ಬ್ರಹ್ಮವಿದ್ಯೆಯಲ್ಲಿ ಸಂನಿಹಿತನಾಗಿರುವೆನು. ವಾದ, ಜಲ್ಪ, ವಿತಂಡಾ ಎಂಬುದಾಗಿ ಮೂರು ವಿಧವಾದ ವಿಚಾರಗಳಲ್ಲಿ ವಾದವೆಂಬ ವಿಚಾರ(ಕಥಾ)ದಲ್ಲಿ ಸಂನಿಹಿತನಾಗಿ ಅದಕ್ಕೆ ಆಧಿಕ್ಯವನ್ನುಂಟುಮಾಡಿ ನಾನು ವಾಚ್ಯತ್ವ ನಿಮಿತ್ತದಿಂದ ವಾದನಾಮಕನಾಗಿರುವೆನು. ಅಕ್ಷರಸಮೂಹದಲ್ಲಿ 'ಅ' ಎಂಬ

ವರ್ಣಕ್ಕೆ ಶ್ರೇಷ್ಠತಾಸಂಪಾದಕನಾಗಿ 'ಅ' ಎಂಬ ನಾಮಧೇಯದಿಂದ ಅಕಾರದಲ್ಲಿ ಸಂನಿಹಿತನಾಗಿರುವೆನು. ತತ್ಪುರುಷಾದಿ ಸಮಾಸಗಳ ಗುಂಪಿನಲ್ಲಿ ದ್ವಂದ್ವ ಸಮಾಸವನ್ನು ಶ್ರೇಷ್ಠವೆನಿಸಿ, ನಾನು ಒಳಹೊರಗೆ ಎರಡು ರೂಪಗಳುಳ್ಳವನಾದುದರಿಂದ ದ್ವಂದ್ವನೆನಿಸಿ ಅಲ್ಲಿ ಸಂನಿಹಿತನಾಗಿರುವೆನು. ನಾನೇ ನಾಶರಹಿತವಾದ ಕಾಲಸ್ಥಿತನಾಗಿ ಸಂಹಾರಕನಾದುದರಿಂದ ಕಾಲನಾಮಕನಾಗಿರುವೆನು. ನಾನೇ ಸರ್ವಕ್ಕೂ ಧಾರಣ ಪೋಷಣಕರ್ತನು, ಸರ್ವತ್ರ ಸ್ಥಿತವಾದ ಸರ್ವಾವಯವುಳ್ಳವನು. ಮಾರಕನಾಗಿರುವುದರಿಂದ ಮೃತ್ಯುನಾಮಕನಾದ ನಾನು ಮೃತ್ಯುವಿನಲ್ಲಿ ಸಂಹಿತನಾಗಿರುವೆನು. ನಾನು ಮುಂದೆ ಹುಟ್ಟುವ ವಸ್ತುಗಳಿಗೆ ಉತ್ಪಾದಕನಾದ ಕಾರಣ ಉದ್ಧವನಾಮಕನು, ಕೀರ್ತಿ, ಶ್ರೀ, ವಾಕ್, ಸ್ಮೃತಿ, ಮೇಧಾ, ಧೃತಿ, ಕ್ಷಮಾ ಈ ಸ್ತ್ರೀಯರು ಆಯಾಯಾ ಗುಣಾಭಿಮಾನಿಗಳಾದುದರಿಂದ ಆಯಾಯಾ ನಾಮಧೇಯವನ್ನು ಹೊಂದಿರುವರು. ಇವರಿಗೆ ನಾನು ಆಧಿಕ್ಯಸಂಪಾದಕನಾಗಿ, ಕೀರ್ತನಾರ್ಹನಾದುದರಿಂದ ಕೀರ್ತಿ ನಾಮಕನಾಗಿಯೂ, ಆಶ್ರಯತ್ವ, ವಕ್ತೃತ್ವ, ಸ್ಮರಣೀಯತ್ವ ನಿಮಿತ್ತಗಳಿಂದ ಶ್ರೀ-ವಾಕ್-ಸ್ಮೃತಿನಾಮಕನಾಗಿಯೂ, ಮೇಧಾ, ಧೃತಿ, ಕ್ಷಮಾ ಈ ಗುಣರೂಪನಾದುದರಿಂದ ಆಯಾಯಾ ನಾಮಧೇಯವುಳ್ಳವನಾಗಿಯೂ, ಆಯಾಯಾ ಪದಾರ್ಥಗಳಲ್ಲಿ ಸಂನಿಹಿತನಾಗಿರುವೆನು, ರಥಂತರ, ವೈರೂಪ, ವೈರಾಜ, ಶಾಕ್ವರಾದಿ ಸಾಮಗಳಲ್ಲಿ ಬೃಹತ್ಸಾಮಕ್ಕೆ ಶ್ರೇಷ್ಠತಾಸಂಪಾದಕನಾಗಿ, ನಾನು ಅತ್ಯಂತ ಶ್ರೇಷ್ಟನು ಮತ್ತು ಅಮೇಯನೂ ಆಗಿರುವುದರಿಂದ ಬೃಹತ್ಸಾಮನಾಯಕನಾಗಿ ಆದರಲ್ಲಿ ಸಂಹಿತನಾಗಿರುವೆನು. ತ್ರಿಷ್ಟುಪ್ ಜಗತ್ಯಾದಿ ಛಂದೋವರ್ಗದಲ್ಲಿ ಗಾಯತ್ರಿ ಛಂದಸ್ಸಿಗೆ ಮಹತ್ವವನ್ನು ಕೊಟ್ಟು, ತನ್ನ ಗಾಯಕರನ್ನು ರಕ್ಷಿಸುವ ನಿಮಿತ್ತದಿಂದ ಗಾಯತ್ರೀನಾಮಕನಾಗಿ ಅಲ್ಲಿರುವೆನು. ಚೈತ್ರಾದಿ ದ್ವಾದಶಮಾಸಗಳಲ್ಲಿ ಮಾರ್ಗಶೀರ್ಷಮಾಸದಲ್ಲಿ ಸಂನಿಹಿತನಾಗಿ, ಅದಕ್ಕೆ ಶ್ರೇಷ್ಠತೆಯನ್ನು ಕೊಟ್ಟು, ಜ್ಞಾನಿಗಳು ಪ್ರಯಾಣಮಾಡುವ ಉತ್ತರಾಯಣ ಮಾರ್ಗಗಳಿಗೆ ಶೀರ್ಷಸ್ಥಾನೀಯನಾದುದರಿಂದ ಮಾರ್ಗಶೀರ್ಷನಾಮನಾಗಿರುವನು. ಋತುವರ್ಗದಲ್ಲಿ ವಸಂತಋತುವಿಗೆ ಅಧಿಕ ಸಂಪಾದಕನಾಗಿ ಆಯಾಯಾ ಜೀವರ ಯೋಗ್ಯತಾನುಸಾರವಾಗಿ ಮಿಥ್ಯಾಜ್ಞಾನ, ತತ್ವಜ್ಞಾನಗಳನ್ನು ಕೊಡುವುದರಿಂದ ನಾನು ಕುಸುಮಾಕರನಾಮಕನಾಗಿ ವಸಂತ ಋತುವಿನಲ್ಲಿರುವೆನು.

**ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿನಾಮಹಂ**

**ಜಯೋಽಸ್ಮಿ ವ್ಯವಸಾಯೋಽಸ್ಮಿ ಸತ್ಯಂ ಸತ್ವವತಾಮಹಂ॥10-36॥**

| |
|---|
| **ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯಃ,<br>ಮುನೀನಾಮಪ್ಯಹಂ ವ್ಯಾಸಃ ಕವೀನಾಮುಶನಾ ಕವಿಃ॥10-37॥** |
| **ದಂಡೋ ದಮಯತಾಮಸ್ಮಿ ನೀತಿರಸ್ಮಿ ಜಿಗೀಷತಾಂ<br>ಮೌನಂ ಚೈವಾಸ್ಮಿ ಗುಹ್ಯಾನಾಂ ಜ್ಞಾನಂ ಜ್ಞಾನವತಾಮಹಂ॥10-38॥** |
| **ಯಜ್ಞಾ ಹಿ ಸರ್ವಭೂತಾನಾಂ ಬೀಜಂ ತದಹಮರ್ಜುನ<br>ನ ತದಸ್ತಿ ವಿನಾ ಯತ್ ಸ್ಯಾನ್ಮಯಾ ಭೂತಂ ಚರಾಚರಂ ॥10-39॥** |

**36-39.** ಮೋಸಗಾರರಲ್ಲಿರುವ ದ್ಯೂತನೆಂಬ ಪ್ರಧಾನಧರ್ಮಕ್ಕೆ ನಿಯಾಮಕನಾಗಿ ಕ್ರೀಡಾರತನಾದುದರಿಂದ ದ್ಯೂತನಾಮಕನಾಗಿ ನಾನು ಅದರಲ್ಲಿರುವೆನು. ಪ್ರಕಾಶಸ್ವರೂಪನಾದುದರಿಂದ ತೇಜೋನಾಮಕನಾದ ನಾನು ತೇಜೋವಂತರಲ್ಲಿರುವ ತೇಜಸ್ಸಿಗೆ ನಿಯಾಮಕನಾಗಿ ಅಲ್ಲಿರುವೆನು. ನಿತ್ಯ ಜಯಶೀಲನಾದುದರಿಂದ ಜಯಶಬ್ದ ವಾಚ್ಯನಾದ ನಾನು ಜಯಶಾಲಿಗಳಲ್ಲಿದ್ದು, ಅಲ್ಲಿರುವ ಜಯವೆಂಬ ಉತ್ತಮ ಧರ್ಮಕ್ಕೆ ನಿಯಾಮಕನಾಗಿರುವೆನು. ನಿಶ್ಚಯವಂತರಲ್ಲಿರುವ ನಿಶ್ಚಯ ಜ್ಞಾನಕ್ಕೆ ನಾನು ನಿಯಾಮಕನಾಗಿರುವುದರಿಂದ ವ್ಯವಸಾಯನಾಮಕನಾಗಿ ಅಲ್ಲಿರುವೆನು. ಬಲವಂತರಲ್ಲಿರುವ ಬಲಕ್ಕೆ ನಿಯಾಮಕನಾಗಿರುವುದರಿಂದ ಸತ್ವನೆನಿಸಿ ನಾನು ಬಲದಲ್ಲಿ ಸಂನಿಹಿತನಾಗಿರುವೆನು. ಸರ್ವವವನ್ನೂ ನನ್ನಲ್ಲಿ ವಾಸಮಾಡಿಸಿ ಕೊಂಡು, ಸರ್ವತ್ರ ಇರುವವನಾದುದರಿಂದ ನಾನು ವಾಸುದೇವನಾಮಕನಾಗಿ, ಯಾದವಗಣದಲ್ಲಿ ಶ್ರೇಷ್ಠನಾಗಿರುವನು. (ಇದು ಪ್ರತ್ಯಕ್ಷ ವಿಭೂತಿರೂಪವು.) ಪಾಂಡು ಕುಮಾರರಲ್ಲಿ ಭೀಮಸೇನನನ್ನು ಬಿಟ್ಟು ಉಳಿದವರಿಗಿಂತ ಅರ್ಜುನನನ್ನು ಶ್ರೇಷ್ಠನೆನಿಸಿ, ಧನವನ್ನು ಜಯಿಸುವುದರಿಂದ ಧನಂಜಯನಾಮಕನಾಗಿ ಅರ್ಜುನನಲ್ಲಿ ಸಂಹಿತನಾಗಿರುವೆನು. (ಈ ರೂಪವು ಸಜಾತೀಯೈಕದೇಶ ಶ್ರೇಷ್ಠತಾ ಸಂಪಾದಕ ವಿಭೂತಿ) ತತ್ವಜ್ಞಾನಿಗಳ ಸಮೂಹದಲ್ಲಿ ಉತ್ತಮನಾದ ಉತ್ತಮ ಸ್ಥಿತಿಯುಳ್ಳವನಾದ ಕಾರಣ ವ್ಯಾಸನಾಮಕನು. (ಇದು ಪ್ರತ್ಯಕ್ಷವಿಭೂತಿರೂಪವು, ಸಾಕ್ಷಾದವತಾರ.) ಜ್ಞಾನಿವರ್ಗದಲ್ಲಿ ಶುಕ್ರಾಚಾರ್ಯರಲ್ಲಿದ್ದು ಅವರನ್ನು ಅವರಿಗಿಂತ ಅಧಿಕರಾದ ಬ್ರಹ್ಮಾದಿಗಳನ್ನು ಬಿಟ್ಟು ಇತರ ಕವಿಗಳಿಗಿಂತ ಅಧಿಕರನ್ನಾಗಿ ಮಾಡಿ, ಸೃಷ್ಟ್ಯಾದೀಚ್ಛಾವುಳ್ಳವನಾದ ಕಾರಣ ಉಷನಾನಾಮಕನಾಗಿರುವೆನು. ದಂಡನೆ ಮಾಡುವವರಲ್ಲಿರುವ ದಂಡನಶಕ್ತಿಗೆ ಕಾರಣನಾದುದರಿಂದ ನಾನು ದಂಡನಾಮಕನಾಗಿರುವೆನು. ಜಯಾಪೇಕ್ಷಿಗಳಲ್ಲಿರುವ ನೀತಿಯೆಂಬ

ಉತ್ತಮ ಧರ್ಮಕ್ಕೆ ಪ್ರವರ್ತಕನಾದ ಕಾರಣ ನಾನು ನೀತಿನಾಯಕನು. ರಹಸ್ಯ ವಸ್ತುಗಳಲ್ಲೆಲ್ಲಾ ಅತ್ಯಂತ ಗೋಪ್ಯನಾದ ಕಾರಣ ಮೌನನಾಮಕನಾದ ನಾನು ಮುನಿಗಳಲ್ಲಿರುವ ನಿಷ್ಫಲಭಾಷಣ ಪರಿತ್ಯಾಗರೂಪ ಮೌನಕ್ಕೆ ಪ್ರವರ್ತಕನು. ಜ್ಞಾನವಂತರಲ್ಲಿರುವ ಜ್ಞಾನವೆಂಬ ಉತ್ತಮ ಧರ್ಮಕ್ಕೆ ಪ್ರವರ್ತಕನಾಗಿ ನಾನು ಸ್ವತಃಜ್ಞಾನರೂಪನಾದುದರಿಂದ ಜ್ಞಾನನಾಮಕನು. ಸಕಲ ಪ್ರಾಣಿಗಳಿಗೂ ಯಾವುದು ಕಾರಣವೋ, ಅದಕ್ಕೆ ಶ್ರೇಷ್ಠತಾಸಂಪಾದಕನಾಗಿ ಬೀಜನಾಮಕನು ನಾನು. ಸ್ಥಾವರ ಜಂಗಮಾತ್ಮಕ ಪ್ರಪಂಚದಲ್ಲಿ ನನ್ನ ಅಧೀನವಲ್ಲದ ವಸ್ತು ಯಾವುದೂ ಇರುವುದಿಲ್ಲ. ಸಕಲವೂ ನನ್ನ ಅಧೀನವೇ ಆಗಿದೆ.

**ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ**
**ಏಷ ತೇಶತೋದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ॥10-40॥**

**40.** ಶತ್ರುಸಂಹಾರಕನಾದ ಅರ್ಜುನ! ಅಲೌಕಿಕಾದ್ಭುತಗಳಾದ ನನ್ನ ವಿಭೂತಿರೂಪಗಳಿಗೆ ಕೊನೆಯಿಲ್ಲ. 'ಅಹಮಾತ್ಮಾ ಗುಣಾಕೇಶ' ಇತ್ಯಾದಿ ಗ್ರಂಥದಿಂದ ಇದುವರೆಗೆ ವಿಭೂತಿರೂಪ ಸಂಕ್ಷೇಪವು ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದನ್ನೂ ನಿರ್ದೇಶಿಸಿ ಹೇಳಲ್ಪಟ್ಟಿತು. ಇನ್ನೂ ವಿಭೂತಿರೂಪಗಳ ವಿಸ್ತಾರವು ಹೇಳಲ್ಪಡುತ್ತದೆ.

**ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ**
**ತತ್ತದೇವಾವಗಚ್ಛ ತ್ವಂ ಮಮ ತೇಜೋಂಽಮ್ಯಸಂಭವಂ॥10-41॥**

**ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ**
**ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್॥10-42॥**

**41-42.** ವಿಭೂತಿ ವಿಸ್ತಾರವನ್ನು ಲಕ್ಷಣಕಥನದಿಂದ ತಿಳಿಸುತ್ತಾನೆ:- ಯಾವ ಯಾವ ವಸ್ತುವು ತನ್ನ ಸಮಾನವಸ್ತುಗಳಲ್ಲಿ ಶ್ರೇಷ್ಠತೆಯನ್ನು ಪಡೆದಿರುವುದೋ ಅಥವಾ ಐಶ್ವರ್ಯ ಯುಕ್ತವೋ ಇಲ್ಲವೇ ಅಭಿವೃದ್ಧಿ ಹೊಂದಿರುವುದೋ ಆಯಾ ವಸ್ತುಗಳೆಲ್ಲವೂ ನನ್ನ ತೇಜೋರೂಪವಾದ ಅಂಶದಿಂದ ಕೂಡಿರುವುದೆಂದೇ ತಿಳಿಯುವವನಾಗು. ಅರ್ಜುನ! ಸೂರ್ಯ ಮುಂತಾದ ಉಕ್ತವಸ್ತುಗಳಲ್ಲಿರುವ ಪರಿಮಿತವಿಭೂತಿ ರೂಪಗಳನ್ನು ವಿಸ್ತಾರವಾಗಿ ತಿಳಿಯುವುದರಿಂದ ನಿನಗೆ ಫಲವೇನು? (ಎಂದರೆ ಉತ್ತರಾಧ್ಯಾಯದಲ್ಲಿ ಹೇಳುವ ವ್ಯಾಪ್ತ ವಿಶ್ವರೂಪಜ್ಞಾನಕ್ಕೆ ಮಹಾಫಲವಿದೆ. ಅದರ ದೃಷ್ಟಿಯಿಂದ ವಿಭೂತಿಜ್ಞಾನಫಲವು ಅಲ್ಪವಾದುದರಿಂದ 'ಫಲವೇನು' ಎಂದು ಆಕ್ಷೇಪವೇ ಹೊರತು ವಿಭೂತಿಜ್ಞಾನಕ್ಕೆ ಸರ್ವಥಾ ಫಲವೇ ಇಲ್ಲವೆಂದು ಭಗವಂತನ ಅಭಿಪ್ರಾಯವಲ್ಲ. ವಿಭೂತಿ-

ವಿಶ್ವರೂಪಜ್ಞಾನ ಫಲಗಳಿಗೆ ನ್ಯೂನಾಧಿಕಭಾವವಿದೆ ಯೆಂಬುದೇ ಆಕ್ಷೇಪದ ತಾತ್ಪರ್ಯ. ಹಾಗಾದರೆ ಯಾವುದನ್ನು ತಿಳಿಯುವುದರಿಂದ ಮಹಾಫಲವಾಗುವುದು?) ಎಂದರೆ:- ಪ್ರಮಾಣಿಸಿದ್ಧವಾದ ಈ ಸಮಸ್ತ ಪ್ರಪಂಚವನ್ನೂ ನಾನು ನನ್ನ ಅನಂತಾಂಶಗಳಲ್ಲಿ ಒಂದಂಶ ಮಾತ್ರದಿಂದಲೇ ವ್ಯಾಪಿಸಿದ್ದೇನೆ. (ಇಂತಹ ಜಗತ್ತು ಸಾವಿರಾರು ಇದ್ದರೂ ಸರ್ವಾಂಶದಿಂದ ನಾನು ವ್ಯಾಪಿಸುವುದಕ್ಕೆ ಸಾಕಾಗುವುದಿಲ್ಲ. ಅಂತಹ ಅಪರಿಮಿತವ್ಯಾಪ್ತಿಯುಳ್ಳವನು ನಾನು. ಅಂತಹ ವ್ಯಾಪ್ತರೂಪಜ್ಞಾನವು ಮಹಾಫಲಪ್ರದವು. ಆದಕಾರಣ ಅವಶ್ಯಸಂಪಾದ್ಯವೇ ಸರಿ ಎಂದು ಭಾವ.) ಈ ವಿಶ್ವರೂಪಜ್ಞಾನದಿಂದಲೇ ಮೋಕ್ಷಸಿದ್ಧಿಯಾಗುವುದಾದರೆ ಪೂರ್ವೋಕ್ತ ವಿಭೂತಿರೂಪಜ್ಞಾನವು ವ್ಯರ್ಥವಾಗುವ ಕಾರಣ ಅದರ ಉಪದೇಶವೇಕೆ ಎಂದು ಶಂಕಿಸಿದರೆ:- 'ಅಜ್ಞಾತ್ವೇನಂ ಸರ್ವವಿಶೇಷಯುಕ್ತಂ ದೇವಂ ಪರಂ ಕೋ ವಿಮುಚ್ಯೇತ ಬಂಧಾತ್' ಎಂಬ ಶ್ರುತ್ಯನುಸಾರವಾಗಿ ಉಕ್ತ ವಿಭೂತಿಜ್ಞಾನವಿಲ್ಲದೆ ಮೋಕ್ಷವಾಗುವುದಿಲ್ಲವಾದಕಾರಣ ಅದು ಆವಶ್ಯಕವೆಂಬ ಅಭಿಪ್ರಾಯದಿಂದ ಭಗವಂತನು ಅದನ್ನು ಉಪದೇಶಿಸಿರುವನು ಎಂದು ಸಮಾಧಾನವನ್ನು ತಿಳಿಯಬೇಕು. ಹೀಗೆ ವಿಭೂತಿ-ವಿಶ್ವರೂಪ ಜ್ಞಾನಗಳೆರಡೂ ಮೋಕ್ಷಸಾಧನಗಳಾದರೆ ಯಾವುದನ್ನಾಶ್ರಯಿಸಬೇಕು? ಎಂದರೆ:- ಅಧಿಕಾರಿಗಳ ಯೋಗ್ಯತಾನುಸಾರವಾಗಿ ಸಾಧನವ್ಯವಸ್ಥೆಯಿದೆ. ಸಾಮಾನ್ಯ ಅಧಿಕಾರಿಗಳು ವಿಭೂತಿಜ್ಞಾನವನ್ನು ಸಂಪಾದಿಸಿ ಸಿದ್ಧಿಯನ್ನು ಪಡೆಯಬಹುದು. ಅರ್ಜುನನಾದರೋ ಮಹಾಫಲಾಧಿಕಾರಿಯಾಗಿರುವುದರಿಂದ ವಿಶ್ವರೂಪಜ್ಞಾನದಿಂದಲೇ ಅವನು ಸಿದ್ಧಿಯನ್ನು ಹೊಂದಲು ಅರ್ಹನು. ಆದಕಾರಣ ವಿಭೂತಿಜ್ಞಾನದಿಂದ ನಿನಗೇನು ಫಲ? ಎಂದು ಅರ್ಜುನನನ್ನೇ ನಿರ್ದೇಶಿಸಿ ಆಕ್ಷೇಪಿಸಿರುವನು. ಈ ಪ್ರಕಾರ ಮೋಕ್ಷಾಧಿಕಾರಿಗಳಿಗೆ ಧ್ಯಾನಸೌಕರ್ಯಕ್ಕಾಗಿ ಪರಮಾತ್ಮನ ನಿರವಧಿಕಶಕ್ತಿಪೂರ್ಣವಾದ ಅನೇಕವಿಧ ವಿಭೂತಿರೂಪಗಳನ್ನು ಭಗವಂತನು ಉಪದೇಶಿಸಿರುವನು.

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ವಿಭೂತಿಯೋಗೋ ನಾಮ ದಶಮೋಽಧ್ಯಾಯಃ॥10-[42]॥

## ಏಕಾದಶೋಽಧ್ಯಾಯಃ॥11-[55]॥

'ವಿಷ್ಟಭ್ಯಾಽಹಮಿದಂ ಕೃತಂ' ಎಂಬ ಹಿಂದಿನ ಅಧ್ಯಾಯದ ಕೊನೆಯ ಶ್ಲೋಕದಲ್ಲಿ ಜಗದ್ವ್ಯಾಪಕವಾದ ವಿಶ್ವರೂಪೋಪಾಸನೆಯು ಸಂಕ್ಷೇಪವಾಗಿ ಉಕ್ತವಾಗಿದೆ. ಅಷ್ಟು ಮಾತ್ರದಿಂದ ವಿಶ್ವರೂಪವನ್ನು ಗ್ರಹಿಸಿ ಧ್ಯಾನಿಸುವುದು ಅಶಕ್ಯ. ಧ್ಯಾನಿಸಬೇಕಾದರೆ ವಿಶ್ವರೂಪವು ಚೆನ್ನಾಗಿ ಅನುಭವಕ್ಕೆ ಬಂದು

ಬುದ್ಧಿಯಲ್ಲಿ ನಿರೂಢವಾಗಬೇಕು. ಆದಕಾರಣ ಉಕ್ತ ವಿಶ್ವರೂಪಸ್ಥಿತಿಯೇ ಮನದಟ್ಟಾಗುವಂತೆ ಈ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಡುತ್ತದೆ.

ಅರ್ಜುನ ಉವಾಚ

ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಂ
ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ॥11-1॥

ಭವಾಪ್ಯಯೌ ಹಿ ಭೂತಾನಾಂ ಶ್ರುತೌ ವಿಸ್ತರಶೋ ಮಯಾ
ತ್ವತ್ತಃ ಕಮಲಪತ್ರಾಕ್ಷ ಮಾಹಾತ್ಮ್ಯಮಪಿ ಚಾವ್ಯಯಂ॥11-2॥

ಏವಮೇತದ್ಯಥಾತ್ಥತ್ವಮಾತ್ಮಾನಂ ಪರಮೇಶ್ವರ
ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ॥11-3॥

ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ
ಯೋಗೇಶ್ವರ ತತೋ ಮೇ ತ್ವಂ ದರ್ಶಯಾತ್ಮಾನಮವ್ಯಯಂ॥11-4॥

**1-4.** ಅರ್ಜುನನು ವಿಶ್ವರೂಪವನ್ನು ಚೆನ್ನಾಗಿ ತಿಳಿದುಕೊಳ್ಳಬೇಕೆಂಬ ಕುತೂಹಲವುಳ್ಳವನಾಗಿ, ಅದನ್ನು ಪ್ರಶ್ನೆಮಾಡುವುದಕ್ಕೋಸ್ಕರ ಪೂರ್ವೋಕ್ತ ವಿಷಯವನ್ನು ಆದಿಯಲ್ಲಿ ಎರಡು ಶ್ಲೋಕಗಳಿಂದ ಅನುವಾದಮಾಡಿ ಪ್ರಶ್ನೆ ಮಾಡುತಾನೆ:- ಕಮಲಪತ್ರದಂತೆ ವಿಶಾಲನೇತ್ರನಾದ ಸ್ವಾಮಿ! ನೀನು ಅನುಗ್ರಹ ಪೂರ್ವಕವಾಗಿ ಮಾಡಿದ, ಅತ್ಯಂತ ರಹಸ್ಯವಾದ, ಅಧ್ಯಾತ್ಮವೆಂಬ ಭಗವತತ್ತ್ವೋಪದೇಶವನ್ನು ಕೇಳಿದುದರಿಂದ ನನಗೆ ಬಂಧುಸ್ನೇಹಾದಿರೂಪ ಮೋಹವು ಹೋಯಿತು. ಸ್ವಾಮಿ! ಪ್ರಾಣಿಗಳಿಗೆ ಜನ್ಮಲಯಾದಿಗಳು ನಿನ್ನಿಂದಲೇ ಆಗುವುವೆಂದು 'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ' ಇತ್ಯಾದಿ ಸಪ್ತಮಾಧ್ಯಾಯಾದಿಗಳಲ್ಲಿ ವಿಸ್ತಾರವಾಗಿ ನನ್ನಿಂದ ಶ್ರುತವಾಗಿದೆ. ಮತ್ತು ಹ್ರಾಸವಾಗದೆ ಶಾಶ್ವತವಾಗಿರುವ ನಿನ್ನ ಮಹಾತ್ಮ್ಯೆಯೂ ಶ್ರುತವಾಯಿತು. ಸರ್ವಸ್ವಾಮಿಯಾದ ಕೃಷ್ಣ! ನಿನ್ನ ಸ್ವರೂಪವನ್ನು ಯಾವ ರೀತಿಯಾಗಿ ನೀನು ಹೇಳಿದೆಯೋ ಅವೆಲ್ಲವೂ ಹಾಗೆಯೇ ಸರಿ, ಸತ್ಯವಾದುದು. ಪುರುಷಶ್ರೇಷ್ಠ! ಅಚಿಂತ್ಯಾದ್ಭುತಶಕ್ತಿಯುತವಾದ ನಿನ್ನ ರೂಪವನ್ನು ದರ್ಶನಮಾಡಬೇಕೆಂದು ಆಶೆಯಾಗಿದೆ. ಅತ್ಯಂತ ಸಮರ್ಥನಾದ ಸ್ವಾಮಿ! ನಿನ್ನ ಆ ವಿಶ್ವರೂಪವನ್ನು ನೋಡುವುದು ನನಗೆ ಸಾಧ್ಯವೆಂದು ನೀನು ತಿಳಿಯುವುದಾದರೆ ಸರ್ವೋಪಾಯಾಧಿಪತಿಯಾಗಿರುವ ನೀನು ಹ್ರಾಸವಾಗದೆ

ಶಾಶ್ವತವಾಗಿರುವ ಅಂತಹ ನಿನ್ನ ಸ್ವರೂಪವನ್ನು ನನಗೆ ತೋರಿಸು ಎಂಬುದಾಗಿ ಅರ್ಜುನನು ಶ್ರೀಕೃಷ್ಣನನ್ನು ಪ್ರಾರ್ಥಿಸಿದನು.

ಶ್ರೀ ಭಗವಾನುವಾಚ

| |
|---|
| ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ<br>ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ ॥11-5॥ |
| ಪಶ್ಯಾದಿತ್ಯಾನ್ವಸೂನ್ರುದ್ರಾನಶ್ವಿನೌ ಮರುತಸ್ತಥಾ<br>ಬಹೂನ್ಯದೃಷ್ಟಪೂರ್ವಾಣಿ ಪಶ್ಯಾಶ್ಚರ್ಯಾಣಿ ಭಾರತ॥11-6॥ |
| ಇಹೈಕಸ್ಥಂ ಜಗತ್ಕೃತ್ಸ್ನಂ ಪಶ್ಯಾದ್ಯ ಸಚರಾಚರಂ<br>ಮಮ ದೇಹೇ ಗುಡಾಕೇಶ ಯಚ್ಚಾನ್ಯದ್ರಷ್ಟು ಮಿಚ್ಛಸಿ॥11-7॥ |
| ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ<br>ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಂ॥11-8॥ |

**5-8.** ಭಗವಂತನು ಪಾರ್ಥನ ಪ್ರಾರ್ಥನೆಯನ್ನು ಈಡೇರಿಸಲು ಮೊದಲು ಆ ರೂಪವನ್ನು ತೋರಿಸುವೆನು ನೋಡೆಂದು ವಿಧಿಸುತ್ತಾನೆ:- ಪಾರ್ಥ! ಶುಕ್ಲಾದಿ ನಾನಾ ವರ್ಣಗಳನ್ನು ಮತ್ತು ಅನೇಕ ವಿಧವಾದ ಆಕಾರಗಳನ್ನೂ ಸಹ ಹೊಂದಿರುವ ಅಪ್ರಾಕೃತವಾದ ನನ್ನ ಬಹುರೂಪಗಳನ್ನು ನೋಡು! ಅಲ್ಲಿ ವಿಶೇಷವೇನೆಂದರೆ :- ಭರತಕುಲಸಂಭೂತನಾದ ಅರ್ಜುನ! ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರ, ಅಶ್ವಿನೀದೇವತೆಗಳು, ನಲವತ್ತೊಂಭತ್ತು ಮರುತ್ತುಗಳು ಮತ್ತು ಹಿಂದೆ ನೋಡದೇ ಇರುವ ಅನೇಕ ಅದ್ಭುತ ಪದಾರ್ಥಗಳು ಮುಂತಾದ ಸ್ಥಾವರಜಂಗಮಾತ್ಮಕ ಸಕಲ ಪ್ರಪಂಚವೂ ಈಗ ನಿನಗೆ ತೋರಿಸಬೇಕೆಂದಿರುವ ನನ್ನ ದೇಹದಲ್ಲಿ ಒಂದು ಭಾಗದಲ್ಲಿ ಮಾತ್ರ ಅಡಗಿರುವುದನ್ನು ನೋಡು. ಜಿತನಿದ್ರನಾದ ಅರ್ಜುನ! ಅಷ್ಟೇ ಅಲ್ಲದೆ ನೀನು ಇತರ ಯಾವುಯಾವುದನ್ನು ನೋಡಬೇಕೆಂದು ಅಪೇಕ್ಷಿಸುತ್ತಿರುವೆಯೋ ಅವೆಲ್ಲವನ್ನೂ ಈ ನನ್ನ ದೇಹದಲ್ಲಿ ನೋಡು! ಅರ್ಜುನ! ನನ್ನ ವಿಶ್ವರೂಪವನ್ನು ನೀನು ನೋಡಬೇಕೆಂದು ಇಚ್ಛಿಸುತ್ತಿರುವೆ. 'ನೋಡು' ಎಂದು ನಾನೂ ಹೇಳುತ್ತಿರುವೆನು. ಆದರೆ ನೀನು ನಿನ್ನ ಈ ಕಣ್ಣುಗಳಿಂದಲೇ ನನ್ನ ವ್ಯಾಪ್ತರೂಪವನ್ನು ನೋಡಲು ಸಾಧ್ಯವಾಗುವುದಿಲ್ಲ. ಆದಕಾರಣ ನಿನಗೆ ಅಲೌಕಿಕವಾದ ದರ್ಶನಶಕ್ತಿಯನ್ನು ಕೊಡುವೆನು. ಸರ್ವೇಶ್ವರನಾದ ನನ್ನ ಸಾಮರ್ಥ್ಯವನ್ನು ನೋಡು! ಎಂದು ಭಗವಂತನು ಹೇಳಿದನು.

## ಸಂಜಯ ಉವಾಚ

**ಏವಮುಕ್ತ್ವಾ ತತೋ ರಾಜನ್ ಮಹಾಯೋಗೇಶ್ವರೋ ಹರಿಃ**

**ದರ್ಶಯಮಾಸ ಪಾರ್ಥಾಯ ಪರಮಂ ರೂಪಮೈಶ್ವರಂ॥11-9॥**

**9.** ಅನಂತರ ನಡೆದ ವೃತ್ತಾಂತವನ್ನು ಸಂಜಯನು ಧೃತರಾಷ್ಟ್ರ ರಾಜನಿಗೆ ಹೇಳುತ್ತಾನೆ:- ಧೃತರಾಷ್ಟ್ರ ರಾಜ! ಅನಂತಶಕ್ತಿಗಳಿಗೊಡೆಯನಾಗಿ1, ಶ್ರೀಹರಿನಾಮಕನಾದ ಶ್ರೀಕೃಷ್ಣನು ಈ ರೀತಿ ಹೇಳಿ, ಪಾರ್ಥನಿಗೆ ದಿವ್ಯಚಕ್ಷುಸ್ಸನ್ನು ಕೊಟ್ಟು ಪರಿಪೂರ್ಣವೂ, ಅಚಿಂತ್ಯೈಶ್ವರ್ಯಯುಕ್ತವೂ ಆದ ಸರ್ವೋತ್ತಮ ವಿಶ್ವರೂಪವನ್ನು ತೋರಿಸಿದನು.

.ಇಡೋಪಹೂತಂ ಗೇಹೇಷು ಹರೇ ಭಾಗಂ ಕ್ರತುಷ್ವಹಂ
ವರ್ಣೋ ಮೇ ಹರಿತಃ ಶ್ರೇಷ್ಠಃ ತಸ್ಮಾದ್ಧರಿರಿತಿ ಸ್ಮೃತಃ - ಮೋಕ್ಷಧರ್ಮಃ

ಯಜ್ಞಾದಿ ಅನಂತ ಪೂಜಾಸ್ಥಾನಗಳಲ್ಲಿ ಏಕಕಾಲದಲ್ಲಿ ಅನೇಕ ಭಕ್ತರು ಸಮರ್ಪಿಸುವ ಪದಾರ್ಥಗಳನ್ನು ಸ್ವೀಕರಿಸುವುದರಿಂದಲೂ, ನಾನು ಹರಿತವರ್ಣವುಳ್ಳವನಾದುದರಿಂದಲೂ 'ಹರಿಃ ಎಂಬ ಅನ್ವರ್ಥಕನಾಮವುಳ್ಳವನು.

**ಅನೇಕವಕ್ತ್ರನಯನಮನೇಕಾದ್ಭುತದರ್ಶನಂ**

**ಅನೇಕದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಂ॥11-10॥**

**ದಿವ್ಯಮಾಲ್ಯಾಂಬರಧರಂ ದಿವ್ಯಗಂಧಾನುಲೇಪನಂ**

**ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಂ॥11-11॥**

**ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ**

**ಯದಿ ಭಾಃ ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ॥11-12॥**

**ತತ್ರೈಕಸ್ಥಂ ಜಗತ್ ಕೃತ್ಸ್ನಂ ಪ್ರವಿಭಕ್ತಮನೇಕಧಾ**

**ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ॥11-13॥**

**10-13.** ಆ ರೂಪವು ಎಂತಹುದೆಂದರೆ:- ಆ ರೂಪವು ಅಸಂಖ್ಯಾತವಾದ ಮುಖನೇತ್ರಗಳುಳ್ಳದ್ದು. ಅಪರಿಮಿತವಾದ ಆಶ್ಚರ್ಯಕರ ದೃಶ್ಯಗಳನ್ನೊಳಗೊಂಡಿದೆ. ಅನಂತ ದಿವ್ಯಾಭರಣಗಳನ್ನು ಧರಿಸಿ ಆಶ್ಚರ್ಯಕರವಾದ ಅನಂತಾಯುಧಗಳನ್ನು ಎತ್ತಿ ಹಿಡಿದಿದೆ. ಲೋಕವಿಲಕ್ಷಣವಾದ ಪುಷ್ಪ ಮುತ್ತು ಮುಂತಾದುವುಗಳ ಮಾಲಿಕೆ, ವಸ್ತ್ರ ಇವುಗಳನ್ನುಧರಿಸಿದೆ. ದಿವ್ಯಗಂಧವನ್ನು ಹಚ್ಚಿಕೊಂಡಿದೆ. ಸ್ವರೂಪವಾದರೋ ಸರ್ವಾಶ್ಚರ್ಯಮಯವೂ, ಕ್ರೀಡಾದಿಗುಣಸಂಪನ್ನವು, ದೇಶಕಾಲ ಗುಣಾವಧಿರಹಿತವು ಮತ್ತು ಸಕಲ ದಿಕ್ಕುಗಳಲ್ಲಿಯೂ ಮುಖಗಳುಳ್ಳುದೂ ಆಗಿದೆ. ಆ ವಿಶ್ವರೂಪದ ಪ್ರಭೆಯಾದರೋ ವರ್ಣಿಸಲಶಕ್ಯವು:- ಆಕಾಶದಲ್ಲಿ ಅನಂತಸೂರ್ಯ ರಾಶಿಗಳು ಒಂದೇ ಕಾಲದಲ್ಲಿ

ಉದಯಿಸಿ ಬೆಳಗಿದ್ದೇ ಆದರೆ ಆಗ ಸಂಭವಿಸಬಹುದಾದ ಉತ್ಕೃಷ್ಟ ಪ್ರಕಾಶವು ಆ ವಿಶ್ವರೂಪಿಯಾದ ಮಹಾತ್ಮನ ಪ್ರಕಾಶಕ್ಕೆ ಸಮಾನವಾದೀತು! (ಈ ವಿಷಯಕ್ಕೆ ಬೇರೆ ದೃಷ್ಟಾಂತವು ದೊರೆಯುವುದಿಲ್ಲವೆಂದರ್ಥ ಆದಕಾರಣವೇ ಇಂತಹ ವಿಶ್ವರೂಪವನ್ನು ಚರ್ಮಚಕ್ಷುಸ್ಸಿನಿಂದ ನೋಡಲು ಅಸಾಧ್ಯವೆಂದು ಶ್ರೀಕೃಷ್ಣನು ದಿವ್ಯಚಕ್ಷುಸ್ಸನ್ನು ಪಾರ್ಥನಿಗೆ ಕೊಟ್ಟನೆಂದು ಭಾವ.)

ಅಂತಹ ಅದ್ಭುತರೂಪವನ್ನು ಭಗವಂತನು ತೋರಿಸಿದಾಗ ಅರ್ಜುನನು ಬ್ರಹ್ಮಾದಿ ಸಕಲ ದೇವಶ್ರೇಷ್ಠನಾದ ಆ ಪರಮಾತ್ಮನ ವಿಶ್ವರೂಪದಲ್ಲಿ ದೇವ-ದಾನವ-ಮಾನವಾದಿಗಳಾಗಿ ವಿಭಕ್ತವಾದ ಸಕಲ ಪ್ರಪಂಚಕ್ಕೂ ಆ ರೂಪದ ಒಂದು ಭಾಗದಲ್ಲಿ ಮಾತ್ರ ಅಡಗಿರುವುದನ್ನು ನೋಡಿದನು.

ತತಃ ಸ ವಿಸ್ಮಯಾವಿಷ್ಟೋ ಹೃಷ್ಟ ರೋಮಾ ಧನಂಜಯಃ
ಪ್ರಣಮ್ಯ ಶಿರಸಾ ದೇವಂ ಕೃತಾಂಜಲಿರಭಾಷತ॥11-**14**॥

**14.** ಬಳಿಕ ಅರ್ಜುನನು ಆಶ್ಚರ್ಯಭರಿತನಾಗಿ, ರೋಮಾಂಚನಗೊಂಡು ಕ್ರೀಡಾಕಾಂತ್ಯಾದಿ ಗುಣಪೂರ್ಣನಾದ ಶ್ರೀಹರಿಗೆ ಸಾಷ್ಟಾಂಗ ನಮಸ್ಕಾರಮಾಡಿ ಕೈಮುಗಿದು ನಿಂತು ಹೀಗೆ ಮಾತನಾಡಿದನು.

ಅರ್ಜುನ ಉವಾಚ

ಪಶ್ಯಾಮಿ ದೇವಾಂಸ್ತವ ದೇವ ದೇಹೇ ಸರ್ವಾಂಸ್ತಥಾ ಭೂತವಿಶೇಷಸಂಘಾನ್
ಬ್ರಹ್ಮಾಣಮೀಶಂ ಕಮಲಾಸನಸ್ಥಂ ಋಷಿಂಶ್ಚ ಸರ್ವಾನುರಗಾಂಶ್ಯ ದಿವ್ಯಾನ್॥11-**15**॥

ಅನೇಕಬಾಹೂದರವಕ್ತ್ರನೇತ್ರಂ ಪಶ್ಯಾಮಿ ತ್ವಾಂ ಸರ್ವತೋಽನಂತರೂಪಂ
ನಾಂತಂ ನ ಮಧ್ಯಂ ನ ಪುನಸ್ತವಾದಿಂ ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ॥11-**16**॥

ಕಿರೀಟಿನಂ ಗದಿನಂ ಚಕ್ರಿಣಂ ಚ ತೇಜೋರಾಶಿಂ ಸರ್ವತೋ ದೀಪ್ತಿಮಂತಂ
ಪಶ್ಯಾಮಿ ತ್ವಾಂ ದುರ್ನಿರೀಕ್ಷಂ ಸಮಂತಾದ್ದೀಪ್ತಾನಲಾರ್ಕದ್ಯುತಿಮಪ್ರಮೇಯಂ॥11-**17**

**15-17.** ದೇವ! ನಿನ್ನ ಶರೀರದಲ್ಲಿ ಸಕಲ ದೇವತೆಗಳನ್ನೂ, ಹಾಗೆಯೇ ಪ್ರಾಣಿವಿಶೇಷಗಳ ಸಮೂಹಗಳನ್ನೂ, ಕಮಲವೆಂಬ ಆಸನದಲ್ಲಿ ಕುಳಿತಿರುವ ಚತುರ್ಮುಖಬ್ರಹ್ಮನನ್ನೂ, ಆ ಬ್ರಹ್ಮನ ತೊಡೆಯಮೇಲೆ ಕುಳಿತಿರುವ ರುದ್ರದೇವನನ್ನೂ, ಸಮಸ್ತ ಋಷಿಗಳನ್ನೂ ಮತ್ತು ಅದ್ಭುತ

ಸರ್ಪಗಳನ್ನೂ ನೋಡುತ್ತಿರುವೆನು. ಅಸಂಖ್ಯಾಕಗಳಾದ ಬಾಹು, ಉದರ, ಮುಖ, ಕಣ್ಣು ಇವುಗಳುಳ್ಳ, ಸರ್ವ ದೇಶಗಳಲ್ಲಿಯೂ ವ್ಯಾಪಿಸಿ ಅಪರಿಮಿತಗಳಾಗಿರುವ ರೂಪಗಳುಳ್ಳ ನಿನ್ನನ್ನು ನೋಡುತ್ತಿರುವೆನು. ಪೂರ್ಣರೂಪವುಳ್ಳ ಸ್ವಾಮಿ! ಜಗನ್ನಿಯಾಮಕ! ನಿನಗೆ ಉತ್ಪತ್ತಿ, ನಾಶ ಮತ್ತು ಇವೆರಡರ ಮಧ್ಯಾವಸ್ಥೆ ಇವಾವುದನ್ನೂ ಕಾಣೆನು. ಕಿರೀಟ, ಗದೆ, ಚಕ್ರಾಯುಧಗಳನ್ನು ಧರಿಸಿರುವ, ತೇಜಃಪುಂಜನಾದ, ಎಲ್ಲಾ ಕಡೆಯೂ ವ್ಯಾಪಿಸಿರುವ ಪ್ರಕಾಶವುಳ್ಳ, ಸುತ್ತಲೂ ಬೆಳಗುತ್ತಿರುವ ಅಗ್ನಿ ಸೂರ್ಯ ಪ್ರಕಾಶದೋಪಾದಿಯಲ್ಲಿ ಥಳಥಳಿಸುತ್ತಿರುವ ಅಪರಿಮಿತ ಪ್ರಭಾವನಾದ, ಸುಲಭವಾಗಿ ನೋಡುವುದಕ್ಕೆ ಸಾಧ್ಯವಾಗದಿರುವ ನಿನ್ನನ್ನು ನೋಡುತ್ತಿರುವೆನು.

**ತ್ವಮಕ್ಷರಂ ಪರಮಂ ವೇದಿತವ್ಯಂ ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ**
**ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ ಸನಾತನಸ್ತ್ವಂ ಪುರುಷೋ ಮತೋ ಮೇ॥11-18**

**ಅನಾದಿಮಧ್ಯಾಂತಮನಂತವೀರ್ಯಮನಂತಬಾಹುಂ ಶಶಿಸೂರ್ಯನೇತ್ರಂ**
**ಪಶ್ಯಾಮಿ ತ್ವಾಂ ದೀಪ್ತ ಹುತಾಶವಕ್ತ್ರಂ ಸ್ವತೇಜಸಾ ವಿಶ್ವಮಿದಂ ತಪಂತಂ॥11-19॥**

**ದ್ಯಾವಾಪೃಥಿವ್ಯೋರಿದಮಂತರಂ ಹಿ ವ್ಯಾಪ್ತಂ ತ್ವಯೈಕೇನ ದಿಶಶ್ಚ ಸರ್ವಾಃ**
**ದೃಷ್ಟ್ವಾದ್ಭುತಂ ರೂಪಮುಗ್ರಂ ತವೇದಂಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್॥11-20॥**

**ಅಮೀ ಹಿ ತ್ವಾಂ ಸುರಸಂಘಾ ವಿಶಂತಿ ಕೇಚಿದ್ಭೀತಾಃ ಪ್ರಾಂಜಲಯೋ ಗೃಣಂತಿ**
**ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧ ಸಂಘಾಃ ಸ್ತುವಂತಿ ತ್ವಾಂ ಸ್ತುತಿಭಿಃ ಪುಷ್ಕಲಾಭಿಃ॥11-21॥**

**18.21** ಸ್ವಾಮಿ! ನೀನು ಯಾವ ರೀತಿಯಲ್ಲಿಯೂ ನಾಶವಿಲ್ಲದಕಾರಣ ಪರಮಾಕ್ಷರನೆನಿಸಿರುವೆ! ನೀನೇ ಮುಖ್ಯ ವೇದ್ಯನು! ನೀನೇ ಈ ಜಗತ್ತಿಗೆ ಮುಖ್ಯಾಶ್ರಯನು! ನೀನೇ ಹ್ರಾಸವಿಲ್ಲದವನು, ಅನಾದಿಪರಂಪರಾಪ್ರಾಪ್ತ ಧರ್ಮರಕ್ಷಕನು, ಅನಾದ್ಯನಂತನು, ಪೂರ್ಣಷಡ್ಗುಣನು ಎಂದು ನನಗೆ ತಿಳಿಯಬಂದಿದೆ. ಆದಿಮಧ್ಯಾಂತಶೂನ್ಯವಾದ ಎಂದರೆ ಅಪರಿಮಿತವಾದ ಗುಣಗಳುಳ್ಳವನು ಅಪರಿಮಿತ ಪರಾಕ್ರಮಶಾಲಿಯು! ಅಸಂಖ್ಯಾಕಬಾಹುಗಳುಳ್ಳವನು! ಚಂದ್ರಸೂರ್ಯರಿಗಾಶ್ರಯವಾದ ಕಣ್ಣುಗಳುಳ್ಳವನು! ಜಾಜ್ವಲ್ಯಮಾನನಾದ ಅಗ್ನಿ ದೇವನಿಗೆ ಆಶ್ರಯವಾದ ಮುಖವುಳ್ಳವನು! ಸ್ವತೇಜಸ್ಸಿನಿಂದಲೇ ಈ ಪ್ರಪಂಚವನ್ನೆಲ್ಲಾ ತಪಿಸುತ್ತಿರುವವನು!

ಇಂತಹ ನಿನ್ನನ್ನು ನೋಡುತ್ತಿರುವನು. ( ಮಹಾನುಭಾವನಾದ ಸ್ವಾಮಿ! ಅಂತರಿಕ್ಷ ಭೂಲೋಕಗಳ ಮಧ್ಯಭಾಗವಾದ ಈ ಲೋಕವು ಮತ್ತು ಸಕಲ ದಿಕ್ಕುಗಳೂ ಸಹ ನಿನ್ನ ಒಂದು ರೂಪದಿಂದಲೇ ವ್ಯಾಪಿಸಲ್ಪಟ್ಟಿವೆ! ಹೀಗೆ ಸರ್ವವ್ಯಾಪಕವಾಗಿರುವುದರಿಂದ ಆಶ್ಚರ್ಯಕರವಾದ, ಅಪೂರ್ವವಾಗಿರುವುದರಿಂದ ಭಯಂಕರವಾಗಿ ತೋರುವ, ನಿನ್ನ ಈ ವಿಶ್ವರೂಪವನ್ನು ನೋಡಿ ಮೂರು ಲೋಕಗಳಲ್ಲಿರುವ ಭಕ್ತಜನರು ಭೀತರಾಗಿರುವುದನ್ನು ನೋಡುತ್ತಿರುವೆನು, ಈ ಮುಕ್ತ ದೇವಸಮೂಹಗಳು ನಿನ್ನನ್ನು ಪ್ರವೇಶಿಸುತ್ತಿವೆ, ನಿನ್ನ ಸಮೀಪಕ್ಕೆ ಬರುತ್ತಿವೆ. ಕೆಲವರು ಭೀತರಾಗಿ ಕೈಮುಗಿದು ನಿಂತು ಸ್ತೋತ್ರಮಾಡುತ್ತಿರುವರು. ಮಹಾತ್ಮರಾದ ಋಷಿಗಳ ಮತ್ತು ಸಿದ್ಧರ ಸಮೂಹಗಳು ಲೋಕಕ್ಕೆ ಕ್ಷೇಮವಾಗಲೆಂದು ಗುಣೋತ್ಕರ್ಷಪ್ರತಿಪಾದಕ ಸ್ತೋತ್ರಗಳನ್ನು ಹೇಳುತ್ತ ಸ್ತುತಿಸುತ್ತಿರುವರು. ಇದೆಲ್ಲವನ್ನೂ ನಾನು ಸಾಕ್ಷಾತ್ತಾಗಿ ನೋಡುತ್ತಿರುವೆನು.

ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ ವಿಶ್ವೇಽಶ್ವಿನೌ ಮರುತಶ್ಚೋಷ್ಮಪಾಶ್ಚ
ಗಂಧರ್ವ ಯಕ್ಷಾಸುರಸಿದ್ಧಸಂಘಾ ವೀಕ್ಷಂತೇ ತ್ವಾಂ ವಿಸ್ಮಿತಾಶ್ಚೈವ ಸರ್ವೇ॥11-**22**॥

ರೂಪಂ ಮಹತ್ತೇ ಬಹುವಕ್ತ್ರನೇತ್ರಂ ಮಹಾಬಾಹೋ ಬಹುಬಾಹೂರುಪಾದಂ
ಬಹೂದರಂ ಬಹುದಂಷ್ಟ್ರಾಕರಾಲಂ ದೃಷ್ಟ್ವಾ ಲೋಕಾಃ ಪ್ರವ್ಯಥಿತಾಸ್ತಥಾಹಂ
॥11-**23**॥

ನಭಸ್ಪೃಶಂ ದೀಪ್ತಮನೇಕವರ್ಣಂ ವ್ಯಾತ್ತಾನನಂ ದೀಪ್ತ ವಿಶಾಲನೇತ್ರಂ
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ ಧೃತಿಂ ನ ವಿಂದಾಮಿ ಶಮಂ ಚ ವಿಷ್ಣೋ
॥11-24॥

ದಂಷ್ಟ್ರಾಕರಾಲಾನಿ ಚ ತೇ ಮುಖಾನಿ ದೃಷ್ಟ್ವೈವ ಕಾಲಾನಲಸನ್ನಿಭಾನಿ
ದಿಶೋ ನ ಜಾನೇ ನ ಲಭೇ ಚ ಶರ್ಮ ಪ್ರಸೀದ ದೇವೇಶ ಜಗನ್ನಿವಾಸ॥11-**25**॥

**22-25** ಏಕಾದಶರುದ್ರರು, ಆದಿತ್ಯಗಣ, ಅಷ್ಟವಸುಗಳು, ಸಾಧ್ಯರೆಂಬ ದೇವತೆಗಳು, ವಿಶ್ವೇದೇವತೆಗಳು, ಅಶ್ವಿನೀದೇವತೆಗಳು, **49** ಮರುತ್ತುಗಳು, ಪಿತೃ ದೇವತೆಗಳು, ಗಂಧರ್ವ ಯಕ್ಷ ಸಿದ್ಧಗಣಗಳು ಇವರೆಲ್ಲರೂ ಆಶ್ಚರಚಕಿತರಾಗಿ ನಿನ್ನನ್ನು ನೋಡುತ್ತಿರುವರು. ಈ ದೃಶ್ಯವನ್ನು ನಾನು ಸಾಕ್ಷಾತ್ಕರಿಸುತ್ತಿರುವೆನು. ಮಹಾಪರಾಕ್ರಮಿಯಾದ ಸ್ವಾಮಿ! ಅಸಂಖ್ಯಾತ ಮುಖನೇತ್ರಗಳಿಂದ ಕೂಡಿದ ಅನಂತವಾದ ಬಾಹು-ತೊಡೆ-ಪಾದಗಳುಳ್ಳ, ಅನೇಕ ಉದರಗಳುಳ್ಳ, ಅನೇಕ

ಕೋರೆಹಲ್ಲುಗಳಿಂದ ಭಯಂಕರವಾದ ನಿನ್ನ ಈ ರೂಪವನ್ನು ಭಕ್ತಜನರು ನೋಡಿ ಬಹಳವಾಗಿ ವ್ಯಥೆಪಡುತ್ತಿರುವರು. ನಾನೂ ಹಾಗೆಯೇ ಬಹಳವಾಗಿ ತತ್ತರಿಸುತಿರುವೆನು! ವ್ಯಾಪ್ತನಾದುದರಿಂದ ವಿಷ್ಣುನಾಮಕನಾದ ದೇವ! ಅಂತರಿಕ್ಷವನ್ನು ಮುಟ್ಟುತ್ತಿರುವ, ಪ್ರಕಾಶಮಾನವಾದ, ಶುಕ್ಲಾದಿ ನಾನಾ ವರ್ಣಗಳಿಂದ ಕೂಡಿರುವ ಕೆರಳಿದ ಮುಖವುಳ್ಳ, ಜಾಜ್ವಲ್ಯಮಾನವಾದ ವಿಶಾಲನೇತ್ರಗಳುಳ್ಳ ನಿನ್ನ ರೂಪವನ್ನು ನೋಡಿ ನನ್ನ ಮನಸ್ಸು ಅತ್ಯಂತ ಭಯಗ್ರಸ್ತವಾಗಿದೆ. ನನಗೆ ಧೈರ್ಯವೇ ಕುಂದಿಹೋಯಿತು! ಈ ದರ್ಶನದಿಂದ ಸುಖವೇ ಆಗುವಂತಿಲ್ಲ. ಜಗದಾಧಾರನಾದ ದೇವೇಶ! ಕೋರೆಹಲ್ಲುಗಳಿಂದ ಭಯಂಕರವಾಗಿ ಕಾಣುತ್ತಿರುವ, ಪ್ರಳಯಾಗ್ನಿಗೆ ಸಮಾನಗಳಾದ ನಿನ್ನ ಮುಖಗಳನ್ನು ನೋಡಿ ದಿಕ್ಕೆಟ್ಟಿರುವೆನು. ಸುಖವನ್ನೂ ಸಹ ಹೊಂದುವ ಹಾಗಿಲ್ಲ. ಪ್ರಸನ್ನನಾಗು! ದೇವ! ಕೋರೆಹಲ್ಲುಗಳಿಂದ ವಿರೂಪಗಳಾಗಿ ಕರಾಳವಾಗಿರುವ ನಿನ್ನ ಮುಖಗಳನ್ನು ಧೃತರಾಷ್ಟ್ರನ ಪುತ್ರರಾದ ಈ ದುರ್ಯೋಧನಾದಿಗಳು, ಭೀಷ್ಮ, ದ್ರೋಣ, ಕರ್ಣ ಇವರೆಲ್ಲರೂ ಇತರ ರಾಜರ ಸಮೂಹ ಮತ್ತು ನಮ್ಮ ಕಡೆಯ ಧೃಷ್ಟದ್ಯುಮ್ನಾದಿ ವೀರಾಗ್ರೇಸರ ಸಹಿತರಾಗಿ ಬೇಗ ಬೇಗ ಪ್ರವೇಶಿಸುತ್ತಿರುವರು. ಅವರಲ್ಲಿ ಆಗಲೇ ಸಾಯುವುದಕ್ಕೆ ಸಿದ್ಧರಾದ ಕೆಲವರು ನಿನ್ನ ಹಲ್ಲುಗಳ ಸಂದಿನಲ್ಲಿ ಸಿಕ್ಕಿಕೊಂಡಿರುವುದು ಕಾಣುತ್ತಿದೆ. ಅವರ ಶಿರಸ್ಸುಗಳು ಚೂರ್ಣೀಕೃತವಾಗಿರುವುದನ್ನು ನೋಡುತ್ತಿರುವೆನು. (ಇದು ಭವಿಷ್ಯ ದರ್ಶನವು, ಮಂದದೃಷ್ಟಿಯಿಂದ ನೋಡಲಸಾಧ್ಯವಾದರೂ ಅರ್ಜುನನಿಗೆ ದಿವ್ಯ ದೃಷ್ಟಿಯನ್ನು ಕೊಟ್ಟಿರುವುದರಿಂದ ಇಂತಹ ಭವಿಷ್ಯವು ದೃಷ್ಟವಾದುದು ಯುಕ್ತ ಎಂದು ತಿಳಿಯಬೇಕು.)

ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ ಸರ್ವೆ ಸಹೈವಾವನಿಪಾಲಸಂಘೈಃ
ಭೀಷ್ಮ ದ್ರೋಣಃ ಸೂತಪುತ್ರಸ್ತಥಾऽಸೌ ಸಹಾಸ್ಮದೀಯೈರಪಿ ಯೋಧಮುಖ್ಯೈಃ
॥11-**26**॥

ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ ದಂಷ್ಟ್ರಾ ಕರಾಲಾನಿ ಭಯಾನಕಾನಿ
ಕೇಚಿದ್ವಿಲಾಗ್ನಾ ದಶನಾಂತರೇಷು ಸಂದೃಶ್ಯಂತೇ ಚೂರ್ಣಿತೈರುತ್ತಮಾಂಗೈಃ
॥11-**27**॥

ಯಥಾ ನದೀನಾಂ ಬಹವೋಽಂಬುವೇಗಾಃ ಸಮುದ್ರಮೇವಾಭಿಮುಖಾ ದ್ರವಂತಿ
ತಥಾ ತವಾಮೀ ನರಲೋಕವೀರಾ ವಿಶಂತಿ ವಕ್ತ್ರಾಣ್ಯಭಿವಿಜ್ವಲಂತಿ॥11-**28**॥

ಯಥಾ ಪ್ರದೀಪ್ತಂ ಜ್ವಲನಂ ಪತಂಗಾ ವಿಶಂತಿ ನಾಶಾಯ ಸಮೃದ್ಧವೇಗಾಃ
ತಥೈವ ನಾಶಾಯ ವಿಶಂತಿ ಲೋಕಾಸ್ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ॥11-**29**॥

ಲೇಲಿಹ್ಯಸೇ ಗ್ರಸಮಾನಃ ಸಮಂತಾನ್ಲೋಕಾನ್ಸಮಗ್ರಾನ್ವದನೈರ್ಜ್ವಲದ್ಭಿಃ
ತೇಜೋಭಿರಾಪೂರ್ಯ ಜಗತ್ಸಮಗ್ರಂ ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ
॥11-**30**॥

**26-30** ಬಹು ನದೀ ಜಲಗಳು ವೇಗವಾಗಿ ಸಮುದ್ರದ ಕಡೆಗೆ ಹೇಗೆ ಪ್ರವಹಿಸುತ್ತವೆಯೋ ಅದರಂತೆ ಈ ರಾಜರೂ ದೇವ! ಪ್ರಜ್ವಲಿಸುತ್ತಿರುವ ನಿನ್ನ ಮುಖಗಳನ್ನು [1]ಪ್ರವೇಶಿಸುತ್ತಾರೆ ದೇವ! ಬಹು ಶೀಘ್ರಗಾಮಿಗಳಾದ ರೆಕ್ಕೆ ಹುಳುಗಳು ಸಾಯುವುದಕ್ಕಾಗಿ ಉರಿಯುವ ಬೆಂಕಿಯಲ್ಲಿ ಹೇಗೆ ಬೀಳುತ್ತವೆಯೋ ಹಾಗೆಯೇ ಈ ಉಭಯ ಪಕ್ಷದ ಯೋಧರೂ ಸಾಯುವುದಕ್ಕಾಗಿ ನಿನ್ನ ಮುಖಗಳನ್ನು ಬಹು ವೇಗವಾಗಿ ಪ್ರವೇಶಿಸುತ್ತಿರುವರು. (ಭಗವಂತನು ಇವರನ್ನು ಬಹು ಬೇಗ ನಾಶಪಡಿಸುವನು. ಆ ಭವಿಷ್ಯವು ಅರ್ಜುನನ ದಿವ್ಯದೃಷ್ಟಿಗೆ ಗೋಚರವಾಗಿದೆಯೆಂದು ಭಾವ.) ದೇವ! ಜಾಜ್ವಲ್ಯಮಾನವಾದ ನಿನ್ನ ಮುಖಗಳಿಂದ ಸಕಲ ಜನರನ್ನೂ ನುಂಗುವವನಾಗಿ, ನಾಲಿಗೆಯ ಕೊನೆಯಿಂದ ತುಟಿಗಳನ್ನು ಸವರುತ್ತಿರುವೆ! ನಾರಾಯಣ! ನಿನ್ನ ತೀಕ್ಷ್ಣ ಪ್ರಭೆಗಳು ಪ್ರಕಾಶನ ಸಾಮರ್ಥ್ಯದಿಂದ ಸಕಲ ಪ್ರಪಂಚವನ್ನೂ ವ್ಯಾಪಿಸಿ ಉರಿಸುತ್ತಿವೆ. ಈ ಅದ್ಭುತವನ್ನು ಕಾಣುತ್ತಿರುವೆನು !

1. ಈ ರಾಜರು ತಾವಾಗಿಯೇ ಭಗವಂತನ ಮುಖದ ಕಡೆಗೆ ಹೋಗುವ ವ್ಯಾಪಾರವನು ಮಾಡದಿದ್ದರೂ, ಭಗವಂತನೇ ಅನೇಕ ಮುಖಗಳಿಂದ ಉಭಯ ಸೈನ್ಯಗಳಲ್ಲಿನ ಯೋಧರನ್ನು ಗ್ರಾಸಮಾಡುವುದರಿಂದ ಔಪಚಾರಿಕವಾಗಿ ಯೋಧರು 'ಪ್ರವೇಶಿಸುವರು' ಎಂದು ಉಕ್ತವಾಗಿದೆಯೆಂದು ತಿಳಿಯಬೇಕು. ಮುಂದೆಯೂ ಹೀಗೆಯೇ ಅಭಿಪ್ರಾಯವನ್ನು ಗ್ರಹಿಸಬೇಕು.

ಆಖ್ಯಾ ಹಿ ಮೇ ಕೋ ಭವಾನುಗ್ರರೂಪೋ ನಮೋಽಸ್ತು ತೇ ದೇವವರ ಪ್ರಸೀದ
ವಿಜ್ಞಾತುಮಿಚ್ಛಾಮಿ ಭವಂತಮಾದ್ಯಂ ನಹಿ ಪ್ರಜಾನಾಮಿ ತವ ಪ್ರವೃತ್ತಿಂ॥ 11-**31**॥

ಶ್ರೀ ಭಗವಾನುವಾಚ

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ ಲೋಕಾನ್ಸಮಾಹರ್ತುಮಿಹ ಪ್ರವೃತ್ತಃ
ಋತೇಽಪಿ ತ್ವಾಂ ನ ಭವಿಷ್ಯಂತಿ ಸರ್ವೇ ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ
॥11-**32**॥

**ತಸ್ಮಾತ್ತ್ವಮುತ್ತಿಷ್ಠ ಯಶೋ ಲಭಸ್ವ ಜಿತ್ವಾ ಶತ್ರೂನ್ಭುಂಕ್ಷ್ವ ರಾಜ್ಯಂ ಸಮೃದ್ಧಂ ಮಯ್ಯೈವೇತೇ ನಿಹತಾಃ ಪೂರ್ವಮೇವ ನಿಮಿತ್ತ ಮಾತ್ರಂ ಭವ ಸವ್ಯಸಾಚಿನ್ ॥11-33॥**

**31-33.** ಸ್ವಾಮಿ! ಇಂತಹ ಭಯಂಕರ ರೂಪವುಳ್ಳ ನೀನು ಎಂತಹ ಗುಣಕ್ರಿಯಾವಂತನು? ಏತಕ್ಕೆ ಈ ಉಗ್ರರೂಪವನ್ನು ತಾಳಿರುವೆ? ನನಗೆ ಹೇಳು ದೇವಶ್ರೇಷ್ಠ! ನಿನಗೆ ನಮಸ್ಕಾರ! ಪ್ರಸನ್ನನಾಗು! ಈ ನಿನ್ನ ಪ್ರವೃತ್ತಿಯ ಉದ್ದೇಶವನ್ನು ನಾನು [1]ತಿಳಿದವನಲ್ಲವಾದ ಕಾರಣ ಜಗಜ್ಜನ್ಮಾದಿ ನಿಮಿತ್ತನಾದ ನಿನ್ನನ್ನು ತಿಳಿಯಬೇಕೆಂದು ಕಾತುರನಾಗಿರುವೆನು. ಅರ್ಜುನನ ಪ್ರಾರ್ಥನೆಯನ್ನು ಲಾಲಿಸಿ ಭಗವಂತನು ತನ್ನ ನಾಮಧೇಯವನ್ನೂ, ಈಗ ಮಾಡಬೇಕೆಂದಿರುವ ವ್ಯಾಪಾರವೇ ಮುಂತಾದುವನ್ನೂ ಹೇಳುತ್ತಾನೆ:- ಪಾರ್ಥ! ಈ ರೂಪದಿಂದ ಲೋಕನಾಶಮಾಡಿ ಭೂಭಾರವನ್ನು ಪರಿಹರಿಸುವೆನು. [ಜಗದ್ಬಂದನ, ಬೋಧನ, ಸಂಹರಣ, ವಿದ್ರಾವಣಾದಿ ಕ್ರಿಯಾಕರ್ತ]ನಾದುದರಿಂದ ನಾನು [2]ಕಾಲನಾಮಕನಾಗಿರುವೆನು. ಲೋಕನಾಶವೆಂಬ ಮಹಾ ಕಾರ್ಯಸಾಧನೆಗಾಗಿ ಇಂತಹ ಪೂರ್ಣರೂಪವನ್ನು ತಾಳಿ ವೃದ್ಧಿಹೊಂದಿರುವೆನು. ಈ ಯುದ್ಧರಂಗದಲ್ಲಿ ನೆರೆದಿರುವ ಜನರನ್ನು ಸಾಕ್ಷಾತ್ತಾಗಿ ಸಂಹರಿಸಲುದ್ಯುಕ್ತನಾಗಿರುವೆನು. ಆದರೆ ನೀನು, ನಿನ್ನ ಸಹೋದರರೂ ಸೇರಿ ಪಂಚಪಾಂಡವರು, ಅಶ್ವತ್ಥಾಮ, ಕೃತವರ್ಮ, ಕೃಪ, (ಸಾತ್ಯಕಿ, ಯುಯುತ್ಸು) ಇವರನ್ನು ಸಂಹರಿಸುವುದಿಲ್ಲ; ಇವರ ಹೊರತು ಪರಸ್ಪರ ಪ್ರತಿದ್ವಂದ್ವಿಗಳಾದ ಉಭಯ ಪಕ್ಷಗಳಲ್ಲಿ ಹೋರಾಡುತ್ತಿರುವ ಸಕಲ ಯೋಧರೂ ಇನ್ನು ಮುಂದೆ ಬದುಕಿರದೆ ಬೇಗ ಸಾಯುವರು! ಬಾಣಪ್ರಯೋಗ ಮೊದಲಾದ ಯುದ್ಧಕಾರ್ಯವನ್ನು ಎಡಗೈಯಿಂದಲೂ ಮಾಡುವ ಅಭ್ಯಾಸವುಳ್ಳವನಾದುದರಿಂದ ಸವ್ಯಸಾಚಿನಾಮಕನಾದ ಅರ್ಜುನ! ಸಂನಿಹಿತವಾಗಿರುವ ಯುದ್ಧದಲ್ಲಿ ಎಲ್ಲರನ್ನೂ ಸಂಹರಿಸುವುದಕ್ಕೆ ನಾನೇ ಸಿದ್ಧನಾಗಿದ್ದೇನೆ; ನಿನಗೆ ಜಯವು ಖಂಡಿತ, ಸಂಶಯಪಡಬೇಡ, ಏಳು, ಯುದ್ಧಕ್ಕೆ ಸಿದ್ಧನಾಗು! ಶತ್ರುಗಳನ್ನು ಜಯಿಸಿ ಅಜೇಯರಾದ ಭೀಷ್ಮಾದಿಗಳನ್ನು ಜಯಿಸಿದ ಕೀರ್ತಿಯನ್ನು ಹೊಂದು, ಐಶ್ವರ್ಯಪೂರ್ಣವಾದ ರಾಜ್ಯವನ್ನು ಭೋಗಿಸು. ನೀನು ಯುದ್ಧ ಮಾಡುವುದಕ್ಕೆ ಮುಂಚೆಯೇ ಈ ಯೋಧರನ್ನು ಹತಮಾಡಲು ಸಂಕಲ್ಪಿಸಿ ನಾನೇ ಕಟಾಕ್ಷವನ್ನು ಬೀರಿರುವೆನು. ಅದರಿಂದಲೇ ಇವರೆಲ್ಲರೂ ನಿಸ್ಸಾರವಾಗಿ ಹತಪ್ರಾಯರಾಗಿರುವರು. ಅಂತಹವರನ್ನು ಸಂಹರಿಸುವುದಕ್ಕಾಗಿ ನೀನು ನೆಪಮಾತ್ರಕ್ಕೆ ಇದಿರಿಗೆ ನಿಲ್ಲುವವನಾಗು. (ನಾನೇ ನಿನ್ನಲ್ಲಿ ನಿಂತು ಸಂಹಾರಕಾರ್ಯವನ್ನು ನೆರವೇರಿಸುವೆನೆಂದು ಭಾವ.)

1. ಭಗವಂತನ ಸ್ವರೂಪಗುಣಕ್ರಿಯಾದಿಗಳನ್ನು ತಿಳಿದವನಾದರೂ ಆರ್ಜುನನು ತನಗೆ ಅಜ್ಞಾತವಾದ ಗುಣಕರ್ಮ ವಿಶೇಷಜ್ಞಾನಕ್ಕಾಗಿ ಈ ಪ್ರಶ್ನೆ ಮಾಡಿರುವನು. ಅರ್ಜುನನು ಜ್ಞಾನಿಯು ಸರ್ವಥಾ ಅಜ್ಞಾನಿಯಲ್ಲವೆಂದು ತಿಳಿಯಬೇಕು.

2. ಕಲ=ಬಂಧನೇ, ಕಲ=ಸಂಹರಣೇ, ಕಲ=ಜ್ಞಾನೇ, ಕಲ=ವಿದ್ರಾವಣೇ, ಕಲ=ಕಾಮಧೇನುಃ ಇತಿ ಧಾತುಪಾಠಃ

**ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ ಕರ್ಣಂ ತಥಾಽನ್ಯಾನಪಿ ಯೋಧವೀರಾನ್**
**ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ ಯುಧ್ಯಸ್ವ ಜೇತಾಽಸಿ ರಣೇ ಸಪತ್ನಾನ್**
11-34॥

## ಸಂಜಯ ಉವಾಚ

**ಏತಚ್ಛ್ರುತ್ವಾ ವಚನಂ ಕೇಶವಸ್ಯ ಕೃತಾಂಜಲಿರ್ವೇಪಮಾನಃ ಕಿರೀಟೀ**
**ನಮಸ್ಕೃತ್ವಾ ಭೂಯ ಏವಾಹ ಕೃಷ್ಣಂ ಸಗದ್ಗದಂ ಭೀತಭೀತಃ ಪ್ರಣಮ್ಯ॥**11-**35**॥

## ಅರ್ಜುನ ಉವಾಚ

**ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ ಜಗತ್ಪ್ರಹೃಷ್ಯತ್ಯನುರಜ್ಯತೇ ಚ**
**ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ ಸರ್ವೇ ನಮಸ್ಯಂತಿ ಚ ಸಿದ್ಧ ಸಂಘಾಃ॥**11-**36**॥

**ಕಸ್ಮಾಚ್ಚ ತೇ ನ ನಮೇರನ್ಮಹಾತ್ಮನ್ ಗರೀಯಸೇ ಬ್ರಹ್ಮಣೋಽಪ್ಯಾದಿಕರ್ತ್ರೇ**
**ಅನಂತ ದೇವೇಶ ಜಗನ್ನಿವಾಸ ತ್ವಮಕ್ಷರಂ ಸದಸತ್ತತ್ಪರಂ ಯತ್ ॥**11-**37**॥

**34-37** ದೇವ! ದ್ರೋಣಾಚಾರ್ಯನು ಧನುರ್ವಿದ್ಯೋಪದೇಶಕನು, ಪರಿಪೂರ್ಣ ಬ್ರಹ್ಮವರ್ಚಸ್ವಿಯಾದ ಭೀಷ್ಮನು ಸ್ವೇಚ್ಛಾಮರಣ ವರವನ್ನು ಪಡೆದಿರುವನು. ಜಯದ್ರಥನು 'ತನ್ನ ಮಗನ ತಲೆಯನ್ನು ನೆಲಕ್ಕೆ ಕೆಡಹುವನ ಶಿರಸ್ಸು ಚೂರ್ಣವಾಗುವದು' ಎಂಬ ವರವನ್ನು ಪಡೆದ ವೃದ್ಧ ಕ್ಷತ್ರನ ಕುಮಾರನು, ಮಹೇಂದ್ರದತ್ತ ಶಕ್ತಿ ಸಂಪನ್ನನು ಕರ್ಣನು. ಹೀಗೆ ಅನೇಕ ವೀರಾಗ್ರಣಿಗಳು ಶತ್ರುಸೈನ್ಯದಲ್ಲಿದ್ದಾರೆ. ಅವರನ್ನು ನಾನು ಹೇಗೆ ಜಯಿಸಬಲ್ಲೆನು ಎಂಬ ಅರ್ಜುನನ ಮನೋಗತವಾದ ಶಂಕೆಗೆ ಭಗವಂತನು ಉತ್ತರ ಹೇಳುತ್ತಾನೆ: ಅರ್ಜುನ! ದ್ರೋಣಾಚಾರ್ಯನು, ಭೀಷ್ಮಪಿತಾಮಹನು, ಕರ್ಣ ಮತ್ತು ಇತರ ವೀರಾಗ್ರೇಸರರು ಇವರೆಲ್ಲರೂ ನನ್ನಿಂದಲೇ ಸಂಹೃತಪ್ರಾಯರಾಗಿರುವರು. ಅವರನ್ನು ಜಯಿಸುವ ವಿಚಾರದಲ್ಲಿ ನಿನಗಿರುವ ಶಂಕೆಯನ್ನು ಬಿಡು. ಅವರನ್ನು ಸಂಹರಿಸು! ವ್ಯಥೆ ಪಡಬೇಡ, ಯುದ್ಧ ಮಾಡು! ಶತ್ರುಗಳನ್ನು ಜಯಿಸುವವನಾಗುವೆ ಎಂದು ಭಗವಂತನು ಹೇಳಿದನು.

| |
|---|
| ಕೇಶವನ ಈ ಮಾತನ್ನು ಕೇಳಿ ಅರ್ಜುನನು ನಡುಗುತ್ತ ಕೈ ಮುಗಿದು ಕೃಷ್ಣನಿಗೆ ನಮಸ್ಕಾರ ಮಾಡಿ, ಅತ್ಯಂತ ಭಯದಿಂದ ತಿರುತಿರುಗಿ ವಂದನೆಯನ್ನು ಮಾಡುತ್ತ ಗದ್ಗದ ಸ್ವರದಿಂದ ಹೀಗೆ ಮಾತನಾಡಿದನು ಎಂಬುದಾಗಿ ಸಂಜಯನು ಧೃತರಾಷ್ಟ್ರನಿಗೆ ಹೇಳಿದನು. |
| ಸರ್ವೇಂದ್ರಿಯ ಪ್ರೇರಕನಾದ ಸ್ವಾಮಿ! ನಿನ್ನ ಗುಣ ಪ್ರಕರ್ಷಾದಿ ಮಾಹಾತ್ಮ್ಯೆಯನ್ನು ಶ್ರವಣಮಾಡುವುದರಿಂದ ಸಜ್ಜನವರ್ಗವು ಅತ್ಯಂತ ಸಂತೋಷ ಪಡುತ್ತದೆ. ಮತ್ತು ನಿನ್ನಲ್ಲಿ ಅವರಿಗೆ ಅತ್ಯಂತ ಅನುರಾಗ=ಭಕ್ತಿಯುಂಟಾಗುತ್ತದೆ. ನಿನ್ನ ಸಾಮರ್ಥ್ಯಾತಿಶಯ ಮಹಿಮೆಯನ್ನು ಕೇಳುವುದರಿಂದಲೇ ಭಯಗ್ರಸ್ತರಾದ ರಾಕ್ಷಸರು ದಿಕ್ಕಾಪಾಲಾಗಿ ಓಡುವರು. ಸಕಲ ಸಿದ್ಧಪುರುಷ ಸಮೂಹಗಳೂ ನಿನ್ನ ಮಹಿಮೆಯ ಶ್ರವಣಕೀರ್ತನೆಗಳನ್ನು ಮಾಡುತ್ತ ಭಕ್ತ್ಯುದ್ರೇಕದಿಂದ ನಿನಗೆ ನಮಸ್ಕಾರಮಾಡುತ್ತಾರೆ. ಇವೆಲ್ಲವೂ ಅನನ್ಯಸಾಧಾರಣ ಅಚಿಂತ್ಯಮಹಿಮೋಪೇತನಾದ ನಿನ್ನ ವಿಷಯದಲ್ಲಿ ಯುಕ್ತವೇ ಸರಿ. ಹೇಗೆಂದರೆ:- ವ್ಯಾಪ್ತರೂಪನು, ಪರಮೋದಾರಸ್ವಭಾವನೂ ಆದ ಸ್ವಾಮಿ! ಸರ್ವಶ್ರೇಷ್ಠನು; ಈ ಜಗನ್ನಿರ್ಮಾಣಮಾಡುವ ಚತುರ್ಮುಖನಿಗೂ ಜನ್ಮಾದಿಕಾರಣನೂ ಆಗಿರುವ ನಿನಗೆ ಏತಕ್ಕೆ ನಮಸ್ಕಾರ ಮಾಡದೇ ಇದ್ದಾರು? ಸರ್ವರೂ ನಮಸ್ಕಾರಮಾಡಿಯೇ ತೀರುತ್ತಾರೆ. ಸ್ವಾಮಿ! ನೀನು ಸರ್ವತ್ರ ವ್ಯಾಪಕನು, ಸರ್ವದಾ ಏಕಪ್ರಕಾರನಾಗಿರುವವನು, ಸಕಲ ಗುಣಪರಿಪೂರ್ಣನು, ದೇವತೆಗಳಿಗೆಲ್ಲಾ ಒಡೆಯನು, ಜಗತ್ತಿಗೇ ಆಶ್ರಯನು, ಭಾವಾಭಾವಾತ್ಮಕವಾದ ಈ ಪ್ರಪಂಚಕ್ಕಿಂತಲೂ ಉತ್ತಮನು, ನಾಶರಹಿತನೂ ಆಗಿರುವೆ. ಇಂತಹ ಮಹಾನುಭಾವನಾದ ನಿನಗೆ ಸಜ್ಜನವೃಂದವು ಸರ್ವದಾ ನಮಿಸುತ್ತದೆ. ನಮಸ್ಕಾರ ಮಾಡದಿರಲು ಯಾವಕಾರಣವೂ (ಅವಗುಣವೂ) ನಿನ್ನಲ್ಲಿಲ್ಲ. ಆದಕಾರಣ ನಮಸ್ಕಾರಾದಿಕರಣವು ಯುಕ್ತವೇ ಸರಿ. |
| ತ್ವಮಾದಿದೇವಃ ಪುರುಷಃ ಪುರಾಣಸ್ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ<br>ವೇತ್ತಾಽಸಿ ವೇದ್ಯಂ ಚ ಪರಂ ಚ ಧಾಮ ತ್ವಯಾ ತತಂ ವಿಶ್ವಮನಂತರೂಪ॥11-38॥ |
| ವಾಯುರ್ಯಮೋಽಗ್ನಿರ್ವರುಣಃ ಶಶಾಂಕಃ ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ<br>ನಮೋ ನಮಸ್ತೇಽಸ್ತು ಸಹಸ್ರಕೃತ್ವಃ ಪುನಶ್ಚ ಭೂಯೋಽಪಿ ನಮೋ ನಮಸ್ತೇ<br>॥11-39॥ |

**ನಮಃ ಪುರಸ್ತಾದಥಪೃಷ್ಠತಸ್ಥೇ ನಮೋಽಸ್ತು ತೇ ಸರ್ವತ ಏವ ಸರ್ವ**

**ಅನಂತವೀರ್ಯಾಮಿತವಿಕ್ರಮಸ್ತ್ವಂ ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ**

ll11-**40**ll

**38-40** ನಾಶರಹಿತರೂಪವುಳ್ಳ ಸ್ವಾಮಿಯೇ: ನೀನು ಜಗತ್ಕಾರಣನು, ಸೃಷ್ಟ್ಯಾದಿ ವ್ಯಾಪಾರಗಳಿಂದ ಕ್ರೀಡಿಸುತ್ತಿರುವೆ, ನೀನೇ ಪೂರ್ಣಷಡ್ಗುಣನು, ಸನಾತನನು, ಈ ಸಕಲ ಜಗತ್ತಿಗೂ ಮುಖ್ಯಾಶ್ರಯನು, ಜ್ಞಾತವ್ಯ ಸಕಲ ವಿಷಯಗಳನ್ನೂ ತಿಳಿದವನಾಗಿರುವೆ. ತೇಜಃಪುಂಜನೂ ನೀನೇ, ನಿನ್ನಿಂದಲೇ ಈ ಸಮಸ್ತ ಪ್ರಪಂಚವೂ ವ್ಯಾಪಿಸಲ್ಪಟ್ಟಿದೆ. (ಪರಮಾತ್ಮನು ದೇಶಕಾಲವ್ಯಾಪ್ತ್ಯಾದಿಗುಣ ಪರಿಪೂರ್ಣನೆಂಬುದನ್ನು ಅನೇಕಬಾರಿ ಹೇಳಿದೆ. ಇದಕ್ಕೆ ಅಭ್ಯಾಸವೆಂದು ಹೆಸರು. ಇದರಿಂದ ಪರಮಾತ್ಮನು ದೇಶಕಾಲಗಣಗಳಿಂದ ಅನಂತನು ಎಂಬುದೇ ವೇದಾದಿ ಶಾಸ್ತ್ರಗಳ ಪರಮಾರ್ಥವೆಂದು ಮಹಾತಾತ್ಪರ್ಯವು ವ್ಯಕ್ತವಾಗುತ್ತದೆ; ಇದು ವ್ಯರ್ಥ ಪುನರುಕ್ತಿಯಲ್ಲವೆಂದು ತಿಳಿಯಬೇಕು.) ಸ್ವಾಮಿ! ನೀನು ವಾಯುಃ=ಬಲ ಜ್ಞಾನಸ್ವರೂಪನು, ಯಮಃ=ದೋಷವನ್ನು ತಡೆದಿರುವವನು ಎಂದರೆ ದೋಷದೂರನ್ನು, ಅಗ್ನಿ=ಸ್ವತಃ ಗಮನಶಕ್ತಿಯಿಲ್ಲದ ಜಗತ್ತಿಗೆ ಗಮನಶಕ್ತಿಪ್ರದನು, ವರುಣಃ=ಭಕ್ತರಿಗೆ ಅನುಗ್ರಹಮಾಡುವವನು, ಪರಮಸುಖಿಯಾದುದರಿಂದ ಶಶಾಂಕನಾಮಕನು, ಪ್ರಜಾಪಾಲಕನು, ಸರ್ವರಿಗೂ ಮೂಲ ಪುರುಷನೂ ಆಗಿರುವೆ. ನಿನಗೆ ಸಾವಿರಾರು ನಮಸ್ಕಾರಗಳನ್ನು ಮಾಡುವೆನು. ಪುನಃಪುನಃ ನಿನಗೆ ನಮಸ್ಕಾರ! ಪರಿಪೂರ್ಣನಾದ ದೇವ! ಮುಂದೆ ಹಿಂದೆ, ಪಾರ್ಶ್ವಗಳು, ಮೇಲೆ, ಕೆಳಗೆ ಎಲ್ಲಾ ಕಡೆಗಳಲ್ಲಿಯೂ ನಿನಗೆ ನಮಸ್ಕಾರ! ನೀನು ಅಪರಿಮಿತಬಲಪರಾಕ್ರಮಶಾಲಿಯು. ಹೀಗೆ ಸರ್ವವಿಲಕ್ಷಣವಾಗಿರುವ ನೀನು "ಸರ್ವಂ ಖಲ್ವಿದಂ ಬ್ರಹ್ಮ" ಇತ್ಯಾದಿ ವೇದವಚನಗಳಲ್ಲಿ ಸರ್ವಾತ್ಮಕನೆಂದು ಹೇಳಿರುವುದು ಹೇಗೆ? ಎಂದರೆ, ಹೇಳುತ್ತಾನೆ:- "ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ"ನೀನು ಸರ್ವ ಪ್ರಪಂಚವನ್ನೂ ಚೆನ್ನಾಗಿ ವ್ಯಾಪಿಸಿರುವ ಕಾರಣ ಸರ್ವನೆನಿಸಿರುವೆಯೇ ಹೊರತು ಸರ್ವಾತ್ಮಕನಾದುದರಿಂದಲ್ಲ. ಅಂದ ಬಳಿಕ ಸರ್ವಂ ಖಲ್ವಿದಂ ಬ್ರಹ್ಮ' ಎಂಬ ವಾಕ್ಯಕ್ಕೆ ಬ್ರಹ್ಮನು ಸರ್ವವ್ಯಾಪ್ತನು ಎಂದು ಅರ್ಥವನ್ನು ಗ್ರಹಿಸಬೇಕೆಂದು ಸಿದ್ಧವಾಯಿತು.

**ಸಖೇತಿ ಮತ್ವಂ ಪ್ರಸಭಂ ಯದುಕ್ತಂ ಹೇ ಕೃಷ್ಣ ಹೇ ಯಾದವ ಹೇ ಸಖೇತಿ**

**ಅಜಾನತಾ ಮಹಿಮಾನಂ ತವೇದಂ ಮಯಾ ಪ್ರಮಾದಾತ್ಪ್ರಣಯೇನ ವಾಪಿ**

ll11-**41**ll

| |
|---|
| ಯಚ್ಚಾಪಹಾಸಾರ್ಥಮಸತ್ಕೃತೋಽಸಿವಿಹಾರಶಯ್ಯಾಸನಭೋಜನೇಷು<br>ಏಕೋಽಥವಾಪ್ಯಚ್ಯುತ ತತ್ಸಮಕ್ಷಂ ತತ್ಕ್ಷಾಮಯೇ ತ್ವಾಮಹಮಪ್ರಮೇಯಂ<br>॥11-**42**॥ |
| ಪಿತಾऽಸಿ ಲೋಕಸ್ಯ ಚರಾಚರಸ್ಯ ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್<br>ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇಽಪ್ಯಪ್ರತಿಮಪ್ರಭಾವ<br>॥11-**43**॥ |
| ತಸ್ಮಾತ್ಪ್ರಣಮ್ಯ ಪ್ರಣಿಧಾಯ ಕಾಯಂ ಪ್ರಸಾದಯೇ ತ್ವಾಮಹಮೀಶಮೀಡ್ಯಂ<br>ಪಿತೇವ ಪುತ್ರಸ್ಯ ಸಖೇವ ಸಖ್ಯುಃ ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಂ<br>॥11-**44**॥ |
| ಅದೃಷ್ಟ ಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ ಭಯೇನ ಚ ಪ್ರವಥಿತಂ ಮನೋ ಮೇ<br>ತದೇವ ಮೇ ದರ್ಶಯ ದೇವ ರೂಪಂ ಪ್ರಸೀದ ದೇವೇಶ ಜಗನ್ನಿವಾಸ॥11-**45**॥ |
| ಕಿರೀಟನಂ ಗದಿನಂ ಚಕ್ರಹಸ್ತಮಿಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ<br>ತೇನೈವ ರೂಪೇಣ ಚತುರ್ಭುಜೇನ ಸಹಸ್ರಬಾಹೋ ಭವ ವಿಶ್ವಮೂರ್ತೇ॥11-**46**॥ |

**41-46** ಸ್ವಾಮಿ ಅಚ್ಯುತ! ನಿನ್ನ ಜಗತ್ಸೃದಷ್ಟಿ ಕರ್ತೃತ್ವಾದಿ ಉಕ್ತ ಮಾಹಾತ್ಮ್ಯೆಯನ್ನು ತಿಳಿಯದೆ ನಾನು ಚಿತ್ತ ವ್ಯಾಕುಲತೆಯಿಂದಲೋ ಅಥವಾ ಸ್ನೇಹಾತಿಶಯದಿಂದಲೋ ನೀನು ಸ್ನೇಹಿತನೆಂದು ತಿಳಿದು, ನಿನ್ನ ಮಹಿಮೆಗೆ ತಕ್ಕ ಮರ್ಯಾದೆಯನ್ನು ಕೊಡದೆ ಕೃಷ್ಣ! ಯಾದವ! ಗೆಳೆಯ! ಎಂದು ಆಡಿರುವ ಸಾಮಾನ್ಯ ನುಡಿಗಳನ್ನೂ ಮತ್ತು ಆಟ, ಮಲಗುವುದು, ಕೂಡುವುದು, ಭೋಜನ ಮುಂತಾದ ಸಂದರ್ಭಗಳಲ್ಲಿ [1]ಸರ್ವೋತ್ತಮನಾದ ನೀನು ಆಸತ್ಕಾರಾನರ್ಹನಾಗಿದ್ದರೂ ಪರಿಹಾಸಕ್ಕಾಗಿ ನಾನು ಯಾವ ತಿರಸ್ಕಾರಭಾವನೆಯನ್ನು ತೋರಿಸಿ ಅಪರಾಧಿಯಾಗಿರುವೆನೋ ಅಂತಹ ಅಪರಾಧವೆಲ್ಲವನ್ನೂ ಕ್ಷಮಿಸಬೇಕೆಂದು ಅಪರಿಮಿತ ಮಹಿಮೆಯುಳ್ಳ ನಿನ್ನ ಸನಿಧಿಯಲ್ಲಿ ಪ್ರಾರ್ಥಿಸುವೆನು. ಅನುಪಮ ಸಾಮರ್ಥ್ಯವುಳ್ಳ ಸ್ವಾಮಿ! ನೀನು ಈ ಸ್ಥಾವರಜಂಗಮಾತ್ಮಕ ಪ್ರಪಂಚಕ್ಕೆ ಜನಕನು, ಪೂಜ್ಯನು, ಶ್ರೇಷ್ಠನೂ ಆಗಿರುವೆ. ಮೂರುಲೋಕಗಳಲ್ಲಿಯೂ ನಿನಗೆ ಸಮನಾದವನು ಬೇರೆ ಯಾವನೂ ಇಲ್ಲ; ಅಧಿಕನು ಎಲ್ಲಿಂದ ಬಂದಾನು! (ನಿನಗೆ ಯಾವ ಲೋಕದಲ್ಲಿಯೂ ಸಮನೇ ಇಲ್ಲದಿರುವಾಗ ಅಧಿಕನಿಲ್ಲವೆಂದು ಹೇಳುವುದೇನು ಎಂಬ

ಕೈಮುತ್ಯನ್ಯಾಯದಿಂದ ಶ್ರೀಕೃಷ್ಣನು ಸರ್ವೋತ್ತಮನೆಂದು ಸಿದ್ಧಿಸುತ್ತದೆ.) ಆದಕಾರಣ ಸ್ವಾಮಿಯು ಸ್ತುತ್ಯನೂ ಆದ ನಿನಗೆ ಶರೀರವನ್ನು ನೆಲದ ಮೇಲಿಟ್ಟು ಎಂದರೆ ಸಾಷ್ಟಾಂಗನಮಸ್ಕಾರ ಮಾಡಿ ಅನುಗ್ರಹಮಾಡಬೇಕೆಂದು ಪ್ರಾರ್ಥಿಸುತ್ತೇನೆ. ದೇವ! ಮಗನ ಅಪರಾಧವನ್ನು ತಂದೆಯೂ, ಸ್ನೇಹಿತನ ತಪ್ಪನ್ನು ಸ್ನೇಹಿತನೂ, ಪತ್ನಿಯ ಅಪರಾಧವನ್ನು ಪತಿಯೂ ಸಹ ಸಹಿಸಿ ಅವರಲ್ಲಿ ಪ್ರೀತಿಮಾಡುವಂತೆ ಜಗಜ್ಜನಕತ್ವಾದಿ ಮಹಾಮಹಿಮನಾದ ನೀನು ನನ್ನ ಅಪರಾಧಗಳನ್ನೆಲ್ಲಾ ಸಹಿಸಲು ಸಮರ್ಥನಾಗಿರುವೆ, ಕ್ಷಮಿಸಿ ಪ್ರಸನ್ನನಾಗು! ದೇವ! ಎಂದೂ ಕಾಣದ ಈ ನಿನ್ನ ರೂಪವನ್ನು ನೋಡಿ ಆಶ್ಚರ್ಯದಿಂದ ರೋಮಾಂಚವುಳ್ಳವನಾಗಿದ್ದೇನೆ. ಭಯದಿಂದ ನನ್ನ ಮನಸ್ಸೂ ಸಹ ವ್ಯಗ್ರವಾಗಿದೆ. ಆದಕಾರಣ ಕ್ರೀಡಾಕಾಂತ್ಯಾದಿಗುಣವಿಶಿಷ್ಟನಾದ, ಜಗದಾಶ್ರಯ ಸ್ವಾಮಿ! ಪ್ರಸನ್ನನಾಗು ! ಈ ವಿಶ್ವರೂಪವನ್ನು ಉಪಸಂಹರಿಸಿ ಹಿಂದಿನ ರೂಪವನ್ನೇ ತೋರಿಸು, ಆ ರೂಪವು ಯಾವುದೆಂದರೆ:-ಸ್ವಾಮಿ! ಈಗ ನೀನು ಸಹಸ್ರ ಬಾಹುವು, ವ್ಯಾಪ್ತರೂಪನೂ ಆಗಿರುವೆ. ಈ ರೂಪವನ್ನು ಮರೆಮಾಡು. ಕಿರೀಟ ಧಾರಿಯು, ಗದಾಚಕ್ರಪಾಣಿಯು, ಚತುರ್ಭುಜಯುಕ್ತನೂ ಆಗಿ ರಥದಲ್ಲಿ ಸಾರಥಿಯಾಗಿದ್ದ ನಿನ್ನನ್ನು ಆ ಚತುರ್ಭುಜಯುಕ್ತರೂಪದಿಂದಲೇ ನೋಡಲಪೇಕ್ಷಿಸುವೆನು. ಆದಕಾರಣ ಚತುರ್ಭುಜಯುಕ್ತವಾದ ಹಿಂದಿನರೂಪವನ್ನೆ ವ್ಯಕ್ತಪಡಿಸಿ ತೋರಿಸು ಎಂಬುದಾಗಿ ಅರ್ಜುನನು ಪ್ರಾರ್ಥಿಸಿದನು.

1. ಏಕಶಬ್ದ ಏಶಬ್ದ ಏಕವಾಚೀ, ಏ=ಏಕಃ=ಅಸಹಾಯ ಏವ, ಕರ್ತಾ ಕಾರಯಿತಾ ಚೇತ್ಯೇಕಃ ಸರ್ವೋತ್ತಮಃ, ಅನ್ಯನಿರಪೇಕ್ಷಕರ್ತೃತ್ವಾದಿಮತ ಏವ ಸರ್ವೋತ್ತಮತ್ವಾದಿಃ. ಅತ್ರ ಏಕಶಬ್ದಃ ಸರ್ವೋತ್ತಮಪರೋ ಧ್ಯೇಯಃ

## ಭಗವಾನುವಾಚ

ಮಯಾ ಪ್ರಸನ್ನೇನ ತವಾऽರ್ಜುನೇದಂ ರೂಪಂ ಪರಂ ದರ್ಶಿತಮಾತ್ಮ ಯೋಗಾತ್
ತೇಜೋಮಯಂ ವಿಶ್ವಮನಂತಮಾದ್ಯಂ ಯನ್ಮೇ ತ್ವದನ್ಯೇನ ನ ದೃಷ್ಟಪೂರ್ವಂ
॥11-47॥

ನ ವೇದ ಯಜ್ಞಾಧ್ಯಯನೈರ್ನ ದಾನೈರ್ನ ಚ ಕ್ರಿಯಾಭಿರ್ನ ತಪೋಭಿರುಗ್ರೈಃ
ಏವಂರೂಪಃ ಶಕ್ಯ ಅಹಂ ನೃಲೋಕೇ ದ್ರಷ್ಟುಂ ತ್ವದನ್ಯೇನ ಕುರುಪ್ರವೀರ॥11-48॥

**ಮಾ ತೇ ವ್ಯಥಾ ಮಾ ಚ ವಿಮೂಢಭಾವೋ**
**ದೃಷ್ಟ್ವಾ ರೂಪಂ ಘೋರಮೀದೃಙ್ಮಮೇದಂ**
**ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ**
**ತದೇವ ಮೇ ರೂಪಮಿದಂ ಪ್ರಪಶ್ಯ॥11-49॥**

**47-49** ಭಗವಂತನು ಹೇಳುತ್ತಾನೆ:- ಅರ್ಜುನ! ತೇಜಃ ಪ್ರಚುರವು, ವ್ಯಾಪ್ತವು, ಅನಾದಿನಿತ್ಯವು, ನಿನಗಿಂತ ಅಧಮರಾದವರಿಂದ ಇದುವರೆಗೆ ಅದೃಷ್ಟವು, ಜಗತ್ಕಾರಣವೂ ಆದ ನನ್ನ ಈ ಉತ್ಕೃಷ್ಟ ವಿಶ್ವರೂಪವನ್ನು ನಾನು ವಿಶೇಷಾನುಗ್ರಹಮಾಡಿ ಸ್ವರೂಪ ಸಾಮರ್ಥ್ಯದಿಂದ ನಿನಗೆ ತೋರಿಸಿರುವೆನು. ಕುರುವಂಶದಲ್ಲಿ ಪ್ರಖ್ಯಾತ ಪರಾಕ್ರಮಿಯಾದ ಅರ್ಜುನ! ಮನುಷ್ಯಲೋಕದಲ್ಲಿ ನೀನು ಹೊರತು ನಿನಗಿಂತ ಅಧಮನಾದ ಯಾವನೂ ಈಗ ಪ್ರದರ್ಶಿತವಾದ ನನ್ನ ವಿಶ್ವರೂಪವನ್ನು ಜ್ಞಾನಕಾಂಡ ಕರ್ಮಕಾಂಡಾತ್ಮಕವಾದ ವೇದಾಧ್ಯಯನಗಳು, ದಾನಗಳು, ಅಗ್ನಿಹೋತ್ರಾದಿ ಕರ್ಮಗಳು, ಕೃಚ್ಛ್ರಚಾಂದ್ರಾಯಣಾದಿ ಉಗ್ರ ತಪಸ್ಸುಗಳು ಮುಂತಾದ ಯಾವ ಸಾಧನದಿಂದಲೂ ನಿನ್ನಂತೆ ನೋಡಲು ಸಾಧ್ಯವಾಗುವುದಿಲ್ಲ. ಹೀಗೆ ವಿಶ್ವ ರೂಪದರ್ಶನವು ದುರ್ಲಭವೆಂದು ನಿರೂಪಿಸಿ ಭಗವಂತನು ಪಾರ್ಥನ ಪ್ರಾರ್ಥನೆಗೆ ಉತ್ತರವನ್ನು ಹೇಳುತ್ತಾನೆ:- ಅರ್ಜುನ! ಸಂಹಾರಕ ರೂಪವಾದುದರಿಂದ ಭಯಂಕರವಾಗಿ ಕಾಣುವ, ಅನಂತ ಬಾಹ್ವಾದಿಗಳಿಂದ ಕೂಡಿದ ನನ್ನ ವಿಶ್ವರೂಪವನ್ನು ನೋಡಿ ನಿನಗೆ ಆತಂಕಬೇಡ! ಮೌಢ್ಯವೂ ಬೇಡ! ಭಯವನ್ನು ಬಿಡು! ಸಂತೋಷ ಚಿತ್ತನಾಗು! ತಿರುಗಿ ಹಿಂದೆ ನೋಡಿದ ಚತುರ್ಭುಜಯುಕ್ತರೂಪವನ್ನೇ ನೋಡು ಎಂದು ಭಗವಂತನು ಅರ್ಜುನನನ್ನು ಸಮಾಧಾನಗೊಳಿಸಿದನು.

**ಇತ್ಯರ್ಜುನಂ ವಾಸುದೇವಸ್ತಥೋಕ್ತ್ವಾ ಸ್ವಕಂ ರೂಪಂ ದರ್ಶಯಾಮಾಸ ಭೂಯಃ**
**ಆಶ್ವಾಸಯಾಮಾಸ ಚ ಭೀತಮೇನಂ ಭೂತ್ವಾ ಪುನಃ ಸೌಮ್ಯವಪುರ್ಮಹಾತ್ಮಾ**
**॥11-50॥**

**50.** ಈ ರೀತಿಯಾಗಿ ಶ್ರೀಕೃಷ್ಣನು ಅರ್ಜುನನಿಗೆ ಹೇಳಿ ಸ್ವಕೀಯವೆಂದು ಪಾರ್ಥನಿಗೆ ತೋರಿಸಲು ಅರ್ಹವಾದ ಮಾನುಷರೂಪವನ್ನು ತಿರುಗಿ ತೋರಿಸಿದನು. ಹೀಗೆ ಮಹಾತ್ಮನಾದ ಸ್ವಾಮಿಯು ಶಾಂತರೂಪವುಳ್ಳವನಾಗಿ ಭಯಗ್ರಸ್ತನಾದ ಈ ಪಾರ್ಥನನ್ನು ತಿರುಗಿ ಸಮಾಧಾನಪಡಿಸಿದನು ಎಂದು ಸಂಜಯನು ಧೃತರಾಷ್ಟ್ರನಿಗೆ ಅನಂತರ ವೃತ್ತಾಂತವನ್ನು ತಿಳಿಸಿದನು.

**ಅರ್ಜುನ ಉವಾಚ**

ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ |
ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ॥11-51॥

51. ಅರ್ಜುನನು ಹೇಳುತ್ತಾನೆ:- ಜನನಮರಣರಹಿತನು ದುಷ್ಟಮರ್ದಕನೂ ಆದ ಸ್ವಾಮಿ, ಮನುಷ್ಯನಂತೆ ಕಾಣಿಸುವ ಶಾಂತವಾದ ನಿನ್ನ ಈ ರೂಪವನ್ನು ನೋಡಿ ಈಗ ಚಿತ್ತ ಸ್ವಾಸ್ಥ್ಯವನ್ನು ಹೊಂದಿದೆನು. ಧೈರ್ಯಗಾಂಭೀರ್ಯಾಧಿ ಪೂರ್ವ ಸ್ವಭಾವವನ್ನೂ ತಿರುಗಿ ಹೊಂದಿದೆನು.

ಸುದುರ್ದರ್ಶಮಿದಂ ರೂಪಂ ದೃಷ್ಟವಾನಸಿ ಯನ್ಮಮ
ದೇವಾ ಅಪ್ಯಸ್ಯ ರೂಪಸ್ಯ ನಿತ್ಯಂ ದರ್ಶನ ಕಾಂಕ್ಷಿಣಃ॥11-52॥

ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ
ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ॥11-53॥

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ॥11-54॥

ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ॥11-55॥

52-55.ಸ್ವಾಮಿ! ಇಂತಹ ಭಯಂಕರ ರೂಪವನ್ನು ಏಕೆ ತೋರಿಸಿದೆ? ಎಂದರೆ, ಭಗವಂತನು ವಿಶ್ವರೂಪದರ್ಶನದ ಮಹಿಮೆಯನ್ನು ಹೇಳುತ್ತಾನೆ:- ಅರ್ಜುನ ನೀನು ಯಾವ ನನ್ನ ರೂಪವನ್ನು ನೋಡಿದೆಯೋ, ಆ ನನ್ನ ರೂಪವು ಸುಲಭೋಪಾಯದಿಂದ ನೋಡಲು ಸಾಧ್ಯವಾದುದಲ್ಲ; ದೇವತೆಗಳೂ ಸಹ ನಿನ್ನಿಂದ ದೃಷ್ಟವಾದ ರೂಪವನ್ನು ದರ್ಶನ ಮಾಡಬೇಕೆಂದು ಯಾವಾಗಲೂ ಅಪೇಕಿಸುತ್ತಿರುವರು. ಇದು ಅಂತಹ ಮಹಾಮಹಿಮೋಪೇತವು. ನಾನೇ ಸರ್ವಸಂಹಾರಕನು, ನೀನು ಶತ್ರುವಧೆಯಲ್ಲಿ ನಿಮಿತ್ತ ಮಾತ್ರನಾಗಿರುವೆಯಾದ ಕಾರಣ ನಿನಗೆ ನನ್ನ ಅನುಗ್ರಹದಿಂದ ಜಯವು ಖಂಡಿತ ಎಂದು ತಿಳಿಸುವುದಕ್ಕಾಗಿ ಈ ಘೋರರೂಪವನ್ನು ನಿನಗೆ ತೋರಿಸಿರುವೆನು ಎಂದು ಭಾವ. ವಿಶ್ವರೂಪದರ್ಶನವು ಹೇಗೆ ಅತ್ಯಂತ ದುರ್ಲಭವೆಂದರೆ:- ಅರ್ಜುನ! ನೀನು ಹೇಗೆ ನನ್ನನ್ನು ನೋಡಿದೆಯೋ, ಆ ವಿಧವಾದ ವಿಶ್ವರೂಪವುಳ್ಳ ನನ್ನನ್ನು ವೇದಾಧ್ಯಯನಾದಿಗಳು, ನಿರಶನವ್ರತಾದಿ ತಪಸ್ಸು, ಯಾಗಾದಿಗಳು, ಪೂಜೆ ಮುಂತಾದ ಯಾವ ಸಾಧನೆಗಳಿಂದಲೂ ದರ್ಶನಮಾಡಲು ಸಾಧ್ಯವಾಗುವುದಿಲ್ಲ. ನೀನು ಮಹಾಭಾಗ್ಯಶಾಲಿಯು. ನಿನ್ನಲ್ಲಿ

ಪರಮಾನುಗ್ರಹದಿಂದ ಇಂತಹ ದುರ್ಲಭರೂಪವನ್ನು ನಿನಗೆ ತೋರಿಸಿರುವೆನು. ಹಾಗಾದರೆ ನಿನ್ನನ್ನು ನೋಡುವುದಕ್ಕೆ ಉಪಾಯವಾವುದು? ಎಂದರೆ, ಹೇಳುತ್ತಾನೆ:- ಶತ್ರುಸಂತಾಪಕರನಾದ ಅರ್ಜುನ! ಆಸಾಧಾರಣವಾದ ಅಥವಾ ಯಾರ ಸಹಾಯವೂ ಇಲ್ಲದೆ ಭಕ್ತಿ ಮಾತ್ರದಿಂದ ವಿಶ್ವರೂಪಧಾರಿಯಾದ ನನ್ನನ್ನು ವಿಶ್ವರೂಪವಿಶಿಷ್ಟನಾಗಿ ಯಥಾವತ್ತಾಗಿ ತಿಳಿಯುವುದಕ್ಕೂ, ದರ್ಶನಮಾಡುವುದಕ್ಕೂ, ಸಾಯುಜ್ಯಮುಕ್ತಿ ಹೊಂದಿ ಪರಮಾತ್ಮನಲ್ಲಿ ಪ್ರವೇಶಿಸುವುದಕ್ಕೂ ಸಾಧ್ಯವಾಗುವುದು. (ವಿಶ್ವರೂಪದರ್ಶನಾದಿಗಳಿಗೆ ಪರಮಭಕ್ತಿಯೇ ಸಾಧನವೆಂದು ಭಾವ.) ಭಕ್ತಿ ಮಾತ್ರದಿಂದ ವಿಶ್ವರೂಪ ದರ್ಶನಾದಿಗಳಾಗುತ್ತವೆಯೆಂದು ಹೇಳಿರುವುದರಿಂದ ಇತರ ಸಾಧನೆಗಳೆಲ್ಲಾ ತ್ಯಾಜ್ಯವೆಂಬ ಭ್ರಾಂತಿಯುಂಟಾಗುವುದು. ಆದಕಾರಣ ಅದನ್ನು ಪರಿಹರಿಸುತ್ತಾನೆ:- ಪಾಂಡುಕುಮಾರ! ಯಾವಾತನು ಶ್ರೀ ಕೃಷ್ಣನೇ ಸರ್ವೋತ್ತಮನೆಂಬ ಜ್ಞಾನವುಳ್ಳವನಾಗಿ, ನನ್ನ ಪ್ರೀತ್ಯರ್ಥವಾಗಿಯೇ ವಿಹಿತ ಕರ್ಮವನ್ನು ಆಚರಿಸುತ್ತ, ಬಂಧಕ ವಿಷಯಗಳಲ್ಲಿ ಸ್ನೇಹವನ್ನು ಪರಿತ್ಯಜಿಸಿ, ಸಕಲ ಸಜ್ಜನರಲ್ಲಿ ವಿರೋಧರಹಿತನಾಗಿ ನನ್ನಲ್ಲಿ ಭಕ್ತಿ ಮಾಡುವನೋ ಅವನು ನನ್ನನ್ನು ಹೊಂದುವನು.

ಅರ್ಜುನ! ಹೀಗೆಯೇ ಮಾಡಬೇಕೆಂದು ನಿನ್ನನ್ನು ನಿರ್ಬಂಧಿಸುವುದಿಲ್ಲ. ವಿಹಿತವಾದ ಕರ್ತವ್ಯಮಾರ್ಗ, ಅದರ ಫಲಗಳನ್ನು ಹೇಳುತ್ತೇನೆ. ಅದು ನಿನಗೆ ರುಚಿಸಿದರೆ ಅದರಂತೆ ಆಚರಿಸಿ ಫಲವನ್ನು ಹೊಂದು. ಧನಾಪತ್ಯಾದಿಗಳ ಆಶೆಯಿಂದ ಕರ್ಮ ಮಾಡಿದರೆ ಅದು ಕಾಮ್ಯವಾಗುವುದು; ಪುರುಷಾರ್ಥಸಾಧಕವಾಗಲಾರದು. ಅಕಾಮ್ಯ ಕರ್ಮವೇ ಪುರುಷಾರ್ಥ ಸಾಧಕವು. ಅದನ್ನು ನನ್ನ ಪ್ರೀತ್ಯರ್ಥವಾಗಿಯೇ ಮಾಡಬೇಕು, ಫಲಾಶೆಯನ್ನು ಬಿಡಬೇಕು. ಯಾರಲ್ಲಾದರೂ ದ್ವೇಷಮಾಡಿದರೆ ಅವರಿಗೆ ಪ್ರತಿಕೂಲವಾಗುವುದಕ್ಕೆ ತಕ್ಕ ಕರ್ಮವನ್ನು ಮಾಡಬೇಕಾಗುವುದು; ಅದು ಅನರ್ಥಕಾರಿಯು. ಆದಕಾರಣ ಯಾರಲ್ಲಿಯೂ ದ್ವೇಷಬೆಳೆಸಬಾರದು. ಒಟ್ಟಿನಲ್ಲಿ ಫಲಾಶೆ, ದ್ವೇಷ ಇವೆರಡೂ ತ್ಯಾಜ್ಯ, ಪರಮಾತ್ಮನಲ್ಲಿ ಭಕ್ತಿಯಿಲ್ಲದೆ ಮಾಡುವ ಕರ್ಮವೆಲ್ಲವೂ ನಿಷ್ಫಲ, ಜ್ಞಾನಸಾಧಕವಾಗುವುದಿಲ್ಲ. ಆದುದರಿಂದ ಭಕ್ತಿ ಪೂರ್ವಕವಾಗಿಯೇ ಕರ್ಮವನ್ನು ಮಾಡಬೇಕು. ಶ್ರೀಕೃಷ್ಣನಾದ ನಾನೇ ಪರಮ ಪ್ರಾಪ್ಯವಸ್ತುವು, ಸ್ವರ್ಗಾದಿಗಳು ನಶ್ವರಗಳಾದಕಾರಣ ಅವು ಪ್ರಾಪ್ಯವಲ್ಲ ಎಂಬ ಜ್ಞಾನವನ್ನು ದೃಢಪಡಿಸಿಕೊಳ್ಳಬೇಕು. ಇಂತಹ ದಾರ್ಢ್ಯದಿಂದ ಉಕ್ತರೀತಿಯಾಗಿ ಕರ್ಮಮಾಡಿದರೆ ನೀನು ನನ್ನನ್ನು ಹೊಂದುವೆ. ಹೇಗೆಂದರೆ:- ಫಲಾಕಾಂಕ್ಷೆಯಿಲ್ಲದ ಕರ್ಮಕರ್ತನು ಶುದ್ಧಾಂತಃಕರಣನಾಗಿ ನನ್ನ ಸರ್ವೋತ್ಕರ್ಷವನ್ನು ತಿಳಿಯುವನು. ನಾನು ಸರ್ವೋತ್ತಮನೆಂಬ ಜ್ಞಾನವುಂಟಾದರೆ ನನ್ನಲ್ಲಿ ನಿರತಿಶಯ ಸ್ನೇಹ ಎಂಬ ಭಕ್ತಿಯುಂಟಾಗುತ್ತದೆ. ನನ್ನಲ್ಲಿ ಅತಿಶಯ

ಪ್ರೀತಿಯುಂಟಾದ ಮೇಲೆ ಅಸಾರಗಳಾದ ಇತರ ವಸ್ತುಗಳ ಬಯಕೆಯು ತಾನಾಗಿಯೇ ತೊಲಗುವುದು. ಆಶೆಯಿದ್ದರೆ ಅದಕ್ಕೆ ಅಡ್ಡಿ ಬಂದವರಲ್ಲಿ ದ್ವೇಷ ಬರುವುದು. ಆಶೆಯೇ ಹೋದಮೇಲೆ ದ್ವೇಷವು ಹತ್ತಿರ ಸುಳಿಯುವುದೇ ಇಲ್ಲ. ಆಗ ನಿರ್ವೈರನೂ, ಸಮದೃಷ್ಟಿಯೂ ಆಗಿ ನನ್ನನ್ನು ಹೊಂದುವನು. ಹೀಗೆ ನನ್ನನ್ನು ಹೊಂದಿದಮೇಲೆ ಅಂತಹವನಿಗೆ ಪುನರಾವೃತ್ತಿಯಿಲ್ಲ, ಶಾಶ್ವತಸುಖವು ಲಭಿಸುವುದು. ಆದಕಾರಣ ನೀನು ಫಲಸಂಗವರ್ಜಿತನಾಗಿ ವಿಹಿತವರ್ಣಾಶ್ರಮಧರ್ಮವಾದ ಯುದ್ಧಕರ್ಮವನ್ನು ಭಗವತ್ಪೂಜೆಯೆಂಬ ಅನುಸಂಧಾನದಿಂದ ಆಚರಿಸಿ ಶ್ರೇಯೋಭಾಗಿಯಾಗು ಎಂಬುದೇ ಈ ಉಪದೇಶದ ಸಾರವು.

## ದ್ವಾದಶೋಽಧ್ಯಾಯಃ॥12-[20]॥

ದೇವದೇವ್ಯುಪಾಸನೆಗಳಲ್ಲಿ ದೇವೋಪಾಸನೆಯೇ ಉತ್ತಮವೆಂದು ಈ ಅಧ್ಯಾಯದಲ್ಲಿ ನಿರೂಪಿಸಲ್ಪಡುತ್ತದೆ. 'ತಮೇವಂ' ಇತ್ಯಾದಿ ಶ್ರುತಿಗಳಲ್ಲಿ ಭಗವದುಪಾಸನೆಯು ಮೋಕ್ಷಸಾಧನವೆಂದೂ, 'ಶ್ರಿಯಂ ವಸಾನಾ ಅಮೃತತ್ವಮಾಯನ್' ಇತ್ಯಾದಿ ಶ್ರುತಿಗಳಲ್ಲಿ ಲಕ್ಷ್ಮೀದೇವಿಯ ಉಪಾಸನೆಯು ಮೋಕ್ಷಸಾಧನವೆಂದೂ ಉಕ್ತವಾಗಿದೆ. ಹೀಗೆ ದೇವ-ದೇವ್ಯುಪಾಸನೆಗಳೆರಡೂ ಮೋಕ್ಷಸಾಧನಗಳೆಂದು ತಿಳಿದು ಬಂದಿರುವುದರಿಂದ ಸಾಧಾರಣ ಜನರಿಗೆ ಯಾವುದು ಉಪಾದೇಯವೆಂಬ ಸಂಶಯವು ಬರುತ್ತದೆ. ಅದನ್ನು ಪರಿಹರಿಸುವುದಕ್ಕಾಗಿಯೂ, ವಿಶೇಷ ಯುಕ್ತಿ ಜಿಜ್ಞಾಸೆಯಿಂದಲೂ ಅರ್ಜುನನು ಪ್ರಶ್ನೆ ಮಾಡುತ್ತಾನೆ.

**ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ**
**ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ॥12-1॥**

1. ಯಾವ ಭಕ್ತರು ಉಕ್ತಮಾಹಾತ್ಮ್ಯಯುಕ್ತನು, ಅಚಿಂತ್ಯಾದ್ಭುತ ದಿವ್ಯರೂಪಿಯೂ ಆದ ನಿನ್ನನ್ನು ಪೂರ್ವಾಧ್ಯಾಯಾಂತದಲ್ಲಿ ಹೇಳಿದ ಪ್ರಕಾರ ಭಕ್ತಿ ಪೂರ್ವಕವಾಗಿ ಉಪಾಸನೆ ಮಾಡುತ್ತಾರೆಯೋ, ಯಾರು ನಾಶರಹಿತಳಾದ ಜಡ ಪ್ರಕೃತ್ಯಭಿಮಾನಿ ಲಕ್ಷ್ಮೀದೇವಿಯನ್ನು ಭಕ್ತಿಪೂರ್ವಕವಾಗಿ ಉಪಾಸನೆ ಮಾಡುತಾರೆಯೋ ಆ ದ್ವಿವಿಧ ಯೋಗಿಗಳಲ್ಲಿ ಅಧಿಕವಾಗಿ ಮೋಕ್ಷೋಪಾಯವನ್ನು ಬಲ್ಲವರು ಯಾರು? ಎಂದು ಪ್ರಾರ್ಥನು ಪ್ರಶ್ನೆ ಮಾಡಿದನು.

ಭಗವಾನುವಾಚ

| |
|---|
| ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ<br>ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ॥12-2॥ |
| 2.ಭಗವಂತನು ಉತ್ತರ ಹೇಳುತ್ತಾನೆ:- ಯಾರು ಯಾವಾಗಲೂ ಕರ್ಮ ಯೋಗಗಳನ್ನಾಚರಿಸಿ, ಪರಿಶುದ್ಧವಾದ ಅಂತಃಕರಣವನ್ನು ನನ್ನಲ್ಲಿ ಸ್ಥಾಪಿಸಿ ಉತ್ತಮವಾದ ಆಸ್ತಿಕ್ಯಬುದ್ಧಿಯಿಂದ ಕೂಡಿದವರಾಗಿ ನನ್ನನ್ನು ಉಪಾಸಿಸುವರೋ ಅವರೇ ಮೋಕ್ಷಪಾಯ ಜ್ಞಾನಿಗಳಲ್ಲಿ ಶ್ರೇಷ್ಠರೆಂದು ನನ್ನ ಮತವು. |
| ಯೇ ತಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ<br>ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಂ॥12-3॥ |
| ಸಂನಿಯಮ್ಯೇಂದ್ರಿಯ ಗ್ರಾಮಂ ಸರ್ವತ್ರ ಸಮಬುದ್ಧಯಃ<br>ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇ ರತಾಃ ॥12-4॥ |
| ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಂ<br>ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ॥12-5॥ |
| 3-5. ಸ್ವಾಮಿ! ಫಲತಾರತಮ್ಯದಿಂದ ಸಾಧನ ತಾರತಮ್ಯವನ್ನು ನಿರ್ಣಯಿಸಬೇಕು. ಶ್ರೇಷ್ಠವಾದ ಮೋಕ್ಷವೇ ದೇವಿ-ದೇವೋಪಾಸನೆಗಳಿಗೆ ಫಲವೆಂದು ಉಕ್ತ ಶ್ರುತಿಗಳಿಂದ ಸಿದ್ಧವಾಗಿರುವಾಗ ನಿನ್ನ ಉಪಾಸನೆಯೇ ಶ್ರೇಷ್ಠ ಎನ್ನುವುದು ಹೇಗೆ? ಎಂದರೆ ಫಲವು ಸಮವಾಗಿದ್ದರೂ ದೇವ್ಯೋಪಾಸನೆಯು ಕಷ್ಟಸಾಧ್ಯವು; ಶೀಘ್ರವಾಗಿ ಸ್ವತಃ ಫಲದಾಯಕವಲ್ಲ. ನನ್ನ ಉಪಾಸನೆಯಲ್ಲಿ ಅಷ್ಟು ಕ್ಲೇಶವಿಲ್ಲ; ವಿಲಂಬವಾಗದೇ ನಾನೇ ಸ್ವತಂತ್ರವಾಗಿ ಫಲಕೊಡುವನು. ಆದುದರಿಂದ ನನ್ನ ಉಪಾಸಕರೇ ಉತ್ತಮರೆಂದು ಭಗವಂತನು ಹೇಳುತ್ತಾನೆ:- ನಾಶರಹಿತಳು, ಸಂಪೂರ್ಣವಾಗಿ ತಿಳಿಯಲು ಅಶಕ್ಯಳಾದುದರಿಂದ - 'ಇಂತಹವಳು' ಎಂದು ಸ್ಪಷ್ಟವಾಗಿ ವ್ಯವಹರಿಸಲು ಅನರ್ಹಳು, ಸರ್ವವ್ಯಾಪಕಳು, ಬಹುಗುಣಗಳುಳ್ಳವಳಾದುದರಿಂದ ಚಿಂತಿಸಲನರ್ಹಳು, ಅವ್ಯಾಕೃತಾಕಾಶಕ್ಕೆ ಅಭಿಮಾನಿ ದೇವತೆಯು, ಯಾವಾಗಲೂ ತನ್ನ ಸ್ಥಾನದಿಂದ ಭ್ರಂಶವಾಗದಿರುವವಳು, ನಿರ್ವಿಕಾರಳೂ ಆದ ಜಡ ಪ್ರಕೃತಿಗೆಭಿಮಾನಿನಿಯಾದ ಲಕ್ಷ್ಮೀದೇವಿಯನ್ನು, ಯಾರು ಚಕ್ಷುರಾದೀಂದ್ರಿಯಗಳನ್ನೆಲ್ಲಾ ವಿಷಯಗಳ ಕಡೆಗೆ ಹೋಗದಂತೆ ತಮ್ಮ ವಶದಲ್ಲಿಟ್ಟುಕೊಂಡು, ಉತ್ತಮ ಮಧ್ಯಮಾಧಮ ವಸ್ತುಗಳಲ್ಲೆಲ್ಲಾ ನಿರ್ದೋಷನಾದ ಬ್ರಹ್ಮನು ಇರುವನೆಂಬ |

ಬುದ್ಧಿಯುಳ್ಳವರಾಗಿ, ಸಮಸ್ತ ಪ್ರಾಣಿಗಳ ಹಿತಾಚರಣೆಯಲ್ಲಿ ನಿರತರಾಗಿ ಪೂರ್ವೋಕ್ತ ರೀತಿಯಿಂದ ಉಪಾಸನೆಮಾಡುವರೋ ಅವರೂ ಕೊನೆಗೆ ನನ್ನನ್ನೇ ಹೊಂದುವರು. ಆದರೆ ವಿಷ್ಣುವನ್ನು ಬಿಟ್ಟು ಲಕ್ಷ್ಮೀದೇವಿಯಲ್ಲಿಯೇ ಮನಸ್ಸಿಟ್ಟು ಉಪಾಸನೆ ಮಾಡುವವರಿಗೆ ಬಹು ಹೆಚ್ಚಿನ ಕಷ್ಟವಾಗುವುದು ಹೇಗೆಂದರೆ:- ಲಕ್ಷ್ಮೀದೇವಿಯ ಉಪಾಸನೆಮಾಡಿ ಭಗವಂತನನ್ನು ಹೊಂದುವ ಮಾರ್ಗವು ಬಹುಶ್ರಮಕರವಾಗಿ ಪ್ರಾಣಿಗಳಿಗೆ ಲಭ್ಯವಾಗುವುದು.

'ತ್ರಯಂ ವಸಾನಾ ಅಮೃತತ್ವಮಾಯನ್' ಇತ್ಯಾದಿ ಶ್ರುತಿಗಳಲ್ಲಿ ಹೇಳಿರುವ ಪ್ರಕಾರ ಲಕ್ಷ್ಮೀದೇವಿಯ ಉಪಾಸನೆಯಿಂದ ಮೋಕ್ಷವಾಗುವುದೆಂಬುದೇನೋ ನಿಜ. ಆದರೆ ಲಕ್ಷ್ಮೀದೇವಿಯು ಪರಮಾತ್ಮನ ಅಧೀನಳು; ಸ್ವತಂತ್ರಳಲ್ಲ. ಆ ದೇವಿಯ ಉಪಾಸಕರು ದೇವಿಯ ಪ್ರಸಾದವಾದ ಬಳಿಕ ನನ್ನನ್ನು ಕೆಲವು ಕಾಲ ಉಪಾಸನೆ ಮಾಡಿಯೇ ಮೋಕ್ಷವನ್ನು ಹೊಂದಬೇಕು. ಕೇವಲ ಶ್ರೀದೇವ್ಯೋಪಾಸನೆಯು ಸಾಲದು. ಅದರಿಂದ ಸಂತುಷ್ಟಳಾದ ದೇವಿಯು ತನಗೂ ಸ್ವಾಮಿಯಾದ ನನ್ನಲ್ಲಿ ತನ್ನ ಉಪಾಸಕನಿಗೆ ಅನುಗ್ರಹಮಾಡುವಂತೆ ಪ್ರಾರ್ಥಿಸುವಳು. ಹೀಗೆ ಪ್ರಾರ್ಥಿತನಾದ ನಾನು ಅವನ ಅಲ್ಪವಾದ ಉಪಾಸನೆಗೇ ಪ್ರೀತನಾಗಿ ಮುಕ್ತಿಯನ್ನು ಕೊಡುವೆನು. ಅಂದಬಳಿಕ ದೇವ್ಯುಪಾಸಕರು ನನ್ನ ಉಪಾಸನೆಯನ್ನೂ ಮಾಡಲೇಬೇಕೆಂಬುದು ಈ ಮಾರ್ಗದಲ್ಲಿ ಹೆಚ್ಚಿನ ಕ್ಲೇಶವು. ಎರಡನೆಯದಾಗಿ ಸ್ತ್ರೀದೇವತೆಯನ್ನುಪಾಸನೆ ಮಾಡಲು ಅತ್ಯಧಿಕವಾದ ಇಂದ್ರಿಯಸಂಯಮವನ್ನು ಅತ್ಯಂತ ಪ್ರಯಾಸದಿಂದ ಸಂಪಾದಿಸಬೇಕೆಂಬುದು ಅಧಿಕ ಕ್ಲೇಶವು ಮತ್ತು ದೇವ್ಯುಪಾಸನೆಯಿಂದ ಸಾಕ್ಷಾತ್ತಾಗಿ ಮೋಕ್ಷವು ಲಭಿಸುವುದಿಲ್ಲವಾದ ಕಾರಣ ಈ ಮಾರ್ಗದಲ್ಲಿ ಸಾವಕಾಶವಾಗಿ ಮೋಕ್ಷವಾಗುವುದರಿಂದ ಬಹುಕಾಲನಿರೀಕ್ಷಣೆ ಮುಂತಾದ ಅನೇಕ ಕಷ್ಟಗಳು ಸಿದ್ಧವಾಗಿರುವುದರಿಂದ ದೇವ್ಯುಪಾಸಕರು ಉತ್ತಮರಲ್ಲ. ಅವರಿಗಿಂತಲೂ ನನ್ನ ಉಪಾಸಕರೇ ಉತ್ತಮರೆಂದು ನಿನಗೆ ಹೇಳಿದೆನು ಎಂದು ತಿಳಿಯಬೇಕು.

**ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ**

**ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ॥12-6॥**

**ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರಸಾಗರಾತ್**

**ಭವಾಮಿ ನ ಚಿರಾತ್ಪಾರ್ಥ ಮಯ್ಯಾವೇಶಿತಚೇತಸಾಂ॥12-7॥**

**6-7** ಭಗವದುಪಾಸಕರಿಗೆ ಉಕ್ತ ಕ್ಲೇಶಗಳಿಲ್ಲವೆಂದು ಹೇಳುತ್ತಾನೆ: ಯಾರು 'ಸ್ವತಂತ್ರಕರ್ತನಾದ ಶ್ರೀಹರಿಯೇ ನನ್ನಲ್ಲಿ ಸಂನಿಹಿತನಾಗಿ ತನ್ನ ಪೂಜಾರೂಪವಾದ ವಿಹಿತಕರ್ಮಗಳನ್ನು ನನ್ನಿಂದ

| |
|---|
| ಮಾಡಿಸುತ್ತಿರುವನು, ನಾನು ಸ್ವತಂತ್ರನಲ್ಲ; ಹೀಗೆ ಅವನು ಮಾಡಿಸಿದ ಕರ್ಮಗಳು ಅವನಿಗೇ ಅರ್ಪಿತವಾಗಲಿ? ಎಂಬುದಾಗಿ ಕರ್ಮಸಮರ್ಪಣೆ ಮಾಡಿ ಶ್ರೀಹರಿಯಾದ ನಾನೇ ಸರ್ವೋತ್ತಮನೆಂದು ತಿಳಿದು, ಪ್ರತ್ಯೇಕವಾಗಿ ಶ್ರೀದೇವಿಯ ಉಪಾಸನೆಯನ್ನು ಮಾಡದೆ, ನನ್ನನ್ನೇ ಪ್ರಧಾನವಾಗಿ ಚಿಂತಿಸುತ್ತ ಉಪಾಸನೆ ಮಾಡುತ್ತಾರೆಯೋ, ಅಂತಹ, ನನ್ನಲ್ಲಿಯೇ ಆಸಕ್ತಚಿತ್ತರಾದ ಉಪಾಸಕರನ್ನು ಮೃತ್ಯುರೂಪವಾದ ಸಂಸಾರದ ದೆಸೆಯಿಂದ ನಾನೇ ಶೀಘ್ರವಾಗಿ ಉದ್ಧರಿಸುವೆನು. |
| ಭಗವದುಪಾಸನೆಯ ಮಾರ್ಗ |
| ಭಗವಂತನೇ ಸ್ವತಂತ್ರವಾಗಿ ಫಲ ಕೊಡುವವನಾದ ಕಾರಣ ಉಪಾಸನೆಯಿಂದ ಭಗವಂತನು ಪ್ರಸನ್ನನಾದ ಕೂಡಲೇ ಮೋಕ್ಷವು ಲಭಿಸುವುದು. ಸಾಧನಾಂತರವನ್ನು ನಿರೀಕ್ಷಿಸಬೇಕಾಗಿಲ್ಲವಾದ ಕಾರಣ ಕಾಲವಿಳಂಬವಿಲ್ಲ, ಶೀಘ್ರ ಫಲಪ್ರಾಪ್ತಿಯಾಗುವುದು. |
| ಇಂದ್ರಿಯನಿಯನುನಾದಿಗಳು ಸ್ವಲ್ಪ ನ್ಯೂನವಾಗಿದ್ದರೂ ಶ್ರೀದೇವಿಯಂತೆ ಭಗವಂತನು ಉಪೇಕ್ಷೆ ಮಾಡುವುದಿಲ್ಲ; ಅಂತಹವರು ಭಕ್ತರಾಗಿದ್ದರೆ ಅವರ ಭಕ್ತಿ ಪರವಶನಾಗಿ ತಾನೇ ಅವರಿಗೆ ಅನಾಯಾಸವಾಗಿ ನ್ಯೂನತೆಗಳನ್ನು ಪರಿಹರಿಸಿ ಫಲಕೊಡುವುದರಿಂದ ಹೆಚ್ಚು ಕಷ್ಟವಿಲ್ಲ. |
| ಲಕ್ಷ್ಮೀಪತಿ ಮುಂತಾಗಿ ಸ್ವಾಮಿಯನ್ನು ದೇವೀಸಹಿತ ಧ್ಯಾನಮಾಡುವ ಮಾತ್ರದಿಂದಲೇ ಉಭಯರ ಅನುಗ್ರಹವೂ ಉಂಟಾಗಿ ಶೀಘ್ರವಾಗಿ ಮೋಕ್ಷವು ಲಭಿಸುವುದು. ಈ ರೀತಿ ವಿಷ್ಣೂಪಸರ್ಜನವಾಗಿ ದೇವಿಯನ್ನೂ, ಪ್ರಧಾನವಾಗಿ ದೇವನನ್ನೂ ಒಂದೇ ಉಪಾಸನೆಯಿಂದ ಆರಾಧಿಸುವುದೇ ಸುಖಕರವಾದುದು. |
| ದೇವ್ಯುಪಾಸನೆಯ ಮಾರ್ಗ |
| ಆದಿಯಲ್ಲಿ ಸ್ವಲ್ಪವಾಗಿ ಭಗವದುಪಾಸನೆ, ಬಳಿಕ ಬಹುಕಾಲ ಶ್ರೀದೇವಿಯ ಉಪಾಸನೆ, ತಿರುಗಿ ಶ್ರೀಸಹಿತ ಭಗವದುಪಾಸನೆ ಇವುಗಳನ್ನೆಲ್ಲಾ ಆಚರಿಸಿದ ನಂತರವೇ ಎಂದರೆ ಬಹುಕಾಲ ವಿಳಂಬವಾದ ಮೇಲೆಯೇ ಮುಕ್ತಿಯು ದೊರೆಯುವುದು. |
| ಶ್ರೀದೇವತೆಯಾದ ಲಕ್ಷ್ಮಿಯನ್ನು ಉಪಾಸನೆ ಮಾಡಲು ಅತ್ಯಧಿಕವಾದ ಇಂದ್ರಿಯಸಂಯಮ, ಸದಾಚಾರ ಮುಂತಾದ ಕಠಿನಸಾಧನೆಗಳು ಆವಶ್ಯಕ. ಅದಕ್ಕಾಗಿ ಹೆಚ್ಚು ಕಷ್ಟ ಪಡಬೇಕು. |

| |
|---|
| ಲಕ್ಷ್ಮೀದೇವಿಯು ಪರಮಾತ್ಮನ ಅಧೀನಳು. ಸ್ವತಂತ್ರವಾಗಿ ಮೋಕ್ಷವನ್ನು ಕೊಡಲಾರಳು. ಆದಕಾರಣ ಈ ಮಾರ್ಗದಲ್ಲಿ ದೇವಿ-ದೇವೋಪಾಸನೆಗಳೆ ಎರಡನ್ನೂ ಮಾಡಬೇಕಾಗುವುದರಿಂದ ಅಧಿಕಕ್ಲೇಶವಿದೆ. |
| ಆದುದರಿಂದ ದೇವ್ಯುಪಾಸನೆಯು ಮೋಕ್ಷಪ್ರದವಾದರೂ ಬಹುಕಾಲವಿಳಂಬ, ಅತ್ಯಂತ ಶ್ರಮ ಮುಂತಾದ ಅಸೌಕರ್ಯಗಳು ಹೆಚ್ಚಾಗಿರುವುದರಿಂದ, ಭಗವಂತನಾದ ನನ್ನ ಉಪಾಸಕರೇ ಸುಕರಮಾರ್ಗಾವಲಂಬಿಗಳಾಗಿರುವುದರಿಂದ ಶ್ರೇಷ್ಠವೆಂದು ಅಭಿಪ್ರಾಯ. |
| ಮಯ್ಯೇವೇ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ<br>ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ॥12-8॥ |
| 8. ಈ ರೀತಿ ನನ್ನ ಉಪಾಸನೆಯ ಮಾರ್ಗವೇ ಉತ್ತಮವಾಗಿರುವುದರಿಂದ ಪಾರ್ಥ! ನನ್ನಲ್ಲಿಯೇ ಮನಸ್ಸನ್ನು ದೃಢವಾಗಿ ಸ್ಥಾಪಿಸು, ನನ್ನ ಉಪಾಸನೆಯನ್ನೇ ಮಾಡು. ಅದು ಸಾಧ್ಯವಾಗದಿದ್ದರೆ ಅದರ ಸಿದ್ಧಿಗಾಗಿ ನನ್ನ ಮಾಹಾತ್ಮ್ಯಯ ಜ್ಞಾನವನ್ನು ಸಂಪಾದಿಸು. ಅದರಿಂದ ಧ್ಯಾನವು ಸುಕರವಾಗುವುದು. ಬಳಿಕ ಧ್ಯಾನಮಾಡಿ ನನ್ನ ಅನುಗ್ರಹಮೂಲಕವಾಗಿ ನಿರ್ದುಃಖಾನಂದಾನುಭವಾತ್ಮಕ ಸ್ಥಿತಿ(ಮೋಕ್ಷ)ಯನ್ನು ಹೊಂದುವೆ. |
| ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಂ<br>ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ॥12-9॥ |
| ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ<br>ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥12-10॥ |
| ಅಥೈ ತದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ<br>ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್॥12-11॥ |
| 9-11. ಧನಂಜಯ! ಹಾಗೆ ನನ್ನಲ್ಲಿ ಚಿತ್ತವನ್ನು ದೃಢವಾಗಿ ನಿಲ್ಲಿಸಲು ನಿನಗೆ ಸಾಧ್ಯವಾಗದಿದ್ದರೆ, ವಿಷಯಗಳ ಕಡೆಗೆ ಮನಸ್ಸು ಹೋದಾಗಲೆಲ್ಲಾ ಪ್ರತ್ಯಾಹಾರದಿಂದ ಅದನ್ನು ಹಿಂದಿರುಗಿಸಿ ಭಗವಂತನ ಕಡೆಗೆ ಸೆಳೆತಂದು ನಿಲ್ಲಿಸುವ ಅಭ್ಯಾಸಮಾಡು. ಅದರಿಂದ ಮನಸ್ಸು ಸಮಾಧಾನವಾಗುವುದು. ಹೀಗೆ ಉಪಾಯದಿಂದ ನನ್ನನ್ನು ತಿಳಿಯಬೇಕೆಂದು ಅಪೇಕ್ಷಿಸು. ವಿಷಯಾಂತರಗಳ ಕಡೆಗೆ ಓಡುತಿರುವ ಮನಸ್ಸನ್ನು ಪ್ರತ್ಯಾಹಾರದಿಂದ ತಡೆಯುವ |

ಅಭ್ಯಾಸಮಾಡುವುದಕ್ಕೂ ನಿನಗೆ ಶಕ್ತಿಯಿಲ್ಲದಿದ್ದರೆ ನನ್ನ ಪ್ರೀತ್ಯರ್ಥವಾಗಿ ಆದರದಿಂದ ವಿಹಿತಕರ್ಮಾನುಷ್ಠಾನವನ್ನಾಚರಿಸು. ಹಾಗೆ ನನ್ನ ಪ್ರೀತ್ಯರ್ಥವಾಗಿ ಕರ್ಮವನ್ನಾಚರಿಸುವುದರಿಂದ ನೀನು ಜ್ಞಾನದ್ವಾರಾ ಮುಕ್ತನಾಗುವೆ. ಒಂದುವೇಳೆ ನನ್ನ ಪ್ರೀತ್ಯರ್ಥವಾಗಿಯೇ ಮಾಡುವೆನೆಂಬ ದೃಢ ಸಂಕಲ್ಪದಿಂದ ಜಪಾರ್ಚನಾದಿ ವಿಹಿತಾನುಷ್ಠಾನಮಾಡುವುದಕ್ಕೂ ನೀನು ಅಸಮರ್ಥನಾದರೆ ದೇವತಾಂತರೋದ್ದೇಶದಿಂದ ಕರ್ಮಗಳನ್ನು ಮಾಡಿ ಕೊನೆಯಲ್ಲಿ ಶ್ರೀಕೃಷ್ಣನಿಗೆ ಸಮರ್ಪಣೆಮಾಡುವ ರೀತಿಯಲ್ಲಿ ಕರ್ಮಯೋಗವನ್ನಾಚರಿಸು. ಅದು ನನ್ನ ಪ್ರೀತ್ಯರ್ಥವಾಗಿ ಕರ್ಮಮಾಡಲು ಸಾಧಕವಾಗುವುದು, ಅದರಿಂದ ಮನಸ್ಸನ್ನು ವಶಮಾಡಿಕೊಂಡವನಾಗಿ ಕರ್ಮಫಲಗಳನ್ನೆಲ್ಲಾ ಬಿಡುವವನಾಗು!

**ಶ್ರೇಯೋ ಹಿ ಜ್ಞಾನಮಭ್ಯಾಸಾಜ್ಞಾನಾದ್ಧ್ಯಾನಂ ವಿಶಿಷ್ಯತೇ**
**ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿನಂತರಂ॥12-12॥**

12.ಉಕ್ತ ಸಾಧನಗಳಲ್ಲಿ ಅಜ್ಞಾನಪೂರ್ವಕವಾದ ಅಭ್ಯಾಸಕ್ಕಿಂತ (ಶ್ರವಣಾದಿ ಜನಿತ) ತತ್ವಜ್ಞಾನವು ಶ್ರೇಷ್ಠವು. ಕೇವಲ ತತ್ವಜ್ಞಾನಕ್ಕಿಂತ ಜ್ಞಾನಪೂರ್ವಕ ಧ್ಯಾನವು ಉತ್ತಮವು. ಅದರಲ್ಲಿಯೂ ಜ್ಞಾನಪೂರ್ವಕಧ್ಯಾನಕ್ಕಿಂತಲೂ ಫಲಾಪೇಕ್ಷೆಯಿಲ್ಲದೆ ಮಾಡುವ ನಿಷ್ಕಾಮಧ್ಯಾನವು ಮೇಲು. ನಿಷ್ಕಾಮಧ್ಯಾನಕ್ಕಿಂತಲೂ ಅಪರೋಕ್ಷಜ್ಞಾನವು ಮೇಲಿನದು. ಅದಾದ ಬಳಿಕ ಭಗವಂತನ ಪ್ರಸಾದದಿಂದ ಮೋಕವು ಲಭಿಸುತ್ತದೆ.

**ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ**
**ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ॥12-13॥**

**ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ**
**ಮಯ್ಯರ್ಪಿತಮನೋಬುದ್ಧಿರ್ಯೋ ಮದ್ಭಕ್ತಃ ಸ ಮೇ ಪ್ರಿಯಃ॥12-14॥**

**ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ**
**ಹರ್ಷಾಮರ್ಷಭಯೋದ್ವೇಗೈರ್ಯುಕ್ತೋ ಯಸ್ಸ ಚ ಮೇ ಪ್ರಿಯಃ॥12-15॥**

**ಅನಪೇಕ್ಷಶುಚಿರ್ದಕ್ಷ ಉದಾಸೀನೋ ಗತವ್ಯಥಃ**
**ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಸ್ಸಮೇ ಪ್ರಿಯಃ॥12-16॥**

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ
ಶುಭಾಶುಭಪರಿತ್ಯಾಗೀ ಭಕ್ತಿಮಾನ್ಯಸ್ಯ ಮೇ ಪ್ರಿಯಃ॥12-17॥

**13-17.** ಭಗವತ್ಪ್ರಸಾದದ್ವಾರಾ ಮೋಕ್ಷಕಾರಣಗಳಾದ ಇನ್ನೂ ಕೆಲವು ಧರ್ಮಗಳನ್ನು ಹೇಳುತ್ತಾನೆ:- ಸಕಲಪ್ರಾಣಿಗಳಲ್ಲಿಯೂ ದ್ವೇಷವಿಲ್ಲದವನು, ಕಷ್ಟ ಬರುವ ಸಂದರ್ಭವನ್ನು ತಿಳಿಸಿ ಅದರಿಂದ ಪಾರುಮಾಡುವವನು, ದಯಾಶಾಲೆಯು, "ಇದು ನನ್ನದು" ಎಂಬ ಸ್ವಾತಂತ್ರ್ಯ ಬುದ್ಧಿರಹಿತನು, ತನ್ನಲ್ಲಿಲ್ಲದಿರುವ ಕುಲಶೀಲ ವಿದ್ಯಾದಿಗುಣಗಳನ್ನು ತನ್ನಲ್ಲಿ ಆರೋಪಿಸಿಕೊಂಡು "ನಾನು ನಾನು" ಎಂಬ ಅಹಂಕಾರಶೂನ್ಯನು, "ವಿಷಯಸುಖವೂ ಸಹ ದುಃಖದಂತೆ ಹೇಯವು" ಎಂದರಿತಿರುವವನು, ಸಹನಶೀಲನು, ವಿಷಯಗಳಲ್ಲಿ ಅಲಂಬುದ್ಧಿಯುಳ್ಳವನು, ಯಾವಾಗಲೂ ಕರ್ಮ-ಧ್ಯಾನಗಳೆಂಬ ಜ್ಞಾನೋಪಾಯಾನುಷ್ಠಾತೃವು, ಮನಸ್ಸನ್ನು ವಿಷಯಗಳ ಕಡೆಗೆ ಹೋಗದಂತೆ ತಡೆದು ಸ್ವಾಧೀನದಲ್ಲಿಟ್ಟುಕೊಂಡಿರುವವನು, ನಿಷ್ಕಲಂಕವಾದ ತತ್ವನಿರ್ಣಯವುಳ್ಳವನೂ ಆಗಿ ಮನೋಬುದ್ಧಿಗಳನ್ನು ನನ್ನಲ್ಲಿಯೇ ಸ್ಥಿರವಾಗಿ ನಿಲ್ಲಿಸುವಂತಹ ಭಕ್ತನು ನನಗೆ ಪ್ರಿಯನು. ಯಾವಾತನು ಜನರಿಗೆ ಭಯಂಕರನಾಗುವುದಿಲ್ಲವೋ, ಯಾವನು ಸಕಲವೂ ಭಗವದಧೀನವೆಂದು ತಿಳಿದು ಇತರ ಜನರಿಗೆ ಭಯಪಡುವುದಿಲ್ಲವೋ, ಯಾರು ಹರ್ಷ, ಯಾವಾಗಲೂ ಅಧರ್ಮ ವಿಷಯದಲ್ಲಿ ಮನಃಪ್ರವೃತ್ತಿ, ರೋಷ, ಭಯ ಮತ್ತು ಮನಸ್ಸಿನಲ್ಲಿ ನಡುಕ ಇವುಗಳನ್ನು ಬಿಟ್ಟಿರುವನೋ, ಅಂತಹ ಭಕ್ತನು ನನಗೆ ಪ್ರಿಯನು. ಭಕ್ತಿಜ್ಞಾನಗಳ ಹೊರತು ಬೇರಾವ ಫಲವನ್ನೂ ಆಶಿಸದಿರುವವನು, ಅಂತರ್ಬಹಿಶ್ಶುದ್ಧನು, ಭಗವದಾರಾಧನೆ ಮಾಡಲು ಸಮರ್ಥನು, ಕರ್ತವ್ಯವಾದ ಉಪಕಾರ-ಅಪಕಾರಗಳನ್ನು ಉಪೇಕ್ಷೆ ಮಾಡುವವನು, ಇತರರು ಅಪಕಾರ ಮಾಡಿದರೂ ಕ್ಲೇಶಪಡದಿರುವವನೂ ಆಗಿ "ಸರ್ವಾರಂಭಪರಿತ್ಯಾಗೀ" – ವಿಷ್ಣು ಪ್ರೀತಿಕರವಲ್ಲದ ಸಕಲ ಲೌಕಿಕೋದ್ಯೋಗಗಳನ್ನೂ, ಸಕಲ ಕಾರ್ಯಗಳನ್ನೂ ನಾನೇ ಮಾಡುವೆನೆಂಬ ಅಭಿಮಾನವನ್ನೂ ಮತ್ತು ಮಾಡಿದ ಕರ್ಮಗಳ ಫಲಾಶೆಯನ್ನೂ ಬಿಟ್ಟು, ಸಕಲ ಕರ್ಮಗಳನ್ನೂ ಭಗವಂತನಿಗೇ ಸಮರ್ಪಿಸುವಂತಹ ನನ್ನ ಭಕ್ತನು ನನಗೆ ಪ್ರಿಯನು. ಯಾವನು ಯಾವಾಗಲೂ ಅಧರ್ಮಪ್ರವೃತ್ತಿರಹಿತನಾಗಿ, ಸರ್ವದಾ ಪರರಿಗೆ ಅನಿಷ್ಟವನ್ನಾಚರಿಸದೇ ಇರುವನೋ ನಿರಂತರದಲ್ಲಿಯೂ ಶೋಕರಹಿತನಾಗಿರುವನೋ, ಜ್ಞಾನಭಕ್ತಿವೈರಾಗ್ಯಗಳ ಹೊರತು ಬೇರೆ ಫಲವನ್ನು ಅಪೇಕ್ಷಿಸುವುದಿಲ್ಲವೋ, ಸ್ವರ್ಗಾದಿಫಲಕವಾದ ಬಂಧಕ ಪುಣ್ಯವನ್ನೂ ಮತ್ತು

ಸರ್ವಾತ್ಮನಾ ಪಾಪಗಳನ್ನೂ ಸಹ ಬಿಟ್ಟು ನನ್ನಲ್ಲಿ ಭಕ್ತಿಮಾಡುವನೋ ಆತನು ನನಗೆ ಪ್ರೀತಿ ಪಾತ್ರನು.

**ಸಮಶ್ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ**

**ಶೀತೋಷ್ಣ ಸುಖದುಃಖೇಷು ಸಮಃ ಸಂಗವಿವರ್ಜಿತಃ॥12-18॥**

**ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್**

**ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ಮೇ ಪ್ರಿಯೋ ನರಃ॥12-19॥**

**18-19.** ಯಾವಾತನು ಶತ್ರುಮಿತ್ರರಲ್ಲಿ ಸಾಮ್ಯಭಾವನೆಯುಳ್ಳವನಾಗಿ ಶೀತ-ಉಷ್ಣಾದಿ ವಿಷಯ ಜನ್ಯ ಸುಖದುಃಖ, ಮಾನ-ಅಪಮಾನ ಪ್ರಸಂಗ ಇವುಗಳು ಬಂದಾಗ ಹಿಗ್ಗದೆ ಕುಗ್ಗದೆ ಒಂದೇ ವಿಧವಾಗಿ ನಡೆದುಕೊಳ್ಳುತ್ತ, ಫಲಾಕಾಂಕ್ಷೆಯಿಲ್ಲದೆ, ಜನರು ಮಾಡುವ ನಿಂದೆಯಂತೆ ಸ್ತುತಿಯೂ ಹೇಯವೆಂದು ತಿಳಿದು ಸಮಚಿತ್ತನಾಗಿ, ವ್ಯರ್ಥಮಾತುಗಳನ್ನಾಡದೆ, ದೇವರು ಕೊಟ್ಟುದರಲ್ಲಿಯೇ ತೃಪ್ತನಾಗಿ, ನಿಯತಸ್ಥಳದಲ್ಲಿ ವಾಸಮಾಡದೆ, ಕುತರ್ಕಗಳಿಂದ ಚಲಿಸದಿರುವಂತಹ ದೃಢತತ್ವಜ್ಞಾನವುಳ್ಳವನಾಗಿ ಭಕ್ತಿಮಾಡುವನೋ ಆ ಮನುಷ್ಯನು ನನಗೆ ಪ್ರೀತಿಪಾತ್ರನು. - (ಸಾಮ್ಯ ಭಾವನೆಯು ಅನೇಕ ಬಗೆಯಾಗಿದೆ ಹೇಗೆಂದರೆ:- ಸರ್ವಕ್ಕೂ ಭಗವಂತನೇ ಸ್ವತಂತ್ರಕರ್ತನು, ಅವನ ಇಚ್ಛೆಯಿಲ್ಲದೆ ಯಾರೂ ಏನನ್ನೂ ಮಾಡಲಾರರೆಂದು ತಿಳಿದು, ಇತರ ಜನರಿಂದ ನಮಗೆ ಅಪಕಾರವಾದಾಗ ಸರ್ವಸ್ವಾಮಿಯಾದ ಭಗವಂತನೇ ನನ್ನ ಪಾಪಗಳ ಫಲವನ್ನು ಕೊಡಲು ಈ ಜನರಲ್ಲಿ ನಿಂತು ಅಪಕಾರಮಾಡಿಸುತ್ತಾನೆ. ಹಾಗೆಯೇ ನಮ್ಮ ಪುಣ್ಯ ಫಲವನ್ನು ಕೊಡುವಾಗ ಮಿತ್ರ ಜನರಲ್ಲಿ ನಿಂತು ಉಪಕಾರ ಮಾಡಿಸುತ್ತಾನೆ. ಈ ಶತ್ರು-ಮಿತ್ರರು ನಿಮಿತ್ತ ಮಾತ್ರರು. ಇದಕ್ಕಾಗಿ ಇವರಲ್ಲಿ ನಾನು ದ್ವೇಷ-ಸ್ನೇಹಗಳನ್ನು ಮಾಡಬಾರದು' ಎಂದು ತಿಳಿದು ಅವರವರ ಯೋಗ್ಯತಾನುಸಾರವಾಗಿ ಎಂದರೆ ಅವರು ಭಗವಂತನಿಗೆ ದ್ವೇಷಿಗಳಾದರೆ ಅದಕ್ಕನುಸಾರವಾಗಿ ಅವರಲ್ಲಿ ದ್ವೇಷವನ್ನೂ, ಭಕ್ತರಾದರೆ ಅದಕ್ಕನುಗುಣವಾಗಿ ಅವರಲ್ಲಿ ಪ್ರೀತಿ ಯನ್ನೂ ಮಾಡುವುದು ಒಂದು ಬಗೆಯ ಸಾಮ್ಯಭಾವನೆಯು. ಶತ್ರುವು ಅಪಕಾರಮಾಡಿದಾಗ ಕುಗ್ಗದೆ, ಮಿತ್ರನು ಉಪಕಾರಮಾಡಿದಾಗ ಹಿಗ್ಗದೆ ಭಗವದಿಚ್ಛಾನುಸಾರವಾಗಿ ನಮ್ಮ ಪೂರ್ವ ಕರ್ಮಫಲವಾಯಿತೆಂದು ತಿಳಿದು ಚಿತ್ತವಿಕಾರವನ್ನು ಹೊಂದದೇ ಅವರ ವಿಷಯದಲ್ಲಿ ಒಂದೇ ಬಗೆಯಾಗಿ ವರ್ತಿಸುವುದು ಇನ್ನೊಂದು ಬಗೆಯ ಸಾಮ್ಯಭಾವನೆಯು.)

**ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ**

**ಶ್ರದ್ಧಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾ॥12-20॥**

**20.** ಯಾವ ಭಕ್ತರು ಆಸ್ತಿಕ್ಯವಂತರಾಗಿ, ನನ್ನ ಸರ್ವೋತ್ತಮತ್ವಾದಿ ಮಹಿಮೆಗಳನ್ನು ಚೆನ್ನಾಗಿ ತಿಳಿದವರಾಗಿ, ಸರ್ವಧಾರಕನಾದುದರಿಂದ ಧರ್ಮನಾಮಕನಾದ ವಿಷ್ಣುವಿನ ದರ್ಶನಸಾಧನೋಪಾಸನಾಂಗವು, ಮುಕ್ತಿಸಾಧಕವೂ ಆದ ಅದ್ವೇಷಾದಿ ಉಕ್ತ ಸಕಲ ಸಾಧನಗಳನ್ನೂ ಹಿಂದೆ ಹೇಳಿರುವ ಪ್ರಕಾರ ಸಮೀಚೀನವಾಗಿ ಆಚರಿಸುವರೋ ಅಂತಹ ಭಕ್ತರು ನನಗೆ ಅತ್ಯಂತ ಪ್ರೀತಿಪಾತ್ರರು. ಅಂತಹ ಭಕ್ತರಿಗೆ ಐಹಿಕಾಮುಷ್ಮಿಕ ಪುರುಷಾರ್ಥಗಳೆಲ್ಲವೂ ಕರಗತವಾಗಿಯೇ ಇರುತ್ತದೆ. ಆದಕಾರಣ ಪಾರ್ಥ! ನೀನು ಈ ದ್ವಿತೀಯಷಟ್ಕದಲ್ಲಿ ಹೇಳಿರುವ ನನ್ನ ಮಾಹಾತ್ಮ್ಯಯನ್ನು ಅನುಸಂಧಾನಮಾಡುವವನಾಗಿ ನನ್ನಲ್ಲಿ ಸುದೃಢಸ್ನೇಹರೂಪಭಕ್ತಿಯನ್ನಿಟ್ಟು ಅದ್ವೇಷಾದಿ ಉಕ್ತಸಾಧನಗಳನ್ನಾಚರಿಸಿ ನನಗೆ ಅತ್ಯಂತ ಪ್ರೀತಿಪಾತ್ರನಾಗು! ಅದರಿಂದಲೇ ಅನಾಯಾಸವಾಗಿ ಐಹಿಕಾಮುಷ್ಮಿಕ ಸಕಲ ಭೋಗಗಳನ್ನೂ ಹೊಂದುವೆ; ನಿನಗೆ ಮಂಗಳವಾಗುವುದು ಎಂಬುದಾಗಿ ಭಗವಂತನು ಉಪದೇಶಮೂಡಿದನು.

**ಇತಿ ಶ್ರೀಮದ್ವಿದ್ವತ್ಕುಲತಿಲಕ ಶ್ರೀ ಗೋವಿಂದಕೃಷ್ಣಾಚಾರ್ಯಸುತವಾಸುದೇವಾಚಾರ್ಯ ವಿರಚಿತ ಶ್ರೀಮದ್ಭಗವದ್ಗೀತಾ ಕರ್ಣಾಟಕ ಟೀಕಾಯಾಂ ದ್ವಿತೀಯ ಪಟ್ಕಂ ಸಂಪೂರ್ಣಂ**

## ತ್ರಯೋದಶೋಽಧ್ಯಾಯಃ॥13-[35]॥

ದ್ವಿತೀಯಾಧ್ಯಾಯದಲ್ಲಿ 'ನ ತ್ವೇವಾಹಂ' 2-21 ಇತ್ಯಾದಿಗಳಿಂದ ಜೀವಸ್ವರೂಪವೂ, 'ತ್ರೈಗುಣ್ಯವಿಷಯಾ ವೇದಾಃ' 2-45 ಇತ್ಯಾದಿ ಆರು ಅಧ್ಯಾಯಗಳಲ್ಲಿ ಪ್ರಾಯಿಕವಾಗಿ ಜ್ಞಾನಸಾಧನವೂ, ದ್ವಿತೀಯಷಟ್ಕದಲ್ಲಿ ಭಗವನ್ಮಹಿಮೆಯು ಮತ್ತು ಏಳನೆಯ ಅಧ್ಯಾಯದಲ್ಲಿ 'ಭೂಮಿರಾಪ' 7-4 ಇತ್ಯಾದಿಗಳಿಂದ ಕ್ಷೇತ್ರ ಶಬ್ದಾರ್ಥವಾದ ಭಗವದಾವಾಸಸ್ಥಾನವೂ ಉಕ್ತವಾಗಿವೆ. ಈ ರೀತಿ ಭಿನ್ನಭಿನ್ನ ಪ್ರಸಂಗಗಳಲ್ಲಿ ಹೇಳಿರುವ ಭಗವದ್ವಚನಶ್ರವಣ- ಭಗವದ್ರೂಪದರ್ಶನಗಳಿಂದ ಶೋಕಮೋಹಗಳನ್ನು ಕಳೆದುಕೊಂಡು, ಪಾರ್ಥನು ಪ್ರಸಕ್ತವಾಗಿರುವ ಯುದ್ಧವು ಸ್ವಧರ್ಮವಾದುದರಿಂದ ಅವಶ್ಯಕರ್ತವ್ಯವೆಂದು ನಿರ್ಣಯಿಸಿದವನಾದರೂ ಇದುವರೆಗೆ ಶ್ರುತವಾದ ವಿಷಯಗಳಲ್ಲಿ ಇನ್ನೂ ವಿಶೇಷಾಂಶಗಳನ್ನು ತಿಳಿಯುವುದಕ್ಕಾಗಿ ಕೆಲವು ವಿಷಯಗಳನ್ನು ನಿರ್ದೇಶಿಸಿ ಅವನ್ನು ವಿವರಿಸಬೇಕೆಂದು ಪ್ರಶ್ನಿಸಲಾಗಿ ಶ್ರೀಕೃಷ್ಣನು ಹಿಂದಿನ ಹನ್ನೆರಡು ಅಧ್ಯಾಯಗಳಲ್ಲಿ ಮೇಲೆ

ಹೇಳಿದಂತೆ ಅಲ್ಲಲ್ಲಿ ಉಕ್ತವಾದ ಪ್ರಮೇಯಗಳೆಲ್ಲವನ್ನೂ ಒಟ್ಟಿಗೆ ಸಂಗ್ರಹಿಸಿ ಚೆನ್ನಾಗಿ ಮನನಾಟುವಂತೆ ಈ ಅಧ್ಯಾಯದಲ್ಲಿ ನಿರೂಪಿಸುತ್ತಾನೆ.

ಅರ್ಜುನ ಉವಾಚ

**ಪ್ರಕೃತಿಂ ಪುರುಷಂ ಚೈವ ಕ್ಷೇತ್ರಂ ಕ್ಷೇತ್ರಜ್ಞಮೇವ ಚ**
**ಏತದ್ವೇದಿತುಮಿಚ್ಛಾಮಿ ಜ್ಞಾನಂ ಜ್ಞೇಯಂ ಚ ಕೇಶವ॥13-1॥**

1.ಕೇಶವ! ಪ್ರಕೃತಿ, ಜೀವ, ಕ್ಷೇತ್ರ, ಕ್ಷೇತ್ರಜ್ಞ, ಜ್ಞಾನಸಾಧನೆ ಮತ್ತು ಜ್ಞೇಯವಸ್ತು ಇವೆಲ್ಲವನ್ನೂ ವಿಶೇಷವಾಗಿ ತಿಳಿಯಲಪೇಕ್ಷಿಸುವೆನು. ದಯಮಾಡಿ ಉಪದೇಶಿಸಬೇಕೆಂದು ಅರ್ಜುನನು ಕೇಳಿದನು.

ಶ್ರೀ ಭಗವಾನುವಾಚ

**ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ**
**ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ॥13-2॥**

2.ಭಗವತ್ಸ್ವರೂಪಜ್ಞಾನವು ಮುಕ್ತಿಸಾಧನವಾಗಿರುವುದರಿಂದ ಭಗವತ್ಸ್ವರೂಪವನ್ನು ನಿರೂಪಿಸಬೇಕಾದುದು ಯುಕ್ತವು. ಕ್ಷೇತ್ರವನ್ನೇಕೆ ನಿರೂಪಿಸಬೇಕು? ಅದರ ಪ್ರಶ್ನೆಯಾದರೂ ಹೇಗೆ ಸಂಗತವು? ಎಂದರೆ, ಕೇವಲ ಭಗವಂತನನ್ನು ತಿಳಿದರೆ ಸಾಲದು 'ಭಗವಂತನು ಕ್ಷೇತ್ರಜ್ಞನು' ಎಂದು ತಿಳಿಯುವುದೇ ಮುಕ್ತಿಸಾಧನವು. ಹಾಗೆ ತಿಳಿಯಬೇಕಾದರೆ ಕ್ಷೇತ್ರವನ್ನು ತಿಳಿಯಬೇಕೆಂಬ ಅಭಿಪ್ರಾಯದಿಂದ ಅರ್ಜುನನು ಮಾಡಿರುವ ಪ್ರಶ್ನೆಗೆ ಭಗವಂತನು ಉತ್ತರವನ್ನು ಹೇಳುತ್ತಾನೆ:- ಕುಂತೀ ಪುತ್ರ! 1ಶರೀರ=ಅವ್ಯಕ್ತ. ಮಹತ್ತತ್ವ, ಅಹಂಕಾರತತ್ವಾದಿಗಳು 2ಕ್ಷೇತ್ರವೆನಿಸಲ್ಪಟ್ಟಿವೆ. ಯಾವಾತನು ಈ ಕ್ಷೇತ್ರವನ್ನು ತಿಳಿದವನೋ, ಅಂತಹವನನ್ನು ಕ್ಷೇತ್ರಜ್ಞನೆಂದು ಜ್ಞಾನಿಗಳು ಹೇಳುವರು.

1. ಶೃ=ಹಿಂಸಾಯಾಂ, ಈರ=ಪ್ರೇರಣೆ ಎಂಬ ಎರಡು ಧಾತುಗಳಿಂದ ಶರೀರ ಶಬ್ದವು ನಿಷ್ಪನ್ನವಾಗಿದೆ. ಪ್ರಕೃತ್ಯಾದಿ ತತ್ವಗಳು ತನ್ನ ಪರಿಣಾಮವಾವ ಈ ಪಾಂಚಭೌತಿಕಶರೀರವನ್ನು ಜೀವನಿಗೆ ಸಂಬಂಧಪಡಿಸುವುದು (ಜನ್ಮ) ತಿರುಗಿ ಅದನ್ನು ಬಿಡಿಸುವುದು (ಮರಣ) ಈ ಮೂಲಕವಾಗಿ ಜೀವನ ಹಿಂಸೆಗೆ ಕಾರಣವಾಗಿರುವುದರಿಂದ 'ಶರ್' ಎನಿಸಿವೆ. ಅವು ಭಗವಂತನಿಂದ ಪ್ರೇರಿಸಲ್ಪಡುತ್ತವೆಯಾಗಿ 'ಈರ' ಎನಿಸಿವೆ. ಒಟ್ಟಿನಲ್ಲಿ ಜೀವನಿಗೆ ಹಿಂಸಾಕಾರಣವು, ಭಗವತ್ಪ್ರೇರಿತವೂ ಆಗಿರುವುದರಿಂದ ಪ್ರಕೃತ್ಯಾದಿಗಳು ಶರೀರಶಬ್ದಾರ್ಥವಾಗಿವೆಯೆಂದು ತಿಳಿಯಬೇಕು.

2. 'ಕ್ಷೀಯತೇ= ಸ್ಥೀಯತೇಽತ್ರ ಭಗವತೇತಿ ಕ್ಷೇತ್ರಂ' ಎಂದರೆ ಭಗವಂತನ ನಿವಾಸ ಸ್ಥಾನವೇ ಕ್ಷೇತ್ರವು ಪ್ರಕೃತ್ಯಾದಿಗಳು ಭಗವಂತನ ನಿವಾಸಸ್ಥಾನಗಳಾದುದರಿಂದ ಕ್ಷೇತ್ರಪದವಾಚ್ಯವಾಗಿದೆಯೆಂದು ತಿಳಿಯಬೇಕು.

**ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ**
**ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತದ್ಜ್ಞಾನಂ ಮತಂ ಮಮ॥13-3॥**

3. ಕ್ಷೇತ್ರೈಕದೇಶವಾದ ಮನೋಬುದ್ಧೀಂದ್ರಿಯಾದಿಗಳನ್ನು ಜೀವನೂ ತಿಳಿದಿರುವನಾದಕಾರಣ ಅವನನ್ನೂ ಕ್ಷೇತ್ರಜ್ಞನೆನ್ನ ಬಹುದೇ? ಎಂದರೆ ಜೀವನು ಕ್ಷೇತ್ರಜ್ಞನಾಗಲಾರನು; ನಾನೇ (ಭಗವಂತನೇ) ಕ್ಷೇತ್ರಜ್ಞನೆಂದು ಹೇಳುತ್ತಾನೆ:- ಭರತಕುಲೋತ್ಪನ್ನನಾದ ಅರ್ಜುನ! (ಕ್ಷೇತ್ರವೆನಿಸಿರುವ ಪ್ರಕೃತ್ಯಾದಿ ಸಕಲ ಪದಾರ್ಥಗಳಲ್ಲಿಯೂ ನಿಯಾಮಕನಾಗಿದ್ದು ಅವುಗಳ ರಹಸ್ಯವನ್ನೆಲ್ಲಾ ತಿಳಿದವನು ನಾನೇ ಹೊರತು ಜೀವನಲ್ಲ. ಅವನು ಈ ದೇಹೇಂದ್ರಿಯಾದಿಗಳ ಸ್ಥೂಲಜ್ಞಾನಿಯು ಅವುಗಳಲ್ಲಿನ ವಿಶೇಷಗಳನ್ನು ತಿಳಿಯಲಾರನು; ಪ್ರಕೃತ್ಯಾದಿಗಳ ತತ್ವವಂತೂ ಅವನಿಗೆ ಅಜ್ಞಾತವೇ ಸರಿ. ಆದಕಾರಣ) ನನ್ನನ್ನೇ ಕ್ಷೇತ್ರಜ್ಞನೆಂದು ತಿಳಿ. ಈಗ ಹೇಳಿದ, ಮುಂದೆ ಹೇಳುವ ರೀತಿಯಿಂದ ಕ್ಷೇತ್ರಕ್ಷೇತ್ರಜ್ಞರ ಜ್ಞಾನವೇ ನನ್ನ ಸಮೀಚೀನ ತತ್ವಜ್ಞಾನವೆಂದು ನನ್ನ ಅಭಿಮತವು.

**ತತ್ ಕ್ಷೇತ್ರಂ ಯಚ್ಚ ಯಾದೃಕ್ಚ ಯದ್ವಿಕಾರಿ ಯತಶ್ಚ ಯತ್**
**ಸ ಚ ಯೋ ಯತ್ಪ್ರಭಾವಶ್ಚ ತತ್ಸಮಾಸೇನ ಮೇ ಶೃಣು॥13-4॥**

**ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್**
**ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತೈಃ॥13-5॥**

4-5 ಭಗವದಾವಾಸಸ್ಥಾನವಾದುದರಿಂದ ಕ್ಷೇತ್ರ ಪದವಾಚ್ಯವು, ಜೀವನಿಗೆ ದೇಹಕೊಡುವುದರ ಮೂಲಕವಾಗಿ ಹಿಂಸಾಕರವು ಮತ್ತು ಈಶ್ವರಪ್ರೇರಿತವೂ ಆಗಿರುವುದರಿಂದ ಶರೀರಪದವಾಚ್ಯವೂ ಆಗಿರುವ ಪ್ರಕೃತ್ಯಾದಿಗಳು ಎಂತಹ ಸ್ವರೂಪವುಳ್ಳವು? (ಅದರ ಸ್ವರೂಪವು ಎಂತಹುದು?) ಯಾವ ಪ್ರಕಾರಗಳುಳ್ಳವು? (ಅದರ ಪ್ರಕಾರಗಳಾವುವು?) ಯಾವ ವಿಕಾರಗಳನ್ನು ಹೊಂದುವುವು? ಎಂತಹ ಸಮರ್ಥ ಪುರುಷನಿಂದ ಅವು ಪ್ರವರ್ತಿಸುತ್ತವೆ? ಪ್ರವರ್ತಕನು ಮತ್ತು ಕ್ಷೇತ್ರಜ್ಞನೂ ಆಗಿರುವ ಪುರುಷನು ಎಂತಹ ಸ್ವರೂಪವುಳ್ಳವನು? ಎಂತಹ ಅದ್ಭುತ ಸಾಮರ್ಥ್ಯವುಳ್ಳವನು? ಅವೆಲ್ಲವನ್ನೂ=ಕ್ಷೇತ್ರದ ಸ್ವರೂಪ, ಪ್ರಕಾರ, ವಿಕಾರ, ಪ್ರವರ್ತಕ, ಪ್ರವರ್ತಕನ ಸ್ವರೂಪ, ಪ್ರಭಾವಗಳನ್ನು ಸಂಕ್ಷೇಪವಾಗಿ ಹೇಳುವೆನು. ಕೇಳಿ ಅದರಲ್ಲಿ ವಿಶ್ವಾಸವಿಡು! ಆ ಕ್ಷೇತ್ರಾದಿಸ್ವರೂಪಾದಿಗಳು ಋಷಿಗಳಿಂದ ಬಹುಬಗೆಯಾಗಿ ಉಕ್ತವಾಗಿವೆ. ನಾನಾವಿಧ ವೇದಗಳಿಂದ ಪೃಥಕ್ಕಾಗಿ ನಿರೂಪಿಸಲ್ಪಟ್ಟಿವೆ. ಮತ್ತು ಯುಕ್ತಿಯುಕ್ತವಾದ ಬ್ರಹ್ಮಸೂತ್ರಗಳಿಂದ ವಿಚಾರಪೂರ್ವಕವಾಗಿ ನಿರ್ಣಯಿಸಲ್ಪಟ್ಟಿವೆ. ಹೀಗೆ ವಕ್ಷ್ಯಮಾಣವಿಷಯವು ಪರಮಪ್ರಾಮಾಣಿಕವಾದುದರಿಂದ ಶ್ರದ್ಧಾಪೂರ್ವಕವಾಗಿ ಕೇಳು.

**ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ**
**ಇಂದ್ರಿಯಾಣಿ ದಶೈಕಂ ಚ ಪಂಚಚೇಂದ್ರಿಯಗೋಚರಾಃ॥13-6॥**

**6.ಪೃಥಿವೀ-ಜಲ-ತೇಜಸ್ಸು-ವಾಯು-ಆಕಾಶ ಎಂಬ ಪಂಚ ಮಹಾಭೂತಗಳು, ಅಹಂಕಾರತತ್ವ, ಮಹತ್ತತ್ವತ್ವ, ಅಂತಃಕರಣವಿಶೇಷ, ತ್ರಿಗುಣಾತ್ಮಕ ಪ್ರಕೃತಿ, ಶ್ರೋತ್ರ-ತ್ವಕ್-ಚಕ್ಷುಸ್ಸು-ರಸನ-ಘ್ರಾಣ ಈ ಪಂಚಜ್ಞಾನೇಂದ್ರಿಯಗಳು, ವಾಕ್-ಪಾಣಿ-ಪಾದ- ಪಾಯು-ಗುಹ್ಯ ಈ ಪಂಚಕರ್ಮೇಂದ್ರಿಯಗಳು, ಮನಸ್ಸು ಏಕಾದಶೇಂದ್ರಿಯಗಳು ಮತ್ತು ಶ್ರೋತ್ರಾದೀಂದ್ರಿಯ ವಿಷಯಗಳಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧ ಎಂಬ ಐದು ಅರ್ಥಗಳೂ (ಅವುಗಳ 1ಅಭಿಮಾನಿದೇವತೆಗಳೂ) ಕ್ಷೇತ್ರವೆಂದು ಮಹಾಭೂತತ್ವಾದಿ ಪ್ರಕಾರಯುಕ್ತವಾಗಿ ಉದಾಹರಿಸಲ್ಪಟ್ಟಿವೆ.**

1.(ಕ್ಷೇತ್ರ – ಅಭಿಮಾನಿ)

ಆಕಾಶ – ವಿಘ್ನೇಶ; ವಾಯು – ಮರೀಚಿ(ಮುಖ್ಯವಾಯು ಪುತ್ರ); ತೇಜಸ್ಸು -ಅಗ್ನಿ; ಜಲ - ವರುಣ; ಪೃಥಿವೀ – ಧರಾ; ಅಹಂಕಾರತತ್ವ – ಶಿವ; ಮಹತ್ತತ್ವ – ಚತುರ್ಮುಖ ಬ್ರಹ್ಮ; ಬುದ್ಧಿ - ಉಮಾದೇವಿ; ಅವ್ಯಕ್ತ – ಶ್ರೀದೇವಿ; ಮನಸ್ಸು – ಸ್ಕಂದ,ಇಂದ್ರ, ಅನಿರುದ್ಧ; ಶ್ರೋತ್ರ – ಚಂದ್ರ; ತ್ವಕ್ – ವಾಯುಪುತ್ರ (ಮರುತ್); ಚಕ್ಷುಸ್ಸು – ಸೂರ್ಯ; ರಸನ – ವರುಣನ ರೂಪಾಂತರ; ಘ್ರಾಣ - ಅಶ್ವಿನೀದೇವತೆ; ವಾಕ್ – ಅಗ್ನಿ; ಹಸ್ತ - ವಾಯುಸುತು ಮರುತ್; ಪಾದ - ವಿಷ್ಣ್ವಾವಿಷ್ಟ ಶಚೀಸುತ, ಯಜ್ಞಶಂಭುನಾಮಕರು; ಪಾಯು – ಯಮ; ಗುಹ್ಯ – ದಕ್ಷ, ಮನುಗಳು; ಶಬ್ದಾದಿ ಪಂಚಶವಿಷಯ – ಪಂಚ ಶಿವಪುತ್ರರು.

ಅಭಿಮಾನಿ ದೇವತೆಗಳೂ ಸಹ ಭಗವನ್ನಿವಾಸಸ್ಥಾನರಾದ ಕಾರಣ ಕ್ಷೇತ್ರರೆನಿಸುವರು.

**ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ**
**ಏತತ್ ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಂ॥13-7॥**

**7.ಇಚ್ಛೆ, ದ್ವೇಷ, ಸುಖ, ದುಃಖ, ದೇಹ, ಮನೋವೃತಿ, ಧೈರ್ಯ ಇವು (ಮತ್ತು ಇವುಗಳ 1ಅಭಿಮಾನಿದೇವತೆಗಳೂ) ಕ್ಷೇತ್ರವಿಕಾರಗಳೆಂದು ಸಂಕ್ಷೇಪವಾಗಿ ಉದಾಹರಿಸಲ್ಪಟ್ಟಿವೆ.**

1. (ವಿಕಾರ ಅಭಿಮಾನಿಗಳು)

ಇಚ್ಛಾ – ಶ್ರೀ, ಭಾರತಿ; ದ್ವೇಷ-ದುಃಖ – ಕಲಿ,ದ್ವಾಪರ; ಸುಖ – ಮುಖ್ಯವಾಯು, ಧೃತಿ - ಸರಸ್ವತಿ-ಭಾರತಿ; ಚೇತನಾ – ಶ್ರೀದೇವಿ; ದೇಹಾಭಿಮಾನ- ಬೇರೆ ಚೇತನರು.

**ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾಂತಿರಾರ್ಜವಂ**
**ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ॥13-8॥**

**ಇಂದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ**
**ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಂ॥13-9॥**

**ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು**
**ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು॥13-10॥**

| |
|---|
| ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ<br>ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ॥13-11॥ |
| ಅಧ್ಯಾತ್ಮ ಜ್ಞಾನನಿತ್ಯತ್ವಂ ತತ್ವಜ್ಞಾನಾರ್ಥದರ್ಶನಂ<br>ಏತದ್ಜ್ಞಾನಮಿತಿ ಪ್ರೋಕ್ತಮಜ್ಞಾನಂ ಯದತೋಽನ್ಯಥಾ॥13-12॥ |

8-12 ಪ್ರತಿಜ್ಞಾತವಾದ ಆರು ವಿಷಯಗಳಲ್ಲಿ ಮೊದಲನೆಯ ಮೂರು ವಿಷಯಗಳು ನಿರೂಪಿಸಲ್ಪಟ್ಟುವು. "ಸ ಚ ಯೋ ಯತ್ಪ್ರಭಾವಶ" ಎಂಬುದರಿಂದ ಪ್ರತಿಜ್ಞಾತವಾದ ಜ್ಞೇಯಸ್ವರೂಪ ಮತ್ತು ಅವನ ಪ್ರಭಾವವನ್ನು "ಜೇಯಂ ಯತ್ತತ್ಪ್ರವಕ್ಷಾಮಿ" 13. ಇತ್ಯಾದಿ ಗ್ರಂಥದಿಂದ ನಿರೂಪಿಸುವವನಾಗಿ, ಅದು ಬುಧ್ಯಾರೂಢವಾಗುವುದಕ್ಕಾಗಿ ಮೊದಲು ಜ್ಞೇಯ ಭಗವದ್ಜ್ಞಾನಸಾಧನೆಗಳನ್ನು ನಿರೂಪಿಸುತ್ತಾನೆ:- 1. ಆತ್ಮಸ್ತುತಿ ಮಾಡಿಕೊಳ್ಳದೇ ಇರುವುದು, 2. ತಾನು ಅಲ್ಪನೆಂದು ತಿಳಿದಿದ್ದರೂ ಮಹಾತ್ಮನೆಂದು ಪ್ರದರ್ಶಿಸುವುದು ದಂಭವು; ಅದಿಲ್ಲದಿರುವುದು ಅಧಂಭಿತ್ವವು, 3. ಅಹಿಂಸೆ, 4. ಸಹನಶಕ್ತಿ, 5. ಮನೋವಾಕ್ಕಾಯ ಕರ್ಮಗಳು ಪರಸ್ಪರ ವಿರುದ್ಧವಾಗಿ ಸನ್ಮಾರ್ಗದಲ್ಲಿ ಒಂದೇ ರೀತಿಯಾಗಿರುವುದು, 6. ಜ್ಞಾನಿಗಳ ಸೇವೆ, 7. ಬಾಹ್ಯಾಂತರಶುದ್ಧಿಗಳು,(ಮೃತ್ತಿಕಾಶೌಚ-ದಂತಧಾವನ-ಸ್ನಾನಾದಿ ಗಳಿಂದ ಬಾಹ್ಯಶುದ್ಧಿಯಾಗುವುದು, ರಾಗಾದಿದೋಷವನ್ನು ದೂರಮಾಡುವುದರಿಂದ ಮನಸ್ಸು ಶುದ್ಧವಾಗುವುದು ಅದೇ ಆಂತರಶುದ್ಧಿಯು) 8. ಭಯಾದಿಗಳಿಂದ ಸ್ವಧರ್ಮವನ್ನು ಬಿಡದಿರುವುದು, 9. ಮನಸ್ಸಿನ ವಿಶೇಷನಿಗ್ರಹ, 10. ಶಬ್ದಾದಿವಿಷಯಗಳನ್ನು ಬಯಸದಿರುವಿಕೆ, (ವೈರಾಗ್ಯ) 11. ಇಲ್ಲದಿರುವ ಗುಣವು ತನ್ನಲ್ಲಿದೆಯೆಂಬ ಮೋಹರಾಹಿತ್ಯ, 12. ಜನನ, ಮರಣ, ಮುಪ್ಪು, ರೋಗ ಇವುಗಳಿಂದಾಗುವ ದುಃಖವೆಂಬ ದೋಷವನ್ನು ಪ್ರತಿಕ್ಷಣದಲ್ಲಿಯೂ ಸ್ಮರಿಸಿಕೊಳ್ಳುವುದು, 13. ದಾರಾಪತ್ಯಾದಿಗಳಲ್ಲಿ ಅಭಿಮಾನವಿಲ್ಲದಿರುವಿಕೆ, 14. ಅತಿಪಕ್ವಸ್ನೇಹಪರಿತ್ಯಾಗ, 15. ಇಷ್ಟ ವಿಷಯಗಳು ಲಭಿಸಿದಾಗ, ಅನಿಷ್ಟ ವಿಷಯಗಳು ಬಂದಾಗಲೂ ಸಹ ಹರ್ಷವಿಷಾದಗಳನ್ನು ಹೊಂದದೆ ಯಾವಾಗಲೂ ಒಂದೇ ಬಗೆಯಾದ ಮನೋಭಾವವನ್ನು ಹೊಂದಿರುವುದು,16. ರಮಾಬ್ರಹ್ಮಾದಿಗಳನ್ನು ಸ್ವತಂತ್ರರೆಂದು ತಿಳಿಯದೆ ನಾನೊಬ್ಬನೇ (ಶ್ರೀಕೃಷ್ಣನೊಬ್ಬನೇ) ಸ್ವತಂತ್ರನೆಂದರಿತು, ಇತರರಲ್ಲಿಲ್ಲದ ಅಸಾಧಾರಣವಾದ ಭಕ್ತಿಯನ್ನು ನನ್ನಲ್ಲಿ ಮಾಡುವುದು, 17. ಅಯೋಗ್ಯ ಜನಸಂಪರ್ಕವಿಲ್ಲದ ಸ್ಥಳದಲ್ಲಿರುವಿಕೆ, 18.ಅಯೋಗ್ಯ ಜನ ಸಂಘದಲ್ಲಿ ಸೇರಲಾಸಕ್ತಿರಾಹಿತ್ಯವು, 19.ಪರಮಾತ್ಮನ ಜ್ಞಾನದಲ್ಲಿ ದೃಢನಂಬಿಕೆ,

**20.**ಭಗವದಪರೋಕ್ಷಜ್ಞಾನಕ್ಕಾಗಿ ಶಾಸ್ತ್ರಾವಮರ್ಶನೆ ಎಂಬ ಈ ಇಪ್ಪತ್ತು ಧರ್ಮಗಳು ಜ್ಞಾನಸಾಧನಗಳೆಂದು ಉಕ್ತವಾಗಿದೆ. ಇದಕ್ಕೆ ವಿರುದ್ಧವಾದುದೆಲ್ಲವೂ ಜ್ಞಾನಸಾಧನವಲ್ಲ.

ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಞಾತ್ವಾಮೃತಮಶ್ನುತೇ
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ॥**13-13**॥

ಸರ್ವತಃ ಪಾಣಿಪಾದಂ ತತ್ಸರ್ವತೋಕ್ಷಿಶಿರೋಮುಖಂ
ಸರ್ವತಶ್ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ॥**13-14**॥

ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಂ
ಆಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ॥**13-15**॥

ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್॥**13-16**॥

ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಂ
ಭೂತಭರ್ತೃ ಚ ತಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥**13-17**॥

ಜ್ಯೋತಿಷಾಮಪಿ ತಜ್ಯೋತಿಸ್ತಮಸಃ ಪರಮುಚ್ಯತೇ
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಮ್॥**13-18**॥

**13-18.** ಭಗದ್ಜ್ಞಾನಸಾಧನವನ್ನು ಹೇಳಿ "ಸ ಚ ಯೋ ಯತ್ಪ್ರಭಾವಶ್ಚ"= ಕ್ಷೇತ್ರಜ್ಞನು ಯಾರು? ಆತನ ಪ್ರಭಾವವೆಂತಹುದು? ಎಂಬುದಾಗಿ ಪ್ರತಿಜ್ಞೆ ಮಾಡಿರುವ ಜ್ಞೇಯಸ್ವರೂಪವನ್ನೂ, ಆತನ ಪ್ರಭಾವವನ್ನೂ ಸಹ ಹೇಳುತ್ತಾನೆ:- ಪಾರ್ಥ! ಜ್ಞೇಯವಸ್ತುವನ್ನು ಚೆನ್ನಾಗಿ ಹೇಳುವೆನು ಕೇಳು! ಉಕ್ತ ಸಾಧನಗಳನ್ನೆಲ್ಲಾ ಮಹಾಪ್ರಯಾಸದಿಂದ ಸಂಪಾದಿಸಿಯಾದರೂ ಅದನ್ನು ತಿಳಿದುಕೊಳ್ಳುವುದರಿಂದ ಮಹಾಫಲವೇನು? ಎಂದರೆ, ಆ ವಸ್ತು ಜ್ಞಾನವು ಸಾಮಾನ್ಯವಲ್ಲ. ಅದನ್ನು ತಿಳಿದುಬಿಟ್ಟರೆ ಮೋಕ್ಷವೇ ದೊರೆಯುವುದು. ಆದಕಾರಣ ಎಷ್ಟೇ ಪ್ರಯಾಸವಾಗಲಿ ಅದನ್ನು ಸಾಕ್ಷಾತ್ತಾಗಿ ತಿಳಿಯಲೇಬೇಕು ಅಂತಹ ಜ್ಞೇಯನಾದ ಕ್ಷೇತ್ರಜ್ಞನು ಯಾರು? ಎಂದರೆ ಪರಬ್ರಹ್ಮನಾದ ನಾನೇ ಆಗಿರುವನು. ಆತನ ಪ್ರಭಾವವೇನೆಂದರೆ:- ಅವನು ಪ್ರಾಕೃತದೇಹೇಂದ್ರಿಯಗುಣಕರ್ಮಾದಿರಹಿತನು. ಅವನು ಕಾರ್ಯ(ಹುಟ್ಟುವ)ವಸ್ತುಗಳಲ್ಲಿಯೂ ಕಾರಣವಸ್ತುಗಳಲ್ಲಿಯೂ ಸೇರಿದವನಲ್ಲ. ಕಾರ್ಯಕಾರಣ ವಿಲಕ್ಷಣನು ಎಂಬುದಾಗಿ ಶ್ರುತಿಯಲ್ಲಿ

ಉಕ್ತವಾಗಿದೆ. ಹೇಗೆಂದರೆ; ಪರಬ್ರಹ್ಮನು ಸರ್ವಾವಯವಗಳಲ್ಲಿಯೂ ಹಸ್ತಪಾದಗಳ ಶಕ್ತಿಯುಳ್ಳವನು; ಕಣ್ಣು-ತಲೆ-ಮುಖಗಳು ಮಾಡುವ ಕೆಲಸಗಳನ್ನು ಇತರ ಅವಯವಗಳೆಲ್ಲವೂ ಮಾಡುತ್ತವೆ. ಆತನು ಸರ್ವಾವಯವಗಳಲ್ಲಿಯೂ ಹಸ್ತಪಾದಗಳ ಶಕ್ತಿಯುಳ್ಳವನು; ಕಣು-ತಲೆ-ಮುಖಗಳು ಮಾಡುವ ಕೆಲಸಗಳನ್ನು ಇತರ ಅವಯವಗಳೆಲ್ಲವೂ ಮಾಡುತ್ತವೆ. ಆತನು ಸರ್ವಾವಯಗಲ್ಲಿಯೂ ಶ್ರೋತ್ರೇಂದ್ರಿಯ ಶಕ್ತಿಯುಳ್ಳವನು. ಜಗತ್ತಿನಲ್ಲಿ ಸಕಲ ವಸ್ತುಗಳನ್ನೂ ವ್ಯಾಪಿಸಿರುವನು. (ಪರಬ್ರಹ್ಮನು ಸರ್ವೇಂದ್ರಿಯ ವಿಷಯಗಳನ್ನೂ ಒಂದೊಂದು ಇಂದ್ರಿಯದಿಂದಲೇ ಗ್ರಹಿಸಲು ಸಮರ್ಥನು ಹಾಗೆಯೇ ಭಗವಂತನ ಒಂದೊಂದು ಇಂದ್ರಿಯವೂ ತನ್ನ ಮತ್ತು ಇತರೇಂದ್ರಿಯಗಳ ಕರ್ಮವನ್ನೆಲ್ಲಾ ಮಾಡಲು ಸಾಮರ್ಥ್ಯವುಳ್ಳದು. ಅವನು ಸರ್ವತ್ರ ವ್ಯಾಪ್ತನು. ಇನ್ನೂ ಮುಂದಿನ ಶ್ಲೋಕದಲ್ಲಿ ಹೇಳುವ ಮಹಿಮೋಪೇತನು. ಅಂತಹ ಶಕ್ತಿಯು ಇತರರಾರಿಗೂ ಇಲ್ಲ. ಆದುದರಿಂದ ಅವನು ಇತರ ಸರ್ವವಿಲಕ್ಷಣನೆಂದು ಭಾವ. ಮತ್ತು ಅವನು ಸಕಲೇಂದ್ರಿಯಗಳನ್ನೂ, ಶಬ್ದಾದಿಗುಣಗಳನ್ನೂ ತಿಳಿದವನು ಮತ್ತು ಇತರರಿಗೆ ತಿಳಿಸಿಕೊಡುವವನು. ಇತರರಂತೆ ಸ್ವರೂಪಭಿನ್ನವಾದ ಪ್ರಾಕೃತೇಂದ್ರಿಯಗಳಿಲ್ಲವಾದಕಾರಣ ಸರ್ವೇಂದ್ರಿಯರಹಿತನು; ನಿರ್ಲೇಪನು, ಸಾರಭೋಕ್ತನು. ಆಥವಾ ಸರ್ವಸಂಹಾರಕನು, ಸತ್ವಾದಿ ಪ್ರಾಕೃತಗುಣಶೂನ್ಯನು ಸಕಲಕಲ್ಯಾಣಗುಣಭೋಕ್ತನು. ಸರ್ವ ಪ್ರಾಣಿಗಳ ಒಳಗೂ ಹೊರಗೂ ಪರಬ್ರಹ್ಮನು ಇರುತ್ತಾನೆ. ಅವನು ವ್ಯತ್ಯಾಸಹೊಂದದೆ ಒಂದೇಬಗೆಯಾಗಿರುವುದರಿಂದ ಅಚರನು; ಎಲ್ಲಾ ಕಡೆಯೂ ಸಂಚಾರಮಾಡುವುದರಿಂದ ಚರನು, [1]ಅಪ್ರತಿಘವಸ್ತುವಾದುದರಿಂದ ಇಂದ್ರಿಯಾಗೋಚರನು. ಅವನು ಸರ್ವಗತನಾದುದರಿಂದ ದೂರದಲ್ಲಿಯೂ ಸಮೀಪದಲ್ಲಿಯೂ ಸಹ ಇರುವನು. ಪರಬ್ರಹ್ಮನು ಭಿನ್ನ ಭಿನ್ನ ಪ್ರಾಣಿಗಳಲ್ಲಿ ತಾನು ಭೇದರಹಿತನಾಗಿದ್ದರೂ ಅಜ್ಞಾನಿಗಳಿಗೆ ಅಲ್ಲಲ್ಲಿ ಭಿನ್ನನಂತೆ ತೋರುತ್ತಿರುವನು. ಅವನೇ ಪ್ರಾಣಿಗಳನ್ನು ಧರಿಸಿರುವವನು, ಪೋಷಣಮಾಡುವವನು, ಪ್ರಳಯ ಕಾಲದಲ್ಲಿ ಸರ್ವಭಕ್ಷಕನ್ನು ತಿರುಗಿ ಸೃಷ್ಟಿ ಕಾಲದಲ್ಲಿ ಸರ್ವೋತ್ಪಾದಕನು, ಮತ್ತು ಜ್ಞೇಯ ಪರಬ್ರಹ್ಮನು, ಸೂರ್ಯಾದಿಗಳಿಗೂ ಪ್ರಕಾಶಶಕ್ತಿಪ್ರದನು. ಮೂಲಪ್ರಕೃತಿ, ಮೃತ್ಯು, ಅಜ್ಞಾನ ಇವುಗಳನ್ನು ಅತಿಕ್ರಮಿಸಿರುವವನು ಎಂಬುದಾಗಿ ತಮಸಃ ಪರಸ್ತಾತ್ ಇತ್ಯಾದಿ ಶ್ರುತಿಗಳಲ್ಲಿ ಉಕ್ತನಾಗಿರುವನು, ಪ್ರಕಾಶರೂಪನು ತನ್ನಿಂದ ತಿಳಿಯಲ್ಪಡುವವನು, (ಸ್ವಪ್ರಕಾಶನು) ಅಪರೋಕ್ಷಜ್ಞಾನದಿಂದ ಮುಕ್ತಿಯಲ್ಲಿ ಪ್ರಾಪ್ಯನು, ಸಕಲ ಪ್ರಾಣಿಗಳ ಹೃದಯದಲ್ಲಿಯೂ ವಿಶೇಷವಾಗಿ ನೆಲಸಿರುವವನು.

1 ತಾನಿರುವ ಸ್ಥಳದಲ್ಲಿ ಇತರ ವಸ್ತುಗಳಿರುವುದಕ್ಕೂ ಅವಕಾಶಕೊಡುತ್ತ, ಮುಟ್ಟುವುದು, ನೋಡುವುದಕ್ಕೂ ಯೋಗ್ಯವಲ್ಲದ ವಸ್ತುವು ಅಪ್ರತಿಘವೆನಿಸುವುದು,

**ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ**

**ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ॥13-19॥**

19. "ಮಹಾಭೂತಾನಿ" ಇತ್ಯಾದಿ ಗ್ರಂಥದಿಂದ ಕ್ಷೇತ್ರವೂ, "ಇಚ್ಛಾ" ಇತ್ಯಾದಿಯಿಂದ ಕ್ಷೇತ್ರ ವಿಕಾರವೂ, "ಅಮಾನಿತ್ವಂ" ಇತ್ಯಾದಿಗಳಿಂದ ಜ್ಞಾನಸಾಧನವೂ, "ತತ್ವಜ್ಞಾನಾರ್ಥದರ್ಶನಂ" ಎಂಬಲ್ಲಿ ಭಗವದಪರೋಕ್ಷಜ್ಞಾನವೂ, "ಜ್ಞೇಯ" ಇತ್ಯಾದಿಗಳಿಂದ ಜ್ಞಾತವ್ಯ ಕ್ಷೇತ್ರಜ್ಞನೂ ಕೂಡ ಸಂಕ್ಷೇಪವಾಗಿ ನನ್ನಿಂದ ಉಕ್ತವಾಗಿದೆ. ನನ್ನ ಭಕ್ತನು ಈ ಪ್ರಮೇಯಗಳನ್ನು ತಿಳಿದು ನನ್ನಲ್ಲಿ ಸ್ಥಿತಿರೂಪ ಮೋಕ್ಷಾನುಭವಕ್ಕೆ ಯೋಗ್ಯನಾಗುವನು.

**ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ**

**ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್॥13-20॥**

20. ಪರಬ್ರಹ್ಮನು ಪ್ರೇರಕನೆಂಬುದನ್ನು ನಿರೂಪಿಸುವುದಕ್ಕಾಗಿ ಅವನಿಗೆ ಪ್ರೇರ್ಯವಾದ ಪುರುಷಾದಿರೂಪ ಕ್ಷೇತ್ರವನ್ನು ವಿವರಿಸಿ ಹೇಳುತ್ತಾನೆ:- [1]ಪಂಚವಿಂಶತಿ ತತ್ವಾತ್ಮಕವಾದ ಪ್ರಕೃತಿ ಮತ್ತು ಜೀವ ಇವೆರಡೂ ಉತ್ಪರಹಿತವೆಂದು ತಿಳಿ, ಪೂರ್ವೋಕ್ತ ಇಚ್ಛಾದಿವಿಕಾರಗಳು ಮತ್ತು ಸತ್ವರಜಸ್ತಮೋಗುಣಗಳೂ ಪ್ರಕೃತಿಯಿಂದ ಉತ್ಪನ್ನವಾದುವು (ಪ್ರಕೃತಿ ಪರಿಣಾಮ) ಎಂದು ತಿಳಿಯುವವನಾಗು.

**ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ**

**ಪುರುಷಸ್ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ॥13-21॥**

21.ಹೇಗೆಂದರೆ:- ಪ್ರಕೃತಿಯು ಶರೀರೇಂದ್ರಿಯಗಳನ್ನು ಹುಟ್ಟಿಸುವುದರಲ್ಲಿ ಕಾರಣವು. ಎಂದರೆ ಶರೀರೇಂದ್ರಿಯಾದಿಗಳಾಗಿ ಪರಿಣಮಿಸುವುದಕ್ಕೆ ಜಡ ಪ್ರಕೃತಿಯೇ ಮೂಲಕಾರಣವು. ಜೀವನಿಗೆ ಶರೀರೇಂದ್ರಿಯಸಂಬಂಧವುಂಟು ಮಾಡುವುದಕ್ಕೆ ಚೇತನಪ್ರಕೃತಿಯು (ಲಕ್ಷ್ಮೀದೇವಿಯು) ಕಾರಣನೆಂದು ಉಕ್ತವಾಗಿದೆ. ಜೀವನು ಸುಖದುಃಖಗಳನ್ನು ಸ್ವಕೀಯವೆಂದು ಅನುಭವಿಸುವುದಕ್ಕೆ ಪರಮಪುರುಷನೇ ಕಾರಣನು. ಅಥವಾ ಪುರುಷಃ=ಜೀವನು ಸುಖದುಃಖಗಳ ಭೋಗ(ಅನುಭವ)ಕರ್ತನು ಎಂದು ಉಕ್ತವಾಗಿದೆ.

1 ಪೃಥ್ವಿ, ಜಲ, ತೇಜಸ್ಸು, ವಾಯು, ಆಕಾಶ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಶ್ರೋತ್ರ, ತ್ವಕ್, ಚಕ್ಷುಸ್ಸು, ರಸನ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಗುಹ್ಯ, ಮನಸ್ಸು, ಬುದ್ಧಿ, ಅಹಂಕಾರತತ್ವ, ಮಹತ್ತತ್ವ, ಮೂಲಪ್ರಕೃತಿ ಇವೇ ಪಂಚವಿಂಶತಿ (೨೫) ತತ್ವಗಳು.

**ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ಗುಣಾನ್**

**ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು॥13-22॥**

22. ಪ್ರಕೃತಿನಿರ್ಮಿತ ದೇಹೇಂದ್ರಿಯಾದಿ ಸಂಬಂಧದಿಂದ ಜೀವನು ಸುಖದುಃಖಾದಿ ಭೋಕ್ತನು; ಇದಕ್ಕೆ ದೇವದೇವಿಯರು ನಿಯಾಮಕರೆಂದುಕ್ತವಾಗಿರುವುದು ಸರಿಯಲ್ಲ; ದೇಹಾದಿಸಂಬಂಧವು ಮಿಥ್ಯಾಭೂತವಾಗಿರುವುದರಿಂದ ಅದಕ್ಕೆ ದೇವದೇವಿಯರು ಹೇಗೆ ನಿಯಾಮಕರಾದಾರು? ಎಂಬ ಆಕ್ಷೇಪಕ್ಕೆ ಉತ್ತರ ಹೇಳುತ್ತಾನೆ:- ಜೀವನು ಪ್ರಕೃತಿ ನಿರ್ಮಿತ ಶರೀರದಲ್ಲಿದ್ದು ಪ್ರಕೃತಿಜನ್ಯವಾದ ಸುಖದುಃಖಾದಿಗಳನ್ನು ಅನುಭವಿಸುತ್ತಾನೆ. ಇದು ಸರ್ವರಿಗೂ ಅವರವರ ಸಾಕ್ಷ್ಯನುಭವಸಿದ್ಧವಾಗಿದೆ. ಸಾಕ್ಷ್ಯನುಭವವು ಎಂದಿಗೂ ಅಪ್ರಮಾಣವಾಗಲಾರದು ಆದುದರಿಂದ ಸಾಕ್ಷಿಸಿದ್ಧವಾದ ದೇಹಾದಿಸಂಬಂಧವು ಮಿಥ್ಯಯಾಗಲಾರದು; ಸತ್ಯವೇ ಸರಿ, ಈ ಅಭಿಪ್ರಾಯವು "ಹಿ" ಎಂಬ ಶಬ್ದದಿಂದ ಸೂಚಿತವಾಗಿದೆ. ಈ ಜೀವನಿಗೆ (ದೇವಋಷ್ಯಾದಿ) ಉತ್ತಮ ಅಥವಾ ರಾಕ್ಷಸ, ಪಿಶಾಚ, ನಾಯಿ, ನರಿ, ಕುರಿ ಮುಂತಾದ ಅಧಮ ಜನ್ಮಗಳು ಬರುವುದಕ್ಕೆ ಸತ್ವ ರಜಸ್ತಮೋಗುಣಗಳ ಸಂಬಂಧವೇ ಕಾರಣವು.

**ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ**

**ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ಪುರುಷಃ ಪರಃ॥13-23॥**

23. ಜೀವನಿಗೆ ಸಾಧ್ವಸಾಧು ಜನ್ಮಗಳು ಬರುವುದಕ್ಕೆ ಸತ್ವಾದಿಗುಣ ಸಂಗವು ನಿಮಿತ್ತಮಾತ್ರವು; ಭಗವಂತನೇ ಸ್ವತಂತ್ರ ಕಾರಣನೆಂದು ಹೇಳುತ್ತಾನೆ: ಜೀವನಿರುವ ಈ ದೇಹದಲ್ಲಿ ಜೀವಭಿನ್ನನಾದ ಪರಮಾತ್ಮನೂ ಇರುವನು. ಅವನು ಆಯಾಯಾ ಜೀವರ ಯೋಗ್ಯತಾನುಗುಣವಾಗಿ ಅವರನ್ನು ತನ್ನ ಮನಸ್ಸಿಗೆ ಆತಂಕ ಮಾಡಿಕೊಳ್ಳದೆ ಪ್ರೇರಿಸುತ್ತಿರುವನು. ಆದರೂ ಜೀವನಂತೆ ಪುಣ್ಯಪಾಪಗಳ ಲೇಪವನ್ನು ಹೊಂದದಂತೆಯೇ ಅವನ ಸಮೀಪದಲ್ಲಿದ್ದು ಅವನಿಗೂ ತತ್ವಾಭಿಮಾನಿದೇವತೆಗಳಿಗೂ ಸಹ ನಿಯಾಮಕನಾಗಿ ಸರ್ವರನ್ನೂ ನೋಡುತ್ತಿರುವನು. ಅವನೇ ಸರ್ವರನ್ನೂ ಪೋಷಿಸುವವನು, ಸಕಲ ಕರ್ಮಸಾರಭೋಕ್ತನು, ಮಹಾಸಾಮರ್ಥ್ಯವುಳ್ಳವನು, ಪರಮಚೇತನನು, ಪೂರ್ಣಷಡ್ಗುಣನೂ ಎಂದು ಪ್ರಮಾಣಸಿದ್ಧನಾಗಿ ಅಂತರ್ಯಾಮಿಯಾಗಿರುವನು. (ಇದರಿಂದ ಕ್ಷೇತ್ರವೆನಿಸಿದ ಪ್ರಕೃತಿ, ಪ್ರಾಕೃತಾತ್ಮಕವಾದ ಜಡವಸ್ತುವೆಲ್ಲವೂ ಇಲ್ಲಿ ಉಕ್ತವಾದ ಉಪದ್ರಷ್ಟತ್ವಾದಿ ಮಹಾಮಹಿಮೆಯುಳ್ಳ ಪರಮಾತ್ಮನ ಪ್ರೇರಣೆಯಿಂದಲೇ ಪ್ರವರ್ತಿಸುತ್ತದೆ ಎಂದು "ಯತಶ್ಚ ಯತ್"

ಎಂಬುದರಿಂದ ಪ್ರತಿಜ್ಞೆ ಮಾಡಿರುವ 'ಎಂತಹ ಮಹಿಮೋಪೇತನಾದ ಭಗವಂತನು ಪ್ರವರ್ತಕನು' ಎಂಬ ವಿಷಯವು ನಿರೂಪಿಸಲ್ಪಟ್ಟಿತು.)

**ಯ ಏವಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಸ್ಸಹ**
**ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ॥13-24॥**

**24.** ಯಾವಾತನು ಜೀವಪರಮಾತ್ಮರೆಂಬ ದ್ವಿವಿಧಪುರುಷರನ್ನು, ಚೇತನ ಪ್ರಕೃತಿ-ಜಡಪ್ರಕೃತಿಗಳೆಂಬ ಎರಡು ಪ್ರಕೃತಿಗಳನ್ನೂ, ಅದರದರ ಗುಣಗಳ ಸಹಿತವಾಗಿ ತಿಳಿದು ಅವುಗಳನ್ನು ಸಾಕ್ಷಾತ್ಕರಿಸುವನೋ ಅಂತಹ ಪುರುಷನು ಪ್ರಮಾದಾದಿಗಳಿಂದ ಅಮಾರ್ಗ ಪ್ರವೃತ್ತಿಯುಳ್ಳವನಾದರೂ ಮುಕ್ತನೇ ಆಗುವನು; ತಿರುಗಿ ಹುಟ್ಟುವುದಿಲ್ಲ.

**ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ**
**ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ॥13-25॥**

**ಅನ್ಯೇ ತ್ವೇವಮಜಾನಂತಃ ಶ್ರುತ್ವಾಽನ್ಯೇಭ್ಯ ಉಪಾಸತೇ**
**ತೇಽಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ॥13-26॥**

**25-26.** ಉತ್ತಮ, ಮಧ್ಯಮ, ಅಧಮ, ಅಧಮಾಧಮ ಎಂಬುದಾಗಿ ಅಧಿಕಾರಿಗಳು ನಾಲ್ಕು ಬಗೆಯಾಗಿರುವರು. ಅವರಿಗೆಲ್ಲಾ ಪರಮಪುರುಷಾದಿಗಳ ದರ್ಶನವಾಗುವ ಬಗೆಯನ್ನು ವಿವರಿಸುತ್ತಾನೆ:- ಶ್ರವಣಮನನಗಳಿಂದ ತತ್ತ್ವ ನಿರ್ಣಯವನ್ನು ಹೊಂದಿದ ಕೆಲವು ಉತ್ತಮಾಧಿಕಾರಿಗಳು ಧ್ಯಾನಮಾಡಿ ಬುದ್ಧಿಯಿಂದ ಭಗವಂತನನ್ನು ದೇಹದಲ್ಲಿಯೇ ನೋಡುವರು. ಇತರ ಮಧ್ಯಮಾಧಿಕಾರಿಗಳು ವೇದೋಕ್ತ ಭಗವತ್ಸ್ವರೂಪವನ್ನು ತಿಳಿಯುವುದರಿಂದ ಮತ್ತು ಧ್ಯಾನದಿಂದಲೂ ಸಹ ಭಗವಂತನನ್ನು ನೋಡುವರು. (ಧ್ಯಾನಮಾಡಲಶಕ್ತರಾದ ಈ ಮಧ್ಯಮಾಧಿಕಾರಿಗಳು ಪರೋಕ್ಷಜ್ಞಾನವನ್ನು ಸಂಪಾದಿಸಿ ಅನಂತರ ಧ್ಯಾನಸಂಪನ್ನರಾಗಿ ದರ್ಶನಮಾಡುವರೆಂದು ಭಾವ.) ಶ್ರವಣಾದಿರಹಿತರಾದ ಅಧಮಾಧಿಕಾರಿಗಳು ನಿಷ್ಕಾಮಕರ್ಮಾನುಷ್ಠಾನ ಲಬ್ಧ ಭಗವತ್ಪ್ರಸಾದದಿಂದುತ್ಪನ್ನವಾದ ಶ್ರವಣಮನನ ಧ್ಯಾನಗಳಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯುವರು. (ಇದು ನಿಷ್ಪನ್ನ ಕರ್ಮಯೋಗಾನುಷ್ಠಾನಾವಸ್ಥೆಯು. ಈ ಮೂರು ಬಗೆಯ ಅಧಿಕಾರಿಗಳೂ ಸ್ವತಃ ವಿಚಾರಮಾಡಲು ಸಮರ್ಥರೆಂದು ತಿಳಿಯಬೇಕು.) ಸ್ವತಃ ವಿಚಾರಾಸಮರ್ಥರು, ಶಾಸ್ತ್ರಜ್ಞಾನರಹಿತರೂ ಆದ ಅಧಮಾಧಮಾಧಿಕಾರಿಗಳು ಉಕ್ತ ತ್ರಿವಿಧಸಾಧನಗಳಿಂದಲೂ ಪರಮಾತ್ಮನ ದರ್ಶನವನ್ನು

ಸಂಪಾದಿಸಲಶಕ್ತರಾಗಿ ಇತರ ಜ್ಞಾನಿಗಳ ದೆಸೆಯಿಂದ ಶ್ರವಣಪೂರ್ವಕವಾಗಿ ಮನನಮಾಡಿ ಧ್ಯಾನಮಾಡುವರು. ಅನಂತರ ಪರಮಾತ್ಮನನ್ನು ದರ್ಶನಮಾಡುವರು. ಅವರೂ ಸಹ ಅತ್ಯಲ್ಪ ಪ್ರತಿಭಾಶಾಲಿಗಳಾದರೂ ಬಹುಶ್ರವಣಬಲವುಳ್ಳವರಾಗಿ ಸಂಸಾರವನ್ನು ದಾಟುತ್ತಾರೆ.

**ಯಾವತ್ಸಂಜಾಯತೇ ಕಿಂಚಿತ್ಸತ್ವಂ ಸ್ಥಾವರಜಂಗಮಂ**

**ಕ್ಷೇತ್ರ ಕ್ಷೇತ್ರಜ್ಞ ಸಂಯೋಗಾತ್ತದ್ವಿದ್ಧಿ ಭರತರ್ಷಭ ॥13-27॥**

27. ಜೀವನಿಗೆ ನೀಚೋಚ್ಚ ಜನ್ಮಗಳು ಬರುವುದಕ್ಕೆ ಭಗವಂತನೇ ಸ್ವತಂತ್ರ ಕಾರಣನೆಂದು "ಉಪದ್ರಷ್ಟಾ" ಇತ್ಯಾದಿ ಗ್ರಂಥದಿಂದ ಹೇಳಿರುವುದನ್ನು ವಿವರಿಸುತ್ತಾನೆ:- ಅರ್ಜುನ! ಸ್ಥಾವರ ಜಂಗಮಾತ್ಮಕವಾದ ಪ್ರಾಣಿಸಮೂಹವೆಲ್ಲವೂ ಚೇತನಪ್ರಕೃತಿ-ಪರಮಾತ್ಮ ಇವರ ಸಂಬಂಧದಿಂದಲೇ ಹುಟ್ಟುತ್ತವೆ. ಎಂದರೆ ದೇಹಯೋಗವನ್ನು ಹೊಂದುತ್ತವೆಯೆಂದು ತಿಳಿ.

**ಸಮಂ ಸರ್ವೇಷು ಭೂತೇಷು ತಿಷ್ಟಂತಂ ಪರಮೇಶ್ವರಂ**

**ವಿನಶ್ಯತ್ಸವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ॥13-28॥**

28. ಶ್ರೀಹರಿಯು ಸರ್ವಶರೀರಗಳಲ್ಲಿಯೂ ಇರುವನೆಂದು 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು' ಇತ್ಯಾದಿ ಗ್ರಂಥದಿಂದ ಉಕ್ತವಾಗಿದೆ. ಲೋಕದಲ್ಲಿರುವ ಪದಾರ್ಥಗಳಾದರೋ ತಾರತಮ್ಯವುಳ್ಳವುಗಳಾಗಿಯೂ, ನಶ್ವರಗಳಾಗಿಯೂ ಇವೆ. ಅಂತಹವುಗಳಲ್ಲಿರುವ ಹರಿಯ ರೂಪಗಳೂ ಸಹ ತಾರತಮ್ಯೋಪೇತವಾಗಿದ್ದು ಆಶ್ರಯನಾಶದಿಂದ ಅದರಲ್ಲಿರುವ ಭಗವದ್ರೂಪಕ್ಕೆ ನಾಶವು, ದುಃಖಿ ಜೀವನ ಸಹವಾಸದಿಂದ ದುಃಖಪ್ರಾಪ್ತಿಯೂ ಆಗಬೇಕಾಗುವುದು ಎಂಬ ಶಂಕೆಗೆ ಉತ್ತರ ಹೇಳುತ್ತಾನೆ:- ತಾರತಮ್ಯ ಯುಕ್ತವಾದ ಸಕಲಪ್ರಾಣಿಗಳಲ್ಲಿಯೂ ಇರುವ, ಅಚಿಂತ್ಯಾದ್ಭುತಶಕ್ತಿಯುಳ್ಳ ಶ್ರೀಹರಿಯು ಸಮ=ನ್ಯೂನಾಧಿಕಭಾವರಹಿತನು ಅಶೇಷಸದ್ಗುಣೋಪೇತನು ಮತ್ತು ಸುಖದುಃಖಜನನಮರಣಾದಿದೋಷಗಳುಳ್ಳ ಪದಾರ್ಥಗಳಲ್ಲಿದ್ದರೂ ಹರಿಯು ತನ್ನ ಸಾಮರ್ಥ್ಯವಿಶೇಷದಿಂದ ದುಃಖಾದಿದೋಷ ಸಂಪರ್ಕವಾಗದಂತೆಯೇ ಇರುವನು ಎಂಬುದಾಗಿ ಯಾವನು ತಿಳಿಯುವನೋ ಅವನೇ ತತ್ವಜ್ಞಾನಿಯು.

**ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಂ**

**ನ ಹಿನಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂ ಗತಿಂ॥13-29॥**

**29.** ಸಾಮ್ಯಾದಿ ಜ್ಞಾನಕ್ಕೆ ಫಲವನ್ನು ಹೇಳುತ್ತಾನೆ:- ಉಚ್ಚ ನೀಚಗಳಾದ ಬ್ರಹ್ಮಾದಿ ತೃಣಾಂತ ಸಕಲವಸ್ತುಗಳಲ್ಲಿಯೂ ನಿರ್ದೋಷನ್ನು, ಗುಣಪರಿಪೂರ್ಣನೂ ಆಗಿಯೇ ಸಂನಿಹಿತನಾಗಿದ್ದು ಅಂತರ್ಯಾಮಿಯಾಗಿರುವ ಭಗವಂತನನ್ನು ಎಲ್ಲಾ ಕಡೆಯಲ್ಲಿಯೂ ಒಂದೇ ಸಮನಾಗಿ ನಿರ್ದೋಷಾಶೇಷಸದ್ಗುಣಯುಕ್ತನಾಗಿರುವನೆಂದು ತಿಳಿದವನು ತನ್ನ ಬುದ್ಧಿಯಿಂದ ತನಗೆ ನರಕಾದ್ಯನರ್ಥವುಂಟಾಗುವಂತೆ ಮಾಡುವುದಿಲ್ಲ. ಅಂತಹ ಜ್ಞಾನದಿಂದ ಮುಕ್ತಿಯನ್ನೇ ಹೊಂದುವನು.

**ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ**
**ಯಃ ಪಶ್ಯತಿ ತಥಾತ್ಮಾನಮಕರ್ತಾರಂ ಸ ಪಶ್ಯತಿ ॥13-30॥**

**30.** ಈಶ್ವರನು ಜೀವರಿಗೆ ಉತ್ತಮಮಧ್ಯಮಾಧಮದೇಹಗಳನ್ನು ಕೊಡುವುದರಲ್ಲಿ ಸ್ವತಂತ್ರ ಕಾರಣನೆಂದು ಹೇಳಿದುದು ಸರಿಯಷ್ಟೆ. ಸ್ವತಂತ್ರನಾದ ಈಶ್ವರನು ಹೀಗೆ ವಿಷಮಫಲ ಕೊಡಲು ಕಾರಣವೇನು? ಅವನು ಆಯಾ ಜೀವರಕರ್ಮವನು, ಅನುಸರಿಸಿ ವಿಲಕ್ಷಣಫಲದಾತನೆಂದರೆ, ಅವನು ಫಲದಾನದಲ್ಲಿ ಕರ್ಮಾಧೀನವಾಗಿ ನಡೆದುಕೊಂಡುದರಿಂದ ಅಸ್ವತಂತ್ರನಾಗಬೇಕಾಗುತ್ತದೆ; ಈಶ್ವರನು ಕರ್ಮಾಪೇಕ್ಷೆಯಿಲ್ಲದೆ ಫಲದಾಯಕನೆಂದರೆ ಎಲ್ಲರಿಗೂ ಒಂದೇ ರೀತಿಯಾದ ಫಲವನ್ನು ಕೊಡಬೇಕಾಗುವುದು; ಹಾಗೆ ಕೊಡದೆ ವಿಷಮಫಲವನ್ನೇ ಕೊಡುತ್ತಿರುವುದರಿಂದ ಈಶ್ವರನಿಗೆ ವೈಷಮ್ಯಾದಿದೋಷಗಳು ಬರಬೇಕಾಗುತ್ತವೆ. ಆದಕಾರಣ ಈಶ್ವರನು ಸ್ವತಂತ್ರನೆಂಬುದು ಯುಕ್ತವಲ್ಲ; ಅವನಿಗೂ ಇನ್ನೊಬ್ಬ ಕರ್ತನಿರಬೇಕು ಎಂಬ ಶಂಕೆಗೆ ಸಮಾಧಾನ ಹೇಳುತ್ತಾನೆ: ಆಯಾಯಾ ಜೀವರ ಪೂರ್ವಕರ್ಮಗಳನ್ನು ಉದ್ಬೋಧನೆ ಮಾಡಿ ಅದಕ್ಕನುಸಾರವಾಗಿ ಪರಮಾತ್ಮನಿಂದಲೇ ಸಕಲ ಕರ್ಮಗಳೂ ಅವರವರಿಂದ ಮಾಡಿಸಲ್ಪಡುವುವು ಮತ್ತು ಪರಮಾತ್ಮನಿಗೆ ಬೇರೊಬ್ಬ ಕರ್ತನಿಲ್ಲ ಎಂದೂ ಯಾವಾತನು ತಿಳಿಯುತ್ತಾನೆಯೋ ಅವನು ಪರಮಾತ್ಮನನ್ನು ನೋಡುತ್ತಾನೆ:- ಆಥವಾ ಭಗವಂತನು ಸ್ವತಂತ್ರನೆಂದು ತಿಳಿದವನಿಗೆ ಫಲವನ್ನು ಈ ಶ್ಲೋಕದಿಂದ ವಿವರಿಸುತ್ತಾನೆ:- ಈಶ್ವರನು ತನ್ನ ಸ್ವಾಭಾವಿಕೇಚ್ಛಾ ಮಾತ್ರದಿಂದಲೇ ಸ್ವಾಧೀನ ಚೇತನಾಚೇತನ ಕೃತಿಗಳನ್ನು ದ್ವಾರಮಾಡಿಕೊಂಡು, ಆಯಾ ಜೀವರ ಯೋಗ್ಯತಾನುಸಾರವಾಗಿ ಸಕಲಕರ್ಮಗಳನ್ನೂ ಮಾಡಿಸುವನು. (ಜೀವಾತ್ಮನು ಸ್ವತಂತ್ರ ಕರ್ತನಲ್ಲವೆಂದು ಯಾವನು ತಿಳಿಯುವನೋ ಅವನು ಹರಿಯ ಸಾಕ್ಷಾತ್ಕಾರ ಹೊಂದುವನು. ಈಶ್ವರನು ಆಯಾಯಾ ಜೀವರ ಸ್ವರೂಪಯೋಗ್ಯತಾನುಸಾರವಾಗಿ ಕರ್ಮಗಳನ್ನು

ಮಾಡಿಸಿ, ಪೂರ್ವಪೂರ್ವಕರ್ಮಾನುಸಾರವಾಗಿ ಮುಂದಿನ ಕರ್ಮಗಳನ್ನು ಮಾಡಿಸಿ ಅದಕ್ಕೆ ತಕ್ಕಂತೆ ಸುಖದುಃಖಾದಿ ಭಿನ್ನಭಿನ್ನ ಫಲಗಳನ್ನು ಕೊಡುವನು. ಸತ್ಯಸಂಕಲ್ಪನಾದ ಸ್ವಾಮಿಯು ಅವರವರ ಕರ್ಮಕ್ಕೆ ತಕ್ಕ ಫಲಗಳನ್ನು ಕೊಡುವನೆಂದು ಸಂಕಲ್ಪಿಸಿ ಅದರಂತೆಯೇ ನಡೆಯಿಸುವವನಾದ ಕಾರಣ ಕರ್ಮಾನುಸಾರವಾಗಿ ಭಿನ್ನ ಫಲ ಕೊಟ್ಟರೂ ವೈಷಮ್ಯಕ್ಕೆ ಅವಕಾಶವಿಲ್ಲ. ಸಾಧನೆಗೆ ತಕ್ಕ ಫಲದಾನವು ಸಾಮ್ಯವೇ ಹೊರತು ವೈಷಮ್ಯವಲ್ಲ; ಅವನಿಗೆ ಬೇರೊಬ್ಬ ನಿಯಾಮಕನಿಲ್ಲ; ಆದುದರಿಂದ ಸ್ವಾತಂತ್ರ್ಯಭಂಗವೂ ಇಲ್ಲ; ಏಕಾಕಿಯಾಗಿರುವುದಕ್ಕಿಂತಲೂ ಸ್ವಾಧೀನವಾದ ಅನೇಕ ಉಪಕರಣಗಳನ್ನು ಕಲ್ಪಿಸಿಕೊಂಡು ಕಾರ್ಯ ಮಾಡುವುದು ವೈಭವವನ್ನೇ ಸೂಚಿಸುತ್ತದೆ. ಹೀಗೆ ಪರಮಾತ್ಮನು ಸ್ವತಂತ್ರನು ಸರ್ವಕರ್ತನು ಎಂಬುದು ಅವನ ಮಹಾಮಹಿಮೆಯು ವೈಷಮ್ಯಾದಿ ಯಾವ ದೋಷಕ್ಕೂ ಎಡೆಗೊಡುವುದಿಲ್ಲವೆಂದು ಭಾವ.)

**ಯದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ**
**ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ॥13-31॥**

31. ಭಗವಂತನು ಸರ್ವಪ್ರೇರಕನು ಮುಂತಾಗಿ ತಿಳಿಯುವುದು ಮಾತ್ರವೇ ಸಾಲದು; ಅವನ ಸರ್ವಾಧಾರತ್ವಾದಿಗಳನ್ನೂ ತಿಳಿಯಬೇಕೆಂದು ಹೇಳುತ್ತಾನೆ:- ವಿಷ್ಣುವಿನಿಂದಲೂ, ಪರಸ್ಪರವಾಗಿಯೂ ಅತ್ಯಂತ ಭಿನ್ನವಾದ ಪ್ರಾಣಿಸಮೂಹವು ಏಕವಿಷ್ಣ್ವಾಶ್ರಿತವಾಗಿರುವುದೆಂದು ಮತ್ತು ಆ ವಿಷ್ಣುವಿನಿಂದಲೇ ತಾರತಮ್ಯ ಕ್ರಮವಾಗಿ ಪ್ರಾಣಿಗಳ ಉತ್ಪತ್ತಿಯಾಗುವುದೆಂದೂ ಯಾವಾಗ ತಿಳಿಯುತ್ತಾನೆಯೋ ಆಗ ಅಂತಹ ಜ್ಞಾನಿಯು ಪರಬ್ರಹ್ಮನನ್ನು ಹೊಂದುವನು.

**ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಯಮವ್ಯಯಃ**
**ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ॥13-32॥**

32. ನಶ್ವರವಾದ ಸಕಲಪ್ರಾಣಿಗಳಲ್ಲಿದ್ದರೂ ಭಗವಂತನಿಗೆ ನಾಶಾದಿಗಳಿಲ್ಲವೆಂದು ಹೇಳಿರುವುದು ಸರಿಯಲ್ಲ; ಆಶ್ರಯವಾದ ಶರೀರವೇ ಹೋದಮೇಲೆ ಆಶ್ರಿತ ಭಗವಂತನು ನಾಶವಾಗದಿರುವುದು ಹೇಗೆ? ಇತ್ಯಾದಿ ಶಂಕೆಗೆ ಸಮಾಧಾನವನ್ನು ಹೇಳುತ್ತಾನೆ ಅರ್ಜುನ! ಈ ಪರಮಾತ್ಮನು ಸಕಲ ದೇಹಗಳಲ್ಲಿರುವವನಾದರೂ ನಾಶರಹಿತನು. ಏಕೆಂದರೆ:- ಇವನು ಹುಟ್ಟಿದವನಲ್ಲ ಮತ್ತು ಸತ್ವಾದಿ ಪ್ರಾಕೃತ ಗುಣರಹಿತನೂ ಆಗಿರುವನು. (ಲೋಕದಲ್ಲಿ ಸತ್ವಾದಿಗುಣವುಳ್ಳದು ಸಾದಿ=ಹುಟ್ಟುವುದಾಗಿಯೂ, ಹುಟ್ಟಿದುದೆಲ್ಲ ನಾಶಹೊಂದುವುದಾಗಿಯೂ ಕಂಡಿದೆ.

ಪರಮಾತ್ಮನಾದರೋ ತ್ರಿಗುಣಾತೀತನಾಗಿರುವುದರಿಂದ ಅವನಿಗೆ ಹೇಗೂ ಉತ್ಪತ್ತಿನಾಶಗಳು ಉಂಟಾಗಲಾರವು. ಅವನು ಲೋಕವಿಲಕ್ಷಣನೆಂದು ಭಾವ.) ಪರಮಾತ್ಮನ ಕ್ರಿಯೆಯು ಲೌಕಿಕಕ್ರಿಯಾವಿಲಕ್ಷಣವು. ಈ ಅಭಿಪ್ರಾಯದಿಂದಲೇ ಸರ್ವಕರ್ತನಾದರೂ ಅವನು ಕ್ರಿಯಾರಹಿತನು, ಶ್ರಮಚಿಂತಾದಿ ದೋಷಸಂಪರ್ಕಶೂನ್ಯನೂ ಆಗಿರುವನೆಂದು ಉಕ್ತನಾಗಿರುವನು.

ಅಥವಾ "ಸರ್ವಂ ಖಲ್ವಿದಂ ಬ್ರಹ್ಮ, ಪುರುಷ ಏವೇದಂ ಸರ್ವಂ" ಇತ್ಯಾದಿ ಶ್ರುತಿಗಳಿಂದ ವಿಷ್ಣುವು ಚೇತನಾಚೇತನಾತ್ಮಕ ಪ್ರಪಂಚರೂಪಿಯು, ಬೇರೆಯಲ್ಲವೆಂದು ಸಿದ್ಧಿಸುವಕಾರಣ ವಿಷ್ಣು-ಪ್ರಪಂಚಗಳಿಗೆ ಭೇದೋಕ್ತಿಯು ಹೇಗೆ ಕೂಡುತ್ತದೆ ಎಂಬ ಶಂಕೆಗೆ ಸಮಾಧಾನ ಹೇಳುತ್ತಾನೆ:- [ಈ ಪಕ್ಷದಲ್ಲಿ ಶರೀರಸ್ಥ=ಜೀವನು ಎಂದು ಅರ್ಥಮಾಡಬೇಕು. ಈ ಪರಮಾತ್ಮನು ಶರೀರ ಸಂಬಂಧಿ ಸುಖದುಃಖಾದಿ ಭೋಕ್ತನಾಗಿ, ಶರೀರಾಭಿಮಾನಪೂರ್ವಕವಾಗಿ ಅಲ್ಲಿರುವ ಜೀವನಾಗಲಾರನು. ಜಡಸ್ವರೂಪವಂತೂ ಸುತರಾಂ ಆಗುವುದಿಲ್ಲ. ಏಕೆಂದರೆ:- ಪರಮಾತ್ಮನು ದೇಹಯೋಗವೆಂಬ ಉತ್ಪತ್ತಿಯೂ ಇಲ್ಲದವನು; ಸತ್ವಾದಿಗುಣ ಶೂನ್ಯನಾದುದರಿಂದ ದೇಹನಾಶದಿಂದ ನಾಶವಿಲ್ಲದವನು; ಸರ್ವಕರ್ತನು, ಆದರೂ ಕರಣ ಪ್ರಯುಕ್ತ ಪುಣ್ಯಪಾಪಲೇಪಶೂನ್ಯನೂ ಆಗಿರುವನು. ಜೀವನಾದರೋ ಇದಕ್ಕೆ ವಿಪರೀತವಾಗಿ ದೇಹಯೋಗರೂಪ ಉತ್ಪತ್ತಿಯುಳ್ಳವನು, ಸತ್ವಾದಿ ಗುಣವಂತನು, ದೇಹನಾಶದಿಂದ ನಾಶವುಳ್ಳವನು, ಅಸ್ವತಂತ್ರನಾದುದರಿಂದ ಕರ್ತನಲ್ಲ, ಅಧೀನ ಕರ್ತನಾಗಿ ಪುಣ್ಯಪಾಪಲೇಪಯುಕ್ತನೂ ಆಗಿರುವನು. ಹೀಗೆ ಜೀವೇಶ್ವರರು ಪರಸ್ಪರ ವಿರುದ್ಧ ಧರ್ಮವಂತರಾಗಿರುವುದರಿಂದ ಅವರು ಭಿನ್ನರೆಂಬುದೇ ತತ್ವವೆಂದು ತಿಳಿಯಬೇಕು. ಹಾಗಾದರೆ "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಶ್ರುತಿಯು ಅಪ್ರಮಾಣವೇ? ಎಂದರೆ:- ಅಲ್ಲ; ಆ ವಾಕ್ಯದಿಂದ ಮೇಲೆ ಅಭೇದವು ತೋರಿದರೂ ಸರಿಯಾಗಿ ವಿಮರ್ಶಿಸಿದರೆ, ಪರಮಾತ್ಮನು ಸರ್ವಾಂತರ್ಯಾಮಿಯಾಗಿರುವುದರಿಂದ ಸರ್ವಾತ್ಮಕನಾಗಿರುವನೆಂದು ಉಕ್ತನಾಗಿರುವನೆಂಬ ತತ್ವಾರ್ಥವು ತಿಳಿಯಬರುತ್ತದೆ. ಆದುದರಿಂದ ಆ ಶ್ರುತಿಗೆ ಅಭೇದದಲ್ಲಿ ತಾತ್ಪರ್ಯವಿಲ್ಲ, ಭೇದವೇ ಅಭಿಮತವು. ಅಂತೂ ಪರಮಾತ್ಮನಿಗೆ ಉಕ್ತ ಸರ್ವಭೂತವೈಲಕ್ಷಣ್ಯವು ಯುಕ್ತವೆಂದು ತಿಳಿಯಬೇಕು.

**ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ**
**ಸರ್ವತ್ರಾವಸ್ಥಿತೋ ದೇಹೇ ತಥಾತ್ಮಾ ನೋಪಲಿಪ್ಯತೇ॥13-33॥**

| |
|---|
| **33.** ಪರಮಾತ್ಮನಿಗೆ ಲೇಪವಿಲ್ಲವೆಂಬಂಶವನ್ನು ಉದಾಹರಣೆಗಳಿಂದ ಸ್ಪಷ್ಟ ಪಡಿಸುತ್ತಾನೆ:- ಆಕಾಶವು ಧೂಳು ಕೆಸರು ಮುಂತಾದ ಸಕಲ ಸ್ಥಳಗಳಲ್ಲಿ ವ್ಯಾಪಿಸಿದ್ದರೂ ಅದು ಅಪ್ರತಿಘದ್ರವ್ಯ = ನೋಡುವುದಕ್ಕೂ, ಸ್ಪರ್ಶಮಾಡುವುದಕ್ಕೂ ಅಶಕ್ಯವಾದ ದ್ರವ್ಯವಾದುದರಿಂದ ಹೇಗೆ ಆಯಾಯ ಆಶ್ರಯಸ್ಥಳಗಳಲ್ಲಿರುವ ದೋಷ ಸಂಪರ್ಕವನ್ನು ಹೊಂದುವುದಿಲ್ಲವೋ, ಹಾಗೆಯೇ ಸರ್ವವ್ಯಾಪಕನಾದ ಪರಮಾತ್ಮನೂ ಕೂಡ ಜೀವದೇಹದಲ್ಲಿಯೇ ಇದ್ದರೂ ಜೀವಕೃತಕರ್ಮಲೇಪವನ್ನು ಹೊಂದುವುದಿಲ್ಲ. |
| **ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿ<br>ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ॥13-34॥** |
| **34.** ಪರಮಾತ್ಮನು ಕ್ಷೇತ್ರಜ್ಞನೆಂಬುದನ್ನು ಉದಾಹರಣೆಯಿಂದ ಸ್ಪಷ್ಟಪಡಿಸುತ್ತಾನೆ:-ಭಾರತ! ಒಬ್ಬನೇ ಸೂರ್ಯನು ಈ ಸಮಸ್ತ ಪ್ರಪಂಚವನ್ನೂ, ಬೆಳಗುವಂತೆ ಪ್ರಕೃತ್ಯಾದಿ ಸಕಲ ಕ್ಷೇತ್ರಗತನಾದ ಒಬ್ಬ ಪರಮಾತ್ಮನೇ ಸಕಲ ಚೇತನಾಚೇತನ ಪದಾರ್ಥಗಳಲ್ಲಿಯೂ ನಿಂತು ಅವುಗಳನ್ನೆಲ್ಲಾ ಪ್ರಕಾಶಪಡಿಸುವನು. |
| **ಕ್ಷೇತ್ರ ಕ್ಷೇತ್ರಜ್ಞಯೋರೇವಮಂತರಂ ಜ್ಞಾನಚಕುಷಾ<br>ಭೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಂ॥13-35॥** |
| **35.** ಈ ಪ್ರಕಾರವಾಗಿ ಸಕಲ ಪ್ರಪಂಚವೆಂಬ ಕ್ಷೇತ್ರ ಮತ್ತು ಕ್ಷೇತ್ರಜ್ಞನಾದ ಪರಮಾತ್ಮ ಇವೆರಡರ ಭೇದವನ್ನೂ ಮತ್ತು ಭಗವಂತನೇ ಜೀವನಿಗೆ ಗುಣತ್ರಯಾತ್ಮಕ ಪ್ರಕೃತಿಬಂಧದಿಂದ ಮೋಚನೆಯಾಗಿ ಮೋಕ್ಷಸುಖವಾಗುವುದಕ್ಕೆ ಮುಖ್ಯಸಾಧಕನು, ಉಕ್ತ ಅಮಾನಿತ್ವಾದಿಗಳು ಮುಕ್ತಿ ಸಾಧನಗಳು ಎಂಬುದನ್ನೂ ಸಹ ಯಾರು ವಿವೇಕದೃಷ್ಟಿಯಿಂದ ತಿಳಿದು ಸಾಧನ ಸಂಪನ್ನರಾಗುವರೋ ಅಂತಹವರು ಪರಮಾತ್ಮನನ್ನು ಹೊಂದುವರು. |
| ಅರ್ಜುನ! ಈ ಅಧ್ಯಾಯದಲ್ಲಿ ಹೇಳಿರುವ ಪ್ರಕೃತಿಪುರುಷಾದಿ ವಿವೇಕ ಜ್ಞಾನಕ್ಕೆ ಅಮಾನಿತ್ವಾದಿ ಸಾಧನ ಸಂಪಾದನೆಯ ಮೂಲಕವಾಗಿ ಮೋಕ್ಷಪ್ರಾಪ್ತಿಯೇ ಫಲವು. ಆದಕಾರಣ ಈ ಅಧ್ಯಾಯವು ಮಹಾಫಲಪ್ರದವು, ಇದನ್ನು ಬಾರಿ ಬಾರಿಗೂ ಅನುಸಂಧಾನಮಾಡುತ್ತಿರು; ಅದರಿಂದ ನಿನಗೆ ಮಂಗಳವಾಗುವುದು ಎಂಬುದಾಗಿ ಶ್ರೀಕೃಷ್ಣನು ಉಪದೇಶಿಸಿದನು. |

## ಚತುರ್ದ ಶೋಧ್ಯಾಯಃ॥14-[27]॥

"ಬುದ್ಧಿರ್ಯೋಗೇತ್ವಿಮಾಂ ಶೃಣು" 2-39, ಎಂಬ ಪ್ರತಿಜ್ಞಾಪೂರ್ವಕವಾಗಿ ಕಾಮಾದಿಪರಿತ್ಯಾಗಾದ್ಯಂಗಸಹಿತವಾದ ಕರ್ಮಧ್ಯಾನಗಳೆಂಬ ಜ್ಞಾನಸಾಧನವು ಪ್ರಥಮಷಟ್ಕದಲ್ಲಿ ನಿರೂಪಿತವಾಗಿದೆ. ಆ ಸಾಧನೆಗಳನ್ನಾಚರಿಸುವ ಪ್ರಕಾರವೆಂಬ ಇತಿಕರ್ತವ್ಯತಾಂಶವು ಈ ಐದು ಅಧ್ಯಾಯಗಳಲ್ಲಿ ವಿಸ್ತರಿಸಲ್ಪಡುತ್ತದೆ. ಬಂಧ ಸ್ವರೂಪವು ಚೆನ್ನಾಗಿ ತಿಳಿದರೇನೇ ಅದರಲ್ಲಿ 'ಹೇಯತಾಬುದ್ಧಿಯುಂಟಾಗಿ ಅದರ ಪರಿಹಾರಸಾಧನ, ತದಂಗವಾದ ಇತಿಕರ್ತವ್ಯತೆಗಳ ಆಚರಣೆಗಾಗಿ ಅದರ ವಿವರಣೆಯು ಕರ್ತವ್ಯವಾಗುತ್ತದೆ. ಪೂರ್ವಾಧ್ಯಾಯದಲ್ಲಿ "ಕಾರಣಂ ಗುಣಸಂಗೋಽಸ್ಯ" 13-22 ಎಂಬುದರಿಂದ ಬಂಧಕವು ಸತ್ವಾದಿ ಗುಣತ್ರಯಾತ್ಮಕವೆಂದುಕ್ತವಾಗಿದೆ. ಅಲ್ಲಿಯೇ "ಯಾವತ್ಸಂಜಾಯತೇ ಕಿಂಚಿತ್ಸತ್ವಂ" 13-27, ಇತ್ಯಾದಿ ಗ್ರಂಥದಿಂದ ಪ್ರಾಣಿ ಜನನವು ಕ್ಷೇತ್ರಕ್ಷೇತ್ರಜ್ಞ ಸಂಯೋಗದಿಂದಾಗುತ್ತದೆಯೆಂದೂ ಹೇಳಿದೆ. ಈ ವಿಷಯದಲ್ಲಿ ಪ್ರಕೃತಿಯು ಎಂತಹುದು? ಅದರ ಗುಣಗಳಾವುವು? ಎಷ್ಟು? ಎಂತಹವು? ಆ ಗುಣಗಳ ಗುಣಗಳಾವುವು? ಬಂಧ ಪ್ರಕಾರವಾವುದು? ಅದರ ನಿವೃತ್ತಿಗುಪಾಯವೇನು? ಜಗಜ್ಜನಕವಾದ ಕ್ಷೇತ್ರ ಕ್ಷೇತ್ರಜ್ಞ ಸಂಯೋಗವು ಹೇಗೆ? ಎಂಬೀ ವಿಷಯಗಳನ್ನು ಈ ಅಧ್ಯಾಯದಲ್ಲಿ ವಿವರಿಸುತ್ತಾನೆ. ಈ ವಿಷಯಗಳಲ್ಲಿ ಕೆಲವಂಶವು ಹಿಂದೆ ಸಾಮಾನ್ಯವಾಗಿ ಉಕ್ತವಾಗಿದ್ದರೂ ಇಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಡುವುದೆಂದು ತಿಳಿಯಬೇಕು.

ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಂ
ಯಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ॥14-1॥

ಇದಂ ಜ್ಞಾನಮುಪಾಶ್ರಿತ್ಯ ಮಮಸಾಧರ್ಮ್ಯಮಾಗತಾಃ
ಸರ್ಗೇಽಪಿ ನೋಽಪಜಾಯಂತೇ ಪ್ರಲಯೇ ನ ವ್ಯಥಂತಿ ಚ॥14-2॥

**1-2.**ಶೋತೃಗಳಿಗೆ ಆದರವನ್ನು ಹುಟ್ಟಿಸುವ ಸಲುವಾಗಿ ಭಗವಂತನು ಮುಂದೆ ಹೇಳುವ ವಿಷಯಗಳನ್ನು ಪ್ರತಿಜ್ಞೆ ಮಾಡಿ ಸ್ತೋತ್ರಮಾಡುತ್ತಾನೆ:- ವಿಚಾರಪರರೆಲ್ಲರೂ ಯಾವುದನ್ನು ತಿಳಿಯುವುದರಿಂದ ಈ ಸಂಸಾರಬಂಧವಿಮುಕ್ತರಾಗಿ ಮೋಕ್ಷದಲ್ಲಿ ಹೊಂದುವ ಶ್ರೇಷ್ಠ ಸುಖವನ್ನು ಅನುಭವಿಸುವರೋ, ಯಾವುದು ಅವಶ್ಯ ತಿಳಿಯಲ್ಪಡಬೇಕಾದ ವಿಷಯಗಳಲ್ಲಿ ಉತ್ತಮವಿಷಯವೋ, ಅಂತಹ ಉತ್ತಮವಿಷಯವನ್ನು ಚೆನ್ನಾಗಿ ವಿಸ್ತರಿಸಿ ಹೇಳುವೆನು. ಈಗ ನಾನು ಹೇಳುವ ಪ್ರಮೇಯಜ್ಞಾನವನ್ನು ಸಂಪಾದಿಸಿ ಅನೇಕರು ನನ್ನ ಸಾರೂಪ್ಯವೆಂಬ ಮೋಕ್ಷವನ್ನು

ಹೊಂದಿರುವರು. ಅಂತಹವರು ಸೃಷ್ಟಿ ಕಾಲದಲ್ಲಿ ಹುಟ್ಟುವುದಿಲ್ಲ. ಪ್ರಳಯಕಾಲದಲ್ಲಿ ನಾಶಹೊಂದುವುದಿಲ್ಲ. ಶಾಶ್ವತವಾಗಿ ಮುಕ್ತಲೋಕದಲ್ಲಿ ಸುಖವನ್ನು ಅನುಭವಿಸುತ್ತಿರುವರು.

ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಂ

ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ॥14-3॥

ಸರ್ವಯೋನೀಷು ಕೌಂತೇಯ ಮೂರ್ತಯಃ ಸಂಭವಂತಿ ಯಾಃ

ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ಪಿತಾ॥14-4॥

**3-4.** ಅರ್ಜುನ! ಚಿತ್ಪ್ರಕೃತಿ=ರಮಾದೇವಿಯು ನನ್ನ ಭಾರ್ಯೆಯು, ಆ ದೇವಿಯಲ್ಲಿ ನಾನು ಗರ್ಭವನ್ನಿಡುವೆನು, ಎಂದರೆ ನನ್ನ ಉದರದಲ್ಲಿದ್ದ ಪ್ರಾಕೃತ ತತ್ವಾಂಶಯುತರಾದ ಚತುರ್ವಿಂಶತಿ ತತ್ವಾಭಿಮಾನಿದೇವತೆಗಳನ್ನೂ ರೇತಸ್ಸಿನ ರೂಪದಿಂದ ಹೊರಗೆಡವಿ ರಮಾದೇವಿಯ ಉದರದಲ್ಲಿ ಸ್ಥಾಪಿಸುವೆನೆಂದರ್ಥ. ಅಲ್ಲಿ ಸ್ಥಾಪಿಸುವುದರಿಂದ ಸಕಲಪ್ರಾಣಿಗಳಿಗೂ ದೇಹಯೋಗರೂಪವಾದ ಉತ್ಪತ್ತಿಯಾಗುತ್ತದೆ. ಪಾರ್ಥ! ಆದಿಸೃಷ್ಟಿಯಲ್ಲಿ ಮಾತ್ರವೇ ನಾವು ಹೀಗೆ ಉತ್ಪಾದಕರೆಂದು ತಿಳಿಯಬೇಡ; ಯಾವಾಗಲೂ ನಾವಿಬ್ಬರೂ ಕಾರಣರಾಗಿರುವೆವು. ಹೇಗೆಂದರೆ:- ಕೌಂತೇಯ! ದೇವಮನುಷ್ಯ ಪಶುಪಕ್ಷ್ಯಾದಿ ಸಕಲಯೋನಿಗಳಲ್ಲಿಯೂ ಯಾವ ದೇಹಗಳು ಹುಟ್ಟುತ್ತವೆಯೋ ಅವುಗಳಿಗೆಲ್ಲಾ ಮಹಾಲಕ್ಷ್ಮೀದೇವಿಯು ಕ್ಷೇತ್ರರೂಪ ಕಾರಣಳು=ತಾಯಿಯು, ನಾನು ಗರ್ಭಾಧಾನಮಾಡುವ ತಂದೆಯು.

ಸತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿ ಸಂಭವಾಃ

ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಂ॥14-5॥

**5.**ಈಗ ಬಂಧಪ್ರಕಾರವನ್ನು ವಿವರಿಸುತ್ತಾನೆ:- ಮಹಾಪರಾಕ್ರಮಶಾಲಿಯಾದ ಅರ್ಜುನ! ಜಡ ಪ್ರಕೃತಿಯ ಅಂಶಗಳಿಂದ ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳು ಮತ್ತು ಇವುಗಳಿಗೆ ಅಭಿಮಾನಿಗಳಾದ, ಚೇತನ ಪ್ರಕೃತಿಯಿಂದ ಸೃಷ್ಟಿ ಕಾಲದಲ್ಲಿ ವಿಭಕ್ತರಾದ ಶ್ರೀ-ಭೂ-ದುರ್ಗಾದೇವಿಯರೂ ಸಹ ಈ ಪ್ರಾಕೃತ ದೇಹದಲ್ಲಿರುವ ನಾಶರಹಿತ ಮತ್ತು ನಿರ್ವಿಕಾರಸ್ವರೂಪವಾದ ಜೀವಸಮೂಹವನ್ನು ಬಂಧಿಸುತ್ತಾರೆ. ಎಂದರೆ ದೇಹ, ಅದರ ಧರ್ಮಕರ್ಮಾದಿಗಳಲ್ಲಿ "ನಾನು, ನನ್ನದು" ಎಂಬ ಅಭಿಮಾನವನ್ನು ಹುಟ್ಟಿಸಿ ಸುಖ, ದುಃಖ, ಮೋಹ, ಜನನ, ಮರಣ ಮುಂತಾದುವುಗಳಿಗೀಡುಮಾಡುತ್ತಾರೆಂದು ಭಾವ. (ಇಲ್ಲಿ ಸದ್ಗುಣಯುಕ್ತಳಾದುದರಿಂದ ಶ್ರೀದೇವಿಯು ಸತ್ವನಾಮಕಳು, ಸತ್ವಗುಣಾಭಿಮಾನಿಯು

ಭೂದೇವಿಯು ಸೃಷ್ಟ್ಯಾದಿರಂಜನಕಾರಣಳಾದುದರಿಂದ ರಜೋನಾಮಕಳು, ರಜೋಗುಣಾಭಿಮಾನಿಯು. ದುರ್ಗಾದೇವಿಯು ಜೀವರಿಗೆ ಗ್ಲಾನಿಸಂಪಾದಕಳಾದಕಾರಣ ತಮೋ ನಾಮಕಳು, ತಮೋಗುಣಾಭಿಮಾನಿಯು. ಈ ಮೂವರು ದೇವಿಯರೂ ಸಕಲ ಜೀವರಿಗೂ ಬಂಧಕರಾಗಿರುವರು. ಅದರಲ್ಲಿಯೂ ಶ್ರೀದೇವಿಯು ದೇವತೆಗಳಿಗೂ, ಭೂದೇವಿಯು ಮನುಷ್ಯರಿಗೂ, ದುರ್ಗಾದೇವಿಯು ದೈತ್ಯರಿಗೂ ಬಂಧಕರೆಂಬ ವಿವೇಚನೆಯನ್ನು ತಿಳಿಯಬೇಕು.

**ತತ್ರ ಸತ್ತ್ವಂ ನಿರ್ಮಲಾತ್ವಾತ್ಪ್ರಕಾಶಕಮನಾಮಯಂ**
**ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ॥14-6॥**

**ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾ ಸಂಗಸಮುದ್ಭವಂ**
**ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಂ॥14-7॥**

**ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಂ**
**ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ॥14-8॥**

**6-8.** ಶ್ರೀ ಭೂ ದುರ್ಗಾದೇವಿಯರಿಂದ ಮಾಡಲ್ಪಡುವ ದೇವಮನುಷ್ಯ, ದೈತ್ಯರ ಬಂಧನಪ್ರಕಾರವನ್ನು ವಿವೇಚನೆಮಾಡಿ ಹೇಳುತ್ತಾನೆ:- ಆ ಗುಣತ್ರಯ ಅಭಿಮಾನಿತ್ರಯ ಇವರಲ್ಲಿ ಸತ್ವಗುಣ ಮತ್ತು ಅದರ ಅಭಿಮಾನಿಯಾದ ಶ್ರೀ ದೇವಿಯು ಸ್ಪಟಿಕಮಣಿಯಂತೆ ಸ್ವಚ್ಛವಾದುದರಿಂದ ತತ್ವಜ್ಞಾನೋತ್ಪಾದಕವು ವ್ಯಾಧ್ಯಾದ್ಯುಪದ್ರವನಾಶಕವೂ ಆಗಿ ಸುಖ ಮತ್ತು ತತ್ವಜ್ಞಾನಗಳ ಸಂಬಂಧವನ್ನುಂಟುಮಾಡಿ ದೇವಾದಿ ಸಾತ್ವಿಕ ಜನರನ್ನು ಬಂಧಿಸುತ್ತಾರೆ. ಇದು ನನಗೆ ಬೇಕೆಂಬ ಆಶೆ, ವಸ್ತುಗಳಲ್ಲಿ ಅನುರಾಗ ಇವುಗಳಿಗುತ್ಪಾದಕವಾದ ರಜೋಗುಣವು ಮತ್ತು ಅದರ ಅಭಿಮಾನಿನಿಯಾದ ಭೂದೇವಿಯೂ ಸಹ ಸೃಷ್ಟ್ಯಾದಿರಂಜನಸ್ವರೂಪವುಳ್ಳವರೆಂದು ತಿಳಿ, ಕುಂತೀಪುತ್ರ! ಅಂತಹ ಭೂದೇವಿ ರಜೋಗುಣಗಳು ಮನುಷ್ಯನನ್ನು ಕರ್ಮಸಂಬಂಧದಿಂದ ಬಂಧಿಸುವುವು. ಭರತಕುಲಸಂಭೂತನಾದ ಅರ್ಜುನ ಅಜ್ಞಾನಜನಕವಾದ ತಮೋಗುಣವು ಮತ್ತು ಅದರ ಅಭಿಮಾನಿಯಾದ ದುರ್ಗಾದೇವಿಯೂ ಕೂಡ ಸಕಲ ಜೀವರಿಗೂ ಮಿಥ್ಯಾಜ್ಞಾನಜನಕರೆಂದು ತಿಳಿಯುವವನಾಗು. ಆ ಎರಡುಬಗೆಯ ತಮೋಗುಣವೂ ಮನೋವ್ಯಾಕುಲತೆ, ಅಜಾಗರೂಕತೆ, ನಿದ್ರೆ ಇವುಗಳನ್ನುಂಟುಮಾಡಿ ದೈತ್ಯ ಜನರನ್ನು ಬಂಧಿಸುತ್ತದೆ.

**ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ**

**ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ॥14-9॥**

**9.** ಸತ್ತ್ವಾದಿಗುಣಗಳು ಸುಖಾದಿಗಳನ್ನುಂಟುಮಾಡುವುದರಿಂದಲೇ ಬಂಧಕವಾಗುವುವೆಂಬುದನ್ನು ದೃಢಪಡಿಸುತ್ತಾನೆ:- ಸತ್ತ್ವಗುಣ, ಶ್ರೀ ದೇವಿಯೂ ಸಹ ಸುಖಕರ ವಿಷಯದಲ್ಲಿ ಪ್ರವರ್ತಿಸುವಂತೆ ಮಾಡುವರು. ರಜೋಗುಣ, ಭೂದೇವಿಯೂ ಸಹ ಕರ್ಮಗಳಲ್ಲಿ ಪ್ರವರ್ತಿಸುವಂತೆ ಮಾಡುವರು. ತಮೋಗುಣ, ದುರ್ಗಾ ದೇವಿಯೂ ಸಹ ಮನಸ್ಸಿನ ತತ್ತ್ವಜ್ಞಾನಜನನಶಕ್ತಿಯನ್ನು ವಿರೋಧಿಸಿ ಅಧರ್ಮವನ್ನು ಧರ್ಮವೆಂದು ತಿಳಿಸಿ ಆಲಸ್ಯ, ನಿದ್ರೆ ಇವುಗಳಲ್ಲಿ ಪ್ರವರ್ತಿಸುವಂತೆ ಮಾಡುವರು.

**ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ**

**ರಜಃ ಸತ್ತ್ವಂ ತಮಶ್ಚೈವ ತಮಃ ಸತ್ತ್ವಂ ರಜಸ್ತಥಾ॥14-10॥**

**10.**ಪ್ರಕೃತಿಬಂಧವು ಎಲ್ಲರಿಗೂ ಉಂಟು. ಪ್ರಕೃತಿಯಲ್ಲಿ ಯಾವಾಗಲೂ ಗುಣತ್ರಯವು ಇರುತ್ತದೆ. ಅವೆಲ್ಲವೂ ಅದರದರ ಕಾರ್ಯವನ್ನು ಮಾಡಲೇಬೇಕು. ಹೀಗಿರುವಾಗ ಒಬ್ಬೊಬ್ಬರಿಗೆ ಒಂದೊಂದೇ ಗುಣದ ಕಾರ್ಯವಾಗುವ ಬಗೆ ಹೇಗೆ? ಎಂದರೆ, ಹೇಳುತ್ತಾನೆ:- ಭರತಕುಲೋತ್ಪನ್ನನಾದ ಅರ್ಜುನ! ಈಶ್ವರೇಚ್ಛೆಯಿಂದ ಯಾವಾಗ ಸತ್ತ್ವಗುಣವು ಉತ್ಕಟವಾಗಿ ಅಲ್ಪವಾಗಿದ್ದ ರಜಸ್ತಮೋಗುಣಗಳ ಕಾರ್ಯವನ್ನು ಹುಟ್ಟಿಸದಂತೆ ತಡೆದು ತನ್ನ ಕಾರ್ಯವನ್ನುಂಟುಮಾಡುವುದಕ್ಕೆ ಸಮರ್ಥವಾಗುವುದೋ ಆಗ ಸತ್ತ್ವಗುಣದ ಕಾರ್ಯಮಾತ್ರವುಂಟಾಗಿ ಉಪಲಬ್ಧವಾಗುವುದು. ಯಾವಾಗ ದೈವೇಚ್ಛೆಯಿಂದ ರಜೋಗುಣವು ಅಭಿವೃದ್ಧಯಾಗಿ ಸತ್ತ್ವತಮೋಗುಣಗಳ ಶಕ್ತಿಯನ್ನು ಅಡಗಿಸಿ ತಾನೇ ಕಾರ್ಯವನ್ನುಂಟುಮಾಡುವುದೋ ಆಗ ಅಲ್ಲಿ ರಜೋಗುಣದ ಕಾರ್ಯವೇ ಕಾಣುವುದು. ಅಂತೆಯೇ ಈಶ್ವರಸಂಕಲ್ಪದಿಂದ ಎಲ್ಲಿ ಯಾವಾಗ ತಮೋಗುಣವು ಹೆಚ್ಚಾಗಿ ಸತ್ತ್ವ ರಜೋಗುಣಗಳ ಕಾರ್ಯವಾಗದಂತೆ ಮಾಡಿ ತನ್ನ ಶಕ್ತಿಯನ್ನೇ ಬೀರುವುದೋ ಆಗ ಅಲ್ಲಿ ತಮೋಗುಣಕಾರ್ಯವೇ ಆಗಿ ದೃಷ್ಟವಾಗುವುದು. ಹೀಗೆ ಗುಣಗಳ ಪ್ರಾಚುರ್ಯಾಪ್ರಾಚುರ್ಯದಿಂದ ಒಂದೊಂದರ ಕಾರ್ಯಮಾತ್ರವೇ ಆಗುತ್ತದೆಯೆಂದು ತಿಳಿಯಬೇಕು. ಈ ರೀತಿ ಕಾರ್ಯಶಕ್ತಿ ಪ್ರತಿಬಂಧವು ಸತ್ತ್ವಾದಿಗುಣಗಳಿಗೆ ಮಾತ್ರವೇ ಅನ್ವಯಿಸತಕ್ಕುದು. ಅಭಿಮಾನಿ ದೇವತೆಗಳು ಈ ವಿಷಯದಲ್ಲಿ ಉದಾಸೀನರಾಗಿರುವರೆಂದು ತಿಳಿಯಬೇಕು.

**ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ**

**ಜ್ಞಾನಂ ಯದಾ ತದಾ ವಿದ್ಯಾದ್ವಿವೃದ್ಧಂ ಸತ್ತ್ವಮಿತ್ಯುತ॥14-11॥**

11. ಸತ್ವಾದಿಗುಣಗಳು ವೃದ್ಧಿಯಾಗಿರುವುದನ್ನು ತಿಳಿಯುವುದು ಹೇಗೆ? ಎಂದರೆ ಹೇಳುತ್ತಾನೆ:- ಈ ದೇಹದಲ್ಲಿನ ಶ್ರೋತ್ರಾದೀಂದ್ರಿಯ ದ್ವಾರಗಳಲ್ಲೆಲ್ಲಾ (ಶಬ್ದ ಜ್ಞಾನಾದಿರೂಪ ಪ್ರಕಾಶವು ಮತ್ತು ಸುಖಾದಿಗಳೂ ಸಹ ಯಾವಾಗ ಹುಟ್ಟುತ್ತವೆಯೋ ಆಗ ಸತ್ವಗುಣವು ಅಭಿವೃದ್ಧವಾಗಿದೆಯೆಂದು ತಿಳಿಯಬೇಕು.

**ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ**

**ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ॥14-12॥**

12. ಭರತಕುಲಶೇಖರನೇ! ಲೋಭ=ಧನಾದಿಗಳನ್ನು ಇತರರಿಗೆ ಕೊಡಬಾರದೆಂಬ ಅಭಿಲಾಷೆಯು, ವ್ಯರ್ಥ ಪ್ರಯತ್ನವು, ಕಾಮ್ಯಕರ್ಮಗಳ ಆಚರಣೆಯು, ಮನಶ್ಶಾಂತಿಯಿಲ್ಲದಿರುವುದು, ಇಲ್ಲದಿರುವುದನ್ನಾಶಿಸುವುದು, ಇವುಗಳು ರಜೋ ಗುಣವು ವೃದ್ಧಿಯಾದಾಗ ಹುಟ್ಟುತ್ತವೆ. ಇವುಗಳಿಂದ ರಜೋಗುಣಾಭಿವೃದ್ಧಿಯನ್ನು ತಿಳಿಯಬೇಕು.

**ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ**

**ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ॥14-13॥**

13. ಪಾರ್ಥ! ತಮೋಗುಣವು ವೃದ್ಧಿಯಾದಾಗ ಶೋತ್ರಾದಿಗಳಿಂದ ಶಬ್ದಾದಿಜ್ಞಾನವಾಗದಿರುವುದು, ನಿರುದ್ಯೋಗ, ಮನಸ್ಸಿನ ಅಸ್ವಸ್ಥತೆ, ಮಿಥ್ಯಾಜ್ಞಾನ ಇವುಗಳು ಹುಟ್ಟುತ್ತವೆ. ಈ ಚಿಹ್ನೆಗಳು ತೋರಿದಾಗ ತಮೋಗುಣವು ವೃದ್ಧಿಯಾಗಿದೆಯೆಂದು ತಿಳಿಯಬೇಕು.

**ಯದಾ ಸತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್**

**ತದೋತ್ತಮವಿದಾಂ ಲೋಕಾನಮಲಾನ್ ಪ್ರತಿಪದ್ಯತೇ॥14-14॥**

14. ಸತ್ವಾದಿ ಆಯಾ ಗುಣಗಳು ವೃದ್ಧಿಯಾದಾಗ ಮೃತರಾದವರಿಗಾಗುವ ಭಿನ್ನ ಗತಿಗಳನ್ನು ವಿವರಿಸುತ್ತಾನೆ:- ಸತ್ವಗುಣವೃದ್ಧಿಯಾಗಿರುವ ಕಾಲದಲ್ಲಿ ಜೀವನು ಮೃತನಾದರೆ ಅವನು ಬ್ರಹ್ಮಜ್ಞಾನಿಗಳ ಕುಲದಲ್ಲಿ ನಿರ್ಮಲವಾದ ದೇಹವನ್ನು ಹೊಂದುವನು. (ಸಾತ್ವಿಕ ಕುಲದಲ್ಲಿ ಜನ್ಮವೆತ್ತುವನೆಂದು ಭಾವ)

**ರಜಸಿ ಪ್ರಲಯಂ ಗತ್ವಾ ಕರ್ಮಸಂಗಿಷು ಜಾಯತೇ**

**ತಥಾ ಪ್ರಲೀನಸ್ತಮಸಿ ಮೂಢಯೋನಿಷು ಜಾಯತೇ॥14-15॥**

15. ರಜೋಗುಣವು ಹೆಚ್ಚಾದಾಗ ಮೃತನಾದರೆ ಕಾಮ್ಯಕರ್ಮಿಗಳ ಕುಲದಲ್ಲಿ ಹುಟ್ಟುತ್ತಾನೆ. ಹಾಗೆಯೇ ತಮೋಗುಣವು ಅಭಿವೃದ್ಧಿ ಹೊಂದಿದಾಗ ಮೃತನಾದವನು ದೈತ್ಯರ ಕುಲದಲ್ಲಿ ಹುಟ್ಟುತ್ತಾನೆ.

**ಕರ್ಮಣಃ ಸುಕೃತಸ್ಯಾಹುಃ ಸಾತ್ವಿಕಂ ನಿರ್ಮಲಂ ಫಲಂ**

**ರಜಸಸ್ತು ಫಲಂ ದುಃಖಮಜ್ಞಾನಂ ತಮಸಃ ಫಲಂ॥14-16॥**

16. ಜ್ಞಾನಿಗಳ ಕುಲದಲ್ಲಿ ಹುಟ್ಟ ವಿಹಿತರೀತಿಯಿಂದ ಮಾಡಲ್ಪಟ್ಟ ಕರ್ಮಕೆ ಸತ್ವಗುಣಮಯವು, ದುಃಖಸಂಪರ್ಕರಹಿತವೂ ಆದ ಫಲವೂ, ರಾಜಸಕರ್ಮಗಳಿಗೆ ದುಃಖಮಿಶ್ರಸುಖವೆಂಬ ಫಲವೂ, ತಾಮಸಕರ್ಮಕ್ಕೆ ಅಜ್ಞಾನದುಃಖಗಳೆಂಬ ಫಲವೂ ಆಗುವುದೆಂದು ಹೇಳುತ್ತಾರೆ.

**ಸತ್ವಾತ್ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ**

**ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವ ಚ॥14-17॥**

17. ಉಕ್ತ ಸಾತ್ವಿಕಾದಿಫಲವನ್ನೇ ಸ್ಪಷ್ಟ ಪಡಿಸುತ್ತಾನೆ:- ಸತ್ವಗುಣದಿಂದ ಪರಾಪರತತ್ವಜ್ಞಾನವೂ, ರಜೋಗುಣದಿಂದ ಸ್ವರ್ಗಾದಿ ನಶ್ವರಫಲದಲ್ಲಿ ಆಸಕ್ತಿಯ ಹುಟ್ಟುತ್ತದೆ. ತಮೋಗುಣದಿಂದ ಮನಸ್ಸಿನ ಅನವಧಾನತೆ ಮತ್ತು ಮಿಥ್ಯಾಜ್ಞಾನಗಳುಂಟಾಗುತ್ತವೆ. ಅಜ್ಞಾನವೂ ಉಂಟಾಗುವುದು.

**ಊರ್ಧ್ವಂ ಗಚ್ಛಂತಿ ಸತ್ವಸ್ಥಾ ಮಧ್ಯೆ ತಿಷ್ಠಂತಿ ರಾಜಾಸಾಃ**

**ಜಘನ್ಯ ಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ॥14-18॥**

18. ಜ್ಞಾನಲೋಭ ಪ್ರಮಾದಾದಿಗಳಿಂದಾಗುವುದೇನು? ಎಂದರೆ, ಹೇಳುತ್ತಾನೆ:- ಸಾತ್ವಿಕರು ಜ್ಞಾನದಿಂದ ಜನೋಲೋಕಾದಿಗಳಿಗೆ ಹೋಗುವರು. ಕಾಮ್ಯಕರ್ಮಪರರಾದ ರಾಜಸರು ಸ್ವರ್ಗಾದಿಗಳಲ್ಲಿ ವಾಸಮಾಡುವರು. ತಮೋಗುಣ ಪರಿಣಾಮವಾದ ಅಜ್ಞಾನದಿಂದ ಯುಕ್ತರಾದ ತಾಮಸರು ನರಕಕ್ಕೆ ಹೋಗುವರು.

**ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ**

**ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ॥14-19॥**

19. ಈ ರೀತಿಯಾಗಿ ವಿವೇಚನೆಯಿಂದ ಗುಣತ್ರಯವೂ, ಅವುಗಳ ಬಂಧಕತ್ವಪ್ರಕಾರವೂ ಆ ಗುಣಗಳಿಂದ ಸಾಕ್ಷಾತ್ಪರಂಪರೆಯಾಗಿ ಲಭಿಸುವ ಫಲಗಳೂ ಸಹ ಉಕ್ತವಾದುವು. ಹೀಗೆ ಗುಣತ್ರಯವೇ ಅರ್ಥಾನರ್ಥಫಲಪ್ರದವಾಗುವುದಾದರೆ. ಆದೇ ಸರ್ವನಿಯಾಮಕವು; ಅದಕ್ಕಿಂತ

ಉತ್ತಮವಸ್ತುವು ಬೇರೆಯಿಲ್ಲವೆಂದು ಹೇಳಬಹುದಲ್ಲವೆ? ಎಂಬ ಶಂಕೆಗೆ ಸಮಾಧಾನ ಹೇಳುತ್ತಾನೆ:- ಜೀವನು ಯಾವಾಗ ಸಕಲಕಾರ್ಯಕ್ಕೂ ಗುಣತ್ರಯವೇ ಪರಿಣಾಮಕರ್ತೃ (ಉಪಾದಾನ)ವೆಂದು ತಿಳಿದು, ಬೇರೆ ಉಪಾದಾನವಿದೆಯೆಂದು ತಿಳಿಯುವುದಿಲ್ಲವೋ, ಗುಣತ್ರಯಕ್ಕಿಂತಲೂ ಉತ್ತಮನು, ಭಿನ್ನನೂ ಆದ ಪರಮಾತ್ಮನೇ ಸರ್ವನಿಯಾಮಕನೆಂದೂ ತಿಳಿಯುತಾನೆಯೋ ಆಗ ಆ ಜೀವನು ನನ್ನಲ್ಲಿ ಸೇರಿ ಜ್ಞಾನಾನಂದಾತ್ಮಕ ಸ್ಥಿತಿಯನ್ನು ಹೊಂದುವನು. (ಗುಣತ್ರಯವು ಕಾರ್ಯವಾಗಿ ಪರಿಣಮಿಸುವಂತಹ ಅಸ್ವತಂತ್ರ ಕಾರಣವು, ಜಡವಾದ ಈ ಗುಣತ್ರಯದ ಪರಿಣಾಮಕ್ಕೂ ಸ್ವತಂತ್ರಕರ್ತನ ಸಹಕಾರಬೇಕು. ಅಂತಹ ಸ್ವತಂತ್ರಕರ್ತನೇ ಪರಮಾತ್ಮನು, ಅವನೇ ಸರ್ವೋತ್ತಮನು, ಉಳಿದುದೆಲ್ಲವೂ ಅವನ ಅಧೀನವೆಂಬುದೇ ತತ್ತ್ವವು ಆದುದರಿಂದ ಗುಣತ್ರಯವೇ ಸರ್ವ ನಿಯಾಮಕವೆಂಬ ಶಂಕೆಗೆ ಅವಕಾಶವಿಲ್ಲವೆಂದು ತಿಳಿಯಬೇಕು.)

**ಗುಣಾನೇತಾನತೀತ್ಯತ್ರೀನ್ ದೇಹೀ ದೇಹಸಮುದ್ಭವಾನ್**
**ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ॥14-20॥**

**20.**ಈ ಪ್ರಕಾರ ಸುಖದುಃಖಾದಿಬಂಧವು ಗುಣತ್ರಯ ನಿರ್ಮಿತವಾಗಿರುವುದರಿಂದ, ಬಂಧ ಪರಿಹಾರವಾಗಬೇಕಾದರೆ ಅದಕ್ಕೆ ಮೂಲವಾಗಿರುವ ಗುಣತ್ರಯವನ್ನು ಅತಿಕ್ರಮಿಸಬೇಕು. ಅದು ಹೊರತು ಬಂಧನಿವೃತ್ತಿಗೆ ಬೇರೆ ಉಪಾಯವಿಲ್ಲವೆಂದು ಭಗವಂತನು ಹೇಳುತ್ತಾನೆ :- ಜೀವಾತ್ಮನು ಆಯಾಯಾ ಗುಣಗಳಿಂದ ಪರಿಣತನಾದ ದೇಹಗಳಲ್ಲಿ ಕಂಡುಬರುವ, ಪೂರ್ವೋಕ್ತ ಸತ್ವರಜಸ್ತಮೋಗುಣಗಳನ್ನು ಅತಿಕ್ರಮಿಸಿದ ಮೇಲೆಯೇ (ಸಂಬಂಧವನ್ನು ಪರಿಹರಿಸಿಕೊಂಡ ನಂತರವೇ) ಜನನ ಮರಣ, ಮುಪ್ಪು ಮುಂತಾದ ದುಃಖಗಳಿಂದ ವಿಶೇಷವಾಗಿ ಬಿಡುಗಡೆಯನ್ನು ಹೊಂದಿ=ಮುಕ್ತನಾಗಿ, ಪರಬ್ರಹ್ಮನನ್ನು ಹೊಂದುವನು.

**ಅರ್ಜುನ ಉವಾಚ -**

**ಕೈರ್ಲಿಂಗೈಸ್ತ್ರೀನ್ ಗುಣಾನೇತಾನತೀತೋ ಭವತಿ ಪ್ರಭೋ**
**ಕಿಮಾಚಾರಃ ಕಥಂ ಚೈತಾಂಸ್ತ್ರೀನ್ ಗುಣಾನತಿವರ್ತತೇ॥14-21॥**

**21.** ಪಾರ್ಥನು ಪ್ರಶ್ನೆ ಮಾಡುತ್ತಾನೆ:- ಸ್ವಾಮಿ! ಸರ್ವರಿಗೂ ಬಂಧನವನ್ನುಂಟುಮಾಡುವ ಈ ಸತ್ವ ರಜಸ್ತಮೋಗುಣಗಳನ್ನು ಅತಿಕ್ರಮಿಸಿದ ಪುರುಷನು ಯಾವ ಚಿಹ್ನೆಗಳುಳ್ಳವನಾಗಿರುವನು? ಗುಣಾತೀತನ ಲಕ್ಷಣಗಳಾವುವು? ಅವನ ನಡವಳಿಕೆಗಳು ಹೇಗಿರುವುವು? ಈ ಗುಣತ್ರಯವನ್ನತಿಕ್ರಮಿಸುವ ಉಪಾಯವಾವುದು?

**ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ**

**ನ ದ್ವೇಷ್ಟಿ ಸಂಪ್ರವೃತಾನಿ ನ ನಿವೃತ್ತಾನಿ ಕಾಂಕ್ಷತಿ॥14-22॥**

22.ಭಗವಂತನು ಲಕ್ಷಣ ಪ್ರಶ್ನೆಗೆ ಉತ್ತರ ಹೇಳುತ್ತಾನೆ:- (ಸತ್ವರಜಸ್ತಮೋಗುಣಗಳು ಸ್ಥೂಲ-ಸೂಕ್ಷ್ಮ ಎಂಬುದಾಗಿ ಎರಡು ಬಗೆಯಾಗಿವೆ. ಅವುಗಳಲ್ಲಿ ಸ್ಥೂಲಸತ್ವಗುಣದಿಂದ ಭಗವದಿತರ ಲೋಕವಿಷಯದಲ್ಲಿ ತತ್ವಜ್ಞಾನವಾಗುವುದು. ಸ್ಥೂಲರಜೋಗುಣದಿಂದ ಲೌಕಿಕ ವಿಷಯದಲ್ಲಿ ಪ್ರವೃತ್ತಿಯುಂಟಾಗುವುದು. ಸ್ಥೂಲ ತಮೋಗುಣದಿಂದ ಈ ಪ್ರಪಂಚದ ವಿಷಯದಲ್ಲಿ ಅಜ್ಞಾನವು ಹುಟ್ಟುತ್ತದೆ. ಸೂಕ್ಷ್ಮ ಸತ್ವಗುಣದಿಂದ ಭಗವಂತನ ತತ್ವಜ್ಞಾನವಾಗುವುದು. ಸೂಕ್ಷ್ಮರಜೋಗುಣದಿಂದ ಭಗವತ್ಪ್ರಸಾಧವಾದ ವೈರಾಗ್ಯ, ಭಕ್ತಿ, ಉಪಾಸನಾದಿಗಳಲ್ಲಿ ಪ್ರವೃತ್ತಿಯುಂಟಾಗುವುದು. ಸೂಕ್ಷ್ಮತಮೋಗುಣದಿಂದ ಭಗವಂತನ ವಿಷಯದಲ್ಲಿ ಅಜ್ಞಾನ, ವಿಪರೀತ ಜ್ಞಾನಗಳುಂಟಾಗುವುವು ಎಂಬೀ ಪ್ರಮೇಯವನ್ನು ಇಲ್ಲಿ ತಿಳಿಯಬೇಕು.)

ಪಾಂಡುನಂದನ! ಗುಣಾತೀತನು ಕ್ರಮವಾಗಿ ಸ್ಥೂಲಸತ್ವರಜಸ್ತಮೋಗುಣಗಳಿಂದುಂಟಾಗುವ ಉಕ್ತ ಲೌಕಿಕಜ್ಞಾನ, ಪ್ರವೃತ್ತಿ, ಅಜ್ಞಾನ ಇವುಗಳು ಪ್ರಾಪ್ತವಾದರೆ ಅವು ತನ್ನ ಧ್ಯಾನಾದಿಗಳಿಗೆ ಅವಿರುದ್ಧವಾಗಿದ್ದಲ್ಲಿ ಅಂತಹವುಗಳನ್ನು ದ್ವೇಷಿಸುವುದಿಲ್ಲ. ಈ ಲೌಕಿಕಜ್ಞಾನಾದಿಗಳು ಪ್ರಾಪ್ತವಾಗದಿದ್ದರೆ ಅಥವಾ ಬಂದುದು ನಿವೃತ್ತವಾದರೂ ಅವುಗಳನ್ನು ಗುಣಾತೀತನು ಅಪೇಕ್ಷಿಸುವುದಿಲ್ಲ. ಲೌಕಿಕವಿಷಯದಲ್ಲಿ ಉದಾಸೀನನಾಗಿರುವನೆಂದು ಭಾವ. ಎರಡನೆಯ ಬಗೆಯಾದ ಸೂಕ್ಷ ಗುಣತ್ರಯ ಕಾರ್ಯಗಳಲ್ಲಿ ಪರಮಾತ್ಮನ ಜ್ಞಾನ ಮತ್ತು ಉಪಾಸನಾದಿ ಸಾಧನೆಗಳ ಉದ್ಯೋಗ ಇವುಗಳನ್ನು ಆದರಪೂರ್ವಕವಾಗಿ ಅಪೇಕ್ಷಿಸುವನು, ಪರಮಾತ್ಮನ ವಿಷಯದಲ್ಲಿ ಅಜ್ಞಾನವನ್ನು ಮಾತ್ರ ದ್ವೇಷಿಸುವನೆಂದು ವಿವೇಚನೆಮಾಡಿಕೊಳ್ಳಬೇಕು.

ಈ ಶ್ಲೋಕಕ್ಕೆ ಬೇರೆ ಅರ್ಥವನ್ನೂ ಹೇಳಬಹುದು:- ಗುಣಾತೀತನು ಸಜ್ಜನರಿಗೆ ಮೋಕ್ಷೋಪಯೋಗಿಯಾದ ಪ್ರಕಾಶ ಪ್ರವೃತ್ತಿ ಮೋಹಗಳು ಬಂದರೆ ದ್ವೇಷ ಮಾಡುವುದಿಲ್ಲ; ಅಯೋಗ್ಯ ಜನರಿಗೆ ಸಮೀಚೀನ ಪ್ರಕಾಶ ಪ್ರವೃತ್ತಿ ಮೋಹಗಳು ಬರದಿದ್ದರೆ ಅವರಿಗೆ ಅವು ಪ್ರಾಪ್ತವಾಗಿ ಶ್ರೇಯಸ್ಸಾಗಬೇಕೆಂದು ಇಚ್ಛೆಸುವುದೂ ಇಲ್ಲ. ಎಂದರೆ ಗುಣಾತೀತನು ಸಾಧುಗಳಿಗೆ ಶ್ರೇಯಸ್ಸನ್ನು ಹಾರೈಸುವನು, ದುರ್ಜನರಿಗೆ ಅಭಿವೃದ್ಧಿಯನ್ನು ಬಯಸುವುದಿಲ್ಲವೆಂದು ಭಾವ.

**ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ**

**ಗುಣಾ ವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ॥14-23॥**

**23.** ಗುಣಾತೀತನ ನಡವಳಿಕೆ(ಆಚಾರ)ಯನ್ನು ವಿವರಿಸುತ್ತಾನೆ:- ಗುಣಾತೀತನು ಕೇವಲ ವಿಷ್ಣು ಪ್ರೀತಿಯಾಗಲೆಂಬ ಉದ್ದೇಶದಿಂದ ವಿಹಿತಕರ್ಮವನ್ನಾಚರಿಸುವವನಾದುದರಿಂದ ಉದಾಸೀನನಲ್ಲ; ಆದರೆ ಉದಾಸೀನನಂತೆ ನಡೆಯುತಾನೆ ಉದಾಸೀನನಿಗೆ ಹೇಗೆ ಫಲಾಪೇಕ್ಷೆಯಿರುವುದಿಲ್ಲವೋ, ಹಾಗೆಯೇ ವಿಹಿತ ಕರ್ಮವನ್ನಾಚರಿಸಿದರೂ ಧನಧಾನ್ಯಾದಿ ಐಹಿಕಫಲವನ್ನೂ, ಅಶಾಶ್ವತವಾದ ಸ್ವರ್ಗಾದಿ ಆಮುಷ್ಮಿಕಫಲವನ್ನೂ ಬಯಸದಿರುವುದರಿಂದ ಗುಣಾತೀತನು ಉದಾಸೀನನಿಗೆ ಸಮಾನವೆಂದು ಭಾವ. ಅವನು ಸತ್ವಾದಿಗುಣಸಂಬಂಧದಿಂದ ವಿಕಾರಹೊಂದಿ ತನ್ನ ಧರ್ಮದಿಂದ ಚಲಿಸುವುದಿಲ್ಲ. ಸತ್ವಾದಿಗುಣಗಳು ಪರಮಾತ್ಮನ ಇಚ್ಛೆಯಿಂದಲೇ ಪ್ರವರ್ತಿಸುತ್ತವೆ, ಸ್ವತಂತ್ರವಲ್ಲವೆಂಬ ನಿರ್ಣಯವುಳ್ಳವನಾಗಿ ಗುಣಗಳು ಬೇರೆ ಮಾರ್ಗದಲ್ಲಿ ಸೆಳೆದರೂ ಅವೈಷ್ಣವಧರ್ಮದಲ್ಲಿ ಪ್ರವರ್ತಿಸುವುದಿಲ್ಲ. ವೈಷ್ಣವಧರ್ಮಾಚರಣೆಯೇ ಗುಣಾತೀತನ ಆಚಾರವೆಂದು ಭಾವ.

ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ
ತುಲ್ಯಪ್ರಿಯಾಽಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ॥14-24॥

ಮಾನಾಪಮಾನಯೋಸ್ತುಲ್ಯಸ್ತುಲ್ಯೋಽಮಿತ್ರಾರಿಪಕ್ಷಯೋಃ
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ॥14-25॥

**24-25.** ಮತ್ತು ದೃಢತತ್ತ್ವಜ್ಞಾನವೆಂಬ ಧೈರ್ಯವುಳ್ಳವನಾಗಿ ದುಃಖದಂತೆ ವಿಷಯಸುಖವೂ ಹೇಯವೆಂದು ಭಾವಿಸಿ, ದುಃಖ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ ಯಾವಾಗಲೂ ಒಂದೇಸಮನಾಗಿರುವವನು, ಬಂಗಾರವನ್ನು ಮಣ್ಣು ಕಲ್ಲುಗಳಿಗೆ ಸಮನಾಗಿ ತಿಳಿದವನು, ಹೇಯವಾದ ಅಪ್ರಿಯವನ್ನು ವಸ್ತುವಿನಂತೆ ಲೌಕಿಕ ಪ್ರಿಯವಸ್ತುವೂ ಹೇಯವೆಂದೇ ತಿಳಿದವನು, ತನ್ನ ಸ್ತೋತ್ರವನ್ನೂ ದೂಷಣೆಗೆ ಸಮಾನವೆಂದು ಭಾವಿಸಿದವನು, ಮಾನಾವಮಾನಪ್ರಸಂಗಗಳು ಬಂದರೂ ಹರ್ಷ ವಿಷಾದಗಳನ್ನು ಹೊಂದದೆ ನಿರ್ವಿಕಾರಚಿತ್ತನಾಗಿ ಒಂದೇಸಮವಾಗಿ ಭಗವದ್ಭಕ್ತಿಯನ್ನಿಟ್ಟಿರುವವನು, ಮಿತ್ರಶತ್ರು ಪಕ್ಷಗಳು ಪ್ರಾಪ್ತವಾದಾಗಲೂ ಒಂದೇವಿಧವಾಗಿರುವವನೂ ಆಗಿ ಯಾವಾತನು ಪರದೇವತಾರಾಧನೆಯೇ ಮುಖ್ಯವೆಂದು ತಿಳಿದು ಐಹಿಕ ಪ್ರಯೋಜನಾಕಾಂಕ್ಷೆಯಿಂದ ಅನ್ಯದೇವತಾ ಪೂಜಾದಿಗಳನ್ನು ಮಾಡದೇ ಇರುವನೋ ಅಂತಹವನು ಗುಣಾತೀತನೆಂದು ಉಕ್ತನಾಗಿರುವನು.

**ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ**

**ಸ ಗುಣಾನ್ಸಮತೀತ್ಯೈತಾನ್ ಬ್ರಹ್ಮ ಭೂಯಾಯ ಕಲ್ಪತೇ॥14-26॥**

26. ಗುಣಾತೀತನಾಗಲು ಸಾಧನವನ್ನು ಹೇಳುತ್ತಾನೆ:- ಪಾರ್ಥ! ಯಾವಾತನು ನನ್ನಲ್ಲಿಯೇ ನಿಯತವಾದ ಭಕ್ತಿಯೆಂಬ ಉಪಾಯದಿಂದ ನನ್ನನ್ನು ಸೇವಿಸುತ್ತಾನೆಯೋ, ಅವನು ಸತ್ವಾದಿಗುಣ, ಅದರ ಅಭಿಮಾನಿಗಳಾದ ಶ್ರೀದೇವ್ಯಾದಿಗಳು ಇವರಿಂದ ನಿರ್ಮಿತವಾದ ಬಂಧವನ್ನು ದಾಟಿ "ಬ್ರಹ್ಮಭೂಯಾಯ"=ಪ್ರಕೃತ್ಯಭಿಮಾನಿನಿಯಾದ ಶ್ರೀದೇವಿಯಂತೆ ಎಷ್ಟು ಪ್ರೀತಿಪಾತ್ರ(ಮುಕ್ತ)ನಾಗುತ್ತಾನೆ. ಅಥವಾ "ಬ್ರಹ್ಮ ಭೂಯಾಯ"=ಚಿತ್ಪ್ರಕೃತಿಯಲ್ಲಿ ಸ್ಥಿತಿ ಎಂದರೆ ಮಹಾಲಕ್ಷ್ಮೀದೇವಿಯರನ್ನು ಹೊಂದಲರ್ಹನಾಗುವನು. ಭಗವದ್ಭಜನವೇ ಬಂಧನಿವೃತ್ತ್ಯುಪಾಯವೆಂದು ಭಾವ.

**ಬ್ರಹ್ಮಣೋ ಹಿ ಪ್ರತಿಷ್ಠಾಹಮಮೃತಸ್ಯಾವ್ಯಯಸ್ಯ ಚ**

**ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ॥14-27॥**

27. ಭಗವದುಪಾಸಕನಿಗೆ ಭಗವತ್ಪ್ರಾಪ್ತಿಯಾಗುವುದು ನ್ಯಾಯವು, ಲಕ್ಷ್ಮೀ ಪ್ರಾಪ್ತಿಯು ಹೇಗೆ ಫಲವಾದೀತು? ಎಂದರೆ, ಹೇಳುತ್ತಾನೆ:- ಮಹಾಲಕ್ಷ್ಮೀ, ನಾಶರಹಿತವಾದ ಮುಕ್ತವರ್ಗ, ಅಕ್ಷಯ್ಯಫಲ, ನಿಷ್ಕಾಮಕರ್ಮ ಮತ್ತು ದುಃಖಸಂಪರ್ಕವಿಲ್ಲದ ಉತ್ಕೃಷ್ಟ ಸುಖರೂಪಮೋಕ್ಷ ಇವೆಲ್ಲಕ್ಕೂ ನಾನೇ ಮುಖ್ಯಾಶ್ರಯನು. ಆದುದರಿಂದ ನನ್ನನ್ನು ಭಜಿಸಿದವನು ನನ್ನಲ್ಲಿ ಆಶ್ರಿತಳಾದ ದೇವಿಯನ್ನು ಹೊಂದಿದರೆ ನನ್ನನ್ನೇ ಹೊಂದಿದಂತಾಗುವುದೆಂದು ಭಾವ. ಗುಣಾತೀತನು ಲಕ್ಷ್ಮೀ ಸಾಮೀಪ್ಯವನ್ನು ಹೊಂದಿ ಆ ದೇವಿಯ ಅನುಗ್ರಹಮೂಲಕವಾಗಿ ಶ್ರೀಹರಿಯನ್ನು ಹೊಂದುತ್ತಾನೆಂಬ ಪ್ರಮೇಯವನ್ನು ತಿಳಿಸುವುದಕ್ಕಾಗಿ ಪರಂಪರೆಯಾಗಿ ಭಗತ್ಪ್ರಾಪ್ತಿಯು ಉಕ್ತವಾಗಿದೆಯೆಂದು ತಿಳಿಯಬೇಕು.

ಒಟ್ಟಿನಲ್ಲಿ ಸಾಧನವಾದ ಭಕ್ತಿಯಿಂದ ನನ್ನ ಉಪಾಸನೆ ಮಾಡುವವನಿಗೆ ನಾನು ಮೊದಲು ನಿಷ್ಕಾಮ ಕರ್ಮದಲ್ಲಿ ಅಭಿರುಚಿಯನ್ನು ಕೊಟ್ಟು ಅದನ್ನು ಮಾಡಿಸಿ, ಅದರಿಂದ ಚಿತ್ತಶುದ್ಧಿಯನ್ನುಂಟುಮಾಡಿ, ಶ್ರವಣಮನನಾದಿಗಳ ಮೂಲಕ ತತ್ವ ನಿರ್ಣಯವನ್ನುಂಟುಮಾಡಿ ಪಕ್ವಭಕ್ತಿಯನ್ನೂ ಅನುಗ್ರಹಿಸುವೆನು. ಬಳಿಕ ಉಕ್ತ ಸಾಧನಗಳೆಲ್ಲವೂ ಅನಾಯಾಸವಾಗಿ ಆವನಲ್ಲಿ ಫಲಿಸುವುವು. ಅನಂತರ ಅವನನ್ನು ತ್ರಿಗುಣಾತ್ಮಕ ಪ್ರಕೃತಿಬಂಧದಿಂದ ಬಿಡುಗಡೆಮಾಡಿ, ಲೋಕಮಾತೆಯಾದ ಲಕ್ಷ್ಮೀದೇವಿಯ ಅನುಗ್ರಹವನ್ನುಂಟುಮಾಡಿ ತನ್ಮೂಲಕವಾಗಿ ನನ್ನ ಸಮೀಪಕ್ಕೆ ಕರೆದುಕೊಂಡು

ಮುಕ್ತಮಂಟಪದಲ್ಲಿ ಸೇರಿಸಿ ಶಾಶ್ವತಮೋಕ್ಷಸುಖವನ್ನು ಅನುಗ್ರಹಿಸುವೆನು. ಆದಕಾರಣ ಪಾರ್ಥ! ವಿಹಿತಧರ್ಮಾಚರಣೆಯ ಮೂಲಕವಾಗಿ ನನ್ನ ಉಪಾಸನೆ ಮಾಡಿ ಸಂಸಾರಸಾಗರವನ್ನು ದಾಟುವವನಾಗು. ಪ್ರಕೃತ ಅದಕ್ಕೆ ಮೂಲವಾದ ಕ್ಷತ್ರಿಯನಾದ ನಿನಗೆ ವಿಹಿತವಾಗಿ ಪ್ರಸಕ್ತವಾಗಿರುವ ಯುದ್ಧವನ್ನು ನಿಷ್ಕಾಮನೆಯಿಂದ ಮಾಡು, ಅದರಿಂದ ನಿನಗೆ ಮಂಗಳವಾಗುವುದು.

## ಪಂಚದಶೋಽಧ್ಯಾಯಃ॥15-[20]॥

ಹದಿಮೂರನೆಯ ಅಧ್ಯಾಯದಲ್ಲಿ ಪ್ರಕೃತಿ ಮಹದಹಂಕಾರಾದಿತತ್ವಜಾತರೂಪವಾದ ಜಗತ್ತು ಕ್ಷೇತ್ರವೆಂದೂ, ಅದೇ ಸಂಸಾರಕಾರಣವೆಂದೂ, 'ಯ ಏನಂ ವೇತ್ತಿ ಪುರುಷಂ' 13-24, ಇತ್ಯಾದಿ ಗ್ರಂಥದಿಂದ ಭಗವದ್ಧ್ಯಾನಾದಿಗಳೇ ಅದರ ಪರಿಹಾರೋಪಾಯವೆಂದೂ ಹೇಳಿ, ಪೂರ್ವಾಧ್ಯಾಯದಲ್ಲಿ ಸಂಸಾರಕಾರಣೈಕ ದೇಶವಾದ ಗುಣತ್ರಯಪ್ರವೃತ್ತಿಯು ಉಕ್ತವಾಯಿತು. ಈ ಅಧ್ಯಾಯದಲ್ಲಿ ಸಮಗ್ರ ಸಂಸಾರಕಾರಣವನ್ನು ನಿರೂಪಿಸಿ, ಅದರ ನಿವೃತ್ತಿಇಚ್ಛೆಯಿಂದ ಸಾಧನ ಜಿಜ್ಞಾಸುವಾಗುವ ಅಧಿಕಾರಿಗೆ ಹಿಂದೆ ಹೇಳಿರುವ ಸಾಧನವನ್ನೇ ಭಗವಂತನು ವಿಸ್ತರಿಸುತ್ತಾನೆ.

ಶ್ರೀ ಭಗವಾನುವಾಚ

**ಊರ್ಧ್ವಮೂಲಮಧಃಶಾಖಮಶ್ವತ್ಥಂ ಪ್ರಾಹುರವ್ಯಯಂ**
**ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್॥15-1॥**

1. ಆದಿಯಲ್ಲಿ ಜಗತ್ಸ್ವರೂಪವನ್ನು ವಿವರಿಸುತ್ತಾನೆ:- 1'ವಿಷ್ಣು' ಮಹಾ ಲಕ್ಷ್ಮಿ, ಜಡ ಪ್ರಕೃತಿ ಈ ಮೂರೂ ಜಗತ್ತೆಂಬ ವೃಕ್ಷಕ್ಕೆ ಮೂಲದಂತಿವೆ. ಎಂದರೆ ವೃಕ್ಷಕ್ಕೆ ಬೇರಿನಂತೆ, ಜಡ ಪ್ರಕೃತಿಯು ಜಗದ್ವೃಕ್ಷಕ್ಕೆ ಆಧಾರವು ಬೇರಿಗೂ ಆಶ್ರಯವಾದ ಕೆಳಗಿನ ಭೂಮಿಯಂತೆ ಮಹಾಲಕ್ಷ್ಮಿಯು (ಚೇತನಪ್ರಕೃತಿಯು) ಆಶ್ರಯಳು. ಪ್ರಸಿದ್ಧ ವೃಕ್ಷಕ್ಕೆ ಧರಾದೇವಿಯಂತೆ ಪರಮಾತ್ಮನು ಜಗತ್ತೆಂಬ ವೃಕ್ಷಕ್ಕೆ ನಿಮಿತ್ತಾಧಾರನು. ಈ ರೀತಿ ಈ ಜಗತ್ತು ಮೂರು ಉತ್ತಮಪದಾರ್ಥಗಳನ್ನಾಶ್ರಯಿಸಿದೆ. ಅಧಃ=ಮೂರು ಉತ್ತಮ ವಸ್ತುಗಳಿಗಿಂತ ಅವರರಾದ (ಕೆಳಗಿನ ದರ್ಜೆಯಲ್ಲಿರುವ) ಪಂಚಭೂತಗಳು, ಮಹತ್ತತ್ವ, ಅಹಂಕಾರ, ಬುದ್ಧಿ ಎಂಬ ಎಂಟು ತತ್ವಗಳು, ಅವುಗಳ ಅಭಿಮಾನಿ ದೇವತೆಗಳೂ ಸಹ ಜಗದ್ವೃಕ್ಷಕ್ಕೆ ಕೊಂಬೆಯಂತಿರುವುವು. ಈ ಜಗತ್ವೃಕ್ಷಕ್ಕೆ ವೇದಗಳು ಎಲೆಗಳಂತಿರುವುವು. (ಲೋಕದಲ್ಲಿ ಎಲೆಗಳು ಹುಟ್ಟಿದನಂತರವೇ ಫಲವು ಹುಟ್ಟುವಂತೆ ವೇದಾರ್ಥಜ್ಞಾನವಾದನಂತರ ಸಾಧನೆಯನ್ನಾಚರಿಸಿದವನಿಗೆ ಕಾಮಮೋಕ್ಷರೂಪ

ಫಲಪ್ರಾಪ್ತಿಯಾಗುವುದರಿಂದ ವೇದಗಳು ಎಲೆಗಳು ಎಂದು ಉಕ್ತವಾಗಿವೆ ಎಂದು ಭಾವ.) ಇಂತಹ ಜಗದ್ವೃಕ್ಷವು ಇವತ್ತಿರುವಂತೆ ನಾಳೆಯಿರದೆ ವಿಕಾರಹೊಂದುತ್ತಿರುವುದರಿಂದ ಅಥವಾ ಕುದುರೆಯಂತೆ ಚಂಚಲವಾಗಿರುವುದರಿಂದ ಅಶ್ವತ್ಥವೆನಿಸಿದೆ. ಹಾಗಾದರೂ ಇದರ ಪರಂಪರೆಯು ಅವಿಚ್ಛಿನ್ನವಾಗಿ ಬೆಳೆಯುತ್ತಿರುವುದರಿಂದ ಈ ಜಗತ್ತೆಂಬ ವೃಕ್ಷವನ್ನು ಪ್ರವಾಹರೂಪದಿಂದ ಅನಾದಿನಿತ್ಯವೆಂದು ಪ್ರಾಜ್ಞರು ಹೇಳುತ್ತಾರೆ. ಈ ರೀತಿಯಾಗಿ ಜಗದ್ವೃಕ್ಷಸ್ವರೂಪವನ್ನರಿತವನು ವೇದಾರ್ಥಜ್ಞಾನಿಯು.

1. ಪದಾರ್ಥವು ಚೇತನ, ಅಚೇತನ ಎಂದು ಎರಡು ಬಗೆ. ಪರಾಧೀನ ಚೇತನರಲ್ಲಿ ಮಹಾಲಕ್ಷ್ಮಿಯು (ಚಿತ್ರಕೃತಿ), ಅಚೇತನವರ್ಗದಲ್ಲಿ ಜಡಪ್ರಕೃತಿ, ಇವೆರಡಕ್ಕಿಂತಲೂ ಉತ್ತಮ=ಸರ್ವೋತ್ತಮನಾದ ನಾರಾಯಣ ಈ ಪ್ರಕಾರ ಒಂದೊಂದು ವಿಧದಲ್ಲಿ ಒಂದೊಂದು ಉತ್ತಮವಾಗಿರುವುದರಿಂದ ಉತ್ತಮವಾಚಕವಾದ `ಊರ್ಧ್ವಶಬ್ದದಿಂದ ಮೂರೂ ಸಂಗ್ರಹಿಸಲ್ಪಟ್ಟಿವೆ.

**ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ ಗುಣಪ್ರದ್ಧಾ ವಿಷಯಪ್ರವಾಲಾಃ**
**ಅಧಸ್ಯಮೂಲಾನ್ಯನುಸಂತತಾನಿ ಕರ್ಮಾನುಬಂಧೀನಿ ಮನುಷ್ಯಲೋಕೇ॥15-2॥**

2. ಆ ಜಗದ್ವೃಕ್ಷದ ಕೊಂಬೆಯಂತಿರುವ ಮಹದಹಂಕಾರಾದಿ ಎಂಟು ತತ್ವಗಳು ಮತ್ತು ಅವುಗಳ ಅಭಿಮಾನಿದೇವತೆಗಳೂ ಕೂಡ ತಮ್ಮಿಂದ ಉತ್ಪನ್ನವಾದುದರಿಂದ ತಮಗಿಂತ ಕೆಳಗಿರುವ ಪ್ರಾಣಿಗಳ ಶರೀರಾದಿಗಳಲ್ಲಿಯೂ, ತಮಗಿಂತ ಉತ್ತಮವಾದುದರಿಂದ ಊರ್ಧ್ವಪದೋಕ್ತ ಪ್ರಕೃತಿಯಲ್ಲಿಯೂ ಸಹ ಸೂಕ್ಷ್ಮರೂಪದಿಂದ ವ್ಯಾಪಿಸಿರುತ್ತವೆ. ಸತ್ವಾದಿಗುಣಗಳಿಂದ ಅವು ಅಭಿವೃದ್ಧಿ ಹೊಂದುವುವು. ಶಬ್ದಾದಿ ವಿಷಯಗಳೇ ಅವುಗಳ ಚಿಗುರು, ಊರ್ಧ್ವಪದದಿಂದುಕ್ತರಾದ ವಿಷ್ಣುರೂಪ, ಚೇತನಾಚೇತನ ಪ್ರಕೃತಿ ಮತ್ತು ಸತ್ವರಜಸ್ತಮೋಗುಣಗಳೂ ಸಹ ಮನುಷ್ಯ ಲೋಕದಲ್ಲಿ ಅವರವರ ಕರ್ಮಾನುಸಾರವಾಗಿ ಪ್ರಾಣಿಗಳಿಗೆ ಫಲಕೊಡುತ್ತ ಜಗದೃಕ್ಷದ ಅಧಃಶಾಖೆಯಾದ ಪ್ರಾಣಿಶರೀರದಲ್ಲಿ ವ್ಯಾಪಿಸಿರುತ್ತವೆ.

**ನ ರೂಪಮಸ್ಯೇಹ ತಥೋಪಲಭ್ಯತೇ ನಾಂತೋ ನ ಚಾದಿರ್ನ ಚ ಸಂಪ್ರತಿಷ್ಠಾ**
**ಅಶ್ವತ್ಥಮೇನಂ ಸುವಿರೂಢಮೂಲಮಸಂಗಶಸ್ತ್ರೇಣ ದೃಢೇನ ಛತ್ವಾ ॥15-3॥**

3. ಈ ಜಗತ್ತೆಂಬ ವೃಕ್ಷವು ವಿಕಾರಹೊಂದುತ್ತಿರುವುದರಿಂದ ಈ ಲೋಕದಲ್ಲಿ ಯಥಾವತ್ತಾಗಿ ಉಪಲಬ್ಧವಾಗುವುದಿಲ್ಲ. ಈ ಜಗತ್ತಿನ ಸೃಷ್ಟಿಸಂಹಾರಕರ್ತನಾದ ವಿಷ್ಣುವು ಜಗತ್ತಿನಲ್ಲಿಯೇ ಪ್ರವಿಷ್ಟನಾಗಿದ್ದರೂ ದೃಷ್ಟನಾಗುವುದಿಲ್ಲ. ಪ್ರಬಲವಿಷ್ಣು ಮೊದಲಾದ ಆಶ್ರಯವುಳ್ಳ ಪೂರ್ವೋಕ್ತಪ್ರಕಾರ ಅಶ್ವತ್ಥನಾಮಕವಾದ ಜಗದ್ವದೃಕ್ಷವನ್ನು ವೈರಾಗ್ಯವೆಂಬ ಸಾಣೆಯಿಂದ ತೀಕ್ಷ್ಣವಾದ ಜ್ಞಾನವೆಂಬ ಖಡ್ಗದಿಂದ ಕತ್ತರಿಸಬೇಕು. ಎಂದರೆ ಎಲ್ಲಕ್ಕೂ ಮೂಲನಾಗಿರುವ

ಪರಮಾತ್ಮನು ಪ್ರಕೃತ್ಯಾದಿ ಜಗತ್ತಿಗಿಂತ ಅತ್ಯಂತ ವಿಲಕ್ಷಣನು; ಈ ಜಗತ್ತು ಅವಾಂತರಾನೇಕ ಭೇದಗಳುಳ್ಳದ್ದು. ಇದರ ಪ್ರವಾಹವು ನಿತ್ಯವು-ಇತ್ಯಾದಿಯಾಗಿ ವಿವೇಚನೆಮಾಡಿ ಜಗತ್ಪರಮಾತ್ಮಸ್ವರೂಪವನ್ನು ತಿಳಿಯಬೇಕೆಂದರ್ಥ. ಹೀಗೆ ತಿಳಿಯುವುದೇ ಜಗದ್ವೃಕ್ಷದ ಛೇದನವು. ಈ ರೀತಿಯಾದ ದೃಢಜ್ಞಾನವು ಬಂಧನಿವೃತ್ತಿಗೆ ದಾರಿಯೆಂದು ಭಾವ.

**ತತಃ ಪರಂ ತತ್ಪರಿಮಾರ್ಗಿತವ್ಯಂ ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ**
**ತಮೇವ ಚಾದ್ಯಂ ಪುರುಷಂ ಪ್ರಪದ್ಯೇ ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ॥15-4॥**

4. ಹೀಗೆ ದೃಢವಾದ ಪರಾಪರತತ್ವವಿವೇಚನೆಯಾದನಂತರ ಯಾವ ಪರಬ್ರಹ್ಮನನ್ನು ಹೊಂದಿದವರು ತಿರುಗಿ ಜನ್ಮತಾಳುವುದಿಲ್ಲವೋ, ಅಂತಹ (ಊರ್ಧ್ವಾದಿ ಪದಗಳಿಂದ ಪ್ರಕೃತನಾದ) ಪರಮಾತ್ಮನು ಶ್ರವಣಾದಿಗಳಿಂದ ತಿಳಿಯಲ್ಪಡಬೇಕು. (ಜಗದ್ವೈಲಕ್ಷಣ್ಯಜ್ಞಾನವು ಭಗವತ್ಸ್ವರೂಪಾನ್ವೇಷಣೆಗೆ ಸಾಧನವೆಂದು ಭಾವ.) ಪುರಾತನವಾದ ಜನನಾದಿ ಸಂಸಾರಪ್ರವರ್ತನೆಯು ಯಾವಾತನಿಂದುಂಟಾಗುತ್ತದೆಯೋ, ಅಂತಹ ಆದಿಕರ್ತನಾದ ಪರಮಾತ್ಮನನ್ನೆ ಸಂಸಾರ ನಿವೃತ್ತಿಗಾಗಿ ಶರಣು ಹೊಂದಬೇಕು.

**ನಿರ್ಮಾನಮೋಹಾ ಜಿತಸಂಗದೋಷಾ ಅಧ್ಯಾತ್ಮನಿತ್ಯಾ ವಿನಿವೃತ್ತ ಕಾಮಾಃ**
**ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈರ್ಗಚ್ಛಂತ್ಯಮೂಢಾಃ ಪದಮವ್ಯಯಂ ತತ್**
**॥15-5॥**

5. ಪುನರಾವೃತ್ತಿರಹಿತ ಪರಮಪದವನ್ನಪೇಕ್ಷಿಸುವವರು ಯಾವ ಗುಣಗಳನ್ನು ಸಂಪಾದಿಸಬೇಕು? ಪ್ರಯತ್ನಪೂರ್ವಕವಾಗಿ ಬಿಡಬೇಕಾದ ದೋಷಗಳಾವುವು? ಎಂದರೆ, ಹೇಳುತ್ತಾನೆ:- ಅಹಂಕಾರ-ವಿಪರೀತಜ್ಞಾನರಹಿತರು, ದೇಹಗೇಹಭಾರ್ಯಾಪುತ್ರಧನಾದಿವಿಷಯಾಸಕ್ತಿಯೆಂಬ ದೋಷವನ್ನು ದೂರದೂಡಿದವರು, ಭಗವದುತ್ಕರ್ಷ ಪ್ರತಿಪಾದಕ ಸಚ್ಛಾಸ್ತ್ರಶ್ರವಣಾದಿಗಳಲ್ಲಾಸಕ್ತರು, ಆತ್ಯಂತಿಕವಾಗಿ ವಿಷಯತೃಷ್ಣೆಯನ್ನು ಕಳೆದುಕೊಂಡಿರುವವರು, ಸುಖದುಃಖಕಾರಣಗಳಾಗಿರುವುದರಿಂದ ಸುಖದುಃಖಗಳೆನಿಸಿದ ಲಾಭಾಲಾಭ, ಜಯಾಪಜಯಾದಿರೂಪ ಪರಸ್ಪರ ಪ್ರತಿದ್ವಂದ್ವಿ(ವಿರುದ್ಧ)ಧರ್ಮಗಳು ಬಂದರೂ ಯಾವ ವಿಕಾರವನ್ನೂ ಹೊಂದದಿರುವವರು, ಮತ್ತು ರಜಸ್ತಮಸ್ಸ್ವಭಾವಶೂನ್ಯರೂ ಆದ ಸಾತ್ವಿಕಜನರು ನಿತ್ಯನಾದ ಭಗವಂತನನ್ನು ತಿಳಿದು ಅವನನ್ನೇ ಹೊಂದುವರು. (ಮುಮುಕ್ಷುಗಳು ನಿಯತವಾಗಿ

ಶ್ರವಣಮನನಾದಿ ಸಾಧನಾನುಷ್ಠಾನಪರರಾಗಬೇಕು; ಮಾನ, ಮೋಹ, ಸಂಗ, ಕಾಮ, ದ್ವಂದ್ವಾಜ್ಞಾನಾದಿ ದೋಷಗಳನ್ನು ಪ್ರಯತ್ನಪೂರ್ವಕವಾಗಿ ಬಿಡಬೇಕು ಎಂದು ಭಾವ.)

**ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ**

**ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ॥15-6॥**

**6.** ಭಗವಂತನ ಸ್ವರೂಪವು ಎಂತಹುದೆಂದರೆ ಹೇಳುತ್ತಾನೆ:- ಸೂರ್ಯನು ಆ ಪರಬ್ರಹ್ಮನನ್ನು ಪ್ರಕಾಶಪಡಿಸುವುದಿಲ್ಲ ಚಂದ್ರನು, ಅಗ್ನಿಯೂ ಅವನನ್ನು ಪ್ರಕಾಶಪಡಿಸಲಾರರು. (ಅಲ್ಪ ಪ್ರಕಾಶವುಳ್ಳ ದೀಪವು ಅಧಿಕ ಪ್ರಕಾಶಯುಕ್ತರಾದ ಸೂರ್ಯಾದಿಗಳನ್ನು ಹೇಗೆ ಪ್ರಕಾಶಿಸುವಂತೆ ಮಾಡಲಾರದೋ, ಅದರಂತೆ ಸೂರ್ಯಾದಿಗಳು ಪರಮಾತ್ಮನಿಗಿಂತ ಅಲ್ಪ ಪ್ರಕಾಶವುಳ್ಳವರಾದ ಕಾರಣ ಅವರು ಭಗವಂತನನ್ನು ಪ್ರಕಾಶಪಡಿಸಲಾರರು. ಎಂದರೆ ಪರಮಾತ್ಮನ ಪ್ರಕಾಶವು ಸರ್ವಾಧಿಕವು, ಅದೇ ಇತರ ಪ್ರಕಾಶಕ್ಕೆ ನಿಯಾಮಕವು; ಅದಕ್ಕೆ ನಿಯಾಮಕವಾಗುವಂತಹ ಪ್ರಕಾಶವು ಬೇರೆಯಿಲ್ಲವೆಂದು ಭಾವ.) ಯಾವ ವಸ್ತುವನ್ನು ಹೊಂದಿದಮೇಲೆ ತಿರುಗಿ ಸಂಸಾರಬಂಧಕ್ಕೆ ಸಿಲುಕುವುದಿಲ್ಲವೋ ಅಂತಹ ಸರ್ವೋತ್ತಮ ಪದವು ನನ್ನ ಸ್ವರೂಪವು.

**ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ**

**ಮನಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥15-7॥**

**ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ**

**ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್॥15-8॥**

**7-8.** ಬ್ರಹ್ಮಾದಿ ಇತರ ದೇವತೆಗಳ ಅಪರೋಕ್ಷದಿಂದ ಸಂಸಾರಬಂಧವು ನಿವೃತ್ತಿಯಾಗಲಾರದೇ? ಭಗವದಪರೋಕ್ಷವನ್ನೇ ಏಕೆ ಸಂಪಾದಿಸಬೇಕು? ಎಂದರೆ, ಹೇಳುತ್ತಾನೆ:- ಚತುರ್ಮುಖಾದಿ ಜೀವರ ಶರೀರದಲ್ಲಿ ಅನಾದಿಯಾದ ಜೀವರೂಪ ವಸ್ತುವಿದೆ. ಆ ಜೀವನು ನನ್ನ ಅಂಶನು ಎಂದರೆ ಪ್ರತಿಬಿಂಬನು. (ಅಂಶವೆಂದರೆ, ಅಂಶಿಗೆ ಸದೃಶವೂ ಅಧೀನವೂ ಆದುದು. ಅದು ಸ್ವರೂಪಾಂಶ ಭಿನ್ನಾಂಶ ಎಂದು ಎರಡು ಬಗೆ. ರಾಮಾದಿಗಳು ವಿಷ್ಣುವಿನ ಸ್ವರೂಪಾಂಶರು. ಅಂತಹ ಅಂಶಾಂಶಿಗಳು ಒಂದೇ; ಭೇದವಿಲ್ಲ. ಭಿನ್ನಾಂಶ ಎಂದರೆ ಪ್ರತಿಬಿಂಬವು. ಸೂರ್ಯನಿಗೆ ಖದ್ಯೋತವು ಭಿನ್ನಾಂಶವು. ಅದು ಸ್ವಲ್ಪಮಟ್ಟಿಗೆ ಸೂರ್ಯಸದೃಶವೂ ಅವನ ಅಧೀನವೂ ಆಗಿರುವುದರಿಂದ ಸೂರ್ಯನ ಭಿನ್ನಾಂಶವು ಅಥವಾ ಪ್ರತಿಬಿಂಬವು ಎನ್ನಬಹುದು. ಅದರಂತೆ ಜೀವನೂ ಸಹ ಪರಮಾತ್ಮಭಿನ್ನನಾಗಿದ್ದರೂ, ಪರಮಾತ್ಮನಿಗೆ ಚೇತನತ್ವಾದಿಧರ್ಮದಿಂದ

ಸಮಾನನು, ಅವನ ಅಧೀನನೂ ಆಗಿರುವುದರಿಂದ ಪರಮಾತ್ಮನ ಭಿನ್ನಾಂಶನು ಅಥವಾ ಪ್ರತಿಬಿಂಬನು ಎಂದು ಉಕ್ತವಾಗಿದೆ. ಲೋಕದಲ್ಲಿ ಪ್ರತಿಬಿಂಬದ ಚೇಷ್ಟಾದಿಗಳೆಲ್ಲವೂ ಬಿಂಬಾಧೀನವಾಗಿರುವುದು ಸ್ಪುಟವಾಗಿದೆ. ಅಂತೆಯೇ ಜೀವರ ಸಕಲವ್ಯಾಪಾರವೂ ಬಿಂಬನಾದ ಪರಮಾತನ ಅಧೀನವಾಗಿಯೇ ನಡೆಯುವುದರಿಂದ ಅಂತಹ ಪರಾಧೀನ ಚತುರ್ಮುಖಾದಿಗಳು ಇತರರನ್ನು ಹೇಗೆ ಉದ್ಧರಿಸಿಯಾರು! ಆದಕಾರಣ ಅವರ ಅಪರೋಕ್ಷದಿಂದ ಬಂಧನಿವೃತ್ತಿಯಾಗಲಾರದು. ಅವರಿಗೂ ನಿಯಾಮಕನಾಗಿ ಸ್ವತಂತ್ರನಾಗಿರುವ ನನ್ನ ಅಪರೋಕ್ಷವನ್ನು ಸಂಪಾದಿಸಿ ನನ್ನ ಅನುಗ್ರಹದಿಂದಲೇ ಎಲ್ಲರೂ ಉದ್ಧಾರವಾಗ ಬೇಕೆಂದು ಭಾವ:) ಪ್ರಕೃತಿನಿರ್ಮಿತ ಶರೀರಸ್ಥಿತನಾದ ಜೀವನು ಶ್ರೋತ್ರಾದಿ ಪಂಚೇಂದ್ರಿಯ ಮತ್ತು ಆರನೆಯದಾದ ಮನ ಇಂದ್ರಿಯಗಳನ್ನು ನನ್ನ ಅಂಶನಾದ ಜೀವನು ವಿಷಯಗಳ ಕಡೆಗೆ ಹೋಗುವಂತೆ ಮಾಡುವನು. ಆದರೆ ಜೀವನೇ ಸ್ವತಃ ಇಂದ್ರಿಯಗಳ ಪ್ರವರ್ತನೆಯನ್ನು ಮಾಡಿಸಲಾರನು. ಈಶ್ವರನು ಜೀವಶರೀರವನ್ನು ಹೊಂದಿದಾಗಲೇ ಅಲ್ಲಿರುವ ಜೀವನು ಅವನಿಂದ ಪ್ರೇರಿಸಲ್ಪಟ್ಟವನಾಗಿ ಇಂದ್ರಿಯಗಳನ್ನು ವಿಷಯಗಳ ಕಡೆ ಪ್ರವರ್ತಿಸುವಂತೆ ಮಾಡುವನು. (ಸ್ವತಂತ್ರವಾಗಿ ಈಶ್ವರನೇ ಸರ್ವೇಂದ್ರಿಯಪ್ರೇರಕನು, ಜೀವನು ಅವನ ಅಧೀನನಾಗಿ ಅವಾಂತರಪ್ರೇರಕನೆಂದು ಭಾವ.) ಮತ್ತು ಭಗವಂತನು ಜೀವನನ್ನು ಕರೆದುಕೊಂಡು ದೇಹದಿಂದ ಹೊರ ಹೊರಡುವಾಗ ಗಾಳಿಯು ಪುಷ್ಪಾದಿಸ್ಥಾನದಿಂದ ಗಂಧಯುಕ್ತವಾದ ಪುಷ್ಪಾಂಶವನ್ನು ಸಂಗಡ ಒಯುವಂತೆ ಇಂದ್ರಿಯ ಸೂಕ್ಷ್ಮಾಂಶವನ್ನೂ ತೆಗೆದುಕೊಂಡು ಲೋಕಾಂತರಕ್ಕೆ ಹೊರಡುತ್ತಾನೆ.

**ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ**
**ಅಧಿಷ್ಠಾಯಮನಶ್ಚಾಯಂ ವಿಷಯಾನುಪಸೇವತೇ॥15-9॥**

9. ಆರು ಇಂದ್ರಿಯಗಳಾವುವು? ಅವುಗಳೊಡನೆ ಜೀವ ಪರಮಾತ್ಮರು ಅಲ್ಲಲ್ಲಿದ್ದು ಏನು ಮಾಡುವರು? ಏತಕ್ಕಾಗಿ ಅವುಗಳ ಸಂಗಡ ಹೋಗಿಬರುತ್ತಿರುವರು? ಎಂದರೆ, ಹೇಳುತ್ತಾನೆ:- ಶೂತ್ರ, ಚಕ್ಷುಸ್ಸು, ತ್ವಗಿಂದ್ರಿಯ, ಜಿಹ್ವೆ, ನಾಸಿಕ ಮತ್ತು ಮನಸ್ಸು ಇವೇ ಆರು ಇಂದ್ರಿಯಗಳು. ಈ ಜೀವಾತ್ಮನು ಭೋಗ ಸಾಧನವಾದ ಈ ಇಂದ್ರಿಯಗಳನ್ನಾಶ್ರಯಿಸಿ ಅವುಗಳ ಮೂಲಕವಾಗಿ ಶಬ್ದಾದಿ ವಿಷಯಗಳನ್ನು ಅನುಭವಿಸುತ್ತಾನೆ. ಅವನವನ ಕರ್ಮಫಲವಾದ ಸುಖದಃಖಭೋಗಕ್ಕಾಗಿ ಆಯಾಯಾ ಶರೀರಗಳಲ್ಲಿ ಪ್ರವೇಶಿಸುವನು ಮತ್ತು ಬಿಟ್ಟು ಹೊರಡುತ್ತಿರುವನು. ಪರಮಾತ್ಮನೂ ಕೂಡ ಇಂದ್ರಿಯಗಳಿಗೆ ಪ್ರವರ್ತಕನಾಗಿ ಆಯಾಯಾ ಶರೀರೇಂದ್ರಿಯಾದಿಗಳಲ್ಲಿದ್ದು ಜೀವನು

ಭೋಗಿಸುವ ವಿಷಯಗಳಲ್ಲಿ ಸಾರಭಾಗವನ್ನು ಮಾತ್ರ ಸ್ವೀಕರಿಸುವನು. ಅದಕ್ಕಾಗಿ ಜೀವರೊಡನೆ ಹೋಗಿ ಬರುತ್ತಿರುವನು.

**ಉತ್ಕ್ರಾಮಂತಂ ಸ್ಥಿತಂ ವಾಪಿಭುಂಜಾನಂ ವಾ ಗುಣಾನ್ವಿತಂ**
**ವಿಮೂಢಾ ನಾನು ಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ॥15-10॥**

**ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವಸ್ಥಿತಂ**
**ಯತಂತೋಽಪ್ಯಕೃತಾತ್ಮಾನೋ ನೈನಂ ಪಶ್ಯಂತ್ಯಚೇತಸಃ॥15-11॥**

**10-11** ಪರಮಾತ್ಮನು ಜೀವನೊಡನೆ ಹೋಗಿಬರುತ್ತ ವಿಷಯವನ್ನು ಭೋಗಿಸುವವನಾದರೆ ಆಶುಭಭೋಗಗಳೂ ಅವನಿಗುಂಟೇ? ಅವನು ಹಾಗೇಕೆ ಉಪಲಬ್ಧನಾಗುವುದಿಲ್ಲ? ಎಂದರೆ, ಹೇಳುತ್ತಾನೆ:- ಜೀವನೊಡನೆ, ಶರೀರದಲ್ಲಿರುವ, ಕೊನೆಗೆ ಜೀವನನ್ನು ಕರೆದುಕೊಂಡು ಲೋಕಾಂತರಕ್ಕೆ ಹೋಗುವ, ಕರ್ಮಫಲಸಾರವಾದ ಶುಭಭಾಗವನ್ನೇ ಭೋಗಿಸುವ ಪರಮಾತ್ಮನನ್ನು ಅಜ್ಞಾನಿ ಅಥವ ವಿಪರೀತಜ್ಞಾನಿಗಳು ನೋಡುವುದಿಲ್ಲ. ತತ್ವಜ್ಞಾನದೃಷ್ಟಿಯುಳ್ಳ ಸಜ್ಜನರು ಹಾಗೆ ನೋಡುವರು: ಆದರೆ ಶ್ರವಣಾದಿಗಳಿಂದ ಪರಮಾತ್ಮನ ದರ್ಶನಕ್ಕಾಗಿ ಪ್ರಯತ್ನಿಸುವವರೆಲ್ಲರೂ ಅದನ್ನು ನೋಡಲಾರರು. ಯೋಗಿಗಳು ಮಾತ್ರ ತಮ್ಮ ಹೃದಯದಲ್ಲಿ ನಿಯಾಮಕನಾಗಿರುವ ಪರಮಾತ್ಮನನ್ನು ನೋಡುವರು. ಮನಸ್ಸಿನ ನಿಶ್ಚಲಸ್ಥಿತಿಯೇ ಯೋಗವು. ಅದನ್ನು ಸಿದ್ಧಪಡಿಸಿಕೊಂಡವರಿಗೇ ಪರಮಾತ್ಮನ ದರ್ಶನವಾಗುವುದು , ಯೋಗಸಿದ್ಧಿಯಿಲ್ಲದವನು ಎಷ್ಟು ಪ್ರಯತ್ನಮಾಡಿದರೂ ದರ್ಶನವಾಗುವುದಿಲ್ಲ. ಕರ್ಮ ಯೋಗಾದಿಗಳಿಂದ ಮನೋಜಯವನ್ನು ಸಂಪಾದಿಸದಿರುವವರು ಅವಿವೇಕಿಗಳು, ಜಡಪ್ರಾಯರು, ಮಂದಮತಿಗಳೇ ಸರಿ. ಅಂತಹ ಅಶುದ್ಧಾಂತಃಕರಣರಾದ ಅವಿವೇಕಿಗಳು ಶ್ರವಣಾದಿಗಳಿಂದ ಶಾಸ್ತ್ರಜ್ಞಾನರೂಪ ಪಾಂಡಿತ್ಯವನ್ನು ಸಂಪಾದಿಸಿ ಎಷ್ಟು ಪ್ರಯತ್ನಪಟ್ಟರೂ ಪರಮಾತ್ಮನ ದರ್ಶನವನ್ನು ಪಡೆಯಲಾರರು. ಶಾಸ್ತ್ರ-ಜನಿತಜ್ಞಾನಮಾತ್ರವೇ ದರ್ಶನಸಾಧನೆಯಲ್ಲ. ವಿವೇಕ, ಮನೋನಿಗ್ರಹಾದಿ ಸಾಧನ ಸಂಪನ್ನವಾದ ಶಾಸ್ತ್ರ ಪಾಂಡಿತ್ಯವೇ ಆತ್ಮಸಾಕ್ಷಾತ್ಕಾರಕ್ಕೆ ಸಾಧನೆಯೆಂದು ಭಾವ.

**ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಂ**
**ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಂ॥15-12॥**

| |
|---|
| **ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ<br>ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ॥15-13॥** |
| **ಅಹಂ ವೈಶ್ವಾನರೋ ಭೂತ್ವಾ ಪ್ರಾಣನಾಂ ದೇಹಮಾಶ್ರಿತಃ<br>ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ॥15-14॥** |
| **ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟೋ ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ<br>ವೇದೈಶ್ಚ ಸರ್ವೈರಹಮೇವ ವೇದ್ಯೋ ವೇದಾಂತಕೃದ್ವೇದವಿದೇವ ಚಾಹಂ॥15-15॥** |
| **12-15.** "ಅಧಶ್ಚ ಮೂಲಾನ್ಯನುಸಂತತಾನಿ" ಎಂಬುದರಿಂದ ಭಗವಂತನು ಸರ್ವಾಂತರ್ಯಾಮಿಯೆಂದೂ, "ಊರ್ಧ್ವಮೂಲಂ" ಎಂಬಲ್ಲಿ ಅವನು ಸರ್ವೋತ್ತಮನೆಂದೂ ಹೇಳಿರುವುದನ್ನು ಮುಂದಿನಭಾಗದಿಂದ ವಿವರಿಸುತ್ತಾನೆ:- ಸಕಲ ಪ್ರಪಂಚವನ್ನೂ ಬೆಳಗುವಂತಹ, ಸೂರ್ಯನ ಪ್ರಕಾಶಶಕ್ತಿಯು, ಚಂದ್ರಗತವಾದ ಪ್ರಕಾಶಾದಿ ಸಾಮರ್ಥ್ಯವು ಮತ್ತು ಅಗ್ನಿಯಲ್ಲಿರುವ ದಾಹಕತ್ವ, ಪ್ರಕಾಶನ ಶಕ್ತಿಯೂ ನನ್ನ ಅಧೀನವಾದುದೆಂದು ತಿಳಿ. ನಾನೇ ಭೂಮಿಯನ್ನು ಪ್ರವೇಶಿಸಿ ಸ್ವಶಕ್ತಿಯಿಂದಲೇ ಸಕಲ ಪ್ರಾಣಿಗಳನ್ನೂ ಧರಿಸುತ್ತಿರುವೆನು. ನಾನೇ ಪರಮ ಸೌಮ್ಯನಾದುದರಿಂದ ಸೋಮನಾಮಕನಾಗಿ ಅಮೃತರಸರೂಪನಾದ ಚಂದ್ರನಲ್ಲಿದ್ದು ಸಕಲ ಸಸ್ಯಾದಿಗಳನ್ನೂ ವೃದ್ಧಿಪಡಿಸುತ್ತಿರುವನು. (ಸಕಲ ನರಾಂತರ್ಗತನಾದುದರಿಂದ ನಾನು ವೈಶ್ವಾನರನೆಂದೆನಿಸಿ ಪ್ರಾಣಿಗಳ ದೇಹದಲ್ಲಿನ ಜಾಠರಾಗ್ನಿಯಲ್ಲಿರುವವನಾಗಿ, ಪ್ರಾಣ-ಅಪಾನಗಳೆಂಬ ಮುಖ್ಯ ಪ್ರಾಣರೂಪಗಳಿಂದ ಸಹಿತನಾಗಿ ಭಕ್ಷ್ಯ-ಭೋಜ್ಯ-ಲೇಹ್ಯ-ಪೇಯ ಎಂದು ನಾಲ್ಕು ಬಗೆಯಾದ ಆಹಾರ ಪದಾರ್ಥವನ್ನು ಜೀರ್ಣಮಾಡಿಸುವೆನು. ಸರ್ವ ಪ್ರಾಣಿಗಳ ಹೃದಯದಲ್ಲಿಯೂ ನಾನೇ ಸನ್ನಿಹಿತನಾಗಿರುವನು. ಜನರಿಗೆ ಸ್ಮರಣೆ, ಅನುಭವ, ವಿಪರೀತಜ್ಞಾನ ಇವೆಲ್ಲವೂ ನನ್ನಿಂದಲೇ ಸಂಭವಿಸುತ್ತವೆ. ನಾನೇ ಸಕಲ ವೇದಗಳ ಪರಮ ಮುಖ್ಯಾರ್ಥನು. ವೇದಾರ್ಥನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನೂ ಸಹ ವ್ಯಾಸರೂಪದಿಂದ ಮಾಡಿದವನೂ ನಾನೇ. ಮತ್ತು ವೇದಗಳ ತಾತ್ಪರ್ಯವನ್ನು ಸಂಪೂರ್ಣವಾಗಿ ತಿಳಿದವನೆಂದರೆ ನಾನೊಬ್ಬನೇ ಎಂಬುದಾಗಿ ಸರ್ವಾಂತರ್ಯಾಮಿತ್ವವು ವಿವರಿಸಲ್ಪಟ್ಟಿತು. |
| **ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ<br>ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋऽಕ್ಷರ ಉಚ್ಯತೇ॥15-16॥** |

| |
|---|
| **ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ**<br>**ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ॥15-17॥** |
| **ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ**<br>**ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ॥15-18॥** |
| **16-18.** ಈಗ ಸರ್ವೋತ್ತಮತ್ವವನ್ನು ವಿವರಿಸುತ್ತಾನೆ:- ಭಗವದಧೀನ ಚೇತನವರ್ಗದಲ್ಲಿ ಕ್ಷರ, ಅಕ್ಷರ, ಎಂಬುದಾಗಿ ಎರಡುವಿಧ ಚೇತನರು ಪ್ರಸಿದ್ಧರಾಗಿರುವರು. ಚತುರ್ಮುಖಾದಿ ಜೀವರಾಶಿಯು ದೇಹನಾಶಾದಿಗಳನ್ನುಳ್ಳ ಕಾರಣ ಕ್ಷರವೆನಿಸಿದೆ. ಆಕಾಶದಂತೆ ನಿರ್ಲಿಪ್ತಳು, ಅವ್ಯಾಕೃತಾಕಾಶಕ್ಕೆ ಅಭಿಮಾನಿನಿಯೂ ಆದ ಶ್ರೀದೇವಿಯು ದೇಹನಾಶರಹಿತಳಾದ ಕಾರಣ 1ಅಕ್ಷರಪುರುಷಳೆಂದುಕ್ತಳಾಗಿರುವಳು. ಬ್ರಹ್ಮಾದಿ ಕ್ಷರಪುರುಷರು, ಅಕ್ಷರ ಪುರುಷನಾಮಕಳಾದ ಲಕ್ಷ್ಮೀದೇವಿ ಇವರಿಬ್ಬರಿಗಿಂತಲೂ ಭಿನ್ನನಾದ ಇನ್ನೊಬ್ಬ ಪುರುಷನಿರುವನು. ಅವನೇ ಕರಾಕ್ಷರಪುರುಷೋತ್ತಮನು. ಆದುದರಿಂದಲೇ ಅವನು ಪರಮ ಚೇತನನೆಂದು ಬೋಧಿಸುವ “ಪರಮಾತ್ಮಾ” ಎಂಬ ಶಬ್ದದಿಂದ ಅಲ್ಲಲ್ಲಿ ಉದಾಹರಿಸಲ್ಪಟ್ಟಿರುವನು. ಪರಮಾತ್ಮಾ ಎಂಬ ಶ್ರೌತನಾಮಧೇಯವೇ ಅವನು ಪುರುಷೋತ್ತಮನೆಂಬುದಕ್ಕೆ ಸಾಧಕವು. ಈ ಅಧ್ಯಾಯದಲ್ಲಿ ಸಕಲ ಗೀತಾಶಾಸ್ತ್ರಾರ್ಥವೂ ಸಂಗ್ರಹಿಸಲ್ಪಟ್ಟಿದೆ. ಇಲ್ಲಿ ಉಕ್ತವಾದ ವಿಷ್ಣು ಸರ್ವೋಮತ್ವಾದಿಗಳೇ ಸಕಲ ಶಾಸ್ತ್ರ ತಾತ್ಪರ್ಯಾರ್ಥವು. ಈ ರೀತಿಯಾದ ಶಾಸ್ತ್ರಾರ್ಥವನ್ನು ಚೆನ್ನಾಗಿ ನಿರ್ಧರಿಸಿದವನು ಧ್ಯಾನಾದಿ ಮೂಲಕವಾಗಿ ಅಪರೋಕ್ಷಜ್ಞಾನ ಹೊಂದಿ ಅದರಿಂದ ಭಗವತ್ಪ್ರಸಾದವನ್ನು ಪಡೆದು ಮುಕ್ತನಾಗುವನು. |
| ಅವನು ಉತ್ತಮನೆಂಬುದಕ್ಕೆ ಯುಕ್ತಿಯ ಸಾಧಕವಾಗಿದೆ. ಲೋಕದಲ್ಲಿ ಯಾವನು ಯಾರನ್ನು ಧರಿಸಿ ಪೋಷಿಸುವನೋ, ಅವನು ಅವರಿಗಿಂತ ಉತ್ತಮನು, ಭಿನ್ನನೂ ಆಗಿರುವನೆಂದು ಕಂಡಿದೆ. ಪ್ರಕೃತ ಯಾವ ಪರಮಾತ್ಮನು ಭೂಃ, ಭುವಃ, ಸ್ವಃ ಎಂಬ ಮೂರು ಲೋಕಗಳಲ್ಲಿಯೂ ಇರುವ ಸಕಲ ಚೇತನರಲ್ಲಿಯೂ ಇದ್ದು ಅವರನ್ನು ಧರಿಸಿ ಪೋಷಿಸುವವನಾಗಿರುವನೋ ಅಂತಹವನು ಪುರುಷೋತ್ತಮನು ಮತ್ತು ಇತರ ಪುರುಷ ಭಿನ್ನನು ಎಂಬುದು ಯುಕ್ತಿಸಿದ್ಧವೂ ಆಗಿದೆ. ಲೋಕತ್ರಯದಲ್ಲಿಯೂ ಪರಮಾತ್ಮನಿರುವನೆಂದಮೇಲೆ ಆ ಲೋಕತ್ರಯವು ನಾಶವಾದ ಬಳಿಕ ಅದನ್ನಾಶ್ರಯಿಸಿದ ಪರಮಾತ್ಮನಿಗೂ ನಾಶಬರುವುದೇ? ಎಂದರೇ ಅವನು ಲೋಕದವರಂತೆ ಅಶಕ್ತನಲ್ಲ; ಈಶ್ವರನು=ಅಚಿಂತ್ಯಾದ್ಭುತ ಸಾಮರ್ಥ್ಯೋಪೇತನು. ಆದುದರಿಂದಲೇ ಆಶ್ರಯವಾದ |

ಲೋಕಗಳು ಹೋದರೂ ಪರಮಾತ್ಮನು ತನ್ನ ಅಚಿಂತ್ಯಶಕ್ತಿಯಿಂದ ಯಥಾಪ್ರಕಾರವಾಗಿದ್ದೆ ಇರುವನು. ಇಂತಹ ಮಹಾಮಹಿಮೋಪೇತನಾಗಿರುವುದರಿಂದ ಈಶ್ವರನೆಂಬ ನಾಮಧೇಯವು ಅವನಿಗೆ ಅನ್ವರ್ಥಕವು. ಕ್ಷರಾಕ್ಷರಪುರುಷೋತ್ತಮನು ಯಾರು? ಎಂದರೆ:- ನಾನೇ ಆ ಪುರುಷೋತ್ತಮನು. ನಾನು ಕ್ಷರಪುರುಷ ಸಮೂಹವನ್ನತಿಕ್ರಮಿಸಿರುವೆನು; ಅಕ್ಷರ ಪುರುಷನಿಗಿಂತಲೂ ಶ್ರೇಷ್ಠನೂ ಆಗಿರುವೆನು. ಆದಕಾರಣ ಪೌರುಷೇಯವಾದ ಪುರಾಣೇತಿಹಾಸಾದಿಗಳಲ್ಲಿಯೂ, ಅಪೌರುಷೇಯ ವೇದದಲ್ಲಿಯೂ ಕೂಡ ಪುರುಷೋತ್ತಮನೆಂದು ಪ್ರಖ್ಯಾತನಾಗಿರುವೆನು.

1. "ಪುಲ್ಲಿಂಗೇನೋಚ್ಯತೇ ಸ್ತ್ರೀ ಚ ಪುಂವಚ್ಛಕ್ತಿ ಮತೀ ಕ್ವಚಿತ್" ಎಂಬ ಛಾಂದೋಗ್ಯ ಭಾಷ್ಯದಲ್ಲಿ ಉಕ್ತವಾದ ಪ್ರಮಾಣವಚನಾನುಸಾರ ಪುರುಷನಂತೆ ಸಾಮರ್ಥ್ಯವಂತಳಾದ ಸ್ತ್ರೀಯು ಪುಲ್ಲಿಂಗಶಬ್ದ ವಾಚ್ಯಳಾಗುವಳು. ಪ್ರಕೃತ ಲಕ್ಷ್ಮೀದೇವಿಯು ಬ್ರಹ್ಮಾದಿ ಸಕಲ ಪುರುಷಶಕ್ತಿವಿಲಕ್ಷಣವಾದ ಮಹಾಪುರುಷಶಕ್ತಿ ಸಂಪನ್ನಳಾಗಿರುವುದರಿಂದ ಅಕ್ಷರಪುರುಷಳೆಂದು ಹೇಳಿದೆ. ಪುರುಷ ಎಂದರೆ ದೇಹದಲ್ಲಿರುವವನೆಂದರ್ಥ. [ಬ್ರಹ್ಮಾದಿ ಜೀವರು ಅವರವರ ಶರೀರದಲ್ಲಿರುವರು. ಪರಮಾತ್ಮನು ಸರ್ವ ದೇಹಗಳಲ್ಲಿಯೂ ನಿಯಾಮಕನಾಗಿರುವನು.] ಅವನನ್ನು ಎಡೆಬಿಡದಿರುವ ಲಕ್ಷ್ಮೀ ದೇವಿಯು ಅವನಿರುವ ಸಕಲ ದೇಹಗಳಲ್ಲಿ ಇರುವಳು. ಹೀಗೆ ಬ್ರಹ್ಮಾದಿಜೀವರು ಲಕ್ಷ್ಮೀದೇವಿ, ಪರಮಾತ್ಮ ಈ ಮೂವರೂ ದೇಹದಲ್ಲಿರುವ ಕಾರಣದಿಂದ ಪುರುಷರೆನಿಸುವರೆಂದು ತಿಳಿಯಬೇಕು.

**ಯೋ ಮಾಮೇವಮಸಂಮೂಡೋ ಜಾನಾತಿ ಪುರುಷೋತ್ತಮಂ**

**ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ॥15-19॥**

**19.** ಭರತಕುಲಪ್ರಸೂತ! ಅಥವಾ, ಬ್ರಹ್ಮವಿದ್ಯಾರತನಾದ ಅರ್ಜುನ! ಈ ರೀತಿಯಾಗಿ "ಶ್ರೀಕೃಷ್ಣನೇ ಕ್ಷರಾಕ್ಷರಪುರುಷೋತ್ತಮನು, ಹಾಗೆಯೇ ವೇದಾದಿಗಳಲ್ಲಿ ಪ್ರಖ್ಯಾತನಾಗಿರುವನು" ಎಂಬುದಾಗಿ ಯಾವನು ಸರ್ವೋತ್ತಮತ್ವಾದಿಗಳು ಮಿಥ್ಯಾಭೂತವೆಂಬ ಮೋಹವಿಲ್ಲದವನಾಗಿ ನನ್ನನ್ನು ಕರಾಕ್ಷರ ಪುರುಷೋತ್ತಮನೆಂದು ತಿಳಿಯುತ್ತಾನೆಯೋ ಅವನು ಸಕಲಶಾಸ್ತ್ರಜ್ಞನು; ಶಾಸ್ತ್ರೋಕ್ತ ಸಕಲ ಪ್ರಕಾರಗಳಿಂದಲೂ ನನ್ನನ್ನು ಭಜಿಸುವವನೂ ಆಗುತ್ತಾನೆ. ಇದರಿಂದ ವಿಷ್ಣು ಸರ್ವೋತ್ತಮತ್ವವೇ ಸಕಲ ಶಾಸ್ತ್ರತಾತ್ಪರ್ಯಾರ್ಥವೆಂದು ಸಿದ್ಧಿಸುವುದೆಂದು ಭಾವ.

**ಇತಿ ಗುಹ್ಯತಮಂಶಾಸ್ತ್ರವಿದಮುಕ್ತಂ ಮಯಾನಘ**

**ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ॥15-20॥**

**20.** ಅರ್ಜುನ! ಅತ್ಯಂತ ಗೋಪ್ಯವಾದ ಈ ಗೀತಾಶಾಸ್ತ್ರವನ್ನು ನಿನಗೆ ಉಪದೇಶಿಸಿದೆನು. ನೀನು ಪಾಪರಹಿತನು, ಬ್ರಹ್ಮವಿದ್ಯಾರತನು, ಮಹಾಕುಲಪ್ರಸೂತನೂ ಆಗಿರುವುದರಿಂದ ಈ ತತ್ತ್ವೋಪದೇಶಕ್ಕೆ ಪಾತ್ರನಾಗಿರುವೆಯಾದ ಕಾರಣ ನಿನಗೆ ಇಂತಹ ಉಪದೇಶವನ್ನು ಮಾಡಿರುವನು.

ಈ ಅಧ್ಯಾಯದಲ್ಲಿ ಸಕಲ ಗೀತಾಶಾಸ್ತ್ರವು ಸಂಗ್ರಹಿಸಲ್ಪಟ್ಟಿದೆ. ಇಲ್ಲಿ ಉಕ್ತವಾದ ವಿಷ್ಣುಸರ್ವೋತ್ತಮತ್ವಾದಿಗಳೇ ಸಕಲಶಾಸ್ತ್ರ ತಾತ್ಪರ್ಯಾರ್ಥವು. ಈ ರೀತಿಯಾದ ಶಾಸ್ತ್ರಾರ್ಥವನ್ನು ಚೆನ್ನಾಗಿ ನಿರ್ಧರಿಸಿದವನು ಧ್ಯಾನಾದಿ ಮೂಲಕವಾಗಿ ಅಪರೋಕ್ಷಜ್ಞಾನ ಹೊಂದಿ ಅದರಿಂದ ಭಗವತ್ಪ್ರಸಾದವನ್ನು ಪಡೆದು ಮುಕ್ತನಾಗುವನು.

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಪುರಾಣಪುರುಷೋತ್ತಮಯೋಗೋ ನಾಮ ಪಂಚದಶೋಽಧ್ಯಾಯಃ॥15-[20]॥

## ಷೋಡಶೋಽಧ್ಯಾಯಃ॥16-[24]॥

ಶ್ರೀಭಗವಾನುವಾಚ

ಪೂರ್ವಾಧ್ಯಾಯದಲ್ಲಿ "ನಿರ್ಮಾನಮೋಹಾ" 15-5 ಇತ್ಯಾದಿ ಗ್ರಂಥದಿಂದ ಉಕ್ತವಾದ ಪುರುಷಾರ್ಥ ಸಾಧನೆಯು ದೇವಲಕ್ಷಣವು. (ಸಾತ್ವಿಕ ಲಕ್ಷಣ) "ಯತಂ ತೋಽಪ್ಯಕೃತಾತ್ಮಾನಃ" ೧೫-೧೧ ಇತ್ಯಾದಿ ಗ್ರಂಥದಿಂದುಕ್ತವಾದ ಪುರುಷಾರ್ಥ ವಿರೋಧಿದೋಷಗಳು ಆಸುರಲಕ್ಷಣವು. ಮೋಕ್ಷಾರ್ಥಿಯಾದ ಅಧಿಕಾರಿಯು ದೇವಲಕ್ಷಣವಾದ ಸಾಧನೆಯನ್ನಾಚರಿಸಬೇಕು. ಅಸುರಲಕ್ಷಣವಾದ ದೋಷವನ್ನು ಬಿಡಬೇಕು. ಅದಕ್ಕಾಗಿ ದೇವಾಸುರಲಕ್ಷಣಗಳನ್ನು ವಿವೇಚನೆಮಾಡಿ ಚೆನ್ನಾಗಿ ತಿಳಿಯುವುದಾವಶ್ಯಕವಾಗಿರುವುದರಿಂದ ಅದನ್ನೇ ಈ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸುವನು.

ಅಭಯಂ ಸತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಂ॥16-1॥

ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಂ
ದಯಾ ಭೂತೇಷ್ವಲೋಲುಪ್ತಂ ಮಾರ್ದವಂ ಹ್ರೀರಚಾಪಲಂ॥16-2॥

ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ॥16-3॥

1-3. ಆದಿಯಲ್ಲಿ ಮುಖ್ಯವಾದ ದೇವಲಕ್ಷಣವನ್ನು ಭಗವಂತನು ಹೇಳುತಾನೆ:- ಶ್ರೀಕೃಷ್ಣನೇ ಸಕಲ ಭಯಕಾರಣನೆಂದರಿತು ಇತರರಿಂದ ತಾನು ಭಯಪಡದೆ ತಾನೂ ಇತರರನ್ನು ಭಯಪಡಿಸದೇ

ಇರುವುದು, ಮನಃ ಪ್ರಸನ್ನತೆ, ಜ್ಞಾನೋಪಾಯನಿಷ್ಟೆ, ಪಾತ್ರರಿಗೆ ದಾನಮಾಡುವುದು, ಇಂದ್ರಿಯನಿಗ್ರಹ, ಜ್ಯೋತಿಷ್ಟೋಮಾದಿಗಳು ಅಥವಾ ದೇವಯಜ್ಞಪಿತೃ ಯಜ್ಞಾದಿಗಳು, ವೇದಾಧ್ಯಯನ, ಬ್ರಹ್ಮಚರ್ಯೆ ಮುಂತಾದ ತಪಸ್ಸು, ಮನಸ್ಸು-ನುಡಿ-ನಡೆ ಇವುಗಳಲ್ಲಿ ಒಂದೇ ರೀತಿಯಾಗಿರುವುದು, ಅಹಿಂಸೆ (ಇತರರ ಪ್ರಾಣ ತೆಗೆಯದಿರುವುದು), ನಿಜವನ್ನು ಹೇಳುವುದು, ಇತರರನ್ನು ಬಾಧೆಪಡಿಸುವಂತಹ ಚಿತ್ತವೃತ್ತಿಯಿಲ್ಲದಿರುವಿಕೆ, ಔದಾರ್ಯ, ಭಗವಂತನಲ್ಲಿಯೇ ಮನಸ್ಸನ್ನು ನಿಲ್ಲಿಸುವುದು, ಚಾಡಿ ಹೇಳದಿರುವುದು, ಇತರರ ದುಃಖಕ್ಕೆ ಮರುಗಿ ಅದನ್ನು ಪರಿಹರಿಸಬೇಕೆಂಬ ಇಚ್ಛೆ(ದಯೆ), ವಿಷಯಗಳಲ್ಲಿ ಅತ್ಯಾಸಕ್ತಿಯಿಲ್ಲದಿರುವಿಕೆ, ತನಗೆ ಹಿಂಸೆ ಕೊಡುವವರನ್ನು ವಿರೋಧಿಸದಿರುವುದು, ಅಕಾರ್ಯಾಚರಣೆಯಲ್ಲಿ ಲಜ್ಜೆ, ಸ್ಥೈರ್ಯ, ಇತರರನ್ನು ತಿರಸ್ಕರಿಸುವ ಸಾಮರ್ಥ್ಯ ಅಥವಾ ಇತರರಿಂದ ತಿರಸ್ಕರಿಸಲ್ಪಡದಿರುವುದು, ಅಪಕಾರಿಗಳಿಗೂ ಪ್ರತ್ಯುಪಕಾರ ಮಾಡದಿರುವುದು, ಧೈರ್ಯ, ಮೃತ್ತಿಕಾಜಲಾದಿಗಳಿಂದ ಬಹಿರಂಗಶುದ್ಧಿ - ಭಗವತ್ಸ್ಮರಣಾದಿಗಳಿಂದ ಅಂತರಂಗಶುದ್ಧಿ ಎಂಬೀ ಎರಡುಬಗೆಯ ಶುದ್ಧಿ, ಪರರ ಜೀವನಕ್ಕೆ ತೊಂದರೆ ಮಾಡದಿರುವುದು ಮತ್ತು ಅಹಂಕಾರತ್ಯಾಗ ಎಂಬೀ ಇಪ್ಪತ್ತಾರು ಗುಣಗಳು ದೇವತಾಸ್ವಭಾವವನ್ನು ಹೊಂದಿದವನಿಗೆ ಲಭಿಸುತ್ತವೆ. ಮೋಕ್ಷಾರ್ಥಿಯು ಈ ಗುಣಗಳನ್ನು ಅವಶ್ಯವಾಗಿ ಸಂಪಾದಿಸಬೇಕು. ಅರ್ಜುನ! ನೀನು ಮಹಾಕುಲಪ್ರಸೂತನಾಗಿರುವ ಕಾರಣ ದೇವಸ್ವಭಾವವನ್ನು ಹೊಂದಿರುವೆ. ಈ ಗುಣಗಳು ನಿನಗೆ ಯೋಗ್ಯವೆಂದು ಭಾವ.

**ದಂಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ**
**ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಂ॥16-4॥**

4. ತಾನು ಅಲ್ಪನೆಂಬುದನ್ನು ತಿಳಿದೂ ಮಹತ್ವವನ್ನು ನಟಿಸುವುದು, ಭಯ ಸಾಮಗ್ರಿಯು ಸಂನಿಹಿತವಾಗಿದ್ದರೂ ಮದದಿಂದ ಭಯಪಡದಿರುವುದು, ಎಲ್ಲೆಯನ್ನು ಮೀರಿ ಸ್ವಮಹತ್ವನಟನೆ, ಇತರರಿಗೆ ಬಾಧೆ ಕೊಡಬೇಕೆಂಬ ಚಿತ್ತವೃತ್ತಿ, ನಿಷ್ಠುರ ಭಾಷಣ, ತತ್ವಜ್ಞಾನವಿಲ್ಲದಿರುವಿಕೆ ಮತ್ತು ವಿಪರೀತಜ್ಞಾನ ಎಂಬೀ ಆರು ದೋಷಗಳು ಆಸುರಸ್ವಭಾವವನ್ನು ಹೊಂದಿರುವವರ ಲಕ್ಷಣವು, ದೇವಸ್ವಭಾವವನ್ನು ಹೊಂದಲಪೇಕ್ಷಿಸುವವರು ಈ ದೋಷಗಳನ್ನು ಪ್ರಯತ್ನಪೂರ್ವಕವಾಗಿ ತ್ಯಾಗ ಮಾಡಬೇಕು.

**ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ**
**ಮಾ ಶುಚಃ ಸಂಪದಂ ದೈವೀಮಭಿಜಾತೋಽಸಿ ಪಾಂಡವ॥16-5॥**

5. ಉಕ್ತ ದೇವಲಕ್ಷಣ ಶುಭಗುಣಗಳು ಸಂಸಾರಬಂಧದಿಂದ ಮುಕ್ತಿಯಾಗುವುದಕ್ಕೆ ಕಾರಣವೆಂದೂ, ಆಸುರಲಕ್ಷಣ ದೋಷಸಮೂಹವು ಮಹಾತಮಸ್ಸಿನಲ್ಲಿ ವಾಸರೂಪಬಂಧಕ್ಕೆ ಸಾಧನವೆಂದೂ ಜ್ಞಾನಿಮತವು. ಪಾಂಡುನಂದನ! ನೀನು ದೇವಸಂಪತ್ತನ್ನು ಹೊಂದಿರುವೆ. ಆದಕಾರಣ ಶೋಕ ಪಡಬೇಕಾದ್ದಿಲ್ಲ.

**ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ**

**ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇ ಶೃಣು॥16-6॥**

6. ಮಾನುಷ, ರಾಕ್ಷಸ, ಗಂಧರ್ವ ಮೊದಲಾದ ಬಹುಜೀವರಾಶಿಗಳಿರುವಾಗ ಅವೆಲ್ಲವನ್ನೂ ಬಿಟ್ಟು ದೈವಾಸುರರೆಂಬ ದ್ವಿವಿಧ ಜೀವಸ್ವಭಾವವನ್ನು ಮಾತ್ರ ಹೇಳಲು ಕಾರಣವೇನು? ಉಳಿದುದನ್ನೇಕೆ ಹೇಳಲಿಲ್ಲ? ಎಂದರೆ ಅಧಿಕಶುಭಫಲಭಾಗಿಯಾಗುವ ಜೀವರಾಶಿ ಒಂದು, ಅಶುಭಫಲವನ್ನೇ ಹೆಚ್ಚಾಗಿ ಹೊಂದುವ ಜೀವರಾಶಿಯಿನ್ನೊಂದು ಈರೀತಿ ವಿಭಾಗಿಸಲ್ಪಟ್ಟಿದೆ. ಮಾನುಷಾದ್ಯನೇಕ ಜೀವರೆಲ್ಲರೂ ಈ ಎರಡು ರಾಶಿಗಳಲ್ಲಿಯೇ ಅಡಗುವರು ಎಂಬ ಅಭಿಪ್ರಾಯದಿಂದ ದೈವಾಸುರ ಸೃಷ್ಟಿದ್ವಯವನ್ನೇ ಭಗವಂತನು ಹೇಳುತ್ತಾನೆ:- ಪಾರ್ಥ! ಈ ಪ್ರಪಂಚದಲ್ಲಿ ಪ್ರಾಣಿಸೃಷ್ಟಿ ಅಥವಾ ಸ್ವಭಾವವು ದೈವ-ಆಸುರ ಎಂಬುದಾಗಿ ಎರಡೇ ಬಗೆಯು ಶುಭಫಲಾರ್ಹವಾದುದು ದೈವವು. ಅಶುಭಫಲಾರ್ಹವಾದುದು ಆಸುರವು. ಈ ಎರಡು ಪಂಗಡಗಳಲ್ಲಿಯೇ ಮಾನುಷಾದಿಗಳೆಲ್ಲವೂ ಯಥಾಯೋಗ್ಯವಾಗಿ ಸೇರುತ್ತವೆ. ದೈವಸರ್ಗವು ವಿಸ್ತಾರವಾಗಿ ಹೇಳಲ್ಪಟ್ಟಿತು. ಇನ್ನು ಅಸುರಸಂಬಂಧಿಸರ್ಗ ಅಥವಾ ಸ್ವಭಾವವನ್ನು ವಿಸ್ತಾರವಾಗಿ ಹೇಳುವೆನು ಕೇಳು!

**ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ**

**ನ ಶೌಚಂ ನಾಪಿ ಚಾಚಾರೋ ನ ಸತ್ಯಂ ತೇಷು ವಿದ್ಯತೆ॥16-7॥**

**ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಂ**

**ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಂ॥16-8॥**

**ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ**

**ಪ್ರಭವಂತ್ಯುಗ್ರ ಕರ್ಮಾಣಃ ಕ್ಷಯಾಯ ಜಗತೋಹಿತಾಃ॥16-9॥**

**ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ**

**ಮೋಹಾದ್ಗೃಹೀತ್ವಾಽಸದ್ಗ್ರಾಹಾನ್ಪ್ರವರ್ತಂತೇಽಶುಚಿವ್ರತಾಃ॥16-10॥**

| |
|---|
| ಚಿಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ<br>ಕಾಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ॥16-11॥ |
| ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ<br>ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಂಚಯಾನ್॥16-12॥ |
| ಇದಮದ್ಯಮಯಾ ಲಬ್ಧಮಿಮಂ ಪ್ರಾಪ್ಸ್ಯಸೇ ಮನೋರಥಂ<br>ಇದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಂ॥16-13॥ |
| ಅಸೌ ಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ<br>ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ಸುಖೀ॥16-14॥ |
| ಆಢ್ಯೋಽಭಿಜನವಾನೋಽಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ<br>ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ॥16-15॥ |
| ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ<br>ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ॥16-16॥ |
| ಆತ್ಮ ಸಂಭಾವಿತಾಃ ಸ್ತಬ್ಧಾಃ ಧನಮಾನಮದಾನ್ವಿತಾಃ<br>ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಂ॥16-17॥ |
| ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ<br>ಮಾಮಾತ್ಮ ಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ॥16-18॥ |

7-18. ಈ 12 ಶ್ಲೋಕಗಳು ಆಸುರಸ್ವಭಾವವಿವರಣೆಯು:- ಶುಭಫಲಾರ್ಹರಲ್ಲದ ಆಸುರಸ್ವಭಾವವುಳ್ಳ ಜನರು ಕರ್ತವ್ಯದಲ್ಲಿ ಪ್ರವೃತ್ತಿ, ಆಕರ್ತವ್ಯದಲ್ಲಿ ನಿವೃತ್ತಿ, ಸ್ವರ್ಗಾದಿಸಾಧನ ಪ್ರವೃತ್ತಿಧರ್ಮ, ಮೋಕ್ಷಸಾಧನ ನಿವೃತ್ತಿಧರ್ಮ, ವಿಧಿ ನಿಷೇಧವಚನ ಇವುಗಳನ್ನು ತಿಳಿಯುವುದಿಲ್ಲ. ಅಂತಹ ಅಸುರಸ್ವಭಾವದವರಲ್ಲಿ ಪ್ರಾಣಿಗಳಿಗೆ ಪ್ರಿಯವಾದ ಸತ್ಯಭಾಷಣವಿರುವುದಿಲ್ಲ. ಬಾಹ್ಯಾಭ್ಯಂತರಶುದ್ಧಿಯಿಲ್ಲ. ನಿತ್ಯನೈಮಿತ್ತಿಕಕರ್ಮಾನುಷ್ಠಾನರೂಪ ಸದಾಚರಣೆಯೂ ಇಲ್ಲ. ಅಸುರ ಸ್ವಭಾವದವರು ವಿಷ್ಣುವು ಈ ಜಗತ್ತಿಗೆ ಸೃಷ್ಟಿ, ಸ್ಥಿತಿಸಂಹಾರನಿಯಮನಕರ್ತನಲ್ಲ ಎಂದು ಹೇಳುವರು ಮತ್ತು ಅವರು ಈ ಜಗತ್ತು "ಅನ್ನಾದ್ಭವಂತಿ ಭೂತಾನಿ" 3-14, ಎಂಬಲ್ಲಿ ಹೇಳಿರುವ

ಪ್ರಕಾರ ಈಶ್ವರನಿಂದ ಅಭಿವ್ಯಕ್ತವಾದ ವೇದವಿಹಿತ ತದ್ವರ್ಣಾಶ್ರಮೋಚಿತ ಕರ್ಮಮೂಲಕವಲ್ಲವು. ಹಾಗಾದರೆ ಈ ಜಗತ್ತಿನ ಕಾರಣವೇನೆಂದರೆ:- ಕಾಮಮೂಲಕ ಸ್ತ್ರೀ ಪುರುಷ ಸಂಭೋಗಮಾತ್ರದಿಂದಲೇ ಸರ್ವವೂ ಹುಟ್ಟುವುದು. ಬೇರೆ ಕಾರಣವಿಲ್ಲ, ಅಥವಾ ಜಗತ್ತು ಶುಕ್ತಿರಜತದಂತೆ ಮಿಥ್ಯೆಯು(ಸುಳ್ಳು). ಅದರಂತೆಯೇ ಜಗತ್ತಿಗೆ ನಿಜವಾದ ಸ್ಥಿತಿಯಿಲ್ಲ. ಶುಕ್ತಿ (ಕಪ್ಪೆಚಿಪ್ಪು)ಯೆಂಬ ಅಧಿಷ್ಠಾನ ತತ್ವಜ್ಞಾನದಿಂದ ರಜತವು ಬಾಧಿತವಾಗುವಂತೆ ಬ್ರಹ್ಮಜ್ಞಾನದಿಂದ ಜಗತ್ತು ಬಾಧಿತವಾಗುವುದು, ಹೀಗೆ ಮಿಥ್ಯಯಾದುದರಿಂದ ಈ ಜಗತ್ತಿಗೆ ನಿಯಾಮಕನಾದ ಈಶ್ವರನಿಲ್ಲ. ಇದು ಉತ್ತಮವಾದ ಒಂದು ವಸ್ತುವಿನಿಂದ ಹುಟ್ಟಿದುದಲ್ಲ. ಹಾಗಾದರೆ ಜಗಸ್ಥಿತಿಗೆ ಕಾರಣವೇನೆಂದರೆ:- 'ಕಾಮ ಹೈತುಕಂ" ಎಂಬುದೇ ಉತ್ತರವು, ಕಾಮಾದಿಗಳಿಗೆ ಮೂಲಕಾರಣವಾದ ಅವಿದ್ಯೆಯೆಂಬ ಮಾಯೆಯಿಂದ ವಾಸ್ತವಿಕವಾಗಿ ಇಲ್ಲದಿರುವ ಜಗತ್ತು ಇದ್ದಂತೆ ತೋರುವುದು. ಅದು ಎಂತಹುದೆಂದರೆ ಅನ್ಯತ್=ಸದಸದ್ವಿಲಕ್ಷಣವು(ಅನಿರ್ವಚನೀಯವು) ಎಂದು ಹೇಳುತ್ತಾರೆ. ಉಕ್ತ ಚಾರ್ವಾಕ ಮಾಯಾವಾದಿಮತ ಸಿದ್ಧವಾದ ಜ್ಞಾನವನ್ನಾಶ್ರಯಿಸಿ ದುಷ್ಟಚಿತ್ತರಾಗಿ, ಅಲ್ಪ ವಿಷಯಜ್ಞಾನವನ್ನು ಹೊಂದಿದ, ಭಯಂಕರ ಕರ್ಮದಲ್ಲಾಸಕ್ತರಾದ ಈ ಅಸುರಜನರು ಜಗತ್ತಿಗೆ ಕ್ಷೇಮವನ್ನೇ ಹಾಳುಮಾಡುವವರಾಗಿ, ತಾವೂ ನರಕಾದ್ಯನರ್ಥಗಳನ್ನು ಹೊಂದುವುದಕ್ಕಾಗಿಯೇ ಭೂಲೋಕದಲ್ಲಿ ಕಲಿಯುಗಾದಿಗಳಲ್ಲಿ ಹುಟ್ಟುತ್ತಾರೆ. ಅವರು ಎಷ್ಟು ದೊರೆತರೂ ತೃಪ್ತಿಯಾಗದಿರುವ ಇಚ್ಛೆಯನ್ನು ಹೊಂದಿ ದಂಭ ಅಹಂಕಾರ ಮದಗಳಿಂದ ಕೂಡಿ, ಮಿಥ್ಯಾ ಜ್ಞಾನ ಸ್ವಭಾವದಿಂದ ಶಾಸ್ತ್ರಕ್ಕೆ ವಿಪರೀತಾರ್ಥವನ್ನೇ ತಿಳಿದುಕೊಂಡು, ಅಶುದ್ಧ ಕರ್ಮಗಳಲ್ಲಾಸಕ್ತರಾಗಿ ಕ್ಷುದ್ರ ಭೋಗಾರ್ಥವಾಗಿ ಪ್ರವರ್ತಿಸುತ್ತಾರೆ. ಅಗಾಧವಾದ ಮರಣಾಂತಕವಾದ ಆಲೋಚನೆಗಳಲ್ಲಿ ಮಗ್ನರಾಗಿ, ಸ್ರಕ್ಚಂದನವನಿತಾದಿವಿಷಯ ಭೋಗೈಕರತರಾಗಿ, ಐಹಿಕ ಸುಖವೇ ಫಲವೆಂದೂ, ಅದರ ಮೇಲೆ ಯಾವುದೂ ಇಲ್ಲವೆಂದೇ ನಿಶ್ಚಯಿಸಿ, ಅನಂತವಾದ ಆಶೆಗಳೆಂಬ ಹಗ್ಗದಿಂದ ಬಂಧಿತರಾಗಿ, ಕಾಮ ಕ್ರೋಧಗಳನ್ನೇ ಮೂಲವಾಗಿಟ್ಟುಕೊಂಡು, ವಿಷಯ ಭೋಗಕ್ಕಾಗಿ ಚೌರ್ಯಾದಿ ಅಮಾರ್ಗದಿಂದ ದ್ರವ್ಯಾರ್ಜನೆಮಾಡಲು ಯತ್ನಿಸುವರು. ಇವರ ಚಿಂತಾಪ್ರಕಾರವು ಹೀಗಿದೆ:- ಈ ಗೋ-ಭೂ-ಹಿರಣಾದ-ರೂಪದ್ರವ್ಯವು ಈಗ ನನಗೆ ಲಬ್ಧವಾಯಿತು; ನನ್ನ ಈ ಮನೋಭೀಷ್ಟವನ್ನು ಹೊಂದೇ ತೀರುವೆನು; ಇಷ್ಟು ಧನವು ನನ್ನಲ್ಲಿರುವುದು; ಇನ್ನೂ ಹೆಚ್ಚು ಹೆಚ್ಚಾಗಿ ಧನವು ಮತ್ತೆ ನನಗೆ ಬರುವುದು! ಈ ಶತ್ರುವು ನನ್ನಿಂದಲೇ ಕೊಲ್ಲಲ್ಪಟ್ಟನು. ಇತರ ಶತ್ರುಗಳನ್ನೂ ಕೂಡ ನಾನೇ ಕೊಲ್ಲುವೆನು. ನಾನೇ ಸ್ವತಂತ್ರನಾದ ಪರಮೇಶ್ವರನು, ನಾನೇ ಐಹಿಕಾಮುಷ್ಮಿಕಭೋಗ

ಸಂಪನ್ನನು ನಾನು ಕೃತಕೃತ್ಯನು, ಶಕ್ತಿವಂತನು, ಸುಖಪೂರ್ಣನು. ನಾನೇ ಮಹಾಧನಿಕನು, ಸತ್ಕುಲಪ್ರಸೂತನೂ ಆಗಿರುವೆನು. ನನಗೆ ಸಮಾನರಾದವರು ಬೇರೆ ಯಾರಿರುವರು? ಯಾರೂ ಇಲ್ಲ. ನಾನು ಯೋಗಾದಿಧರ್ಮಗಳನ್ನಾಚರಿಸುತ್ತಿರುವೆನು. ನನ್ನನ್ನು ಸ್ತುತಿಸುವಂತಹ ನಟವಿಟಗಾಯಕಾದಿಗಳಿಗೆ ಹೇರಳವಾಗಿ ದಾನಮಾಡುತ್ತಿರುವೆನು. ಸಂತೋಷವನ್ನು ಹೊಂದುತ್ತಿರುವೆನು! ಇತ್ಯಾದಿ ಮಿಥ್ಯಾಜ್ಞಾನದಿಂದ ಮೋಹಿತರಾಗುವರು. ನಾನಾವಿಧ ದುರಾಲೋಚನೆಗಳಿಂದ ಚಿತ್ತ ವಿಭ್ರಮಗೊಂಡವರಾಗಿ ದಾರಾಪತ್ಯಾದಿ ಮೋಹವೆಂಬ ಬಲೆಯಿಂದ ಆವರಿಸಲ್ಪಟ್ಟು ಯಥೇಷ್ಟ ವಿಷಯಭೋಗಾಸಕ್ತರಾಗಿ ಬಹುಕಶ್ಮಲವಾದ ನರಕದಲ್ಲಿ ಬೀಳುವರು. ಯಾಗಾದಿ ಸತ್ಕರ್ಮಮಾಡುವವರಿಗೆ ನರಕಪ್ರಾಪ್ತಿಯು ಹೇಗೆಂದರೆ:- ಅವರು ತಮ್ಮಲ್ಲಿ ತಾವೇ ದೊಡ್ಡವರೆಂದು ತಿಳಿದುಕೊಂಡು "ನಾವೇ ಪೂಜ್ಯರು" ಎಂದು ತಮ್ಮನ್ನು ತಾವೇ ಬಹುಮಾನಮಾಡಿಕೊಳ್ಳುತ್ತ, ಗುರುಹಿರಿಯರಾರಲ್ಲಿಯೂ ವಿನಯವನ್ನು ತೋರಿಸದೆ, ಐಶ್ವರ್ಯಮೂಲಕವಾದ ಗರ್ವದರ್ಪಗಳಿಂದ ಯುಕ್ತರಾಗಿ ವಿಧ್ಯುಕ್ತ ಕ್ರಮವನ್ನು ಬಿಟ್ಟು ತನ್ನ ಮಹತ್ವ ಪ್ರದರ್ಶನಮಾಡುವ ಉದ್ದೇಶದಿಂದಲೇ ಅಸುರಸ್ವಭಾವದ ಜನರು ಜ್ಯೋತಿಷ್ಟೋಮಾದಿ ಯಜ್ಞಗಳನ್ನು ಮಾಡಿ ಯಾಗಮಾಡಿದವರೆಂದು ಖ್ಯಾತರಾಗುತ್ತಾರೆ. ಯಜ್ಞಾದಿಗಳು ಭಗವತ್ಪ್ರೀತಿಕರವು. ಅದರಿಂದ ಭಗವಂತನನ್ನರ್ಚಿಸಿ ಅವನ ಅನುಗ್ರಹಕ್ಕೆ ಪಾತ್ರರಾಗಬೇಕೆಂಬ ಉದ್ದೇಶವಿಲ್ಲದೆ ಕೇವಲ ಪ್ರತಿಷ್ಠೆಗಾಗಿ ಅಥವಾ ಜೀವನಕ್ಕಾಗಿ ಯಾಗಾದಿಗಳನ್ನು ಅಸುರ ಸ್ವಭಾವದವರು ಮಾಡುವುದರಿಂದ ಅವರಿಗೆ ನರಕ ಪ್ರಾಪ್ತಿಯೇ ಉಚಿತಫಲವೆಂದು ಭಾವ. ಅಷ್ಟೇ ಅಲ್ಲ; ಅಸುರಸ್ವಭಾವದವರು "ಸ್ವತಂತ್ರವಾಗಿ ನಾನೇ ಕಾರ್ಯವನ್ನು ಮಾಡುವೆನು. ನನ್ನ ಶಕ್ತಿಯಿಂದಲೇ ಸರ್ವಸಿದ್ಧಿಯಾಗುವುದು" ಎಂಬ ಬಲಮೂಲಕಾಭಿಮಾನವನ್ನು, "ನನ್ನ ಇಚ್ಛೆಯಿಂದಲೇ ಎಲ್ಲವೂ ಸಿದ್ಧಿಸುವುದು; ನನ್ನ ಇಚ್ಛೆಗೆ ಯಾವಾಗಲೂ ಪ್ರತಿಯಿಲ್ಲ" ಎಂಬ ಕಾಮಮೂಲಕಾಭಿಮಾನವನ್ನು ಮತ್ತು ಕ್ರೋಧವನ್ನೂ ಚೆನ್ನಾಗಿ ಆಶ್ರಯಿಸಿದವರಾಗಿ ತಮ್ಮ ಶರೀರ ಮತ್ತು ಇತರರ ಶರೀರಗಳಲ್ಲಿಯೂ ನಿಯಾಮಕನಾಗಿರುವ ನನ್ನನ್ನು ಅತ್ಯಂತವಾಗಿ [1]ದ್ವೇಷಿಸುತ್ತ, ನಿರ್ದೋಷನಾದ ನನ್ನಲ್ಲಿ ದೋಷಗಳನ್ನೂ, ಗುಣಪೂರ್ಣನಲ್ಲಿ ನಿರ್ಗುಣತ್ವವನ್ನೂ ಘೋಷಿಸುವವರಾಗಿಯೇ ಯಜ್ಞಾದಿಗಳನ್ನು ಮಾಡುವರು. ಈ ಕಾರಣದಿಂದಲೂ ಅವರಿಗೆ ಅನರ್ಥಫಲವು ಯುಕ್ತವೇ ಸರಿ,

1. ಈಶ್ವರನು ಎಲ್ಲವನ್ನೂ ಮಾಡಿಸುವವನಾದರೆ ಈಗ ಏನನ್ನೂ ಮಾಡದೆ ಸುಮ್ಮನಿರುವೆ. ನನ್ನಿಂದ ಮಾಡಿಸಲಿ, ಅಥವಾ ನಾನು ಮಾಡುವ ಕಾರ್ಯವನ್ನು ಮಾಡದಂತೆ ತಡೆಯಲಿ. ಇವಾವುದೂ ನಡೆಯುತ್ತಿಲ್ಲವಾದಕಾರಣ ಅವನು ಸರ್ವನಿಯಾಮಕನಲ್ಲ ಇದೇ ಮುಂತಾಗಿ ಭಗವಂತನ ಶಕ್ತ್ಯಾದಿಗಳ ಅಪಲಾಪವೇ ದ್ವೇಷವು.

| |
|---|
| ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್<br>ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು॥16-19॥ |
| ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ<br>ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ॥16-20॥ |
| **19.20** ಅಸುರಸ್ವಭಾವದವರಿಗೆ ಸಾಮಾನ್ಯ ನರಕದಲ್ಲಿ ಬೀಳುವುದು ಮಾತ್ರವೇ ಫಲವಲ್ಲ; ಅದಕ್ಕಿಂತಲೂ ಹೆಚ್ಚಿನ ಪುನರಾವೃತ್ತಿರಹಿತವಾದ ದುಃಖಮಯಸ್ಥಾನವನ್ನೂ ನಾನೇ ಅವರಿಗೆ ಕೊಡುವೆನೆಂದು ಹೇಳುತ್ತಾನೆ:- ನನ್ನನ್ನೂ, ನನ್ನ ಭಕ್ತರನ್ನೂ ದ್ವೇಷಿಸುವ, ಹಿಂಸಾಕೃತ್ಯವನ್ನಾಚರಿಸುವ, ಸ್ಮಶಾನವಾಸಾದ್ಯಮಂಗಳಕಾರ ಮಾಡುವ, ಮನುಷ್ಯಾಧಮರಾದ ಉಕ್ತ ಅಸುರಸ್ವಭಾವದವರನ್ನು ಜನನಮರಣ ಪ್ರವಾಹರೂಪವಾದ ಸಂಸಾರದಲ್ಲಿ, ಅದರಲ್ಲಿಯೂ ಅಸುರಜಾತಿಯಲ್ಲಿಯೇ ತಿರುಗಿ ತಿರುಗಿ ಹುಟ್ಟಿಸುವೆನು. ಕುಂತೀತನಯ! ಆಸುರ ಜನ್ಮತಾಳಿದ ಆ ಜನರು ಬಹು ಜನ್ಮಗಳಲ್ಲಿ ಅವಿವೇಕಿಗಳು ಮತ್ತು ವಿಪರೀತಜ್ಞಾನಿಗಳೂ ಆಗಿ ನನ್ನನ್ನು ಹೊಂದುವುದಕ್ಕೆ ಸಾಧಕವಾದ ಜ್ಞಾನಮಾರ್ಗವನ್ನು ಹೊಂದದೆ ನಿಕೃಷ್ಟವಾದ ಕ್ರಿಮಿಕೀಟಾದಿ ಜನ್ಮಗಳಲ್ಲಿ ತೊಳಲುತ್ತ ಕೊನೆಗೂ ನನ್ನನ್ನು ಕಾಣದೆ ತಾಮಿಸ್ರ-ಅಂಧತಾಮಿಸ್ರಗಳಂಬ ನಿತ್ಯನರಕವನ್ನು ಹೊಂದುವರು. ಹೀಗೆ ಅವರನ್ನು ನಿತ್ಯ ನರಕಕ್ಕೆ ಕೆಡವಿ ದುಃಖಕ್ಕೀಡುಮಾಡುವೆನು. ಅಂತಹವರಲ್ಲಿ ನನಗೆ ದಯೆಯುಂಟಾಗುವುದೇ ಇಲ್ಲ. ಆದುದರಿಂದ ಶ್ರೇಯೋರ್ಥಿಗಳು ಹನ್ನೆರಡು ಶ್ಲೋಕಗಳಿಂದುಕ್ತವಾದ ಆಸುರಸಂಪತ್ತನ್ನು ಪ್ರಯತ್ನಪೂರ್ವಕವಾಗಿ ತ್ಯಾಗಮಾಡಬೇಕೆಂದು ಭಾವ. |
| ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ।<br>ಕಾಮಃ ಕ್ರೋಧಸ್ತಥಾಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್॥16-21॥ |
| ಏತೈರ್ವಿಮುಕ್ತಃ ಕೌಂತೇಯ ತಮೋದ್ವಾರೈಸ್ತ್ರಿಭಿರ್ನರಃ<br>ಆಚರತ್ಯಾತ್ಮನಃ ಶ್ರೇಯಸ್ತತೋ ಯಾತಿ ಪರಾಂ ಗತಿಂ॥16-22॥ |
| **21-22** ಉಕ್ತವಾದ ಆಸುರದೋಷಗಳು ಅನಂತವಾಗಿವೆ. ಅಲ್ಪಾಯುಶ್ಯರಾದ ಮನುಷ್ಯರು ಅವೆಲ್ಲವನ್ನೂ ಬಿಡಲು ಹೇಗೆ ಸಾಧ್ಯವೆಂದರೆ, ಆವುಗಳಿಗೆಲ್ಲಾ ಮೂಲವಾದ ಮೂರು ದೋಷಗಳನ್ನು ಬಿಡುವುದರಿಂದ ಇತರ ದೋಷಗಳಿಗವಕಾಶವಿಲ್ಲದಂತಾಗಿ ಶ್ರೇಯಸ್ಸಿಗೆ ದಾರಿಯಾಗುವುದೆಂದು |

ಭಗವಂತನು ಹೇಳುತ್ತಾನೆ:- ಕಾಮ, ಕ್ರೋಧ, ಲೋಭ ಎಂಬ ಈ ಮೂರು ವಿಧ ದೋಷಗಳು ನರಕಕ್ಕೆ ಸಾಧನವು, ಆತ್ಮನಿಗೆ ಸರ್ವಾನರ್ಥಮೂಲವು. ಆದಕಾರಣ ಈ ಮೂರು ದೋಷಗಳನ್ನೂ ದೂರಮಾಡಬೇಕು. ಕುಂತೀ ಕುಮಾರ! ನರಕಸಾಧನವಾದ ಈ ಕಾಮಕ್ರೋಧಲೋಭಗಳೆಂಬ ಮೂರು ದೋಷಗಳಿಂದ ಬಿಡುಗಡೆ ಹೊಂದಿದ ಮನುಷ್ಯನು ತನಗೆ ಪುರುಷಾರ್ಥವಾಗುವ ದಾರಿಯನ್ನು ಹಿಡಿದು ಸಾಧನಾಚರಣೆಮಾಡುವನು; ಅದರಿಂದ ಮೋಕ್ಷವನ್ನು ಹೊಂದುತ್ತಾನೆ.

**ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ**
**ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ॥16-23॥**

23. ಯಾವನು ಶಾಸ್ತ್ರೋಕ್ತ ವಿಧಾನವನ್ನು ಬಿಟ್ಟು ಸ್ವೇಚ್ಛಾಚಾರಿಯಾಗಿರುವನೋ ಅಂತಹವನು ಮೋಕ್ಷೋಪಾಯಸಿದ್ಧಿಯನ್ನು ಪಡೆಯಲಾರನು. ಅಂತಹವನು ಈ ಲೋಕದಲ್ಲಿ ಸೌಖ್ಯವನ್ನೂ ಹೊಂದಲಾರನು, ಮೋಕ್ಷವನ್ನಂತೂ ಹೊಂದುವುದೇ ಇಲ್ಲ.

**ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ**
**ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ॥16-24॥**

24. ಪಾರ್ಥ! ಪರಮಾಸ್ತಿಕನಾದ ನೀನು ಅಥವಾ ನಿನ್ನಂತಹ ಯೋಗ್ಯಾಧಿಕಾರಿಗೆ 'ಇದು ಕರ್ತವ್ಯವು, ಇದು ಅಕರ್ತವ್ಯವು' ಎಂದು ವಿವೇಚನೆಮಾಡಿ ನಿರ್ಣಯಿಸುವುದಕ್ಕೆ ವೇದಾದಿಶಾಸ್ತ್ರವೇ ಪ್ರಮಾಣವು, ಬೇರಾವುದೂ ತತ್ತ್ವ ನಿರ್ಣಾಯಕವಲ್ಲ. ಆದಕಾರಣ ಶಾಸ್ತ್ರದಿಂದ ವಿಧಿಸಲ್ಪಟ್ಟ ಕರ್ಮ, ಅಂಗ, ಫಲ, ಫಲದಾತನಾದ ಪರಮಾತ್ಮ ತತ್ವಾದಿಗಳನ್ನು ತಿಳಿದು ಈ ಲೋಕದಲ್ಲಿ ನಿನಗೆ ವಿಹಿತವಾದ ಯುದ್ಧ ಕರ್ಮವನ್ನು ಮಾಡು! ನೀನು ಕರ್ಮಾಧಿಕಾರಿಯಾಗಿರುವೆಯಾದ ಕಾರಣ ವಿಹಿತ ಯುದ್ಧವನ್ನು ಅವಶ್ಯ ಮಾಡಿಯೇ ಕೃತಾರ್ಥನಾಗಬೇಕೆಂದು ಭಾವ.

ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ - ಶ್ರೀಕೃಷ್ಣಾರ್ಜುನಸಂವಾವೇ ದೈವಾಸುರಸಂಪದ್ವಿಭಾಗಯೋಗೋ ನಾಮ ಷೋಡಶೋಽಧ್ಯಾಯಃ॥16-[24]॥

## ಸಪ್ತದಶೋಽಧ್ಯಾಯಃ॥17-[28]॥

ಪೂರ್ವಾಧ್ಯಾಯಾಂತ್ಯದಲ್ಲಿ ಶಾಸ್ತ್ರವಿಧಾನೋಕ್ತವನ್ನು ತಿಳಿದು ಅದರಂತೆಯೇ ಕರ್ಮವನ್ನಾಚರಿಸಬೇಕೆಂದು ಹೇಳಿದುದನ್ನು ಕೇಳಿ ಅರ್ಜುನನು "ಹಾಗಾದರೆ ವಿಧಿ ಜ್ಞಾನವಿಲ್ಲದೆ ಕೇವಲ ಶ್ರದ್ದೆಯಿಂದ ಮಾಡಿದ ಕರ್ಮವು ನಿಷ್ಫಲವೇ? ಅಲ್ಲ; ವಾಸ್ತವಿಕವಾಗಿ ವಿಹಿತಕರ್ಮವು

ಕರ್ತೃವಿನ ಅಜ್ಞಾನದೋಷದಿಂದ ಹೇಗೆ ನಿಷ್ಫಲವಾದೀತು? ಅದಕ್ಕನುಗುಣವಾದ ಫಲವನ್ನು ಕೊಡಲೇಬೇಕು" ಎಂದಾಲೋಚಿಸಿ, ಶ್ರದ್ಧೆಯಿಂದ ಅಜ್ಞಾನಿಕೃತ ಕರ್ಮವು ಸಾತ್ವಿಕವೇ? ರಾಜಸವೇ? ಅಥವಾ ತಾಮಸವೇ? ವಿವೇಚನೆ ಮಾಡಿ ತಿಳಿಸಬೇಕೆಂದು ಪ್ರಶ್ನೆ ಮಾಡುವನು. ಅದಕ್ಕೆ ಭಗವಂತನು ಶ್ರದ್ಧೆ ಆಹಾರ ಮತ್ತು ತಪಸ್ಸು ಮುಂತಾದ ಕರ್ಮಗಳು, ಅವುಗಳ ಸಾತ್ವಿಕಾದಿವಿಭಾಗ ಮುಂತಾದುವನ್ನು ಸ್ಪಷ್ಟಪಡಿಸಿ ತಾನು ಹಿಂದೆ ಹೇಳಿದ್ದ ('ನಾನ್ಯಂ ಗುಣೇಭ್ಯಃ ಕರ್ತಾರಂ' 14-19=ಕಾರ್ಯಗಳೆಲ್ಲವೂ ಸತ್ವಾದಿಗುಣತ್ರಯ ಪರಿಣಾಮವೆಂಬ ಸಾಮಾನ್ಯೋಕ್ತಿಯನ್ನು ಈ ಅಧ್ಯಾಯದಲ್ಲಿ ವಿಸ್ತರಿಸುತ್ತಾನೆ:-

ಅರ್ಜುನ ಉವಾಚ

**ಯೇ ಶಾಸ್ತ್ರವಿಧಿಮುತ್ಸೃಜ್ಯ ಯಜಂತೇ ಶ್ರದ್ಧಯಾಽನ್ವಿತಾಃ**
**ತೇಷಾಂ ನಿಷ್ಠಾತು ಕಾ ಕೃಷ್ಣ ಸತ್ವಮಾಹೋ ರಜಸ್ತಮಃ॥1॥**

೧. ಕೃಷ್ಣ! ಶಾಸ್ತ್ರೋಕ್ತವಿಧಾನವನ್ನು ತಿಳಿಯದೆ ಶ್ರದ್ಧಾಮಾತ್ರದಿಂದ ಯಾರು ದೇವತಾರಾಧನಾದಿ ಕರ್ಮಗಳನ್ನು ಮಾಡುವರೋ, ಅವರ ಕರ್ಮಾನುಷ್ಠಾನವು ಎಂತಹುದು? ಸಾತ್ವಿಕವೇ? ರಾಜಸವೇ? ತಾಮಸವೇ? (ಅವರು ಸಾತ್ವಿಕಾದಿ ಗಣದಲ್ಲಿ ಯಾವ ಗಣಕ್ಕೆ ಸೇರಿದವರು?) ಎಂಬುದಾಗಿ ಅರ್ಜುನನು ಪ್ರಶ್ನೆ ಮಾಡಿದನು.

ಶ್ರೀ ಭಗವಾನುವಾಚ

**ತ್ರಿವಿಧಾ ಭವತಿ ಶ್ರದ್ಧಾ ದೇಹಿನಾಂ ಸಾ ಸ್ವಭಾವಜಾ**
**ಸಾತ್ವಿಕೀ ರಾಜಸೀ ಚೈವ ತಾಮಸೀ ಚೇತಿ ತಾಂ ಶೃಣು॥2॥**

**ಸತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ**
**ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ॥3॥**

2-3. ಭಗವಂತನು ಉತ್ತರ ಹೇಳುತ್ತಾನೆ:- ಪಾರ್ಥ! ಫಲವಿವೇಚನೆಗಾಗಿ ಶ್ರದ್ಧೆಯನ್ನು ವಿಭಾಗಿಸಿ ಹೇಳುವೆನು 1ಕೇಳು. ಜೀವರ ಶ್ರದ್ಧೆಯು ಸಾತ್ವಿಕ, ರಾಜಸ, ತಾಮಸ ಎಂಬುದಾಗಿ ಮೂರು ಬಗೆ, ಈ ಮೂರು ಬಗೆಯ ಶ್ರದ್ಧೆಯೂ ಸಹ ಆಯಾಯ ಜೀವನ ಸ್ವರೂಪಾನುಗುಣವಾದುದು. ಏಕೆಂದರೆ:- ಈ ಜೀವನು ಶ್ರದ್ಧಾಸ್ವರೂಪನು, ಯಾವನು ಯಾವ ಶ್ರದ್ಧೆಯುಳ್ಳವನೋ ಅವನು ಆ ಶ್ರದ್ಧಾರೂಪನು. ಎಂದರೆ ಸಾತ್ವಿಕಶ್ರದ್ಧೆಯುಳ್ಳವನು ಸಾತ್ವಿಕನು. ರಾಜಸ ಶ್ರದ್ಧೆಯುಳ್ಳವನು ರಾಜಸನು. ತಾಮಸ ಶ್ರದ್ಧೆಯುಳ್ಳವನು ತಾಮಸನು. ಸಾತ್ವಿಕಾದಿ ಜನರು ಕರ್ಮವು ಸಾತ್ವಿಕಾದಿಗಳು, ಫಲವೂ

ಅಂತಹುದೇ ಆಗುವುದು. (ಸಾತ್ವಿಕಾದಿ ಜೀವರ ಕರ್ಮವೂ ಅಂತಹುದೇ ಸರಿ. ಶಾಸ್ತ್ರವಿಧಿಯನ್ನು ತಿಳಿಯದೆ ಶ್ರದ್ದೆಯಿಂದ ಕರ್ಮ ಮಾಡುವವರು ಭಿನ್ನ ಭಿನ್ನ ಶ್ರದ್ಧಾ ಯುಕ್ತರಾಗಿ ಸಾತ್ವಿಕರು, ರಾಜಸರು, ತಾಮಸರೂ ಆಗುವರು. ಅದಕ್ಕನುಸಾರವಾಗಿ ಅವರವರ ಕರ್ಮಕ್ಕೆ ಸಾತ್ವಿಕಾದಿ ಫಲಗಳೂ ಲಭಿಸುವುವು. ಆದಕಾರಣ ಶ್ರದ್ಧೆಯಿಂದ ಕರ್ಮ ಮಾಡುವವರಿಗೆ ಶ್ರದ್ಧಾನುಸಾರವಾದ ಫಲವಾಗುವುದು; ವಿಧ್ಯಜ್ಞಾನಮಾತ್ರದಿಂದ ಕರ್ಮವು ನಿಷ್ಫಲವಾಗುವುದಿಲ್ಲ. ಜ್ಞಾನ ಪೂರ್ವಕವಾಗಿ ಆಚರಿಸಿದರೆ ವಿಶೇಷ ಫಲವಾಗುವುದೆಂದು ಹಿಂದೆ ಹೇಳಿರುವುದರ ಅಭಿಪ್ರಾಯ. ಆದಕಾರಣ ಸ್ವರೂಪವಿಹಿತ ಕರ್ಮವನ್ನು ನಿಶ್ಶಂಕವಾಗಿ ಮಾಡಬಹುದು.

1.ಶ್ರದ್ಧೆಯೆಂದರೆ ಅಸ್ತಿಕ್ಯಬುದ್ಧಿಯು, ಅದು ಸ್ವರೂಪ, ಮನೋವೃತ್ತಿ ರೂಪವೆಂದು - ಎರಡು ಬಗೆಯಾಗಿದೆ. ಸ್ವರೂಪಶ್ರದ್ದೆಯು ಸಾತ್ವಿಕ, ರಾಜಸ, ತಾಮಸ ಎಂಬುದಾಗಿ ಮೂರು ಬಗೆ. ಉತ್ತಮಜೀವರ ಶ್ರದ್ದೆಯು ಸಾತ್ವಿಕವು. ಮಧ್ಯಮರದು ರಾಜಸವು. ಅಧಮರ ಶ್ರದ್ಧೆಯು ತಾಮಸವು. ಮನೋವೃತ್ತಿ ರೂಪ ಶ್ರದ್ದೆಯು ಹಾಗೆ ಕ್ಲೃಪ್ತವಲ್ಲ. ಉತ್ತಮರಿಗೂ ಒಂದಾನೊಂದು ಕಾಲದಲ್ಲಿ ರಾಜಸ-ತಾಮಸ ಶ್ರದ್ಧೆಗಳುಂಟಾಗುವುವು. ಹೀಗೆ ಮಧ್ಯಮಾಧಮರಿಗೂ ಶ್ರದ್ಧೆಯು ವ್ಯತ್ಯಾಸವಾಗುವುದುಂಟು. ಆದಕಾರಣ ಇಲ್ಲಿ ಹೇಳಿರುವ ಸಾತ್ವಿಕಾದಿವಿಭಾಗವು ಸ್ವರೂಪ ಶ್ರದ್ಧೆಯ ವಿಭಾಗವು; ಮನೋವೃತ್ತಿ ರೂಪ ಶ್ರದ್ಧೆಯ ವಿಭಾಗವಲ್ಲವೆಂದು ತಿಳಿಯ ಬೇಕು.

**ಯಜಂತೇ ಸಾತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ**

**ಪ್ರೇತಾನ್ಭೂತಗಣಾಂಶ್ಚಾನ್ಯೇ ಯಜಂತೇ ತಾಮಸಾ ಜನಾಃ॥4॥**

4. ಸಾತ್ವಿಕಾದಿ ಶ್ರದ್ಧಾವಂತರ ಕರ್ಮವನ್ನು ವಿವರಿಸುತ್ತಾನೆ:- ಶಾಸ್ತ್ರವಿಧಾನವನ್ನು ಅರಿಯದವರಾದರೂ ಸಾತ್ವಿಕಶ್ರದ್ಧೆಯುಳ್ಳ ಜನರು ಹರಿಹರ ಬ್ರಹ್ಮೇಂದ್ರಾದಿತ್ಯಾದಿ ದೇವತೆಗಳನ್ನಾರಾಧಿಸುವರು. ರಾಜಸಶ್ರದ್ಧೆಯುಳ್ಳ ಜನರು 1ಕುಬೇರಾದಿ ಯಕ್ಷರನ್ನೂ, ನಿಋತಿ ಮುಂತಾದ ರಾಕ್ಷಸರನ್ನೂ ಯಾಗಾದಿಗಳಿಂದ ಪೂಜಿಸುವರು. ಸಾತ್ವಿಕ ರಾಜಸ ವಿಲಕ್ಷಣರಾದ ತಾಮಸಶ್ರದ್ಧೆಯುಳ್ಳ ಜನರು ಪಿಶಾಚ ಮತ್ತು ಭೂತಗಣಗಳನ್ನು ಪೂಜಿಸುವರು. ಇವರಲ್ಲಿ ದೇವಯಾಜಿಗಳಾದ ಸಾತ್ವಿಕರಿಗೆ ಮೋಕ್ಷಪರ್ಯಂತವಾದ ಉತ್ತಮಫಲವೂ, ರಾಜಸರಿಗೆ ಯಕ್ಷರಾಕ್ಷಸರ ಆರಾಧನೆಯಿಂದ ದುಃಖಮಿಶ್ರ ಸುಖರೂಪವಾದ ಅಲ್ಪಫಲವೂ, ತಾಮಸಜನರಿಗೆ ಸ್ತ್ರೀ ರಾಜ ವಶೀಕರಣಾದಿರೂಪವಾದ ಬಹು ದುಃಖಮಿಶ್ರಿತ ಅತ್ಯಲ್ಪ ಸುಖ ಭೂತಾದಿ ಜನ್ಮರೂಪ ಫಲವೂ ಬರುವುದು. ಆದುದರಿಂದ ಪಾರ್ಥ! ಈ ವಿವೇಚನೆಯನ್ನು ತಿಳಿದು ಮೋಕ್ಷಮಾರ್ಗದಲ್ಲಿ ಪ್ರವರ್ತಿಸು ಎಂದು ಭಾವ.

1. ಸಾತ್ವಿಕ, ರಾಜಸ, ತಾಮಸರೆಲ್ಲರೂ 'ಇಂದ್ರಾಯ ಸ್ವಾಹಾ, ವರುಣಾಯ ಸ್ವಾಹಾ, ರುದ್ರಾಯ ಸ್ವಾಹಾ' ಇತ್ಯಾದಿ ಮಂತ್ರದಿಂದಲೇ ಹೋಮಾದಿಗಳನ್ನು ಮಾಡುವರು. 'ಯಕ್ಷಾಯ ಸ್ವಾಹಾ, ಪ್ರೇತಾಯ ಸ್ವಾಹಾ ' ಇತ್ಯಾದಿ ಭಿನ್ನ ಮಂತ್ರಗಳಿಂದ ಯಾರೂ ಹೋಮಮಾಡುವುದು ಕಂಡಿಲ್ಲ. ಅಂದ ಬಳಿಕ ರಾಜಸತಾಮಸರು ಯಕ್ಷಪ್ರೇತಾದಿಗಳನ್ನು ಆರಾಧಿಸುತ್ತಾರೆಂಬುದು ಹೇಗೆ? ಎಂದರೆ, ಬ್ರಹ್ಮ, ರುದ್ರ ಮುಂತಾದ ದೇವತೆಗಳ ಹೆಸರನ್ನೇ ಇಟ್ಟುಕೊಂಡಿರುವವರು ಯಕ್ಷ, ರಾಕ್ಷಸ, ಭೂತ, ಪ್ರೇತಗಣಗಳಲ್ಲಿಯೂ ಇರುವರು. ಸಾತ್ವಿಕ ಶ್ರದ್ದೆಯಿಂದ ಯಜ್ಞಾದಿಕರ್ಮಗಳನ್ನು ಮಾಡಿದರೆ ಯಜ್ಞಭೋಕ್ತನಾದ ಪರಮಾತ್ಮನು ಆಯಾಯ ದೇವತೆಗಳಿಗೆ ಅವರವರ ಭಾಗವನ್ನು ಕೊಟ್ಟು, ತಾನು ಸಾರಭಾಗವನ್ನು ಸ್ವೀಕರಿಸಿ ಮಹಾಫಲವನ್ನು ಕೊಡುವನು. ರಾಜಸ ತಾಮಸ ಶ್ರದ್ಧೆಗಳಿಂದ ಕರ್ಮ ಮಾಡಿದರೆ ವಿಷ್ಣುವು ಆ ಕರ್ಮವನ್ನು ಸ್ವೀಕರಿಸದೆಯೇ ಅವರವರ ಶ್ರದ್ಧಾನುಸಾರವಾಗಿ ಆಯಾಯ ಹೆಸರಿನ ಯಕ್ಷಭೂತಾದಿಗಳಿಗೆ ಕೊಟ್ಟು ಅದಕ್ಕನುಗುಣವಾದ ಮೇಲ್ಕಂಡ ಕ್ಷುದ್ರಫಲವು ಕರ್ತನಿಗೆ ಬರುವಂತೆ

ಮಾಡುವನು. ಆದಕಾರಣ ಒಂದೇ ಮಂತ್ರದಿಂದ ತ್ರಿವಿಧ ಜೀವರೂ ಕರ್ಮಮಾಡಿದರೂ ಕೂಡ ಅವರವರ ಯೋಗ್ಯತಾನುಗುಣವಾಗಿಯೇ ಪರಿಣಮಿಸಿ ಫಲವಾಗುವುದೆಂದು ತಿಳಿಯಬೇಕು.

**ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ ಯೇ ತಪೋ ಜನಾಃ**

**ದಂಭಾಹಂಕಾರಸಂಯುಕ್ತಾಃ ಕಾಮರಾಗಬಲಾನ್ವಿತಾಃ॥5॥**

**ಕರ್ಷಯಂತಃ ಶರೀರಸ್ಥಂ ಭೂತಗ್ರಾಮಮಚೇತಸಃ**

**ಮಾಂ ಚೈವಾಂತಃ ಶರೀರಸ್ಥಂ ತಾನ್ವಿದ್ಧ್ಯಾಸುರನಿಶ್ಚಯಾನ್॥6॥**

5-6 ತಾಮಸಜನರಿಗೆ ತಮಃ ಪ್ರಾಪ್ತಿಯೇ ಮುಖ್ಯಫಲವೆಂದು ಹೇಳುತ್ತಾನೆ:- ಯಾವ ಅವಿವೇಕಿಗಳಾದ ತಾಮಸಜನರು ದಂಭದಿಂದಲೂ, ನಾನೇ ಸ್ವತಂತ್ರಕರ್ತನೆಂಬ ಅಭಿಮಾನದಿಂದಲೂ ಯುಕ್ತರಾಗಿ ಇಚ್ಛೆ, ಅತ್ಯಾಸಕ್ತಿ, ಕುಯುಕ್ತಿ ಅಥವಾ ಆಗ್ರಹ ಇವುಗಳಿಂದ ಕೂಡಿದವರಾಗಿ, ಶರೀರದಲ್ಲಿ ವಾಸವಾಗಿರುವ ತತ್ತ್ವಾಭಿಮಾನಿ ದೇವತೆಗಳಾದ ಲಕ್ಷ್ಮ್ಯಾದಿದೇವತೆಗಳ ಸಮುದಾಯವನ್ನೂ, ಅಂತರ್ಯಾಮಿಯಾಗಿ ಶರೀರದಲ್ಲಿ ನಿಯಾಮಕನಾಗಿರುವ ನನ್ನನ್ನೂ ಸಹ ಅಲ್ಪ ಗುಣವಂತರೆಂದೂ, ಅವರನ್ನು ಉತ್ತಮರೆಂದೂ, ಉತ್ತಮರನ್ನು ಅವರರೆಂದೂ ವಿಪರೀತವಾಗಿ ತಿಳಿದು, ವೇದಾದಿ ಸಚ್ಛಾಸ್ತ್ರಗಳಲ್ಲಿ ವಿಹಿತವಲ್ಲದ, ಅದಕ್ಕೆ ವಿರುದ್ಧವೂ ಆದ ದುರಾಗಮಗಳಲ್ಲಿ ಕರ್ತವ್ಯವೆಂದು ಹೇಳಿರುವ, ತನಗೂ ಇತರರಿಗೂ ಹಿಂಸಾಕರವಾದ ಯಜ್ಞ-ದಾನ-ತಪಸ್ಸು ಮುಂತಾದ ಕರ್ಮವನ್ನು ಮಾಡುತ್ತಾರೆಯೋ ಅಂತಹ ಅವಿವೇಕಿಗಳನ್ನು ಅಸುರಸಂಬಂಧಿ (ವಿಪರೀತ) ಜ್ಞಾನವುಳ್ಳವರೆಂದು ತಿಳಿ. ಅಂತಹ ದೈತ್ಯ ರಾಕ್ಷಸಾದಿಗಳು ಮಿಥ್ಯಾ ಜ್ಞಾನಕ್ಕನುಗುಣವಾದ ತಮಃ ಪ್ರಾಪ್ತಿಗೇ ಅರ್ಹರು ಎಂದು ಭಾವ.

**ಆಹಾರಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ।**

**ಯಜ್ಞಸ್ತಪಸ್ತಥಾ ದಾನಂ ತೇಷಾಂ ಭೇದಮಿಮಂ ಶೃಣು॥7॥**

7. ಭಿನ್ನಭಿನ್ನ ಶ್ರದ್ಧೆ, ವಿಲಕ್ಷಣಕರ್ಮ, ಇವುಗಳಿಂದ ಸಾತ್ವಿಕಾದಿಸ್ವರೂಪ ವಿವೇಚನೆಯು ಉಕ್ತವಾಯಿತು. ಅಷ್ಟೇ ಅಲ್ಲ; ಆಹಾರಾದಿಭೇದದಿಂದಲೂ ಸಾತ್ವಿಕಾದಿ ವಿವೇಚನೆಯನ್ನು ಮಾಡಕೊಳ್ಳಬಹುದೆಂದು ಹೇಳುತ್ತಾನೆ:- ಸಾತ್ವಿಕಾದಿ ಜನರಿಗೆ ಪ್ರಿಯವಾದ ಆಹಾರವೂ ಸಹ ಮೂರು ಬಗೆಯಾಗಿರುವುದು. ಹಾಗೆಯೇ ಅವರವರು ಮಾಡುವ ಯಜ್ಞ, ತಪಸ್ಸು ಮತ್ತು ದಾನವೂ ಸಹ ವಿಲಕ್ಷಣವಾಗಿ ಮೂರು ಬಗೆಯಾಗಿವೆ. ಅವುಗಳ ಭೇದವನ್ನು ವಿವರಿಸುವೆನು ಕೇಳು.

ಆಯುಸ್ಸತ್ತ್ವಬಲಾರೋಗ್ಯ ಸುಖಪ್ರೀತಿವಿವರ್ಧನಾಃ
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕಪ್ರಿಯಾಃ॥8॥

ಕಟ್ವಾಮ್ಲಲವಣಾತ್ಯುಷ್ಣತೀಕ್ಷ್ಣ ರೂಕ್ಷವಿದಾಹಿನಃ
ಆಹಾರಾ ರಾಜಸಸ್ಯೇಷ್ಟಾ ದುಃಖಶೋಕಾಮಯಪ್ರದಾಃ॥9॥

ಯಾತಯಾಮಂ ಗತರಸಂ ಪೂತಿಪರ್ಯುಷಿತಂ ಚ ಯತ್
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಂ॥10॥

**8-10** ಈಗ ಸಾತ್ವಿಕಾದಿಗಳ ಆಹಾರವನ್ನು ವಿವೇಚನೆಮಾಡಿ ಹೇಳುತಾನೆ:- ಮಧುರ ರಸಯುಕ್ತವು, ಆಜ್ಯಾದಿಸಂಯುಕ್ತವು, ಸೇವನೆ ಮಾಡಿದಮೇಲೆ ಬಹುಕಾಲದವರೆಗೂ ಶರೀರಕ್ಕೆ ಶಕ್ತಿಕೊಡುವ, ನೋಡುವುದಕ್ಕೆ ಮನೋಹರವಾಗಿರುವ, ತಿನ್ನುವ ಪದಾರ್ಥಗಳು ಸಾತ್ವಿಕರಿಗೆ ಪ್ರಿಯವಾದುವು. ಇಂತಹ ಸಾತ್ವಿಕ ಆಹಾರವು ಆಯುಸ್ಸು, ಚಿತ್ತಶುದ್ಧಿ, ಶಕ್ತಿ, ಆರೋಗ್ಯ ಸೇವನೆ ಮಾಡಿದಮೇಲೆ ಬಹುಕಾಲದವರೆಗೂ ಸುಖಕರವಾಗಿರುವುದು, ಭೋಗಿಸುವಾಗ ಸಂತೋಷ ಇವುಗಳನ್ನು ವಿಶೇಷವಾಗಿ ವೃದ್ಧಿ ಮಾಡುವುದು. ಇಂತಹ ಆಹಾರಸೇವನೆಯು ಸಾತ್ವಿಕರ ಲಕ್ಷಣವು; ಸಾತ್ವಿಕರಾಗುವುದಕ್ಕೆ ಸಾಧನವು. ಆದಕಾರಣ ಇಂತಹ ಆಹಾರವನ್ನೇ ಸೇವಿಸಬೇಕೆಂದು ಭಾವ. ಬಹುವಾದ ಖಾರ, ಹುಳಿ, ಉಪ್ಪು, ಅತಿಬಿಸಿ, ತೀಕ್ಷ್ಣ (ಶರೀರಶೋಷಕವಾದ ಸಾಸುವೆ ಮೊದಲಾದುದು) ಸ್ವಾಭಾವಿಕವಾಗಿ ನೀರಸವಾದುದು, ತಿನ್ನುವಾಗ ಬಾಯನ್ನು ಸುಟ್ಟು ಸಂತಾಪವನ್ನುಂಟುಮಾಡುವುದು ಇಂತಹ - ಭಕ್ಷ ಪದಾರ್ಥಗಳು ರಾಜಸಜನರಿಗೆ ಇಷ್ಟವಾದ ಆಹಾರವು. ಈ ರಾಜಸಾಹಾರವು ತಿನ್ನುವಾಗಲೂ ದುಃಖ, ಆಮೇಲೆಯೂ ಕ್ಲೇಶ ಮತ್ತು ರೋಗಗಳನ್ನುಂಟುಮಾಡುವುವು. ಇಂತಹ ಆಹಾರಸೇವನೆಯೇ ರಾಜಸ ಜನರ ಚಿಹ್ನೆಯು. ಇಂತಹ ಆಹಾರವನ್ನು ಪ್ರಯತ್ನಪೂರ್ವಕವಾಗಿ ಬಿಡಬೇಕು. ಅಡಿಗೆಯಾದ ಮೇಲೆ, ಒಂದು ಯಾಮ ಕಳೆಯುವುದು, ರುಚಿಯು ಹೋಗಿರುವುದು, ದುರ್ವಾಸನೆಯುಳ್ಳದ್ದು, ಪಕ್ವವಾಗಿ ಒಂದುದಿನ ಕಳೆದ ತಂಗಳು ಪದಾರ್ಥ, ಎಂಜಲು, ಅಪವಿತ್ರವೂ ಆದ ಭೋಜ್ಯ ಪದಾರ್ಥವು ತಾಮಸಜನರಿಗಿಷ್ಟವಾದುದು.

ಅಫಲಾಕಾಂಕ್ಷಿಭಿರ್ಯಜ್ಞಂ ವಿಧಿದೃಷ್ಟೋ ಯ ಇಜ್ಯತೇ
ಯಷ್ಟವ್ಯಮೇವೇತಿ ಮನಃ ಸಮಾಧಾಯ ಸ ಸಾತ್ತ್ವಿಕಃ॥11॥

| |
|---|
| **ಅಭಿಸಂಧಾಯ ತು ಫಲಂ ದಂಭಾರ್ಥಮಪಿ ಚೈವ ಯತ್**<br>**ಇಜ್ಯತೇ ಭರತಶ್ರೇಷ್ಠ ತಂ ಯಜ್ಞಂ ವಿದ್ಧಿ ರಾಜಸಂ ॥12॥** |
| **ವಿಧಿಹೀನಮಸೃಷ್ಟಾನ್ನಂ ಮಂತ್ರಹೀನಮದಕ್ಷಿಣಂ**<br>**ಶ್ರದ್ಧಾ ವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ॥13॥** |
| **11-13.** ಈಗ ಸಾತ್ವಿಕಾದಿಯಜ್ಞಗಳನ್ನು ವಿವರಿಸುತ್ತಾನೆ:- ಫಲಾಪೇಕ್ಷೆಯಿಲ್ಲದೆ ಜನರು ವಿಧಿಶಾಸ್ತ್ರವನ್ನು ಚೆನ್ನಾಗಿ ತಿಳಿದು ಶಾಸ್ತ್ರೋಕ್ತ ನಿಯಮಗಳನ್ನಾಚರಿಸುವವರಾಗಿ, ಭಗವದಾರಾಧನರೂಪವಾದ ಯಾಗಾದಿ ಕರ್ಮವನ್ನು 'ವಿಧಿ ಪ್ರಾಪ್ತವಾಗಿರುವುದರಿಂದಲೇ ಅವಶ್ಯ ಕರ್ತವ್ಯವು, ಫಲಾಶೆಯನ್ನು ಮಾಡಬಾರದು' ಎಂಬುದಾಗಿ ಮನಸ್ಸಿಗೆ ಸಮಾಧಾನತಂದುಕೊಂಡು ಮಾಡುವ ಯಜ್ಞವು ಸಾತ್ವಿಕವು. ಫಲವು ಬೇಕೆಂಬ ಅಪೇಕ್ಷೆಯಿಂದಲೇ ಮಾಡುವ ಯಜ್ಞಾದಿಗಳು ರಾಜಸವು. ಫಲಾಪೇಕ್ಷೆಯಿಲ್ಲದಿದ್ದರೂ ತಾನು ದೊಡ್ಡ ಧಾರ್ಮಿಕನೆಂದು ಪ್ರಸಿದ್ಧಿ ಪಡೆಯುವುದಕ್ಕಾಗಿಯೇ ಮಾಡುವ ಯಜ್ಞಾದಿಗಳೂ ರಾಜಸವು. ಫಲೋದ್ದೇಶ ಮತ್ತು ತಾನು ಧಾರ್ಮಿಕನೆಂದು ಪ್ರಸಿದ್ಧಿ ಸಂಪಾದನೆ ಇವೆರಡರ ನಿಮಿತ್ತದಿಂದ ಮಾಡುವ ಯಜ್ಞವೂ ಸಹ ರಾಜಸವೆಂದು ತಿಳಿ. (ಅರ್ಜುನ! ಭರತಕುಲಮಣಿಯಾದ ನಿನಗೆ ಇಂತಹ ರಾಜಸಕರ್ಮವು ಯೋಗ್ಯವಲ್ಲ; ಇದನ್ನು ವಿವೇಚನೆಮಾಡಿ ಪ್ರಯತ್ನಪೂರ್ವಕವಾಗಿ ಪರಿತ್ಯಾಗಮಾಡು ಎಂದು ಭಾವ.) ಶಾಸ್ತ್ರವಿಧಿಗೆ ವಿರುದ್ಧವಾದ, ಬ್ರಾಹ್ಮಣರಿಗೆ ಅನ್ನದಾನಮಾಡದಿರುವ, ಮಂತ್ರವನ್ನು ಹೇಳದೆ ಮಾಡುವ, ದಕ್ಷಿಣೆಕೊಡದಿರುವ, ಆಸ್ತಿಕ್ಯ ಬುದ್ಧಿಪೂರ್ವಕವಲ್ಲದ ಯಜ್ಞವನ್ನು ತಾಮಸವೆಂದು ಹೇಳುತ್ತಾರೆ. ಇದೂ ತ್ಯಾಜ್ಯವು. |
| **ದೇವದ್ವಿಜಗುರುಪ್ರಾಜ್ಞಪೂಜನಂ ಶೌಚಮಾರ್ಜವಂ**<br>**ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ॥14॥** |
| **ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್**<br>**ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ॥15॥** |
| **ಮನಃಪ್ರಸಾದಃ ಸೌಮ್ಯತ್ವಂ ಮೌನಮಾತ್ಮ ವಿನಿಗ್ರಹಃ**<br>**ಭಾವಸಂಶುದ್ಧಿರಿತ್ಯೇತತ್ತಪೋ ಮಾನಸಮುಚ್ಯತೇ॥16॥** |

**14-16.** ಸಾತ್ವಿಕಾದಿತಪಸ್ಸುಗಳನ್ನು ವಿವರಿಸುವುದಕ್ಕಾಗಿ ಬೇರೆ ರೀತಿಯಿಂದ ತಪಸ್ಸಿನ ಪ್ರಭೇದಗಳನ್ನು ಹೇಳುತ್ತಾನೆ:- ದೇವತೆಗಳು, ಬ್ರಾಹ್ಮಣರು, ಮಾತಾಪಿತೃಗಳು, ಆಚಾರ್ಯರು ಮತ್ತು ತತ್ವಜ್ಞಾನಿಗಳಾದ ಪಂಡಿತರು ಇವರುಗಳ ಯೋಗ್ಯವಾದ ಪೂಜೆ, ಅಂತರಂಗ ಬಹಿರಂಗಶುದ್ಧಿ, ಮನೋವಾಕ್ಕಾಯಕರ್ಮಗಳಲ್ಲಿ ಒಂದೇ ಬಗೆಯಾದ ನಡೆವಳಿಕೆ, ಬ್ರಹ್ಮಚರ್ಯ= ಯತಿ-ಬ್ರಹ್ಮಚಾರಿಗಳು ಭೋಗಾಶೆಯಿಂದ ಸ್ತ್ರೀಯರನ್ನು ನೋಡದಿರುವುದು, ಗೃಹಸ್ಥರು ನಿಷಿದ್ಧ ದೇಶಕಾಲಗಳಲ್ಲಿ ಸಂಭೋಗಮಾಡದಿರುವುದು ಮತ್ತು ಪರಸ್ತ್ರೀಯರನ್ನು ಭೋಗಾಶೆಯಿಂದ ನೋಡದಿರುವುದು, ಕರಚರಣಾದಿಗಳಿಂದ ಇತರ ಪ್ರಾಣಿಗಳನ್ನು ಬಾಧಿಸದಿರುವುದು ಇವುಗಳು ಶರೀರಸಂಬಂಧಿಯಾದ ತಪಸ್ಸೆನಿಸುವುವು. ಇತರರಿಗೆ ಆತಂಕವಾಗದಂತಹ ಮತ್ತು ಕೇಳುವಾಗಲೂ, ಅನಂತರವೂ ಹಿತಕರವಾದ ಮಾತುಗಳನ್ನು ಆಡುವುದು, ವೇದ-ತದನುಸಾರಿಶಾಸ್ತ್ರಗಳನ್ನು ತಿರುತಿರುಗಿ ಆವೃತ್ತಿಮಾಡುವುದು ಇವೆಲ್ಲವೂ ವಾಚನಿಕ ತಪಸ್ಸೆಂದುಕ್ತವಾಗಿವೆ. ಮನಃಪ್ರಸನ್ನತೆ=ರಾಗದ್ವೇಷಾದಿಗಳಿಲ್ಲದೆ ಮನಸ್ಸು ನಿರ್ಮಲವಾಗಿದ್ದು ಸಹಜವಾಗಿ ವಿಷಯಗಳಲ್ಲಿ ಪ್ರವರ್ತಿಸದಿರುವುದು, ಕ್ರೌರ್ಯವನ್ನು ಬಿಟ್ಟಿರುವುದು, ವಿಚಾರಪರತೆ, ಪರಮಾತ್ಮನಲ್ಲಿಯೇ ವಿಶೇಷವಾಗಿ ಮನಸ್ಸನ್ನಿಡುವುದು, ಮೇಲೆ ಕಾಠಿನ್ಯ ತೋರಿದರೂ ಮನಸ್ಸು ಪರಿಶುದ್ಧವಾಗಿರುವುದು ಇವೆಲ್ಲವೂ ಮಾನಸಿಕತಪಸ್ಸೆಂದು ಉಕ್ತವಾಗಿವೆ. ಹೀಗೆ ತಪಸ್ಸು ಶಾರೀರ ವಾಚನಿಕ, ಮಾನಸವೆಂಬುದಾಗಿ ಮೂರುಬಗೆಯೆಂದು ತಿಳಿಯಬೇಕು.

ಶ್ರದ್ಧಯಾ ಪರಯಾ ತಪ್ತಂ ತಪತಸ್ತ್ರಿವಿಧಂ ನರೈಃ
ಅಫಲಾಕಾಂಕ್ಷಿಭಿರ್ಯುಕ್ತೈ ಸಾತ್ವಿಕಂ ಪರಿಚಕ್ಷತೇ॥17॥

ಸತ್ಕಾರಮಾನಪೂಜಾರ್ಥಂ ತಪೋ ದಂಭೇನ ಚೈವ ಯತ್
ಕ್ರಿಯತೇ ತದಿಹಂ ಪ್ರೋಕ್ತಂ ರಾಜಸಂ ಚಲಮಧ್ರುವಂ॥17-18॥

ಮೂಢಗ್ರಾಹೇಣಾತ್ಮನೋ ಯತ್ಪ್ರೀಡಯಾ ಕ್ರಿಯತೇ ತಪಃ
ಪರಸ್ಯೋತ್ಸಾದನಾರ್ಥಂ ವಾ ತತ್ತಾಮಸಮುದಾಹೃತಂ॥17-19॥

**17-19.**ಉತ್ತಮ ಶ್ರದ್ಧಾಪೂರ್ವಕವಾಗಿ ಜನರಿಂದ ಆಚರಿಸಲ್ಪಟ್ಟ, ಶಾರೀರಾದಿ ತ್ರಿವಿಧ ತಪಸ್ಸೂ ತಿರುಗಿ ಸಾತ್ವಿಕ, ರಾಜಸ, ತಾಮಸ ಎಂದು ಮೂರು ಬಗೆಯಾಗಿದೆ. ಫಲಾಶೆಯಿಲ್ಲದೆ ಕೇವಲ ಭಗವಂತನು ಸಂತುಷ್ಟನಾಗಲೆಂಬ ಉದ್ದೇಶದಿಂದ ಮನಸ್ಸಮಾಧಾನಪೂರ್ವಕವಾಗಿ ಉತ್ಕೃಷ್ಟ ಶ್ರದ್ಧೆಯಿಂದ ಆಚರಿಸಿಲ್ಪಟ್ಟ ತಪಸ್ಸನ್ನು ಸಾತ್ವಿಕವೆಂದು ಹೇಳುತ್ತಾರೆ. ಇವನು ತಪಸ್ವಿಯೆಂದು

ಮನಸ್ಸಿನಲ್ಲಿ ನೆನೆಯುವ ಆದರ, ಬಾಯಿಂದ ಹೇಳುವ ಪ್ರಶಂಸೆ, ನಮಸ್ಕಾರಾದಿಗಳಿಂದ ಸತ್ಕಾರ ಇವುಗಳನ್ನು ಪಡೆಯಬೇಕೆಂಬ ಅಪೇಕ್ಷೆಯಿಂದಲೂ, ತನ್ನ ಮಹತ್ವವನ್ನು ತೋರಿಸುವುದಕ್ಕಾಗಿಯೂ ಮಾಡುವ ತಪಸ್ಸು ರಾಜಸವೆಂದುಕ್ತವಾಗಿದೆ. ಅದು ಈ ಲೋಕ ಸ್ವರ್ಗಲೋಕಗಳಲ್ಲಿ ಮಾತ್ರವೇ ಫಲಪ್ರದವು; ವೈಕುಂಠಾದಿಗಳಲ್ಲಿ ಶಾಶ್ವತ ಫಲದಾಯಕವಲ್ಲ; ಅಶಾಶ್ವತಫಲಪ್ರದವು. ಅದರ ಫಲಾನುಭವಕಾಲದಲ್ಲಿಯೂ ಮುಂದೆ ಬರುವ ದುಃಖಭಯದಿಂದ ಮನಸ್ಸಿಗಾತಂಕವನ್ನುಂಟಮಾಡುವುದು. ಅವಿವೇಕಮೂಲಕವಾದ ದುರಾಗ್ರಹದಿಂದ ತನ್ನ ಶರೀರಕ್ಕೂ ಹಿಂಸೆಮಾಡಿಕೊಂಡು, ಶತ್ರುನಾಶಮಾಡುವ ಉದ್ದೇಶದಿಂದ ಮಾಡುವ ತಪಸ್ಸು ತಾಮಸವೆಂದುಕ್ತವಾಗಿದೆ.

**ದಾತವ್ಯಮಿತಿ ಯದ್ದಾನಂ ದೀಯತೇಽನುಪಕಾರಿಣೇ**

**ದೇಶ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಂ॥17-20॥**

**ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ**

**ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಂ॥17-21॥**

**ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ**

**ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಂ॥17-22॥**

**20-22** ಈಗ ಸಾತ್ವಿಕಾದಿ ದಾನಗಳ ವಿವರಣೆ:- ಯಾವ ಪ್ರತಿಫಲವನ್ನೂ ಅಪೇಕ್ಷಿಸದೇ ದಾನಮಾಡಬೇಕೆಂಬ ನಿಷ್ಠೆಯಿಂದಲೇ, ಪ್ರತ್ಯುಪಕಾರ ಮಾಡದಿರುವಂತಹ ಸತ್ಪಾತ್ರನಿಗೆ ಪುಣ್ಯ ದೇಶಕಾಲಗಳಲ್ಲಿ ಕೊಡಲ್ಪಡುವ ದಾನವು ಸಾತ್ವಿಕವೆಂದು ನಿಶ್ಚಿತವಾಗಿದೆ. ಸತ್ಪಾತ್ರನು ದೊರೆತಾಗ ದೇಶಕಾಲಗಳ ನಿರೀಕ್ಷಣೆಯಿಲ್ಲದೆ ತತ್ಕ್ಷಣವೇ ಅವನಿಗೆ ದಾನಮಾಡಬೇಕೆಂದು ಮಾಡುವ ದಾನವೂ ಸಾತ್ವಿಕವು. ಯಾವ ದೇಶಕಾಲಗಳಲ್ಲಿಯೇ ಆಗಲಿ ಸತ್ಪಾತ್ರ ದೊರೆತರೆ ಅದೇ ಪುಣ್ಯದೇಶಕಾಲವೆಂದು ಭಾವಿಸಬೇಕು. ಸತ್ಪಾತ್ರದಾನವೇ ಮುಖ್ಯವೆಂದು ಭಾವ. ಈಗ ಇವನಿಗೆ ದಾನಕೊಟ್ಟರೆ ಯಾವಾಗಲಾದರೂ ಇವನು ನಮಗೆ ಉಪಕಾರಮಾಡಿಯಾನು ಎಂಬ ಉದ್ದೇಶದಿಂದಾಗಲಿ, ಪಶುಪುತ್ರ ಸ್ವರ್ಗಾದ್ಯನಿತ್ಯ ಫಲಾಪೇಕ್ಷೆಯಿಂದಾಗಲಿ, ಮನಸ್ಸಿನಲ್ಲಿ ದುಃಖಪಟ್ಟುಕೊಂಡು ಅನ್ಯಾಯಾರ್ಜಿತ ದ್ರವ್ಯವನ್ನು ಕೊಡುವುದು ರಾಜಸ ದಾನವು. ಅಪರಿಶುದ್ಧ ದೇಶಕಾಲಗಳಲ್ಲಿ ನಮಸ್ಕಾರಾದಿ ಸತ್ಕಾರವಿಲ್ಲದೆ ತಿರಸ್ಕಾರ ಪೂರ್ವಕವಾಗಿ ಅಯೋಗ್ಯ ಜನರಿಗೆ ಕೊಡುವ ದಾನವು ತಾಮಸವೆಂದು ಹೇಳಿದೆ.

**ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ**

**ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪುರಾ॥17-23॥**

**23.** 'ಆಫಲಾಕಾಂಕ್ಷಿಭಿಃ' **17-11,** ಇತ್ಯಾದಿ ಗ್ರಂಥದಿಂದ ಸಾತ್ವಿಕ ಯಜ್ಞಾದಿಗಳಿಗೆ ಪ್ರತ್ಯೇಕಲಕ್ಷಣಗಳನ್ನು ಹೇಳಿ, ಈಗ ಯಜ್ಞದಾನಾದಿಗಳಿಗೆಲ್ಲಾ ಸಾತ್ತಿಕತ್ವಾದಿ ಸಂಪಾದಕಗಳಾದ ಸಾಧಾರಣಧರ್ಮಗಳನ್ನು ಅನೇಕ ಪೂರ್ವಿಕರ ಆಚರಣೆಗಳ ಅನುವಾದದಿಂದ ತಿಳಿಸುತ್ತಾನೆ:- '1ಓಂ, 2ತತ್, 3ಸತ್," ಎಂಬುದಾಗಿ ಪರಬ್ರಹ್ಮನಿಗೆ ಮೂರು ಹೆಸರುಗಳಿವೆ. ಆ ಮೂರು ಹೆಸರುಗಳುಳ್ಳ ಪರಮಾತ್ಮನಿಂದ ಸೃಷ್ಟಿ ಕಾಲದಲ್ಲಿ ತನ್ನ ಆರಾಧನೆ ಮಾಡುವುದಕ್ಕೆ ಸಾಧನವಾಗಿ ಯಜ್ಞಗಳೂ ಅದರ ಅಂಗೋಪಾಂಗಾದಿ ಪರಿಕರವನ್ನು ತಿಳಿಸುವುದಕ್ಕಾಗಿ ವೇದಗಳೂ ಅದರ ಅಧ್ಯಯನಾಧ್ಯಾಪನೆಗಳಿಗಾಗಿ - ಬ್ರಾಹ್ಮಣರೂ ಸಹ 4ಸೃಷ್ಟಿಸಲ್ಪಟ್ಟರು. (ತನ್ನ ಆರಾಧನೆಗಾಗಿ ಯಜ್ಞಾದಿಕರ್ಮಗಳನ್ನೂ, ಅದಕ್ಕೆ ಬೇಕಾಗುವ ಮಂತ್ರಗಳನ್ನೂ, ಅದರ ಉಪದೇಶಕರಾದ ಬ್ರಾಹ್ಮಣರನ್ನೂ ಸಹ ನಿರ್ಮಾಣ ಮಾಡಿ ಮಹೋಪಕಾರಮಾಡಿರುವ ಪರಮಾತ್ಮನಾದ ನನ್ನನ್ನು ಸ್ಮರಿಸಿ, ನನ್ನ ಈ ನಾಮತ್ರಯಾದನಂತನಾಮಗಳನ್ನು ಮಧ್ಯದಲ್ಲಿ ಉಚ್ಚರಿಸುತ್ತ ಆಚರಿಸುವ ಯಜ್ಞಾದಿಗಳೆಲ್ಲವೂ ಅಂಗಲೋಪಾದಿಗಳಾದರೂ ಸಾತ್ವಿಕವೇ ಆಗುವುದು. ಭಗವದುತ್ಕರ್ಷಾನುಸಂಧಾನಪೂರ್ವಕವಾದ ಭಗವತ್ಸ್ಮರಣೆಯು ಸಕಲ ಲೋಪಗಳನ್ನೂ ಹೋಗಲಾಡಿಸಿ ಸಾತ್ವಿಕತೆಯನ್ನು ತಂದುಕೊಟ್ಟು ಯಜ್ಞಾದಿಗಳನ್ನು ಸಾರ್ಥಕಮಾಡುತ್ತದೆಂದು ಭಾವ.)

1. ಓಂ ಎಂದರೆ ಸಕಲಜಗದಾಶ್ರಯನು ಅಥವಾ ಸರ್ವಪದಾರ್ಥಗಳಲ್ಲಿಯೂ ಅಂತರ್ಯಾಮಿಯಾಗಿ ಪ್ರವಿಷ್ಟನಾದವನು ಅಥವಾ ಸರ್ವರಕ್ಷಕನು ಎಂದರ್ಥ.

2. ತತ್=ಗುಣಪೂರ್ಣನು, ಪರೋಕ್ಷನು=ವೇದಮಾತ್ರಗಮ್ಯನು. 3.

3. ಸತ್= ನಿರ್ದೋಷ ಸರ್ವಶುಭಗುಣಪೂರ್ಣನು.

4.ಅಭಿವ್ಯಕ್ತಿಯೇ (ಪ್ರಕಟನೆ ) ವೇದ ಸೃಷ್ಟಿಯು.

**ತಸ್ಮಾದೋಮಿತ್ಯುದಾಹೃತ್ಯ ಯಜ್ಞದಾನತಪಃಕ್ರಿಯಾಃ**

**ಪ್ರವರ್ತಂತೇ ವಿಧಾನೋಕ್ತಾಃ ಸತತಂ ಬ್ರಹ್ಮವಾದಿನಾಂ॥17-24॥**

**24.** ಓಂ ಎಂಬುದು ಭಗವಂತನ ಮಹಿಮೆಯನ್ನು ಬೋಧಿಸುವ ಉತ್ಕೃಷ್ಟನಾಮಧೇಯವಾದ ಕಾರಣ ಬ್ರಹ್ಮಜ್ಞಾನಿಗಳು ಕರ್ಮಗಳನ್ನು ಮಾಡುವಾಗಲೆಲ್ಲಾ 'ಓಂ' ಎಂದು ಹೇಳಿ ವಿಧ್ಯುಕ್ತಗಳಾದ ಯಾಗ, ದಾನ, ತಪಸ್ಸು, ಸಂಧ್ಯಾವಂದನಾದಿ ಕ್ರಿಯೆ ಇವುಗಳನ್ನೆಲ್ಲಾ ನಡೆಯಿಸುವರು. ಅರ್ಥಾನುಸಂಧಾನಪೂರ್ವಕವಾಗಿ ಆರಂಭದಲ್ಲಿ ಓಂಕಾರವನ್ನುಚ್ಚರಿಸಿ ಮಾಡುವ ವಿಹಿತಕರ್ಮವು ಸಾತ್ವಿಕವಾಗುವುದೆಂದು ಭಾವ.

**ತದಿತ್ಯನಭಿಸಂಧಾಯ ಫಲಂ ಯಜ್ಞ ತಪಃಕ್ರಿಯಾಃ**

**ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷಕಾಂಕ್ಷಿಭಿಃ॥17-25॥**

**25.** ಪರೋಕ್ಷ ಸ್ವರ್ಗಾದಿಫಲಗಳು ಬೇಕೆಂದಾಶಿಸದೆ, ವೇದಮಾತ್ರಗಮ್ಯನಾದುದರಿಂದ ಪರೋಕ್ಷನೆನಿಸಿರುವ ಪರಬ್ರಹ್ಮನೇ ನನಗೆ ಆಶ್ರಯನಾಗಲೆಂದು ಬಯಸಿ, ಅಗ್ನಿ ಹೋತ್ರ, ಚಾಂದ್ರಾಯಣಾದಿವ್ರತ, ಸಂಧ್ಯಾವಂದನಾದಿಗಳು, ಗೋಭೂಹಿರಣ್ಯಾದಿ ನಾನಾವಿಧ ದಾನಗಳೂ ಸಹ ಮೋಕ್ಷಾರ್ಥಿಗಳಿಂದ ಆಚರಿಸಲ್ಪಡುತ್ತಿವೆ. (ವೇದವೇದ್ಯನಾದ ಪರಮಾತ್ಮನು ಸಂತುಷ್ಟನಾಗಲೆಂಬ ಅನುಸಂಧಾನದಿಂದ ಇತರ ಯಾವ ಫಲವನ್ನೂ ಆಶಿಸದೆ ಮಾಡುವುದೂ ಸಹ ಯಜ್ಞಾದಿಗಳ ಸಾತ್ವಿಕತೆಗೆ ಕಾರಣವಾಗುವುದೆಂದು ಭಾವ)

**ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ಪ್ರಯುಜ್ಯತೇ**

**ಪ್ರಶಸ್ತೇ ಕರ್ಮಣಿ ತಥಾ ಸಚ್ಛಬ್ದಃ ಪಾರ್ಥ ಯುಜ್ಯತೇ॥17-26॥**

**ಯಜ್ಞೇ ತಪಸಿ ದಾನೇ ಚ ಸ್ಥಿತಿಃ ಸದಿತಿ ಚೋಚ್ಯತೇ**

**ಕರ್ಮ ಚೈವ ತದರ್ಥೀಯಂ ಸದಿತ್ಯೇವಾಭಿಧೀಯತೇ॥17-27॥**

**26-27.** ಪಾರ್ಥ! ಜನನ ಮತ್ತು ಸಾಧುತ್ವವೆಂಬರ್ಥಗಳಲ್ಲಿ 'ಸತ್' ಎಂಬ ಪದವು ಪ್ರಯೋಗಿಸಲ್ಪಡುತ್ತದೆ. ಹಾಗಯೇ ಶುಭಕರ್ಮವನ್ನು ಹೇಳಲು 'ಸತ್' ಎಂಬ ಪದವು ಪ್ರಯೋಗಿಸಲ್ಪಡುವುದು. ಸೋಮಾದಿಯಾಗ, ಕೃಚ್ಛ್ರ ಚಾಂದ್ರಾಯಣಾದಿ ತಪಸ್ಸು, ದ್ರವ್ಯತ್ಯಾಗ ಇವುಗಳಲ್ಲಿ ನಿಷ್ಠೆಯು= ಭಗವಂತನೇ ಇವುಗಳಿಲ್ಲಿದ್ದು ತಪ್ಪದೆ ಫಲಕೊಡುವನು ಎಂಬ ನಂಬಿಕೆಯೆಂಬ ಆಸ್ತಿಕ್ಯ ಬುದ್ಧಿಯು ಮತ್ತು ಸತ್ ಎಂಬ ಶಬ್ದ ವಾಚ್ಯನಾದ ಭಗವಂತನ ವಿಷಯಕ ಕರ್ಮವೂ ಸಹ 'ಸತ್' ಎಂಬ ಶಬ್ದಾರ್ಥವಾಗುವುದು. (ಭಗವನ್ನಿಷ್ಠಾಪೂರ್ವಕತ್ವವೂ ಸಹ ಯಜ್ಞಾದಿಗಳಿಗೆ ಸಾತ್ವಿಕತ್ವ ಸಂಪಾದಕವೆಂದು ಭಾವ.)

**ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತ್ವಂ ಕೃತಂ ಚ ಯತ್**

**ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ॥17-28॥**

**28.** ಎಂತಹ ಯಜ್ಞಾದಿಗಳು ಸಾತ್ವಿಕವಾಗಲಾರವೆಂದರೆ ಹೇಳುತ್ತಾನೆ: ಪಾರ್ಥ! ಭಗವಂತನಲ್ಲಿ ಶ್ರದ್ದೆಯಿಲ್ಲದೆ ಮಾಡಿದ ಹೋಮ, ದಾನ, ತಪಸ್ಸು, ಕರ್ಮ ಇವೆಲ್ಲವೂ 'ಅಸತ್' ಎಂಬುದಾಗಿ ಹೇಳಿಸಿಕೊಳ್ಳಲ್ಪಡುತ್ತವೆ. ಅಂತಹ ಹೋಮಾದಿಗಳು ಐಹಿಕಾಮುಷ್ಮಿಕ

ಪುರುಷಾರ್ಥಪ್ರದವಾಗುವುದಿಲ್ಲ. ಕರ್ಮವು ಜ್ಞಾನಪೂರ್ವಕವಾಗಲಿ ಆಗದಿರಲಿ, ಶ್ರದ್ಧೆಯಿಂದ ಕೃತವಾದರೆ ಸಫಲವಾಗುವುದು. ಜ್ಞಾನ ಪೂರ್ವಕವೂ ಆಗಿ ಶ್ರದ್ಧಾ ಸಹಿತವಾದರೆ ಬಹು ವಿಶೇಷವು. ಶ್ರದ್ಧೆಯು ಮುಖ್ಯವಾದ ಸಾಧನೆಯು. ಆದುದರಿಂದ ಶ್ರದ್ಧೆಯನ್ನು ವಿಭಾಗಿಸಿ ವಿವರಿಸಲ್ಪಟ್ಟಿದೆ. ಶ್ರದ್ಧೆಯಿಂದ ವಿಹಿತಕರ್ಮಾನುಷ್ಠಾನಮಾಡಿದರೆ ಪರಮ ಶ್ರೇಯಸ್ಸಾಗುವುದು.

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಶ್ರದ್ಧಾತ್ರಯ ವಿಭಾಗಯೋಗೋ ನಾಮ ಸಪ್ತದಶೋಽಧ್ಯಾಯಃ॥17-[28]॥

## ಅಷ್ಟಾದಶೋಽಧ್ಯಾಯಃ॥18-[78]॥

ಗೀತಾಶಾಸ್ತ್ರೋಪದೇಶವು ಹದಿನೈದನೆಯ ಅಧ್ಯಾಯದಲ್ಲಿಯೇ "ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ" ೧೫-೨೦ ಎಂಬುದರಿಂದ ಕೊನೆಗೊಂಡಿದೆ. ಅನಂತರ ಪಾರ್ಥನು ಇಂತಹ ಅಧ್ಯಾತ್ಮಶಾಸ್ತ್ರಕ್ಕೆ ಅಧಿಕಾರಿಗಳಾರು? ಅನಧಿಕಾರಿಗಳಾರು? ಎಂದು ಕೇಳಲಾಗಿ ದೇವಾಸುರಸ್ವಭಾವ ವಿಭಾಗಮಾಡಿ, ಅಧಿಕಾರನಧಿಕಾರಿಗಳನ್ನು ಭಗವಂತನು ವಿವೇಚನೆಮಾಡಿ ಹದಿನಾರನೆಯ ಅಧ್ಯಾಯದಲ್ಲಿ ತಿಳಿಸಿದನು. ಅದರ ಅಂತ್ಯದಲ್ಲಿ ಶ್ರೀಕೃಷ್ಣನು ಶಾಸ್ತ್ರವಿಧಾನೋಕ್ತ ಪ್ರಕಾರವಾಗಿ ಕರ್ಮಮಾಡಬೇಕೆಂದು ಹೇಳಿದನು. ಬಳಿಕ ಅರ್ಜುನನು ವಿಧಿಜ್ಞಾನವಿಲ್ಲದೆ ಶ್ರದ್ಧೆಯಿಂದ ಮಾಡಿದ ಕರ್ಮಕ್ಕೆ ಫಲವುಂಟೇ? ಇಲ್ಲವೆ? ಎಂಬುದಾಗಿ ಪ್ರಶ್ನೆ ಮಾಡಿದುದರಿಂದ ಹದಿನೇಳನೆಯ ಅಧ್ಯಾಯದಲ್ಲಿ ಶ್ರದ್ಧಾನುಗುಣವಾದ ಫಲವಿದೆಯೆಂದು ಶ್ರದ್ಧಾ ವಿಭಾಗಾಧಿಪೂರ್ವಕವಾಗಿ ಹೇಳಬೇಕಾಯಿತು. ಹೀಗೆ ಸಪರಿಕರವಾಗಿ ಅಧ್ಯಾತ್ಮಶಾಸ್ತ್ರೋಪದೇಶವು ಮುಗಿಯಿತು. ಆದರೆ ಈ ಹದಿನೇಳು ಅಧ್ಯಾಯಗಳಲ್ಲಿ ಮೋಕ್ಷಹೇತುವಾದ ಜ್ಞಾನ ಸಾಧನೆಯು ಒಟ್ಟಿಗೆ ಒಂದೆಡೆಯಲ್ಲಿಯೇ ನಿರೂಪಿತವಾಗಿಲ್ಲ; ಮಧ್ಯದಲ್ಲಿ ಆವಶ್ಯಕವಾಗಿ ಪ್ರಸಕ್ತವಾದ ವಿಷಯಗಳು ನಿರೂಪಿತವಾಗಿವೆ. ಹೀಗೆ ಭಿನ್ನಭಿನ್ನ ಸ್ಥಳಗಳಲ್ಲಿ ನಿರೂಪಿತವಾಗಿರುವ ಜ್ಞಾನಸಾಧನೆಯು ಮಂದಜನರ ಬುದ್ಧಿಗೆ ಗೋಚರವಾಗುವುದಿಲ್ಲವಾದ ಕಾರಣ ಎಲ್ಲವನ್ನೂ ಸಂಗ್ರಹಿಸಿ ಈ ಅಧ್ಯಾಯದಲ್ಲಿ ನಿರೂಪಿಸುತ್ತಾನೆ. ಮತ್ತು ಹದಿನಾಲ್ಕನೆಯ ಅಧ್ಯಾಯದಲ್ಲಿ ನಿರೂಪಿತವಾದ ಸತ್ತ್ವಾದಿಗುಣತ್ರಯ ಕಾರ್ಯವೂ ಇಲ್ಲಿ ವಿವರಿಸಲ್ಪಡುವುದು.

ಅರ್ಜುನ ಉವಾಚ

**ಸನ್ಯಾಸಸ್ಯ ಮಹಾಬಾಹೋ ತತ್ವಮಿಚ್ಛಾಮಿ ವೇದಿತುಂ**
**ತ್ಯಾಗಸ್ಯ ಚ ಹೃಷಿಕೇಶ ಪೃಥಕ್ಕೇಶಿನಿಷೂದನ॥18-1॥**

1. "ಸಂನ್ಯಾಸಃ ಕರ್ಮಯೋಗಶ್ಚ" 5-2, ಇತ್ಯಾದಿಗ್ರಂಥದಿಂದ ಸಂನ್ಯಾಸವು ಪುರುಷಾರ್ಥ ಸಾಧನವೆಂದೂ, "ತ್ಯಾಗಾಚ್ಛಾಂತಿರನಂತರಂ" 12-12 ಎಂಬಲ್ಲಿ. ತ್ಯಾಗವು ಪುರುಷಾರ್ಥ ಹೇತುವೆಂದೂ ಹೇಳಿರುವುದನ್ನು ಕೇಳಿ ಅರ್ಜುನನು ಸಂನ್ಯಾಸ ತ್ಯಾಗಗಳ ಸ್ವರೂಪಜಿಜ್ಞಾಸೆಯಿಂದ ಪ್ರಶ್ನೆ ಮಾಡುತ್ತಾನೆ:- ಮಹಾ ಪರಾಕ್ರಮಶಾಲಿಯು, ಕೇಶಿಯೆಂಬ ದೈತ್ಯಸಂಹಾರಕನು, ಸರ್ವೇಂದ್ರಿಯಪ್ರೇರಕನೂ ಆಗಿರುವ ಸ್ವಾಮಿ! "ಸಂನ್ಯಾಸ, ತ್ಯಾಗ" ಎಂಬೀ ಎರಡು ಶಬ್ದಗಳಿಗೂ ಒಂದೇ ಅರ್ಥವೆಂದು ತೋರುತ್ತದೆ. ನೀನಾದರೋ ಅವೆರಡನ್ನೂ ಬೇರೆಯಾಗಿ ಹೇಳಿರುವೆ. ಆದಕಾರಣ ಸಂನ್ಯಾಸ-ತ್ಯಾಗಗಳ ಪ್ರತ್ಯೇಕಸ್ವರೂಪವನ್ನು ತಿಳಿಯಬೇಕೆಂದು ಅಪೇಕ್ಷಿಸುತ್ತೇನೆ. ದಯಮಾಡಿ ಇದರ ವಿವೇಚನೆಯನ್ನು ತಿಳಿಸಬೇಕು.

ಶ್ರೀಭಗವಾನುವಾಚ

**ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸನ್ಯಾಸಂ ಕವಯೋ ವಿದುಃ**
**ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ॥18-2॥**

2. ಭಗವಂತನು ಉತ್ತರ ಹೇಳುತ್ತಾನೆ:- ಕಾಮ್ಯಕರ್ಮವು ವೈಕಲ್ಪಿಕ ಕಾಮ್ಯ ನಿಯತಕಾಮ್ಯ ಎಂಬುದಾಗಿ ಎರಡು ಬಗೆ. ವೈಕಲ್ಪಿಕ ಕಾಮ್ಯವೆಂದರೆ, ಜ್ಯೋತಿಷ್ಟೋಮಾದಿ ಕರ್ಮಗಳೇ ಕಾಮ್ಯವೂ, ಅಕಾಮ್ಯವೂ ಆಗುವುವು. ಹೇಗೆಂದರೆ:- ಸ್ವರ್ಗಾದಿಫಲಾಪೇಕ್ಷೆಯಿಂದ ಜ್ಯೋತಿಷ್ಟೋಮಾದಿಗಳನ್ನು ಮಾಡಿದರೆ ಸ್ವರ್ಗಾದಿಫಲವು ದೊರೆಯುವುದು. ಆಗ ಅದು ಕಾಮ್ಯಕರ್ಮವೆನಿಸುವುದು. ಆ ಜೋತಿಷ್ಟೋಮಾದಿಗಳನ್ನೇ ಬೇರೆ ಫಲವನ್ನಪೇಕ್ಷಿಸದೆ ಬ್ರಹ್ಮಜ್ಞಾನಾಂಗ ಚಿತ್ತಶುದ್ಧಿಗಾಗಿ ಮಾಡಿದರೆ ಅಕಾಮ್ಯವೆನಿಸುವುದು. ಹೀಗೆ ಒಂದೇ ಕರ್ಮವೇ ಕರ್ತೃವಿನ ಅನುಸಂಧಾನಭೇದದಿಂದ ಕಾಮ್ಯ, ಅಕಾಮ್ಯವೂ ಆಗಿ ವೈಕಲ್ಪಿಕ ಕಾಮ್ಯವೆಂದು ಪರಿಗಣಿತವಾಗಿದೆ. ಫಲಾಪೇಕ್ಷೆಯಿಂದಲೇ ಮಾಡುವ ಪುತ್ರಕಾಮೇಷ್ಟ್ಯಾದಿಗಳು ನಿಯತಕಾಮ್ಯವೆಂದು ಪರಿಗಣಿತವಾಗಿವೆ. ಹೀಗೆ ದ್ವಿವಿಧಕಾಮ್ಯಗಳಲ್ಲಿ ವೈಕಲ್ಪಿಕ ಕಾಮ್ಯಕರ್ಮಗಳ ವಿಷಯದಲ್ಲಿ ಫಲಾಪೇಕ್ಷೆಯನ್ನು ಬಿಡುವುದು ಎಂದರೆ ಜನಕಾದಿಗಳಂತೆ ಫಲಾಪೇಕ್ಷೆಯಿಲ್ಲದೆ ಕೇವಲ ಭಗವತ್ಪ್ರೀತಿಗಾಗಿ ಕರ್ಮವನ್ನಾಚರಿಸುವುದು, ನಿಯತಕಾಮ್ಯವನ್ನು ಸರ್ವಥಾ ಬಿಡುವುದು ಇವೆರಡೂ ಸಂನ್ಯಾಸಶಬ್ದದಿಂದ ವಿವಕ್ಷಿತವಾದ ಅರ್ಥವು.

[1]ದ್ವಿವಿಧಕಾಮ್ಯ ಕರ್ಮಗಳಿಗೂ ಭಗವತ್ ಪ್ರೀತಿಯನ್ನೇ ಉದ್ದೇಶಿಸಿ ಬೇರೆ ಫಲವನ್ನು ತ್ಯಜಿಸುವುದು ತ್ಯಾಗಶಬ್ದಾರ್ಥವೆಂದು ವಿವೇಚನೆಶೀಲರಾದ! ಜ್ಞಾನಿಗಳು ಹೇಳುವರು.

1.ಇಲ್ಲಿ ಸರ್ವಕರ್ಮ ಎಂಬುವರಿಂದ ದ್ವಿವಿಧಕಾಮ್ಯ ಕರ್ಮಮಾತ್ರವೇ ವಿವಕ್ಷಿತವು. ನಿತ್ಯನೈಮಿತ್ತಿಕಾಕಾಮ್ಯ ಕರ್ಮಫಲವಾದ ಜ್ಞಾನಾಂಗ ಚಿತ್ತಶುದ್ಧಿಯು ಆವಶ್ಯಕವಾಗಿರುವುದರಿಂದ ಅದನ್ನು ಬಿಡಲಾಗುವುದಿಲ್ಲ. ಆದುದರಿಂದ ಕಾಮ್ಯಕರ್ಮಮಾತ್ರವೇ ಇಲ್ಲಿ ಗ್ರಾಹ್ಯವೆಂದು ತಿಳಿಯಬೇಕು.

**ತ್ಯಾಜ್ಯಂ ದೋಷವದಿತ್ಯಕೇ ಕರ್ಮ ಪ್ರಾಹುರ್ಮನೀಷಿಣಃ**

**ಯಜ್ಞದಾನತಪಃ ಕರ್ಮ ನ ತ್ಯಾಜ್ಯಮಿತಿ ಚಾಪರೇ॥18-3॥**

3. ವಿಮರ್ಶೆ ಮಾಡದಿದ್ದರೆ ತ್ಯಾಗಸ್ವರೂಪವಿಷಯದಲ್ಲಿ ಪಂಡಿತರ ಅಭಿಪ್ರಾಯವು ಭಿನ್ನವಾಗಿ ತೋರುತ್ತದೆ. ಹೇಗೆಂದರೆ:- ಕೆಲವು ಜ್ಞಾನಿಗಳು ಬಂಧಕತ್ವ ದೋಷವುಳ್ಳ ಕಾಮ್ಯಕರ್ಮವು ಬಿಡತಕ್ಕುದೆಂದು ಹೇಳುತ್ತಾರೆ. ಇತರ ಕೆಲವು ಪಂಡಿತರು ಯಜ್ಞ, ದಾನ ಮತ್ತು ಕೃಚ್ಛ್ರ ಚಾಂದ್ರಾಯಣಾದಿ ಯಜ್ಞಾಂಗಕರ್ಮ ಇವುಗಳು ಬಿಡತಕ್ಕುದಲ್ಲವೆಂದು ಹೇಳುತ್ತಾರೆ. (ಬಿಡಬೇಕು- ಬಿಡಬಾರದು ಎಂದು ವಿರುದ್ಧವಾಗಿ ಹೇಳುವ ಇಬ್ಬರೂ ಜ್ಞಾನಿಗಳೆಂದು ಹೇಳಿದೆ. ಜ್ಞಾನಿಗಳಾದರೋ ಪರಸ್ಪರ ವಿರುದ್ಧವಾದುದನ್ನು ತತ್ವವೆಂದು ಹೇಳಲಾರರು. ಆದುದರಿಂದ ಇವೆರಡು ಮತಗಳಿಗೂ ವಿರೋಧಬಾರದಂತೆ ಅಭಿಪ್ರಾಯವನ್ನು ಕಲ್ಪಿಸಬೇಕು. ಹೇಗೆಂದರೆ: ಬಿಡಬೇಕು ಎನ್ನುವ ಮಾತಿಗೆ ಕರ್ಮವನ್ನೇ ಆಚರಿಸಬಾರದೆಂದರ್ಥವಲ್ಲ; ಫಲಾಶೆಯಿಂದ ಕರ್ಮವನ್ನಾಚರಿಸಬಾರದು; ಫಲಾಶೆಯಿಲ್ಲದೆ ಭಗವತ್ಪ್ರೀತ್ಯರ್ಥವಾಗಿ ಕರ್ಮ ಮಾಡಬೇಕು ಎಂದರ್ಥ. 'ಬಿಡಬಾರದು' ಎಂಬುವ ಮಾತಿಗೆ ಯಜ್ಞಾದಿಕರ್ಮಗಳನ್ನು ಫಲಾಶೆಯಿಲ್ಲದೆ ಮಾಡಲೇಬೇಕು ಎಂದರ್ಥ. ಒಟ್ಟಿನಲ್ಲಿ ಎರಡುಮತಗಳಿಗೂ ಫಲಾಶೆಯನ್ನು ಬಿಟ್ಟು ಯಜ್ಞಾದಿಗಳು ಕರ್ತವ್ಯವೆಂದು ಒಂದೇ ಅಭಿಪ್ರಾಯ, ವಿರೋಧವಿಲ್ಲ; ವಿಚಾರಮಾಡದಿರುವ ಸಂದರ್ಭದಲ್ಲಿಯೇ ವಿರೋಧವು ತೋರುವುದೇ ಹೊರತು ಮೇಲ್ಕಂಡಂತೆ ವಿಚಾರಮಾಡಿದರೆ ವಿರೋಧವಿಲ್ಲ; ಒಂದೇ ಅಭಿಪ್ರಾಯವೆಂಬುದು ವ್ಯಕ್ತವಾಗುವುದೆಂದು ಭಾವ.)

**ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ**

**ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಃ ಸಂಪ್ರಕೀರ್ತಿತಃ॥18-4॥**

4. ಉಕ್ತಮತದ್ವಯದ ಅವಿರೋಧಪ್ರಕಾರವನ್ನೇ ಪ್ರತಿಜ್ಞಾಪೂರ್ವಕವಾಗಿ ಉಪಪಾದಿಸುತ್ತಾನೆ:-- ಭರತಕುಲಾಗ್ರಣಿಯಾದ ಅರ್ಜುನ! ತ್ಯಾಗವು ಫಲತ್ಯಾಗ, ಕರ್ಮದಲ್ಲಿ ಮಮತೆಯ ತ್ಯಾಗ, ಭಗವಂತನೇ ಸಕಲಕ್ಕೂ ಸ್ವತಂತ್ರಕರ್ತನೆಂದರಿತು ತಾನೇ ಸ್ವತಂತ್ರಕರ್ತನೆಂಬ ಅಭಿಮಾನವನ್ನು ಬಿಡುವುದು ಎಂಬುದಾಗಿ ಮೂರು ಬಗೆಯೆಂದು ಪ್ರಮಾಣಗ್ರಂಥಗಳಲ್ಲಿ ನಿರೂಪಿತವಾಗಿದೆ. ಆಥವಾ

ಮುಂದೆ ಹೇಳುವ ಪ್ರಕಾರ ತ್ಯಾಗವು ಸಾತ್ವಿಕ, ರಾಜಸ, ತಾಮಸ ಎಂಬುದಾಗಿ ತ್ರಿವಿಧವೆಂತಲೂ ಹೇಳುತ್ತಾರೆ.

**ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ॥18-5॥**

5.ಯಜ್ಞ, ದಾನ, ತಪಸ್ಸು, ಸಂಧ್ಯಾದಿಕರ್ಮ ಇವುಗಳು ಬಿಡತಕ್ಕುದಲ್ಲ; ಅವು ಅವಶ್ಯಕವಾಗಿ ಮಾಡಲ್ಪಡತಕ್ಕವುಗಳು. ಏಕೆಂದರೆ:- ಯಜ್ಞ, ದಾನ, ತಪಸ್ಸುಗಳು ಜ್ಞಾನಪೂರ್ವಕವಾಗಿ ಅನುಷ್ಠಾನಮಾಡುವ ವಿವೇಕಿಗಳಿಗೆ ಬಂಧಕವಾಗುವುದಿಲ್ಲ; ಚಿತ್ತಶುದ್ಧಿಕರವಾಗುವುದು. ಬ್ರಹ್ಮಜ್ಞಾನಿಗಳು ಆಚರಿಸಿದರೆ ಅವರಿಗೆ ಮುಕ್ತಿಯಲ್ಲಿ ಆನಂದಾತಿಶಯವನ್ನುಂಟುಮಾಡುವುದು. ಆದುದರಿಂದ ಸಕಲವರ್ಣಾಶ್ರಮಿಗಳಿಗೂ ಅವರವರಿಗೆ ವಿಹಿತವಾದ ಅಭಯದಾನ, ಬ್ರಹ್ಮಚರ್ಯಾದಿ ತಪಸ್ಸೂ ವಿಹಿತವಾಗಿದೆ. ಸ್ತ್ರೀಶೂದ್ರಾದಿಗಳಿಗೂ ಸಹ ವಿಷ್ಣು ನಾಮಾಧ್ಯಯನ ಎಂಬ ಯಜ್ಞ, ಸತ್ಯವಚನ, ಉಪವಾಸಾದಿ ತಪಸ್ಯ ವಿಹಿತವಾಗಿದೆ. ಆದುದರಿಂದ ಅವರವರು ವಿಹಿತಕರ್ಮವನ್ನು ಬಿಡದೆ ಆಚರಿಸಬೇಕೆಂದು ಭಾವ.

**ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ।**
**ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಂ॥18-6॥**

6.ಪಾರ್ಥ! - ಉತ್ತಮ ಯಜ್ಞಾದಿ ಕರ್ಮಗಳೂ ಸಹ ಮಮತೆ, ಕರ್ತೃತ್ವಾಭಿಮಾನವೆಂಬ ಸಂಗ, ಫಲಾಶೆ ಇವುಗಳನ್ನು ಬಿಟ್ಟು ಕೇವಲ ಹರಿಪ್ರೀತ್ಯರ್ಥವಾಗಿ ಮಾಡಲ್ಪಡಬೇಕೆಂಬುದೇ ನಿರ್ಣಿತವಾದ ನನ್ನ ಸಿದ್ಧಾಂತವು. ಇದೇ ಉತ್ತಮ ಮಾರ್ಗವು. ಫಲಾಶೆ ಮುಂತಾದುವುಗಳನ್ನು ಬಿಡುವುದೇ ಕರ್ಮವನ್ನು ಬಿಡಬೇಕೆಂಬುದರ ಅಭಿಪ್ರಾಯ. ಆದುದರಿಂದ ಈ ರೀತಿಯಾಗಿ ಕರ್ಮಮಾಡಿದರೂ ಬಿಡಬೇಕೆಂದು ಹೇಳುವ ಮತಕ್ಕೆ ವಿರೋಧವಿಲ್ಲವೆಂದು ಭಾವ.

**ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ**
**ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ॥18-7॥**

7. ವರ್ಣಾಶ್ರಮೋಚಿತ ಕರ್ಮಗಳನ್ನಾಚರಿಸದೇ ಇರುವುದು ಯುಕ್ತವಲ್ಲ. ('ಸ್ವಯಜ್ಞಾದೀನ್ ಪರಿತ್ಯಜ್ಯ ನಿರಯಂ ಯಾತ್ಯಸಂಶಯಂ' ಎಂದು ಪದ್ಮಪುರಾಣದಲ್ಲಿ ವಿಹಿತ ಕರ್ಮವನ್ನಾಚರಿಸದಿರುವವರಿಗೆ ನರಕವಾಗುವುದೆಂದು ಹೇಳಿರುವುದರಿಂದ ಸರ್ವಥಾ ಕರ್ಮತ್ಯಾಗ ಮಾಡಬಾರದು.) ಈ ರಹಸ್ಯವನ್ನರಿಯದೆ ಕರ್ಮವನ್ನಾಚರಿಸದಿರುವುದೇ

ತ್ಯಾಗವೆಂಬ ಮಿಥ್ಯಾಜ್ಞಾನದಿಂದ ಯಜ್ಞಾದಿಗಳನ್ನು ಬಿಟ್ಟರೆ ಅಂತಹ ತ್ಯಾಗವು ತಾಮಸತ್ಯಾಗವೆಂದು ನಿರ್ಣಯಿಸಲ್ಪಟ್ಟಿದೆ.

**ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್**

**ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್॥18-8॥**

8. ಯಜ್ಞಾದಿಗಳನ್ನು ಮಾಡುವಾಗ ಹೊಗೆ, ಛಳಿ ಮುಂತಾದುವುಗಳನ್ನು ಸಹಿಸಬೇಕು. ಕಷ್ಟದಿಂದ ಸಂಪಾದಿಸಿದ ಧನವನ್ನು ಖರ್ಚುಮಾಡಬೇಕು. ಇತ್ಯಾದಿಗಳಿಂದ ಮನಸ್ಸಿಗೆ ದುಃಖವಾಗುವುದು. ಕಷ್ಟಗಳನ್ನೆಲ್ಲಾ ಸಹಿಸಿಕೊಂಡು ಯಜ್ಞಾದಿಗಳನ್ನು ಮಾಡಿದರೆ ಅದರಿಂದ ಶರೀರಕ್ಕೆ ಆಯಾಸವಾಗಿ ರೋಗಬರಬಹುದು. ಮುಂತಾದ ಭೀತಿಯಿಂದ ಕರ್ಮವನ್ನು ಮಾಡದೆ ಬಿಡುವುದು ರಾಜಸ ತ್ಯಾಗವು ಅಂತಹ ರಾಜಸತ್ಯಾಗವನ್ನು ಮಾಡಿದವನು ಚಿತ್ತಶುದ್ಧಿ, ಜ್ಞಾನ, ಕೊನೆಗೆ ಮೋಕ್ಷವೆಂಬ ಫಲವನ್ನು ಪಡೆಯಲಾರನು.

**ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ**

**ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ವಿಕೋ ಮತಃ॥18-9॥**

9. ಈ ಕರ್ಮವು ನನ್ನ ವರ್ಣಾಶ್ರಮಗಳಿಗೆ ವಿಹಿತವಾಗಿರುವ ಕಾರಣದಿಂದಲೇ ಅವಶ್ಯ ಕರ್ತವ್ಯವು; ಮಮತೆ, ಕರ್ತೃತ್ವಾಭಿಮಾನಗಳನ್ನೂ, ಫಲಾಶೆಯನ್ನೂ ಸಹ ಮಾಡಬಾರದು. ಕೇವಲ ಪರಮಾತ್ಮನು ಸಂತುಷ್ಟನಾಗಲೆಂಬ ಭಾವನೆಯಿಂದಲೇ ಇದು ಕರ್ತವ್ಯವೆಂದರಿತು ಕರ್ಮವನ್ನಾಚರಿಸಿ ಮಾಡುವ ಮಮತೆ-ಫಲಾಶೆ ಮುಂತಾದವುಗಳ ತ್ಯಾಗವು ಸಾತ್ವಿಕ ತ್ಯಾಗವನಿಸುವುದು.

**ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ**

**ತ್ಯಾಗೀ ಸತ್ವಸಮಾವಿಷ್ಟೋ ಮೇಧಾವೀ ಛಿನ್ನ ಸಂಶಯಃ॥18-10॥**

10. ಸತ್ವಗುಣ ಪ್ರಾಚುರದಿಂದ ಪರಮಾತ್ಮತತ್ವಜ್ಞಾನವನ್ನು ಹೊಂದಿ ಅದರಿಂದ ಭಗವಂತನ ವಿಷಯದಲ್ಲಿಯೂ, ಭಗವತ್ಪ್ರೀತಿ ಮಾತ್ರೋದ್ದೇಶದಿಂದ ಕರ್ಮ ಮಾಡಬೇಕೆಂಬ ವಿಷಯದಲ್ಲಿಯೂ ಸಂಶಯವನ್ನು ಕಳೆದುಕೊಂಡವನಾಗಿ, ಯಾವನು ಕರ್ಮಕಾಲದಲ್ಲಿ ಸುಖಪ್ರದವಲ್ಲದ ಮತ್ತು ಶರೀರಾಯಾಸಸಾಧ್ಯವಾದ ಕರ್ಮವನ್ನು ದ್ವೇಷಿಸುವುದಿಲ್ಲವೋ ಮತ್ತು ಕರ್ಮಫಲವನ್ನು ಅಪೇಕ್ಷಿಸುವುದಿಲ್ಲವೋ ಅಂತಹ ತ್ಯಾಗಿಯು ಸಾತ್ವಿಕತ್ಯಾಗವುಳ್ಳವನು. (ಭಗವಂತನ ಮಹಿಮೆಯನ್ನು ಯಥಾವತ್ತಾಗಿ ತಿಳಿದು ಅಹಂಕಾರ ಮಮತೆಗಳ ತ್ಯಾಗಪೂರ್ವಕವಾಗಿ

ಫಲಾಶೆಯನ್ನು ಬಿಟ್ಟು ಕಾಯಕ್ಲೇಶಾದಿ ದುಃಖಪ್ರದವಾದರೂ ಸಹ ವಿಹಿತಕರ್ಮವನ್ನು ಭಗವದರ್ಪಣಬುದ್ಧಿಯಿಂದ ಆಚರಿಸುವವನು ಸಾತ್ವಿಕತ್ಯಾಗಿಯೆಂದು ಸಾತ್ವಿಕತ್ಯಾಗಿಯ ಲಕ್ಷಣವು ಸಿದ್ಧವಾಯಿತೆಂದು ಭಾವ.)

ನಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ

ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ॥18-11॥

11. ಸಕಲ ಕರ್ಮತ್ಯಾಗ ಅಥವಾ ವಿಹಿತ ಕರ್ಮತ್ಯಾಗವು ತ್ಯಾಗಶಬ್ದಾರ್ಥವೆಂದು ಏಕೆ ಹೇಳಬಾರದು? ಎಂದರೆ, ಹೇಳುತ್ತಾನೆ:- ದೇಹವನ್ನು ಧರಿಸಿರುವ ಪ್ರಾಣಿಮಾತ್ರವು ದೇಹಭರಣೋಪಯುಕ್ತವಾದ ಕರಚರಣಾದಿಗಳ ಚೇಷ್ಟೆಗಳನ್ನುಮಾಡುತ್ತಲೇ ಇರುತ್ತದೆ. ಆದಕಾರಣ ಬದುಕಿರುವ ಪ್ರಾಣಿಗೆ ವಿಶೇಷವಾಗಿ ಈ ಕರ್ಮವನ್ನು ಬಿಡಲು ಸಾಧ್ಯವಲ್ಲ. ವಿಹಿತಕರ್ಮವನ್ನು ಬಿಟ್ಟರೆ ಪಾಪಬರುವುದೆಂದು ಹೇಳಿರುವುದರಿಂದ ಅದೆಲ್ಲವನ್ನೂ ಬಿಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ವಕರ್ಮತ್ಯಾಗ ಅಥವಾ ವಿಹಿತಸರ್ವ ತ್ಯಾಗವು ತ್ಯಾಗಶಬ್ದಾರ್ಥವಾಗಲಾರದು. ಯಾವನು ಹಿಂದೆ ಹೇಳಿರುವ ಪ್ರಕಾರ ಫಲಾಶೆ ಮುಂತಾದವುಗಳನ್ನು ತ್ಯಜಿಸಿ ಕರ್ಮವನ್ನು ಮಾಡುವನೋ ಅವನೇ ತ್ಯಾಗಿಯು; ಭಗವಂತನಲ್ಲಿ ಸಕಲ ಕರ್ಮಗಳನ್ನೂ ಸಮರ್ಪಣೆ ಮಾಡುವವನು ಎಂಬುದಾಗಿ ಹೇಳಿಸಿಕೊಳ್ಳಲ್ಪಡುವನು.

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಂ

ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್॥18-12॥

12. ಫಲಾಶೆಯನ್ನು ಬಿಡದೆ ಕರ್ಮಮಾಡಿದವರಿಗೆ ಮರಣಾನಂತರದಲ್ಲಾಗುವ ಕರ್ಮಫಲವು ಅನಿಷ್ಟ ನರಕಾದಿಗಳು ಇಷ್ಟ=ಅಪೇಕ್ಷಿಸಿದ ಸ್ವರ್ಗಾದಿಗಳು ಮಿಶ್ರ=ಸುಖದುಃಖ ಮಿಶ್ರಫಲಕವಾದ ಮನುಷ್ಯಾದಿಜನ್ಮ ಎಂಬುದಾಗಿ ಮೂರ ಬಗೆಯಾಗಿದೆ. ಸಂನ್ಯಾಸಿನಾಂ=ವೈಕಲ್ಪಿಕಕಾಮ್ಯ ಕರ್ಮಗಳ ಫಲತ್ಯಾಗ, ನಿಯತ ಕಾಮ್ಯಕರ್ಮಗಳನ್ನು ಮಾಡದೆಯೇ ಬಿಡೋಣ ಇವುಗಳುಳ್ಳವರಿಗೆ ಈ ಮೂರು ಬಗೆಯಾದ ಫಲವೂ ಆಗುವುದಿಲ್ಲ. ಇಂತಹ ತ್ಯಾಗಿಗಳಿಗೆ ಜ್ಞಾನಾದಿದ್ವಾರಾ ಅಪರೋಕ್ಷವಾಗಿ ಮುಕ್ತಿಯೂ ಲಭಿಸಿ ಅಲ್ಲಿ ಆನಂದಾತಿಶಯವುಂಟಾಗುವುದು.

ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ

ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಂ॥18-13॥

**13.** "ನಾನೇ ಸ್ವತಂತ್ರ ಕರ್ತನು" ಎಂಬ ಅಭಿಮಾನತ್ಯಾಗವು ತ್ಯಾಗಪದಾರ್ಥ ಎಂಬುದನ್ನು ನಿರೂಪಿಸುವುದಕ್ಕಾಗಿ ಪ್ರಜ್ಞಾಪೂರ್ವಕವಾಗಿ ಕರ್ಮಕಾರಣಗಳನ್ನು ಹೇಳುತ್ತಾನೆ:- ಸಕಲ ಕರ್ಮಗಳೂ ಸಾಂಗವಾಗಿ ಕೊನೆಗೊಂಡು ಫಲಸಿದ್ಧಿಯಾಗಬೇಕಾದರೆ ಐದು ಕಾರಣಗಳು ಆವಶ್ಯಕವೆಂದು ವಿಷ್ಣುವಿನ ಅವತಾರನಾದ ಕಪಿಲದೇವರಿಂದ ರಚಿತವಾದ ಸಾಂಖ್ಯಶಾಸ್ತ್ರದಲ್ಲಿ ನಿರ್ಣಯಿಸಲ್ಪಟ್ಟಿದೆ. ಅಲ್ಲಿ ಉಕ್ತವಾದ ಈ ಐದು ಕಾರಣಗಳನ್ನೂ ನಾನು ನಿನಗೆ ಹೇಳುವೆನು; ತಿಳಿಯುವವನಾಗು. ಅರ್ಜುನ! ಈ ಪಂಚಕಾರಣಗಳು ಅಶಕ್ತರಿಗೆ ಬೇಕಾಗಬಹುದು. ನನ್ನಂತಹ ಸಮರ್ಥರಿಗೆ ಅನಾವಶ್ಯಕವೆಂದು ಭಾವಿಸಬೇಡ. ಇದು ಎಂತಹವರಿಗೂ ಬೇಕು. ನೀನು ಮಹಾ ಪರಾಕ್ರಮಶಾಲಿಯಾದರೂ ಈ ಕಾರಣಗಳಿಲ್ಲದೆ ಏನನ್ನೂ ಮಾಡಲಾರೆ. ಇವು ಸರ್ವರಿಗೂ ಆವಶ್ಯಕ ಕಾರಣಗಳೆಂದು ತಿಳಿ.

**ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ**

**ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಂ॥18-14॥**

**14.** ಪಂಚಕಾರಣಗಳು ಯಾವುವೆಂದರೆ:-ದೇಹ-ಭೂಮ್ಯಾದ್ಯಾಶ್ರಯಸ್ಥಾನ, ಅಸ್ವತಂತ್ರ ಕರ್ತನಾದ ಜೀವ, ಇಂದ್ರಿಯ ಮತ್ತು ಇತರ ಉಪಕರಣ ಪದಾರ್ಥಗಳು, ನಾನಾವಿಧ ಹಸ್ತಾದಿವ್ಯಾಪಾರ, ಧ್ಯಾನರೂಪವಾದ ಮಾನಸಕ್ರಿಯೆ, ಹೋಮಮಾಡುವುದಕ್ಕೆ ಅನುಕೂಲವಾಗಿ ಹಿಟ್ಟನ್ನು ಕಲಿಸುವುದು ಉಂಡೆಮಾಡುವುದು ಮುಂತಾದ ಕ್ರಿಯೆಗಳು ಈ ನಾಲ್ಕು, ಐದನೆಯದಾಗಿ ಅದೃಷ್ಟ ನಿಯಾಮಕನಾದ ಪರಮಾತ್ಮ ಇವೆಲ್ಲವೂ ಕರ್ಮವು ನಿಷ್ಪನ್ನವಾಗುವುದಕ್ಕೆ ಕಾರಣಗಳು. ಇವುಗಳಲ್ಲಿ ಪರಮಾತ್ಮನೇ ಮುಖ್ಯಕರ್ತನು. ಉಳಿದವೆಲ್ಲವೂ ಅವನ ಅಧೀನವೆಂಬುದನ್ನು ಸೂಚಿಸುವುದಕ್ಕಾಗಿ ದೈವವು ಐದನೆಯ ಕಾರಣವೆಂದು ಕೊನೆಯಲ್ಲಿ ಹೇಳಿದೆಯೆಂದು ಭಾವ.

**ಶರೀರವಾಙ್ಮನೋಭಿರ್ಯತ್ಕಾರ್ಯ ಪ್ರಾರಭತೇ ನರಃ**

**ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ॥18-15॥**

**ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ**

**ಪಶ್ಯತ್ಯಕೃತಬುದ್ಧಿತ್ವಾನ್ನಸ ಪಶ್ಯತಿ ದುರ್ಮತಿಃ॥18-16॥**

**15-16.** ವಿಹಿತ ಅಥವಾ ನಿರ್ದಿಷ್ಟವಾದ ಯಾವುದೇ ಕರ್ಮವನ್ನು ಮನುಷ್ಯನು ಶರೀರ, ವಾಕ್, ಮನಸ್ಸುಗಳಿಂದ ಮಾಡಬೇಕಾದರೂ ಆ ಕರ್ಮಗಳಿಗೆಲ್ಲಾ ಮೇಲೆ ಹೇಳಿದ ಅಧಿಷ್ಠಾನಾದಿ ಪಂಚಕವೂ ಕಾರಣವು. ಹೀಗೆ ಪ್ರತಿಯೊಂದು ಕರ್ಮಕ್ಕೂ, ಈಶ್ವರನು ಪ್ರಧಾನಕರ್ತನು ಉಳಿದ

ನಾಲ್ಕು ಆವನ ಅಧೀನವಾದ ಕಾರಣಗಳೂ ಆಗಿರುವಾಗ ಪರಮಾತ್ಮನ ಪ್ರೇರಣೆಯಲ್ಲದೆ ಚಲಿಸುವುದಕ್ಕೂ ಸಮರ್ಥನಲ್ಲದ ತನ್ನನ್ನು ಯಾವ ಮನುಷ್ಯನು ಸ್ವತಂತ್ರಕರ್ತನೆಂದು ತಿಳಿಯುವನೋ ಅವನು ಶ್ರವಣಾದಿ ಸಂಸ್ಕಾರಗಳಿಂದ ಸಮೀಚೀನ ಜ್ಞಾನವನ್ನು ಹೊಂದಿಲ್ಲವಾದ ಕಾರಣ ವಿಪರೀತಜ್ಞಾನಿಯೇ ಸರಿ. ಅಂತಹವನು ತತ್ವಜ್ಞಾನಿಯಾಗಿ ಪರಮಾತ್ಮನ ದರ್ಶನವನ್ನು ಪಡೆಯಲಾರನು.

**ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ**
**ಹತ್ವಾಪಿ ಸ ಇಮಾನ್ಲೋಕಾನ್ನ ಹಂತಿ ನ ನಿಬಧ್ಯತೇ॥18-17॥**

17. ಇದುವರೆಗೆ ತಾನೇ ಸ್ವತಂತ್ರ ಕರ್ತನೆಂಬ ಅಭಿಮಾನವುಳ್ಳವನನ್ನು ನಿಂದಿಸಿದ್ದಾಯಿತು. ಈಗ ಅಂತಹ ಅಭಿಮಾನವಿಲ್ಲದವನನ್ನು ಸ್ತೋತ್ರಮಾಡುತ್ತಾನೆ:- ಯಾವನಿಗೆ ತಾನೇ ಸ್ವತಂತ್ರ ಕರ್ತನೆಂಬ ಅಭಿಮಾನವಿಲ್ಲವೋ, ಯಾವಾತನ ಬುದ್ಧಿಯು ಕರ್ಮಫಲಾಶೆಯಿಂದ ವಿಕಾರವಾಗುವುದಿಲ್ಲವೋ (ಫಲವನ್ನಪೇಕ್ಷಿಸುವುದಿಲ್ಲವೋ ಅಂತಹ ಕರ್ತೃತ್ವಾಭಿಮಾನ-ಫಲಾಪೇಕ್ಷ ತ್ಯಾಗಪೂರ್ವಕವಾಗಿ ವಿಹಿತ ಕರ್ಮ ಮಾಡುವವನು ಈ ಪ್ರಾಣಿಗಳನ್ನೆಲ್ಲಾ ಸಂಹರಿಸಿದರೂ ಹನನದೋಷಕ್ಕೆ ಭಾಗಿಯಾಗುವುದಿಲ್ಲ. ಏಕೆಂದರೆ:- ಅವನು "ನಾನು ಸ್ವತಂತ್ರವಾಗಿ ಕೊಲ್ಲುವೆನು" ಎಂಬ ಅಭಿಮಾನ ಮಾಡುವುದಿಲ್ಲ. ಆದುದರಿಂದಲೇ ಅದರ ಫಲವಾದ ಬಂಧಕ್ಕೆ ಸಿಕ್ಕುವುದಿಲ್ಲ. ಈ ರೀತಿ ಲೋಕಸಂಹಾರಕನಿಗೆ, ಪಾಪವಿಲ್ಲವೆಂಬುದು ಸಾಮಾನ್ಯ ಜನರಿಗೆ ಅನ್ವಯಿಸತಕ್ಕುದಲ್ಲ. ಭಗವಂತನ ಸಾರ್ವಜ್ಞ, ಸ್ವಾತಂತ್ರ್ಯಾದಿ ಮಹಾತ್ಮ್ಯಯನ್ನು ತಿಳಿದವರಾದರೂ - ರುದ್ರದೇವರು ಲೋಕಸಂಹಾರಾರ್ಥವಾಗಿ ಜಾತರಾಗಿ ಲೋಕನಾಶಮಾಡುವರು. ಅವರು ತನ್ನ ಸಾಮರ್ಥ್ಯವನ್ನು ತಿಳಿದು ಭಗವಂತನ ಆಜ್ಞಾ ಪ್ರಕಾರ ಕಾರ್ಯ ಮಾಡತಕ್ಕವರಾದುದರಿಂದ ಅಂತಹವರಿಗೆ ದೋಷವಿಲ್ಲವೆಂಬ ಅಭಿಪ್ರಾಯದಿಂದ ಹೇಳಿರುವಮಾತೆಂದು ತಿಳಿಯಬೇಕು. ಅಪರೋಕ್ಷಜ್ಞಾನಿಯಾದರೂ ಇಂದ್ರನು ಸ್ವಲ್ಪ ಮಟ್ಟಿನ ಅಹಂಕಾರದಿಂದ ವೃತ್ರಾಸುರ ಸಂಹಾರಮಾಡಿ ಅದರಿಂದ ದೋಷಭಾಗಿಯಾದುದು ಪ್ರಸಿದ್ಧವಾಗಿದೆಯಾದಕಾರಣ ಇಲ್ಲಿ ಹೇಳಿರುವುದು ಜ್ಞಾನಿಸಾಮಾನ್ಯ ವಿಷಯವಲ್ಲ; ರುದ್ರ ಅಥವಾ ಯಮ ಇವರ ವಿಷಯ ಎಂದು ತಿಳಿಯಬೇಕು. ಇದರಿಂದ ಕರ್ತೃತ್ವಾಭಿಮಾನತ್ಯಾಗವೂ ಸಹ ಸಂನ್ಯಾಸ ಶಬ್ದಾರ್ಥವೆಂದು ಹೇಳಿದಂತಾಯಿತು.

**ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ**

**ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ॥18-18॥**

18.ಜೀವನು ಸ್ವತಂತ್ರಕರ್ತನಲ್ಲವೆಂಬುದು ಸರಿಯಲ್ಲ ಅವನು ಕರ್ತೃವೇ ಅಲ್ಲವೆಂದಮೇಲೆ ಕರ್ಮವಿಧಿಬದ್ಧನೂ ಆಗಲಾರನು. 'ಯಜೇತ ಸ್ವರ್ಗಕಾಮಃ" ಇತ್ಯಾದಿ ವಿಧಿಗಳಾದರೋ ಹೇರಳವಾಗಿವೆ. ಜೀವನಿಗೆ ಕರ್ತೃತ್ವವಿಲ್ಲದಿರುವುದರಿಂದ ಈ ವಿಧಿಗಳು ಅವನಿಗೆ ಅನ್ವಯಿಸುವುದಿಲ್ಲ. ಜಡಪದಾರ್ಥಗಳಿಗೆ ಜ್ಞಾನವೇ ಇಲ್ಲವಾದ ಕಾರಣ ಅವೂ ವಿಧಿವಿಷಯವಲ್ಲ; ಮುಕ್ತರು ಮತ್ತು ಈಶ್ವರನು ವಿಧಿಬಂಧರಹಿತರು. ಹೀಗೆ ಮೇಲ್ಕಂಡ ವಿಧಿಗೆ ಅಧಿಕಾರಿಯೇ ಇಲ್ಲವಾದುದರಿಂದ ವಿಧಿ ನಿಷೇಧಶಾಸ್ತ್ರವು ವ್ಯರ್ಥವಾಗಬೇಕಾಗುತ್ತದೆಯೆಂದು ಶಂಕಿಸಿದರೆ ಭಗವಂತನು ಹೇಳುತ್ತಾನೆ:- ಜೀವನು ಈಶ್ವರಾಧೀನಕರ್ತೃತ್ವವುಳ್ಳವನಾದ ಕಾರಣ ಅವನೇ ವಿಧಿವಿಷಯನಾಗುವನು. ಲೋಕದಲ್ಲಿಯೂ ಸಹ ರಾಜಾಧೀನಕರ್ತೃಗಳಾದ ಸೇವಕ ಮುಂತಾದವರೇ ವಿಧಿಬದ್ಧರು, ವಿಹಿತ ಕರ್ಮಫಲಭಾಗಿಗಳೂ ಆಗುತ್ತಿರುವುದು ಅನುಭವಸಿದ್ಧವಾಗಿದೆ. ಕರ್ಮಚೋದನಾ=ಕರ್ಮವಿಧಿಯು ಜ್ಞಾನ, ಜ್ಞೇಯ, ಪರಿಜ್ಞಾತಾ ಎಂಬ ಮೂರು ಬಗೆಯ ವಸ್ತುಗಳನ್ನು ನಿಮಿತ್ತ ಮಾಡಿಕೊಂಡು ಪ್ರವರ್ತಿಸುತ್ತದೆ. ವಿಧಿವಿಷಯ ಕರ್ಮಾದಿಜ್ಞಾನವು ಒಂದು ನಿಮಿತ್ತ, ಆ ಜ್ಞಾನವನ್ನು ಹೊಂದುವ (ಪರಿಜ್ಞಾತಾ) ಅಸ್ವತಂತ್ರ ಕರ್ತನಾದ ಜೀವನು ಇನ್ನೊಂದು ನಿಮಿತ್ತ ಆ ಜೀವನ ಇಚ್ಛಾ ಪ್ರಯತ್ನಾದಿಗಳು ಮತ್ತೊಂದು ನಿಮಿತ್ತ. ಈ ಮೂರನ್ನೂ ಲಕ್ಷದಲ್ಲಿಟ್ಟು "ಯಜೇತ"=ಯಜ್ಞ ಮಾಡು ಮುಂತಾದ ಕರ್ಮವಿಧಿಗಳು ಪ್ರವೃತ್ತವಾಗಿವೆ. ಎಂದರೆ ಸ್ವತಂತ್ರನಾದ ಈಶ್ವರನು ಜೀವನಿಗೆ ವಿಧಿಜ್ಞಾನವನ್ನು ಹುಟ್ಟಿಸಿ, ಕರ್ಮ-ಅದರ ಫಲಗಳಲ್ಲಿ ಇಚ್ಛೆ ಪ್ರಯತ್ನಗಳುಂಟಾಗುವಂತೆ ಮಾಡಿ, ಅಧಿಷ್ಠಾನಾದಿ ಉಕ್ತ ಪಂಚಕಾರಣಗಳನ್ನೂ ಒದಗಿಸಿಕೊಟ್ಟು ಅವನಿಂದ ಕರ್ಮ ಮಾಡಿಸಿ ಫಲ ಕೊಡುವನು. ಈರೀತಿಯಾಗಿ ಈಶ್ವರಾನುಗ್ರಹದಿಂದ ಜೀವನು ಸ್ವತಂತ್ರನಲ್ಲದಿದ್ದರೂ ವಿಧಿಯಿಂದ ಪ್ರಯೋಜನ ಪಡೆಯುವನಾದ ಕಾರಣ "ಯಜೇತ" ಇತ್ಯಾದಿ ವಿಧಿಗಳು ಸಾರ್ಥಕವಾಗುವುವು. ಅಂದಬಳಿಕ ಅಸ್ವತಂತ್ರರಾದ ಜೀವರೇ ವಿಧಿವಿಷಯರು, ಪರಾಧೀನತೆಯ ಚಿನ್ಹಯೇ ವಿಧಿಬಂಧವು. ಸ್ವತಂತ್ರಕರ್ತನು ಎಂದಿಗೂ ವಿಧಿಬದ್ಧನಾಗುವುದಿಲ್ಲ. ಆದಕಾರಣ ವಿಧಿಜ್ಞಾನ, ಕರ್ಮ, ಅದರ ಫಲಗಳ ಇಚ್ಛೆ, ಪ್ರಯತ್ನ, ಅಧಿಷ್ಠಾನಾದಿ ಸಂನ್ನಿಧಾನ, ಕರ್ಮಫಲಸಂಬಂಧ ಇವುಗಳನ್ನು ಹೊಂದುವ ಯೋಗ್ಯತೆಯೇ ವಿಧಿವಿಷಯವಾಗುವುದಕ್ಕೆ ಕಾರಣವು. ಇವೆಲ್ಲವೂ

ಪರಮಾತ್ಮಾಧೀನವಾಗಿ ಜೀವನಲ್ಲಿ ಪುಷ್ಕಲವಾಗಿವೆಯಾದ ಕಾರಣ ಅವನನ್ನು ಕುರಿತು ವಿಧಿನಿಷೇಧಶಾಸ್ತ್ರವು ಸಾರ್ಥಕವೇ ಸರಿಯೆಂದು ಭಾವ. ಕೆಲವೆಡೆಗಳಲ್ಲಿ ಕರ್ಮಕಾರಣವು ಮೂರೆಂದು ಹೇಳಿರುವರು. ಹಿಂದೆ ಐದು ಕಾರಣಗಳೆಂದು ಹೇಳಿದೆ. ಇದು ಹೇಗೆ ಯುಕ್ತವು? ಎಂದರೆ ಕರಣ, ಕರ್ಮ=ಚೇಷ್ಟಾ, ಕರ್ತಾ ಎಂದು ಮೂರು ಕರ್ಮ ಕಾರಣಗಳೆಂದು ಹೇಳುವುದು ಸಂಗ್ರಹೋಕ್ತಿಯು. ಐದು ಕಾರಣವೆಂಬುದು ವಿಸ್ತಾರೋಕ್ತಿಯು. ಸಂಗ್ರಹಿಸುವಾಗ ಅಧಿಷ್ಠಾನ ಮತ್ತು ಅದೃಷ್ಟವನ್ನು ಕರಣದಲ್ಲಿಯೂ, ದೈವಪದೋಕ್ತನಾದ ಈಶ್ವರನನ್ನು ಕರ್ತೃವಿನಲ್ಲಿಯೂ ಸೇರಿಸಿ ಹೇಳಿದೆಯೆಂದು ತಿಳಿಯಬೇಕು. ಹೀಗೆ ಸಂಗ್ರಹವಿಸ್ತಾರವಚನಗಳಾದ ಕಾರಣ ಎರಡೂ ಯುಕ್ತವೆಂದೂ ಒಂದೇ ಅಭಿಪ್ರಾಯದಿಂದ ಪ್ರವರ್ತಿಸಿವೆಯೆಂದೂ ಭಾವ.

**ಜ್ಞಾನಂ ಕರ್ಮ ಚ ಕರ್ತಾ ಚ ತ್ರಿದೈವ ಗುಣಭೇದತಃ**

**ಪ್ರೋಚ್ಯತೇ ಗುಣಸಂಖ್ಯಾನೇ ಯಥಾವಚ್ಛೃಣು ತಾನ್ಯಪಿ॥18-19॥**

**19.** ಮುಕ್ತಿಸಾಧನವಾದ ಸಾತ್ವಿಕಜ್ಞಾನಕರ್ಮಾದಿಗಳನ್ನೇ ಅನುಷ್ಠಾನ ಮಾಡುವುದಕ್ಕಾಗಿ ಸಾತ್ವಿಕಜ್ಞಾನಾದಿಗಳನ್ನು ವಿವೇಚನೆಮಾಡಿ ತಿಳಿಸಲು ಪ್ರತಿಜ್ಞೆ ಮಾಡುತ್ತಾನೆ:- ಜ್ಞಾನ, ಕರ್ಮ, ಕರ್ತೃ ಈ ಒಂದೊಂದೂ ಕಾರಣವಾದ ಸತ್ಯ ರಜಸ್ತಮೋಗುಣಗಳ ವ್ಯತ್ಯಾಸದಿಂದ ಮೂರು ಪ್ರಕಾರವುಳ್ಳದು. ಹೇಗೆಂದರೆ, ಸಾತ್ವಿಕಜ್ಞಾನ-ರಾಜಸಜ್ಞಾನ-ತಾಮಸಜ್ಞಾನ, ಸಾತ್ವಿಕಕರ್ಮ-ರಾಜಸಕರ್ಮ-ತಾಮಸ ಕರ್ಮ, ಸಾತ್ವಿಕರ್ತಾ-ರಾಜಸಕರ್ತಾ-ತಾಮಸಕರ್ತಾ ಎಂದು ಪ್ರತ್ಯೇಕವಾಗಿ ತ್ರಿವಿಧ ಎಂದು ಸತ್ಯಾದಿಗುಣ ಪರಿಣಾಮಾದಿ ವಿಚಾರಪರವಾದ ವೈದಿಕಸಾಂಖ್ಯಶಾಸ್ತ್ರದಲ್ಲಿ ಉಕ್ತವಾಗಿದೆ. ಅವುಗಳನ್ನೂ ಯಥಾಸ್ಥಿತವಾಗಿ ಹೇಳುವೆನು ಕೇಳು. ಕೇಳಿ ಅದರಲ್ಲಿ ವಿಶ್ವಾಸವಿಟ್ಟು ಸಾತ್ವಿಕಾನುಷ್ಠಾನಕ್ಕೆ ಪ್ರಯತ್ನಿಸೆಂದು ಭಾವ.

**ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ**

**ಅವಿಭಕ್ತಂ ವಿಭಕ್ತೇಷು ತಜ್ಞಾನಂ ವಿದ್ಧಿ ಸಾತ್ವಿಕಂ॥18-20॥**

**20.** ಪರಸ್ಪರಭಿನ್ನನಾದ ಚೇತನ ಮತ್ತು ಜಡವಸ್ತುಗಳಲ್ಲೆಲ್ಲಾ ಇರುವವನಾದರೂ ಆಶ್ರಯಸ್ಥಾನಭೇದದಿಂದ ಭೇದರಹಿತನು=ಒಬ್ಬನೇ ತನ್ನ ಸಾಮರ್ಥ್ಯ ವಿಶೇಷದಿಂದ ಎಲ್ಲಾ ಕಡೆಯಲ್ಲಿಯೂ ಇರುವವನು, ಪ್ರಧಾನನು (ಸರ್ವೋತ್ತಮನು) ಸ್ವಾಭಾವಿಕವಾಗಿ ಅಥವಾ ತಾನಿರುವ ಸ್ಥಾನನಾಶದಿಂದಾಗಲೀ ನಾಶವಿಲ್ಲದವನು ನಾರಾಯಣನೆಂಬ ಪರಬ್ರಹ್ಮನು ಎಂಬುದಾಗಿ ಯಾವ ಜ್ಞಾನದಿಂದ ತಿಳಿಯವನೋ, ಆ ಜ್ಞಾನವೂ ಅದಕ್ಕೆ ಸಾಧನವಾದ

ವೇದಾದಿಶಾಸ್ತ್ರವೂ ಸಹ ಸಾತ್ವಿಕವೆಂದು ತಿಳಿಯುವವನಾಗು. (ವಿಶೇಷ:- ಇಲ್ಲಿ ವಿಭಕ್ತೇಷು= ಪರಸ್ಪರಭಿನ್ನವಾದ ಎಂದು ಹೇಳಿರುವುದರಿಂದ ಜೀವರಿಗೂ-ಜಡಗಳಿಗೂ ಭೇದವೂ, ಜೀವರಲ್ಲಿ ಪರಸ್ಪರ ಭೇದವೂ, ಜಡಗಳಲ್ಲಿ ಪರಸ್ಪರ ಭೇದವೂ ಉಕ್ತವಾಗಿದೆ. ಇವುಗಳಲ್ಲಿರುವವನು ಎಂಬುದಾಗಿ ಹೇಳಿರುವುದರಿಂದ, ಇರುವವನಾದ ಈಶ್ವರನಿಗೂ-ಆಶ್ರಯಗಳಾದ ಜೀವಜಡರಿಗೂ ಭೇದವಿರಲೇಬೇಕಾದುದರಿಂದ ಜೀವೇಶ್ವರಭೇದ, ಜಡೇಶ್ವರಭೇದಗಳೆರಡನ್ನೂ ಹೇಳಿದಂತಾಯಿತು. "ವಿಭಕ್ತೇಷು" ಎಂಬುದರಿಂದ ಜೀವಜಡವಸ್ತುಗಳಲ್ಲಿ ನೀಚೋಚ್ಚತ್ವಜ್ಞಾಪಕ ಧರ್ಮಗಳುಂಟೆಂದು ಹೇಳಿರುವ ಕಾರಣ ಜೀವಜಡರಲ್ಲಿ ತಾರತಮ್ಯವೂ, 'ಏಕಂ' ಎಂಬುದರಿಂದ ಜೀವೇಶ್ವರರಿಗೆ ತಾರತಮ್ಯವೂ ಉಕ್ತವಾಗಿದೆ. ಒಟ್ಟಿನಲ್ಲಿ ಉಕ್ತ ಪಂಚಭೇದತಾರತಮ್ಯಜ್ಞಾನವು ಸಾತ್ವಿಕವೆಂದು ತಾತ್ಪರ್ಯ.)

**ಪೃಥಕ್ತ್ವೇನ ತು ಯಜ್ಞಾನಂ ನಾನಾಭಾವಾನ್ ಪೃಥಗ್ವಿಧಾನ್**
**ವೇತ್ತಿ ಸರ್ವೇಷು ಭೂತೇಷು ತಜ್ಞಾನಂ ವಿದ್ಧಿ ರಾಜಸಂ॥18-21॥**

21. ಯಾವ ಜ್ಞಾನವು ಸಕಲ ಜೀವಜಡಗಳಲ್ಲಿಯೂ ಪರಸ್ಪರ ಭೇದವುಂಟೆಂದು ಗ್ರಹಿಸುವುದೋ ಎಂದರೆ ಜೀವಜಡಾತ್ಮಕ ಪದಾರ್ಥಗಳು ಪರಮಾತ್ಮನಿಂದಲೂ, ಪರಸ್ಪರವಾಗಿಯೂ ಭಿನ್ನಗಳು ಮತ್ತು ತಾರತಮ್ಯವುಳ್ಳದಾಗಿಯೂ ಇರುವುವೆಂದು ಈಶ್ವರಭಿನ್ನವಾದ ಪ್ರಪಂಚವಿಷಯದಲ್ಲಿ ಯಥಾವತ್ತಾಗಿ ಗ್ರಹಿಸಿ, ಈಶ್ವರನ ವಿಷಯದಲ್ಲಿ ಮಾತ್ರ ಸ್ವಾತಂತ್ರ್ಯ ಒಬ್ಬನೇ ನಾನಾರೂಪಗಳನ್ನು ಧರಿಸಿರುವುದು ಇತ್ಯಾದಿ ಅವನ ಸರ್ವೋತ್ಕೃಷ್ಟಸ್ವರೂಪವನ್ನು ಯಥಾವತ್ತಾಗಿ ಗ್ರಹಿಸದೆ ಸಂಶಯರೂಪವಾಗಿರುವುದೋ ಅಂತಹ ಜ್ಞಾನವನ್ನು ರಾಜಸವೆಂದು ತಿಳಿ.

**ಯತ್ತು ಕೃತ್ಸ್ನವದೇಕಸ್ಮಿನ್ ಕಾರ್ಯೇ ಸಕ್ತಮಹೈತುಕಂ**
**ಅತತ್ವಾರ್ಥವದಲ್ಪಂ ಚ ತತ್ತಾಮಸಮುದಾಹೃತಂ॥18-22॥**

22. ಬ್ರಹ್ಮನು ಹೇಗೆ1 "ನಾನೇ ಬ್ರಹ್ಮನು" ಎಂದು ತನ್ನನ್ನು ತಿಳಿಯುವನೋ ಹಾಗೆಯೇ ಯಾವ ಜ್ಞಾನವು2 ಜೀವನನ್ನೇ ಬ್ರಹ್ಮಸ್ವರೂಪನೆಂದು ವಿಷಯೀಕರಿಸುವುದೋ ಮತ್ತು 'ಇದು ಪ್ರಪಂಚವು" ಎಂಬ ಜ್ಞಾನವು ಜಗತ್ತನ್ನು ಗ್ರಹಿಸುವಂತೆ ಒಬ್ಬ ಜೀವನನ್ನೇ ಜಗದಾತ್ಮಕವಂದು (ಜಗತ್ತು ಏಕದೇವ ಕಲ್ಪಿತವೆಂದು) ಯಾವ ಜ್ಞಾನವು ವಿಷಯೀಕರಿಸುವುದೋ, ಯಾವುದು ಯುಕ್ತಿಸಿದ್ಧವಾಗದೆ ಯುಕ್ತಿ ವಿರುದ್ಧವೇ ಆಗಿರುವುದೋ, ಅಸತ್ಯ ವಿಷಯಕವೋ, ಅಜ್ಞಾನಾಂಶವೇ ಹೆಚ್ಚಾಗಿರುವುದರಿಂದ

ಅಲ್ಪತಾ ಸಂಪಾದಕವಾಗಿ ಅನರ್ಥಕಾರಕವೋ ಅಂತಹ ಜ್ಞಾನವು ತಾಮಸಜ್ಞಾನವೆಂದು ಉಕ್ತವಾಗಿದೆ.

1. ತದಾತ್ಮಾನಮೇವಾವೈದಹಂ ಬ್ರಹ್ಮಾಸ್ಮೀತಿ' ಶ್ರುತಿ :-ಬೃ. 3.4.10

2. ಬದ್ಧ ಜೀವನು ಮುಕ್ತನಾಗಿ ಮಾಡಲ್ಪಡುವಕಾರಣ ಕಾರ್ಯವೆಂದರೆ ಜೀವನು. ಪೂರ್ಣಾರ್ಥಕವಾದ ಕೃತ್ಸ್ನ ಶಬ್ದಕ್ಕೆ ಬ್ರಹ್ಮ , ಜಗತ್ತು ಎಂದರ್ಥ.

ನಿಯತಂ ಸಂಗರಹಿತಮರಾಗದ್ವೇಷತಃ ಕೃತಂ
ಅಫಲಪ್ರೇಪ್ಸುನಾ ಕರ್ಮ ಯಾತ್ತತ್ಸಾತ್ತ್ವಿಕಮುಚ್ಯತೇ ॥18-23॥

23. ಶ್ರೀ ಹರಿಯು ಸರ್ವೋತ್ತಮನೆಂದು ತಿಳಿದು ಅವನಲ್ಲಿ ಭಕ್ತಿಯಿಂದ ಅವನಿಗೇ ಅರ್ಪಿತವಾಗಲೆಂಬ ಅನುಸಂಧಾನಪೂರ್ವಕವಾಗಿ ಆಚರಿಸಲ್ಪಟ್ಟ ವರ್ಣಾಶ್ರಮವಿಹಿತ ಕರ್ಮವೇ[3] ನಿಯತ ಕರ್ಮವೆನಿಸುವುದು. ನನ್ನದೆಂಬ ಅಭಿಮಾನವನ್ನು ಬಿಟ್ಟು, ಕೀರ್ತ್ಯಾದಿಗಳ ಆಶೆ. ಅಪಕೀರ್ತ್ಯಾದಿಗಳಲ್ಲಿ ದ್ವೇಷ ಇವುಗಳನ್ನೂ ತ್ಯಾಗ ಮಾಡಿ, ಫಲಾಶೆಯಿಲ್ಲದವನಿಂದ ಕೃತವಾದ ಅಂತಹ ನಿಯತ ಕರ್ಮವು ಸಾತ್ತ್ವಿಕವೆಂದು ಉಕ್ತವಾಗಿದೆ.

ಯತ್ತು ಕಾಮೇಪ್ಸುನಾ ಕರ್ಮ ಸಾಹಂಕಾರೇಣ ವಾ ಪುನಃ
ಕ್ರಿಯತೇ ಬಹುಲಾಯಾಸಂ ತದ್ರಾಜಸಮುದಾಹೃತಂ॥18-24॥

24. ಫಲವನ್ನು ಪಡೆಯಬೇಕೆಂಬ ಅಪೇಕ್ಷೆಯಿಂದಲೂ, "ನಾನೇ ಸ್ವತಃ ಕರ್ಮನಾಡುತ್ತೇನೆ" ಎಂಬ ಕರ್ತೃತ್ವಾಭಿಮಾನದಿಂದಲೂ ಸಹ ಬಹು ಕಷ್ಟಪಟ್ಟು ಯಾವ ಕರ್ಮವು ಆಚರಿಸಲ್ಪಡುವುದೋ ಅದು ರಾಜಸಕರ್ಮವೆನಿಸುವುದು.

3 'ಮಯಿ ಸರ್ವಾಣಿ' ಇತ್ಯಾದೌ ಭಗವತ್ಸರ್ವೋತ್ತಮತ್ವಜ್ಞಾನತದ್ಭಕ್ತಿಪೂರ್ವಕಂ ತದರ್ಪಣಬುದ್ಧ್ಯಾ ಕರ್ಮಕರಣಸ್ಯ ವಿಧಾನಾತ್. 'ಯೇ ಮೇ ಮತಂ' ಇತ್ಯಾದೌ ತಸ್ಯೈವ ಮುಕ್ತಿ ಹೇತುತ್ವೋಕ್ತೇ: ಯತ್ಕರಣೇ ಫಲಪ್ರಾಪ್ತಿಃ, ಯದಕರಣೇ ಚ ಪ್ರತ್ಯವಾಯಃ ತಸ್ಯೈವ ನಿಯತತ್ವಾತ್

ಅನುಬಂಧಂ ಕ್ಷಯಂ ಹಿಂಸಾಮನವೇಕ್ಷ ಚ ಪೌರುಷಂ
ಮೋಹಾದಾರಭ್ಯತೇ ಕರ್ಮಯತ್ತತ್ತಾಮಸಮುಚ್ಯತೇ॥18-25॥

25. ಕರ್ಮವನ್ನಾಚರಿಸುವುದರಿಂದಾಗುವ ಅನರ್ಥವನ್ನು, ಕರ್ಮಮಾಡುವಾಗ ಅನಂತರವೂ ಆಗುವ ಧನಕ್ಷಯ-ಬಲಕ್ಷಯ-ಆಯುಷ್ಯಕ್ಷಯ ಮತ್ತು ಪುಣ್ಯಕ್ಷಯಗಳನ್ನು, ಕರ್ಮದಿಂದ ಇತರರಿಗಾಗುವ ಹಿಂಸೆಯನ್ನು, ಪ್ರಕೃತ ಕಾರ್ಯವನ್ನು ಮಾಡುವುದಕ್ಕೆ ಸಾಕಾಗದಿರುವ ತನ್ನ ಸಾಮರ್ಥ್ಯವನ್ನೂ ಗಮನಿಸದೆ "ನನಗೆ ಇದು ಸಾಧ್ಯವು; ಇದರಿಂದ ನಾನು ಸುಖಹೊಂದುವೆನಾಗಿ ಈ ಕರ್ಮವನ್ನು ಮಾಡುವೆನು" ಎಂಬ ಭ್ರಾಂತಿಯಿಂದ ಯಾವ ಕರ್ಮವು ಪ್ರಾರಂಭಿಸಲ್ಪಡುತ್ತದೆಯೋ ಅದು ತಾಮಸಕರ್ಮವೆಂದು ನಿರ್ಣಯಿಸಲ್ಪಟ್ಟಿದೆ.

| |
|---|
| ಮುಕ್ತಸಂಗೋನಹಂವಾದೀ ಧೃತ್ಯುತ್ಸಾಹಸಮನ್ವಿತಃ<br>ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ವಿಕ ಉಚ್ಯತೇ॥18-26॥ |
| 26. ಅಹಂಕಾರ ಮಮಕಾರ ಫಲಾಪೇಕ್ಷಾರಹಿತನು, "ನಾನೇ ಕರ್ತನು" ಎಂದು ಹೇಳದಿರುವವನು ಅವರ್ಜನೀಯ ದುಃಖಸಹನೆ ಮತ್ತು ಆರಂಭಿಸಿದ ಕರ್ಮವು ಹೇಗೆ ಮುಗಿದೀತೆಂಬ ಕುತೂಹಲಗಳಿಂದ ಯುಕ್ತನು, ಫಲವು ಸಿದ್ಧಿಸಿದರೆ ಹರ್ಷಸಿದ್ಧಿಸದಿದ್ದರೆ ವಿಷಾದ ಇವುಗಳಿಲ್ಲದಿರುವವನೂ ಆಗಿ ಕರ್ಮವನ್ನಾಚರಿಸುವವನು ಸಾತ್ವಿಕಕರ್ತನೆನಿಸುವನು. |
| ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋಽಶುಚಿಃ<br>ಹರ್ಷಶೋಕಾನ್ವಿತಃ ಕರ್ತಾ ರಾಜಸಃ ಪರಿಕೀರ್ತಿತಃ॥18-27॥ |
| 27. ಕೀರ್ತ್ಯಾದಿಗಳ ಅಪೇಕ್ಷೆ ಮತ್ತು ಕರ್ಮಫಲಾಪೇಕ್ಷೆಗಳುಳ್ಳವನು, ಆವಶ್ಯಕ ದ್ರವ್ಯವ್ಯಯಮಾಡದಿರುವಂತಹ ಲೋಭಯುಕ್ತನು, ಇತರರನ್ನು ಹಿಂಸಿಸುವ ಸ್ವಭಾವದವನು ಬಾಹ್ಯಾಭ್ಯಂತರ ಶುದ್ಧಿರಹಿತನು, ಕಾರ್ಯ ಸಿದ್ಧಿಯಾದರೆ ಸಂತೋಷ-ಸಿದ್ಧಿಯಾಗದಿದ್ದರೆ ಶೋಕ ಇವುಗಳನ್ನು ಹೊಂದುವವನೂ ಆಗಿ ಕರ್ಮ ಮಾಡುವವನು ರಾಜಸಕರ್ತನೆಂದುಕ್ತನಾಗಿರುವನು. |
| ಅಯುಕ್ತಃ ಪ್ರಾಕೃತಃ ಸ್ತಬ್ಧಃ ಶಠೋನೈಷ್ಕೃತಿಕೋಽಲಸಃ<br>ವಿಷಾದೀ ದೀರ್ಘಸೂತ್ರೀ ಚ ಕರ್ತಾ ತಾಮಸ ಉಚ್ಯತೇ॥18-28॥ |
| 28. ಭಗವದರ್ಪಣಾದಿ ಕರ್ಮಫಲಸಿದ್ಧ್ಯುಪಾಯಗಳನ್ನು ಆಚರಿಸದಿರುವವನು, ಭಗವದ್ಭಕ್ತ್ಯಾದಿ ಗುಣರಹಿತನಾದುದರಿಂದ ಅಲ್ಪನು, ತಾನೇ ದೊಡ್ಡವನೆಂಬ ದುರಹಂಕಾರದಿಂದ ಗುರುಹಿರಿಯರಲ್ಲಿ ವಿನಯವಾಗಿ ನಡೆದುಕೊಳ್ಳದಿರುವವನು, ಗೂಢದ್ವೇಷದಿಂದ ಕರ್ಮಮಾಡುವವನು, ನೀಚಕರ್ಮನಿರತನು; ಕರ್ಮಕರಣಕಾಲದಲ್ಲಿಯೂ ಉದಾಸೀನನು, ಯಾವ ಕೆಲಸವನ್ನೂ ಮಾಡದಿರುವಂತಹ ಮನೋ ದೌರ್ಬಲ್ಯವುಳ್ಳವನು, ಇತರರಿಂದ ಕೃತವಾದ ತಪ್ಪು ಕೆಲಸಗಳನ್ನು ಬಹುಕಾಲಾನಂತರ ಹೇಳಿ ಅವರನ್ನು ತೆಗಳುವವನೂ ಆಗಿ ಕರ್ಮಮಾಡುವವನು ತಾಮಸ ಕರ್ತನು. |
| ಬುದ್ಧೇರ್ಭೇದಂ ಧೃತೇಶ್ಚೈವ ಗುಣತಸ್ತ್ರಿವಿಧಂ ಶೃಣು<br>ಪ್ರೋಚ್ಯಮಾನಮಶೇಷೇಣ ಪೃಥಕ್ತ್ವೇನ ಧನಂಜಯ॥18-29॥ |

29. ಈಗ ಜ್ಞಾನಕರ್ಮಕರ್ತೃಗಳು ಸಾತ್ವಿಕರೆನಿಸಲು ಅಥವಾ ರಾಜಸ ತಾಮಸರೆನಿಸಲು ಕಾರಣವಾದ ಬುದ್ಧಿ-ಧೈರ್ಯಗಳ ಸಾತ್ವಿಕಾದಿ ವಿಭಾಗವನ್ನು ಪ್ರತಿಜ್ಞಾ ಪೂರ್ವಕವಾಗಿ ನಿರೂಪಿಸುತ್ತಾನೆ:- 1ಧನಂಜಯನಾಮಕನಾದ ಅರ್ಜುನ! ಸತ್ವಾದಿ ಆಯಾ ಗುಣಗಳ ಪ್ರಾಚುರ್ಯದಿಂದ ಬುದ್ಧಿಧೃತಿಗಳ ಸಾತ್ವಿಕಾದಿ ಮೂರು ಪ್ರಕಾರಗಳನ್ನು ಸಂಪೂರ್ಣವಾಗಿ ಬೇರೆಬೇರೆ ವಿವರಿಸುವೆನು. ಅದನ್ನು ಸಂಪೂರ್ಣವಾಗಿ ಕೇಳಿ ಹೇಯೋಪಾದೇಯ ವಿವೇಚನಪೂರ್ವಕವಾಗಿ ತಿಳಿಯುವವನಾಗು.

1. ರಾಜಸೂಯ ಯಾಗ ಮಾಡುವಾಗ ಸಪ್ತದ್ವೀಪಾಪಿ ಸಕಲದಿಗ್ವಿಜಯ ಮಾಡಿ ಬಹು ಧನವನ್ನುಗಳಿಸಿದ ಕಾರಣ ಅರ್ಜುನನು ಧನಂಜಯನೆಂದು ಪ್ರಖ್ಯಾತನಾದನು. ಇಲ್ಲಿ "ಧನಂಜಯ' ಎಂದು ಸಂಬೋಧಿಸಿರುವುದರಿಂದ ದಿಗ್ವಿಜಯಮಾಡಿ ಮಾನುಷ ದೈವ ಧನವನ್ನು ಅಂತಶತ್ರುಗಳಾದ ಕಾಮಕ್ರೋಧಾದಿಗಳನ್ನೂ ಜಯಿಸಿ ಶಮಾದಿಗಳನ್ನು ಅರ್ಜುನನು ಸಂಪಾದಿಸಿಬಲ್ಲನೆಂಬ ಶ್ರೀಕೃಷ್ಣನ ಭಾವವು ವ್ಯಕ್ತವಾಗುತ್ತದೆ.

**ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ**
**ಬಂಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿ ಸಾ ಪಾರ್ಥ ಸಾತ್ವಿಕೀ॥18-30॥**

30. ಪಾರ್ಥ! ಕಾಮ್ಯ ಕರ್ಮಮಾರ್ಗವು ಸಂಸಾರಪ್ರವೃತ್ತಿಕಾರಣವು. ಅಕಾಮ್ಯ ಕರ್ಮಮೂಲಕವಾದ ಜ್ಞಾನಮಾರ್ಗವು ಸಂಸಾರ ನಿವೃತ್ತಿಕಾರಣವು. ಇದನ್ನು ತಿಳಿದು ಈ ಮಾರ್ಗದ್ವಯದಲ್ಲಿ ಕರ್ತವ್ಯಾಚರಣೆಯಿಂದ ಅಭಯವು, ನಿಷಿದ್ಧಾಚರಣೆಯಿಂದ ಭಯವು, ಪ್ರವೃತ್ತಿಕರ್ಮದಿಂದ ಸಂಸಾರಬಂಧವು, ನಿವೃತ್ತಿಕರ್ಮದಿಂದ ಮೋಕ್ಷವೂ ಆಗುತ್ತದೆಂಬ ತತ್ವಾನುಸಂಧಾನಪೂರ್ವಕವಾಗಿ ಕರ್ತವ್ಯದಲ್ಲಿ ಪ್ರವೃತ್ತಿ, ನಿಷಿದ್ಧವನ್ನು ಬಿಡುವುದು, ಅದಕ್ಕಾಗಿ ವಿಹಿತನಿಷಿದ್ಧಗಳನ್ನೂ, ಅದರ ಫಲವಾದ ಭಯಾಭಯಗಳನ್ನೂ, ತನ್ಮೂಲಕ ಬಂಧಮೋಕ್ಷಗಳನ್ನೂ ಯಾವ ಬುದ್ಧಿಯು ಯಥಾವತ್ತಾಗಿ ಗ್ರಹಿಸುವುದೋ ಆ ಬುದ್ಧಿಯು ಸಾತ್ವಿಕವು.

**ಯಯಾ ಧರ್ಮಮಧರ್ಮಂ ಚ ಕಾರ್ಯಂ ಚಾಕಾರ್ಯಮೇವ ಚ**
**ಅಯಥಾವತ್ಪ್ರಜಾನಾತಿ ಬುದ್ಧಿಃ ಸಾ ಪಾರ್ಥ ರಾಜಸೀ॥18-31॥**

31. ಪಾರ್ಥ! ಧರ್ಮ-ಅಧರ್ಮ, ಕರ್ತವ್ಯ-ಅಕರ್ತವ್ಯ, ಬಂಧ-ಮೋಕ್ಷ, ಇವುಗಳನ್ನು ಯಥಾವತ್ತಾಗಿ ಗ್ರಹಿಸದೇ, ಕೆಲವನ್ನು ಯಥಾರ್ಥವಾಗಿಯೂ, ಕೆಲವನ್ನು ಅಯಥಾರ್ಥವಾಗಿಯೂ, ಸಂದಿಗ್ಧವಾಗಿಯಾದರೂ ಗ್ರಹಿಸುವ ಬುದ್ಧಿಯು ರಾಜಸವು.

**ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾಽವೃತಾ**
**ಸರ್ವಾರ್ಥಾನ್ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ॥18-32॥**

| |
|---|
| **32.ಪಾರ್ಥ! ಅಜ್ಞಾನದಿಂದ ಆವರಿಸಲ್ಪಟ್ಟು ಯಾವ ಬುದ್ಧಿಯು ಧರ್ಮವನ್ನು ಅಧರ್ಮವೆಂದೂ, ಹೆಚ್ಚೇನು? ಸಕಲ ಪದಾರ್ಥಗಳನ್ನೂ ಅವು ವಾಸ್ತವಿಕರೀತಿಯಿಂದ ಗ್ರಹಿಸದೆ ವಿರುದ್ಧ ವಾಗಿ ಎಂದರೆ ಸತ್ಯ ಜಗತ್ತನ್ನು ಅಸತ್ಯ ವೆಂದೂ-ಈಶ್ವರರಹಿತನೆಂದೂ, ಪರಾಧೀನ ಪ್ರಪಂಚವನ್ನು ಸ್ವತಂತ್ರವೆಂದೂ, ಸ್ಥಿರ ವಸ್ತುವನ್ನು ಕ್ಷಣಿಕವೆಂದೂ ಮುಂತಾಗಿ ಗ್ರಹಿಸುವುದೋ ಆ ಬುದ್ಧಿಯು ತಾಮಸವು.** |
| **ಧೃತ್ಯಾ ಯಯಾ ಧಾರಯತೇ ಮನಃಪ್ರಾಣೇಂದ್ರಿಯಕ್ರಿಯಾಃ<br>ಯೋಗೇನಾವ್ಯಭಿಚಾರಿಣ್ಯಾ ಧೃತಿಃ ಸಾ ಪಾರ್ಥ ಸಾತ್ವಿಕೀ ॥18-33॥** |
| **33. ಪಾರ್ಥ! - ನಿಹಿತವಿಷಯದಲ್ಲಿಯೇ ನಿಯತವಾದ, ಭಗವದ್ಭಕ್ತಿ ಯೋಗದಿಂದ ಕೂಡಿದ, ಯಾವ ಧೈರ್ಯದಿಂದ ಮನಸ್ಸು-ಇಂದ್ರಿಯ-ಪ್ರಾಣ ಇವುಗಳ ವ್ಯಾಪಾರಗಳು ಅಮಾರ್ಗಕ್ಕೆ ಹೋಗದಂತೆ ತಡೆಯಲ್ಪಡುವುವೋ, ಅಂತಹ ಧೈರ್ಯವು ಸಾತ್ವಿಕವು.** |
| **ಯಯಾ ತು ಧರ್ಮಕಾಮಾರ್ಥಾನ್ ಧೃತ್ಯಾ ಧಾರಯತೇಽರ್ಜುನ<br>ಪ್ರಸಂಗೇನ ಫಲಾಕಾಂಕ್ಷೀ ಧೃತಿಃ ಸ ಪಾರ್ಥ ರಾಜಸೀ॥18-34॥** |
| **34. ಅರ್ಜುನ! ಕರ್ತೃತ್ವಾದಿ ಅಭಿನಿವೇಶದಿಂದ ಫಲಾಪೇಕ್ಷೆಯನ್ನು ಹೊಂದಿದವನಾಗಿ ಯಾವ ಧೈರ್ಯದಿಂದ ಧರ್ಮ, ಕಾಮ, ಅರ್ಥಗಳಿಗೆ ಸಾಧಕವಾದ ಮನಃಪ್ರಾಣೇಂದ್ರಿಯ ವ್ಯಾಪಾರಗಳನ್ನೇ ಬಿಡದೆ ಧರಿಸುವನೋ ಆ ಕೃತಿಯು ರಾಜಸವು.** |
| **ಯಯಾ ಸ್ವಪ್ನಂಭಯಂ ಶೋಕಂ ವಿಷಾದಂ ಮದಮೇವ ಚ \|<br>ನ ವಿಮುಂಚತಿ ದುರ್ಮೇಧಾ ಧೃತಿಃ ಸಾ ಪಾರ್ಥ ತಾಮಸೀ॥18-35॥** |
| **35. ಪಾರ್ಥ! ದುಷ್ಟ ಬುದ್ಧಿಯುಳ್ಳವನು ಯಾವ ಕೃತಿಯಿಂದ ಅತಿನಿದ್ರೆ, ಭಯ, ದುಃಖ, ಮನೋದೌರ್ಬಲ್ಯ, ಅಧರ್ಮದಲ್ಲಿ ಮನಸ್ಸಿಗೆ ಹರ್ಷ ಮುಂತಾದ ನಿಷಿದ್ಧ ಭಗವದ್ದ್ವೇಷಾದಿ ಸಕಲಕಾರ್ಯಗಳಿಗೂ ಸಾಧನವಾದ ಮನಃಪ್ರಾಣೇಂದ್ರಿಯ ವ್ಯಾಪಾರಗಳನ್ನು ಬಿಡದೆ ಧಾರಣೆಮಾಡುವನೋ ಅಂತಹ ಧೈರ್ಯವು ತಾಮಸವು. ಪಾರ್ಥ! ಈ ರೀತಿಯಾದ ಧೃತಿಯ ವಿವೇಚನೆಯನ್ನರಿತು ರಾಜಸತಾಮಸದೃತಿಯನ್ನು ಬಿಟ್ಟು, ಸಾತ್ವಿಕ ಪದ್ಧತಿಯನ್ನೇ ವೃದ್ಧಿ ಮಾಡಿಕೊಳ್ಳುವವನಾಗು.** |

ಸುಖಂ ತ್ವಿದಾನೀಂ ತ್ರಿವಿಧಂ ಶೃಣು ಮೇ ಭರತರ್ಷಭ
ಅಭ್ಯಾಸಾದ್ರಮತೇ ಯತ್ರ ದುಃಖಾಂತಂ ಚ ನಿಗಚ್ಛತಿ॥18-36॥

ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಂ
ತತ್ಸುಖಂ ಸಾತ್ವಿಕಂ ಪ್ರೋಕ್ತಮಾತ್ಮ ಬುದ್ಧಿ ಪ್ರಸಾದಜಂ॥18-37॥

**36-37.** ಪ್ರತಿಜ್ಞಾಪೂರ್ವಕವಾಗಿ ಸುಖ ಪ್ರಭೇದವನ್ನು ವಿವರಿಸುತ್ತಾನೆ:- ಭರತಕುಲಮಣಿಯಾದ ಅರ್ಜುನ ! ಆತ್ಯಂತಿಕಫಲವಾದ ಸುಖದಲ್ಲಿಯೂ ಸಾಕಾದಿ ಭೇದಗಳಿವೆ. ಅಂತಹ ಸಾತ್ವಿಕ, ರಾಜಸ, ತಾಮಸಗಳೆಂದು ಮೂರುಬಗೆಯಾದ ಸುಖವನ್ನು ವಿವರಿಸಿ ಹೇಳುವೆನು ಕೇಳು. ಸಾತ್ವಿಕಸುಖವು ಹೀಗಿದೆ:- ಯಾವ ಸುಖವನ್ನು ತಿರುತಿರುಗಿ ಅನುಭವಿಸಿದ ಹಾಗೆಲ್ಲಾ ಮನಸ್ಸಿಗೆ ಉಲ್ಲಾಸಾತಿಶಯವೇ ಆಗುತ್ತಿರುವುದೋ (ರಾಜಸಸುಖದಂತೆ ತತ್ಕಾಲದಲ್ಲಿ ಮನೋಲ್ಲಾಸವಾಗಿ ಕೆಲಕಾಲಾನಂತರ ವೈರಸ್ಯ ಪ್ರದವಾಗುವುದಿಲ್ಲವೋ) ಮತ್ತು ದುಃಖನಾಶವಾಗುವುದೋ? ಯಾವ ಸುಖವು ಸಾಧನಸಂಪಾದನೆಯ ಕಾಲದಲ್ಲಿ ಬಹುಕಷ್ಟ ತೋರಿ ವಿಷದಂತೆ ಬೇಡವೆಂದು ದ್ವೇಷಾಸ್ಪದವಾಗುವುದೋ, ಮಹಾಪ್ರಯಾಸದಿಂದ ಸಾಧನಗಳು ಪರಿಪಕ್ವವಾಗಿ ಫಲವಾಗುವ ಕಾಲದಲ್ಲಿ ಅಮೃತದಂತೆ ಪರಮಪ್ರೀತ್ಯಾಸ್ಪದವಾಗುವಪವುದೋ ಅಂತಹ ಸುಖವು ಸಾತ್ವಿಕವೆಂದು ಜ್ಞಾನಿಗಳಿಂದ ಉಕ್ತವಾಗಿದೆ. ಈ ಸಾತ್ವಿಕಸುಖವು ಪರಮಾತ್ಮನ ಅನುಗ್ರಹದಿಂದಲೂ, ಬುದ್ಧಿಯು ಸ್ವತಃ ವಿಷಯಗಳ ಕಡೆಗೆ ಹೋಗದಿರುವಂತಹ ಪ್ರಸನ್ನತೆಯನ್ನು ಹೊಂದುವುದರಿಂದಲೂ ಉಂಟಾಗುವುದೆಂದು ತಿಳಿ.

ವಿಷಯೇಂದ್ರಿಯಸಂಯೋಗಾದ್ಯತ್ತದಗ್ರೇಽಮೃತೋಪಮಂ
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಂ॥18-38॥

**38.** ಯಾವ ಸುಖವು ವಿಷಯೇಂದ್ರಿಯ ಸಂಬಂಧದಿಂದುಂಟಾಗುವುದೋ, ಲೌಕಿಕ ಸ್ರಕ್-ಚಂದನ-ವನಿತಾದಿ ಭೋಗದಿಂದ ಲೋಕಸಿದ್ಧವಾಗಿದೆಯೋ, ಯಾವ ಸುಖಸಾಧನ ವಿಷಯಾನುಭವಕಾಲದಲ್ಲಿ ಅಮೃತದಂತೆ ಸರ್ವದಾ 'ನನಗೆ ಈ ಸುಖವೆ ಆಗುತ್ತಿರಲಿ' ಎಂಬುದಾಗಿ ಪರಮಪ್ರೀತಿಯು ತೋರುತ್ತದೆಯೋ, ಸಾಧನ ವಿಷಯಾನುಭವವಾದ ಮೇಲೆ ಕೊನೆಗೆ ವಿಷದಂತೆ "ಅಯ್ಯೋ! ಇದರಲ್ಲಿ ಸಾರವಿಲ್ಲ; ನನಗೆ ಬೇಡ" ಎಂಬುದಾಗಿ ದ್ವೇಷವುಂಟಾಗುವುದೋ ಅಂತಹ ಸುಖವು ರಾಜಸವು.

| |
|---|
| ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ<br>ನಿದ್ರಾಲಸ್ಯ ಪ್ರಮಾದೋತ್ಥಂ ತತ್ತಾಮಸಮುದಾಹೃತಂ॥18-39॥ |
| **39.** ಯಾವ ಸುಖವು ಅನುಭವಕಾಲದಲ್ಲಿಯೂ, ಅನಂತರಕಾಲದಲ್ಲಿಯೂ ಕೂಡ ತನಗೆ ಅಥವಾ ಬುದ್ಧಿಗೆ ವಿವೇಕಶಕ್ತಿನಾಶಕವಾದ ಮೋಹ(ಪರವಶತ್ವ)ವನ್ನುಂಟುಮಾಡುವುದೋ, ನಿದ್ರೆ-ಶರೀರಮಾಂದ್ಯ-ಅಧರ್ಮಬುದ್ಧಿ ಇವುಗಳಿಂದ ಉತ್ಪನ್ನವಾಗುವುದೋ ಅದು ತಾಮಸಸುಖವೆಂದು ಉದಾಹರಿಸಲ್ಪಟ್ಟಿದೆ. |
| ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ<br>ಸತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ರಿಭಿರ್ಗುಣೈಃ॥18-40॥ |
| **40.**ಜೀವರು ಮೂರುಬಗೆಯಾಗಿರುವರೆಂದು ವಿವರಿಸುತ್ತಾನೆ:- ಭೂಲೋಕ ಸ್ವರ್ಗಲೋಕಾದಿಗಳಲ್ಲಿರುವ ಮನುಷ್ಯರು, ದೇವತೆಗಳು ಮುಂತಾದ ಜೀವವರ್ಗದಲ್ಲಿ ಯಾವ ಜೀವನೂ ಜಡ ಪ್ರಕೃತಿಯಿಂದುತ್ಪನ್ನವಾದ ಸತ್ವ ರಜಸ್ತಮೋಗುಣಗಳಿಗೆ ಸಿಲುಕದೇ ಇಲ್ಲ. ಸರ್ವಜೀವರೂ ತ್ರಿಗುಣಬದ್ಧರು. ಜೀವಸ್ವರೂಪವು ಮಾತ್ರ ಪ್ರಾಕೃತಗುಣಮಯವಲ್ಲ. ಆದರೂ ಈ ಗುಣತ್ರಯವು ಜೀವಸ್ವರೂಪವನ್ನಾವರಿಸಿ ಪ್ರಕೃತಿಬಂಧಕ್ಕೀಡುಮಾಡಿ ಸ್ವರೂಪವ್ಯಂಜಕವಾಗುವುದು. ಜೀವನ, ಬಾಹ್ಯ ದೇಹೇಂದ್ರಿಯಾದಿಗಳು ಗುಣತ್ರಯವಿಕಾರಗಳು. ಎಲ್ಲರ ದೇಹಾದಿಗಳಲ್ಲಿಯೂ ಗುಣತ್ರಯವು ಒಂದೇ ಪರಿಮಾಣದಲ್ಲಿ ಸೇರಿರುವುದಿಲ್ಲ; ಅವುಗಳಲ್ಲಿ ಹೆಚ್ಚು ಕಮ್ಮಿ ಭಾಗಗಳಿರುತ್ತವೆ. ಹಾಗೆ ಮಿಳಿತವಾಗಿರುವ ಸತ್ವಾದಿಗುಣಗಳ ತಾರತಮ್ಯದಿಂದ ಜೀವರು ಸಾತ್ವಿಕ, ರಾಜಸ, ತಾಮಸರೆಂದು ಮೂರು ಬಗೆಯಾಗಿರುವರು. ಅದರಲ್ಲಿಯೂ ಸಾತ್ವಿಕಸಾತ್ವಿಕ, ಸಾತ್ವಿಕರಾಜಸ, ಸಾತ್ವಿಕತಾಮಸಾದಿ ಬಹು ಪ್ರಭೇದಗಳು ಉಕ್ತವಾಗಿವೆ. ಅವುಗಳ ವಿವರಣೆಯು ಶ್ರೀಮದ್ಭಗವದ್ಗೀತಾವಿವೃತಿಯಲ್ಲಿ ಉದಾಹರಣೆ ಸಹಿತವಾಗಿ ಉಕ್ತವಾಗಿದೆ. ಅದನ್ನು ನೋಡಿ ಜಿಜ್ಞಾಸುಗಳು ತಿಳಿಯಬಹುದು. |
| ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ<br>ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ॥18-41॥ |
| **41.**ವರ್ಣಾಶ್ರಮೋಚಿತ ಕರ್ಮವು ಅವಶ್ಯಕರ್ತವ್ಯವೆಂದೂ, ತನ್ಮೂಲಕವಾಗಿ ಪರಮಶ್ರೇಯಸ್ಸನ್ನು ಪಡೆಯಬೇಕೆಂದೂ ತಿಳಿದೆನು. "ಸ್ವಾಮಿ! ಯಾವ ಯಾವ ವರ್ಣದವರಿಗೆ ಯಾವಯಾವ ಕರ್ಮಗಳು ವಿಹಿತವು? ಅದನ್ನು ವಿವೇಚನೆ ಮಾಡಿ ತಿಳಿಸಬೇಕು. ಅದರಿಂದ ನನಗೆ ಈಗ ಕರ್ತವ್ಯವೇನೆಂಬುದು |

ಗೊತ್ತಾಗುವುದು” ಎಂಬ ಅರ್ಜುನನ ಹೃದಯವನ್ನರಿತು ಶ್ರೀಕೃಷ್ಣನು ಚತುರ್ವರ್ಣದವರಿಗೆ ವಿಹಿತ ಕರ್ಮವನ್ನು ವಿವರಿಸುತ್ತಾನೆ:- ಶತ್ರುಸಂಹಾರಕನಾದ ಅರ್ಜುನ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಇವರುಗಳ ಬ್ರಾಹ್ಮಣತ್ವಾದಿ ಅವರವರ ಸ್ವಭಾವಕ್ಕನುಗುಣಗಳಾದ ಸತ್ವಾದಿಗುಣಪ್ರಕರ್ಷ ನಿಮಿತ್ತದಿಂದ ಅವರವರಿಗೆ ಇಂತಹ ಕರ್ಮಗಳೆಂದು ವಿಭಾಗಿಸಲ್ಪಟ್ಟು ವಿಹಿತವಾಗಿವೆ. ಅವುಗಳನ್ನು ವಿವೇಚನೆಮಾಡಿ ಹೇಳುವೆನು ಕೇಳು.

**ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ**

**ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಂ ಕರ್ಮ ಸ್ವಭಾವಜಂ॥18-42॥**

**42.[ಬ್ರಾಹ್ಮಣಕರ್ಮ]** ಭಗವಂತನಲ್ಲಿಯೇ ಮನಸ್ಸನ್ನು ನಿಲ್ಲಿಸುವುದು, ಇಂದ್ರಿಯನಿಗ್ರಹ, ಬ್ರಹ್ಮಚರ್ಯೆ ಮುಂತಾದುವು, ಬಾಹ್ಯಾಭ್ಯಂತರಶುದ್ಧಿ, ಕ್ರೋಧವಿಲ್ಲದಿರುವುದು, ಮನಸ್ಸಿನ ಸಂಕಲ್ಪಾನುಸಾರವಾಗಿಯೇ ಮಾತನಾಡುವುದು, ಅದರಂತೆಯೇ ನಡೆಯುವುದು, ಧರ್ಮಾದಿಗಳ ಸಾಮಾನ್ಯವಿಶೇಷಜ್ಞಾನಗಳು, ಧರ್ಮಾದಿ ಅದೃಷ್ಟ ಪ್ರಯೋಜನವುಂಟೆಂಬ ಭಾವನೆ ಇವುಗಳು ಬ್ರಾಹ್ಮಣನಿಗೆ ಸ್ವಭಾವಸಿದ್ಧ ಕರ್ಮಗಳು.

**ಶೌರ್ಯಂ ತೇಜೋಧೃತಿರ್ದಾಕ್ಷ್ಯಂ ಯುದ್ಧೇಚಾಪ್ಯಪಲಾಯನಂ**

**ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಂ॥18-43॥**

**43. [ಕ್ಷತ್ರಿಯಕರ್ಮ]:-** ಭಯಪಡದಿರುವಿಕೆ, ನೋಡುವಮಾತ್ರದಿಂದಲೇ ಪರರಿಗೆ ಭಯಉಂಟಾಗುವಂತಹ ಮುಖವರ್ಚಸ್ಸು, ಧೈರ್ಯ, ಆರಂಭಿಸಿದ ಕಾರ್ಯವನ್ನು ನಿರ್ವಹಿಸುವ ಸಾಮರ್ಥ್ಯ, ಯುದ್ಧ ಮಾಡಬೇಕಾಗಿ ಬಂದರೆ ಹಿಂದೆಗೆಯದೆ ನಿಲ್ಲುವುದು, [1]ಈಶ್ವರಭಾವ=ದುಷ್ಟ ಶಿಕ್ಷೆ-ಶಿಷ್ಟರಕ್ಷಣೆ ಇವು ಕ್ಷತ್ರಿಯನಿಗೆ ಸಹಜ ಕರ್ಮವು.

1. ಪ್ರಸಹ್ಯ ವಿತ್ತಾ ಹರಣಂ ಶಾರೀರೋ ದಂಡ ಏವ ಚ
ಅಶಿಷ್ಟಾನಾಂ ಶಾಸನಂ ಚ ತಥೈವಾರ್ಥವಿನಾಶನಂ
ಏಷ ಈಶ್ವರಭಾವಸ್ಸ್ಯಾನ್ನ ಕಾರ್ಯಂ ಕ್ಷತ್ರಿಯೇತರೈಃ

ಈ ಸ್ಮೃತ್ಯನುಸಾರವಾಗಿ ಅಪರಾಧಿಗಳ ದ್ರವ್ಯವನ್ನು ಬಲಾತ್ಕಾರವಾಗಿ ತೆಗೆದುಕೊಳ್ಳುವುದು, ಹೊಡೆಸುವುದೇ ಮುಂತಾದ ಶಾರೀರದಂಡನೆ, ದುಷ್ಟರನ್ನು ಶಿಕ್ಷಿಸುವುದು ಮತ್ತು ಅವರ ಅಧಿಕಾರಾದಿ ಸ್ವಾರ್ಥವನ್ನು ಭಂಗಡಿಸುವುದು, ಇವುಗಳಿಗೆ ಈಶ್ವರಭಾವವೆಂಮ ಹೆಸರು. ಇಮ ಕ್ಷತ್ರಿಯನಿಗೆ ಸ್ವಾಭಾವಿಕವು; ಇತರರಿಗೆ ಕರ್ತವ್ಯವಲ್ಲ. ಇಲ್ಲಿ ಉಕ್ತವಾದ ಶಮಾದಿ ಬ್ರಾಹ್ಮಣ ಧರ್ಮಗಳೂ ಸಹ ಸ್ವಲ್ಪ ನ್ಯೂನವಾಗಿ ಕ್ಷತ್ರಿಯರಿಗೂ ಉಂಟೆಂದು ತಿಳಿಯಬೇಕು. ಕ್ಷತಿಯರಿಗೆ ವಿಹಿತವಾದ ದಾನಾದಿಗಳು ಬ್ರಾಹ್ಮಣರಿಗೂ ಸ್ವಲ್ಪ ನ್ಯೂನವಾಗಿ ಇರಬೇಕು. ಕೆಲವು ಚಕ್ರವರ್ತಿಗಳಲ್ಲಿ ಬ್ರಾಹ್ಮಣರಿಗಿಂತಲೂ ಅಧಿಕವಾಗಿಯೇ ಶಮಾದಿಗಳಿವೆಯೆಂದು ಪ್ರಮಿತವಾಗಿದೆ. ಇಲ್ಲಿ ಬ್ರಾಹ್ಮಣರಿಗಿಂತ ನ್ಯೂನವೆಂದು ಹೇಳಿರುವುದು ಇತರ ಸಾಮಾನ್ಯ ಕ್ಷತ್ರಿಯರಿಗೆ ಮಾತ್ರ ಅನ್ವಯಿಸಬೇಕೆಂಬ ವಿಶೇಷವು ಇತರ ಪ್ರಮಾಣಗಳಿಂದ ತಿಳಿದುಬರುತ್ತದೆ.

**ಕೃಷಿಗೋರಕ್ಷ ವಾಣಿಜ್ಯಂ ವೈಶ್ಯಂ ಕರ್ಮ ಸ್ವಭಾವಜಂ**

**ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಂ॥18-44॥**

44. [ವೈಶ್ಯ ಶೂದ್ರಕರ್ಮ:-] ವ್ಯವಸಾಯದಿಂದ ಜೀವಿಸುವುದು, ಗೋವನ್ನು ಪಾಲಿಸಿ ಅದರ ಹಾಲುಮೊಸರುತುಪ್ಪಗಳನ್ನು ಮಾರಿ ಜೀವಿಸುವುದು, ವ್ಯಾಪಾರ ಮತ್ತು ಕ್ಷತ್ರಿಯರಿಗಿಂತ ಕಡಿಮೆಯಾದ ಶಮಾದಿಗುಣಗಳು ಇವು ಸಹಜ ವೈಶ್ಯ ಕರ್ಮವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರುವರ್ಣದವರ ಸೇವೆ ಮತ್ತು ವೈಶ್ಯರಿಗಿಂತ ಕಮ್ಮಿಯಾದ ಶಮಾದಿಗಳೂ ಸಹ ಸ್ವಾಭಾವಿಕವಾದ ಶೂದ್ರಕರ್ಮಗಳು.

ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ
ಸ್ವಕರ್ಮನಿರತಃ ಸಿದ್ಧಿಂ ಯಥಾ ವಿಂದತಿ ತಚ್ಛೃಣು॥18-45॥

ಯತಃ ಪ್ರವೃತ್ತಿ ಭೂತಾನಾಂ ಯೇನ ಸರ್ವಮಿದಂ ತತಂ
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ॥18-46॥

೪೫-೪೬. ವಿಹಿತವಾದ ಕರ್ಮಾಚರಣೆಯಲ್ಲಾಸಕ್ತನಾಗಿ ತನ್ನ ವಿಹಿತವೃತ್ತಿಯಿಂದ ಭಗವದಾರಾಧನೆಮಾಡುವ ಮನುಷ್ಯನು ಪರಿಶುದ್ಧಾಂತಃಕರಣನಾಗಿ ಜ್ಞಾನದ್ವಾರಾ ಮುಕ್ತಿಯನ್ನು ಹೊಂದುತ್ತಾನೆ. ತನ್ನ ವರ್ಣಾಶ್ರಮವಿಹಿತಕರ್ಮದಲ್ಲಾಸಕ್ತನಾದವನು ಹೇಗೆ ಮುಕ್ತನಾಗುವನೆಂಬ ರೀತಿಯನ್ನು ವಿವರಿಸಿ ಹೇಳುವೆನು ಕೇಳು:- ಪ್ರಾಣಿಗಳ ಸಕಲವ್ಯಾಪಾರಗಳೂ ಯಾವ ಭಗವಂತನ ಅಧೀನವಾಗಿಯೇ ನಡೆಯುತ್ತವೆಯೋ, ಈ ಚರಾಚರಾತ್ಮಕವಾದ ಸಕಲ ಜಗತ್ತೂ ಯಾವ ಪರಮಾತ್ಮನಿಂದ ವ್ಯಾಪಿಸಲ್ಪಟ್ಟಿದೆಯೋ ಅಂತಹ, ನಿಯಾಮಕನು, ವ್ಯಾಪ್ತನೂ ಆದ ಭಗವಂತನನ್ನು ಸ್ವವಿಹಿತಧರ್ಮಾಚರಣೆಪೂರ್ವಕವಾಗಿ ಆರಾಧಿಸಿ ಬ್ರಾಹ್ಮಣಾದಿ ಆಯಾಯಾ ಮನುಷ್ಯನು ಮೋಕ್ಷವನ್ನು ಪಡೆಯುವನು.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್
ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ॥18-47॥

47.[ಸ್ವಧರ್ಮ ಮಹತ್ವ] ಅಂಗಹೀನ ಮುಂತಾಗಿ ಚೆನ್ನಾಗಿ ಆಚರಿಸಲ್ಪಡದಿದ್ದರೂ ಸಹ ಸ್ವವರ್ಣಾಶ್ರಮೋಚಿತ ವಿಹಿತಧರ್ಮಾನುಷ್ಠಾನವು ಸಾಂಗವಾಗಿ ವಿಹಿತ ರೀತಿಯಿಂದಾಚರಿಸಲ್ಪಟ್ಟ ಇತರ ವರ್ಣಾಶ್ರಮ ವಿಹಿತ ಧರ್ಮಕ್ಕಿಂತ ಪ್ರಶಸ್ತವೂ, ಮೋಕ್ಷಸಾಧನವೂ ಆಗುವುದು. ಹೇಗೆಂದರೆ:- ತನ್ನ ಸ್ವಭಾವಾನುಸಾರವಾಗಿ ವಿಧಿಸಲ್ಪಟ್ಟ ಕರ್ಮವನ್ನಾಚರಿಸುವವನು ಅಂಗಹೀನವಾಗಿ ಆಚರಿಸಿದುದರಿಂದ ಬರಬೇಕಾದ ದೋಷವನ್ನು ಹೊಂದುವುದಿಲ್ಲ. (ವಿಧಿ ನಿಷೇಧಗಳು ಶ್ರೀಹರಿಯು ಆಜ್ಞೆಯು, ಅದನ್ನು ಪಾಲಿಸಿದವನಲ್ಲಿ ಶ್ರೀಹರಿಯು ವಿಶೇಷಾನುಗ್ರಹಮಾಡುವನು. ಅಂತಹವನಲ್ಲಿ

ಯಾವ ಲೋಪಬಂದರೂ ಶ್ರೀಹರ್ಯನುಗ್ರಹವು ಅದರಿಂದ ದೋಷವು ಬರದಂತೆ ಅವನನ್ನು ಕಾಪಾಡುವುದು. ಆದಕಾರಣ ವಿಹಿತ ಕರ್ತನಿಗೆ ಅಂಗವೈಕಲ್ಯಾದಿಗಳಿಂದ ದೋಷ ಬರುವುದಿಲ್ಲ. ಸರಿಯಾದ ಫಲವೇ ಆಗುವುದೆಂದು ಭಾವ)

**ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್**

**ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ॥18-48॥**

**48.** ಯಾವಾ ಕರ್ಮವನ್ನೂ ಮಾಡತೊಡಗಿದರೂ ಅಂಗವೈಕಲ್ಯಾದಿ ದೋಷಗಳು ತಪ್ಪುವುದೇ ಇಲ್ಲ. ಅಗ್ನಿಯು ಹೊಗೆಯಿಂದ ಆವರಿಸಲ್ಪಟ್ಟಿರುವಂತೆ ಸಕಲಕರ್ಮಗಳೂ ಅಂಗಲೋಪಾದಿ ದೋಷಯುಕ್ತವೇ ಆಗಿರುತ್ತವೆ. ಆದ ಕಾರಣ ಕುಂತೀತನಯ! ತನ್ನ ವರ್ಣಾಶ್ರಮಗಳಂತೆ ಸಹಜವಾದ ವಿಹಿತಕರ್ಮವು ದೋಷಯುಕ್ತವಾದರೂ ಅದನ್ನು ದೋಷಶಂಕೆಯಿಂದ ಬಿಡಬಾರದು. (ಸರ್ವವೂ ದೋಷಯುಕ್ತವು. ಅದರಲ್ಲಿ ಪರಧರ್ಮವು ಅವಿಹಿತವು. ಸ್ವಧರ್ಮವು ವಿಹಿತವು. ಅದನ್ನಾಚರಿಸಿದರೆ ದೋಷವು ಅವರ್ಜನೀಯವಾದರೂ ವಿಧಿಯನ್ನನುಸರಿಸಿದ ಪ್ರಯುಕ್ತ ಶ್ರೇಯಸ್ಸಾಗುವುದು. ಅದನ್ನು ಬಿಟ್ಟರೆ ದೋಷದ ಜೊತೆಗೆ ವಿಹಿತ ತ್ಯಾಗ- ಅವಿಹಿತಾಚರಣೆಗಳ ಪಾಪ ಬರುವುದು. ಆದಕಾರಣ ಪಾರ್ಥ! ಕ್ಷತ್ರಿಯನಾದ ನಿನಗೆ ಸಹಜವಾದ ವಿಹಿತ ಯುದ್ಧವನ್ನು ನಿಶ್ಶಂಕವಾಗಿ ಮಾಡಿ ಶ್ರೇಯೋಭಾಗಿಯಾಗೆಂದು ಭಾವ.)

**ಅಸಕ್ತಬುದ್ಧಿಃ ಸರ್ವತ್ರ ಜಿತಾತ್ಮಾ ವಿಗತ ಸ್ಪೃಹಃ**

**ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ॥18-49॥**

**49.**ವಿಹಿತಕರ್ಮ ಮಾಡುವರೀತಿ, ಅದರಿಂದ ಜ್ಞಾನವಾಗಿ ಮೋಕ್ಷ ಲಭಿಸುವ ಬಗೆಯನ್ನೂ ವಿವರಿಸುತ್ತಾನೆ:- ಮನಸ್ಸನ್ನು ಸ್ವಾಧೀನಪಡಿಸಿಕೊಂಡು ನಶ್ವರವಾದ ಐಹಿಕಾಮುಷ್ಮಿಕ ಸಕಲಸುಖಗಳನ್ನೂ ಆಶಿಸದೆ ಸುಖಸಾಧನವಿಷಯಗಳಲ್ಲಾಸಕ್ತಿರಹಿತ ಬುದ್ಧಿಯುಳ್ಳವನಾಗಿ ಅಥವಾ ಅ=ಭಗವಂತನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ ಕಾಮ್ಯ ಕರ್ಮತ್ಯಾಗಪೂರ್ವಕ ಭಗವದರ್ಪಣಯುಕ್ತ ಅಕಾಮ್ಯ ಕರ್ಮಾನುಷ್ಠಾನರೂಪಯೋಗದಿಂದ ಸಂಪೂರ್ಣವಾದ ಮೋಕ್ಷೋಪಾಯಜ್ಞಾನಸಿದ್ಧಿಯನ್ನೂ, ಪ್ರಾರಬ್ಧ ಭಿನ್ನ ಸಕಲಾನಿಷ್ಟ ಕರ್ಮನಾಶರೂಪ ಸಿದ್ಧಿಯನ್ನೂ ಸಹ ಹೊಂದುತ್ತಾನೆ.

**ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ತಥಾಪ್ನೋತಿ ನಿಬೋಧ ಮೇ**

**ಸಮಾಸೇನೈವ ಕೌಂತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ॥18-50॥**

| |
|---|
| **50.** ಕೌಂತೇಯ! ಯಾವ ರೀತಿಯಾಗಿ ಸ್ಥಿತಪ್ರಜ್ಞತಾರೂಪವಾದ ಜ್ಞಾನಪರಿಪಕ್ವಾವಸ್ಥೆಯೆಂಬ ಸಿದ್ಧಿಯನ್ನು ಹೊಂದಿದವನು ಆಪರಬ್ರಹ್ಮನೆನಿಸಿದ ಮಹಾಲಕ್ಷ್ಮೀದೇವಿಯನ್ನು ಹೊಂದಿ ಕ್ರಮವಾಗಿ ಪರಬ್ರಹ್ಮನನ್ನು ಹೊಂದುವನೋ ಆ ಪ್ರಕಾರವನ್ನು ಸಂಕ್ಷೇಪವಾಗಿ ಹೇಳುವೆನು ಕೇಳು. |
| ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ<br>ಶಬ್ದಾದೀನ್ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ॥18-51॥ |
| ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ<br>ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ॥18-52॥ |
| ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಂ<br>ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮಭೂಯಾಯ ಕಲ್ಪತೇ॥18-53॥ |
| ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ<br>ಸಮಸ್ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಂ॥18-54॥ |
| ಭಕ್ತ್ಯಾ ಮಾಮಭಿಜಾನಾತಿ ಯಾವಾನ್ಯಶ್ಚಾಸ್ಮಿ ತತ್ವತಃ<br>ತತೋ ಮಾಂ ತತ್ವತೋ ಜ್ಞಾತ್ವಾ ವಿಶತೇ ತದನಂತರಮ್॥18-55॥ |
| **51-55.** ವಿಷಯಾಸಕ್ತಿಯಿಂದ ಕೂಡಿದ ಬುದ್ಧಿಯುಳ್ಳವನಾಗಿ ಧೈರ್ಯ(ಅಡಗಿಸುವ ಶಕ್ತಿ)ದಿಂದ ಮನಸ್ಸನ್ನು ವಿಷಯಗಳ ಕಡೆಗೆ ಹೋಗದಂತೆ ತಡೆದು ಶಬ್ದಾದಿ ವಿಷಯಾಭಿಲಾಷೆ, ಕಾಮ, ಕ್ರೋಧ ಇವುಗಳನ್ನು ಬಿಟ್ಟು ನಿರ್ಜನ ಪ್ರದೇಶದಲ್ಲಿ ವಾಸಮಾಡುತ್ತ ಮಿತವಾಗಿ ಆಹಾರಸೇವನೆ ಮಾಡುವವನಾಗಿ ಶರೀರ-ವಾಙ್ಮನಸ್ಸುಗಳನ್ನು ಸ್ವಾಧೀನಪಡಿಸಿಕೊಂಡು ಸದ್ವಿಷಯದಲ್ಲಿಯೇ ಪ್ರವರ್ತಿಸುವಂತೆ ಮಾಡಿ, ಸರ್ವದಾ ಭಗವದ್ಧ್ಯಾನವೆಂಬ ಸಾಧನಾನುಷ್ಠಾನಪರನಾಗಿ, ವಿಷಯವು ಅಸಾರವೆಂದರಿತು ಅದರಲ್ಲಿ ವೈರಾಗ್ಯಹೊಂದಿ, ತಾನೇ ಕರ್ತನು-ಸಮರ್ಥನು ಎಂಬ ಅಭಿಮಾನ, ದರ್ಪ=ಭಯಪಡಬೇಕಾದ ವಿಷಯದಲ್ಲಿ ಭಯ ನಿಮಿತ್ತವೆಂದರಿಯದಿರುವುದು, ವಿಷಯಾಭಿಲಾಷೆ, ಕೋಪ, ಅಸತ್ಪರಿಗ್ರಹ ಇವುಗಳನ್ನೆಲ್ಲಾ ಬಿಟ್ಟು, ಕರ್ಮಾದಿಗಳಲ್ಲಿ ಮಮತೆಯಿಲ್ಲದವನಾಗಿ, ಎಷ್ಟು ಕೋಪಸಾಮಗ್ರಿಯಿದ್ದರೂ ಕೋಪಮಾಡದಿರುವವನು ತನ್ನ ಮನಸ್ಸನ್ನು ಸದಾ ಬ್ರಹ್ಮನಲ್ಲಿಯೇ ನಿಲ್ಲಿಸುವುದಕ್ಕೆ ಸಮರ್ಥನಾಗುತ್ತಾನೆ. ಬಳಿಕ ಬ್ರಹ್ಮನಿಷ್ಠ ಮನಸ್ಕನು ಪ್ರಯಾಸವಿಲ್ಲದೆ ಸಹಜವಾಗಿಯೇ ವಿಷಯಗಳ ಕಡೆಗೆ ಹೋಗದಿರುವಂತಹ ಮನಸ್ಸುಳ್ಳವನಾಗಿ ಶೋಕಾರ್ಹ |

ವಿಷಯಗಳಲ್ಲಿ ಶೋಕಪಡುವುದಿಲ್ಲ; ವಿಷಯವನ್ನಾಶಿಸುವುದಿಲ್ಲ; ಸಕಲಪ್ರಾಣಿಗಳಲ್ಲಿಯೂ ರಾಗದ್ವೇಷಗಳಿಲ್ಲದೆ ಅವರವರ ಯೋಗ್ಯತಾನುಸಾರವಾಗಿ ವರ್ತಿಸುವನು. ಅನಂತರ ನನ್ನಲ್ಲಿ ಉತ್ತಮವಾದ ಭಕ್ತಿಯನ್ನು ಹೊಂದುತ್ತಾನೆ. ಬಳಿಕ ನನ್ನ ವ್ಯಾಪ್ತಿ-ಅನಾದಿನಿತ್ಯತ್ವ ಗುಣಪರಿಪೂರ್ಣತೆ, ನಾಮಧೇಯ, ರೂಪವಿಶೇಷ ಇವುಗಳನ್ನು ಉಕ್ತಭಕ್ತಿಯಿಂದ ಯಥಾರ್ಥವಾಗಿ ತನ್ನ ಯೋಗ್ಯತಾನುಸಾರ ತಿಳಿಯುತಾನೆ. ಭಕ್ತಿಯಿಂದ ನನ್ನ ಸ್ವರೂಪವನ್ನು ಯಥಾರ್ಥವಾಗಿ ತಿಳಿದನಂತರ ಅಂತಹ ಅಧಿಕಾರಿಯು ನನ್ನನ್ನು ಪ್ರವೇಶಿಸುತ್ತಾನೆ ಎಂದರೆ ಮುಕ್ತನಾಗುತ್ತಾನೆ.

**ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ**

**ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ ॥18-56॥**

56.ಹೀಗೆ ಭಗವಂತನು ಗೀತಾಶಾಸ್ತ್ರಾರ್ಥವನ್ನು ಉಪಸಂಹರಿಸಿದ ಮೇಲೆ "ಕೊನೆಗೂ ಯುದ್ಧಾದಿ ಕರ್ಮವನ್ನು ಮಾಡಲೇಬೇಕೆಂದು ಸಿದ್ಧವಾಯಿತಲ್ಲ" ಎಂದು ಅರ್ಜುನನು ಯೋಚಿಸುತ್ತಿರುವುದನ್ನರಿತು ಭಗವಂತನು ಅವನಿಗೆ ದಾರ್ಢ್ಯವನ್ನು ಹುಟ್ಟಿಸಲು ತಿರುಗಿ ಕರ್ಮಯೋಗವನ್ನು ವಿನಿಗಮನಮಾಡುತ್ತಾನೆ:- ಪಾರ್ಥ! ಏನು ಯೋಚಿಸುತ್ತಿರುವೆ? ವರ್ಣಾಶ್ರಮವಿಹಿತ ಕರ್ಮವನ್ನು ಮಾಡಲೇಬೇಕು. ಆದ ಕಾರಣ ವಿಹಿತ ಸಕಲಕರ್ಮಗಳನ್ನೂ ಆಯಾಯಾ ಕಾಲಗಳಲ್ಲಿ ಮಾಡಿ ಅವೆಲ್ಲವನ್ನೂ ನನ್ನಲ್ಲಿಯೇ ಸಮರ್ಪಿಸು. ಹಾಗೆ ಮಾಡುವವನು ನನ್ನ ಅನುಗ್ರಹವನ್ನು ಹೊಂದಿ ನಿರ್ವಿಕಾರವಾದ, ಯಾವವಿಧ ನಾಶವೂ ಇಲ್ಲದ ನನ್ನ ಸ್ಥಾನವನ್ನು ಪಡೆಯುವನು. (ಮಾಡಿದ ಕರ್ಮಗಳನ್ನೆಲ್ಲಾ ಭಗವಂತನಿಗೆ ಸಮರ್ಪಿಸಬೇಕು. ಒಂದನ್ನೂ ಅರ್ಪಿಸದೇ ಇರಬಾರದು. ನೀನೂ ಹಾಗೆಯೇ ವಿಹಿತವನ್ನಾಚರಿಸಿ ನನಗೆ ಅರ್ಪಿಸಿ ಶ್ರೇಯೋಭಾಗಿಯಾಗು ಎಂದು ಭಾವ.)

**ಚೇತಸಾ ಸರ್ವಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಃ।**

**ಬುದ್ಧಿಯೋಗಮುಪಾಶ್ರಿತ್ಯ ಮಚ್ಚಿತ್ತಃ ಸತತಂ ಭವ॥18-57॥**

**ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ**

**ಅಥ ಚೇತ್ತ್ವಮಹಂಕಾರಾನ್ನ ಶ್ರೋಷ್ಯಸಿ ವಿನಂಕ್ಷಸಿ॥18-58॥**

57-58. ವಿಹಿತಕರ್ಮವನ್ನಾಚರಿಸಿ ಭಗವಂತನಲ್ಲಿ ಸಮರ್ಪಿಸುವವನಿಗೆ ಮುಕ್ತಿಯಾಗುವುದಾದರೆ ಅನ್ಯದೇವತೆಗಳನ್ನುದ್ದೇಶಿಸಿ ಕರ್ಮಮಾಡಿ ಕೊನೆಯಲ್ಲಿ ಭಗವಂತನಿಗೆ ಸಮರ್ಪಿಸುವಂತಹ ತ್ರೈವಿದ್ಯರೆಂಬ ಅಧಿಕಾರಿಗಳಿಗೂ ಮುಕ್ತಿಯಾಗಬೇಕಾಗುತ್ತದೆಯೆಂದರೆ, ಹೇಳುತ್ತಾನೆ:- ಪಾರ್ಥ!

ಸಕಲಕರ್ಮಗಳಿಂದಲೂ ನಾನೇ ಮುಖ್ಯನಾದ ಆರಾಧ್ಯದೇವತೆಯು, ನಾನೇ ಸರ್ವೋತ್ತಮನಾದುದರಿಂದ ಪರಮಪ್ರಾಪ್ಯನು, ಅವುಗಳನ್ನೆಲ್ಲಾ ನನ್ನಲ್ಲಿಯೇ ಸಮರ್ಪಿಸಬೇಕು ಎಂದು ನಿರ್ಧರಿಸಿ ವಿಹಿತ ಸಕಲಕರ್ಮಗಳನ್ನೂ ಮನಃಪೂರ್ವಕವಾಗಿ ನನ್ನಲ್ಲಿಯೇ ಸಮರ್ಪಿಸು. ಅದರಿಂದ ಸಂತುಷ್ಟನಾದ ನನ್ನ ಅನುಗ್ರಹದಿಂದ ಜ್ಞಾನೋಪಾಯವಾದ ಪ್ರತ್ಯಾಹಾರಾದಿಗಳನ್ನು ಹೊಂದಿ ಮನಸ್ಸನ್ನು ವಶಪಡಿಸಿಕೊಂಡು ನಿರಂತರ ನನ್ನಲ್ಲಿಯೇ ಮನಸ್ಸಿಡುವವನಾಗು. ಹಾಗೆ ನನ್ನಲ್ಲಿಯೇ ಮನಸ್ಸಿಟ್ಟು ಸಮಾಧಿಸ್ಥನಾದರೆ ನೀನು ನನ್ನ ಪರಮಾನುಗ್ರಹದಿಂದ ದುಸ್ತರವಾದ ಸಕಲ ಕಷ್ಟಗಳನ್ನೂ ದಾಟುವವನಾಗುವೆ. (ಹೀಗೆ ವಿಹಿತಧರ್ಮವನ್ನಾಚರಿಸುವುದೇ ಪರಮಧರ್ಮವಾದುದರಿಂದ ಕ್ಷತ್ರಿಯನಾದ ನೀನು ವಿಹಿತವಾದ ಯುದ್ಧವನ್ನು ವಿಹಿತರೀತಿಯಿಂದ ಮಾಡಿ, ಶುದ್ಧಾಂತಃಕರಣನಾಗಿ ಜ್ಞಾನವನ್ನು ಹೊಂದಿ ನನ್ನ ದರ್ಶನಮಾಡಿ, ಪರಮಾನುಗ್ರಹಮೂಲಕವಾಗಿ ಮೋಕ್ಷವನ್ನು ಪಡೆಯುವವನಾಗು ಎಂಬುದಾಗಿ ಸಮಸ್ತ ಗೀತಾಶಾಸ್ತ್ರೋಪದೇಶದ ಸಾರಾಂಶವು ನಿನಗಾಗಿ ತಿರುಗಿ ಸಂಗ್ರಹಿಸಲ್ಪಟ್ಟು ಉಕ್ತವಾಗಿದೆಯೆಂದು ಭಾವ) ವಿಹಿತಯುದ್ಧವನ್ನು ಮಾಡದಿದ್ದರೆ ಆಗುವ ಅನರ್ಥವನ್ನು ಹೇಳುತ್ತಾನೆ:- ಅರ್ಜುನ! ಇದುವರೆಗೆ ಹೇಳಿದುದನ್ನೆಲ್ಲಾ ತಿರಸ್ಕರಿಸಿ "ನನಗೆ ಇಷ್ಟವಾದುದನ್ನು ಮಾಡಲು ನಾನೇ ಸ್ವತಂತ್ರನು; ಮಾಡೆಂದು ಹೇಳುವುದಕ್ಕೆ ಇವನಾರು?" ಎಂಬ ಅಹಂಕಾರದಿಂದ ನಾನು ಹೇಳಿದುದನ್ನು ಕೇಳಿಯೂ ಅದರಂತೆ ನಡೆಯದಿದ್ದರೆ ಈಲೋಕ ಪರಲೋಕಗಳಲ್ಲಿ ಎಲ್ಲಿಯೂ ಯಾವ ಪುರುಷಾರ್ಥವನ್ನೂ ನೀನು ಹೊಂದುವವನಾಗುವುದಿಲ್ಲ.

**ಯದಹಂಕಾರಮಾಶ್ರಿತ್ಯ ನ ಯೋತ್ಸ ಇತಿ ಮನ್ಯಸೇ**
**ಮಿಥ್ಯೈವ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ॥18-59॥**

59.ಪಾರ್ಥ! ವಿಹಿತಯುದ್ಧವನ್ನು ಮಾಡುವುದಿಲ್ಲವೆಂಬ ಅಹಂಕಾರದಿಂದ ಪುರುಷಾರ್ಥವನ್ನು ಹಾಳುಮಾಡಿಕೊಳ್ಳುವುದು ಮಾತ್ರ ನಿನಗೆ ಸಾಧ್ಯ. ಕರ್ತವ್ಯವಾದ ಯುದ್ಧವು ಎಂದಿಗೂ ನಿನಗೆ ತಪ್ಪಲಾರದೆಂದು ಹೇಳುತ್ತಾನೆ:- ಕರ್ಮವನ್ನು ಮಾಡುವುದಕ್ಕೂ, ಬಿಡುವುದಕ್ಕೂ ನಾನೇ ಸ್ವತಂತ್ರನೆಂದು ಕರ್ತೃತ್ವಾಭಿಮಾನದಿಂದ ಯುದ್ಧ ಮಾಡುವುದಿಲ್ಲವೆಂದು ನಿಶ್ಚಯಿಸಿ ಹೇಳುವವನಾದರೆ ನಿನ್ನ ನಿಶ್ಚಯವು, ಮಾತೂ ಸಹ ವ್ಯರ್ಥವೇ ಸರಿ. ಏತಕ್ಕೆಂದರೆ:- ನಿನಗೆ ಇಚ್ಛೆಯಿಲ್ಲದಿದ್ದರೂ ಕ್ಷತ್ರಿಯ ಸ್ವಭಾವ ನಿಯಾಮಕೇಶ್ವರೇಚ್ಛೆಯು ನಿನ್ನನ್ನು ಬಲಾತ್ಕರಿಸಿ ಯುದ್ಧ

ಮಾಡುವಂತೆ ಮಾಡುತ್ತದೆ. ಆದ ಕಾರಣ ನಿನ್ನ ಅಭಿಮಾನಪೂರ್ವಕವಾದ ನಿರ್ಣಯವು ನೆರವೇರತಕ್ಕುದಲ್ಲ. ಮಾಡುವುದಕ್ಕೂ, ಬಿಡುವುದಕ್ಕೂ ನಿನಗೆ ಸ್ವಾತಂತ್ರ್ಯವಿಲ್ಲವೆಂದು ಭಾವ.

ಸ್ವಭಾವಜೇನ ಕೌಂತೇಯ ನಿಬದ್ಧಃ ಸ್ವೇನ ಕರ್ಮಣಾ

ಕರ್ತುಂ ನೇಚ್ಛಸಿ ಯನ್ಮೋಹಾತ್ಕರಿಷ್ಯಸ್ಯಽವಶೋಽಪಿ ತತ್॥18-60॥

**60.** ಕುಂತೀತನಯ! ಪೂರ್ವಸಂಸ್ಕಾರ ಅಥವಾ ಕ್ಷತ್ರಿಯಸ್ವಭಾವದಿಂದ ಪ್ರಾಪ್ತವಾದ ಸ್ವಕೀಯ ಕ್ಷಾತ್ರಕರ್ಮದಿಂದ ಬಂಧಿಸಲ್ಪಟ್ಟಿರುವ ನೀನು ಯಾವ ಕರ್ಮವನ್ನು ಬಂಧುಸ್ನೇಹದಿಂದ "ಇದು ಅನುಚಿತವು" ಎಂದು ಭ್ರಾಂತನಾಗಿ ಮಾಡಲಿಷ್ಟಪಡುವುದಿಲ್ಲವೋ ಅಂತಹ ಯುದ್ಧ ಕರ್ಮವನ್ನೇ ನೀನು ಮಾಡುವೆ. ನಾನು ಮಾಡುವುದಿಲ್ಲವೆನ್ನುವುದಕ್ಕೆ ನೀನು ಯಾರು? ನೀನು ನಿನ್ನ ಅಧೀನನಲ್ಲ. ಭಗವದಿಚ್ಛಾಧೀನನು. ಆದಕಾರಣ ನಿನಗೆ ಅನಿಷ್ಟವಾದರೂ ಭಗವದಿಚ್ಛೆಯು ಬಲಾತ್ಕಾರವಾಗಿ ನಿನ್ನಿಂದ ಮಾಡಿಸಿಯೇ ತೀರುತ್ತದೆ.

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ

ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥18-61॥

**61.** ಈಶ್ವರೇಚ್ಛೆಯು ಹೇಗೆ ನನ್ನನ್ನು ಪ್ರೇರಿಸುತ್ತದೆ? ಎಂದರೆ:- ಅರ್ಜುನ! ಈಶ್ವರೇಚ್ಛೆಯು ಈಶ್ವರನ ಸ್ವರೂಪಭೂತವಾದುದು; ಬೇರೆಯಲ್ಲ. ಈಶ್ವರನು ಶರೀರವೆಂಬ ಯಂತ್ರದಲ್ಲಿ ಸ್ಥಿತರಾದ ಸಕಲಪ್ರಾಣಿಗಳನ್ನೂ ತನ್ನ ಸ್ವರೂಪಭೂತೇಚ್ಛೆಯಿಂದ ಅವನವನ ಪೂರ್ವಕರ್ಮಾನುಗುಣವಾಗಿ ನಾನಾಕರ್ಮಗಳಲ್ಲಿ ಪ್ರವರ್ತನೆ ಮಾಡಿಸುವವನಾಗಿ ಸಕಲಪ್ರಾಣಿಗಳ ಹೃದಯಪ್ರದೇಶದಲ್ಲಿ ಸಂನಿಹಿತನಾಗಿರುತ್ತಾನೆ.

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ

ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ॥18-62॥

**62.** ಈ ಪ್ರಕಾರ ಈಶ್ವರನೇ ಸ್ವತಂತ್ರನು-ಜೀವರು ಆತನ ಅಧೀನರು. ಆದಕಾರಣ ಭರತಕುಲಾಗ್ರಣಿಯಾದ ಅರ್ಜುನ! ಆ ಸರ್ವೇಶ್ವರನೊಬ್ಬನೇ ಅಂತರ್ಯಾಮಿ, ಉಪದೇಶಕ, ಪ್ರಾಪ್ಯ, ಪ್ರಾಪಕ ಮುಂತಾದ ಸಕಲರೀತಿಯಿಂದಲೂ ಇರುವವನೆಂಬ ಅನುಸಂಧಾನದಿಂದ [1]ಅವನನ್ನೇ ಶರಣು ಹೊಂದು. ಅವನ ಅನುಗ್ರಹದಿಂದ - ಬುದ್ಧಿಗೆ ಉತ್ತಮ ಭಗವನ್ನಿಷ್ಠತೆ= ಧ್ಯಾನದ ಪರಿಪಕ್ವಾವಸ್ಥೆಯನ್ನು ಹೊಂದಿ ನಿತ್ಯವಾದ ವೈಕುಂಠಾದಿಲೋಕವನ್ನು ಹೊಂದುವೆ.

1. "ನನ್ನನ್ನು ಶರಣು ಹೊಂದು" ಎಂದು ಹೇಳದೆ 'ಅವನನ್ನು ಶರಣು ಹೊಂದು'. ಎಂದು ಹೇಳಿರುವುದರಿಂದ ಶ್ರೀಕಷನೇ ಈಶನೆಂದು ದೃಢಪಡುತ್ತದೆ.

'ನಿಶ್ಚಯಾರ್ಥಃ ಸ ತು ಜ್ಞೇಯೋ ಯತ್ರಾತ್ಮೈವ ಪರೋಕ್ಷತಃ | ಉಚ್ಯತೇ..." ಇದಿರಿಗಿಲ್ಲದವನನ್ನು 'ಅವನು' ಎಂದು ಹೇಳಬೇಕು. ಇದಿರಿಗಿರುವ ತಾನೇ ತನ್ನನ್ನು 'ಅವನು'. ಎಂದು ಹೇಳಿದರೆ ತಾನೇ ಅವನು ಎಂದು ತಿಳಿಸುವುದಕ್ಕಾಗಿ ಹಾಗೆ ಹೇಳುವ ಸಂಪ್ರದಾಯವೆಂದು ತಿಳಿಯಬೇಕು ಎಂದು ಸ್ಮೃತಿವಚನವಿರುವುದರಿಂದ ಪ್ರಕೃತ ಶ್ರೀಕೃಷ್ಣನು ತಾನೇ ಈಶ್ವರನೆಂದು ದೃಢಪಡಿಸುವುದಕ್ಕಾಗಿ ತನ್ನನ್ನೇ 'ಅವನು' ಎಂದು ಹೇಳಿಕೊಂಡಿರುವುದಾಗಿ ತಿಳಿಯಬೇಕು.

**ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ**
**ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು॥18-63॥**

**63.** ಅರ್ಜುನ! ಈ ರೀತಿ ಅತಿರಹಸ್ಯವಾದ ಕರ್ಮ, ಭಕ್ತಿ ಜ್ಞಾನಯೋಗಗಳನ್ನು ತಿಳಿಯಲು ಸಾಧನವಾದ ಗೀತಾಶಾಸ್ತ್ರವು ಪರಮಾಪ್ತನಾದ ನನ್ನಿಂದ ನಿನಗೆ ಉಪದೇಶಿಸಲ್ಪಟ್ಟಿತು. ಅದನ್ನು ಕೇಳಿಯೂ ಏಕೆ ಸುಮ್ಮನಿರುವೆ? ಯುದ್ಧ ಮಾಡುವೆಯಾ? ಇಲ್ಲವೆ? ನಿರ್ಬಂಧವಿಲ್ಲ; ನನಗಾಗಿ ನೀನು ಯುದ್ಧ ಮಾಡಬೇಕಾದುದಿಲ್ಲ; ನಾನು ಹೇಳಿರುವುದನ್ನೆಲ್ಲಾ ಚೆನ್ನಾಗಿ ವಿಮರ್ಶನೆ ಮಾಡು, ಅನಂತರ ನಿನಗೆ ಯುದ್ಧವು ಅವಶ್ಯ ಕರ್ತವ್ಯವೆಂದು ತೋರಿದರೆ ನಿನ್ನ ಇಷ್ಟದಂತೆ ಯುದ್ಧಮಾಡು; ಇಲ್ಲವಾದರೆ ಬಿಡು. (ಇದು ಅರ್ಜುನನಿಗೆ ಶೀಘ್ರ ಪ್ರವೃತ್ತಿಯನ್ನು ಹುಟ್ಟಿಸುವುದಕ್ಕಾಗಿ, ಅವನನ್ನು ಕೆರಳಿಸಲು ಶ್ರೀಕೃಷ್ಣನ ಆಕ್ಷೇಪಪೂರ್ವಕವಾದ ತತ್ತ್ವೋಪದೇಶದ ಉಪಸಂಹಾರವು.)

**ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ**
**ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಂ॥18-64॥**

**64.** ಅತಿಗೋಪ್ಯವಾದ ತತ್ತ್ವ ಸಾರವನ್ನು ಉಪದೇಶಿಸಿ ಮುಗಿಸಿದ್ದಾಯಿತು. ಪಾರ್ಥ! ಹದಿನಾಲ್ಕನೆಯ ಅಧ್ಯಾಯಾದಿಗಳಲ್ಲಿ ಸಾಧನವು ಉಕ್ತವಾಗಿದೆ. ಆದರೂ ನೀನು ನನಗೆ ಪ್ರೇಷ್ಠನಾದ ಕಾರಣ ಸಕಲ ಸಾಧನಗಳಲ್ಲಿಯೂ ಅತ್ಯಂತಗೋಪ್ಯವಾದ ಸಾಧನವನ್ನು ಬೋಧಿಸುವ ನಿನಗೆ ಹಿತಕರವಾದ ನನ್ನ ಉತ್ತಮೋಪದೇಶ ವಚನವನ್ನು ಪುನಃ ಉಪಸಂಹಾರರೂಪವಾಗಿ ಹೇಳುವೆನು ಕೇಳು.

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು**
**ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ॥18-65॥**

**65.** ಪಾರ್ಥ! "ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು। ಮಾಮೇವೈಷ್ಯಸಿ" 9-34. ಎಂದು ಹೇಳಿರುವ ಅತ್ಯಂತ ಹಿತವಾದ ಸಾಧನವನ್ನು ತಿರುಗಿ ನಿನಗೆ ಉಪದೇಶಿಸುವೆನು:- 1. ಫಲಾಶೆಯನ್ನು ಬಿಟ್ಟು ನನ್ನ ಪ್ರೀತ್ಯರ್ಥವಾಗಿ ವಿಹಿತ ಕರ್ಮವನ್ನಾಚರಿಸು. 2. ಅದರಿಂದ ಪರಿಶುದ್ಧವಾದ ಅಂತಃಕರಣವನ್ನು ನನ್ನಲ್ಲಿಯೇ ನಿಲ್ಲಿಸು. 3. ಬಳಿಕ ಶ್ರವಣಾದಿಗಳಿಂದ ನನ್ನ ಮಾಹಾತ್ಮ್ಯೆಯನ್ನು ತಿಳಿದು ನನ್ನಲ್ಲಿ ದೃಢಭಕ್ತಿಯುಳ್ಳವನಾಗು. 4 ಈ ಮೂರು

ಸಾಧನೆಗಳನ್ನಾಚರಿಸುವಾಗ ಸಂಭವಿಸಬಹುದಾದ ಅಂಗಲೋಪಾದಿಗಳ ಪ್ರಾಯಶ್ಚಿತಾರ್ಥವಾಗಿ ನನ್ನನ್ನು ನಮಸ್ಕರಿಸು. ಈ ರೀತಿ ನಾಲ್ಕು ಸಾಧನೆಗಳನ್ನು ನೀನು ಆಚರಿಸುವವನಾದರೆ ನನ್ನ ದರ್ಶನಮಾಡಿ ನನ್ನನ್ನೇ ಹೊಂದುವೆ. ಇದು ನಿಜವೇ ಎಂದು ಶಂಕಿಸಬೇಡ. ನೀನು ನನಗೆ ಪ್ರಿಯನಾಗಿರುವೆಯಾದ ಕಾರಣ ಇದನ್ನು ಪ್ರತಿಜ್ಞೆ ಮಾಡಿ ಹೇಳಿರುವೆನು. ಸಂಶಯಪಡಬೇಡ.

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ**

**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ॥18-66॥**

**66.** "ಕೃಷ್ಣ! ಮನಸ್ಸನ್ನು ನಿನ್ನಲ್ಲಿಡುವುದು ಹೇಗೆ" ಎಂದರೆ ಭಗವಂತನು ಹೇಳುತ್ತಾನೆ:- ಪಾರ್ಥ! ಯಾವ ಫಲವನ್ನೂ ಅಪೇಕ್ಷಿಸದೆ ವಿಹಿತ ಸಕಲಕರ್ಮಗಳನ್ನೂ ಕೇವಲ ನನ್ನ ಪ್ರೀತ್ಯರ್ಥವಾಗಿಯೇ ಮಾಡುತ್ತ, ಅವೈಷ್ಣವ ಧರ್ಮಗಳನ್ನು ಸರ್ವಥಾ ಪರಿತ್ಯಾಗಮಾಡಿದರೆ ಮನಸ್ಸು ನನ್ನಲ್ಲಿಯೇ ನಿಲ್ಲುವುದು. ಹಾಗಾದ ಬಳಿಕ ಮುಖ್ಯ ರಕ್ಷಕನೆಂದು ನನ್ನನ್ನೇ1 ಶರಣುಹೊಂದು. ಹಾಗೆ ಶರಣಾಗತನಾದರೆ ನೀನು ನನ್ನನ್ನೇ ಹೊಂದುವೆ. ಅನಾದಿಸಂಸಾರದಲ್ಲಿ ಪೂರ್ವಾರ್ಜಿತವಾದ ಪಾಪವು ರಾಶಿಯಾಗಿರುವುದರಿಂದ ಹೇಗೆ ನಿನ್ನನ್ನು ಹೊಂದಿಯೇನೆಂದು ಶಂಕಿಸಬೇಡ. ಶರಣಾಗತಿಯಿಂದ ಸಂತುಷ್ಟನಾದ ನಾನು ಸಕಲ ಪಾಪಗಳಿಂದಲೂ ನಿನ್ನನ್ನು ಬಿಡುಗಡೆಮಾಡುವೆನು. ಆದಕಾರಣ ಪಾಪಿಯಾದ ನನಗೆ ಭಗವತ್ಪ್ರಾಪ್ತಿಯು ಹೇಗಾದೀತೆಂದು ದುಃಖಪಡಬೇಡ. (ಪಾರ್ಥ! ಇದುವರೆಗೆ ಹೇಳಿರುವ ಪ್ರಕಾರ ಕರ್ಮಫಲಾಶೆ, ನಾನೇ ಕರ್ಮಮಾಡುವವನೆಂಬ ಸ್ವಾತಂತ್ರಾಭಿಮಾನ ಮುಂತಾದುವುಗಳನ್ನು ಬಿಟ್ಟು ಖಂಡಿತವಾಗಿಯೂ ಭಗವಂತನು ನನ್ನನ್ನು ರಕ್ಷಿಸುವನೆಂಬ ನಂಬಿಕೆಯಿಂದ ನನ್ನ ಕಡೆಗೇ ಶರಣು ಬಂದು, ವರ್ಣಾಶ್ರಮ ವಿಹಿತಕರ್ಮವನ್ನು ಮಾಡಿ ನನಗೆ ಸಮರ್ಪಣೆ ಮಾಡು; ನಾನು ಅದರಿಂದ ಸಂತುಷ್ಟನಾಗಿ ತಿರುಗಿ ಸಂಸಾರಕ್ಕೆ ಬರದಂತಹ, ಶಾಶ್ವತವಾದ ಆನಂದಾನುಭವಯೋಗ್ಯಸ್ಥಾನವನ್ನು ಕರುಣಿಸುವೆನು. ಆದಕಾರಣ ನೀನೀಗ ನಿರಾತಂಕವಾಗಿ ನಿನಗೆ ವಿಹಿತವಾದ ಯುದ್ಧಕರ್ಮವನ್ನು ಕ್ರಮವಾಗಿ ಮಾಡಲಾರಂಭಿಸು. ನಿನ್ನನ್ನೇ ಉದಾಹರಣೆಯಾಗಿಟ್ಟುಕೊಂಡು ಸರ್ವರೂ ವಿಹಿತ ರೀತಿಯಿಂದ ತಮ್ಮತಮ್ಮ ವರ್ಣಾಶ್ರಮ ವಿಹಿತಕರ್ಮವನ್ನಾಚರಿಸಿ, ಅದನ್ನು ನನಗೆ ಸಮರ್ಪಿಸಿ, ನನ್ನ ಅನುಗ್ರಹದಿಂದ ಅಪಾರವಾದ ಈ ಸಂಸಾರಸಮುದ್ರವನ್ನು ದಾಟಿ ಮೋಕ್ಷಭಾಗಿಗಳಾಗಲಿ ಎಂಬುದಾಗಿ ಶ್ರೀಕೃಷ್ಣನು ತನ್ನ ಉಪದೇಶದ ಸಾರಾಂಶವನ್ನು ನುಡಿದು ಮಂಗಳಮಾಡಿರುವನೆಂದು ಭಾವ.)

ಸರ್ವೋತ್ತಮತ್ವ ವಿಜ್ಞಾನಪೂರ್ವಂ ತತ್ರ ಮನಸ್ಸದಾ ಸರ್ವಾಧಿಕ ಪ್ರೇಮಯುಕ್ತಂ ಸರ್ವಸ್ಯಾತ್ರ ಸಮರ್ಪಣಂ ಅಖಂಡಾ ತ್ರಿವಿಧಾ ಪೂಜಾ ತದತ್ರೈವ ಸ್ವಭಾವತಃ ರಕ್ಷತೀತ್ಯೇವ ವಿಶ್ವಾಸ್ತದೀಯೋಽಹಮಿತಿ ಸ್ಮೃತಿಃ ಶರಣಾಗತಿರೇಷಾಸ್ಯಾದ್ವಿಷ್ಣೌ ಮೋಕ್ಷಫಲಪ್ರದಾ=ಶ್ರೀವಿಷ್ಣುವೇ ಸರ್ವೋತ್ತಮನೆಂದು ನಿಶ್ಚಯಿಸಿ ಎಲ್ಲಕ್ಕಿಂತಲೂ ಅಧಿಕಸ್ನೇಹಯುಕ್ತವಾಗಿ ಮನಸ್ಸನ್ನು ಅವನಲ್ಲಿಯೇ ನಿಲ್ಲಿಸುವುದು, ಮಾಡಿದ ವಿಹಿತ ಕರ್ಮವನ್ನೆಲ್ಲಾ ಶ್ರೀಹರಿಯಲ್ಲಿ ಸಮರ್ಪಿಸುವುದು, ಸ್ವಾಭಾವಿಕ ಭಗವದ್ಭಕ್ತಿಪೂರ್ವಕವಾಗಿ ಮನೋವಾಕ್ಕಾಯಕರ್ಮಗಳಿಂದಾಚರಿಸುವ ಕಾಯಿಕ, ವಾಚನಿಕ, ಮಾನಸಿಕವೆಂಬ ಮೂರು ಬಗೆಯ ಪೂಜೆ ಮತ್ತು ಶ್ರೀಹರಿಯೇ ನನ್ನನ್ನು ರಕ್ಷಿಸುತ್ತಾನೆಂಬ ನಂಬಿಕೆ, ನಾನು ಶ್ರೀಹರಿಯ ದಾಸನು ಎಂಬ ಅನುಸಂಧಾನ ಇವೇ ಶರಣಾ ಗತಿಯು; ಇದೇ ಮೋಕ್ಷಸಾಧನವು ಎಂಬ ವಿಷ್ಣು ಪುರಾಣವಚನವು ಈ ಶರಣಾಗತಿಯನ್ನು ವಿವರಿಸಿದೆಯೆಂದು ತಿಳಿಯಬೇಕು.

**ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ**
**ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ॥18-67॥**

**67.** ಅತಿರಹಸ್ಯವಾದ ಈ ಗೀತಾಶಾಸ್ತ್ರೋಪದೇಶಕ್ಕೆ ಅರ್ಜುನನು ನಿಮಿತ್ತ ಮಾತ್ರನು. ಲೋಕೋದ್ಧಾರವೇ ಈ ಉಪದೇಶದ ಉದ್ದೇಶವು. ಆದಕಾರಣ ಇದನ್ನು ಇತರರಿಗೆ ಉಪದೇಶಮಾಡಬೇಕು. ಆದರೆ ಇಂತಹ ಆಧ್ಯಾತ್ಮ ತತ್ವವನ್ನು ಎಲ್ಲರಿಗೂ ಉಪದೇಶಿಸಬಹುದೆ ಅಥವಾ ಇದಕ್ಕೇನಾದರೂ ನಿಯಮವಿದೆಯೆ? ಎಂದರೆ, ಈ ಉಪದೇಶಕ್ಕೆ ಅನಧಿಕಾರಿ-ಅಧಿಕಾರಿಗಳನ್ನು ವಿವೇಚನೆಮಾಡಿ ತಿಳಿಸುತಾನೆ:- ಈ ಗೀತಾಶಾಸ್ತ್ರವನ್ನು ಶಮದಮಯಜ್ಞ ದಾನಾದಿ ವಿಹಿತಾನುಷ್ಠಾನರಹಿತನಾದವನಿಗೆ ಉಪದೇಶಿಸಬಾರದು. ತಪಸ್ವಿಯಾಗಿ ಭಕ್ತಿಯಿಲ್ಲದಿದ್ದರೆ ಅಂತಹವನಿಗೂ ಯಾವಾಗಲೂ ಈ ಶಾಸ್ತ್ರವನ್ನು ಹೇಳಬಾರದು. ತಪಸ್ವಿಯೂ, ಭಕ್ತನೂ ಆಗಿದ್ದು, ಇದನ್ನು ಶ್ರವಣಮಾಡಬೇಕೆಂಬ ಇಚ್ಛೆಯಿಲ್ಲದೆ ಗುರುಶುಶ್ರೂಷೆ ಮಾಡದಿರುವವನಿಗೆ ಇದನ್ನುಪದೇಶಿಸಬಾರದು. ತಪಸ್ಸು ಮುಂತಾದ ಉಕ್ತಗುಣಗಳಿದ್ದರೂ ನನ್ನ (ಕೃಷ್ಣನ) ಉತ್ಕರ್ಷವನ್ನು ಸಹಿಸದೆ ನನ್ನಲ್ಲಿ ದೋಷಾರೋಪಣೆ ಮಾಡುವಂತಹ ಅಸೂಯಾವಂತರಿಗೆ ಸರ್ವಥಾ ಈ ಶಾಸ್ತ್ರವನ್ನುಪದೇಶಿಸಬಾರದು. ತಪಸ್ಸು, ಭಕ್ತಿ, ಶ್ರವಣೇಚ್ಛೆ, ಗುರುಶುಶ್ರೂಷ, ಅಸೂಯಾರಾಹಿತ್ಯ ಇವುಗಳುಳ್ಳವರು ಗೀತಾ ಶಾಸ್ತ್ರೋಪದೇಶಕ್ಕೆ ಅಧಿಕಾರಿಗಳು; ಈ ಗುಣಗಳಿಲ್ಲದವರು ಅನಧಿಕಾರಿಗಳೆಂದು ಸಿದ್ಧವಾಯಿತು.

**ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಶ್ವಭಿಧಾಸ್ಯತಿ**
**ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯ ಸಂಶಯಃ॥18-68॥**

**ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ**
**ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತರೋ ಭುವಿ॥18-9॥**

**68-69.** ಈ ಗೀತಾಶಾಸ್ತ್ರೋಪದೇಶ ಮಾಡುವವನಿಗೆ ಫಲವನ್ನು ಹೇಳುತ್ತಾನೆ:- ಅತ್ಯಂತಗೋಪ್ಯವಾದ ಈ ಗೀತಾಶಾಸ್ತ್ರವನ್ನು ಯಾವಾತನು ಪೂರ್ವೋಕ್ತ ಗುಣವಂತರಾದ ನನ್ನ

ಭಕ್ತರಿಗೆ ಉಪದೇಶಮಾಡುತ್ತಾನೆಯೋ ಆತನು ನನ್ನಲ್ಲಿ ಉತ್ಕೃಷ್ಟವಾದ ಪೂರ್ಣ ಭಕ್ತಿಯನ್ನು ಮಾಡಿ ನನ್ನನ್ನೇ ಹೊಂದುತ್ತಾನೆ; ಸಂದೇಹವಿಲ್ಲ. ಮನುಷ್ಯರಲ್ಲಿ ಯಾವಾತನು ನನ್ನ ಭಕ್ತರಿಗೆ ಗೀತೆಯನ್ನುಪದೇಶಿಸುವನೋ ಅವನೇ ನನಗೆ ಪ್ರಿಯಕರ್ತರಲ್ಲಿ ಶ್ರೇಷ್ಠನು; ಅಂತಹವನ ಹೊರತು ಇನ್ನಾವ ಮನುಷ್ಯನೂ ನನಗೆ ಪ್ರಿಯತಮನಲ್ಲ; ಈ ಭೂಲೋಕದಲ್ಲಿ ಗೀತೋಪದೇಶಕನಿಗಿಂತಲೂ ಬೇರೆ ನನಗೆ ಹೆಚ್ಚಿನ ಪ್ರಿಯನಾರೂ ಮುಂದೆ ಹುಟ್ಟಲಾರನು; ಹಿಂದೆಯೂ ಇರಲಿಲ್ಲ. ಗೀತಾಪ್ರವಚನಮಾಡುವವನೇ ಭಗವಂತನಿಗತ್ಯಂತ ಪ್ರಿಯನೆಂದು ಭಾವ. ಸ್ತೋತ್ರಜಪಪೂಜಾದಿಗಳು ನನಗೆ ಪ್ರಿಯವಾದುವು. ಶ್ರವಣಮನನಾದಿಗಳು ಅದಕ್ಕಿಂತ ಹೆಚ್ಚಿನ ಪ್ರಿಯವು. ಗೀತಾಪ್ರವಚನವು ನನಗೆ ಪ್ರಿಯತಮವು. ಆದಕ್ಕಿಂತ ಹೆಚ್ಚಿನ ಪ್ರಿಯವಾದುದು ಯಾವುದೂ ಇಲ್ಲವೆಂದು ಭಾವ.

**ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ**
**ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ॥18-70॥**

**70.** ಗೀತಾಧ್ಯಯನ ಮಾಡುವವನಿಗಾಗುವ ಫಲವನ್ನು ಹೇಳುತ್ತಾನೆ:- ಕರ್ತವ್ಯ ಧರ್ಮವನ್ನು ತಿಳಿಸುವುದು, ಜಗದ್ಧಾರಕನಾದುದರಿಂದ ಧರ್ಮನೆನಿಸಿದ ಭಗವಂತನ ಪ್ರೀತಿ ಸಾಧನವು, ಭಗವದುತ್ಕರ್ಷ ಪ್ರತಿಪಾದಕವೂ ಆದ ನಮ್ಮೀರ್ವರ ಪ್ರಶ್ನೋತ್ತರರೂಪವಾದ ಈ ಗೀತಾಪ್ರಬಂಧವನ್ನು ಯಾವಾತನು ಪಠನೆಮಾಡುತ್ತಾನೆಯೋ ಆವನಿಂದ ಕೃತವಾದ ಗೀತಾಧ್ಯಯನವೆಂಬ ಜ್ಞಾನಯಜ್ಞದಿಂದ ನಾನು ಆರಾಧಿಸಲ್ಪಟ್ಟವನಾಗಿ ಮಹಾಫಲಪ್ರದನಾಗುವೆನೆಂದು ನನ್ನ ನಿರ್ಣಯವು.

**ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ**
**ಸೋಽಪಿ ಮುಕ್ತಃ ಶುಭಾನ್ಲೋಕಾನ್ಪ್ರಾಪ್ನುವಾತ್ಪುಣ್ಯಕರ್ಮಣಾಂ॥18-71॥**

**71.**ಗೀತಾಶ್ರವಣವೂ ಸಹ ಪ್ರಶಸ್ತವೆನ್ನುವನು:- ಗೀತಾಶ್ರವಣವು ಭಗವತ್ಪ್ರೀತಿದ್ವಾರಾ ಮಹಾಫಲಸಾಧನವೆಂಬ ಶ್ರದ್ಧಾವಂತನು, ಈ ಗ್ರಂಥದಲ್ಲಿ, ಗ್ರಂಥಕರ್ತನಲ್ಲಿ ಪಾಠಹೇಳುವವನಲ್ಲಿಯೂ ಸಹ ದೋಷಾರೋಪಣೆ ಮಾಡುವುದೆಂಬ ಅಸೂಯಾರಹಿತನೂ ಆದ ಯಾವ ಮನುಷ್ಯನು ಇತರರು ಪಾರಾಯಣ ಮಾಡುತ್ತಿರುವ ಈ ಗೀತಾಶಾಸ್ತ್ರವನ್ನು ಶ್ರವಣಮಾಡುವನೋ ಅಂತಹ ಶ್ರೋತೃವೂ ಸಹ ಪಾಪಗಳನ್ನು ಹೋಗಲಾಡಿಸಿಕೊಂಡವನಾಗಿ ಪುಣ್ಯಕರ್ಮಿಗಳಿಗೆ ಪ್ರಾಪ್ಯವಾದ ಸುಖಪ್ರದ ಲೋಕಗಳನ್ನು ಹೊಂದುತ್ತಾನೆ. ಹೀಗೆ ಈ

ಗೀತಾಶಾಸ್ತ್ರವು ಶ್ರವಣಾಧ್ಯಯನ-ಪಾರಾಯಣ-ಪ್ರವಚನಾದಿಗಳಿಂದ ಮಹಾಫಲಸಾಧನವಾಗಿರುವ ಕಾರಣ ಇದು ಅತ್ಯಂತ ಉಪಾದೇಯವು.

**ಕಚ್ಚಿದೇತಚ್ಛ್ರುತಂ ಪಾರ್ಥ ತ್ವಯ್ಯೈಕಾಗ್ರೇಣ ಚೇತಸಾ**

**ಕಚ್ಚಿದಜ್ಞಾನಸಮ್ಮೋಹಃ ಪ್ರಣಷ್ಟಸ್ತೇ ಧನಂಜಯ॥18-72॥**

72. ಇದುವರೆಗಿನ ಉಪದೇಶವು ಅರಣ್ಯರೋದನೆಯಂತೆ ವ್ಯರ್ಥವಾಯಿತೇ ಅಥವಾ ಪಾರ್ಥನಿಗೆ ಇದರಿಂದ ತತ್ವಜ್ಞಾನವಾಗಿದೆಯೇ ಎಂಬುದನ್ನು ವ್ಯಕ್ತಪಡಿಸುವುದಕ್ಕಾಗಿ ತಾನು ಪಾರ್ಥನಿಗೆ ತತ್ವಜ್ಞಾನವಾಗಿದೆಯೆಂದು ತಿಳಿದಿದ್ದರೂ ಅಜ್ಞನಂತೆ ಪ್ರಶ್ನೆ ಮಾಡುತ್ತಾನೆ:- ಪಾರ್ಥ! ಧನಂಜಯ! ನೀನು ಏಕಾಗ್ರಚಿತ್ತದಿಂದ ಈ ಉಪದೇಶವನ್ನು ಕೇಳಿದೆಯಷ್ಟೆ? ಅದರಿಂದ ಅಜ್ಞಾನ ಮೂಲಕವಾದ, ಬಂಧು ಸ್ನೇಹಾದಿರೂಪ ಮೋಹವು ನಿನಗೆ ನಿಶ್ಶೇಷವಾಗಿ ಹೋಯಿತೇ? ಹೇಳು ಎಂದು ಕೇಳಿದನು.

**ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ**

**ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥18-73॥**

73. ಅರ್ಜುನನು ಉತ್ತರ ಹೇಳುತ್ತಾನೆ:- ನಾಶರಹಿತನಾದ ಸ್ವಾಮಿ! ನಿನ್ನ ಅನುಗ್ರಹದಿಂದ ಪ್ರಥಮಾಧ್ಯಾಯದಲ್ಲಿ ಶಂಕಿತವಾದ ವಿಪರೀತ ಜ್ಞಾನವೆಂಬ ಮೋಹವು ನಷ್ಟವಾಯಿತು. ಅಷ್ಟೇ ಅಲ್ಲ; ನಿನ್ನ ಅನುಗ್ರಹಪೂರ್ವಕವಾದ ಉಪದೇಶದಿಂದ ಭಗವದ್ವೇಷಿಗಳ ಮತ್ತು ಅವರ ಬಂಧುಗಳ ನಿಗ್ರಹರೂಪವಾದ ಈ ಯುದ್ಧವು ಕ್ಷತ್ರಿಯನಾದ ನನಗೆ ಪರಮಧರ್ಮವೆಂಬ ತತ್ವಸ್ಮರಣೆಯೂ ಉಂಟಾಯಿತು. ಇದರಿಂದ ನನ್ನ ಯುದ್ಧವು ಅಧರ್ಮ ಮುಂತಾದ ಸಂಶಯಗಳೆಲ್ಲವೂ ಹೋದುವು. ಆದ ಕಾರಣ ಯುದ್ಧಮಾಡೆಂಬ ನಿನ್ನ ಶಾಸನವನ್ನು ನಡೆಯಿಸಲು ಸ್ಥಿರಮನಸ್ಕನಾಗಿರುವೆನು. ಸ್ವಾಮಿ! ನಿನ್ನ ಮನಸ್ಸು ಬಂದಂತೆ ಮಾಡು ಎಂದು ಆಕ್ಷೇಪಿಸಬೇಡ. ನಿನ್ನ ಮಾತಿನಂತೆ ನಡೆಯುತ್ತೇನೆ. ಅದೇ ನನಗೆ ಶ್ರೇಯಸ್ಕರವೆಂದು ನಿರ್ಧಾರಮಾಡಿಕೊಂಡೆನು.

**ಇತ್ಯಹಂ ವಾಸುದೇವಸ್ಯ ಪಾರ್ಥಸ್ಯ ಚ ಮಹಾತ್ಮನಃ**

**ಸಂವಾದಮಿಮಮಶ್ರೌಷಮದ್ಭುತಂ ರೋಮಹರ್ಷಣಂ॥18-74॥**

**ವ್ಯಾಸಪ್ರಸಾದಾಚ್ಛ್ರುತವಾನೇತದ್ಗುಹ್ಯತಮಂ ಪರಂ**

**ಯೋಗಂ ಯೋಗೇಶ್ವರಾತ್ ಕೃಷ್ಣಾತ್ ಸಾಕ್ಷಾತ್ ಕಥಯತಃ ಸ್ವಯಂ॥18-75॥**

**74-75.** ಏಕಾಂತದಲ್ಲಿ ನಡೆದ ಶ್ರೀಕೃಷ್ಣಾರ್ಜುನರ ಸಂವಾದವು ನಿನಗೆ ಹೇಗೆ ಶ್ರುತವಾಯಿತು? ಎಂದರೆ, ಸಂಜಯನು ಹೇಳುತ್ತಾನೆ:- ಈ ರೀತಿಯಾಗಿ ಇದುವರೆಗೆ ಎಲ್ಲಿಯೂ ಕೇಳದಿರುವ, ರೋಮಾಂಚಕರವಾದ, ಮಹಾನುಭಾವನಾದ ವಾಸುದೇವನಿಗೂ-ಮಹಾಮನಸ್ಕನಾದ ಪಾರ್ಥನಿಗೂ ಜರುಗಿದ ಸಂಭಾಷಣರೂಪವಾದ ಈ ಗೀತಾಶಾಸ್ತ್ರವನ್ನು ಸಂಜಯನಾದ ನಾನು ಕೇಳಿದನು. ಹೇಗೆಂದರೆ:- ಧೃತರಾಷ್ಟ್ರ ಮಹಾರಾಜ! ಕುರುಕ್ಷೇತ್ರದಲ್ಲಿ ನಡೆಯುವ ವೃತ್ತಾಂತವನ್ನೆಲ್ಲಾ ತಂದು ನಿನಗೆ ತಿಳಿಸುವುದಕ್ಕಾಗಿ ಶ್ರೀವೇದವ್ಯಾಸರು ಈ ಯುದ್ಧ ಸಮಯದಲ್ಲಿ ಎಲ್ಲಿ ಏನೇನು ನಡೆದರೂ ಅದೆಲ್ಲವನ್ನೂ ಸಾಕ್ಷಾತ್ತಾಗಿ ನೋಡುವ ಮತ್ತು ಕೇಳುವ ಸಾಮರ್ಥ್ಯವುಳ್ಳ ದಿವ್ಯಚಕ್ಷುಸ್ಸು ಮತ್ತು ದಿವ್ಯ ಶೋತ್ರಗಳನ್ನು ನನಗೆ ಕೊಟ್ಟು ಅನುಗ್ರಹಿಸಿರುವುದರಿಂದ ಉತ್ತಮವು, ಅತ್ಯಂತರಹಸ್ಯವೂ ಆದ ಮೋಕ್ಷೋಪಾಯವನ್ನು ತಾನೇ ಪಾರ್ಥನಿಗೆ ಹೇಳುತ್ತಿರುವ, ಕರ್ಮಯೋಗಾದ್ಯುಪಾಯಗಳಿಗೆ ಪ್ರವರ್ತಕನು, ಫಲದಾತನೂ ಆದ ಶ್ರೀಕೃಷ್ಣನ ದೆಸೆಯಿಂದ ಈ ಸಂವಾದವನ್ನು ನಾನೇ ಸಾಕ್ಷಾತ್ಕಾಗಿ ಶ್ರವಣ ಮಾಡಿದೆನು. ವೇದವ್ಯಾಸರು ಅನುಗ್ರಹಿಸಿದ ದಿವ್ಯಚಕ್ಷುಸ್ಸಿನಿಂದ ಅಲ್ಲಿ ನಡೆದ ಸಕಲವನ್ನೂ ಸಾಕ್ಷಾತ್ತಾಗಿ ನಾನೇ ನೋಡಿಯೂ ಇರುವೆನು.

**ರಾಜನ್ ಸಂಸ್ಮೃತ್ಯ ಸಂಸ್ಮೃತ್ಯ ಸಂವಾದಮಿಮಮದ್ಭುತಂ**
**ಕೇಶವಾರ್ಜುನಯೋಃ ಪುಣ್ಯಂ ಹೃಷ್ಯಾಮಿ ಚ ಮುಹುರ್ಮುಹುಃ॥18-76॥**

**ತಚ್ಚ ಸಂಸ್ಮೃತ್ಯ ಸಂಸ್ಮೃತ್ಯ ರೂಪಮತ್ಯದ್ಭುತಂ ಹರೇಃ**
**ವಿಸ್ಮಯೋ ಮೇ ಮಹಾನ್ ರಾಜನ್ ದೃಷ್ಯಾಮಿ ಚ ಪುನಃಪುನಃ॥18-77॥**

**76-77.** ಗೀತಾಶ್ರವಣಮಾಡಿದ ಕೂಡಲೇ ತನಗಾದ ಆನಂದಾತಿಶಯವನ್ನು ಸಂಜಯನು ವಿವರಿಸುತ್ತಾನೆ:- ಧೃತರಾಷ್ಟ್ರ ರಾಜ! ಕೇಶವಾರ್ಜುನರ ಈ ಸಂವಾದವು ಪಾಪವನ್ನು ಪರಿಹರಿಸಿ ಪುಣ್ಯವನ್ನು ತಂದುಕೊಡುವುದು. ಇಂತಹ ಆಶ್ಚರ್ಯಕರ ಸಂವಾದರೂಪವಾದ ಗೀತಾಶಾಸ್ತ್ರಾರ್ಥವನ್ನು ಕ್ಷಣಕ್ಷಣದಲ್ಲಿಯೂ ಸ್ಮರಿಸಿಸ್ಮರಿಸಿ ಆನಂದಪಡುತ್ತಿರುವೆನು. ಶರೀರದಲ್ಲಿ ರೋಮಾಂಚನವುಂಟಾಗಿದೆ. ಅಷ್ಟೇ ಅಲ್ಲ; ಮಹಾರಾಜ! ಶ್ರೀಕೃಷ್ಣನು ಪಾರ್ಥನಿಗೆ ತೋರಿಸಿದ ವಿಶ್ವರೂಪವನ್ನು ನೋಡಿದಮೇಲೆ, ಬಾರಿಬಾರಿಗೂ ನನಗೆ ಅತ್ಯದ್ಭುತವಾದ ಆ ವಿಶ್ವರೂಪ ಸ್ಮರಣೆಯು ಬಂದು ಮಹಾವಿಸ್ಮಯವುಂಟಾಗಿದೆ. ರಾಜಾ! ಅದನ್ನೇ ಪುನಃ ಪುನಃ ಸ್ಮರಿಸಿಕೊಂಡು ಹರ್ಷಪಡುತ್ತಿರುವೆನು.

**ಯತ್ರ ಯೋಗೀಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ**

**ತತ್ರ ಶ್ರೀರ್ವಿಜಯೋ ಭೂತ್ವಾಧ್ರುವಾ ನೀತಿರ್ಮತಿರ್ಮಮ॥18-78॥**

**78.** ಪಾರ್ಥನು ಯುದ್ಧ ಮಾಡಬೇಕೆಂದು ನಿಶ್ಚಯಿಸಿದುದನ್ನು ಕೇಳಿದ ಮೇಲೆ ಧೃತರಾಷ್ಟ್ರನು ಈ ಯುದ್ಧದಲ್ಲಿ ಯಾರಿಗೆ ಜಯವಾಗುವುದೆಂದು ಹೇಳಲಾಗಿ ಸಂಜಯನು ಹೇಳುತ್ತಾನೆ:- ಯಾವ ಪಕ್ಷದ ಸೈನ್ಯದಲ್ಲಿ ನಿಂತು ಸಕಲೋಪಾಯವಂತರಿಗೂ ನಿಯಾಮಕನು, ಭಕ್ತಜನರ ಸಕಲ ದುರಿತಗಳನ್ನೂ ಪರಿಹಾರಮಾಡುವುದಕ್ಕೆ ಸಮರ್ಥನೂ ಆದ ಶ್ರೀಹರಿಯು ಯುದ್ಧ ಮಾಡಿಸುವವನಾಗಿರುವನೋ, ಯಾವ ಸೈನ್ಯದಲ್ಲಿ ಪಾರ್ಥ=ಗಾಂಡೀವಧನುರ್ಧಾರಿಯಾದ ಅರ್ಜುನನು ಮತ್ತು ಗದಾಪಾಣಿಯಾದ ಭೀಮಸೇನನೂ ಸಹ ಯುದ್ಧ ಮಾಡಲುದ್ಯುಕ್ತರಾಗಿರುವರೋ ಆ ಪಕ್ಷದಲ್ಲಿ ರಾಜ್ಯಲಕ್ಷ್ಮಿಯು, ಜಯವು, ಗಜಾಶ್ವಧನಧಾನ್ಯಾದಿ ಸಂಪತ್ತು ಮತ್ತು ನ್ಯಾಯವೂ ಸಹ ನಿಶ್ಚಲವಾಗಿ ಸೇರುವುವು ಎಂಬುದಾಗಿ ನನ್ನ ನಿರ್ಣಯವು.

**ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಮೋಕ್ಷಸಂನ್ಯಾಸಯೋಗೋ ನಾಮ ಅಷ್ಟಾದಶೋಽಧ್ಯಾಯಃ ॥18-[78]॥**

(ಪಾರ್ಥೋ ಧನುರ್ಧರಃ) ಎಂಬಲ್ಲಿ - ಪಾರ್ಥಃ, ಅಧನುರ್ಧರಃ ಎಂದು ಪದಚ್ಛೇದ ಮಾಡಬೇಕು. ಪೃಥಾ=ಕುಂತಿಯು, ಆಕೆಯ ಮಕ್ಕಳು ಪಾರ್ಥರೆನಿಸುವರು. ಅವರಲ್ಲಿ ಧನುರ್ಧಾರಿಯಾದ ಪಾರ್ಥನು ಅರ್ಜುನನು. ಧನುರ್ಧಾರಿಯಲ್ಲದ ಗದಾಪಾಣಿಯಾದ ಭೀಮಸೇನನೂ ಸಹ ಪಾರ್ಥನು. ಹೀಗೆ ಇವರಿಬ್ಬರೂ ಇಲ್ಲಿ ಪಾರ್ಥಶಬ್ದದಿಂದ ಗ್ರಾಹ್ಯರೆಂದು ತಿಳಿಯಬೇಕು. "ಅಸ್ಮಿನ್ ಯುದ್ಧೇ ಭೀಮಸೇನ ತ್ವಯಿ ಭಾರಃ ಸಮಾಹಿತಃ" ಎಂಬ ಮಹಾಭಾರತ ವಚನವು ಈ ಅರ್ಥವನ್ನು ಸೂಚಿಸುತ್ತದೆ.)

ಆದಕಾರಣ ಮಹಾರಾಜ! ಮಕ್ಕಳೆಂಬ ಅಭಿಮಾನವನ್ನು ಬಿಟ್ಟು ಶ್ರೀಕೃಷ್ಣ ಭಗವಂತನಲ್ಲಿಯೂ, ಪರಮಭಾಗವತರಾದ ಪಾಂಡವರಲ್ಲಿಯೂ ಸ್ನೇಹವಿಟ್ಟು ಸಂಧಿಯನ್ನುಮಾಡಿಸು. ಅದರಿಂದ ನಿನಗೂ ನಿನ್ನ ಕಡೆಯವರಿಗೂ, ಸಕಲ ಜಗತ್ತಿಗೂ ಸಹ ಮಂಗಳವಾಗುವುದೆಂದು ಸಂಜಯನು ಹೇಳಿದನು.

| |
|---|
| ಇತಿ ಶ್ರೀಮದ್ವಿದ್ವತ್ಕುಲತಿಲಕ ಶ್ರೀಗೋವಿಂದಕೃಷ್ಣಾಚಾರ್ಯಸುತ ವಾಸುದೇವಾಚಾರ್ಯ ವಿರಚಿತ ಕರ್ಣಾಟಕ ಟೀಕಾಯಾಂ ಶ್ರೀಮದ್ಭಗವದ್ಗೀತಾಭಾವಪ್ರದೀಪಿಕಾಯಾಂ ತೃತೀಯ ಪಟ್ಕಂ ಸಂಪೂರ್ಣಂ ಶ್ರೀ ಕೃಷ್ಣಾರ್ಪಣಮಸ್ತು |

| |
|---|
| ಅಸ್ಮದ್ಗುರ್ವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಅಂಭೃಣೀ ವೇದವ್ಯಾಸಾಯ ನಮಃ |
| ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮ ಜನ್ಮನಿ। |
| ಕೃಷ್ಣಂ ವಂದೇ ಜಗದ್ಗುರುಮ್॥ |
| ಅಕ್ಷಯಂ ಕರ್ಮ ಯಸ್ಮಿನ್ಪರೇ ಸ್ವರ್ಪಿತಂ ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ ಅಕ್ಷರೋ ಯೋಽಜರಃ ಸರ್ವದೈವಾಮೃತಃ ಕುಕ್ಷಿಗಂ ಯಸ್ಯ ವಿಶ್ವಂ ಸದಾ ಚಾದಿಕಂ ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಽಖಂಡಮಂಡನಮ್॥ |